# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

# KARNATAKA STATE OPEN UNIVERSITY

Mukthagangothri, Mysuru - 570 006

# 2017–18 ನೇ ಸಾಲಿನ ಲೆಕ್ಕ ತಪಾಸಣಾ ವರದಿಗೆ ಅನುಪಾಲನಾ ವರದಿ

# Compliance Report for 2017-18 Audit

**2017–18ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿ ಸಿದ್ಧಪಡಿಸಿ, ದಿನಾಂಕ 31.12.2020 ರಂದು ನಡೆದ 81ನೇ ಹಣಕಾಸು ಸಮಿತಿ ಸಭೆ ಮತ್ತು ದಿನಾಂಕ 02.01.2021 ರಂದು ನಡೆದ 163ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**ವಿಷಯ: 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸಲ್ಲಿಸಲು ಆಗಿರುವ ವಿಳಂಬಕ್ಕೆ ಕಾರಣ**

| ಕ್ರ ಸಂ. | ವರ್ಷ | ಲೆಕ್ಕ ಪತ್ರಗಳನ್ನು ವರ್ಷವಾರು ಪೂರ್ಣಗೊಳಿಸಿ ಲೆಕ್ಕ ಪರಿಶೋಧನೆಗೆ ಸಿದ್ಧಪಡಿಸಬೇಕಾದ ದಿನಾಂಕ | ವರ್ಷವಾರು ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿದ ದಿನಾಂಕ | ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ | ಸರ್ಕಾರಿ ಲೆಕ್ಕ ಪರಿಶೋಧಕರಿಗೆ ಪರಿಶೋಧನೆ ನಡೆಸಲು ಕೋರಿ ಪತ್ರ ಬರೆದ ದಿನಾಂಕ | ಸರ್ಕಾರಿ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ | ಸರ್ಕಾರಿ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆಯ ಪ್ರಮಾಣ ಪತ್ರವನ್ನು ನೀಡಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಕರಾಮುವಿ ನಿಲಯದ ವ್ಯವಸ್ಥಾಪನಾ ಹಾಗೂ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆದ ವಿವರ | ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸಚಿವಾಲಯಕ್ಕೆ ಸಲ್ಲಿಸಿದ್ದ ಪತ್ರದ ಉಲ್ಲೇಖ ಮತ್ತು ದಿನಾಂಕ | ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣಗಳು |
|---|---|---|---|---|---|---|---|---|---|---|---|
| 01 | 02 | 03 | 04 | 05 | 06 | 07 | 08 | 09 | 10 | 11 | 12 |
| 1. | 2017–18 | ಜೂನ್ 30 (ಆರ್ಥಿಕ ವರ್ಷ ಮುಗಿದ ನಂತರ) | 07.09.2018 | – | 15.09.2018 ಮತ್ತು 24.04.2019 | ದಿನಾಂಕ : 01.07.2019 ರಿಂದ 12.09.2019 ರವರೆಗೆ<br><br>ಮರುಪರಿಶೀಲನಾ ದಿನಾಂಕ : 03.01.2020 | ಸಂಖ್ಯೆ : ಆನಿ/ಪ್ರಾಕಮೈ/ಲೆತವ/2019–20/971–72 ದಿನಾಂಕ 3.7.2019 | ವ್ಯವಸ್ಥಾಪನಾ ಮಂಡಳಿ ಸಭೆಯ ದಿನಾಂಕ : 02.01.2021<br><br>ಹಣಕಾಸು ಸಮಿತಿ ಸಭೆಯ ದಿನಾಂಕ : 31.12.2020 | ಅಚ್ಚಿಗಾಗಿ ನೀಡಿದ ದಿನಾಂಕ: 05.02.2021 ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ : 25.02.2021 | ಸಂಖ್ಯೆ : ಕರಾಮುವಿ/ಹವಿ-~~08/07/2019-120~~ 08/20/2018-19 ದಿನಾಂಕ : 15.09.2022 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ದಿನಾಂಕ 05.11.2020 ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಂದ ಸಮರ್ಪಕ ಉತ್ತರ ಪಡೆದು ಕ್ರೋಡೀಕರಿಸಿ, ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಶಾಸಕಾಂಗ ಸಭೆಗೆ ಸಲ್ಲಿಸಲಾಗಿದ್ದು ಪರಿಗಣಿಸಲು ಕೋರಿದೆ. |

ಕುಲಸಚಿವ

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿಯ ವಿವರ.**

**ಭಾಗ–1**

| ಕ್ರ ಸಂ | ವಿವರ |
|---|---|
| 1 | **1. ಹಿಂದಿನ ವರ್ಷಗಳ ಲೆಕ್ಕಪರಿಶೋಧನೆಯ ಆಡಿಟ್ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸದಿರುವುದು:–** |

2017–18ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡ ಅವಧಿಯಲ್ಲಿ ಹಿಂದಿನ ವರ್ಷಗಳ ಲೆಕ್ಕಪರಿಶೋಧನೆಯ ವರದಿಯ ಕಂಡಿಕೆಗಳಿಗೆ ಸೂಕ್ತ ದಾಖಲಾತಿಗಳೊಂದಿಗೆ, ಅನುಪಾಲನಾ ವರದಿ ನೀಡದೆ ಇರುವುದರಿಂದ ಆಡಿಟ್ ಕಂಡಿಕೆಗಳ ಆಕ್ಷೇಪಣೆ, ವಸೂಲಾತಿ ಮೊಬಲಗು ತೀರುವಳಿಯಾಗದೇ ಮುಂದುವರೆದಿರುತ್ತದೆ. 1996–97 ರಿಂದ 2016–17ನೇ ವರ್ಷಗಳ ಲೆಕ್ಕಪರಿಶೋಧನೆಗೆ ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಆದುದರಿಂದ ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ. ಇದುವರೆವಿಗೂ ತೀರುವಳಿಯಾಗದೇ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ.

| **ಕ್ರ.ಸಂ** | **ವರ್ಷ** | **ಒಟ್ಟು ಕಂಡಿಕೆ ಸಂಖ್ಯೆ** | **ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)** | **ಒಟ್ಟು ಕಂಡಿಕೆ ಸಂಖ್ಯೆ** | **ವಸೂಲಾತಿ ಮೊತ್ತ (ರೂ.ಗಳಲ್ಲಿ)** |
|---|---|---|---|---|---|
| 1 | 1996–1997 ರಿಂದ 2015–16 | 428 | 450,00,13,247 | 317 | 57,86,17,889 |
| 2 | 2016–17 | 49 | 46,11,96,494 | 29 | 55394276 |
| **ಒಟ್ಟು** | | **477** | **496,12,09,741** | **346** | **63,40,12,165** |
| **ತೀರುವಳಿಯಾಗಿರುವುದು** | | **25** | **2,69,44,369** | **31** | **39,87,176** |
| **ಬಾಕಿ ಉಳಿದಿರುವುದು** | | **452** | **4,93,42,65,372** | **315** | **6,30,0,24,989** |

ಉತ್ತರ

1996–97 ರಿಂದ 2016–17ನೇ ಸಾಲಿನವರೆಗಿನ ಎಲ್ಲಾ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಪಡೆದು ಸಲ್ಲಿಸಲಾಗಿದೆ.

**ಭಾಗ–2**

**ಸಾಮಾನ್ಯ ನಿಧಿ ಖಾತೆ**

| | ವಿವರ |
|---|---|
| 2 | **2. ವಾರ್ಷಿಕ ಲೆಕ್ಕಪತ್ರ ಅನುಮೋದನೆಯಾಗಿರುವ ಕುರಿತು :–** |

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರವನ್ನು

ದಿನಾಂಕ:07.09.2018 ರಂದು ನಡೆದ ವ್ಯವಸ್ಥಾಪಕ ಮಂಡಳಿ ಸಭೆಯಿಂದ ಅನುಮೋದನೆ ಪಡೆಯಲಾಗಿದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

3 **3. ವಾರ್ಷಿಕ ಲೆಕ್ಕಪತ್ರದಂತೆ 2017–18ನೇ ಸಾಲಿನ ಆರ್ಥಿಕ ಪರಿಸ್ಥಿತಿ :–**

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಿಂದ ಹಣಕಾಸು ಅಧಿಕಾರಿಗಳ ದೃಢೀಕೃತ ಪ್ರತಿಯ ಆಧಾರದ ಮೇಲೆ ಸಾಮಾನ್ಯ ನಿಧಿ ಖಾತೆ–08, ಪರೀಕ್ಷಾ ಖಾತೆ ನಿಧಿ–09 ಮತ್ತು ವಿವಿಧ ಖಾತೆಗಳ ಆರ್ಥಿಕ ಪರಿಸ್ಥಿತಿಯ ವಿವರ ಈ ರೀತಿ ನೀಡಲಾಗಿದೆ.

**2017–18ರ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ಆರ್ಥಿಕ ಪರಿಸ್ಥಿತಿ**

| ವಿವರ | | | ಮೊತ್ತ (ರೂ.ಗಳಲ್ಲಿ) |
|---|---|---|---|
| ದಿನಾಂಕ: 01.04.2017 ರಂತೆ ಆರಂಭ ಶಿಲ್ಕು | | | 6,24,57,47,640 |
| ಸ್ವೀಕೃತಿ | | ಭಾಗ 1 | 43,60,33,084 |
| | | ಭಾಗ 2 | 1,75,18,98,867 |
| | | **ಒಟ್ಟು** | **843,36,79,591** |
| ವೆಚ್ಚ | | ಭಾಗ 1 | 74,87,98,639 |
| | | ಭಾಗ 2 | 1,68,67,74,308 |
| | | **ಒಟ್ಟು** | **243,55,72,947** |
| ದಿನಾಂಕ: 31.03.2018 ರಂತೆ ಅಂತಿಮ ಶಿಲ್ಕು | | | **5,99,81,06,644** |
| ಅಂತಿಮ ಶಿಲ್ಕಿಗೆ ವಿವರ | 1) ಹೂಡಿಕೆಗಳು | **5754462818** | 5,99,81,06,644 |
| | 2) ನಗದು ಪುಸ್ತಕ | **243643826** | |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

4 **4. ನಗದು ಪುಸ್ತಕಗಳ ಪ್ರಕಾರ ಆರ್ಥಿಕ ಪರಿಸ್ಥಿತಿ :–**

2017–18ನೇ ಸಾಲಿನಲ್ಲಿ ಹಾಜರುಪಡಿಸಿರುವ 33 ಉಳಿತಾಯ ಖಾತೆಗಳ ನಗದು ಪುಸ್ತಕಗಳ ಪ್ರಕಾರ ಆರ್ಥಿಕ ಪರಿಸ್ಥಿತಿ ಈ ಕೆಳಗಿನಂತಿದೆ.

**2017–18ರ ನಗದು ಪುಸ್ತಕದ ಪ್ರಕಾರ ಆರ್ಥಿಕ ಪರಿಸ್ಥಿತಿ**

| ವಿವರ | ಮೊತ್ತ (ರೂ.ಗಳಲ್ಲಿ) |
|---|---|
| ದಿನಾಂಕ: 01.04.2017 ರಂತೆ ಆರಂಭ ಶಿಲ್ಕು | 134,73,67,056 |
| ಸ್ವೀಕೃತಿ | 191,88,97,202 |
| **ಒಟ್ಟು** | 326,62,64,258 |
| ವೆಚ್ಚ | 202,22,34,132 |
| (–) ಎಫ್.ಡಿ.ಆರ್ ಪಿಂಚಣಿ ಠೇವಣಿ | 100,03,86,300 |
| ದಿನಾಂಕ: 31.03.2018 ರಂತೆ ಅಂತಿಮ ಶಿಲ್ಕು | 24,36,43,826 |
| ಬ್ಯಾಂಕ್ ಪ್ರಕಾರ | 25,23,33,738 |
| ವ್ಯತ್ಯಾಸ | **86,89,912** |

ವ್ಯತ್ಯಾಸಕ್ಕೆ ಕಾರಣ :– ನಗದಾಗದ ಧನಾದೇಶಗಳು ರೂ. 86,89,912/– ವಿವಿಧ ಖಾತೆಗಳ ಆರ್ಥಿಕ ಸ್ಥಿತಿ ವಿವರಗಳನ್ನು **<u>ಅನುಬಂಧ – 2 ರಲ್ಲಿ</u>** ನೀಡಿದೆ.

2017–18ನೇ ಸಾಲಿನಲ್ಲಿ ಹಾಜರುಪಡಿಸಿರುವ ನಗದು ಪುಸ್ತಕಗಳ ಆಧಾರದ ಮೇಲೆ ಆರ್ಥಿಕ ಪರಿಸ್ಥಿತಿ ಪಟ್ಟಿ ಸಿದ್ಧಪಡಿಸಲಾಗಿದ್ದು, FDR ಗೆ ಸಂಬಂಧಿಸಿದ ಯಾವುದೇ ಮಾಹಿತಿಗಳು ನಗದು ಪುಸ್ತಕಗಳಲ್ಲಿ ಲಭ್ಯವಿರುವುದಿಲ್ಲ. ಪಿಂಚಣಿ ಖಾತೆಯ ನಗದು ಪುಸ್ತಕದಲ್ಲಿ FDR ಒಳಗೊಂಡಂತೆ ಅಂತಿಮ ಶಿಲ್ಕು 107,47,90,249/– ಇದ್ದು ಬ್ಯಾಂಕ್ ಪಾಸ್ ಪುಸ್ತಕದ ಪ್ರಕಾರ 7,44,03,949 ಇದ್ದು, ವ್ಯತ್ಯಾಸದ ಮೊತ್ತ ರೂ.100,03,86,300/–ಗಳು ಆಗಿರುತ್ತದೆ. ಈ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವುದರಿಂದ ಈ ರೀತಿ ವ್ಯತ್ಯಾಸ ಕಂಡುಬಂದಿರುತ್ತದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

5 **<u>5. ದಿನಾಂಕ:31.03.2018ನೇ ಸಾಲಿನ ಅಂತ್ಯಕ್ಕೆ ವಿವಿಧ ಖಾತೆಗಳಲ್ಲಿನ ನಗದಾಗದೇ ಇರುವ ಧನಾದೇಶಗಳ ವಿವರ:–</u>**

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಮಾರ್ಚ್–2018 ರ ಅಂತ್ಯಕ್ಕೆ ರೂ.86,89,912/–ಗಳು ನಗದಾಗದೆ (Un encashed cheques) ಉಳಿದಿದ್ದು, ವಿವರಗಳು ಈ ಕೆಳಕಂಡಂತೆ ಇರುತದೆ.

**<u>UN ENCASHED CHEQUES 2017-18</u>**

| S.N | FUND NAME | AMOUNT (in Rs.) |
|---|---|---|
| 1 | GRA | 68,81,978 |
| 2 | EXAM | 75,887 |
| 3 | NPS | 7,99,014 |
| 4 | SDA | 2,33,138 |
| 5 | GYANAVANI | 41,990 |
| 6 | MUKTA SANJ | 87,000 |
| 7 | SCHOLSP | 11,350 |
| 8 | DIST EDU | 5,58,980 |
| 9 | MISC | 575 |
| **TOTAL** | | **86,89,912** |

ಎಲ್ಲಾ ಖಾತೆಗಳಿಗೆ ಸಂಬಂಧಿಸಿದ ನಗದಾಗದ ಧನಾದೇಶಗಳ ಮೊತ್ತವು ರೂ.86,89,912/– ಗಳಾಗಿದ್ದು, ಪ್ರತ್ಯೇಕವಾಗಿ ಧನಾದೇಶಗಳ ಸಂಖ್ಯೆ ಮತ್ತು ದಿನಾಂಕದೊಂದಿಗೆ **<u>ಅನುಬಂಧ–3 ರಲ್ಲಿ</u>** ವಿವರವನ್ನು ನೀಡಲಾಗಿದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

6 **<u>6. ನಗದು ಪುಸ್ತಕದಲ್ಲಿನ ನ್ಯೂನತೆಗಳು :–</u>**

| | |
|---|---|
| | * ನಗದು ಪುಸ್ತಕದಲ್ಲಿನ ಪುಟಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು, ದೃಢೀಕರಿಸಿರುವುದಿಲ್ಲ.<br>* ನಗದು ಪುಸ್ತಕದಲ್ಲಿ ಪ್ರತಿದಿನ ಜಮಾ ಮತ್ತು ಖರ್ಚನ್ನು ಅಂತಿಮ ಶಿಲ್ಕಿನೊಂದಿಗೆ ಸಮನ್ವಯಗೊಳಿಸಿ ಸಹಿ ಮಾಡದೆ ತಿಂಗಳ ಅಂತ್ಯಕ್ಕೆ ಸಹಿ ಮಾಡಲಾಗಿದೆ.<br>* ನಗದು ಪುಸ್ತಕ Receipt ಭಾಗದಲ್ಲಿ ಜಮೆ ಆಗಿರುವ ವಿವಿಧ ಸಂಸ್ಥೆಗಳಿಂದ ಸ್ವೀಕರಿಸಿದ ಡಿಡಿ ನಂಬರ್, ದಿನಾಂಕ, ಸಂಸ್ಥೆಯ ಹೆಸರು ಹಾಗೂ ನಗದು ರೂಪದಲ್ಲಿ ಸ್ವೀಕರಿಸಿದ ಹಣ, ಚೆಕ್‌ನಂ, ದಿನಾಂಕ, ರಶೀತಿ ನಂಬರ್ ದಿನಾಂಕದ ವಿವರಗಳನ್ನು ನಮೂದಿಸಿರುವುದಿಲ್ಲ.<br>* ನಗದು ಪುಸ್ತಕದ ನಿರ್ವಹಣೆಯ KFC ಅನುಚ್ಛೇಧ 329 ರಿಂದ 331 ರವರೆಗೆ ವಿವರಿಸಿರುವಂತೆ ಇರಬೇಕಾಗಿದ್ದು, ನಿಯಮಾನುಸಾರ ನಿರ್ವಹಿಸಲು ವರದಿಯಲ್ಲಿ ಸೂಚನೆ ನೀಡಲಾಗಿದೆ.<br>* GRA ಖಾತೆ ಸಂಖ್ಯೆ:54035420117 ರಲ್ಲಿ ಸೆಪ್ಟಂಬರ್–2017ರ ಮಾಹೆಯ ಆರಂಭಶಿಲ್ಕು ಋಣಾತ್ಮಕವಾಗಿರುತ್ತದೆ. ಇದಕ್ಕೆ ಸೂಕ್ತ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:10/19–20, ದಿನಾಂಕ:11.07.2019 ರಂದು ನೀಡಲಾಗಿದ್ದು, ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲ. ಖಾತೆಯಲ್ಲಿರುವ ಹಣವನ್ನು ಖಚಿತಪಡಿಸಿಕೊಂಡು ವೆಚ್ಚವನ್ನು ಭರಿಸಬೇಕೆಂದು ಸೂಚಿಸಿದೆ. |
| | ಉತ್ತರ |
| | ಆಗಸ್ಟ್ 2017 ನೇ ಮಾಹೆಯ ವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ಧನಾದೇಶಗಳನ್ನು ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದು ಸರಿಯಷ್ಟೇ, ಆದರೆ ಬ್ಯಾಂಕ್‌ನಲ್ಲಿ ಲಭ್ಯವಿರುವ ಮೊತ್ತಕ್ಕೆ ಅನುಗುಣವಾಗಿ ಆಗಸ್ಟ್ 2017 ರ ನೌಕರರ ವೇತನ ಕಡಿತಗಳ ಧನಾದೇಶಗಳನ್ನು (ಹಬ್ಬದ, ಸೋಲಾರ್, ವಾಹನ, ಗಣಕಯಂತ್ರ ಮುಂಗಡ) ಇತರೆ ಕಡಿತಗಳು ವಿಶ್ವವಿದ್ಯಾನಿಲಯದ ಇತರೆ ಖಾತೆ: 54035421315ಗೆ ವರ್ಗಾಯಿಸಲಾಗುತ್ತಿತ್ತು. ಆದ್ದರಿಂದ 2017ರ ಪ್ರಾರಂಭದಲ್ಲಿ ಸಾಮಾನ್ಯ ನಿಧಿ ಖಾತೆಯಲ್ಲಿ –549202.02 ಋಣಾತ್ಮಕದಲ್ಲಿರುತ್ತದೆ. ಈ ಸಂಬಂಧ ರೂ. 45,00,000/– (ರೂ. ನಲವತ್ತೈದು ಲಕ್ಷ ಮಾತ್ರ) ಗಳನ್ನು ಸಾಮಾನ್ಯ ನಿಧಿಯ ಅತಿಥಿ ಗೃಹ ಖಾತೆಯಿಂದ ದಿನಾಂಕ : 06.09.2017 ರಂದು ಸಾಮಾನ್ಯ ನಿಧಿ ಖಾತೆಗೆ ಆಂತರಿಕ ವರ್ಗಾಯಿಸಲಾಗಿದೆ, ವಿಲೆಯಿರುವ ವೇತನ ಕಡಿತಗಳ ಧನಾದೇಶವನ್ನು ಪಾವತಿಸಲಾಗಿರುತ್ತದೆ ಹಾಗು ಬ್ಯಾಂಕಿನಿಂದ ಯಾವುದೇ ಧನಾದೇಶ ನಗದಾಗದೆ ಹಿಂದಿರುಗಿರುವುದಿಲ್ಲ ಮತ್ತು ದಿನಾಂಕ: 31.08.2017 ಕ್ಕೆ ಬ್ಯಾಂಕಿನಲ್ಲಿ ಜಮೆ ರೂ.31,30,753.98/–ಗಳು ಖಾತೆಯಲ್ಲಿ ಲಭ್ಯವಿರುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 7 | **7. ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸದಿರುವ ಬಗ್ಗೆ :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆಯ ಅಧ್ಯಾಯ–VI ಹಣಕಾಸು ಮತ್ತು ಲೆಕ್ಕಪತ್ರಗಳು, ಕಾಲಂ–26ರ ಪ್ರಕಾರ ವಾರ್ಷಿಕ ವರದಿಯ (3) (1)ನೇ ಉಪ ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಲಾದ ವಾರ್ಷಿಕ ವರದಿಯ ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಅದನ್ನು |

ಸಾಧ್ಯವಾದಷ್ಟು ಬೇಗ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಕ್ರಮವಹಿಸುವುದು ಎಂದಿರುತ್ತದೆ. 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ಯಾವ ಮಾಹಿತಿಯು ಲಭ್ಯವಿರುವುದಿಲ್ಲ. ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸದಿದ್ದಲ್ಲಿ ಕೂಡಲೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ವರದಿಯಲ್ಲಿ ಸೂಚಿಸಿದೆ.

ಉತ್ತರ

ಈಗಾಗಲೇ 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ವಿವರ**

8 **8. ನಗದು ಪುಸ್ತಕ ಮತ್ತು ವಾರ್ಷಿಕ ಲೆಕ್ಕಪತ್ರಗಳಿಗೆ ಹೊಂದಾಣಿಕೆ ಆಗದಿರುವುದು :–**

2017–18ನೇ ಸಾಲಿನ ದತ್ತಿ ನಿಧಿ ಖಾತೆಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ನಗದು ಪುಸ್ತಕದಲ್ಲಿ ನಮೂದಿಸಲಾದ ಸ್ವೀಕೃತಿ ಮತ್ತು ಪಾವತಿ ವಿವರಗಳು ಸದರಿ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಿರುವ ಸ್ವೀಕೃತಿ ಮತ್ತು ಪಾವತಿಯ ವಿವರಗಳಿಗೆ ಹೊಂದಾಣಿಕೆ ಆಗದಿರುವುದು ಕಂಡು ಬಂದಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

**ಮೊತ್ತ (ರೂ.ಗಳಲ್ಲಿ)**

| ವಿವರ | ನಗದು ಪುಸ್ತಕದಂತೆ | ವಾರ್ಷಿಕ ಲೆಕ್ಕಪತ್ರದಂತೆ |
|---|---|---|
| ಪ್ರಾರಂಭಿಕ ಶಿಲ್ಕು | ರೂ. 2,29,346 | ರೂ.2,29,346 ನಗದು, 32,68,826 FDR |
| ಸ್ವೀಕೃತಿ | ರೂ. 10,373 | ರೂ.2,53,922 ಠೇವಣಿ ಮೇಲಿನ ಬಡ್ಡಿ 8,602 ಉಳಿತಾಯ ಖಾತೆಯ ಬಡ್ಡಿ |
| ಪಾವತಿ | ಇಲ್ಲ | ವೆಚ್ಚ ರೂ.ಇಲ್ಲ |
| ಅಂತಿಮ ಶಿಲ್ಕು | ರೂ. 2,39,719 | ರೂ.35,20,977 FDR 2,39,719 ನಗದು |

2017–18ನೇ ಸಾಲಿನಲ್ಲಿ ನಿರ್ವಹಿಸಲಾಗಿರುವ ನಗದು ಪುಸ್ತಕದಲ್ಲಿ ದತ್ತಿಗಳ ಪ್ರಸ್ತಾಪವಿದ್ದು, ಈ ದತ್ತಿಗಳನ್ನು ಯಾರ ಹೆಸರಿನಲ್ಲಿ ಸ್ಥಾಪಿಸಲಾಗಿದೆ ಹಾಗೂ ಸದರಿಯವರ ಹೆಸರಿನಲ್ಲಿ ಎಷ್ಟು ಮೊತ್ತದ ಠೇವಣಿ ಇಡಲಾಗಿದೆ ಎಂಬ ವಿವರವನ್ನು ನಮೂದಿಸಿರುವುದಿಲ್ಲ. ನಗದು ಪುಸ್ತಕಕ್ಕೂ, ವಾರ್ಷಿಕ ಲೆಕ್ಕ ಪತ್ರಗಳ ಮೊತ್ತಗಳಿಗೂ ವ್ಯತ್ಯಾಸವಿದ್ದು, ಸರಿಪಡಿಸಿಕೊಳ್ಳಲು ಸೂಚಿಸಿದೆ.

ಉತ್ತರ

ನಗದು ಪುಸ್ತಕದಲ್ಲಿ ಠೇವಣಿಯಿರಿಸಲಾಗಿರುವ ಮೊತ್ತವನ್ನು ನಮೂದಿಸಿರುವುದಿಲ್ಲ. ವಾರ್ಷಿಕ ಲೆಕ್ಕಪತ್ರದಲ್ಲಿ ಠೇವಣಿ ಮೊತ್ತವನ್ನು ನಮೂದಿಸಲಾಗಿದ್ದು ವ್ಯತ್ಯಾಸ ಕಂಡುಬಂದಿರುತ್ತದೆ. ಲೆಕ್ಕಪರಿಶೋಧಕರು ಸೂಚಿಸಿರುವಂತೆ ನಗದು ಪುಸ್ತಕ ಹಾಗೂ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ವ್ಯತ್ಯಾಸವಿರುವ ಮೊತ್ತವನ್ನು ಸರಿಪಡಿಸಿಕೊಳ್ಳಲು ಕ್ರಮವಹಿಸಲಾಗುವುದು.

**ವಿವರ**

9 **9. ವಾರ್ಷಿಕ ಲೆಕ್ಕಪತ್ರದಲ್ಲಿ, ವೇತನ ವಸೂಲಾತಿಯ ಮೊತ್ತದಲ್ಲಿ ಕಂಡುಬಂದಿರುವ ವ್ಯತ್ಯಾಸದ ಬಗ್ಗೆ :–**

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಸ್ವೀಕೃತಿ ವಿಭಾಗದಲ್ಲಿ ವೇತನ ವಸೂಲಾತಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ವಿವರಗಳನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯದ ನೌಕರರುಗಳು ಪಡೆದಿರುವ ವಿವಿಧ ಮುಂಗಡಗಳಿಗೆ ವೇತನದಿಂದ ಸಮಕಂತುಗಳಲ್ಲಿ ವಸೂಲಾತಿ ಮಾಡಲಾಗಿರುವ ಒಟ್ಟು ಮೊತ್ತ ರೂ.20,17,736/–ಗಳಾಗಿರುತ್ತವೆ. ಆದರೆ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಒಟ್ಟು ಮೊತ್ತ ರೂ.20,57,070/–ಗಳೆಂದು ನಮೂದಿಸಲಾಗಿರುತ್ತದೆ. ಉಳಿಕೆ ವ್ಯತ್ಯಾಸದ ಮೊತ್ತ ರೂ.39,334/–ಗಳ ಬಗ್ಗೆ ವಿವರಗಳಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ಪತ್ರ ವಿಚಾರಣಾ ಸಂಖ್ಯೆ:47/ದಿನಾಂಕ:28.08.2019ರಲ್ಲಿ ಕೋರಲಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ಸೂಕ್ತ ವಿವರಣೆ ನೀಡುವವರೆಗೂ ಸದರಿ ವ್ಯತ್ಯಾಸದ **ಮೊತ್ತ ರೂ.39,334/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಉತ್ತರ**

ಸಾಮಾನ್ಯ ನಿಧಿ ಸ್ವೀಕೃತಿ ವಿಭಾಗದಲ್ಲಿ ವೇತನ ವಸೂಲಾತಿಗೆ ಸಂಬಂಧಿಸಿದಂತೆ ವ್ಯತ್ಯಾಸದ ಮೊತ್ತ ರೂ.39,334/–ಗಳ ಬಗ್ಗೆ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

| ಕ್ರ.ಸಂ. | ವರ್ಷ | ವಿವರ | ನೌಕರರ ಹೆಸರು | ಮೊತ್ತ | ಒಟ್ಟು ಮೊತ್ತ |
|---|---|---|---|---|---|
| 1 | 2017–18 | Solour Advance Recevery | ಉಷಾ (ಪ್ರ.ದ.ಗು) | 6,641/– | 28,248–00 |
| | | | ಪ್ರಕಾಶ್ (ಚಾಲಕರು) | 4,485/– | |
| | | | ರಾಜೇಂದ್ರ ಪ್ರಸಾದ್ (ಅಧೀಕ್ಷಕ) | 12,141/– | |
| | | | ರಾಘವೇಂದ್ರ (ಎಸ್.ಡಿ.ಸಿ) | 4,981/– | |
| 2 | | Festival Advance Recevery | ಉಷಾ (ಪ್ರ.ದ.ಗು) | 3,500/– | 5,000–00 |
| | | | ರಾಜೇಂದ್ರ ಪ್ರಸಾದ್ (ಅಧೀಕ್ಷಕ) | 1,500/– | |
| 3 | | H B A | ಸಿ.ಪಿ.ಸುರೇಶ್ (ಸ.ಕು.ಸ) | 536/– | 536–00 |
| 4 | | G.I S L | ಟಿ.ಸಿ.ಚಂದನ್ (ಪ್ರ.ದ.ಗು) | 300+150 | 5,550–00 |
| | | | ಸಿದ್ಧರಾಜು (ಉ.ಕು.ಸ) | 600+300+300 | |
| | | | ಆನಂದ ಎಂ (ಎಸ್.ಡಿ.ಸಿ) | 300/– | |
| | | | ಎಂ.ಕೆ.ರವಿಕುಮಾರ್ (ಎಸ್.ಡಿ.ಸಿ) | 300+150 | |
| | | | ಸಿ.ಜೆ.ಗಿರೀಶ್ (ಎಸ್.ಡಿ.ಸಿ) | 300+300 | |
| | | | ಪ್ರದೀಪ್ ಕುಮಾರ್ ಎಂ.ಟಿ (ಪ್ರ.ದ.ಗು) | 150+150+150 | |
| | | | ಮಹದೇವ ಮೂರ್ತಿ | 2100 | |
| | | | | **Total** | **39,334/-** |

ಮೇಲ್ಕಂಡ ನೌಕರರುಗಳಿಂದ ಒಟ್ಟು ರೂ.39,334/–ಗಳು ಪಾವತಿಯಾಗಿದ್ದು ಯಾವುದೇ ವ್ಯತ್ಯಾಸವಿರುವುದಿಲ್ಲ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ.

**ವಿವರ**

10 **10. 2017–18ನೇ ಸಾಲಿನ ವಿವಿಧ ಖಾತೆಯಲ್ಲಿ ಠೇವಣಿ ವಿವರ :–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದವರು ಅವರಲ್ಲಿರುವ ಹಣವನ್ನು ವಿವಿಧ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುತ್ತಾರೆ. ಈ ರೀತಿ ಠೇವಣಿಯಲ್ಲಿ ತೊಡಗಿಸುವ ಮುಂಚೆ ಈ ಠೇವಣಿಗಳಿಗೆ

| | |
|---|---|
| | ಅಧಿಕ ಬಡ್ಡಿ ಪಡೆಯಲು/ಗಳಿಸಲು ಬ್ಯಾಂಕುಗಳಿಂದ ದರಪಟ್ಟಿ ಪಡೆದಿರುವುದಿಲ್ಲ ಅಥವಾ ಇ–ಬಿಡ್ಡಿಂಗ್ ಮೂಲಕ ಟೆಂಡರ್ ಕರೆದು ಠೇವಣಿ ಮಾಡಿರುವುದಿಲ್ಲ. ಈಗಾಗಲೇ ಠೇವಣಿ ಮಾಡಿರುವ ಬ್ಯಾಂಕುಗಳಲ್ಲಿಯೇ ನವೀಕರಿಸಿ ಮುಂದುವರೆಸುತ್ತಿರುತ್ತಾರೆ. ದರಪಟ್ಟಿ/ಟೆಂಡರ್ ಕರೆದು ಠೇವಣಿ ಮಾಡದಿರುವುದರಿಂದ ಅಧಿಕ ಬಡ್ಡಿ ದೊರಕುವ ಸಾಧ್ಯತೆಯು ಇಲ್ಲವಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುವ ಸಂಭವವಿರುತ್ತದೆ. ಆದ್ದರಿಂದ ಠೇವಣಿಗಳನ್ನು ದರಪಟ್ಟಿ/ಟೆಂಡರ್/ಇ–ಆಕ್ಷನ್ ಮೂಲಕ ಹೂಡಿಕೆ ಮಾಡಬೇಕೆಂದು ಸೂಚಿಸಲಾಗಿದೆ. 2017–18ನೇ ಸಾಲಿನಲ್ಲಿ ದರಪಟ್ಟಿ ಕರೆಯದೇ ಠೇವಣಿ ಇರುವ ಬ್ಯಾಂಕುಗಳಲ್ಲಿಯೇ ನವೀಕರಿಸಿರುವ ಬಗ್ಗೆ ವಿವರಣೆ ನೀಡಲು ಸೂಚಿಸಲಾಗಿದೆ.<br><br>2017–18ನೇ ಸಾಲಿನಲ್ಲಿ ಸಾಮಾನ್ಯ ನಿಧಿ, ಪರೀಕ್ಷಾ ನಿಧಿ ಮತ್ತು ಇತರೆ ಖಾತೆಗಳ ಹಣವನ್ನು ಠೇವಣಿಯಲ್ಲಿ ತೊಡಗಿಸಿರುವ ಬಗ್ಗೆ ಹಾಜರುಪಡಿಸಲಾದ ದೃಢೀಕೃತ ತಃಖ್ತೆಯ ಅನುಸಾರ ಠೇವಣಿಗಳ ವಿವರ ಈ ಕೆಳಗಿನಂತಿರುತ್ತದೆ. |

| ವಿವರ | (ಮೊತ್ತ ರೂ.ಗಳಲ್ಲಿ) |
|---|---|
| **ಪ್ರಾರಂಭಿಕ ಶಿಲ್ಕು** | 5,89,87,66,883.00 |
| ಸ್ವೀಕೃತಿ :– 1) ಬಡ್ಡಿ ಮೊತ್ತ – 34,48,71,584.00<br>2) ಠೇವಣಿ ತೊಡಗಿಸಿದ ಮೊತ್ತ – 6,56,61,017.00 | 41,05,32,601.00 |
| **ಒಟ್ಟು** | **630,92,99,484.00** |
| **ಪಾವತಿ (ಮೊತ್ತ ರೂ.ಗಳಲ್ಲಿ)** | |
| 1) TDS - 4,00,05,205<br>2) ಬಡ್ಡಿ ಹಿಂಪಡೆತ – 13,22,18,771<br>3) ಠೇವಣಿ ಹಿಂಪಡೆತ –38,26,12,689 | 55,48,36,665 |
| **ಅಂತಿಮ ಶಿಲ್ಕು** | **575,44,62,819** |

| | |
|---|---|
| | 2017–18ನೇ ಸಾಲಿನಲ್ಲಿಯೇ ಠೇವಣಿ ಮೊತ್ತವನ್ನು ನವೀಕರಿಸಿದ ಸಂದರ್ಭದಲ್ಲಿ ಠೇವಣಿ ಖಾತಾ ಸಂಖ್ಯೆಯ ಬದಲಾವಣೆ ಆಗಿದ್ದು, ಕೆಲವು ಮೂಲ ಠೇವಣಿ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ರಿಸರ್ವ್ ಬ್ಯಾಂಕ್‌ನಿಂದ ನಿಗದಿಪಡಿಸುವ ಬಡ್ಡಿದರವು ಬದಲಾವಣೆಗೊಳಪಡುವ ಸಾಧ್ಯತೆ ಇರುವುದರಿಂದ ವಿಶ್ವವಿದ್ಯಾನಿಲಯವು ತೊಡಗಿಸಿರುವ ಬ್ಯಾಂಕ್ ಠೇವಣಿಗಳ ಬಡ್ಡಿದರದಲ್ಲಾಗಿರುವ ವ್ಯತ್ಯಾಸಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಬದಲಾವಣೆಯಾಗುವ ಬಡ್ಡಿದರವನ್ನು ಸಂಬಂಧಿಸಿದ ದಿನಾಂಕದಂದು ನಿಗದಿತ ತಃಖ್ತೆಯಲ್ಲಿ ನಮೂದಿಸಿ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. 2017–18ನೇ ಸಾಲಿಗೆ ಠೇವಣಿ ವಿವರವನ್ನು **ಅನುಬಂಧ–4 ರಲ್ಲಿ** ನೀಡಲಾಗಿದೆ. |
| | ಉತ್ತರ |
| | ಠೇವಣಿಗಳನ್ನು ದರಪಟ್ಟಿ/ಟೆಂಡರ್/ಇ–ಆಕ್ಷನ್ ಮೂಲಕ ಹೂಡಿಕೆ ಮಾಡಲು ಕ್ರಮವಹಿಸಲಾಗುವುದು. |
| | **ವಿವರ** |
| 11 | **11. ಸಾಮಾನ್ಯ ನಿಧಿ ಮತ್ತು ಪರೀಕ್ಷಾ ನಿಧಿಯಿಂದ ಅನುದಾನ ವರ್ಗಾವಣೆ ಆಗಿರುವ ಕುರಿತು ಮಾಹಿತಿ** |

**ನೀಡದಿರುವುದು :**

2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಸಂಕೀರ್ಣ ಖಾತೆಯಲ್ಲಿ ಸಾಮಾನ್ಯ ನಿಧಿ ಮತ್ತು ಪರೀಕ್ಷಾ ನಿಧಿಯಿಂದ ಬಂದ ಮೊತ್ತವೆಂದು ರೂ.4,53,31,570/–ಗಳನ್ನು ನಮೂದಿಸಲಾಗಿದೆ. ಸಾಮಾನ್ಯ ನಿಧಿ ಮತ್ತು ಪರೀಕ್ಷಾ ಖಾತೆಯಲ್ಲಿ 2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದಲ್ಲಿ ಅನುದಾನ ವರ್ಗಾವಣೆ ಆಗಿರುವ ಬಗ್ಗೆ ಯಾವುದೇ ನಮೂದು ಇರುವುದಿಲ್ಲ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:08/ದಿನಾಂಕ:11.07.2019 ರಲ್ಲಿ ಅನುದಾನ ವರ್ಗಾವಣೆ ಆಗಿರುವ ಬಗ್ಗೆ ಅಗತ್ಯ ದಾಖಲಾತಿಯೊಂದಿಗೆ ವಿವರಣೆ ನೀಡುವಂತೆ ತಿಳಿಸಲಾಗಿದ್ದರೂ ಸಹ ಯಾವುದೇ **ಅನುಪಾಲನಾ ವರದಿ ನೀಡದಿರುವುದರಿಂದ ಸದರಿ ಮೊತ್ತ ರೂ.4,53,31,570/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಎಸ್ ಬಿ ಐ ಖಾತೆ ಸಂಖ್ಯೆ 54035420117 ರಿಂದ ಸಂಕೀರ್ಣ ಖಾತೆಗೆ ಏಪ್ರೀಲ್ 2017ರ ಮಾಹೆಯಿಂದ ಮಾರ್ಚ್ 2018ರ ಮಾಹೆವರೆಗೆ ಒಟ್ಟು ರೂ 4,53,31,570/–ಗಳನ್ನು ಆಂತರಿಕ ವರ್ಗಾವಣೆ ಮಾಡಿಕೊಳ್ಳಲಾಗಿದ್ದು ಮಾಹೆವಾರು ವರ್ಗಾವಣೆಗೊಂಡ ಮೊತ್ತದ ವಿವರ ಈ ಕೆಳಕಂಡಂತಿದೆ. ಪರಿಶೀಲಿಸಿ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ.

| Months | Reciepts |
|---|---|
| April -2017 | 13,280,107.00 |
| May-2017 | 2,680,103.00 |
| June-2017 | 2,798,654.00 |
| July-2017 | 2,652,605.00 |
| August-2017 | 2,667,633.00 |
| September-2017 | 2,729,227.00 |
| October-2017 | 2,665,641.00 |
| November-2017 | 2,705,096.00 |
| December-2017 | 2,906,073.00 |
| January-2018 | 3,180,457.00 |
| February-2018 | 3,005,264.00 |
| March-2018 | 4,060,710.00 |
| **Total** | **45,331,570.00** |

**ವಿವರ**

12 **12. ಸಾಮಾನ್ಯ ವಿಭಾಗದಲ್ಲಿ ನಿರ್ವಹಿಸಿರುವ ಅಂಚೆಚೀಟಿ ದಾಸ್ತಾನು ವಹಿ ಪರಿಶೀಲನೆ ಬಗ್ಗೆ :–**

ಸಾಮಾನ್ಯ ವಿಭಾಗದಲ್ಲಿ ಅಂಚೆ ಚೀಟಿ ಉಪಯೋಗಕ್ಕಾಗಿ ಪ್ರಾಂಕ್ಲಿನ್ ಯಂತ್ರವನ್ನು ನಿರ್ವಹಿಸಿದ್ದು, 2017–18ನೇ ಸಾಲಿನಲ್ಲಿ ಬಳಸಲಾಗಿರುವ ಅಂಚೆ ಚೀಟಿಯ ವಿವರಗಳು ಈ ಕೆಳಕಂಡಂತಿದೆ.

| | **(ಮೊತ್ತ ರೂ.ಗಳಲ್ಲಿ)** |
|---|---|
| ದಿನಾಂಕ:01.04.2017ಕ್ಕೆ ಪ್ರಾರಂಭಿಕ ಶಿಲ್ಕು (ಪ್ರಾಂಕ್ಲಿನ್ ಯಂತ್ರದ ರೀಡಿಂಗ್‌ನಂತೆ) | 4,680 |

| | |
|---|---|
| 2017–18ನೇ ಸಾಲಿಗೆ ಯಂತ್ರಕ್ಕೆ ರೀಚಾರ್ಜ್ ಮಾಡಿಸಿರುವುದು | 3,20,000 |
| **ಒಟ್ಟು** | **3,24,680** |
| 2017–18ನೇ ಬಳಸಲಾಗಿರುವ ಅಂಚೆ ಚೀಟಿ | 1,38,087 |
| 31.03.2018ಕ್ಕೆ ಅಂತಿಮ ಶಿಲ್ಕು (ಪ್ರಾಂಕ್ಲಿನ್ ಯಂತ್ರದ ರೀಡಿಂಗ್‌ನಂತೆ) | 1,86,593 |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

13 **13. ಭದ್ರತಾ ಠೇವಣಿ/ಮುಂಗಡ ಠೇವಣಿ ವಹಿಯನ್ನು ಸರ್ಮಪಕವಾಗಿ ನಿರ್ವಹಿಸದಿರುವುದು :–**

2017–18ನೇ ಸಾಲಿನಲ್ಲಿ ಭದ್ರತಾ ಠೇವಣಿ/ಮುಂಗಡ ಠೇವಣಿ ಸ್ವೀಕೃತಿ ಮತ್ತು ಪಾವತಿಗಾಗಿ ಪ್ರತ್ಯೇಕ ವಹಿಯನ್ನು ನಿರ್ವಹಿಸಲಾಗಿದೆ. ಸದರಿ ವಹಿಯಲ್ಲಿ ಕಾಮಗಾರಿಗೆ ಅನುಗುಣವಾಗಿ, ಕಾಮಗಾರಿಯ ವಿವರ ಗುತ್ತಿಗೆದಾರರ ಹೆಸರು ಕಾಮಗಾರಿಯ ಪ್ರಥಮ ಬಿಲ್ಲಿನಿಂದ ಅಂತಿಮ ಬಿಲ್ಲಿನವರೆಗೆ ಕಟಾಯಿಸಲಾದ ಭದ್ರತಾ ಠೇವಣಿಯನ್ನು ನಮೂದಿಸಿ ವರ್ಷದ ಅಂತ್ಯಕ್ಕೆ ಸ್ವೀಕರಿಸಲಾದ ಹಾಗೂ ಗುತ್ತಿಗೆದಾರರಿಗೆ ಪಾವತಿಸಲಾದ ವಿವರಗಳು ಲಭ್ಯವಾಗುವಂತೆ ನಿರ್ವಹಿಸಿರುವುದಿಲ್ಲ. ಇದನ್ನು ನಿರ್ವಹಿಸಿದ್ದಲ್ಲಿ ಕರಾರಿನಂತೆ ನಿಗದಿತ ಅವಧಿ ಮುಗಿದ ನಂತರ ಸರಬರಾಜು/ಗುತ್ತಿಗೆದಾರರಿಗೆ ಭದ್ರತಾ ಠೇವಣಿ ಮರುಪಾವತಿಸಲು ಸಹಕಾರಿಯಾಗಿರುತ್ತದೆ, ಕರಾರಿನಂತೆ ಕಾಮಗಾರಿ ಪೂರ್ಣಗೊಳಿಸದ ಹಾಗೂ ಸರಬರಾಜು ಮಾಡದ ಗುತ್ತಿಗೆದಾರರಿಂದ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲು ಸಹಕಾರಿಯಾಗುತ್ತದೆ. ಈ ಬಗ್ಗೆ ಕ್ರಮಕೈಗೊಂಡು ವರದಿ ನೀಡಲು ಸೂಚಿಸಿದೆ.

ಉತ್ತರ

ಮುಂದಿನ ಸಾಲಿನಿಂದ ಕಾಮಗಾರಿಯ ವಿವರ, ಗುತ್ತಿಗೆದಾರರ ಹೆಸರು, ಕಾಮಗಾರಿಯ ಪ್ರಥಮ ಬಿಲ್ಲಿನಿಂದ ಅಂತಿಮ ಬಿಲ್ಲಿನವರೆಗೆ ಕಟಾಯಿಸಲಾದ ಭದ್ರತಾ ಠೇವಣಿಯನ್ನು ನಮೂದಿಸಿ ವರ್ಷದ ಅಂತ್ಯಕ್ಕೆ ಸ್ವೀಕರಿಸಲಾದ ಹಾಗೂ ಗುತ್ತಿಗೆದಾರರಿಗೆ ಪಾವತಿಸಲಾದ ವಿವರಗಳನ್ನು ನಮೂದಿಸಲು ಕ್ರಮವಹಿಸಲಾಗುವುದು.

**ವಿವರ**

14 **14. ಉಪಯೋಗಿಸಲಾದ ರಶೀದಿ ಪುಸ್ತಕಗಳ ವಿವರ :–**

2017–18ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ವಿವಿಧ ರೀತಿಯ ಶುಲ್ಕ ಸ್ವೀಕೃತಿಗಳಿಗೆ ಉಪಯೋಗಿಸಿರುವ ರಶೀದಿ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು, ಒಟ್ಟು ರೂ.20,900/–ಗಳನ್ನು ರಶೀದಿಗಳ ಮೂಲಕ ಸ್ವೀಕೃತಿಯಾಗಿದ್ದು, ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡಲಾಗಿರುತ್ತದೆ. ಉಪಯೋಗಿಸಿರುವ ರಶೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ/ದಿನಾಂಕ | | ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|---|
| | | ಇಂದ | ವರೆಗೆ | | |
| 1 | 381 | 019048/ 01.04.2017 | 019050/ 01.04.2017 | 5,000 | 2016–17ನೇ ಸಾಲಿಗೆ ಭಾಗಶಃ ಪರಿಶೀಲಿಸಿರುವುದನ್ನು 2017–18ನೇ |

| | | | | | |
|---|---|---|---|---|---|
| | | | | | ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 2 | 1235 | 086701/ 01.2017 | 086729/ 24.03.2018 | 15,900 | 2017–18ನೇ ಸಾಲಿಗೆ ಭಾಗಶಃ ಪರಿಶೀಲಿಸಲಾಗಿದೆ. |
| | | | **ಒಟ್ಟು ಮೊತ್ತ** | **20,900** | |

| | |
|---|---|
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 15 | **15. ರಶೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ ಉಪಯೋಗಿಸದೇ ಖಾಲಿ ಉಳಿದಿರುವ ರಶೀದಿ ಪುಸ್ತಕಗಳ ವಿವರ :–** <br> ದಿನಾಂಕ:06.07.2019 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ, ರಶೀದಿ ಪುಸ್ತಕ ಸಂಖ್ಯೆ 1371 ರಿಂದ 1500ರ ವರೆಗೆ ರಶೀದಿ ಸಂಖ್ಯೆ – 93501 ರಿಂದ 100000 ರವರೆಗೆ ಒಟ್ಟು 130 ರಶೀದಿ ಪುಸ್ತಕಗಳು ಉಪಯೋಗಿಸದೆ ಖಾಲಿ ಉಳಿದಿದ್ದು, ಪ್ರತಿ ರಶೀದಿ ಪುಸ್ತಕಗಳು 50 ಹಾಳೆಗಳ ದ್ವಿಪ್ರತಿಯಲ್ಲಿರುವುದನ್ನು ಪರಿಶೀಲಿಸಿದೆ ಹಾಗೂ ದಾಸ್ತಾನಿನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. |
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 16 | **16. ಪ್ರಸಾರಾಂಗದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲನೆ :–** <br> ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ, 2017–18ನೇ ಸಾಲಿನ ಪ್ರಸಾರಾಂಗದ ರಶೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ, ಪ್ರಸಾರಾಂಗದಲ್ಲಿ ಬಳಕೆ ಮಾಡಿರುವ ರಶೀದಿ ಪುಸ್ತಕಗಳ ಕ್ರಮಸಂಖ್ಯೆಗೆ ಅನುಗುಣವಾಗಿ ಕ್ರಮಬದ್ಧವಾಗಿ ವಿತರಣೆ ಹಾಗೂ ಬಳಕೆ ಮಾಡದಿರುವುದು ಕಂಡುಬಂದಿರುತ್ತದೆ. ದಾಸ್ತಾನು ವಹಿ ಪ್ರಕಾರ ದಿನಾಂಕ:03.07.2019 ರಂದು ರಶೀದಿ ಪುಸ್ತಕದ ದಾಸ್ತಾನು ವಹಿ ಹಾಗೂ ಖಾಲಿಯಿರುವ ರಶೀದಿ ಪುಸ್ತಕಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ, ರಶೀದಿ ಪುಸ್ತಕ ಸಂಖ್ಯೆ:85ರಲ್ಲಿ ರಶೀದಿ ಸಂಖ್ಯೆ:4224 ರಿಂದ 4250 ರವರೆಗೆ, ರಶೀದಿ ಪುಸ್ತಕ ಸಂಖ್ಯೆ 101 ರಲ್ಲಿ ರಶೀದಿ ಸಂಖ್ಯೆ:5007 ರಿಂದ 5050 ರವರೆಗೆ ಭಾಗಶಃ ಖಾಲಿ ಉಳಿದಿದ್ದು, ರಶೀದಿ ಪುಸ್ತಕ ಸಂಖ್ಯೆ:102ರಲ್ಲಿ ರಶೀದಿ ಸಂಖ್ಯೆ:5051 ರಿಂದ 5100ರವರೆಗೆ, 103 ರಲ್ಲಿ (5101 ರಿಂದ 5150 ರವರೆಗೆ) ಉಪಯೋಗಿಸದೇ ಸಂಪೂರ್ಣ ಖಾಲಿ ಉಳಿದಿದ್ದು, ದಾಸ್ತಾನು ವಹಿಯ ಲೆಕ್ಕಕ್ಕೆ ತಾಳೆಯಾಗಿರುತ್ತದೆ. ರಶೀದಿ ಪುಸ್ತಕದ ದಾಸ್ತಾನು ವಹಿ ರೀತ್ಯಾ, ರಶೀದಿ ಪುಸ್ತಕ ಸಂಖ್ಯೆ 97ನ್ನು 2017–18ನೇ ಸಾಲಿಗೆ ಭಾಗಶಃ ಉಪಯೋಗಿಸಲಾಗಿದ್ದು, ಮುಂದಿನ ಸಾಲಿಗೆ ಮುಂದುವರೆದಿದೆ. ಆದರೆ ರಶೀದಿ ಪುಸ್ತಕ 98ನ್ನು 2016–17ನೇ ಸಾಲಿಗೆ ಬಳಸಲಾಗಿರುತ್ತದೆ. ರಶೀದಿ ಪುಸ್ತಕ ಸಂಖ್ಯೆ:99 ಮತ್ತು 100ಗಳನ್ನು 2017–18ನೇ ಸಾಲಿಗೆ ಭಾಗಶಃ ಉಪಯೋಗಿಸಿದ್ದು, ಮುಂದಿನ ಸಾಲಿಗೆ ಮುಂದುವರೆಸಲಾಗಿದೆ. ಆದರೆ 104ನೇ ಪುಸ್ತಕವನ್ನು 2016–17ನೇ ಸಾಲಿಗೆ ಉಪಯೋಗಿಸಲಾಗಿದ್ದು, ರಶೀದಿ ಪುಸ್ತಕ ಸಂಖ್ಯೆ 85ನ್ನು 2018–19, 2019–20ನೇ ಸಾಲಿಗೆ |

ಬಳಕೆ ಮಾಡಲಾಗಿರುತ್ತದೆ. ರಶೀದಿ ಪುಸ್ತಕಗಳನ್ನು ಅನುಕ್ರಮವಾಗಿ ಬಳಕೆ ಮಾಡದೇ ಮಧ್ಯೆ, ಮಧ್ಯೆ ಬಳಕೆ ಮಾಡಿರುವುದಕ್ಕೆ ಸ್ಪಷ್ಟೀಕರಣವನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:32/2019–20 ದಿನಾಂಕ:16.08.2019ರಲ್ಲಿ ನೀಡಲಾಗಿ ಅನುಪಾಲನಾ ವರದಿಯು ಅಸಮರ್ಪಕವಾಗಿದ್ದು, ನಿಯಮಾನುಸಾರ ಕ್ರಮಬದ್ಧವಾಗಿ ರಶೀದಿ ಪುಸ್ತಕಗಳನ್ನು ಬಳಕೆ ಮಾಡಲು ಸೂಚಿಸಿದೆ.

ಉತ್ತರ

ಲೆಕ್ಕಪರಿಶೋಧಕರು ಸೂಚಿಸಿರುವಂತೆ ನಿಯಮಾನುಸಾರ ಕ್ರಮಬದ್ಧವಾಗಿ ರಶೀದಿ ಪುಸ್ತಕಗಳನ್ನು ಬಳಕೆ ಮಾಡಲಾಗುವುದು.

ವಿವರ

17 **17. 2017–18ನೇ ಸಾಲಿನಲ್ಲಿ ಪ್ರಸಾರಾಂಗದಲ್ಲಿ ಉಪಯೋಗಿಸಿರುವ ರಶೀದಿ ಪುಸ್ತಕಗಳ ಪರಿಶೀಲನೆ :–**

ಪ್ರಸಾರಾಂಗದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಈ ಕೆಳಕಂಡ ರಶೀದಿ ಪುಸ್ತಕಗಳನ್ನು ಪರಿಶೀಲಿಸಿದ್ದು, 2017–18ನೇ ಸಾಲಿಗೆ ರಶೀದಿ ಪುಸ್ತಕಗಳಿಂದ ಸ್ವೀಕೃತಿಯಾಗಿರುವ ಮೊತ್ತದ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ | | ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|---|
| | | ಇಂದ | ವರೆಗೆ | | |
| 1 | 97 | 4809/ 03.04.2017 | 4842/ 28.03.2018 | 6,124 | 2017–18ನೇ ಸಾಲಿನಲ್ಲಿ ಭಾಗಶಃ ಉಪಯೋಗಿಸಲಾಗಿದ್ದು, 2018–19ನೇ ಸಾಲಿಗೆ ಮುಂದುವರೆದಿದೆ. |
| 2 | 99 | 4901/ 01.04.2017 | 4950/ 28.03.2018 | 20,719 | 2017–18ನೇ ಸಾಲಿಗೆ ಸಂಪೂರ್ಣ ಬಳಕೆ ಮಾಡಿರುವುದನ್ನು ಪರಿಶೋಧಿಸಿದೆ. |
| 3 | 100 | 4951/ 28.03.2018 | 4956/ 28.03.2018 | 2,225 | 2017–18ನೇ ಸಾಲಿಗೆ ಭಾಗಶಃ ಬಳಕೆ ಮಾಡಿರುವುದನ್ನು ಪರಿಶೋಧಿಸಿದೆ. |
| ಸ್ವೀಕರಿಸಿದ ಒಟ್ಟು ಮೊತ್ತ | | | | **29,068** | |

ಮೇಲ್ಕಂಡ ರಶೀದಿ ಪುಸ್ತಕಗಳಿಂದ ಸ್ವೀಕೃತಿಯಾಗಿರುವ ಮೊತ್ತವನ್ನು ಬ್ಯಾಂಕಿಗೆ ಜಮೆ ಮಾಡಲಾಗಿದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

ವಿವರ

18 **18. ಪ್ರಸಾರಾಂಗದ ಪುಸ್ತಕ ಮಾರಾಟದಿಂದ ಸ್ವೀಕೃತಿಯಾದ ಮೊತ್ತಕ್ಕೂ ವಾರ್ಷಿಕ ಲೆಕ್ಕಪತ್ರದ ಲೆಕ್ಕ ಶೀರ್ಷಿಕೆ 122 ಕ್ಕೂ ತಾಳೆಯಾಗದಿರುವುದು :–**

2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, ರಶೀದಿ ಪುಸ್ತಕಗಳಿಂದ ಸ್ವೀಕೃತಿಯಾಗಿರುವ ಮೊತ್ತ ಹಾಗೂ ವಾರ್ಷಿಕ ಲೆಕ್ಕಪತ್ರದ ಲೆಕ್ಕ ಶೀರ್ಷಿಕೆ 122ರ ರೀತ್ಯಾ ರೂ.29,068/–ಗಳಾಗಿರುತ್ತದೆ. ಆದರೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಬ್ಯಾಂಕ್ ಚಲನ್‌ಗಳನ್ನು ಪರಿಶೀಲಿಸಲಾಗಿ, ಪುಸ್ತಕಗಳ ಮಾರಾಟದಿಂದ ರೂ.40,263/–ಗಳನ್ನು ಜಮೆ ಮಾಡಲಾಗಿರುತ್ತದೆ. ಈ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ:02.03.2016ರಲ್ಲಿ ಸ್ವಪ್ನ ಬುಕ್ ಹೌಸ್ (ಪ್ರೈ) ಲಿಮಿಟೆಡ್,

| | |
|---|---|
| | ಬೆಂಗಳೂರುರವರಿಗೆ ರೂ.11,195/– ಮೌಲ್ಯದ ಪುಸ್ತಕಗಳನ್ನು ಸರಬರಾಜು ಮಾಡಿರುವುದಕ್ಕೆ ಸಂಬಂಧಿಸಿದಂತೆ ದಿನಾಂಕ:01.08.2017ರಲ್ಲಿ ಧನಾದೇಶವನ್ನು ಪಡೆಯಲಾಗಿದ್ದು, ಪುಸ್ತಕಗಳ ಸರಬರಾಜಿನ ನಂತರ ಅಂದರೆ 1 ವರ್ಷ 5 ತಿಂಗಳ ನಂತರ ಧನಾದೇಶ ಪಡೆಯಲಾಗಿದೆ. ಹಾಗೂ ಸದರಿ ಮಾರಾಟಕ್ಕೆ ರಶೀದಿ/ಬಿಲ್ಲು ಹಾಕದಿರುವುದ ಕಂಡುಬಂದಿರುತ್ತದೆ.<br><br>ಮೇಲ್ಕಂಡ ನ್ಯೂನತೆಗೆ ಸ್ಪಷ್ಟೀಕರಣವನ್ನು ಲೆಕ್ಕಪತ್ರ ದಾಖಾಲಾತಿಗಳೊಂದಿಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:32/2019–20 ದಿನಾಂಕ:16.08.2019ರಲ್ಲಿ ನೀಡಲಾಗಿ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿದ್ದು, ಒಪ್ಪಲು ಸಾಧ್ಯವಿರುವುದಿಲ್ಲ. ನಿಯಮಾನುಸಾರ ಪುಸ್ತಕಗಳನ್ನು ಮಾರಾಟ ಮಾಡಿದಾಗಲೇ ರಶೀದಿ ಪುಸ್ತಕದಿಂದ ಸ್ವೀಕರಿಸಿದ ಮೊತ್ತವನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಖಾತೆಗೆ 24 ಗಂಟೆಗಳ ಒಳಗೆ ಜಮೆ ಮಾಡಲು ಸೂಚಿಸಿದ್ದು, ಮುಂದೆ ಇದು ಮರುಕಳಿಸದಂತೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಗಿದೆ. |
| | ಉತ್ತರ |
| | ಕರಾಮುವಿ ಪ್ರಸಾರಾಂಗದಲ್ಲಿ ಬಾಕಿಯಿರುವ ಪುಸ್ತಕ ದಾಸ್ತಾನನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಉದ್ದೇಶದಿಂದ ಕರ್ನಾಟಕದ ಎಲ್ಲಾ ಪುಸ್ತಕ ವ್ಯಾಪಾರಿಗಳನ್ನು ಸಂಪರ್ಕಿಸಿ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಸರಬರಾಜು ಮಾಡುವ ಆಶಯವನ್ನು ತಿಳಿಸಲಾಗಿತ್ತು. ಅದರಂತೆ ಸ್ವಪ್ನ ಬುಕ್ ಹೌಸ್ ಪ್ರೈ. ಲಿ. ಬೆಂಗಳೂರು ಇವರು ತಮ್ಮ ಮೈಸೂರು ಶಾಖೆಯಿಂದ ಪುಸ್ತಕಗಳನ್ನು ಪಡೆದುಕೊಂಡು ಬೆಂಗಳೂರು ಕೇಂದ್ರ ಮಾರಾಟ ಮಳಿಗೆಗೆ ಕಳುಹಿಸಿದ್ದರು. ಸಂಬಂಧಪಟ್ಟ ಬಿಲ್ ಮೊತ್ತವನ್ನು ಬೆಂಗಳೂರು ಕೇಂದ್ರ ಕಚೇರಿಯಿಂದ ಭರಿಸುವುದಾಗಿ ತಿಳಿಸಿದ್ದರು. ಸ್ವಪ್ನ ಬುಕ್‌ಹೌಸ್ ಯಾವುದೇ ಬೇಡಿಕೆ ಪಟ್ಟಿ ಸಲ್ಲಿಸಿರುವುದಿಲ್ಲ. ಬದಲಾಗಿ ವಿ.ವಿ.ಯಿಂದಲೇ ಪುಸ್ತಕ ಪಟ್ಟಿಯನ್ನು ನೀಡಿ ಕೊಂಡುಕೊಳ್ಳುವಂತೆ ಕೋರಲಾಗಿತ್ತು. ಧನಾದೇಶ ವಿ.ವಿ.ಗೆ ತಲುಪಿಸಿದ ದಿನವೇ ಅದನ್ನು ಸಂಬಂಧಪಟ್ಟ ಖಾತೆಗೆ ಜಮಾ ಮಾಡಲಾಗಿದೆ ಮತ್ತು ನೀವು ಅಭಿಪ್ರಾಯಪಟ್ಟಿರುವಂತೆ ವಿ.ವಿ.ಗೆ ಯಾವುದೇ ನಷ್ಟವುಂಟಾಗಿಲ್ಲ ಎಂಬ ಅಂಶವನ್ನು ಹೇಳಬಯಸುತ್ತೇನೆ. ತಡವಾಗಿ ಧನಾದೇಶ ತಲುಪಿದ ಕಾರಣ ಮತ್ತು ಹಣಕಾಸು ವರ್ಷ ಮುಕ್ತಾವಾಗಿದ್ದ ಕಾರಣ ಸದರಿ ಮೊತ್ತಕ್ಕೆ ಬಿಲ್ ಹಾಕಲಾಗಲಿಲ್ಲ. ಈ ಸಂಬಂಧ ಸೂಕ್ತ ಮಾಹಿತಿ ಇಲ್ಲದ ಕಾರಣ ಸದರಿ ಮೊತ್ತಕ್ಕೆ ರಶೀದಿ ಹಾಕಲಾಗಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. |
| | **ವಿವರ** |
| 19 | **<u>19. ಸೇವಾವಹಿಯಲ್ಲಿನ ನ್ಯೂನತೆಗಳು (ಬೋಧಕ ವರ್ಗ) :–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ನೌಕರರ ಸೇವಾವಹಿಗಳನ್ನು ಪರಿಶೀಲಿಸಿದಾಗ ಕೆಳಕಂಡಂತೆ ನ್ಯೂನತೆಗಳು ಕಂಡುಬಂದಿವೆ.<br><br>1. ರಮ್ಯ.ಎಸ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ, ಪರೀಕ್ಷಾರ್ಥ ಅವಧಿ ಘೋಷಣೆಯಾಗದೇ ಕ್ರಮವಾಗಿ 3ನೇ ವೇತನ ಬಡ್ತಿ ನೀಡಲಾಗಿದೆ. ಇದು ನಿಯಮಬಾಹಿರವಾಗಿದೆ.<br>2. ಜಿ.ಕೃಷ್ಣಪ್ಪ, ಜನ್ಮದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ. |

| | |
|---|---|
| | 3. ಹೆಚ್.ಸಂತೋಷ್ ನಾಯಕ್, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>4. ಹೇಮಂತ್ ಜನ್ಮದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ದಾಖಲಿಸಿಲ್ಲ.<br>5. ಡಾ॥ ತೇಜಸ್ವಿ ನವಿಲೂರು, ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ, ಪರೀಕ್ಷಾರ್ಥ ಅವಧಿ ಘೋಷಿಸಿಲ್ಲ.<br>6. ಅಪ್ಪಾಜಿ ಗೌಡ, ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>7. ಜಗದೀಶ್ ಬಾಬು.ಹೆಚ್.ಸಿ, ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>8. ಎಂ.ಮಹೇಶ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ಶಾಸ್ತ್ರ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>9. ಆರ್.ಛಾಯಾ, ಸಹಾಯಕರ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>10. ಉಷಾ.ಸಿ, ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>11. ಸುಕನ್ಯ.ಆರ್, ಸಹಾಯಕರ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>12. ನವೀನ್.ಜಿ.ವಿ, ಸಹಾಯಕರ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>13. ಡಾ॥ ಸಿ.ಮಹದೇವಮೂರ್ತಿ, ವರ್ಗಾವಣೆ ಸಂದರ್ಭದಲ್ಲಿ ಬಿಡುಗಡೆ/ಕರ್ತವ್ಯಕ್ಕೆ ಹಾಜರಾತಿ ಬಗ್ಗೆ ದಾಖಲಿಸಿಲ್ಲ. (ಹುಣಸೂರು, ಡಿ.ದೇವರಾಜ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಾಜರಾತಿ)<br>14. ಡಾ॥ ಹೆಚ್. ರಾಜೇಶ್ವರಿ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>15. ಸವಿತ, ಸಹಾಯಕರ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>16. ಪಿ.ಎಂ.ಚೆನ್ನಯ್ಯ, ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>17. ಎಸ್.ವಿ.ನಿರಂಜನ್ ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ |

| | |
|---|---|
| | ನಮೂನೆ ದಾಖಲಿಸಿಲ್ಲ.<br>18. ಡಾ॥ ಉಮಶಂಕರ್‌ಸಹಾಯಕರ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>19. ಎನ್.ಜಿ.ರಾಜು, ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>20. ಎಂ.ಎಸ್.ಹೇಮಲತಾ, ಅಹಾರ ವಿಜ್ಞಾನ ಮತ್ತು ಪೋಷಕಾಂಶ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>21. ಸುರ್ಮ.ಎಸ್ ಮನೋವಿಜ್ಞಾನ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>22. ಪಿ.ಮಂಜುನಾಥ್, ಮನೋವಿಜ್ಞಾನ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>23. ಡಾ॥ ಐ.ಚಂದ್ರಶೇಖರ್, ಪರಿಸರ ವಿಜ್ಞಾನ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>24. ಡಾ॥ ವೈ.ಪಿ ಚಂದ್ರಶೇಖರ್, ಭೂಗೋಳ ಶಾಸ್ತ್ರ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>25. ಡಾ॥ ಮಹೇಶ್, ಗಣಕ ವಿಜ್ಞಾನ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ. ಹಾಗೂ ಪರೀಕ್ಷಾರ್ಥ ಅವಧಿ ದಾಖಲಿಸಿಲ್ಲ.<br>26. ಶಿಲ್ಪಾರಾಣಿ, ಸಹಾಯಕ ಪ್ರಾಧ್ಯಾಪಕರು, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>27. ರಶ್ಮಿ.ಬಿ.ಎಸ್, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>28. ಷಣ್ಮುಖ, ಶೈಕ್ಷಣಿ ಅಧ್ಯಯನ ವಿಭಾಗ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>29. ಶೈಲಜಾ, ಪಿ.ಶ್ಯಾನುಬಾಗ್ ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>30. ಡಾ॥ ಆರ್.ಶರಣಮ್ಮ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ.<br>31. ಎನ್. ಕೃಷ್ಣಪ್ಪ, ಜನ್ಮ ದಿನಾಂಕ ದೃಢೀಕರಿಸಿಲ್ಲ ಹಾಗೂ ನಾಮ ನಿರ್ದೇಶನ ನಮೂನೆ ದಾಖಲಿಸಿಲ್ಲ. |

| | |
|---|---|
| | ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ. |
| | ಉತ್ತರ |
| | ಮೇಲಿನ ನೌಕರರ ಸೇವಾವಹಿಗಳನ್ನು ಪರಿಶೀಲಿಸಿ ನ್ಯೂನತೆಗಳನ್ನು ಸರಿಪಡಿಸಲಾಗುವುದು. |
| | ವಿವರ |
| 20 | **20. 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸೇವಾವಹಿಯ ನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು (ಬೋಧಕೇತರ ವರ್ಗ) :–**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಬೋಧಕೇತರ ಸಿಬ್ಬಂದಿಗಳ ಸೇವಾವಹಿ ಹಾಗೂ ಹಾಜರಾತಿ ವಹಿಯನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br><br>ಅ) ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ಶ್ರೀಮತಿ ಸಿಂಧೂ.ಪಿ.ಎಂ, ಡೇಟಾ ಎಂಟ್ರಿ ಆಪರೇಟರ್ ರವರ ಸೇವಾವಹಿ ಹಾಗೂ ಹಾಜರಾತಿ ವಹಿಯನ್ನು ಪರಿಶೀಲಿಸಲಾಗಿ, ದಿನಾಂಕ:14.03.2018 ರಿಂದ 12.05.2018ರವರೆಗೆ ಗಳಿಕೆ ರಜೆ ಎಂದು ಹಾಜರಾತಿ ವಹಿಯಲ್ಲಿ ನಮೂದಿಸಲಾಗಿರುತ್ತದೆ ಹಾಗೂ ವೇತನ ಪಾವತಿಸಲಾಗಿದೆ. ಆದರೆ ಸೇವಾವಹಿಯಲ್ಲಿ ಅರ್ಧವಾರ್ಷಿಕ ಅವಧಿಯಲ್ಲಿ ಪಡೆದ ಗಳಿಕೆ ರಜೆಯನ್ನು ಕಳೆಯದೇ ಹಾಗೂ ಈ ಗಳಿಕೆ ರಜೆಯನ್ನು ಸಿಬ್ಬಂದಿಯವರು ಮನವಿ ನೀಡಿದ ದಿನಾಂಕ:13.03.2018 ರಂದು ನಿಯಮಗಳನ್ವಯ ಮಂಜೂರಾತಿ ಮಾಡಿಕೊಳ್ಳದೆ ಅತಿ ವಿಳಂಬವಾಗಿ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/584/2019–20, ದಿನಾಂಕ:11.07.2019ರಲ್ಲಿ (ದಿನಾಂಕ:09.07.2019 ರಂದು ಕುಲಪತಿಯವರ ಅನುಮೋದನೆ ರೀತ್ಯಾ ಎಂದು ನಮೂದಿಸಲಾಗಿದೆ). ಅಂದರೆ 1 ವರ್ಷ, 3 ತಿಂಗಳು, 26 ದಿನಗಳು ವಿಳಂಬವಾಗಿ ಈ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ನ್ಯೂನತೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:15/ 2019–20 ದಿನಾಂಕ:22.07.2019ರಲ್ಲಿ ನೀಡಲಾಗಿದೆ. ಇದಕ್ಕೆ ನೀಡಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದ್ದು, ನಿಯಮಾನುಸಾರ ಒಪ್ಪಲು ಬರುವುದಿಲ್ಲ. ಕಾರಣ ಕೆ.ಸಿ.ಎಸ್.ಆರ್ ನಿಯಮಗಳ ರೀತ್ಯಾ ರಜಾ ಮಂಜೂರು ಮಾಡದೇ ವೇತನವನ್ನು ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br><br>ಆ) ನಾಗೇಶ್.ಎನ್.ಯು, ದ್ವಿತೀಯ ದರ್ಜೆ ಸಹಾಯಕರು, ಇವರ ಹಾಜರಾತಿ ವಹಿಯನ್ನು ಪರಿಶೀಲಿಸಲಾಗಿ, ಜನವರಿ–2018ರ ಮಾಹೆಯಲ್ಲಿ ದಿನಾಂಕ:29, 30, 31 ಫೆಬ್ರವರಿ – 2018ರ ಮಾಹೆಯಲ್ಲಿ ದಿನಾಂಕ:01.02.2018 ರಿಂದ 24.02.2018ರವರೆಗೆ ಹಾಗೂ ಮಾರ್ಚಿ 2018ರ ಮಾಹೆಯಲ್ಲಿ ದಿನಾಂಕ:20.03.2018 ರಿಂದ 30.03.2018 ರವರೆಗೆ ಹಾಜರಾತಿ ವಹಿಯಲ್ಲಿ ಸಹಿ ಮಾಡದಿರುವುದು ಕಂಡುಬಂದಿರುತ್ತದೆ. ಹಾಗೂ ಈ ಮೇಲ್ಕಂಡ ಅವಧಿಯನ್ನು ಯಾವ ರೀತಿಯ ರಜೆಗಳೆಂದು ಪರಿಗಣಿಸಲಾಗಿದೆ ಎಂಬುದಕ್ಕೆ ರಜಾ ಮಂಜೂರಾತಿ ಆದೇಶವನ್ನಾಗಲೀ, ಹಾಗೂ ಸೇವಾ ವಹಿಯಲ್ಲಿ ಅರ್ಧವೇತನ ರಜಾ ಲೆಕ್ಕದಲ್ಲಾಗಲೀ ಅಥವಾ ಗಳಿಕೆ ರಜೆಯ ಲೆಕ್ಕದಲ್ಲಿ ನಮೂದಿಸಿ ಕಳೆದಿರುವ ಕುರಿತು ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.<br><br>ಮೇಲ್ಕಂಡ ಅವಧಿಯನ್ನು ರಜೆ ಎಂದು ಪರಿಗಣಿಸಿರುವುದಕ್ಕೆ ರಜಾ ಮಂಜೂರಾತಿ ಆದೇಶವನ್ನು ಅಥವಾ |

| | |
|---|---|
| | ರಜೆ ಎಂದು ಪರಿಗಣಿಸದಿದ್ದರೆ ಈ ಕುರಿತು ವೇತನ ರಹಿತ ರಜೆ ಎಂದು ಕ್ರಮಕೈಗೊಂಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:39/2019–20, ದಿನಾಂಕ:20.08.2019ರಲ್ಲಿ ನೀಡಲಾಗಿ, ನೀಡಲಾಗಿರುವ ಅನುಪಾಲನಾ ವರದಿಯು ಸಮರ್ಪಕವಾಗಿರುವುದಿಲ್ಲ. ಹಾಗೂ 2017–18ನೇ ಸಾಲಿನಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಇರುವ ಅವಧಿಯನ್ನು ಯಾವ ರೀತಿ ಪರಿಗಣಿಸಿದೆ ಎಂಬುದಕ್ಕೆ ಲೆಕ್ಕಪರಿಶೋಧನಾ ದಿನಾಂಕದವರೆಗೂ (2019–20ನೇ ಸಾಲಿನವರೆಗೆ) ಯಾವುದೇ ಕ್ರಮಕೈಗೊಳ್ಳದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ. ಹಾಗೂ ರಜಾ ಮಂಜೂರಾತಿಗಾಗಿ ಕಡತವನ್ನು ಮಂಡಿಸಲಾಗಿದ್ದು, ಅನುಮೋದನೆಗೊಂಡ ನಂತರ ಆದೇಶವನ್ನು ಹೊರಡಿಸಲಾಗುವುದು ಎಂದು ನೀಡಲಾಗಿರುವ ಉತ್ತರವನ್ನು ಒಪ್ಪಲು ಸಾಧ್ಯವಿರುವುದಿಲ್ಲ.<br>ನಾಗೇಶ್‌ರವರ ಅರ್ಧವೇತನ ರಜೆಯ ಲೆಕ್ಕಕ್ಕೆ ಸಂಬಂಧಿಸಿದಂತೆ ವಿವರಗಳನ್ನು ರಜಾ ಲೆಕ್ಕದಲ್ಲಿ ಪರಿಶೀಲಿಸಲಾಗಿ, ದಿನಾಂಕ:07.11.2016 ರಿಂದ 21.11.2016ರವರೆಗಿನ ರಜೆಯನ್ನು ಅರ್ಧವೇತನ ರಜೆಯು ಲೆಕ್ಕದಲ್ಲಿ ರಜೆ ಇಲ್ಲದಿದ್ದರೂ ಮಂಜೂರು ಮಾಡಿ ಮುಂಬರುವ ಬ್ಲಾಕ್ ಅವಧಿಗಳಲ್ಲಿ 30 ದಿನವನ್ನು ಕಳೆಯಲಾಗಿರುತ್ತದೆ. ಹಾಗೂ ಸದರಿ ಅವಧಿಯ ರಜೆಯನ್ನು ಗಳಿಕೆ ರಜೆಯಲ್ಲಿ 15 ದಿನ ಅವಧಿಯನ್ನು ಮತ್ತೊಮ್ಮೆ ಕಳೆಯಲಾಗಿರುತ್ತದೆ. ಹೀಗೆ ಮೇಲ್ಕಂಡ ರಜಾ ಅವಧಿಯನ್ನು ಗಳಿಕೆ ರಜೆ ಹಾಗೂ ಅರ್ಧವೇತನ ರಜೆ ಎರಡರಲ್ಲೂ ಕಳೆದಿರುವುದಕ್ಕೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:39/2019–20 ದಿನಾಂಕ:20.08.2019 ರಲ್ಲಿ ನೀಡಲಾಗಿ ಹಾಜರುಪಡಿಸಿದ ಅನುಪಾಲನಾ ವರದಿಯು ಅಸಮರ್ಪಕವಾಗಿರುತ್ತದೆ. ಕರ್ನಾಟಕ ಸರ್ಕಾರಿ ನಾಗರೀಕ ಸೇವಾ ನಿಯಮಗಳನ್ವಯ, ಸಕ್ಷಮ ಪ್ರಾಧಿಕಾರವು ರಜಾ ಮಂಜೂರು ಮಾಡಿ, ರಜಾ ಮಂಜೂರಾದ ತದನಂತರದಲ್ಲಿ ವೇತನ ಪಾವತಿಗೆ ಕ್ರಮಕೈಗೊಂಡು, ರಜಾ ನಿಯಮಗಳನ್ವಯ ರಜಾ ಮಂಜೂರಾತಿಯನ್ನು ಸೇವಾವಹಿಯಲ್ಲಿ ದಾಖಲು ಮಾಡಲು ಸೂಚಿಸಿದೆ. |
| | ಉತ್ತರ |
| | ಶ್ರೀಮತಿ. ಸಿಂಧು ಪಿ ಎಂ, ಡೇಟಾ ಎಂಟ್ರಿ ಆಪರೇಟರ್ ರವರು ದಿನಾಂಕ: 14.03.2018 ರಿಂದ 12.05.2018 ರವರೆಗೆ ಗಳಿಕೆ ರಜೆಯನ್ನು ಉಪಯೋಗಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದು, ಈ ರಜೆ ಅರ್ಜಿಯಲ್ಲಿ ವಿಭಾಗದ ಮುಖ್ಯಸ್ಥರು ಅರ್ಜಿಯನ್ನು ಶಿಫಾರಸ್ಸಿನೊಂದಿಗೆ ಸಹಿ ಮಾಡಿರುತ್ತಾರೆ. ಆದರೆ ಸದರಿಯವರ ರಜೆ ಅರ್ಜಿಯು ಮಂಜೂರಾತಿಗಾಗಿ ವಿಳಂಬವಾಗಿ ಸಿಬ್ಬಂದಿ–2 ವಿಭಾಗಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ರಜೆಯನ್ನು ವಿಳಂಬ ವಾಗಿ ಮಂಜೂರು ಮಾಡಲಾಗಿರುತ್ತದೆ.<br>ಶ್ರೀ ಎನ್ ಯು ನಾಗೇಶ್, ದ್ವಿ.ದ.ಗು. ಕರಾಮುವಿ ಇವರಿಗೆ ಸಂಬಂಧಿಸಿದಂತೆ ಜನವರಿ 2018 ರ ಅವಧಿಯಲ್ಲಿ ದಿನಾಂಕ:29, 33, 31 ಫೆಬ್ರವರಿ 2018 ರ ಮಾಹೆಯಲ್ಲಿ ದಿನಾಂಕ:01.02.2018 ರಿಂದ 24.02.2018 ರವರೆಗೆ ಹಾಗು ಮಾರ್ಚ್ 2018 ರ ಮಾಹೆಯಲ್ಲಿ ದಿನಾಂಕ:20.03.2018 ರಿಂದ 31.03.2018 ರವರೆಗೆ ಗಳಿಕೆ/ಪರಿವರ್ತಿತ ರಜೆಯ ಮಂಜೂರಾತಿಯ ಬಗ್ಗೆ ಯಾವುದೇ ಆದೇಶವಾಗಿರುವುದಿಲ್ಲ. ಸದರಿಯವರ ರಜೆಯ ಮಂಜೂರಾತಿಯ ಕುರಿತು |

| | |
|---|---|
| | ಕಡತವನ್ನು ಮಂಡಿಸಲಾಗಿದ್ದು ಅನುಮೋದನೆಗೊಂಡ ನಂತರ ಆದೇಶವನ್ನು ಹೊರಡಿಸಲಾಗುವುದು. ಸದರಿವರ ಹಕ್ಕಿನಲ್ಲಿ 21 ಗಳಿಕೆ ರಜೆಗಳು ಹಾಗು 30 ಅರ್ಧ ವೇತನದ ರಜೆಗಳು ಅದೇ ಕ್ಯಾಲೆಂಡರ್ ವರ್ಷದಲ್ಲಿ ಇರುತ್ತವೆ. ಸದರಿಯವರಿಗೆ ಒಟ್ಟಾರೆಯಾಗಿ 76 ಗಳಿಕೆ ರಜೆಗಳು ಅನುಮೋದನೆಯಾದ ಹಿನ್ನೆಲೆಯಲ್ಲಿ ಅರ್ಧ ವೇತನ ರಜೆಯಲ್ಲಿ ದಿನಾಂಕ:07.11.2016 ರಿಂದ 21.11.2016 ರವರೆಗಿನ ರಜೆಯನ್ನು ಅರ್ಧ ವೇತನ ರಜೆಯನ್ನು ಸದರಿಯವರ ಹಕ್ಕಿನಿಂದ ಕಳೆಯಲಾಗಿದ್ದು ಸದರಿ ಅವಧಿಯನ್ನು ಅರ್ಧ ವೇತನದ ರಜಾ ಲೆಕ್ಕದಲ್ಲಿಯೂ ಸಹ ಕಳೆಯಲಾಗಿದ್ದು, ಸದರಿ ಅವಧಿಯಲ್ಲಿ ಕಳೆಯಲಾಗಿದ್ದ ರಜೆಯನ್ನು ಸದರಿ ನೌಕರರ ಹಕ್ಕಿಗೆ ಜಮೆ ಮಾಡಲಾಗುವುದು ಎಂಬ ಮಾಹಿತಿಯನ್ನು ತಮ್ಮ ಅವಗಾಹೆಗೆ ತರಲಾಗಿದೆ. ಈ ರೀತಿಯ ಕ್ರಮವು ಮುಂದೆ ಮರುಕಳಿಸದಂತೆ ಎಚ್ಚರವಹಿಸಿ ಕ್ರಮವಹಿಸಲಾಗುವುದೆಂದು ಸ್ಪಷ್ಟೀಕರಣ ನೀಡುತ್ತ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. ಮುಂದೆ ಲೆಕ್ಕಪರಿಶೋಧಕರು ಸೂಚಿಸಿರುವಂತೆ ರಜಾ ನಿಯಮಗಳನ್ವಯ ರಜಾ ಮಂಜೂರಾತಿಯನ್ನು ಸೇವಾವಹಿಯಲ್ಲಿ ದಾಖಲು ಮಾಡಲಾಗುವುದು. |
| | ವಿವರ |
| 21 | **<u>21. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2017–18ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವ ತಾತ್ಕಾಲಿಕ 'ಡಿ' ಗ್ರೂಪ್, ದಿನಗೂಲಿ, ಒ.ಎ.ಸಿ.ಎ ವಾಹನ ಚಾಲಕರ ವಿವರದ ಬಗ್ಗೆ :–</u>** |

2017–18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರ ವಿವರ ಕೆಳಕಂಡಂತಿದೆ.

| | | |
|---|---|---|
| 1 | ಗ್ರೂಪ್ 'ಡಿ' ನೌಕರರ ಸಂಖ್ಯೆ | 157 |
| 2 | ದಿನಗೂಲಿ ನೌಕರರ ಸಂಖ್ಯೆ | 33 (ಸ್ವಚ್ಛತಾಕಾರ್ಯ) |
| 3 | ಒ.ಎ.ಸಿ.ಎ (DEO) ನೌಕರರ ಸಂಖ್ಯೆ | 23 |
| 4 | ವಾಹನ ಚಾಲಕರು/ನೌಕರ ಸಂಖ್ಯೆ | 03 |
| | **ಒಟ್ಟು** | **216** |

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ, ಈ ಹುದ್ದೆಗೆ ಎದುರಾಗಿ ಭರ್ತಿಗೊಳಿಸಿರುವ ಹುದ್ದೆಗಳ ವಿವರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ 1992 ನಿಯಮ 14, 17 ರಂತೆ ತಾತ್ಕಾಲಿಕ ನೇಮಕಾತಿ ಮಾಡಿರುವುದು. ಈ ಬಗ್ಗೆ ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವ ಸರ್ಕಾರದ ಆದೇಶ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. 2017–18ನೇ ಸಾಲಿಗೆ ತಾತ್ಕಾಲಿಕ ನೌಕರರಿಗೆ ಕೆಳಕಂಡಂತೆ ವೇತನ ಪಾವತಿಸಲಾಗಿದೆ.

| | **(ಮೊತ್ತ ರೂ.ಗಳಲ್ಲಿ)** |
|---|---|
| ಮಾರ್ಚಿ–2017 | 15,77,756 |
| ಏಪ್ರಿಲ್–2017 | 17,60,043 |
| ಮೇ–2017 | 19,87,669 |
| ಜೂನ್–2017 | 19,64,245 |
| ಜುಲೈ–2017 | 19,64,245 |
| ಆಗಸ್ಟ್–2017 | 19,66,365 |
| ಸೆಪ್ಟೆಂಬರ್–2017 | 19,50,961 |

| | | |
|---|---|---|
| | ಅಕ್ಟೋಬರ್–2017 | 19,61,061 |
| | ನವೆಂಬರ್–2017 | 1941070 |
| | ಡಿಸೆಂಬರ್–2017 | 19,10,405 |
| | ಜನವರಿ–2018 | 19,20,291 |
| | ಫೆಬ್ರವರಿ–2018 | 18,77,352 |
| | **ಒಟ್ಟು** | **2,27,81,463** |

ಗುತ್ತಿಗೆ ಆಧಾರದ ಮೇರೆಗೆ ಕೆಲಸ ನಿರ್ವಹಿಸುತ್ತಿರುವ ಹಂಗಾಮಿ ನೌಕರರಿಗೆ, ಖಾಯಂ ನೌಕರರಿಗೆ ನೀಡುವ ಎಲ್ಲಾ ವೇತನ ಭತ್ಯೆ ಸೌಲಭ್ಯಗಳನ್ನು ನೀಡಿರುವುದನ್ನು ಗಮನಿಸಲಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 303 ರಂತೆ ಮಂಜೂರಾಗಿರುವ ಹುದ್ದೆಗಳಿಗೆ ವೇತನ ಭತ್ಯೆಗಳನ್ನು ಪಾವತಿಸುವ ಅವಕಾಶ ಇರುತ್ತದೆ. ಆದರೆ ವಿಶ್ವವಿದ್ಯಾನಿಲಯವು ಈ ಹುದ್ದೆಗಳ ಮಂಜೂರಾತಿ ಹಾಗೂ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಪಡೆಯಲಾಗಿರುವ ಮಂಜೂರಾತಿ ಆದೇಶವನ್ನು ಹಾಜರುಪಡಿಸಿಲ್ಲವಾದ್ದರಿಂದ ವಿಶ್ವವಿದ್ಯಾನಿಲಯದಿಂದ ತಾತ್ಕಾಲಿಕ ನೌಕರರಿಗೆ ಪಾವತಿಸಲಾಗಿರುವ ವೇತನ **ರೂ.2,27,81,463/–ಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣೆಗೆ ಪೂರಕವಾಗಿ ತಾತ್ಕಾಲಿಕವಾಗಿ ನೌಕರರುಗಳನ್ನು ನೇಮಕ ಮಾಡಲಾಗಿರುತ್ತದೆ. ಇವರುಗಳಿಗೆ ಕರಾಮುವಿ ಕಾಯ್ದೆಯ ಮೊದಲನೇ ಪರಿನಿಯಮದ ನಿಯಮ 8(2)(ಎಂ) ರಲ್ಲಿ ವ್ಯವಸ್ಥಾಪನಾ ಮಂಡಳಿಗಿರುವ ಪ್ರದತ್ತವಾದ ಅಧಿಕಾರದನ್ವಯ ಹಣಕಾಸು ಸಮಿತಿ ಹಾಗು ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ನೇಮಕ ಮಾಡ ವೇತನ ಭತ್ಯೆ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಚಿತ ವೇತನ ನೌಕರರಿಗೆ 112ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ (ವಿ.ಸಂ.112.15) ಆಯಾ ವರ್ಗದ ಹುದ್ದೆಗಳ ಮೂಲ ವೇತನದಲ್ಲಿ ರೂ.10/–ಗಳನ್ನು ಕಳೆದು ಖಾಯಂ ನೌಕರರಿಗೆ ಲಭ್ಯವಾಗುವ ಎಲ್ಲಾ ಭತ್ಯೆಗಳ ಜೊತೆ ಸದರಿ ನೌಕರರಿಗೂ ಎಲ್ಲಾ ಭತ್ಯೆಗಳನ್ನು ಸೇರಿಸಿ ವೇತನ ನಿಗಧಿಪಡಿಸುವಂತೆ ತೀರ್ಮಾನಿಸಲಾಗಿದ್ದು, ಅದರಂತೆ ದಿನಾಂಕ: 25.07.2011 ರಂದು ಕಛೇರಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ. ಈ ಮೇಲಿನ ಅಂಶಗಳನ್ನು ಲೆಕ್ಕ ಪರಿಶೋಧಕರ ಅವಗಾಹನೆಗೆ ತರುತ್ತಾ, ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ.

**ವಿವರ**

22 **<u>22. ಶ್ರೀ ಹೆಚ್.ಸಿ ಸುರೇಶ್, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ವೇತನ ನಿಗದಿಪಡಿಸುವಾಗ ತಪ್ಪಾಗಿದ್ದು, ಹೆಚ್ಚಾಗಿ ಪಾವತಿಸಿರುವ ಮೊಬಲಗನ್ನು ವಸೂಲಿಸುವ ಬಗ್ಗೆ :–</u>**

ಶ್ರೀ ಹೆಚ್.ಸಿ.ಸುರೇಶ್, ದ್ವಿತೀಯ ದರ್ಜೆ ಸಹಾಯಕರು ದಿನಾಂಕ: 23.11.2007 ರಂದು ನೇಮಕಗೊಂಡಿರುತ್ತಾರೆ. ಇದಕ್ಕೂ ಮೊದಲು ಸದರಿಯವರು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ಬಿಡುಗಡೆ ಹೊಂದಿರುತ್ತಾರೆ. ಬಿಡುಗಡೆ ಸಮಯದಲ್ಲಿ ರೂ.13,120/– ವೇತನ ಪಡೆಯುತ್ತಿದ್ದುದಾಗಿ ಸೀನಿಯರ್ ರೆಕಾರ್ಡ್ ಆಫೀಸರ್, ಒಐಸಿ, ಎನ್ಇ ಗ್ರೂಪ್‌ನ ಮೇಜರ್‌ರವರು ಪತ್ರ ಸಂಖ್ಯೆ ಜೆ.ಸಿ 403083/ಸಿ–3/ಎಲ್ಐಬಿ–ಎನ್ಇ,

| | |
|---|---|
| | ದಿನಾಂಕ:25.02.2010ರಲ್ಲಿ ದೃಢೀಕರಿಸಿರುತ್ತಾರೆ. ಅದರ ಮೇರೆಗೆ ಸದರಿ ನೌಕರರ ವೇತನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಯಮ 41 (ಸಿ) (iv) ರಂತೆ ಕಾಲಿಕ ವೇತನ ಶ್ರೇಣಿ 5800–10500 ರಲ್ಲಿ ಗರಿಷ್ಠ ರೂ.10,500/–ಕ್ಕೆ ನಿಗದಿಪಡಿಸಲಾಗಿದೆ. ತದನಂತರ ವಾರ್ಷಿಕ ವೇತನ ಬಡ್ತಿ ಬಿಡುಗಡೆ ಮಾಡಲು ಕಾಲಿಕ ವೇತನ ಶ್ರೇಣಿಯಲ್ಲಿ ಮುಂದಿನ ಹಂತ ಲಭ್ಯವಿಲ್ಲದ ಕಾರಣ ಸ್ಥಗಿತ ವೇತನ ಬಡ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/ಎಸ್‌ಆರ್‌ಪಿ/96/ ಬೆಂಗಳೂರು ದಿನಾಂಕ:18.03.1996ರ ಮೇರೆಗೆ ವೇತನ ಶ್ರೇಣಿ 5800–10500ರ ಕಡೆಯ ಹಂತದ ದರವಾದ ರೂ.250/–ರಂತೆ ಬಿಡುಗಡೆ ಮಾಡಬೇಕಾಗಿತ್ತು. ಅದರೆ ರೂ.300/–ರ ದರದಲ್ಲಿ ಬಿಡುಗಡೆ ಮಾಡಿ ವೇತನ ನಿಗದಿಪಡಿಸಲಾಗಿರುತ್ತದೆ. ಈ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:14/11.07.2019ರಲ್ಲಿ ಮಾಹಿತಿ ಕೋರಲಾಗಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ/2/2019–20 ದಿನಾಂಕ:16.08.2019ರಲ್ಲಿ ಉತ್ತರಿಸಿ 2007ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿಗಾಗಿ ಕಾಣಿಸಿರುವ ಮೊದಲನೆ ಪಿ.ಪಿ ರೂ.300 ಎರಡನೆ ಪಿ.ಪಿ ರೂ.300 ಎಂದು ನಮೂದಾಗಿದ್ದು, ಅದರಂತೆ ರೂ.300/–ರ ದರದಲ್ಲಿ ಸ್ಥಗಿತ ವೇತನ ಬಡ್ತಿ ನೀಡಿರುವುದಾಗಿ ತಿಳಿಸಿರುತ್ತಾರೆ. ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿಗಾಗಿ ಮಾತ್ರ ಅದನ್ನು ಪರಿಗಣಿಸಬೇಕೆ ಹೊರತು ಸ್ಥಗಿತ ವೇತನ ಬಡ್ತಿ ನೀಡುವಾಗ ಕಾಲಿಕ ವೇತನ ಶ್ರೇಣಿಯಲ್ಲಿನ ಕೊನೆಯ ವಾರ್ಷಿಕ ವೇತನ ಬಡ್ತಿ ದರವನ್ನು ಪರಿಗಣಿಸಬೇಕಾಗಿರುತ್ತದೆ. ಹೀಗಾಗಿ ವೇತನ ನಿಗದಿಯಲ್ಲಿ ತಪ್ಪಾಗಿದ್ದು, ಇದರಿಂದಾಗಿ 2017–18ನೇ ಸಾಲಿನಲ್ಲಿ ಈ ನೌಕರರಿಗೆ ಒಟ್ಟು **ರೂ.15,816/– ಹೆಚ್ಚುವರಿ ಪಾವತಿಯಾಗಿದ್ದು, ಸದರಿ ಮೊಬಲಗನ್ನು ಸಂಬಂಧಿಸಿದ ನೌಕರರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. ವಿವರಗಳ ತಃಖ್ತೆಯನ್ನು **ಅನುಬಂಧ – 5 ರಲ್ಲಿ** ಲಗತ್ತಿಸಿದೆ. |
| | ಉತ್ತರ |
| | ಶ್ರೀ. ಸುರೇಶ್ ಹೆಚ್ ಸಿ, ಇವರು ನೇರ ನೇಮಕಾತಿಯ ಮೂಲಕ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ದಿನಾಂಕ: 23.11.2007 ರಂದು ನೇಮಕಗೊಂಡಿರುತ್ತಾರೆ. ಇವರು ವಿಶ್ವವಿದ್ಯಾನಿಲಯದಲ್ಲಿ ಸೇವೆಗೆ ಸೇರುವ ಪೂರ್ವದಲ್ಲಿ ಭಾರತೀಯ ಸೇವೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿಯ ಸಮಯದಲ್ಲಿ ರೂ.13,120/–ಗಳ ವೇತನ ಪಡೆಯುತ್ತಿದ್ದರು. ಕೆಸಿಎಸ್ ನಿಯಮ 41(ಸಿ)(iv) ರನ್ವಯ ಸದರಿ ನೌಕರರಿಗೆ ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿರುವ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯ ವೇತನ ಶ್ರೇಣಿಯಲ್ಲಿನ 5,800–10,500/– ರಲ್ಲಿ ಗರಿಷ್ಠ ಹಂತ ರೂ.10,500/–ಕ್ಕೆ ಮರು ನಿಗಧಿಪಡಿಸಲಾಗಿರುತ್ತದೆ. ಕಾಲಿಕ ವೇತನ ಶ್ರೇಣಿಯ ಅಂತಿಮ ಹಂತದಲ್ಲಿ ಬಡ್ತಿಯ ದರ ರೂ.250/– ಆಗಿರುತ್ತದೆ. ಆದರೆ, ಇವರಿಗೆ ದಿನಾಂಕ : 01.11.2008 ರಿಂದ ವಾರ್ಷಿಕ ವೇತನ ಬಡ್ತಿ (ಸ್ಥಗಿತ ವೇತನ ಬಡ್ತಿ) ಬಿಡುಗಡೆ ಮಾಡುವಾಗ ಪರಿಷ್ಕೃತ ವೇತನ ಶ್ರೇಣಿಯ ಆದೇಶದಲ್ಲಿ ಮೊದಲನೇ ಪಿಪಿ ಆಗಿ ರೂ.10,500/–+300 ಪಿಪಿ, ಎರಡನೇ ಪಿಪಿ ಆಗಿ ರೂ.10,500/–+300 ಪಿಪಿ, ಮೂರನೇ ಪಿಪಿ ಆಗಿ ರೂ.10,500+600 ಪಿಪಿ, ನಾಲ್ಕನೇ ಪಿಪಿ ಆಗಿ ರೂ.10,500+900 ಪಿಪಿ ಮತ್ತು ಐದನೇ ಪಿಪಿ ಆಗಿ ರೂ.10,500+1200 ಪಿಪಿ ಎಂದು ನಮೂದಾಗಿರುತ್ತದೆ. ಹಾಗಾಗಿ ಮೇಲಿನ ರೂ.300/– ರ ದರದಲ್ಲಿ ವಾರ್ಷಿಕ ವೇತನ ಬಡ್ತಿ (ಪಿಪಿ) ಯನ್ನು ಕ್ರಮವಾಗಿ ಆಯಾ ಸಾಲಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಆದಾಗ್ಯೂ ಲೆಕ್ಕ |

| | |
|---|---|
| | ಪರಿಶೀಲನೆಯಲ್ಲಿ ತಮ್ಮ ಸೂಚನೆಯಂತೆ ಪರಿಷ್ಕರಿಸಲು ಕ್ರಮವಹಿಸಲಾಗುವುದೆಂದು ತಿಳಿಸುತ್ತಾ, ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 23 | **<u>23. ಡಾಟಾ ಎಂಟ್ರಿ ಆಪರೇಟರ್ ರವರಿಗೆ ಅಧಿಕ ವೇತನ ಬಡ್ತಿ ನೀಡಿರುವುದು :–</u>**<br>ಸಿಂಧೂ.ಪಿ.ಎಂ, ಡಾಟಾ ಎಂಟ್ರಿ ಆಪರೇಟರ್ ರವರು ದಿನಾಂಕ:23.11.2007 ರಂದು ಸರ್ಕಾರಿ ಸೇವೆಗೆ ಸೇರಿರುತ್ತಾರೆ. 2017–18ರಲ್ಲಿ ವಾರ್ಷಿಕ ವೇತನ ಬಡ್ತಿಯ ದಿನಾಂಕ:01.11.2017 ಆಗಿದ್ದು, ವಾರ್ಷಿಕ ವೇತನ ಬಡ್ತಿಗೆ ಮುಂಚಿತವಾಗಿ ವೇತನ ಶ್ರೇಣಿ 14550 ರಿಂದ 26700 ಯಲ್ಲಿ ವೇತನ ರೂ.18,100/– ಪಡೆಯುತ್ತಿರುತ್ತಾರೆ. ವೇತನ ಬಡ್ತಿ ನಂತರ 18100 + 450 = 18,550/– ಮೂಲವೇತನ ಆಗಿರುತ್ತದೆ. ಈ ನೌಕರರು ದಿನಾಂಕ:14.09.2017 ರಿಂದ 13.03.2018ರವರೆಗೆ ಪ್ರಸೂತಿ ರಜೆಯಲ್ಲಿರುತ್ತಾರೆ. ಕೆ.ಸಿ.ಎಸ್.ಆರ್ ನಿಯಮ 51(2) Clarification (1) ರಂತೆ ವಾರ್ಷಿಕ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಂದು ನೌಕರರು ಕರ್ತವ್ಯದಲ್ಲಿ ಹಾಜರಿರಬೇಕಾಗಿರುತ್ತದೆ. ಆದರೆ ಇಲ್ಲಿ ಈ ನೌಕರರು ವೇತನ ಬಡ್ತಿ ಪ್ರಾಪ್ತವಾಗುವ ದಿನಾಂಕ:01.11.2017 ರಂದು ರಜೆಯ ಮೇಲಿದ್ದುದರಿಂದ ಇವರಿಗೆ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳನ್ನು ದಿನಾಂಕ:01.11.2017 ರಿಂದ ನೀಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಇವರು ಕರ್ತವ್ಯಕ್ಕೆ ಹಿಂದಿರುಗಿದ ದಿನಾಂಕದಿಂದ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ. ಆದರೆ ಇಲ್ಲಿ ಇವರಿಗೆ ದಿನಾಂಕ:01.11.2017 ರಿಂದಲೇ ವಾರ್ಷಿಕ ವೇತನ ಬಡ್ತಿ ಆರ್ಥಿಕ ಸೌಲಭ್ಯ ನೀಡಿರುವುದರಿಂದ ಹಾಗೂ ದಿನಾಂಕ:24.11.2017 ರಿಂದ ಜಾರಿಗೆ ಬರುವಂತೆ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ. ಆದ್ದರಿಂದ ರಜೆ ಅವಧಿಯಲ್ಲಿ ನೀಡಿರುವ ವಾರ್ಷಿಕ ವೇತನ ಬಡ್ತಿಯ ಮೊತ್ತ **ರೂ.5,959.60ಗಳನ್ನು ವಸೂಲಾತಿಗೆ ಸೂಚಿಸಿದೆ.** |
| | ಉತ್ತರ |
| | ಕೆ.ಸಿ.ಎಸ್.ಆರ್. ನಿಯಮ 51(2) Clarification (1) ರಲ್ಲಿ ರಜೆಯಲ್ಲಿರುವ ನೌಕರರಿಗೆ ಸಂಬಂಧಿಸಿದಂತೆ ನಿಯಮವನ್ನು ತಿಳಿಸಲಾಗಿರುತ್ತದೆ. ಆದರೆ ಪ್ರಸೂತಿ ರಜೆಯಲ್ಲಿರುವ ನೌಕರರಿಗೆ ಸಂಬಂಧಿಸಿದಂತೆ ಯಾವುದೇ ಮಾನದಂಡವನ್ನು/ ನಿಯಮವನ್ನು ತಿಳಿಸಿರುವುದಿಲ್ಲ. ಪ್ರಸೂತಿ ರಜೆಯನ್ನು ಸರ್ಕಾರದಿಂದ ಮಹಿಳಾ ನೌಕರರ ಮಕ್ಕಳ ಪಾಲನೆ ಪೋಷಣೆ ಸಂಬಂಧವಾಗಿ ಮಂಜೂರು ಮಾಡಲಾಗಿರುತ್ತದೆ. ಇದನ್ನು ಅವರ ವೈಯಕ್ತಿಕ ರಜೆಯೆಂದು ಪರಿಗಣಿಸಲು ನಿಯಮದಲ್ಲಿರುವುದಿಲ್ಲ. ಈ ಸಂದರ್ಭದಲ್ಲಿ ನೌಕರರ ವಾರ್ಷಿಕ ವೇತನವನ್ನು ಮುಂದೂಡಿದ್ದಲ್ಲಿ ದಂಡನೆಯಾಗಿ ವಾರ್ಷಿಕ ವೇತನ ಬಡ್ತಿಯನ್ನು ಮುಂದೂಡಿದಂತಾಗುತ್ತದೆ. ಆದ್ದರಿಂದ ಶ್ರೀಮತಿ ಸಂಧೂ ಪಿ. ಎಂ. ಡಾಟಾ ಎಂಟ್ರಿ ಆಪರೇಟರ್ ರವರಿಗೆ ದಿನಾಂಕ 01.11.2017 ರಿಂದ 13.03.2018ರವರೆಗೆ ನೀಡಲಾಗಿರುವ ಪ್ರಸೂತಿ ರಜೆಯಲ್ಲಿನ ವಾರ್ಷಿಕ ವೇತನ ಬಡ್ತಿಯ ಆರ್ಥಿಕ ಸೌಲಭ್ಯಗಳ ವಸೂಲಾತಿಯ ಮೊತ್ತ ರೂ.5,959.60 ಗಳ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 24 | **<u>24. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ತಾತ್ಕಾಲಿಕ ಬೋಧಕ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ :–</u>** |

2013ರ ಮೇ ಮಾಹೆಯಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 28 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲಾಗಿದ್ದು, ದಾಖಲಾತಿಗಳನ್ನು ಪರಿಶೀಲಿಸಲಾಗಿ 6 ಜನ ಅತಿಥಿ ಉಪನ್ಯಾಸಕರು ತಮ್ಮನ್ನು ಖಾಯಂಗೊಳಿಸುವಂತೆ ಘನ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದು, ಘನ ಉಚ್ಚ ನ್ಯಾಯಾಲಯವು 6 ಜನ ಅಧ್ಯಾಪಕರ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಲು ಆದೇಶಿಸಲಾಗಿದೆ.

ಆದರೆ 6 ಜನ ಅಧ್ಯಾಪಕರನ್ನು ಮಾತ್ರ ಖಾಯಂಗೊಳಿಸುವ ಬದಲು 28 ಉಪನ್ಯಾಸಕರನ್ನು ಖಾಯಂಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮದ ಬಗ್ಗೆ ವಿವರ ನೀಡಲು ಕೋರಿದ್ದು, ಆಡಿಟ್ ವೇಳೆಯಲ್ಲಿ ಖಾಯಂಗೊಳಿಸಲಾದ ಅಧ್ಯಾಪಕರಲ್ಲಿ ಕೆಲವರು ವಿದ್ಯಾರ್ಹತೆ ಹೊಂದಿಲ್ಲದಿದ್ದರೂ ಸಹ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಳಿಸಿರುವುದನ್ನು ಗಮನಿಸಲಾಗಿದ್ದು, ಇದು ನಿಯಮಬಾಹಿರವಾಗಿದೆ.

ಘನ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಆರು ಜನ ಅತಿಥಿ ಉಪನ್ಯಾಸಕರನ್ನು ಹೊರತುಪಡಿಸಿ ಉಳಿದ 22 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವುದು ಘನ ಉಚ್ಚ ನ್ಯಾಯಾಲಯ ಹಾಗೂ ಯು.ಜಿ.ಸಿ ಮಾರ್ಗಸೂಚಿಗಳಿಗೆ ವಿರುದ್ಧವಾಗಿರುತ್ತದೆ. ಹಾಗೂ 22 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವ ಪ್ರಕ್ರಿಯೆಯನ್ನು ಆಡಿಟ್ ವರದಿಯಲ್ಲಿ ಆಕ್ಷೇಪಿಸಲಾಗಿದೆ ಮತ್ತು ಇವರುಗಳಿಗೆ 2017–18ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ **ರೂ.1,58,99,212/–ಗಳನ್ನು ವಸೂಲಾತಿಗೆ ಸೂಚಿಸಿದೆ**. ವಿವರಗಳನ್ನು **ಅನುಬಂಧ – 6ರಲ್ಲಿ** ನೀಡಿದೆ.

ನೇಮಕಾತಿ ನ್ಯೂನತೆಗಳು ಕೆಳಕಂಡಂತಿದೆ.

1. ರೋಸ್ಟರ್ ಪದ್ಧತಿ ಪಾಲನೆ ಕುರಿತು ಮಾಹಿತಿ ಒದಗಿಸಿಲ್ಲ.
2. 22 ಮಂದಿ ಅತಿಥಿ ಉಪನ್ಯಾಸಕರಾಗಿ ಆಯ್ಕೆಗೊಂಡಂದಿನಿಂದ ಖಾಯಂ ಆಗುವತನಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸಿರುವ ದಾಖಲಾತಿ ವಿವರ ಒದಗಿಸಿಲ್ಲ.
3. ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಮುನ್ನ ನಿಯಮಾನುಸಾರ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಬಗ್ಗೆ ವಿವರ ಹಾಜರುಪಡಿಸಿರುವುದಿಲ್ಲ.
4. ಉಪನ್ಯಾಸಕರ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ ಹೊಂದಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.
5. ಸರ್ಕಾರಿ ಆದೇಶ ಸಂಖ್ಯೆ:ED/37/UNE/2009/24.12.2009 ರೀತ್ಯಾ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಕುರಿತು ಸೇವಾಹಿಯಲ್ಲಿ ವಿವರ ಲಭ್ಯವಿರುವುದಿಲ್ಲ. ಈ ಹಿಂದಿನ ಲೆಕ್ಕ ಪರಿಶೋಧನೆಯಲ್ಲಿಯೂ ಈ ಬಗ್ಗೆ ಆಕ್ಷೇಪಿಸಲಾಗಿದ್ದು, ಯಾವುದೇ ಸಮಂಜಸ ಉತ್ತರ ನೀಡಿರುವುದಿಲ್ಲ. ಒಟ್ಟಾರೆ ಬೋಧಕ ವರ್ಗದ ನೇಮಕಾತಿ ವಿಧಾನದಲ್ಲಿ ಯು.ಜಿ.ಸಿ ನಿಯಮಾವಳಿಗಳನ್ನು ಪಾಲಿಸಿರುವುದಿಲ್ಲ.

ಉತ್ತರ

ವಿ.ವಿ.ನಿಲಯದಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಅತಿಥಿ

| | |
|---|---|
| | ಉಪನ್ಯಾಸಕರು ತಮ್ಮಗಳ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ದಾಖಲಿಸಿದ್ದ ಪ್ರಕರಣಕ್ಕೆ (W.P.No.6090–6095/2012 (-res) ಸಂಬಂಧಿಸಿದಂತೆ ನ್ಯಾಯಾಲಯವು ವಿಚಾರಣೆಯನ್ನು ನಡೆಸಿ ಸದರಿಯವರುಗಳು ವಿವಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಕಾನೂನು ಬದ್ಧವಾಗಿ ಕ್ರಮವಹಿಸುವಂತೆ ದಿನಾಂಕ 03.04.2012 ರಂದು ತೀರ್ಪು ನೀಡಿರುತ್ತದೆ. ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಕ್ರಮವಹಿಸುವ ಸಂಬಂಧವಾಗಿ ವ್ಯವಸ್ಥಾಪನಾ ಮಂಡಳಿ ಸದಸ್ಯರು ಹಾಗೂ ವಿ.ವಿ.ನಿಲಯದ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ವರದಿಯನ್ನಾಧರಿಸಿ ಶೈಕ್ಷಣಿಕ, ಹಣಕಾಸು ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ವಿಷಯವನ್ನು ಮಂಡಿಸಿ, ಸಭೆಯ ತೀರ್ಮಾನದಂತೆ ಸದರಿಯವರುಗಳ ಸೇವೆಯನ್ನು ಸಕ್ರಮಗೊಳಿಸುವ ಸಂಬಂಧವಾಗಿ ಪರಿನಿಯಮವನ್ನು "The Karnataka state open university (creation of posts and Absorption of temporary Teachers)statutes 2012ನ್ನು ರಚಿಸಲಾಗಿದ್ದು, ಈ ಪರಿನಿಯಮಕ್ಕೆ ಹಣಕಾಸು ಸಮಿತಿ, ಶೈಕ್ಷಣಿಕ ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತ ದೊರೆತಿರುತ್ತದೆ.<br>ಕರ್ನಾಟಕ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ4266ರಲ್ಲಿ ವಿವಿ ನಿಲಯದಲ್ಲಿ 28 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯು ಕ್ರಮಬದ್ಧವಾಗಿರುವುದಿಲ್ಲವೆಂಬ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 15.09.2014 ರಂದು ಕರ್ನಾಟಕ ವಿಧಾನ ಪರಿಷತ್‌ನ ಭರವಸೆ ಸಮಿತಿ ಸಭೆಯಲ್ಲಿ ವಿಷಯ ವಿಸ್ತೃತವಾಗಿ ಚರ್ಚಿತಗೊಂಡು (ವಿ.ಸಂಖ್ಯೆ: 4266) ಮಾನ್ಯ ರಾಜ್ಯಪಾಲರ ಆದೇಶದ ಮೇರೆಗೆ ಪ್ರಕರಣಗಳು ಮುಕ್ತಾಯಗೊಂಡಿರುತ್ತದೆ ಎಂಬುದಾಗಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 25 | **25. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪ್ರಾದೇಶಿಕ ಕೇಂದ್ರಗಳಿಗೆ ಪ್ರಾದೇಶಿಕ ನಿರ್ದೇಶಕರುಗಳನ್ನು ನಿಯಮಬಾಹಿರವಾಗಿ ನೇಮಕಾತಿ ಮಾಡಿ ವೇತನ ಪಾವತಿಸಿರುವ ಕುರಿತು :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2017–18ನೇ ಸಾಲಿಗೆ 18 ಪ್ರಾದೇಶಿಕ ಕೇಂದ್ರಗಳು ಕೆಲಸ ನಿರ್ವಹಿಸುತ್ತಿದ್ದು, ಪ್ರಾದೇಶಿಕ ಕೇಂದ್ರಗಳಿಗೆ ಪ್ರಾದೇಶಿಕ ನಿರ್ದೇಶಕರುಗಳನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.20,000 (ರೂ. ಇಪ್ಪತ್ತು ಸಾವಿರ ಮಾತ್ರ) ಗೌರವ ಸಂಭಾವನೆ ಪಾವತಿಸುವ ಆಧಾರದ ಮೇಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 2ನೇ ಅನುಸೂಚಿಯ ಮೊದಲನೇ ಪರಿನಿಯಮದ ಕ್ಲಾಸ್ 2 (9) (iii) ರಡಿಯಲ್ಲಿನ ಅಧಿಕಾರದನ್ವಯ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ನೇಮಕಾತಿ ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಯಾವುದೇ ಖಾಯಂ ಹುದ್ದೆಗೆ ಎದುರಾಗಿ ನೇಮಕ ಮಾಡಿರುವುದಿಲ್ಲ. ಹುದ್ದೆಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ.<br>ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಕೆಲಸ ನಿರ್ವಹಿಸುತ್ತಿರುವವರ ವಿವರ ಈ ಕೆಳಕಂಡಂತಿದೆ.<br>1. ಸಂಗಮೇಶ್ ಹಿರೇಮಠ – |

2. ಕೆ.ನಂದಕುಮಾರಿ
3. ಅನಂತ್.ಎಲ್.ಜಂಡೇಕರ್ –
4. ಜಗದೀಪ್ ಚಂದ್ರ.ಎಸ್ –
5. ರೋಹಿತ್.ಹೆಚ್.ಎಸ್ –
6. ಎಸ್.ಮಹದೇವ
7. ಪಿ.ಜಗದೀಶ್
8. ಡಾ॥ ವಿಜಯಪ್ರಕಾಶ್ –
9. ಹೆಚ್.ಮಲ್ಲಿಕಾರ್ಜುನ –
10. ಪಿ. ಹರೀಶ್
11. ಪಿ.ಗೋಪಾಲ್
12. ಎಸ್.ಜೆ.ಮಂಜುನಾಥ್ –
13. ಬಿ.ಬಸವರಾಜು
14. ಕೆ.ಪಿ.ಮಹಲಿಂಗಯ್ಯ –
15. ಸುಧಾಕರ್.ಎಂ
16. ಗಿರೀಶ್.ಹೆಚ್.ಎನ್
17. ಹೆಚ್.ಎಲ್.ಮೋಹನ್‌ರಾಜು –
18. ಲೋಕೇಶ್.ಆರ್

ಒಟ್ಟು 18 ಪ್ರಾದೇಶಿಕ ನಿರ್ದೇಶಕರುಗಳ ನೇಮಕಾತಿ ಸಮಯದಲ್ಲಿ ಸಂಭಾವನೆ ರೂ.20,000/– ಇದ್ದು, ಕರಾಮುವಿ/ಆವಿ/ಸಿಬ್ಬಂದಿ/2/859/ಪ್ರಾಕೇ/2012–13 ದಿನಾಂಕ:30.11.2012ರ ಪ್ರಕಾರ ಗೌರವ ಸಂಭಾವನೆಯನ್ನು ರೂ.20,000 ರಿಂದ ರೂ.36,300 ಕ್ಕೆ ಹೆಚ್ಚುವರಿ ಮಾಡಿ ಇದರಲ್ಲಿ ರೂ.100 ಕಡಿತ ಮಾಡಿ ರೂ.36,200/–ಗಳನ್ನು ಹಾಗೂ, ಇದಕ್ಕೆ DA, HRA ಮತ್ತು CCA ಸೇರಿಸಿ ಪ್ರಸ್ತುತ ಪಾವತಿಸಲಾಗಿರುತ್ತದೆ. ಪ್ರಾದೇಶಿಕ ನಿರ್ದೇಶಕರುಗಳಿಗೆ Statute 8 (2) (i) of the first statutes in second schedule in corporate in KSOU Act 1992, ರಂತೆ ಅನುಮೋದಿಸಲಾಗಿದೆ ಎಂದು ಸೂಚಿಸಿರುತ್ತಾರೆ. ಆದರೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯಾಗಿರುವುದಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕರುಗಳ ಮೂಲ ವೇತನ ರೂ.36,200/– ಇದ್ದು, ಇವರು ತಾತ್ಕಾಲಿಕವಾಗಿ ನೇಮಕವಾದ್ದರಿಂದ ಇವರಿಗೆ ತುಟ್ಟಿ ಭತ್ಯೆ ಮನೆ ಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆ ನೀಡುವಂತಿಲ್ಲ. ಆದರೆ ಮೇಲ್ಕಂಡ ಭತ್ಯೆಗಳನ್ನು ಮೂಲ ವೇತನದೊಂದಿಗೆ ಸೇರಿಸಿ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ ಪಾವತಿಸಿರುವ ಒಟ್ಟು ಮೂಲ ವೇತನ ಮೊತ್ತ **ರೂ.73,16,803/– ಗಳನ್ನು ಆಕ್ಷೇಪಣೆಗೆ ಸೂಚಿಸಿದೆ ಹಾಗೂ ನಿಯಮಬಾಹಿರವಾಗಿ ಪಾವತಿಸಿರುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ರೂ.12,66,864/–ಗಳನ್ನು ಸಂಬಂಧಿಸಿದ ಪ್ರಾದೇಶಿಕ ನಿರ್ದೇಶಕರುಗಳಿಂದ ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು ಅನುಬಂಧ–7, 7 (ಎ)ರಲ್ಲಿ ಲಗತ್ತಿಸಿದೆ.**

| | ಉತ್ತರ |
|---|---|
| | ವಿಶ್ವವಿದ್ಯಾನಿಲಯದ ವಿವಿಧ ಪ್ರದೇಶಿಕ ಕೇಂದ್ರಗಳ ಆಡಳಿತ ನಿರ್ವಹಣೆಗೆ ಪೂರಕವಾಗಿ ತಾತ್ಕಾಲಿಕವಾಗಿ ಪ್ರಾದೇಶಿಕ ನಿರ್ದೇಶಕರುಗಳನ್ನು ನೇಮಕ ಮಾಡಲಾಗಿರುತ್ತದೆ. ಇವರುಗಳ ನೇಮಕಾತಿಯೂ ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ. ಇವರುಗಳಿಗೆ ಪ್ರಥಮದಲ್ಲಿ ಮಾಹೆಯಾನ ರೂ.20,000/-ಗಳ ಗೌರವ ಸಂಭಾವನೆಯನ್ನು ಪಾವತಿಸುತ್ತಿದ್ದು, ನಂತರದಲ್ಲಿ ವ್ಯವಸ್ಥಾಪನಾ ಮಂಡಳಿಯ ತೀರ್ಮಾನದ ಮೇರೆಗೆ, ಇವರುಗಳಿಗೆ ಪ್ರಾದೇಶಿಕ ನಿರ್ದೇಶಕ ಹುದ್ದೆಗೆ ನಿಗಧಿಯಾಗಿರುವ ವೇತನ ಶ್ರೇಣಿ 36,300-53,850ರ ಕನಿಷ್ಠ ವೇತನಕ್ಕೆ ರೂ.100/- ಅನ್ನು ಕಡಿತಗೊಳಿಸಿ ರೂ.36,200 ಹಾಗು ಶೇಕಡ 4% ದರದಲ್ಲಿ ತುಟ್ಟಿ ಭತ್ಯೆ, ಲಭ್ಯವಾಗುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಾವತಿಸಲಾಗುತ್ತಿದೆ. ವಿಶ್ವವಿದ್ಯಾನಿಲಯವು ರಚಿಸಿರುವ ಪರಿನಿಯಮ The Karnataka State Open University (Cadre and Recuritment of the posts of Regional Director) ರಲ್ಲಿ – ಬೋಧಕ ವರ್ಗದವರ ನಿಯೋಜನೆಗೆ ಮೀಸಲಾಗಿದ್ದ 7 ಉಪಕುಲಸಚಿವ ಹುದ್ದೆಗಳನ್ನು ಪ್ರಾದೇಶಿಕ ನಿರ್ದೇಶಕ ಹುದ್ದೆಯಾಗಿ ಪರಿವರ್ತಿಸಿದ್ದುದನ್ನೂ ಸೇರಿದಂತೆ ಹೊಸದಾಗಿ ಮೂರು ಪ್ರಾದೇಶಿಕ ನಿರ್ದೇಶಕ ಹುದ್ದೆಗಳನ್ನು ಸೃಜಿಸುವ ಮೂಲಕ ಒಟ್ಟು 10 ಹುದ್ದೆಗಳು ಸೃಜನೆಯಾಗಿರುತ್ತದೆ. ನಂತರದಲ್ಲಿ ವಿಶ್ವವಿದ್ಯಾನಿಲಯವು ವಿವಿಧ ಸ್ಥಳಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದಂತೆಯೇ ಉಳಿದ 11 ಪ್ರಾದೇಶಿಕ ನಿರ್ದೇಶಕ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.<br>ಮೇಲಿನ ಏಳು ಪ್ರಾದೇಶಿಕ ನಿರ್ದೇಶಕ ಹುದ್ದೆಗಳನ್ನು ಕರಾಮುವಿ ಕಾಯ್ದೆಯ ಮೊದಲನೇ ಪರಿನಿಯಮದ ನಿಯಮ 8(2)(ಜೆ) ರಲ್ಲಿ ವ್ಯವಸ್ಥಾಪನಾ ಮಂಡಳಿಗೆ ಪ್ರದತ್ತವಾದ ಅಧಿಕಾರದನ್ವಯ ಹಣಕಾಸು ಸಮಿತಿ ಹಾಗು ವ್ಯವಸ್ಥಾಪನ ಮಂಡಳಿಯ ತೀರ್ಮಾನದ ಮೇರೆಗೆ ಸೃಜನೆಯಾಗಿರುತ್ತದೆ. ಇವರುಗಳ ನೇಮಕಾತಿಯೂ ಸಂಪೂರ್ಣವಾಗಿ ತಾತ್ಕಾಲಿಕ ವಾಗಿರುವುದರಿಂದ ಪರೀಕ್ಷಾರ್ಥ ಅವಧಿಯನ್ನು ಘೋಷಣೆ ಮಾಡುವ ಪ್ರಮೆಯ ಉದ್ಭವವಾಗುವುದಿಲ್ಲ.<br>ಈ ಮೇಲಿನ ಅಂಶಗಳನ್ನು ಲೆಕ್ಕ ಪರಿಶೋಧಕರ ಅವಗಾಹನೆಗೆ ತರುತ್ತಾ, ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 26 | **26. ನೂತನ ಪಿಂಚಣಿ ವಂತಿಕೆಯನ್ನು ಸಕಾಲದಲ್ಲಿ ನೌಕರರ ಖಾತೆಗೆ ಜಮಾ ಮಾಡದಿರುವುದು :-**<br>ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ. 2017-18ನೇ ಸಾಲಿನಲ್ಲಿ ನಗದು ಪುಸ್ತಕವನ್ನು ನಿರ್ವಹಿಸಲಾಗಿದ್ದು ಈ ಸಂಬಂಧ ಆರ್ಥಿಕ ವ್ಯವಹಾರವನ್ನು ಎಸ್.ಬಿ.ಐ ಬ್ಯಾಂಕ್ ಖಾತಾ ಸಂಖ್ಯೆ:64090010482 ರಲ್ಲಿ ನಿರ್ವಹಿಸಲಾಗಿದೆ. ಈ ನಗದು ಪುಸ್ತಕವು ಒಳಗೊಂಡಿರುವ ಪುಟಗಳನ್ನು ಕಛೇರಿ ಮುಖ್ಯಸ್ಥರು ದೃಢೀಕರಿಸಿರುವುದಿಲ್ಲ. ಹಾಗೂ ಸಂಬಂಧಿಸಿದ ನಗದು ಪುಸ್ತಕದಲ್ಲಿ, ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿ ನೂತನ ಪಿಂಚಣಿ ವಂತಿಕೆಯ ಪ್ರಾರಂಭಿಕ ಶಿಲ್ಕಿನ FDR (ಠೇವಣಿ) ಮೊತ್ತ ರೂ.11,19,24,108/-ಗಳನ್ನು ನಮೂದಿಸಿರುವುದಿಲ್ಲ. ಪರಿಣಾಮ ಠೇವಣಿ ತೊಡಗಿಸಿದ ದಿನಾಂಕ, ಮೊತ್ತ, ಸದರಿ ಅವಧಿಯಲ್ಲಿ ದೊರೆತ ಬಡ್ಡಿ ಮೊತ್ತ ಇವುಗಳನ್ನು ಸಂಕಲನ ಮಾಡಲು ಸಾಧ್ಯವಾಗಿರುವುದಿಲ್ಲ. ನೂತನ ಪಿಂಚಣಿ ಯೋಜನೆಯಡಿ ಬರುವ ಅಧಿಕಾರಿ/ನೌಕರರಿಂದ 2017-18ನೇ ಸಾಲಿನಲ್ಲಿ ಕಟಾಯಿಸಲಾಗಿರುವ **ವಂತಿಕೆ ಮೊತ್ತ ರೂ.13,81,54,904/-**ಗಳನ್ನು ವಿವಿಧ ದಿನಾಂಕಗಳಲ್ಲಿ (PFRDA trustee bank pension fund regularity and development authority) ಗೆ ಜಮೆ |

| | |
|---|---|
| | ಮಾಡಿರುವುದು ಕಂಡು ಬಂದಿರುತ್ತದೆ. ವಿವರವಗಳನ್ನು **ಅನುಬಂಧ – 8ರಲ್ಲಿ** ಲಗತ್ತಿಸಿದೆ.<br>ಆಯಾಯಾ ಮಾಹೆಯಲ್ಲಿ, ನೌಕರರ/ಅಧಿಕಾರಿಗಳಿಂದ ಕಟಾಯಿಸಲಾದ ವಂತಿಕೆ ಮೊತ್ತವನ್ನು ಸಕಾಲದಲ್ಲಿ NPS Cellಗೆ ಜಮೆ ಮಾಡದಿರುವುದರಿಂದ, ವಂತಿಕೆದಾರರು ದೊರೆಯಬಹುದಾದ ಬಡ್ಡಿಯಿಂದ ವಂಚಿತರಾಗಿರುತ್ತಾರೆ. ಆದ್ದರಿಂದ ನೌಕರರಿಂದ ಕಟಾಯಿಸಿದ ಎನ್.ಪಿ.ಎಸ್.ವಂತಿಕೆಯನ್ನು ಕ್ಲುಪ್ತ ಸಮಯದಲ್ಲಿ ಎನ್.ಪಿ.ಎಸ್ ಖಾತೆಗೆ ಜಮೆ ಮಾಡಲು ಸೂಚಿಸಿದೆ. |
| 27 | ಉತ್ತರ |
| | ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ. 2017–18ನೇ ಸಾಲಿನಲ್ಲಿ ನಗದು ಪುಸ್ತಕವನ್ನು ಒಳಗೊಂಡಿರುವ ಶೀಟ್ (ಹಾಳೆಗಳನ್ನು) ಸಕ್ಷಮ ಅಧಿಕಾರಿಗಳಿಂದ ಸಹಿ ಮಾಡಿಸಿ ಲೆಕ್ಕತನಿಖೆಗೆ ಹಾಜರುಪಡಿಸಲಾಗಿದೆ. FDR (ಠೇವಣಿ) ಮೊತ್ತ ರೂ. 11,19,24,108/–ಗಳಾಗಿದ್ದು, ಎಲ್ಲಾ ಠೇವಣಿಗಳನ್ನು ಮುಕ್ತಾಯಗೊಳಿಸಿ PFRDA Trustee ಬ್ಯಾಂಕ್‌ಗೆ ವರ್ಗಾಹಿಸಲಾಗಿರುತ್ತದೆ. ಈ ಸಂಬಂಧ PFRDA ರವರು ನೀಡಿರುವ Pran ಸಂಖ್ಯೆಗೆ ಅನುಗುಣವಾಗಿ ಜುಲೈ 2017ರ ಮಾಹೆಯ Uploadನ್ನು ಉದ್ಯೋಗಿ ಹಾಗೂ ಉದ್ಯೋಗದಾತರ ಎನ್ ಪಿ ಎಸ್ ವಂತಿಕೆಯನ್ನು ಆಗಸ್ಟ್ 2017ರಲ್ಲಿ ಮಾಡಲಾಗಿದೆ. ಅಕ್ಟೋಬರ್ 2017ರಲ್ಲಿ ಡಿಸೆಂಬರ್ 2007 ರಿಂದ ಜೂನ್ 2017 ರವರೆಗೆ 245 (ಬೋಧಕ ಹಾಗೂ ಬೋಧಕೇತರರು ಸೇರಿದಂತೆ) ಉದ್ಯೋಗಿ ಹಾಗೂ ಉದ್ಯೋಗದಾತರ ಎನ್ ಪಿ ಎಸ್ ಬ್ಯಾಕ್‌ಲಾಗ್ ವಂತಿಕೆಯನ್ನು ತಾತ್ಕಾಲಿಕವಾಗಿ ಠೇವಣಿಯಲ್ಲಿ ತೊಡಗಿಸಲಾಗಿದ್ದು ಎಲ್ಲಾ ಠೇವಣಿಗಳನ್ನು ಮುಕ್ತಾಯಗೊಳಿಸಿ ಬಡ್ಡಿ ಸೇರಿದಂತೆ ಸಂಬಂಧಿಸಿದ ನೌಕರರ Pran ಗಳಿಗೆ Upload ಮಾಡಿ PFRDAನ Trustee ಬ್ಯಾಂಕ್‌ಗೆ RTGS ಮೂಲಕ ವರ್ಗಾಯಿಸಲಾಗಿರುತ್ತದೆ. ಉಳಿದ 07 ಮಂದಿ ಬೋಧಕೇತರ ನೌಕರರುಗಳ ಉದ್ಯೋಗಿ ಹಾಗೂ ಉದ್ಯೋಗದಾತರ ಎನ್ ಪಿ ಎಸ್ ಬ್ಯಾಕ್‌ಲಾಗ್ ವಂತಿಕೆಯನ್ನು ಕೂಡ ಜನವರಿ 2018ರಂದು PFRDAಗೆ Upload ಮಾಡಿ PFRDAನ Trustee ಬ್ಯಾಂಕ್‌ಗೆ RTGS ಮೂಲಕ ವರ್ಗಾಯಿಸಲಾಗಿರುತ್ತದೆ. ಹಾಗೂ ಜುಲೈ 2017ರಿಂದ ಉದ್ಯೋಗಿ ಹಾಗೂ ಉದ್ಯೋಗದಾತರ ಎನ್ ಪಿ ಎಸ್ ಬ್ಯಾಕ್‌ಲಾಗ್ ವಂತಿಕೆಯನ್ನು ಪ್ರತಿ ಮಾಹೆಯಾನ ನಿರಂತರವಾಗಿ PFRDAಗೆ Upload ಮಾಡಲಾಗುತ್ತಿದೆ. ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎನ್ ಪಿ ಎಸ್ ನ್ನು ಸರ್ಕಾರದ ನಿರ್ದೇಶನದಂತೆ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ಪರೀಕ್ಷಾ ವಿಭಾಗ–09** |
| | **ವಿವರ** |
| 27 | **27. ಉತ್ತರ ಪತ್ರಿಕೆಗಳಲ್ಲಿ ಅಂಕಗಳ ಮರು ಎಣಿಕೆ ಶುಲ್ಕ, ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಶುಲ್ಕದ ವಿವರ ನೀಡದಿರುವುದು:–**<br>2017–18ನೇ ಸಾಲಿನಲ್ಲಿ ಮರು ಮೌಲ್ಯಮಾಪನ ಮತ್ತು ಅಂಕಗಳ ಮರು ಎಣಿಕೆ ಎಂದು ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ರೂ.6,59,050/– ಶುಲ್ಕ ಸ್ವೀಕರಿಸಿರುವುದು ವಾರ್ಷಿಕ ಲೆಕ್ಕಪತ್ರದಲ್ಲಿ ಕಂಡು ಬಂದಿರುತ್ತದೆ.<br>ಸದರಿ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳಿಂದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲಾಗಿತ್ತು ಎಂಬ ಬಗ್ಗೆ ವಿಷಯವಾರು ತರಗತಿವಾರು ವಿವರವನ್ನು ಹಾಗೂ ಮರು ಮೌಲ್ಯಮಾಪನದ ಮತ್ತು ಅಂಕಗಳ ಮರು |

| | |
|---|---|
| | ಎಣಿಕೆಯ ನಂತರ ವ್ಯತ್ಯಾಸವಾದ ಉತ್ತರ ಪತ್ರಿಕೆ ಸಂಖ್ಯೆ ಎಷ್ಟು? ಎಂಬ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ವಿಚಾರಣಾ ಪತ್ರ ಸಂಖ್ಯೆ:10/11.07.2019 ರಲ್ಲಿ ಕೋರಲಾಗಿತ್ತು. ಆದರೆ ವಿಶ್ವವಿದ್ಯಾನಿಲಯ ಯಾವುದೇ ಅನುಪಾಲನಾ ವರದಿ ನೀಡದಿರುವುದರಿಂದ **ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ಮೊತ್ತ ರೂ.6,59,050/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | ವಿವರ |
| 28 | **<u>28. ಪರೀಕ್ಷಾ ಕಾರ್ಯ ನಿರ್ವಹಿಸಿದ ಬೋಧಕ/ಬೋಧಕೇತರ ಸಿಬ್ಬಂದಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಸಂಭಾವನೆ ಪಾವತಿಸಿರುವ ಬಗ್ಗೆ :-</u>**<br>(ಅ)ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ 2017-18ನೇ ಸಾಲಿನಲ್ಲಿ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಸಂಭಾವನೆಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ಪಾವತಿಗಳಿಗೆ ದರಗಳನ್ನು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿ, ಹಣಕಾಸು ಸಮಿತಿ ವ್ಯವಸ್ಥಾಪನಾ ಮಂಡಳಿ ಮತ್ತು ಮಾನ್ಯ ಕುಲಪತಿಯವರು ಅನುಮೋದಿಸಿದ ದರಗಳಂತೆ ಪಾವತಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ-90/ಯುಎನ್ಇ/2002, ದಿನಾಂಕ:27.01.2003 ರಂತೆ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಸಿಬ್ಬಂದಿಗಳು ಮೌಲ್ಯಮಾಪನ ಕಾರ್ಯ ನಿರ್ವಹಿಸಿದಾಗ ಸಂಭಾವನೆಗೆ ಅರ್ಹರಿರುವುದಿಲ್ಲ. ಆದಾಗ್ಯೂ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿರುವ ಸಿಬ್ಬಂದಿಗೂ ಮೌಲ್ಯಮಾಪನ ಕಾರ್ಯ ನಿರ್ವಹಿಸಿದ ಕಾರಣ, 2017-18ನೇ ಸಾಲಿನಲ್ಲಿ ರೂ.7,20,070/-ಗಳನ್ನು ಪಾವತಿಸಲಾಗಿದ್ದು, ಸರ್ಕಾರದ ಆದೇಶದ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ **ರೂ.7,20,070/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.<br>(ಆ)ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿರುತ್ತದೆ. ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸಿದ ಸಿಬ್ಬಂದಿಗಳಿಗೆ ಕೆ.ಸಿ.ಎಸ್.ಆರ್‌ನಲ್ಲಿ ನಿಗಿದಪಡಿಸಿದ ದರಗಳಲ್ಲಿ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳನ್ನು ಪಾವತಿಸದೆ ವ್ಯವಸ್ಥಾಪನಾ ಮಂಡಳಿ ಅನುಮೋದಿಸಿದ ದರಗಳಲ್ಲಿ ಪಾವತಿಸಲಾಗಿದೆ. ಈ ಅನುಮೋದನೆಯನ್ನು ಉನ್ನತ ಶಿಕ್ಷಣ ಇಲಾಖೆಯು ಸ್ಥಿರೀಕರಿಸಬೇಕಾಗಿದ್ದು, ಸ್ಥಿರೀಕರಣಗೊಳ್ಳುವವರೆಗೆ ಹೆಚ್ಚಿನ ದರಗಳಲ್ಲಿ ಪಾವತಿಸಿರುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯ ಮೊಬಲಗು ಅನುಕ್ರಮವಾಗಿ **ರೂ.90,288/- + ರೂ.3,78,085/- = ಒಟ್ಟು ರೂ.4,68,373/-ಗಳನ್ನು ವಸೂಲಾತಿಗೆ ಸೂಚಿಸಿದೆ. ಒಟ್ಟು ವಸೂಲಾತಿ ಮೊಬಲಗು (ಅ) ರೂ.7,20,070 + (ಆ) ರೂ.4,68,373 = ರೂ.11,88,443/-** ವಿವರಗಳನ್ನು **<u>ಅನುಬಂಧ - 9ರಲ್ಲಿ</u>** ಲಗತ್ತಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಅಂಗೀಕೃತ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಕಾಯ್ದೆ ಹೊಂದಿದೆ. ಇದರ ಉಲ್ಲೋಕ್ತಿಯಲ್ಲಿ ಹಣಕಾಸು ಸಮಿತಿ/ ವ್ಯವಸ್ಥಾಪನಾ ಮಂಡಳಿಗಳಿಗೆ ವಿಶ್ವವಿದ್ಯಾನಿಲಯದ ಹಣಕಾಸು/ ಆಡಳಿತಾತ್ಮಕ ನಿರ್ವಹಣೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದನ್ನು ಅವಲೋಕಿಸಬಹುದಾಗಿದೆ. ಅದರಂತೆಯೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮ ದಂತೆಯೆ ಕರಾಮುವಿಯಲ್ಲಿಯು |

| | |
|---|---|
| | ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13-03-2012, ವರದಿಯನ್ನು ದಿನಾಂಕ:31.03.2012 ರ 46ನೇ ಹಣಕಾಸು ಸಮಿತಿ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ. ಅದಕ್ಕನುಗುಣವಾಗಿ ಹೊರಡಿಸಲಾಗಿರುವ ಕಚೇರಿ ಆದೇಶ ಸಂಖ್ಯೆ:ಕರಾಮುವಿ/ಪವಿ/ ಲೆ.ವಿ/ಸಂಭಾವನೆ/ಪರಿಷ್ಕೃತ/89/2012-13 ದಿನಾಂಕ:17.04.2012ರ ಪ್ರಕಾರ ಕೇಂದ್ರ ಮೌಲ್ಯಮಾಪನಕ್ಕೆ ಬರುವ ಮೌಲ್ಯಮಾಪಕರಿಗೆ ಪಾವತಿಸಲಾಗಿರುತ್ತದೆ. ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 29 | **<u>29. ಚೆಕ್ ಪುಸ್ತಕಗಳ ಸಂಗ್ರಹ ವಹಿ :-</u>**<br>ಮುಕ್ತ ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದಲ್ಲಿ ಹಲವಾರು ಬ್ಯಾಂಕ್ ಖಾತೆಗಳಿದ್ದು, ಬೇರೆ ಬೇರೆ ಖಾತೆಗಳಿಗೆ ಪ್ರತ್ಯೇಕ ವಿಷಯ ನಿರ್ವಾಹಕರುಗಳ ಮೂಲಕ ನಗದು ಪುಸ್ತಕ ನಿರ್ವಹಿಸಲಾಗಿರುತ್ತದೆ. ಪ್ರತೀ ಬ್ಯಾಂಕ್ ಖಾತೆಗೂ ಪ್ರತ್ಯೇಕ ಚೆಕ್ ಪುಸ್ತಕದ ಸಂಗ್ರಹ ವಹಿ ನಿರ್ವಹಿಸುತ್ತಿದ್ದು, ಹಣಕಾಸು ವಿಭಾಗದಲ್ಲಿ ಎಲ್ಲಾ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ವಹಿ ನಿರ್ವಹಿಸುವುದು ಸೂಕ್ತವಾಗಿರುತ್ತದೆ. |
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 30 | **<u>30. ಹಣಕಾಸು ಶಾಖೆಯಲ್ಲಿ ಸ್ವೀಕೃತಗೊಂಡಿರುವ ಪರೀಕ್ಷಾ ಶುಲ್ಕದ ಡಿ.ಡಿಗಳು ನಗದೀಕರಣಗೊಂಡಿಲ್ಲದಿರುವ ಬಗ್ಗೆ:-</u>**<br>ಪರೀಕ್ಷಾ ಖಾತೆ-09 ಗೆ ಸಂಬಂಧಿಸಿದಂತೆ 2017-18ನೇ ಸಾಲಿನ ವಿವಿಧ ರೀತಿಯ ಶುಲ್ಕದ ಸಂಬಂಧ ವಿದ್ಯಾರ್ಥಿಗಳಿಂದ ಒಟ್ಟು 692 ಡಿ.ಡಿಗಳು (ಸಹಭಾಗಿತ್ವ ಸಂಸ್ಥೆ ಹಾಗೂ ಇನ್ ಹೌಸ್) ಸ್ವೀಕೃತಗೊಂಡಿದ್ದು, ಬ್ಯಾಂಕ್ ಖಾತೆ ಸಂಖ್ಯೆ: 54035420128 ಹಾಗೂ 5020001584238 ಗಳಿಗೆ ಜಮೆ ಮಾಡಲಾಗಿದ್ದು, ಒಟ್ಟು ರೂ.14,91,565/- ಗಳು ಜಮೆಯಾಗಬೇಕಾಗಿದ್ದು, ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಡಿ.ಡಿಗಳ ವಿವರ ಹಾಗೂ ಬ್ಯಾಂಕ್ ಸ್ಕ್ರೋಲ್‌ಗಳನ್ನು ಪರಿಶೀಲಿಸಲಾಗಿ ಒಟ್ಟು ರೂ.30,220/-ಗಳ ಮೊಬಲಗಿನ ಡಿ.ಡಿಗಳು ನಗಧೀಕರಣವಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ. (ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:22/19-20 ದಿನಾಂಕ:31.07.2019 ರಲ್ಲಿ ವಿಚಾರಣೆ ನೀಡಲಾಗಿ ದಿನಾಂಕ:13.08.2019 ರಲ್ಲಿ ನೀಡಿರುವ ಅನುಸರಣಾ ವರದಿಯಂತೆ ಹಾಗೂ ಲಗತ್ತಿಸಿರುವ ಬ್ಯಾಂಕ್ ಸ್ಕ್ರೋಲ್‌ನ್ನು ಮರು ಪರಿಶೀಲಿಸಲಾಗಿ ರೂ.14,360/- ಮೊತ್ತದ ಡಿ.ಡಿಗಳು ಬೇರೆ ಬೇರೆ ದಿನಾಂಕಗಳಲ್ಲಿ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ). ಉಳಿಕೆ ರೂ.11,400/- ಮೊತ್ತದ ಡಿ.ಡಿಗಳು ತಾಂತ್ರಿಕ ಕಾರಣದಿಂದ ಜಮೆಯಾಗಿರುವುದಿಲ್ಲ. ಸದರಿ ಡಿ.ಡಿಗಳನ್ನು ನವೀಕರಿಸಿ (Revalidation) ಜಮೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದು, ಸದರಿ ಡಿ.ಡಿಗಳು ನವೀಕರಿಸಿ ಬ್ಯಾಂಕಿಗೆ ಜಮೆಯಾಗುವವರೆಗೆ **ರೂ.11,400/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ** ಹಾಗೂ ರೂ.4,460/- ಮೊಬಲಗಿನ ಡಿ.ಡಿಗಳು ಕೆಲವು ನ್ಯೂನ್ಯತೆಗಳಿಂದ ಸ್ವೀಕರಿಸದೆ ಸಂಬಂಧಿಸಿದ ವಿಭಾಗಕ್ಕೆ ವಾಪಸ್ಸಾಗಿದ್ದು, ವಾಪಸ್ಸಾದ ಡಿ.ಡಿಗಳನ್ನು |

| | |
|---|---|
| | ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಿಸಿ ಬ್ಯಾಂಕ್ ಖಾತೆಗೆ ಜಮೆ ಮಾಡುವವರೆಗೆ **ರೂ.4,460/–ಗಳನ್ನು ವಸೂಲಾತಿಗೆ** ಸೂಚಿಸಲಾಗಿದೆ. ಡಿ.ಡಿಗಳ ವಿವರಗಳನ್ನು **ಅನುಬಂಧ – 10ರಲ್ಲಿ** ಲಗತ್ತಿಸಿದೆ. |
| | ಉತ್ತರ |
| | 2017–18 ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಿಂದ ಡಿ.ಡಿ.ಗಳನ್ನು ಹಣಕಾಸು ವಿಭಾಗದಲ್ಲಿ ಸ್ವೀಕರಿಸಿ, ವಿ.ವಿ. ಖಾತೆಯಾದ SBI, Manasaganothri Branch, KSOU A/C No. 54035420128 ಗೆ ಜಮೆ ಮಾಡಲು ಸಲ್ಲಿಸಿದ್ದು. ವಿಚಾರಣಾ ಪತ್ರದಲ್ಲಿ ಅಡಕಗೊಳೀಸಿರುವ ಅನುಬಂಧದದಲ್ಲಿರುವ ಜಮೆಯಾಗದಿರುವ ಡಿ.ಡಿ.ಗಳ ಬಗ್ಗೆ ಸದರಿ ಬ್ಯಾಂಕಿಗೆ ಮಾಹಿತಿ ಕೋರಿದ ಹಿನ್ನೆಲೆಯಲ್ಲಿ, ಬ್ಯಾಂಕಿನವರು ಜಮೆಯಾಗದಿರುವ ಒಟ್ಟು ಡಿ.ಡಿ.ಗಳ ಮೊತ್ತ ರೂ.29,020/– ಗಳಲ್ಲಿ ರೂ.14,360/– ಗಳು ಜಮೆಯಾಗಿದ್ದು ಉಳಿಕೆ ಡಿ.ಡಿ.ಗಳ ಮೊತ್ತ ರೂ.11,400/–ಗಳು ತಾಂತ್ರಿಕ ಕಾರಣಗಳಿಂದ ಜಮೆಯಾಗಿರುವುದಿಲ್ಲ. ಸದರಿ ಡಿ.ಡಿ.ಗಳನ್ನು ನವೀಕರಿಸಿ (Revalidation) ಜಮೆ ಮಾಡಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. D.D.No. 441637 Rs. 1060/-, D.D.No. 116030 Rs. 2000/- 549328 Rs. 100/-. 549327 Rs. 100/- Total Rs. 3260/- ಮೊತ್ತದ ಡಿ.ಡಿ.ಗಳಲ್ಲಿ ನ್ಯೂನತೆಗಳಿದ್ದರಿಂದ ವಾಪಸ್ಸು ಸಂಬಂಧಿಸಿದ ವಿಭಾಗಕ್ಕೆ ನೀಡಲಾಗಿದೆ. ಮುಂದುವರೆದು 50200015842381 ಮೊತ್ತದ ಡಿ.ಡಿ.ಗಳಲ್ಲಿ ನ್ಯೂನತೆಗಳಿದ್ದರಿಂದ ವಾಪಸ್ಸು ಸಂಬಂಧಿಸಿದ ವಿಭಾಗಕ್ಕೆ ನೀಡಲಾಗಿದೆ. ಮುಂದುವರೆದು 50200015842391 ಗೆ ಜಮೆ ಮಾಡಲು ಸಲ್ಲಿಸಿದ್ದ ಡಿ.ಡಿ.ಗಳಲ್ಲಿ (D.D. No. 003925 and 003882 Rs. 600+ 600 = 1200/-) ಅವಧಿ ಮುಗಿದ ಕಾರಣ ಬ್ಯಾಕಿನವರು ಅಂಚೆ ಮೂಲಕ ವಾಪಸ್ಸು ಕಳುಹಿಸಿದ್ದು, ಸದರಿ ಡಿ.ಡಿ.ಗಳನ್ನು ಪರೀಕ್ಷಾಂಗ ವಿಭಾಗಕ್ಕೆ ವಾಪಸ್ಸು ನೀಡಿ, ಸಂಬಂಧಿಸಿದವರಿಂದ ಹೊಸ ಡಿ.ಡಿ./ / Revalidation D.D ಪಡೆದು ಸಲ್ಲಿಸಲು ತಿಳಿಸಿ ಪತ್ರ ಬರೆಯಲಾಗಿದೆ. ಆದ್ದರಿಂದ ಮೇಲಿನ ಅಂಶಗಳನ್ನು ಪರಿಶೀಲಿಸಿ ಸದರಿ ಕಂಡಿಕೆಯನ್ನು ಕೈಬಿಡಬೇಕೆಂದು ಕೋರಿದೆ. |
| | **ವಿವರ** |
| 31 | **31. ಪರೀಕ್ಷಾ ವಿಭಾಗದಲ್ಲಿ ಸ್ವೀಕೃತಿಗೊಂಡಿರುವ ವಿವಿಧ ಶುಲ್ಕಗಳ ಡಿ.ಸಿ.ಬಿ ವಹಿಯನ್ನು ಹಾಜರುಪಡಿಸದಿರುವುದು ಹಾಗೂ ಸ್ವೀಕೃತವಾದ ಶುಲ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸದಿರುವುದು :–**<br>2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಪರೀಕ್ಷಾ ನಿಧಿ ಸ್ವೀಕೃತಿ ಸಂಬಂಧ ವಿವಿಧ ಶೀರ್ಷಿಕೆಗಳಡಿಯಲ್ಲಿ ಒಟ್ಟು ರೂ.72,58,857/–ಗಳು ವಿದ್ಯಾರ್ಥಿಗಳಿಂದ ಸ್ವೀಕೃತಿಗೊಂಡಿದ್ದು ಶುಲ್ಕಗಳನ್ನು ರಶೀದಿ ಪುಸ್ತಕ, ಡಿ.ಡಿ ಹಾಗೂ ಬ್ಯಾಂಕ್ ಚಲನ್ (ನೇರವಾಗಿ ಬ್ಯಾಂಕ್‌ಗೆ ಜಮೆ ಮಾಡುವ) ಮೂಲಕ ಪಡೆಯಲಾಗಿದ್ದು, ಸ್ವೀಕೃತಿಗೊಂಡಿರುವ ಮೊತ್ತಕ್ಕೆ ಪರೀಕ್ಷಾ ವಿಭಾಗದಲ್ಲಿ ನಿರ್ವಹಿಸಿರುವ ಡಿ.ಸಿ.ಬಿ ವಹಿ ಹಾಗೂ ಬ್ಯಾಂಕ್ ಚಲನ್‌ಗಳಿಂದ ಸ್ವೀಕೃತವಾದ ಶುಲ್ಕಗಳನ್ನು ಮಾಹೆವಾರು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸಿರುವ ಕುರಿತು (reconciliation) ವಿವರ ಲಭ್ಯವಿರುವುದಿಲ್ಲ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:28/19–20 ದಿನಾಂಕ:19.08.2019 ರಂದು ಪೂರಕ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಿದ್ಯಾರ್ಥಿಗಳಿಂದ ಸ್ವೀಕರಿಸಿರುವ ಶುಲ್ಕಕ್ಕೆ ಡಿ.ಸಿ.ಬಿ |

| | |
|---|---|
| | ವಹಿಯನ್ನು ನಿರ್ವಹಿಸಿಲ್ಲದಿರುವುದರಿಂದ ಪರೀಕ್ಷಾ ಖಾತೆಗೆ ಸ್ವೀಕೃತಿಗೊಳ್ಳಬೇಕಾದ ಮೊತ್ತವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸ್ವೀಕೃತಿಗೊಂಡಿರುವ ಒಟ್ಟು ಮೊತ್ತ **ರೂ.72,58,857/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಲೆಕ್ಕ ಶೀರ್ಷಿಕೆವಾರು ಸ್ವೀಕೃತಿಗೊಂಡಿರುವ ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ಕೋಡ್ | ಲೆಕ್ಕ ಶೀರ್ಷಿಕೆ | ಸ್ವೀಕೃತಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 158 | ಮರು ಮೌಲ್ಯಮಾಪನ ಮತ್ತು ಮರು ಎಣಿಕೆ ಶುಲ್ಕ | 6,59,050 |
| 2 | 159 | ರ್ಯಾಂಕ್/ಪ್ರಾವಿಷನಲ್ ಪ್ರಮಾಣ ಪತ್ರ | 17,54,070 |
| 3 | 160 | ಘಟಿಕೋತ್ಸವ ಶುಲ್ಕ | 23,20,544 |
| 4 | 370 | ಸಹಭಾಗಿತ್ವ ಸಂಸ್ಥೆಗಳಿಂದ ಪರೀಕ್ಷಾ ಶುಲ್ಕ | 7,45,304 |
| 5 | 156 | ಇತರೆ ಜಮೆಗಳು | 17,79,889 |
| **ಒಟ್ಟು ಸ್ವೀಕೃತಿ** | | | **72,58,857** |

| | |
|---|---|
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 32 | **32. ಪರೀಕ್ಷಾ ಖಾತೆ–09 ರಲ್ಲಿ ಅಂಚೆ ವೆಚ್ಚಕ್ಕೆ ಸಂಬಂಧಿಸಿದಂತೆ ಸ್ವೀಕೃತಿ ಮತ್ತು ರವಾನೆ ದಾಖಲಾತಿ ವಹಿಯನ್ನು ನಿರ್ವಹಿಸದಿರುವುದು :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿನ ಪರೀಕ್ಷಾ ವಿಭಾಗದ ಲೆಕ್ಕಶೀರ್ಷಿಕೆಯಲ್ಲಿ 2017–18ನೇ ಸಾಲಿಗೆ ಒಟ್ಟು ರೂ.11,35,257/– ಗಳ ಅಂಚೆ ವೆಚ್ಚ ಭರಿಸಲಾಗಿದ್ದು, ಸಾದಿಲ್ವಾರು ವೆಚ್ಚ ಕೈಪಿಡಿ – 1958 ಅಧ್ಯಾಯ 2ರ ವಿಶೇಷ ನಿಯಮಾವಳಿಗಳು ನಿಯಮ 43 ರಂತೆ ಸ್ವೀಕೃತಿ ಮತ್ತು ರವಾನೆ ಶಾಖೆಯ ಪ್ರತಿದಿನದ ಅಂಚೆ ವೆಚ್ಚವನ್ನು ವಹಿಯಲ್ಲಿ ದಾಖಲಿಸಿ ನಿರ್ವಹಿಸಬೇಕಾಗಿರುತ್ತದೆ. ಈ ಸಂಬಂಧ ವಿಚಾರಣೆ ಪತ್ರ ಸಂಖ್ಯೆ: 27/19–20 ದಿನಾಂಕ:19.08.2019 ರಲ್ಲಿ ಅಂಚೆ ವೆಚ್ಚದ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿದ್ದು, ಯಾವುದೇ ಸ್ವೀಕೃತಿ ಮತ್ತು ರವಾನೆ ದಾಖಲಾತಿ ವಹಿಯನ್ನು ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ವಿಷಯನಿರ್ವಾಹಕರು ಸೂಕ್ತ ಕ್ರಮ ಕೈಗೊಂಡು ಸ್ವೀಕೃತಿ ಮತ್ತು ರವಾನೆ ವಹಿಯನ್ನು ಪ್ರತಿ ಮಾಹೆ ಘೋಷ್ವಾರೆಯೊಂದಿಗೆ ದೃಢೀಕರಿಸಿ ನಿರ್ವಹಿಸಲು ಸೂಚಿಸಿದೆ. |
| | ಉತ್ತರ |
| | ಅಂಚೆ ವೆಚ್ಚಕ್ಕೆ ಸಂಬಂಧಿಸಿದಂತೆ ಸ್ವೀಕೃತಿ ಮತ್ತು ರವಾನೆ ವಹಿಯನ್ನು ಪ್ರತಿ ಮಾಹೆ ಘೋಷ್ವಾರೆಯೊಂದಿಗೆ ದೃಢೀಕರಿಸಿ ನಿರ್ವಹಿಸಲು ಕ್ರಮವಹಿಸಲಾಗುವುದು. |
| | **ವಿವರ** |
| 33 | **33. ಪರೀಕ್ಷಾ ನಿಧಿ ಖಾತೆಯ (09) ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ :–**<br>2017–18ನೇ ಸಾಲಿನ ಲೆಕ್ಕಪರಿಶೋಧನೆ ಪ್ರಾರಂಭಿಕ ದಿನಾಂಕ:04.07.2019 ರಂದು ಪರೀಕ್ಷಾ ನಿಧಿ ಖಾತೆಯ (09) ರಶೀದಿ ಪುಸ್ತಕ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 189 ರಶೀದಿ ಪುಸ್ತಕಗಳು ಉಪಯೋಗಿಸದೆ ಖಾಲಿ ಉಳಿದಿರುತ್ತದೆ. ಹಾಗೂ ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ, ವಿವರಗಳು ಕೆಳಕಂಡಂತಿದೆ. |

| ಕ್ರ.ಸಂ | ರಶೀದಿ ಪುಸ್ತಕಗಳ ಸಂಖ್ಯೆ | | ಒಟ್ಟು |
|---|---|---|---|
| | ಇಂದ | ವರೆಗೆ | |
| 1 | 256 | 290 | 35 |
| 2 | 331 | 345 | 15 |
| 3 | 662 | 800 | 139 |
| | | ಒಟ್ಟು | **189** |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

34 **34. 2017–18ನೇ ಸಾಲಿಗೆ ಪರೀಕ್ಷಾ ನಿಧಿ ಖಾತೆಯಲ್ಲಿ ಉಪಯೋಗಿಸಿರುವ ರಶೀದಿ ಪುಸ್ತಕಗಳ ಪರಿಶೀಲನೆ :–**

2017–18ನೇ ಸಾಲಿನ ಪರೀಕ್ಷಾ ನಿಧಿ ಖಾತೆಯ (09) ರಶೀದಿ ಪುಸ್ತಕಗಳನ್ನು ಉಪಯೋಗಿಸಿಕೊಂಡು ವಿವಿಧ ಶುಲ್ಕಗಳನ್ನು ವಸೂಲಿಸಿದ್ದು, ಪ್ರತಿ ರಶೀದಿ ಪುಸ್ತಕದ ಸ್ವೀಕೃತಿಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಪುಸ್ತಕ ಮತ್ತು ದಿನಾಂಕ | | ವಸೂಲಿಸಿದ ಒಟ್ಟು ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|---|
| | | ಇಂದ | ವರೆಗೆ | | |
| 1 | 246 | 012294/01.04.2017 | 012300/04.04.2017 | 7,050 | ಹಿಂದಿನ ಭಾಗಶಃ ಪರಿಶೀಲಿಸಿದ ರಶೀದಿ ಪುಸ್ತಕವನ್ನು ಈ ಸಾಲಿನಲ್ಲಿ ಪೂರ್ಣ ಪರಿಶೀಲಿಸಿದೆ. |
| 2 | 247 | 012301/04.04.2017 | 012350/24.06.2017 | 44,350 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 3 | 248 | 012351/24.06.2017 | 012400/28.10.2017 | 42,200 | |
| 4 | 249 | 012401/28.10.2017 | 012430/24.03.2018 | 25,150 | 2017–18ನೇ ಸಾಲಿಗೆ ಭಾಗಶಃ ಪರಿಶೀಲಿಸಿದೆ. |
| | | | ಒಟ್ಟು | **1,18,750** | |

ಮೇಲ್ಕಂಡ ರಶೀದಿ ಪುಸ್ತಕಗಳನ್ನು ಬಳಸಿಕೊಂಡು ಒಟ್ಟು ರೂ.1,18,750/–ಗಳನ್ನು ವಸೂಲಿಸಿದ್ದು, ಪರೀಕ್ಷಾ ನಿಧಿ ಖಾತೆ ಸಂಖ್ಯೆ:54035420128ಗೆ ಜಮೆ ಮಾಡಲಾಗಿದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

35 **35. ಖಾಲಿ ಅಂಕಪಟ್ಟಿಗಳ ಲೆಕ್ಕವನ್ನು I.E.M ಸಂಸ್ಥೆಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ನೀಡದೆ ಇರುವುದರ ಬಗ್ಗೆ :–**

2017–18ನೇ ಸಾಲಿನವರೆವಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು IEM ಸಂಸ್ಥೆಗೆ ಅಂಕಪಟ್ಟಿ ಮುದ್ರಣ ಕಾರ್ಯಕ್ಕಾಗಿ ಖಾಲಿ ಅಂಕಪಟ್ಟಿ ಕ್ರ.ಸಂ M 140210001 ರಿಂದ M 140510000 ರವರೆವಿಗೆ ಮೂರು ಲಕ್ಷ ಖಾಲಿ ಅಂಕಪಟ್ಟಿಗಳನ್ನು IEM ಗೆ ನೀಡಲಾಗಿತ್ತು. ಆದರೆ 2017–18ನೇ ಸಾಲಿನಲ್ಲಿ ಮೇಲ್ಕಂಡಂತೆ ನೀಡಿರುವ ಖಾಲಿ ಅಂಕಪಟ್ಟಿಗಳ ಮುದ್ರಣ ಲೆಕ್ಕವನ್ನು ನೀಡುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ,

| | |
|---|---|
| | ಕುಲಸಚಿವರು (ಪರೀಕ್ಷಾಂಗ) ರವರು ಪತ್ರ ಸಂಖ್ಯೆ:(1) KSOU/EB/Stores-5/IEM/2012-13 ದಿನಾಂಕ:03.07.2017 (2) KSORU/EB/Stores-5/IEM/ ದಿನಾಂಕ:02.03.2018 (3) KSOU/EB/Stores-5/IEM ದಿನಾಂಕ: 11.03.2018ರಲ್ಲಿ IEM ಸಂಸ್ಥೆಯವರನ್ನು ಕೋರಿರುತ್ತಾರೆ. ಈ ಪತ್ರಗಳಲ್ಲಿ IEM ಸಂಸ್ಥೆಯವರು KSOU ಇಂದ ಪಡೆದ ಖಾಲಿ ಅಂಕಪಟ್ಟಿಗಳು (ಮೂರು ಲಕ್ಷ) ಇದರಲ್ಲಿ ಎಷ್ಟು ಸಂಖ್ಯೆ ಅಂಕಪಟ್ಟಿಗಳನ್ನು ಉಪಯೋಗಿಸಲಾಯಿತು? ಎಷ್ಟು ಅಂಕಪಟ್ಟಿಗಳು ಅನುಪಯುಕ್ತವಾದವು? ಎಷ್ಟು ಅಂಕಪಟ್ಟಿಗಳನ್ನು ಉಪಯೋಗಿಸಿರುವುದಿಲ್ಲ? ಎಷ್ಟು ಅಂಕಪಟ್ಟಿಗಳು ದಾಸ್ತಾನು ಲೆಕ್ಕದಲ್ಲಿ ಉಳಿದಿದೆ ಎಂಬುದನ್ನು ಪೂರ್ಣವಾಗಿ ಸಲ್ಲಿಸಲು KSOU ಯಿಂದ ಸೂಚಿಸಿದ್ದರೂ ಸಹ ಇದುವರೆವಿಗೆ IEM ಸಂಸ್ಥೆಯವರು ಅಂಕಪಟ್ಟಿ ಮುದ್ರಣ (ಮೂರು ಲಕ್ಷ) ವಿವರ ಲೆಕ್ಕವನ್ನು ಸಲ್ಲಿಸಿರುವುದಿಲ್ಲ ಇದರಿಂದಾಗಿ IEM ಸಂಸ್ಥೆಯವರು ಸದರಿ ಖಾಲಿ ಅಂಕಪಟ್ಟಿಗಳ ಲೆಕ್ಕವನ್ನು ಸಲ್ಲಿಸದೆ ಇರುವುದು ಸಂಶಯತ್ಮಾಕವಾಗಿದೆ. ಇದರ ಬಗ್ಗೆ ವಿವರಣೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:44/ದಿನಾಂಕ:26.08.2019ರಲ್ಲಿ ಸಲ್ಲಿಸಿದ್ದರೂ ಸಹ ಯಾವುದೇ ಉತ್ತರ ಸಲ್ಲಿಸಿರುವುದಿಲ್ಲ ಆದ್ದರಿಂದ ಸದರಿ ವಿಚಾರವನ್ನು ಪ್ರಥಮ ಆದ್ಯತೆ ನೀಡಿ ಜರೂರು ಆಡಳಿತಾತ್ಮಕ ಕ್ರಮಜರುಗಿಸಿ ಈ ಬಗ್ಗೆ ವರದಿ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಐ.ಇ.ಎಂ. ಸಂಸ್ಥೆ ಮುಂಬಯಿ, ಇವರು ಮುದ್ರಣ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಬೇಡಿಕೆ ಪಟ್ಟಿಯನ್ನು ಪಡೆದು (ಮೇಲಾಧಿಕಾರಿಗಳ ಒಪ್ಪಿಗೆ ಪಡೆದು) 1. ದಿನಾಂಕ 04.05.2015 ರಂದು ಪುಟ ಸಂಖ್ಯೆ 3ರ ಕ್ರಮ ಸಂಖ್ಯೆ 19ರಲ್ಲಿ ಮೂರು ಲಕ್ಷ (3ಲಕ್ಷ). 2. ದಿನಾಂಕ 24.07.2015 ರಂದು ಪುಟ ಸಂಖ್ಯೆ 3ರ ಕ್ರಮ ಸಂಖ್ಯೆ 28ರಲ್ಲಿ ಮೂರು ಲಕ್ಷ (3ಲಕ್ಷ). 3. ದಿನಾಂಕ 16.12.2015 ರಂದು ಪುಟ ಸಂಖ್ಯೆ 3ರ ಕ್ರಮ ಸಂಖ್ಯೆ 19ರಲ್ಲಿ ಮೂರು ಲಕ್ಷದ ಎಂಭತ್ತೆಂಟು ಸಾವಿರ (3,88,000). ಒಟ್ಟು 9,88,000 (ಒಂಭತ್ತು ಲಕ್ಷದ ಎಂಭತ್ತೆಂಟು ಸಾವಿರ ಮಾತ್ರ) ಖಾಲಿ ಅಂಕಪಟ್ಟಿಗಳನ್ನು ಪಡೆದಿರುತ್ತಾರೆ. ಒಟ್ಟು 9,88,000 (ಒಂಭತ್ತು ಲಕ್ಷದ ಎಂಭತ್ತೆಂಟು ಸಾವಿರ ಮಾತ್ರ) ಖಾಲಿ ಅಂಕಪಟ್ಟಿಗಳಲ್ಲಿ ಉಪಯೋಗಿಸಿದ ಸಂಖ್ಯೆ ಅನುಪಯುಕ್ತ ಬಳಕೆ ಬಗೆಗೆ ಈ ಕೆಳಕಂಡಂತೆ ಮಾಹಿತಿ ನೀಡಿರುತ್ತಾರೆ.<br><table><tr><th>Si.No</th><th>Description</th><th>Count</th></tr><tr><td>1</td><td>Marks card received IEM in 2015-16</td><td>9,88,000</td></tr><tr><td>2</td><td>Total Marks card printing in 2015 to 2017</td><td>6,13,930</td></tr><tr><td>3</td><td>Pending Marks card stock</td><td>2,64,359</td></tr><tr><td>4</td><td>Correction Marks Card</td><td>77,890</td></tr><tr><td>5</td><td>Canselled Marks card</td><td>31,821</td></tr></table>ಈ ಮೇಲೆ ತಿಳಿಸಿರುವ ಒಟ್ಟು 9,88,000 (ಒಂಭತ್ತು ಲಕ್ಷದ ಎಂಭತ್ತೆಂಟು ಸಾವಿರ ಮಾತ್ರ) ಖಾಲಿ ಅಂಕಪಟ್ಟಿಗಳಲ್ಲಿ ಮಾಹಿತಿಯಲ್ಲಿ 03 ಲಕ್ಷ ಅಂಕಪಟ್ಟಗಳನ್ನು ಒಳಗೊಂಡಂತೆ ಐ.ಇ.ಎಂ. ಸಂಸ್ಥೆಯವರು ಮಾಹಿತಿ ನೀಡಿರುತ್ತಾರೆ. ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಪರಿಶೀಲಿಸಿ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |

| | ವಿವರ |
|---|---|
| 36 | **36. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹ ಹಾಗೂ ಹಾಸ್ಟೆಲ್‌ನಲ್ಲಿ ಉಪಯೋಗಿಸಿರುವ ರಶೀದಿ ಪುಸ್ತಕದ ಪರಿಶೀಲನೆ:–** |

ಎ) 2017–18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಒಟ್ಟು 23 ರಶೀದಿ ಪುಸ್ತಕಗಳನ್ನು ಬಳಸಲಾಗಿದ್ದು ಒಟ್ಟು ರೂ.19,20,425/–ಗಳು ವಸೂಲಿಯಾಗಿದ್ದು, (ಬ್ಯಾಂಕ್ ಕಮಿಷನ್) ಡೆಬಿಟ್ ಕಾರ್ಡ್‌ನಿಂದ ಸ್ವೀಕೃತಗೊಂಡಿರುವ ಮೊತ್ತಕ್ಕೆ ಬ್ಯಾಂಕ್ ಚಾರ್ಜ್‌ಸ್‌ನ್ನು ರೂ.623/–ಗಳನ್ನು ಹೊರತುಪಡಿಸಿ ರೂ.19,19,802/–ನ್ನು ಖಾತೆ ಸಂಖ್ಯೆ:64068987296 ಗೆ ಜಮೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ ಮತ್ತು ದಿನಾಂಕ | | ವಸೂಲಿಸಿದ ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|---|
| | | ಯಿಂದ | ವರೆಗೆ | | |
| 1 | 1242 | 087062/3.4.17 | 087100/10.4.17 | 65,750 | 2016–17ನೇ ಸಾಲಿನ ಭಾಗಶಃ ಪರಿಶೀಲಿಸಿದ ಪುಸ್ತಕವನ್ನು 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 2 | 1243 | 087101/11.4.17 | 087150/21.4.17 | 83,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 3 | 1244 | 087151/24.4.17 | 087200/5.5.17 | 66,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 4 | 1245 | 087201/5.5.17 | 087250/18.5.17 | 76,500 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 5 | 1246 | 087251/18.5.17 | 087300/28.5.17 | 94,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 6 | 1247 | 087301/29.5.17 | 087350/6.6.17 | 65,750 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 7 | 1248 | 087351/6.6.17 | 087400/15.6.17 | 44,500 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 8 | 1249 | 087401/17.6.17 | 087450/4.7.17 | 64,500 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 9 | 1250 | 087451/4.7.17 | 087500/25.7.17 | 1,25,000 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 10 | 1251 | 087501/25.7.17 | 087550/18.8.17 | 60,750 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 11 | 1252 | 087551/20.8.17 | 087600/5.9.17 | 69,750 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 12 | 1253 | 087601/6.9.17 | 087650/2.10.17 | 1,15,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 13 | 1254 | 087651/2.10.17 | 087700/15.10.17 | 55,500 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 14 | 1255 | 087701/16.10.17 | 087750/6.11.17 | 76,000 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 15 | 1256 | 087751/6.11.17 | 087800/19.11.17 | 51,500 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 16 | 1257 | 087801/20.11.17 | 087850/7.12.17 | 1,94,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 17 | 1258 | 087851/7.12.17 | 087900/25.12.17 | 81,150 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 18 | 1259 | 087901/25.12.17 | 087950/7.1.18 | 1,35,250 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 19 | 1260 | 087951/7.1.18 | 088000/21.1.18 | 66,750 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 20 | 1261 | 088001/21.1.18 | 088050/5.2.18 | 62,000 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 21 | 1262 | 088051/6.2.18 | 088100/24.2.18 | 1,16,075 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 22 | 1263 | 088101/24.2.18 | 088150/15.3.18 | 53,750 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 23 | 1264 | 088151/15.3.18 | 088200/30.3.18 | 96,700 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| | | | **ಒಟ್ಟು ಮೊತ್ತ** | **19,20,425** | |

ಬಿ) 2017–18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿನಿಲಯಗಳ ಬಾಬ್ತು ಬಾಡಿಗೆ ವಸೂಲಿಸಲು ಒಟ್ಟು 6 ರಶೀದಿ ಪುಸ್ತಕಗಳನ್ನು ಬಳಸಲಾಗಿದ್ದು, ಸದರಿ ಸಾಲಿನಲ್ಲಿ **ಒಟ್ಟು ರೂ.2,39,950/–ಗಳು ವಸೂಲಾಗಿದ್ದು**, ಬ್ಯಾಂಕ್ ಖಾತೆ ಸಂಖ್ಯೆ: 64068987296 ಗೆ ಜಮೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ ಮತ್ತು ದಿನಾಂಕ | | ವಸೂಲಿಸಿದ ಮೊತ್ತ (ರೂ.ಗಳಲ್ಲಿ) | ಷರಾ |
|---|---|---|---|---|---|
| | | ಯಿಂದ | ವರೆಗೆ | | |
| 1 | 1234 | 086680/3.4.17 | 086700/20.4.17 | 11,540 | 2016–17ನೇ ಸಾಲಿನ ಭಾಗಶಃ ಪರಿಶೀಲಿಸಿದ ಪುಸ್ತಕವನ್ನು 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 2 | 1236 | 086751/21.4.17 | 086800/11.5.17 | 11,150 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 3 | 1237 | 086801/14.5.17 | 086850/15.6.17 | 9,970 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 4 | 1238 | 086851/15.6.17 | 086900/2.8.17 | 10,970 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 5 | 1239 | 086901/7.8.17 | 086950/27.11.17 | 31,170 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| 6 | 1240 | 086951/30.11.17 | 08700/26.3.18 | 1,65,150 | 2017–18ನೇ ಸಾಲಿಗೆ ಪೂರ್ಣ ಪರಿಶೀಲಿಸಿದೆ. |
| ಒಟ್ಟು ಮೊತ್ತ | | | | **2,39,950** | |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

ವಿವರ

37 **37. ಅತಿಥಿಗೃಹದ ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ ಕುರಿತು :–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದ ರಶೀದಿ ಹಾಗೂ ಹಾಸ್ಟೆಲ್ (ವಿದ್ಯಾರ್ಥಿ ನಿಲಯದ) ರಶೀದಿ ಪುಸ್ತಕಗಳ ದಾಸ್ತಾನನ್ನು ದಿನಾಂಕ:14.08.2019 ರಂದು ಪರಿಶೀಲಿಸಲಾಗಿದ್ದು. ಖಾಲಿ ಉಳಿದಿರುವ ರಶೀದಿ ಪುಸ್ತಕಗಳ ವಿವರ ದಾಸ್ತಾನಿನಲ್ಲಿ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ರಶೀದಿ ಪುಸ್ತಕಗಳ ಸಂಖ್ಯೆ | ರಶೀದಿ ಸಂಖ್ಯೆ | ಖಾಲಿ ಉಳಿದಿರುವ ರಶೀದಿ ಪುಸ್ತಕಗಳ ಸಂಖ್ಯೆ |
|---|---|---|---|
| 1 | 1355 ರಿಂದ 1358 | 0192701 ರಿಂದ 092900 | ಅತಿಥಿ ಗೃಹದ 04 ರಶೀದಿ ಪುಸ್ತಗಳು ಖಾಲಿ ಉಳಿದಿರುತ್ತವೆ. |
| 2 | 1366 ರಿಂದ 1370 | 093251 ರಿಂದ 093500 | ವಿದ್ಯಾರ್ಥಿನಿಲಯದ 05 ರಶೀದಿ ಪುಸ್ತಕಗಳು ಖಾಲಿ ಉಳಿದಿರುತ್ತವೆ. |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

ವಿವರ

38 **38. ಸಿದ್ಧಪಾಠ ಮುದ್ರಣದ ದಾಸ್ತಾನು ವಿತರಣೆ ಹಾಗೂ ಟೆಂಡರ್ ಕರೆಯದೆ ಇರುವುದು :–**

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ವೋಚರ್‌ಗಳು, ಕಡತಗಳು, ದಾಖಲೆಗಳನ್ನು ಪರಿಶೀಲಿಸಿದಾಗ ರೂ.7,10,080/–ಗಳನ್ನು ಮೆ॥ Pragya Publication Pvt Ltd, Mathura ರವರಿಗೆ ಸಿದ್ಧಪಾಠಗಳನ್ನು ಮುದ್ರಿಸಿ ಸರಬರಾಜು ಮಾಡಿರುವುದಕ್ಕೆ ಪಾವತಿಸಲಾಗಿರುತ್ತದೆ. ಇದಲ್ಲದೆ ರೂ.2,86,575/–ಗಳನ್ನು ಸಿದ್ಧಪಾಠಗಳ ಮುದ್ರಣಕ್ಕೆ ಕೊಟೇಷನ್ ಕರೆದು ವಿವಿಧ ಏಜೆನ್ಸಿಗಳಿಗೆ ಪಾವತಿಸಲಾಗಿದೆ. ಪಾವತಿಸಿರುವ ಮೊತ್ತವು ಕೆ.ಟಿ.ಪಿ.ಪಿ ನಿಯಮ 1999 ಮತ್ತು 2000 ರಂತೆ 5.00 ಲಕ್ಷಕ್ಕಿಂತ ಹೆಚ್ಚಿದ್ದರೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಾಗಿರುತ್ತದೆ. ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಾಗಿದ್ದರೆ ಟೆಂಡರ್ ಕರೆಯಬೇಕಾಗಿರುತ್ತದೆ. ಆದರೆ ಟೆಂಡರ್ ಕರೆಯದೆ ಕೆ.ಟಿ.ಪಿ.ಪಿ ನಿಯಮ 1999–2000 ರನ್ನು ಉಲ್ಲಂಘಿಸಿ ಮುದ್ರಣ ಕಾರ್ಯಕ್ಕೆ ಹಣ ಪಾವತಿಸಲಾಗಿದೆ. ಪ್ರತಿ ವರ್ಷ Cost of printing Lessons ಗೆ Tender ಕರೆಯಬೇಕಾಗಿದ್ದು, ಈ ಬಗ್ಗೆ BOM ಸಭೆಯಲ್ಲಿ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಆದರೆ ಅನುಮತಿ

| | |
|---|---|
| | ಪಡೆದಿರುವುದಿಲ್ಲ. ಈ ರೀತಿ ಟೆಂಡರ್ ಕರೆಯದೇ ಹಾಗೂ ಉಳಿಕೆ ಇರುವ ಸಿದ್ಧಪಾಠಗಳಿಗೆ ಲೆಕ್ಕ ನಿರ್ವಹಿಸದೇ ಹೊಸದಾಗಿ ಸಿದ್ಧಪಾಠಗಳನ್ನು ಮುದ್ರಿಸಿ ಅದಕ್ಕೆ ಹಣ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ.<br>ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಒದಗಿಸುವಂತೆ ವಿಚಾರಣೆ ಪತ್ರ ಸಂಖ್ಯೆ:54/03.09.2019 ರಲ್ಲಿ ನೀಡಲಾಗಿದ್ದು, ವಿಚಾರಣೆ ಪತ್ರಕ್ಕೆ ವಿವರಣೆಯನ್ನು ಸಮರ್ಪಕವಾಗಿ ನೀಡದೆ ಹಾಗೂ 2017–18ನೇ ಸಾಲಿನಲ್ಲಿ ಶೈಕ್ಷಣಿಕ ಪ್ರವೇಶಾತಿ ಇಲ್ಲದೆ ಹಾಗೂ ಭೌತಿಕ ಪ್ರಗತಿಯಿಲ್ಲದಿದ್ದರೂ ಹಾಗೂ ಹಿಂದಿನ ವರ್ಷದ ಸಿದ್ಧಪಾಠಗಳು ದಾಸ್ತಾನಿದ್ದರೂ ಹೊಸದಾಗಿ ಮುದ್ರಣ ಮಾಡಿಸಿ ಸರಬರಾಜು ಮಾಡಿಸಿಕೊಂಡಿರುವುದು ಕ್ರಮಬದ್ಧವಾಗಿರುವುದಿಲ್ಲ. ಈ ಬಗ್ಗೆ ಸೂಕ್ತ ಅನುಪಾಲನಾ ವರದಿ ಸಲ್ಲಿಸುವವರೆಗೆ ಸಿದ್ಧಪಾಠಗಳಿಗಾಗಿ 2017–18ರಲ್ಲಿ ಪಾವತಿಸಿರುವ ಮೊತ್ತ ರೂ. **9,96,655/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | 2017–18 ನೇ ಸಾಲಿನಲ್ಲಿ ಯಾವುದೇ ಮುದ್ರಣದ ಕೆಲಸ ನಿರ್ವಹಿಸಿರುವುದಿಲ್ಲ. ಸದರಿ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು/ ಪ್ರಾಧ್ಯಾಪಕರುಗಳಿಗೆ ಮಾತ್ರ ವಿತರಿಸಲಾಗಿದ್ದು, 2016–17 ನೇ ಸಾಲಿನ ಅಂತಿಮ ಶಿಲ್ಕಿನೊಂದಿಗೆ ಸದರಿ ಸಾಲಿನಲ್ಲಿ ವಿತರಿಸಿರುವ ವಿವರಗಳನ್ನು ವಿಭಾಗವಾರು ಹಾಗು ವಿಷಯವಾರು ವಿಂಗಡಿಸಿ ದಾಖಲಿಸಿರುವ ಕ್ರೋಢೀಕೃತ ದಾಸ್ತಾನು ವಿವರವನ್ನು ಲೆಕ್ಕತಪಾಸನೆಗೆ ಸಲ್ಲಿಸಲಾಗಿದೆ. 2017–18ನೇ ಸಾಲಿನಲ್ಲಿ ಯಾವುದೇ ಮುದ್ರಣಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೇ ಕೈಗೊಂಡಿರುವುದಿಲ್ಲ, 2014–15 ನೇ ಸಾಲಿನ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಸ್ಥಾಯಿ ಆದೇಶದಂತೆ ಟೆಂಡರ್ ಅವಧಿಯೊಳಗೆ ಮುದ್ರಿಸಿಕೊಳ್ಳಲಾಗಿರುತ್ತದೆ. 2017–18ನೇ ಸಾಲಿನಲ್ಲಿ ಯಾವುದೇ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪ್ರಕ್ರಿಯೆ ನಡೆಯದೆ ಇರುವ ಕಾರಣ ಸದರಿ ಸಾಲಿನಲ್ಲಿ ಅಧ್ಯಯನ ಸಾಮಗ್ರಿಗಳ ವಿತರಣೆ ನಡೆದಿರುವುದಿಲ್ಲ. 2017–18ನೇ ಸಾಲಿನಲ್ಲಿ ಸರ್ಕಾರದಿಂದ/ ಯುಜಿಸಿ ಯಿಂದ ಪ್ರವೇಶಾತಿ ಸಂಬಂಧ ಯಾವುದೇ ಅನುಮತಿ ಪತ್ರ ಬಂದಿರುವುದಿಲ್ಲ. ಸದರಿ ಸಾಲಿನಲ್ಲಿ ಯಾವುದೇ ಟೆಂಡರ್ ಪ್ರಕ್ರಿಯೇ ನಡೆಯದೆ ಇರುವುದರಿಂದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯುವ ಸಂದರ್ಭ ಇರಲಿಲ್ಲ. 2014–15ನೇ ಸಾಲಿನಲ್ಲಿ ಮುದ್ರಣ ಸಂಬಂಧ ಟೆಂಡರ್ ಆಹ್ವಾನಿಸಲಾಗಿದ್ದು ಅಂತಿಮವಾಗಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ಸ್ಥಾಯಿ ಆದೇಶ ಸಂಖ್ಯೆ:ಕರಾಮುವಿ/ಅಸಾವಿ/03–269/2014–15, ದಿನಾಂಕ:15.12.2015 ರನ್ವಯ ಸ್ಥಾಯಿ ಆದೇಶ ಹೊರಿಡಿಸಿದ ಒಂದು ವರ್ಷದ ಅವಧಿ ಅಂದರೆ ದಿನಾಂಕ : 14.12.2016 ರವರೆಗೆ ಚಾಲ್ತಿಯಲ್ಲಿ ಇದ್ದು ಈ ಸ್ಥಾಯಿ ಆದೇಶದನ್ವಯ ಕಾರ್ಯಾದೇಶ ಸಂಖ್ಯೆ : KSOU/SMS/4-398/2015-16, Dated: 25.05.2016 ರನ್ವಯ ಎಂ.ಬಿ.ಎ. ಅಧ್ಯಯನ ಸಾಮಗ್ರಿ ಮುದ್ರಣ ಕಾರ್ಯಾದೇಶ ನೀಡಲಾಗಿರುತ್ತದೆ.<br>ಸದರಿ ಮುದ್ರಕರು ಮುದ್ರಿಸಿ ಸರಬರಾಜು ಮಾಡಿದ ಅಧ್ಯಯನ ಸಾಮಗ್ರಿಗಳನ್ನು 2016–17ನೇ ಸಾಲಿನ ದಾಸ್ತಾನು ವಹಿ ಪುಟ ಸಂಖ್ಯೆ – 28 ರಲ್ಲಿ ಸದರಿ ಅಧ್ಯಯನ ಸಾಮಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಳ್ಳಲಾಗಿದೆ. ಮುದ್ರಣದ ನಂತರ ಮುದ್ರಕರು ದಿನಾಂಕ : 01.09.2016ರಲ್ಲಿ ಹುಂಡಿ ಸಲ್ಲಿಸಿದ್ದು ಸದರಿ ಹುಂಡಿಯನ್ನು ಪಾವತಿಸುವ ಸಂಬಂಧ ಅನುಮೋದನೆ ಕೋರಲಾಗಿ ಮುದ್ರಣದ ಅಧ್ಯಯನ ಸಾಮಗ್ರಿಗಳನ್ನು ಕಾಗದ ಗುಣಮಟ್ಟ ಪರಿಶೀಲನೆಯ ನಂತರ ಪಾವತಿಸುವಂತೆ ಸೂಚಿಸಿದ್ದು ದಿನಾಂಕ:18.07.2016 ರಂದು ನಡೆದ 27ನೇ ಕಾಗದ ಗುಣಮಟ್ಟದ ಆಂತರಿಕ |

| | |
|---|---|
| | ಸಮಿತಿ ಪರೀಕ್ಷೆಯ ಶಿಫಾರಸ್ಸಿನಂತೆ ಪಾವತಿಗೆ ಕ್ರಮವಹಿಸಲು ದಿನಾಂಕ : 05.11.2016 ರಂದು ನಡೆದ 141 ಹಾಗು ದಿನಾಂಕ:10.01.2017 ರಂದು ನಡೆದ 142ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿ ಬಂದ ನಂತರ ಹುಂಡಿ ಪಾವತಿಗೆ ಕ್ರಮವಹಿಸಲಾಗಿರುತ್ತದೆ. ಹಾಗಾಗಿ ಸದರಿ ಹುಂಡಿಯ ಮೊತ್ತವು 2017-18 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪಾವತಿಗೆ ಬಂದಿದ್ದು ಸದರಿ ಸಾಲಿನಲ್ಲಿ ಪಾವತಿಸಲಾಗಿದೆ. ಪಾವತಿ ಸಂಬಂಧ ಮೂಲ ಕಡತವನ್ನು ಪರಿಶೀಲನೆಗಾಗಿ ಲೆಕ್ಕತಪಾಸಣೆ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಬೇಕಾಗಿ ಈ ಮೂಲಕ ಕೋರಲಾಗಿದೆ. |
| | ವಿವರ |
| 39 | **38 (ಎ) ಸಿದ್ಧಪಾಠಗಳ ದಾಸ್ತಾನು ವಹಿಯಲ್ಲಿ ವ್ಯತ್ಯಾಸದ ಬಗ್ಗೆ :-**<br>2016-17ನೇ ಸಾಲಿನ ಆಡಿಟ್ ವರದಿಯಲ್ಲಿ ಸಿದ್ಧಪಾಠಗಳ ಉಳಿಕೆ 11,17,370 ದಾಸ್ತಾನು ಇದೆ ಎಂದು ನಮೂದಿಸಲಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದವರು ಹಾಜರುಪಡಿಸಿದ ದಾಖಲೆಯಲ್ಲಿ ಸಿದ್ಧಪಾಠಗಳ ಉಳಿಕೆ 11,16,537 ದಾಸ್ತಾನಿನಲ್ಲಿ ಇದೆ ಎಂದು ಇರುತ್ತದೆ. ಅಂದರೆ ವ್ಯತ್ಯಾಸ 833 ಗಳ ಸಿದ್ಧಪಾಠಗಳ ವಿವರ ಇರುವುದಿಲ್ಲ. ಇದಕ್ಕೆ ವಿವರ ಒದಗಿಸುವಂತೆ ವಿಚಾರಣೆ ಪತ್ರ ಸಂಖ್ಯೆ:54/03.09.2019ರಲ್ಲಿ ಕೋರಿದ್ದರು, ಉತ್ತರ ನೀಡಿರುವುದಿಲ್ಲ. ಆದ್ದರಿಂದ ವ್ಯತ್ಯಾಸವಿರುವ 833 ಸಿದ್ಧಪಾಠಗಳಿಗೆ ವಿವರ ಒದಗಿಸಲು ಸೂಚಿಸಿದೆ. ವಿವರ ಕೆಳಕಂಡಂತಿದೆ. |

| **2016-17ನೇ ಸಾಲಿನ ಸಿದ್ಧಪಾಠಗಳ ಉಳಿಕೆ ಪ್ರತಿಗಳು (ಲೆಕ್ಕ ಪರಿಶೋಧನಾ ವರದಿ ಪ್ರಕಾರ)** | **ಪ್ರಸ್ತುತ ದಾಸ್ತಾನು ವಹಿಯಲ್ಲಿ ಸಿದ್ಧಪಾಠಗಳ ಉಳಿಕೆ ಪ್ರತಿಗಳು** | **ವ್ಯತ್ಯಾಸ** |
|---|---|---|
| 11,17,370 | 11,16,537 | 833 ಪ್ರತಿಗಳ |

ವ್ಯತ್ಯಾಸವಿರುವ 833 ಪ್ರತಿಗಳ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಸೂಚಿಸಿದೆ.

**2017-18ನೇ ಸಾಲಿನ ಹಳೆಯ ಸಿದ್ಧಪಾಠಗಳ ದಾಸ್ತಾನು ವಿವರ ಈ ಕೆಳಕಂಡಂತಿದೆ :-**

| | | |
|---|---|---|
| 2017-18ನೇ ಸಾಲಿನ ಪ್ರಾರಂಭಿಕ ಶಿಲ್ಕು | 11,17,370 ಪ್ರತಿಗಳು | |
| 2017-18ನೇ ಸಾಲಿನಲ್ಲಿ ಸಿದ್ಧಪಾಠಗಳ ಮುದ್ರಣ | - | |
| **ಒಟ್ಟು** | **11,17,370 ಪ್ರತಿಗಳು** | |
| (-) 2017-18ನೇ ಸಾಲಿನಲ್ಲಿ ಸಿದ್ಧಪಾಠಗಳ ವಿತರಣೆ | 508 **ಪ್ರತಿಗಳು** | **1341** |
| (-) ವಸೂಲಾತಿಗೆ ಸೂಚಿಸಿರುವ ಪ್ರತಿಗಳು | **833/-** | |
| 2017-18ನೇ ಸಾಲಿನಲ್ಲಿ ಸಿದ್ಧಪಾಠಗಳ ಅಂತಿಮ ಶಿಲ್ಕು | 1116029 **ಪ್ರತಿಗಳು** | |

| | |
|---|---|
| | ಉತ್ತರ |
| | 2016-17 ನೇ ಸಾಲಿನ ಉಳಿಕೆ 11,17,370 ದಸ್ತಾನು ಇದ್ದು 2017-18 ನೇ ಸಾಲಿನ ಸಿದ್ಧಪಾಠಗಳ ಉಳಿಕೆ 11,16,537 ದಾಸ್ತಾನಿನಲ್ಲಿ ಇದ್ದು ಇದರ ವ್ಯತ್ಯಾಸ 833 ಗಳ ಸಿದ್ಧಪಾಠಗಳ ವಿವರ ಈ ಕೆಳಕಂಡಂತಿದೆ. |

| Sl.No | Subject | Diference |
|---|---|---|
| 1 | EDUCATION (KM) | **20** |
| 2 | **PSY Practical (KM)** | **467** |
| 3 | ICHR&ES (KM) | **79** |
| 4 | HISTORY (EM) | **20** |
| 5 | **PSY Practical (EM)** | **246** |
| 6 | ANTHROPOLOGY (EM) | **1** |
| **Total** | | **833** |

ಪರಿಶೀಲಿಸಿ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಬೇಕೆಂದು ಕೋರಿದೆ.

ವಿವರ

40 **39. ಬಾಹ್ಯ ಬರಹಗಾರರಿಗೆ ಸಂಭಾವನೆ ಪಾವತಿ ಮಾಡಿರುವ ಬಗ್ಗೆ :–**

2017–18ನೇ ಸಾಲಿನ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಹಾಜರುಪಡಿಸಲಾದ ಪಾವತಿ ಓಚರ್‌ಗಳಲ್ಲಿ ಎಸ್.ಎಲ್.ಎಂ ಸಿದ್ಧಪಾಠಗಳನ್ನು ರಚಿಸಿರುವ ಬಾಹ್ಯ ಬರಹಗಾರರಿಗೆ 1 ಯುನಿಟ್‌ಗೆ ರೂ.6,000/–ಗಳಂತೆ ಒಟ್ಟು ರೂ.12,75,457/–ಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ. ಹಾಗೂ 2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಗಳಲ್ಲಿ ಸಿದ್ಧಪಾಠ ಬರಹಗಾರರ ಸಂಭಾವನೆಗಾಗಿ ರೂ.12,75,457/–ಗಳ ವೆಚ್ಚ ಭರಿಸಿರುವುದನ್ನು ನಮೂದಿಸಿದೆ. ಆದರೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ Management ವಿಷಯಕ್ಕೆ ಸಂಬಂಧಿಸಿದಂತೆ 10 ಪ್ರಾಧ್ಯಾಪಕರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿರುವ ಪರಿಣಿತ ಪ್ರಾಧ್ಯಾಪಕರಿಂದಲೇ ಸಿದ್ಧಪಾಠ ರಚಿಸುವ ಕಾರ್ಯ ಮಾಡಿಸಿದ್ದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಈ ಮೊತ್ತದ ಆರ್ಥಿಕ ಹೊರೆಯಾಗುವುದನ್ನು ತಪ್ಪಿಸಬಹುದಾಗಿತ್ತು. ಆದರೆ ಹೊರಗಿನ 32 ಪ್ರಾಧ್ಯಾಪಕರುಗಳಿಂದ ಸಿದ್ಧಪಾಠವನ್ನು ರಚಿಸುವ ಕಾರ್ಯವನ್ನು ಮಾಡಿಸಲಾಗಿರುತ್ತದೆ.

ಈ ರೀತಿ ಸಂಭಾವನೆ ಪಾವತಿಸಿರುವುದು ಕೆ.ಸಿ.ಎಸ್.ಆರ್ ನಿಯಮ 28ರ (ಬಿ)ನ ಉಲ್ಲಂಘನೆಯಾಗಿರುತ್ತದೆ. ಸಂಭಾವನೆ ಪಾವತಿ ಬಗ್ಗೆ ವಿವರ ಒದಗಿಸಲು ವಿಚಾರಣೆ ಪತ್ರ ಸಂಖ್ಯೆ: 52/ದಿನಾಂಕ:03.09.2019 ರಲ್ಲಿ ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿತ್ತು. ನೀಡಿರುವ ವಿವರಣೆಯಲ್ಲಿನ ಉತ್ತರವು ಸಮಂಜಸವಾಗಿರುವುದಿಲ್ಲ. ಬಾಹ್ಯ ಬರಹಗಾರರಿಗೆ ಪಾವತಿ ಸಂಬಂಧ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಕಾರ್ಯಭಾರ ಹಂಚಿಕೆ. ಪ್ರಾಧ್ಯಾಪಕರುಗಳಿಗೆ ಸಿದ್ಧಪಾಠ ರಚಿಸುವ ಕಾರ್ಯ ಹಂಚಿಕೆ. ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಲಾಗಿದ್ದು, ವಿವರ ಅಪೂರ್ಣವಾಗಿದೆ. ಲೆಕ್ಕಪರಿಶೋಧನೆಗೆ ನೀಡಿರುವ ಉತ್ತರ ಸಮಂಜಸವಾಗಿಲ್ಲದ ಕಾರಣ ಬಾಹ್ಯ ಬರಹಗಾರರಿಗೆ ಪಾವತಿಸಲಾಗಿರುವ ಮೊತ್ತ **ರೂ.12,72,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಪಾವತಿಸಿರುವ ವಿವರಗಳನ್ನು **ಅನುಬಂಧ–11ರಲ್ಲಿ** ನೀಡಲಾಗಿದೆ.

| | ಉತ್ತರ |
|---|---|
| | ಕರಾಮುವಿಯ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ತಮ್ಮ ದೈನಂದಿನ ಕೆಲಸಗಳಾದ SLMನ್ನು ಪರಿಷ್ಕರಿಸುವುದು, ತಿದ್ದುಪಡಿ ಮಾಡುವುದು, ವಿದ್ಯಾರ್ಥಿಗಳ ಜೊತೆ ಸಮಾಲೋಚನೆ, ಆಂತರಿಕ ಮೌಲ್ಯಮಾಪನ ಮಾಡುವುದು, ಪರೀಕ್ಷಾ ಕಾರ್ಯದಲ್ಲಿ ತೊಡಗುವುದು, ಪರೀಕ್ಷಾ ಮೌಲ್ಯಮಾಪನ ಮತ್ತು ಇತರೆ ಚಟುವಟಿಕೆಗಳಾದ ಸೆಮಿನಾರ್, ಸಂಶೋಧನಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. UGC ನಿಯಮದ ಪ್ರಕಾರ ಪಠ್ಯಕ್ರಮಗಳು ಆಗಿಂದ್ದಾಗ್ಗೆ ಪರಿಷ್ಕರಿಸಲಾಗುತ್ತದೆ. ಆಂತರಿಕ ಅಧ್ಯಾಪಕರುಗಳ ಕಾರ್ಯಭಾರ ಹಂಚಿಕೆಯ Statutes (ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಯು.ಎ–1/ಪರಿನಿಯಮ/690/2011–12, ದಿನಾಂಕ: 13.04.2012ರ ಮತ್ತು ಸರ್ಕಾರದ ಪತ್ರದ ದಿನಾಂಕ: 24.03.2012) ಇದರಂತೆ ಕ್ರಮವಹಿಸಲಾಗಿದೆ.<br>2017–18ನೇ ಸಾಲಿನಲ್ಲಿ ಸಿದ್ಧಪಾಠ ರಚಿಸಲು ವಿಷಯವಾರು ಪ್ರತಿ ಯೂನಿಟ್‌ಗೆ ನಿಗದಿಪಡಿಸಿರುವ ದರಗಳನ್ನು ದಿನಾಂಕ: 10.05.2012 ರಂದು ನಡೆದ 47ನೇ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ದಿನಾಂಕ: 11.05.2012 ರಂದು ನಡೆದ 119ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದೆ. ಅದರಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕೃತ ಆದೇಶ ಕಛೇರಿ ಆದೇಶವನ್ನು ಹೊರಡಿಸಲಾಯಿತು. ಬಾಹ್ಯ ಅಧ್ಯಾಪಕರಿಗೆ ಮಾತ್ರ ಸಂಭಾವನೆ ಪಾವತಿಸಲಾಗಿದೆ. ಪರಿಷ್ಕೃತ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್ (ಶೈ)/03/77/2017–18, ದಿನಾಂಕ:25.10.2017 ರಂತೆ ಸಿದ್ಧಪಾಠ ಬರಹಗಾರರಿಗೆ ಸಂಭಾವನೆ ಪಾವತಿಸಲಾಗಿರುತ್ತದೆ. ಸದರಿ ಅಂಶಗಳನ್ನು ಗಮನಕ್ಕೆ ತರುತ್ತಾ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 41 | **<u>40. ವಿದ್ಯಾರ್ಥಿ ವೇತನ ಪಾವತಿ ಬಗ್ಗೆ :–</u>**<br>ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ವೇತನಕ್ಕೆ ಅರ್ಹರಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕೋಟದಲ್ಲಿ ಸಿದ್ಧಪಡಿಸಿ ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗುತ್ತಿರುವುದನ್ನು ಗಮನಿಸಲಾಗಿದೆ. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ ಮಂಜೂರಾದ ವಿದ್ಯಾರ್ಥಿ ವೇತನದ ಮೊಬಲಗನ್ನು RTGS ಮೂಲಕ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೇತನ ಖಾತೆಗೆ ಜಮೆಮಾಡಲಾಗಿದೆ. ಆದರೆ ಈ ರೀತಿ ಜಮೆಯಾದ ಮೊಬಲಗು ಯಾವ ಯಾವ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಿದೆ ಎಂಬ ಬಗ್ಗೆ ಹಣಕಾಸು ಶಾಖೆಯಲ್ಲಾಗಲಿ ಅಥವಾ ಎಸ್‌ಸಿ/ಎಸ್‌ಟಿ ಶಾಖೆಯಲ್ಲಾಗಲಿ ಮಾಹಿತಿ ಇರುವುದಿಲ್ಲ. ಹೀಗಾಗಿ ವಿದ್ಯಾರ್ಥಿ ವೇತನ ಮಂಜೂರಾಗದಿರುವ ಪ್ರಕರಣಗಳನ್ನು ಗುರುತಿಸಿ ವಿದ್ಯಾರ್ಥಿವೇತನ ಬಿಡುಗಡೆ ಮಾಡುವಂತೆ ಪತ್ರ ವ್ಯವಹಾರ ಮಾಡಿರುವುದಿಲ್ಲ. ಇದರಿಂದಾಗಿ ಪ್ರಸ್ತಾವನೆ ಸಲ್ಲಿಸಿದ ಎಲ್ಲ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನ ಮಂಜೂರಾಯಿತೇ, ಇಲ್ಲವೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದ ವಿದ್ಯಾರ್ಥಿವೇತನ ಮಂಜೂರಾಗದ ವಿದ್ಯಾರ್ಥಿಗೂ ವಿದ್ಯಾರ್ಥಿವೇತನ ನೀಡಿರುವ ಸಂಭವವಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆ ಬೀಳುತ್ತಿರಬಹುದಾಗಿದೆ. ಆದ್ದರಿಂದ ಈ ವಿಷಯದಲ್ಲಿ |

ಹಣಕಾಸು ಶಾಖೆ ಮತ್ತು ಎಸ್‌ಸಿ/ಎಸ್‌ಟಿ ಸೆಲ್ ನಡುವೆ ಸಮನ್ವಯದಿಂದ ಕೆಲಸ ನಿರ್ವಹಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ. ಹಾಗೂ ಈ ಬಗ್ಗೆ ವಿವರಗಳನ್ನು ಒದಗಿಸಲು ಸೂಚಿಸಿದೆ.

**2017–18ನೇ ಸಾಲಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ವೇತನ ಖಾತೆಯಲ್ಲಿ ಈ ಕೆಳಕಂಡಂತೆ ಮೊಬಲಗು ಇರುತ್ತದೆ.**

| | | | | ಮೊತ್ತ (ರೂ.ಗಳಲ್ಲಿ) |
|---|---|---|---|---|
| ಪ್ರಾರಂಭಿಕ ಶಿಲ್ಕು | ಚಾಲ್ತಿ ವರ್ಷದ ಸ್ವೀಕೃತಿ | ಒಟ್ಟು | ಚಾಲ್ತಿ ವರ್ಷದ ಪಾವತಿ | ಅಂತಿಮ ಶಿಲ್ಕು |
| 5,03,25,793 | 40,55,215 | 5,43,81,008 | 70,04,426 | 4,73,76,582 |

ಬಾಕಿ ಉಳಿದಿರುವ ಮೊಬಲಗಿನಲ್ಲಿ ಬಡ್ಡಿ ಮೊಬಲಗೂ ಸೇರಿದ್ದು ಅದನ್ನು ಸರ್ಕಾರಕ್ಕೆ ಜಮೆ ಮಾಡಲು ಹಾಗೂ ವಿದ್ಯಾರ್ಥಿ ವೇತನದ ಮೊಬಲಗನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ವಿತರಿಸಲು ವರದಿಯಲ್ಲಿ ಸೂಚಿಸಿದೆ.

ಉತ್ತರ

ಕರಾಮುವಿ ನಿಲಯದಲ್ಲಿ ವಿದ್ಯಾರ್ಥಿ ವೇತನಕ್ಕೆ ಅರ್ಹರಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಪಟ್ಟಿ ಸಿದ್ಧಪಡಿಸಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಿಕೊಡಲಾಗುತ್ತದೆ. ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯಿಂದ ಸದರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿ RTGS ಮೂಲಕ ವಿವಿ ನಿಲಯದ ಶಿಷ್ಯವೇತನ ಖಾತೆಗೆ ಜಮೆಮಾಡಲಾಗುತ್ತದೆ. ಹಾಗೆ ಜಮೆಯಾದ ಮೊತ್ತಕ್ಕೆ ವಿದ್ಯಾರ್ಥಿಗಳ ಪಟ್ಟಿಯನ್ನು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯಿಂದ ಕಳುಹಿಸಿಕೊಡುತ್ತಾರೆ. ಸದರಿ ಪಟ್ಟಿಯ ಅನುಸಾರ ಉಚಿತ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಮೊತ್ತವನ್ನು ವಿಶ್ವವಿದ್ಯಾನಿಲಯದ ಸಾಮಾನ್ಯನಿಧಿ ಖಾತೆಗೆ ವರ್ಗಾಯಿಸಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ದಾಖಲಾತಿಗಳನ್ನು ಪಡೆದು ಶಿಷ್ಯವೇತನವನ್ನು ಪಾವತಿಸಲಾಗುತ್ತದೆ. ಹಾಗೆಯೆ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗದೆ ಇರುವ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಬಿಡುಗಡೆ ಮಾಡಲು ವಿವಿಯ ಸಂಯೋಜನಾಧಿಕಾರಿಗಳು ಪರಿಶಿಷ್ಟಜಾತಿ/ಪರಿಶಿಷ್ಟ ಘಟಕದಿಂದ ಸಂಬಂಧಿಸಿದ ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಪತ್ರ ವ್ಯವಹಾರ ನಡೆಸಲಾಗಿದೆ. ವಿದ್ಯಾರ್ಥಿ ವೇತನ ಮಂಜೂರಾದ ವಿದ್ಯಾರ್ಥಿಗಳ ಪಟ್ಟಿಯನ್ನು (ಹಣ ಬಿಡುಗಡೆಯಾದ) ಬಟವಾಡೆ ಪುಸ್ತಕದಲ್ಲಿ ದಾಖಲಿಸಿ ಪ್ರತೀ ಪಾವತಿಯ ಸಂದರ್ಭದಲ್ಲಿ ಹಣಕಾಸು ಅಧಿಕಾರಿಗಳಿಂದ ದೃಢಿಕರಿಸಿ ಪಾವತಿಸಲು ಕ್ರಮವಹಿಸಲಾಗತ್ತಿದ್ದು. ಲೆಕ್ಕಪರಿಶೋದನೆಗೆ ಹಾಜರುಪಡಿಸಲಾಗಿದೆ. ಮಂಜೂರಾಗದ ಯಾವುದೇ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ ನೀಡಲಾಗಿರುವುದಿಲ್ಲ.

ಬಾಕಿ ಉಳಿದಿರುವ ಮೊತ್ತಕ್ಕೆ ಬಂದಿರುವ ಬಡ್ಡಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಜಮೆ ಮಾಡಬೇಕಾಗಿದ್ದು ಆದರೆ ವಿವಿಗೆ 2013–14, 2014–15 ಮತು 2015–16 ನೇ ಸಾಲಿನಲ್ಲಿ ಉಚಿತ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಮೊತ್ತ ರೂ.4,15,09,925/–ಗಳು ಬಿಡುಗಡೆಯಾಗಬೇಕಾಗಿದ್ದು, ಈ ಸಂಬಂಧ ಮೈಸೂರು ಜಿಲ್ಲೆಯ ವಿವಿಧ

| | |
|---|---|
| | ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರಿಗೆ ಪತ್ರ ಬರೆಯಲಾಗಿದ್ದು ವಿದ್ಯಾರ್ಥಿ ವೇತನ ಮಂಜೂರಾಗಿರುವುದಿಲ್ಲ. ಅದುದರಿಂದ ಬಡ್ಡಿಯ ಹಣವನ್ನು 2013-14, 2014-15ನೇ ಸಾಲಿನಲ್ಲಿ ಮಂಜೂರಾಗದೆ ಇರುವ ಶಿಷ್ಯವೇತನಕ್ಕೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರಕ್ಕೆ ಉಪಯುಕ್ತತಾ ಪಟ್ಟಿಯನ್ನು ಸಲ್ಲಿಸಲು ಕ್ರಮವಹಿಸಲಾಗುವುದು. |
| | ವಿವರ |
| 42 | **41. ಸಹಭಾಗಿತ್ವ ಸಂಸ್ಥೆಗೆ ಮರುಪಾವತಿಸಲಾದ ಮೊತ್ತವು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸಂದಾಯ ಮಾಡಿರುವ ಬಗ್ಗೆ ಮಾಹಿತಿ ನೀಡದಿರುವುದು:-**<br>2015-16ನೇ ಸಾಲಿನ ಡಿಸೆಂಬರ್ 2015ನೇ ಮಾಹೆಯಲ್ಲಿ ವಿವಿಧ ಕೋರ್ಸ್‌ಗಳಿಂದ ಎಂ.ಬಿ.ಎ ಅನಿಮೇಷನ್ ಮತ್ತು ಡಿಪ್ಲೋಮ ವಿಷಯಗಳಿಗೆ ಒಟ್ಟು 495 ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗಿದ್ದ ಪರೀಕ್ಷಾ ಶುಲ್ಕ ರೂ.8,00,500/- ಮೈಸೂರು ಮುಕ್ತ ವಿಶ್ವವಿದ್ಯಾನಿಲಯ ಸಹಭಾಗಿತ್ವ ಸಂಸ್ಥೆಯಾದ ಶ್ರೀದೇವಿ ಟ್ರಸ್ಟ್ ಸಂಸ್ಥೆ ಬೆಂಗಳೂರುರವರು ನೀಡಿರುವುದನ್ನು ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದಲ್ಲಿ ಪರೀಕ್ಷಾ ಖಾತೆಗೆ ಜಮಾ ಮಾಡಲಾಗಿರುತ್ತದೆ. 2015-16ನೇ ಸಾಲಿನಲ್ಲಿ ಪರೀಕ್ಷೆಗಳು ನಡೆಯದ ಕಾರಣದಿಂದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ರೂ.8,00,500/-ಗಳನ್ನು ಹಿಂತಿರುಗಿಸುವಂತೆ ಶ್ರೀದೇವಿ ಟ್ರಸ್ಟ್ ಸಂಸ್ಥೆಯವರು ಮನವಿ ಸಲ್ಲಿಸಿದ್ದು, 2017-18ನೇ ಸಾಲಿನ Vr.No06 Brno/1399,ದಿನಾಂಕ:27.01.2018 ರಲ್ಲಿ ಧನಾದೇಶ ಸಂಖ್ಯೆ:000005/27.01.2018ರಲ್ಲಿ ರೂ8,00,500/-ಗಳನ್ನು ಶ್ರೀದೇವಿ ಟ್ರಸ್ಟ್ ಬೆಂಗಳೂರು ಇವರಿಗೆ ಹಿಂದಿರುಗಿಸಲಾಗಿದೆ.<br>ಮರುಪಾವತಿಸಲಾದ ಮೊತ್ತವು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಶ್ರೀದೇವಿ ಟ್ರಸ್ಟ್ ಸಂಸ್ಥೆಯಿಂದ ತಲುಪಿರುವ ಬಗ್ಗೆ ವಿಶ್ವವಿದ್ಯಾನಿಲಯವು ಸ್ವೀಕೃತಿ ಪಡೆದಿರುವುದಿಲ್ಲ. ಹಾಗೂ 2015-16ನೇ ಸಾಲಿನಲ್ಲಿ ನೆಡೆಯದ ಪರೀಕ್ಷೆಗಳು ತದ ನಂತರದ ಅವಧಿಯಲ್ಲಿ ನಡೆದಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ. ಈ ಬಗ್ಗೆ ವಿವರ ಒದಗಿಸಲು ಸೂಚಿಸಿದೆ. |
| | ಉತ್ತರ |
| | ಶ್ರೀದೇವಿ ಟ್ರಸ್ಟ್ ಬೆಂಗಳೂರು ಸಂಸ್ಥೆಯವರು ವಿವಿಧ ತರಗತಿಗಳಿಗೆ ಡಿಸೆಂಬರ್ 2015 ರ ಮಾಹೆಯಲ್ಲಿ ಪರೀಕ್ಷೆ ನಡೆಸುವ ಸಂಬಂಧವಾಗಿ ಪರೀಕ್ಷಾ ಶುಲ್ಕ ರೂ.8,00,500/- ಗಳನ್ನು ಪಾವತಿಸಿದ್ದರು. ಅನಿವಾರ್ಯ ಕಾರಣಗಳಿಂದ ಯು.ಜಿ.ಸಿ. ವಿ.ವಿ.ಯ ಮಾನ್ಯತೆ ರದ್ದುಪಡಿಸಿದ ಹಿನ್ನೆಲೆಯಲ್ಲಿ ಸದರಿ ತರಗತಿಗಳ ಪರೀಕ್ಷೆಗಳು ನಡೆಯದ ಕಾರಣ ಸದರಿ ಸಂಸ್ಥೆಯವರು ಪಾವತಿ ಮಾಡಿದ್ದ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವಂತೆ ಮನವಿ ಮಾಡಿದ್ದರು. ಈ ಸಂಬಂಧ ವಿ.ವಿ.ಯ 149ನೇ ವ್ಯವಸ್ಥಾಪನ ಮಂಡಳಿಯ ತೀರ್ಮಾನದಂತೆ ಸದರಿ ಸಂಸ್ಥೆಯವರಿಗೆ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸಲು ಕ್ರಮವಹಿಸಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ನೇರವಾಗಿ ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿದ್ದು, ಈ ಸಂಸ್ಥೆಯು ತದನಂತರದಲ್ಲಿ ವಿ.ವಿ.ಯ ಖಾತೆಗೆ ಡಿ.ಡಿ. ಮುಖಾಂತರ ಒಟ್ಟಾರೆಯಾಗಿ ರೂ.8,00,500/- ಗಳನ್ನು ಪಾವತಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಮರುಪಾವತಿ ಕಾರ್ಯ ವಿ.ವಿ.ಯ ವ್ಯಾಪ್ತಿಗೆ ಬರುವುದಿಲ್ಲವೆಂಬ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡಬೇಕಾಗಿ ಕೋರಲಾಗಿದೆ. |

| | ವಿವರ |
|---|---|
| 43 | **42. ಪ್ರಾದೇಶಿಕ ಕೇಂದ್ರ ಕಛೇರಿಯ ಬಾಡಿಗೆಯ ಪಾವತಿ ಸಂಬಂಧ ಸೇವಾ ತೆರಿಗೆಯನ್ನು ಪಾವತಿಸಿರುವ/ಜಮಾ ಮಾಡಿರುವ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–** |

ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಡಿಸೆಂಬರ್–2017ರ ಮಾಹೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ, ಮಂಗಳೂರಿನಲ್ಲಿ ಪ್ರಾದೇಶಿಕ ಕೇಂದ್ರ ಕಛೇರಿಯನ್ನು ನಡೆಸಲು ಒಕ್ಕಲಿಗರ ಯಾನೆಗೌಡರ ಸೇವಾ ಸಂಘದ ಕಟ್ಟಡವನ್ನು ಬಾಡಿಗೆ ಪಡೆದಿರುವ ಸಂಬಂಧ ಕುಲಸಚಿವರ ಆದೇಶದ ಪತ್ರ ಸಂಖ್ಯೆ:ಕರಾಮುವಿ/ಡೀನ್/ಅಧ್ಯಯನ ಕೇಂದ್ರ/ಪ್ರಾ.ಕೇ.ಮಂ/2017–18 ದಿನಾಂಕ:07.10.2017ನ್ನು ಪರಿಶೀಲಿಸಲಾಗಿ ದಿನಾಂಕ:15.07.2017ರ 146ನೇ ವ್ಯವಸ್ಥಾನಾ ಮಂಡಳಿಯ ತೀರ್ಮಾನದಂತೆ, ಕಛೇರಿಯ ಕಟ್ಟಡಕ್ಕೆ ನಿಗದಿಪಡಿಸಿರುವ ಮಾಹೆಯಾನ ಬಾಡಿಗೆಯ ಮೊತ್ತವು ರೂ.26,450/–ಗಳಾಗಿದ್ದು, ಪಿ.ಡಬ್ಲ್ಯೂಡಿ ನಿಗದಿಪಡಿಸಿರುವ ಬಾಡಿಗೆಯ ಮೊತ್ತಕ್ಕೆ ಸೇವಾ ತೆರಿಗೆಯ ಮೊತ್ತ ರೂ.3,968/–ಗಳನ್ನು ಸೇರಿಸಿ ಮಾಹೆಯಾನ ರೂ.30,418/–ಗಳನ್ನು ಪಾವತಿಸಲು ಅನುಮೋದನೆ ನೀಡಲಾಗಿದ್ದು, ದಿನಾಂಕ:01.05.2017 ರಿಂದ 30.04.2020ರವರೆಗೆ ಬಾಡಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ.

ನಿಯಮಾನುಸಾರ, ಸ್ಥಿರಾಸ್ತಿಯ ಬಾಡಿಗೆಯ ಸ್ವೀಕೃತಿಯು ವಾರ್ಷಿಕ ಹತ್ತು ಲಕ್ಷ ಮೀರಿದ್ದರೆ ಶೇ 15% ರಷ್ಟು ಸೇವಾ ತೆರಿಗೆಯನ್ನು ಪಾವತಿಸಬೇಕಾಗಿರುತ್ತದೆ.

ದಿನಾಂಕ:01.07.2017 ರಿಂದ ಜಿ.ಎಸ್.ಟಿ (ಸರಕು ಮತ್ತು ಸೇವಾ ತೆರಿಗೆ) ಜಾರಿಗೆ ಬಂದಿದ್ದು, ಒಂದು ಆರ್ಥಿಕ ವರ್ಷದಲ್ಲಿ ಎಲ್ಲಾ ಮೂಲಗಳಿಂದ ಸ್ವೀಕೃತವಾಗಿರುವ ಕಟ್ಟಡದ ಬಾಡಿಗೆಯ ಮೊತ್ತವು ರೂ.20,00,000/– ಮೀರಿದರೆ, ಶೇ 18% ರ ದರದಲ್ಲಿ ಸೇವಾ ತೆರಿಗೆಯನ್ನು ಪಾವತಿ ಮಾಡಬೇಕಾಗಿರುತ್ತದೆ. ಆದರೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವೋಚರ್‌ಗಳಲ್ಲಿ ಜಿ.ಎಸ್.ಟಿ ಜಾರಿಯಾದ ನಂತರವೂ ಶೇ 15%ರ ದರದಲ್ಲಿಯೇ ಸೇವಾ ತೆರಿಗೆಯನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. 2017–18ನೇ ಸಾಲಿನಲ್ಲಿ (ಡಿಸೆಂಬರ್–2017ರ ಮಾಹೆಯಲ್ಲಿ) ಪಾವತಿಯಾಗಿರುವ ಬಾಡಿಗೆಯ ಮೊತ್ತದ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಬಿ.ಆರ್.ಸಂಖ್ಯೆ ದಿನಾಂಕ | ವೋಚರ್ ನಂ | ಧನಾದೇಶ ಸಂಖ್ಯೆ ದಿನಾಂಕ | ಧನಾದೇಶ ಮೊತ್ತ (ರೂ.ಗಳಲ್ಲಿ) | ವಿವರ |
|---|---|---|---|---|---|
| **1** | **2** | **3** | **4** | **5** | **6** |
| 1 | 1123/ 20.11.2017 | 32 | 237751/ 08.12.2017 | 1,52,090 | ಮಾಹೆಯಾನ ರೂ.30,418ರಂತೆ ಮೇ 2017 ರಿಂದ ಸೆಪ್ಟೆಂಬರ್ 2017ರವರೆಗೆ ಪಾವತಿ ಮಾಡಲಾಗಿದೆ. |
| 2 | 1227/ 15.12.2017 | 59 | 237774/ 19.12.2017 | 60,836 | ಅಕ್ಟೋಬರ್ 2017 ಹಾಗೂ ನವೆಂಬರ್–2017ರ ಮಾಹೆಯಾನ ಬಾಡಿಗೆ ಪಾವತಿಸಲಾಗಿರುತ್ತದೆ. |
| | | | **ಒಟ್ಟು ಮೊತ್ತ (ರೂ)** | **2,12,926** | |

ಬಾಡಿಗೆಯ ಮೊತ್ತ ರೂ.2,12,926/–ಗಳಲ್ಲಿ ರೂ.27,776/–ಗಳನ್ನು ಸೇವಾ ತೆರಿಗೆಯನ್ನು ಪಾವತಿ ಮಾಡಲಾಗಿರುತ್ತದೆ. ಕಟ್ಟಡದ ಬಾಡಿಗೆಯ ಮೊತ್ತವು ರೂ.20.00 ಲಕ್ಷ ಮೀರದಿರುವುದರಿಂದ ಸೇವಾ ತೆರಿಗೆಯನ್ನು ಪಾವತಿ ಮಾಡಬೇಕಾಗಿರಲಿಲ್ಲ. ಹಾಗೂ ವೋಚರ್‌ಗಳೊಂದಿಗೆ ಹಣ ಸ್ವೀಕೃತಿಯ ಮುಂಗಡ

| | |
|---|---|
| | ರಶೀದಿಯನ್ನು ಮಾತ್ರ ಲಗತ್ತಿಸಲಾಗಿದ್ದು, ಸದರಿ ರಶಿದಿಯಲ್ಲಿ ಕಟ್ಟಡದ ಮಾಲೀಕರ, PAN ಸಂಖ್ಯೆ ಆಗಲೀ, TIN ಸಂಖ್ಯೆ ಆಗಲೀ ಅಥವಾ ಜಿ.ಎಸ್.ಟಿ ನೊಂದಾಯಿತ ಸಂಖ್ಯೆ ಆಗಲೀ ಇರುವುದಿಲ್ಲ. ಹಾಗೂ ಸರ್ಕಾರಕ್ಕೆ ಸೇವಾ ತೆರಿಗೆ ಪಾವತಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಲೆಕ್ಕಪತ್ರ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:46/2019–20 ದಿನಾಂಕ:28.08.2019ರಲ್ಲಿ ನೀಡಲಾಗಿ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಉತ್ತರವು ಸಮರ್ಪಕವಾಗಿರುವುದಿಲ್ಲ. ಸೇವಾ ತೆರಿಗೆಯನ್ನು ಜಿ.ಎಸ್.ಟಿ ಜಾರಿಯಾದ ನಂತರವೂ ಶೇ 18ರ ದರದಲ್ಲಿ ಪಾವತಿಸದೇ ಶೇ 15ರ ದರಲ್ಲಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಹಾಗೂ ಸೇವಾ ತೆರಿಗೆಯನ್ನು ಸರ್ಕಾರಕ್ಕೆ ಜಮೆ ಮಾಡಿರುವುದಕ್ಕೆ ಲೆಕ್ಕಪತ್ರ ದಾಖಲಾತಿಗಳನ್ನು ಹಾಜರುಪಡಿಸುವವರೆಗೆ ಪಾವತಿಯಾಗಿರುವ ಸೇವಾ ತೆರಿಗೆಯ ಒಟ್ಟು ಮೊತ್ತ **ರೂ.27,776/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** |
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 44 | **43. ಸಂಕ್ಷಿಪ್ತ ಸಾದಿಲ್ವಾರು (ಎ.ಸಿ.ಬಿಲ್ಲು) ಬಿಲ್ಲುಗಳಲ್ಲಿ ಡ್ರಾ ಮಾಡಲಾಗಿರುವ ಮುಂಗಡ ಹಣಕ್ಕೆ ಹೊಂದಾಣಿಕೆಯಾದ ಎನ್.ಡಿ.ಸಿ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು :–**<br>ಹಿಂದಿನ ಸಾಲುಗಳಲ್ಲಿ ಡ್ರಾ ಮಾಡಲಾಗಿದ್ದ ಹಾಗೂ 2017–18ನೇ ಸಾಲಿನಲ್ಲಿ ಡ್ರಾ ಮಾಡಲಾದ ಎ.ಸಿ ಬಿಲ್ಲುಗಳಿಗೆ 2017–18ನೇ ಸಾಲಿನಲ್ಲಿ ಹೊಂದಾಣಿಕೆಯಾದ ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ. ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಮುಂಗಡ ಪಡೆಯಲು/ಡ್ರಾ ಮಾಡಲು ಮಂಜೂರಾತಿ ನೀಡಿದ ಆದೇಶದ ದಿನಾಂಕಕ್ಕಿಂತ ಹಿಂದಿನ ಅವಧಿಯಲ್ಲಿ ಭರಿಸಲಾದ ವೆಚ್ಚದ ಬಿಲ್ಲುಗಳನ್ನು ಎನ್.ಡಿ.ಸಿ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br>(I)ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 1958, ನಿಯಮ 36 (ii)ರ ರೀತ್ಯಾ ಕೂಡಲೇ ಬಟವಾಡೆಗೆ ಅವಶ್ಯವಾಗಿ ಬೇಕಾಗಿರುವ ಹಣವನ್ನು ಬಿಟ್ಟು (ತುರ್ತು ವೆಚ್ಚವನ್ನು ಭರಿಸಲು ಮಾತ್ರ) ಬೇರೆ ಇನ್ನಾವುದೇ ರೀತಿಯ ಹಣವನ್ನು ಎಸಿ ಬಿಲ್ಲಿನಲ್ಲಿ ಡ್ರಾ ಮಾಡಬಾರದು ಹಾಗೂ ನಿಯಮ 36 (iii)ರ ರಂತೆ ಬೇಡಿಕೆಗಳಿಗಿಂತ ಹೆಚ್ಚಿನ ಹಣವನ್ನಾಗಲೀ ಅಥವಾ ಅವಧಿ ಪೂರ್ಣವಾಗಿರುವಂಥ ಬೇಡಿಕೆಗಳಿಗೆ ಎ.ಸಿ ಬಿಲ್ಲಿನಲ್ಲಿ ಹಣ ತೆಗೆಯುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಎ.ಸಿ ಬಿಲ್ಲು ಡ್ರಾ ಮಾಡಿದ ದಿನಾಂಕಕ್ಕಿಂತ ಹಿಂದಿನ ದಿನಾಂಕವಿರುವ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುವುದು ಕಂಡುಬಂದಿದ್ದು, ಅನುಬಂಧ–12ರಲ್ಲಿ ವಿವರಗಳನ್ನು ನೀಡಿದೆ. ಎ.ಸಿ ಬಿಲ್ಲು ಡ್ರಾ ಮಾಡುವ ಮುಂಚಿನ ದಿನಾಂಕಗಳಲ್ಲಿ ಭರಿಸಲಾಗಿರುವ ವೆಚ್ಚಗಳನ್ನು ಸವಿವರ ಸಾದಿಲ್ವಾರು ಬಿಲ್ಲಿನಲ್ಲಿ ಪಾವತಿ ಮಾಡದೇ, ಸಂಕ್ಷಿಪ್ತ ಸಾಧಿಲ್ವಾರು ಬಿಲ್ಲಿನಲ್ಲಿ ಡ್ರಾ ಮಾಡಿ ಈಗ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಈ ರೀತಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುವುದು ನಿಯಮಬಾಹಿರವಾಗಿರುತ್ತದೆ. ಈ ನ್ಯೂನತೆಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪತ್ರ ದಾಖಲಾತಿಗಳೊಂದಿಗೆ |

ಹಾಜರುಪಡಿಸುವಂತೆ, ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:27/2019–20 ದಿನಾಂಕ:09.08.2019ರಲ್ಲಿ ಕೋರಲಾಗಿ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅನುಪಾಲನಾ ವರದಿಯು ಸಮರ್ಪಕವಾಗಿರುವುದಿಲ್ಲ ಹಾಗೂ ಹೊಂದಾಣಿಕೆ ಮಾಡಿಕೊಂಡಿರುವ ಬಿಲ್ಲುಗಳ ಒಟ್ಟು **ಮೊತ್ತ ರೂ.32,020/–ಗಳನ್ನು ಆಕ್ಷೇಪಣೆಗೆ ಸೂಚಿಸಿದ್ದು,** ವಿವರಗಳನ್ನು **ಅನುಬಂಧ–12ರಲ್ಲಿ** ವಿವರಿಸಿದೆ.

**(II) ಪ್ರಯಾಣ ಭತ್ಯೆ, ಉಪಸ್ಥಿತಿ ಭತ್ಯೆ ಹಾಗೂ ದಿನಭತ್ಯೆ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುವುದು:–**

ಎ.ಸಿ ಬಿಲ್ಲಿನ ಬಿ.ಆರ್ ಸಂಖ್ಯೆ 2806/ದಿನಾಂಕ:01.08.2015ರಲ್ಲಿ ಡ್ರಾ ಮಾಡಲಾದ ಮುಂಗಡ ಹಣಕ್ಕೆ 2017–18ನೇ ಸಾಲಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯ ಪುನರಾವಲೋಕನ ಆಯೋಗದ ಸಭೆಯ ವೆಚ್ಚವನ್ನು ಭರಿಸಲು ಧನಾದೇಶ ಸಂಖ್ಯೆ:464127, ದಿನಾಂಕ:03.08.2015ರಲ್ಲಿ ರೂ.50,000/–ಗಳನ್ನು ಡ್ರಾ ಮಾಡಲಾಗಿದ್ದು, ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ದಿನಭತ್ಯೆ, ಉಪಸ್ಥಿತಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪ್ರತ್ಯೇಕವಾಗಿ ಪಾವತಿ ಮಾಡದೇ ಒಟ್ಟಾಗಿ ಸೇರಿಸಿ ಒಂದು ಮೊತ್ತವನ್ನು ಪಾವತಿಸಲಾಗಿದೆ. ಹಣವನ್ನು ಈ ಕೆಳಕಂಡವರಿಗೆ ಪಾವತಿಸಲಾಗಿದೆ.

| ಕ್ರ.ಸಂ | ಹೆಸರು | ಪ್ರಯಾಣ ಭತ್ಯೆ, ಉಪಸ್ಥಿತಿ ಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 1 | ಪ್ರೋ.ಎಂ.ಮಹದೇವಪ್ಪ | 4000/– |
| 2 | ಪ್ರೋ.ಎಂ.ಮುನಿಯಮ್ಮ | 9000/– |
| 3 | ಪ್ರೋ.ಎಂ.ಪಠಾಣ್ | 9000/– |
| 4 | ಪ್ರೋ ವಿ.ವಿ. ಕೋಟಿನೋ | 9000/– |
| | **ಒಟ್ಟು ಮೊತ್ತ** | **31000/–** |

ಮೇಲ್ಕಂಡ ಪಾವತಿಯಲ್ಲಿ ಕೆ.ಸಿ.ಎಸ್.ಆರ್ ನಿಯಮಗಳನುಸಾರ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿದೆಯೇ ಎಂಬುದರ ವಿವರಗಳಿಲ್ಲದಿರುವ ಕಾರಣ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:51/2019–20, ದಿನಾಂಕ:31.08.2019ರಲ್ಲಿ ನೀಡಲಾಗಿ. ಯಾವುದೇ ಉತ್ತರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದುದರಿಂದ ಕೆ.ಸಿ.ಎಸ್.ಆರ್ 1958ರ ನಿಯಮ 451ರ ಪಾಲನೆಯಾಗಿದೆಯೇ ಎಂಬುದನ್ನು ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಪಾವತಿಯಾಗಿರುವ **ರೂ.31,000/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

ಉತ್ತರ

1) ಮಾನ್ಯ ಕುಲಪತಿಗಳು ಪ್ರವಾಸ ಸಮಯದಲ್ಲಿ ಉಪಯೋಗಿಸುವ ಅಧಿಕೃತ ವಾಹನಕ್ಕೆ ತುರ್ತು ಸಂದರ್ಭಗಳಲ್ಲಿ ಇಂಧನ ಮತ್ತು ಇತ್ಯಾದಿ ವೆಚ್ಚಗಳನ್ನು ಭರಿಸಲು ಆವರ್ತನ ಪದ್ಧತಿಯಲ್ಲಿ ರೂ.10,000/–ಗಳ ಮುಂಗಡವನ್ನು ಪಡೆಯಲು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಜಿಎಲ್–3/ವಾಹನ/567/ವಾನಿಮು/ 2012–13, ದಿನಾಂಕ: 27.03.2013 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ಪ್ರತಿ ಬಾರಿಯು ರೂ.10,000/– ಗಳನ್ನು ಮುಂಗಡವಾಗಿ ಪಡೆದು ವ್ಯಯಿಸಲಾದ ವೆಚ್ಚಗಳ ಹುಂಡಿಗಳೊಂದಿಗೆ ಲೆಕ್ಕ ಹೊಂದಾಣಿಕೆ ಸಲ್ಲಿಸಿ ಪುನಃ ಮರು

| | |
|---|---|
| | ಮುಂಗಡ ಪಡೆದು ಕ್ರಮವಹಿಸಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಕಡತವನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಾಗಿದೆ. ತಮ್ಮ ಸೂಚನೆಯಂತೆ ಆವರ್ತನ ಪದ್ಧತಿಯಡಿಯಲ್ಲಿ ಆಯಾಯ ವಿಭಾಗಗಳ ಕಚೇರಿ ಸಾಧಿಲ್ವಾರು ನಿರ್ವಹಣೆಗೆ ಪಡೆಯಲಾಗುವ ಮುಂಗಡದಲ್ಲಿ ವ್ಯಯಿಸುವ ವೆಚ್ಚಗಳ ಹುಂಡಿಗಳಿಗೆ ಸೀಮಿತವಾಗಿ ಆ ಮೊತ್ತದ ಮರು ಭರಿಕೆಗೆ ಲೆಕ್ಕ ಹೊಂದಾಣಿಕೆ ಸಲ್ಲಿಸಿ ಮರುಭರಿಕೆಗೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ತಿಳಿಸುತ್ತಾ ಮೇಲಿನ ಕಂಡಿಕೆಗಳ ವಿವರಣೆಗಳನ್ನು ಸಲ್ಲಿಸಿ ವಿಚಾರಣೆಯನ್ನು ಕೈಬಿಡಲು ಕೋರಿದೆ.<br>ದಿನಾಂಕ: 10.01.2018 ರಂದು ನಡೆದಿದ್ದ 149ನೇ ಬಿ.ಓ.ಎಂ., ಹಾಗು 70ನೇ ಹಣಕಾಸು ಸಮಿತಿ ಸಭೆಗೆ ಎ.ಸಿ. ಹುಂಡಿಯ ಮೂಲಕ ಪಡೆದಿದ್ದ ರೂ.1,68,000/– ಗಳ ಮೊತ್ತದಲ್ಲಿ ಹಿಂದಿನ ಸಭೆಯ ವ್ಯತ್ಯಾಸದ ಮೊತ್ತವನ್ನು ಅನಿವಾರ್ಯ ಕಾರಣಗಳಿಂದ ಪಾವತಿಸಿದ್ದು, ಸದರಿ ಮೊತ್ತದಲ್ಲಿ ವ್ಯತ್ಯಾಸವಾಗದಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಹಾಗಾಗಿ, ಇನ್ನು ಮುಂದೆ ಈ ರೀತಿ ಮತ್ತೆ ಮರುಕಳಿಸದಂತೆ ಎಚ್ಚರಿಕೆ ವಹಿಸಲಾಗುವುದು ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಹಾಗೆಯೇ ಹಣಕಾಸು ಸಮಿತಿ ಹಾಗು ಬಿ.ಓ.ಎಂ. ಸದಸ್ಯರ ಪಟ್ಟಿ, ಹಣಕಾಸು ಸಮಿತಿ ಹಾಗು ಬಿ.ಓ.ಎಂ. ಸಭೆಗೆ ಹಾಜರಾದ ಸದಸ್ಯರ ಪಟ್ಟಿ, ಹಣಕಾಸು ಸಮಿತಿ ಸಭೆಯ ನಡವಳಿ, ಕಡತದ ನೋಟ್ ಶೀಟ್‌ನಲ್ಲಿ ಸದರಿ ಮೊತ್ತವನ್ನು ಎ.ಸಿ. ಹುಂಡಿಯ ಮೂಲಕ ಪಡೆಯಲು ಅನುಮೋದನೆ ಪಡೆಯಲಾಗಿರುತ್ತದೆ. 2) ಕರಾಮುವಿ ಕಾಯ್ದೆಯ ಮೊದಲನೇ ಪರಿನಿಯಮದ ನಿಯಮ 8(2)(ಎಂ) ರಲ್ಲಿ ವ್ಯವಸ್ಥಾಪನಾ ಮಂಡಳಿಗಿರುವ ಪ್ರದತ್ತವಾದ ಅಧಿಕಾರದನ್ವಯ ಹಣಕಾಸು ಸಮಿತಿ ಹಾಗು ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ವೇತನ ಭತ್ಯೆ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 45 | **<u>44. ಎ.ಸಿ ಬಿಲ್ಲಿನಲ್ಲಿ ಹಣ ಡ್ರಾ ಮಾಡಲಾಗಿದ್ದ ಮೊತ್ತಕ್ಕೆ 3 ವರ್ಷ ವಿಳಂಭವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿರುವುದು :–</u>**<br>SERB Project ಗೆ ಸಂಬಂಧಿಸಿದಂತೆ ದಿನಾಂಕ:05.09.2014ರಲ್ಲಿ ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಲಾಗಿರುವ ಹಣಕ್ಕೆ 2017–18ನೇ ಸಾಲಿನಲ್ಲಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿದ್ದು, ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br>ಅ) ಬಿ.ಆರ್ ಸಂಖ್ಯೆ:4687, ದಿನಾಂಕ:05.09.2014ರಲ್ಲಿ ಎ.ಸಿ ಬಿಲ್ಲಿನ ಮೂಲಕ ಧನಾದೇಶ ಸಂಖ್ಯೆ:881387, ದಿನಾಂಕ:18.09.2014ರಂದು ರೂ.15,60,000/–ಗಳನ್ನು ಡ್ರಾ ಮಾಡಲಾಗಿದ್ದು, 2017–18ನೇ ಸಾಲಿನಲ್ಲಿ ಬಿ.ಆರ್ ಸಂಖ್ಯೆ 1324 ದಿನಾಂಕ:08.01.2018ರಂದು ಎನ್.ಡಿ.ಸಿ ಲೆಕ್ಕ ಹೊಂದಾಣಿಕೆಯಾಗಿದೆ. ಸರ್ಕಾರದ ಸುತ್ತೋಲೆಯ ಸಂಖ್ಯೆ:FD2/TTC/28-1999ರ ಮಾರ್ಗಸೂಚಿಯ ರೀತ್ಯಾ ಎ.ಸಿ ಬಿಲ್ಲಿನಲ್ಲಿ ಹಣ ಡ್ರಾ ಮಾಡಲು/ಮುಂಗಡ ಪಡೆಯಲು ರೂ.2,00,000/–ವರೆಗೆ ಮಾತ್ರ ಅವಕಾಶವಿದ್ದು, ರೂ.15,60,000/–ಗಳನ್ನು ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಿರುವುದು KFC ಅನುಚ್ಛೇಧ 15 ಹಾಗೂ ಮೇಲ್ಕಂಡ ಸುತ್ತೋಲೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಹಾಗೂ ಈ ಬಗ್ಗೆ ಸರ್ಕಾರದ ಆದೇಶ ಪಡೆದಿರುವ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ |

| | |
|---|---|
| | ಹಾಜರುಪಡಿಸಿರುವುದಿಲ್ಲ.ಆ) ಹಾಜರುಪಡಿಸಿದ ಎನ್.ಡಿ.ಸಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಕೆಮಿಕಲ್ಸ್, ಹಾಗೂ Lab Equipments ಗಳನ್ನು ಖರೀದಿಸಲಾಗಿದ್ದು, ಸದರಿ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ದರಪಟ್ಟಿ/ಟೆಂಡರ್ ಕಡತ ಹಾಗೂ ಇತರೇ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಖರೀದಿಗಳಿಗೆ ಸಂಬಂಧಿಸಿದಂತೆ SERB Project Guidelines, Sanction order, ಬ್ಯಾಂಕ್ ಖಾತೆಯ ಪಾಸ್ ಪುಸ್ತಕ, ಧನಾದೇಶ ಪುಸ್ತಕದ ಕೌಂಟರ್ ಫೈಲ್ (Cheque counter foil), ಹಾಜರಾತಿ Chemicals ಹಾಗೂ Lab equipment ಗಳ ಖರೀದಿಗೆ ಸಂಬಂಧಿಸಿದಂತೆ ಟೆಂಡರ್ ದಾಖಲಾತಿಗಳು/ದರಪಟ್ಟಿ ವಿವರ, ದಾಸ್ತಾನು ಪುಸ್ತಕವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:48/2019–20 ದಿನಾಂಕ:28.08.2019ರಲ್ಲಿ ಕೋರಲಾಗಿ, ಯಾವುದೇ ಲೆಕ್ಕಪತ್ರ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>ಸಾದಿಲ್ವಾರು ವೆಚ್ಚದ ಕೈಪಿಡಿಯ 1958ರ ನಿಯಮ 36, 37ರ ರೀತ್ಯಾ ಸಂಕ್ಷಿಪ್ತ ಸಾಧಿಲ್ವಾರು ಬಿಲ್ಲುಗಳನ್ನು (ಎ.ಸಿ ಬಿಲ್ಲು) ಅತಿ ತುರ್ತು ಸಂದರ್ಭಗಳಲ್ಲಿ ಮಾತ್ರ ಡ್ರಾ ಮಾಡಬಹುದಾಗಿದ್ದು, ಡ್ರಾ ಮಾಡಿದ 30 ದಿನದೊಳಗಾಗಿ ಹೊಂದಾಣಿಕೆ ಲೆಕ್ಕವನ್ನು ನೀಡಬೇಕಾಗಿರುತ್ತದೆ. ಆದರೆ ಇಲ್ಲಿ Project Assistant ರ ವೇತನ ಕೆಮಿಕಲ್ಸ್ ಖರೀದಿ Lab equipment ಗಳು ಹಾಗೂ ಇತರೆ ಸಾದಿಲ್ವಾರು ವೆಚ್ಚಗಳನ್ನು ಭರಿಸಲಾಗಿದ್ದು, ಸುಮಾರು 3 ವರ್ಷ, 3 ತಿಂಗಳನಂತರ ಎನ್.ಡಿ.ಸಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುವುದು ಮೇಲ್ಕಂಡ ನಿಯಮದ ಉಲ್ಲಂಘನೆಯಾಗಿರುತ್ತದೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ಹಣವು ದುರುಪಯೋಗವಾಗಿರುವ ಸಂಭವವಿರುತ್ತದೆ. ಈ ಬಗ್ಗೆ ವಿಶ್ವವಿದ್ಯಾನಿಲಯದವರು ತಡವಾಗಿ ಲೆಕ್ಕ ಸಲ್ಲಿಸಿರುವವರ ವಿರುದ್ಧ ಕ್ರಮ ಜರುಗಿಸಲು ಸೂಚಿಸಿದೆ. ಹಾಗೂ ತಡವಾಗಿ ಸಲ್ಲಿಸಿರುವ ಅವಧಿಗೆ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ವಸೂಲಾತಿಗೆ ಸೂಚಿಸಿದೆ.<br>ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಲಾದ ಹಣಕ್ಕೆ ಅತಿ ವಿಳಂಬವಾಗಿ ಎನ್.ಡಿ.ಸಿ ಹೊಂದಾಣಿಕೆಯಾಗಿರುವುದನ್ನು ಆಕ್ಷೇಪಿಸಿದ್ದು, ದಾಸ್ತಾನು ಪುಸ್ತಕ ಹಾಗೂ ದರಪಟ್ಟಿ/ಟೆಂಡರ್ ಪ್ರಕ್ರಿಯೆಯ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ **ಅನುಬಂಧ–13 ರಲ್ಲಿ** ವಿವರಿಸಿರುವ **ಒಟ್ಟು ಮೊತ್ತ ರೂ.1,65,810/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ರಸಾಯನಶಾಸ್ತ್ರ ವಿಭಾಗಕ್ಕೆ 2014–15 ನೇ ಸಾಲಿನಲ್ಲಿ SERB project ಮಂಜೂರಾಗಿದ್ದು ಮೊದಲ ವರ್ಷದ ಕಂತಾಗಿ ರೂ.15,60,000/– ಗಳನ್ನು ಕರಾಮುವಿಯ ಸಾಮಾನ್ಯ ಖಾತೆಗೆ ವರ್ಗಾವಣೆ ಮಾಡಿದ್ದರು. ಸಾಮಾನ್ಯ ಖಾತೆಯಲ್ಲಿ ವಿಶ್ವವಿದ್ಯಾನಿಲಯದ ಅನೇಕ ವಿಧವಾದ ಖರ್ಚು ವೆಚ್ಚಗಳನ್ನು ನಿಭಾಯಿಸುವುದರಿಂದ DST project ಗೆ ಸಂಬಂಧಿಸಿದ ಖರ್ಚು ವೆಚ್ಚಗಳನ್ನು ಬೇರ್ಪಡಿಸಿ NDC ನೀಡುವುದು ಕಷ್ಟ ಸಾಧ್ಯವೆಂಬ ಸಲಹೆಯ ಮೇರೆಗೆ DST project Co-ordinator ನ ಹೆಸರಿನಲ್ಲಿ ಪ್ರತ್ಯೇಕ ಖಾತೆ ತೆರೆದು ರೂ.15,60,000/– ಗಳ ಹಣವನ್ನು ಈ |

| | |
|---|---|
| | ಖಾತೆಗೆ ವರ್ಗಾಯಿಸಲಾಗಿತ್ತು. ಅನುದಾನ ಮೊತ್ತವನ್ನು ಕರಾಮುವಿಯ ನಿಯಮಾನುಸಾರ ಕುಲಪತಿಯವರ ಅನುಮೋದನೆ ನಂತರ ಎಸಿ ಬಿಲ್ಲಿನ ಮುಖಾಂತರ ಬಳಸಿ ನಂತರ ಎನ್‌ಡಿಸಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡಲಾಗಿದೆ. ತಾವು ತಿಳಿಸಿದಂತೆ ಒಮ್ಮೆಗೆ ಡ್ರಾ ಮಾಡಲಾಗಿಲ್ಲ. ಬದಲಾಗಿ ಎನ್‌ಡಿಸಿ ನೀಡಲು ಅನುಕೂಲವಾಗಲೆಂದು ಪ್ರತ್ಯೇಕ ಖಾತೆಯಲ್ಲಿ ಇರಿಸಲಾಗಿತ್ತು.<br>ಅಶೋಕ್ ರಾಜ್ ಸಿ.ಎಸ್. ರವರಿಗೆ ನವೆಂಬರ್ 2015 ರ ಮಾಹೆಯಲ್ಲಿ ನೀಡಿದ 8,000/– ರೂ. ವೇತನಕ್ಕೆ ನೀಡಲಾಗಿದೆ.<br>ಪದ್ಮಶ್ರೀ ಸೈನ್‌ಟಿಫಿಕ್ ಲ್ಯಾಬರೇಟರಿ ಎಕ್ವ್ಯೂಪ್‌ಮೆಂಟ್ಸ್ ರವರಿಗೆ ದಿನಾಂಕ: 25.12.2014 ರಂದು ದರಪಟ್ಟಿ ತಯಾರಿಸಿ ದಿನಾಂಕ 18.01.2015 ರಂದು ಕಾರ್ಯಾದೇಶವನ್ನು ನೀಡಲಾಗಿದೆ ಹಾಗು ಈ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 01 ರಲ್ಲಿ ನಮೂದಿಸಿ ದೃಢೀಕರಿಸಲಾಗಿದೆ.<br>ಮಹವೀರ್ ಡಿಸ್ಟ್ರಿಬ್ಯೂಟರ್ಸ್ ರವರಿಗೆ ದಿನಾಂಕ: 30.12.2014 ರಂದು ದರಪಟ್ಟಿ ತಯಾರಿಸಿ ದಿನಾಂಕ: 18.01.2015 ರಂದು ರ್ಯಾದೇಶವನ್ನು ನೀಡಲಾಗಿದೆ ಹಾಗು ಈ ಸಾಮಗ್ರಿಯನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 04 ರಲ್ಲಿ ನಮೂದಿಸಿ ದೃಢಿಕರಿಸಲಾಗಿದೆ.<br>ಬೆಂಗಳೂರು ಸೈನ್‌ಟಿಫಿಕ್ ಕೊ. ರವರಿಗೆ ದಿನಾಂಕ: 25.12.2014 ರಂದು ದರಪಟ್ಟಿ ತಯಾರಿಸಿ ದಿನಾಂಕ 19.01.2015 ರಂದು ಕಾರ್ಯಾದೇಶವನ್ನು ನೀಡಲಾಗಿದೆ ಹಾಗು ಈ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 02 ಮತ್ತು 03 ರಲ್ಲಿ ನಮೂದಿಸಿ ದೃಢೀಕರಿಸಲಾಗಿದೆ.<br>ಟಾರ್‌ವಿಕ್ ರವರಿಗೆ ಈ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 05 ರಲ್ಲಿ ನಮೂದಿಸಿ ದೃಢೀಕರಿಸಲಾಗಿದೆ.<br>ಪದ್ಮಶ್ರೀ ಸೈನ್‌ಟಿಫಿಕ್ ಲ್ಯಾಬೋರೇಟರಿ ಎಕ್ವ್ಯೂಪ್‌ಮೆಂಟ್ಸ್ ರವರಿಗೆ ದಿನಾಂಕ: 23.08.2015 ರಂದು ದರಪಟ್ಟಿ ತಯಾರಿಸಿ ನೀಡಲಾಗಿದೆ ಹಾಗು ಈ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 06 ರಲ್ಲಿ ನಮೂದಿಸಿ ದೃಢೀಕರಿಸಲಾಗಿದೆ.<br>ಸುಚಾರ ಅಸೋಸಿಯೇಟ್ಸ್ ರವರಿಗೆ ದಿನಾಂಕ: 29.12.2016 ರಂದು ದರಪಟ್ಟಿ ತಯಾರಿಸಿ ನೀಡಲಾಗಿದೆ ಹಾಗು ಈ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದ ಪುಟ ಸಂಖ್ಯೆ 07 ರಲ್ಲಿ ನಮೂದಿಸಿ ದೃಢೀಕರಿಸಲಾಗಿದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 46 | **45. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್.ಬಿ.ಐ ಬ್ಯಾಂಕ್ ಕಟ್ಟಡದಿಂದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ನಿದಿಪಡಿಸಿರುವ ಬಾಡಿಗೆಯನ್ನು ವಸೂಲಿಸದಿರುವುದು :–**<br>2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್.ಬಿ.ಐ ಬ್ಯಾಂಕ್‌ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯದವರು ನೀಡಿರುವ ಬಾಡಿಗೆ ಕಟ್ಟಡದಿಂದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ನಿಗದಿಪಡಿಸಿರುವ ಮಾಹೆಯಾನ ಬಾಡಿಗೆಯನ್ನು ವಸೂಲಿ |

ಮಾಡದಿರುವುದು ಕಂಡುಬಂದಿರುತ್ತದೆ.

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮೈಸೂರು ವಿಭಾಗದ ಕಾರ್ಯಪಾಲಕ ಅಭಿಯಂತರವರ ಪತ್ರ ಸಂಖ್ಯೆ:ಕಾ.ಇಂ/ಮೈವಿಮೈ/ಎಇ3/ಬಾಡಿಗೆ ನಿಗದಿ/11-12/1757, ದಿನಾಂಕ: 10.06.2011ರ ರೀತ್ಯಾ ಸದರಿ ಕಟ್ಟಡಕ್ಕೆ ಮಾಹೆಯಾನ ಬಾಡಿಗೆಯನ್ನು ರೂ.37,500/-ಗಳಿಗೆ ನಿಗದಿಪಡಿಸಲಾಗಿದೆ. ಆದರೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ನಿಗದಿಪಡಿಸಿದ ರೂ.37,500/-ಗಳನ್ನು ಮಾಹೆಯಾನ ಬಾಡಿಗೆಯನ್ನಾಗಿ ನಿಗದಿಪಡಿಸದೇ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವರ ಪತ್ರ ಸಂಖ್ಯೆ:ಕರಾಮುವಿ/ಇಂ.ಶಾ/2011-12, ದಿನಾಂಕ:10.06.2011ರ ರೀತ್ಯಾ ಎಸ್.ಬಿ.ಎಂ ಬ್ಯಾಂಕಿನ ಕಟ್ಟಡದ ಮಾಸಿಕ ಬಾಡಿಗೆಯನ್ನು ರೂ25,000/-ಗಳಿಗೆ ನಿಗದಿಪಡಿಸಲಾಗಿದ್ದು, ದಿನಾಂಕ:01.02.2012 ರಿಂದ ಜಾರಿಗೆ ಬಂದಂತೆ 15 ವರ್ಷಗಳಿಗೆ Lease Dead ಕರಾರು ಒಪ್ಪಂದವನ್ನು ಕುಲಸಚಿವರು ಮತ್ತು ಸದರಿ ಬ್ಯಾಂಕ್ ಶಾಖೆಯ ಮ್ಯಾನೇಜರ್‌ನೊಂದಿಗೆ ಮಾಡಿಕೊಳ್ಳಲಾಗಿರುತ್ತದೆ. ಈ Lease Deed ನ (1)ನೇ ಷರತ್ತಿನನ್ವಯ ಪ್ರತಿ 5 ವರ್ಷಕ್ಕೊಮ್ಮೆ ಶೇ 20% ರಷ್ಟು ಮಾಹೆಯಾನ ಬಾಡಿಗೆಯನ್ನು ಹೆಚ್ಚುವರಿ ಮಾಡಿ ವಸೂಲಿಸಬೇಕಾಗಿರುತ್ತದೆ. ಸದರಿ Lease Deadನ ರೀತ್ಯಾ ದಿನಾಂಕ:01.02.2017 ರಿಂದ ಜಾರಿಗೆ ಬಂದಂತೆ ಮೂಲ ಬಾಡಿಗೆಯ ದರ ರೂ.25,000/-ಗಳಿಗೆ ಶೇ 20% ದರ ಹೆಚ್ಚಿಸಿ, 01.02.2017 ರಿಂದ ರೂ.30,000/-ಗಳನ್ನು ಮಾಹೆಯಾನ ಬಾಡಿಗೆಯಾಗಿ ವಸೂಲಿ ಮಾಡಬೇಕಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಕಾನೂನುಗಳಿಗೆ ಬದ್ಧವಾಗಿರುವುದರಿಂದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯವರು ನಿಗದಿಪಡಿಸಿಕೊಟ್ಟ ಬಾಡಿಗೆಯನ್ನು ವಸೂಲಿ ಮಾಡಬೇಕಾಗಿದೆ. ಆದರೆ ನಿಯಮಾನುಸಾರ ಬಾಡಿಗೆ ವಸೂಲಿ ಮಾಡದೆ ವಿಶ್ವವಿದ್ಯಾನಿಲಯದವರೇ ನಿರ್ಣಯ ತೆಗೆದುಕೊಂಡು ಕಡಿಮೆ ಬಾಡಿಗೆ ವಸೂಲಿ ಮಾಡಿರುತ್ತಾರೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುತ್ತದೆ. Lease deedನ ಪ್ರಕಾರ ಲೋಕೋಪಯೋಗಿ ಬಂದರು ಒಳನಾಡು ಜಲಸಾರಿಗೆಯು ನಿಗದಿಪಡಿಸಿರುವ ಮಾಹೆಯಾನ ಬಾಡಿಗೆಯ ಮೊತ್ತ ರೂ.37,500/-ಕ್ಕೆ Lease Dead ನ (1) ನೇ ಷರತ್ತಿನನ್ವಯ ದಿನಾಂಕ:01.02.2017 ರಿಂದ ಶೇ 20% ರಷ್ಟು ಹೆಚ್ಚಿಸಿ ಅಂದರೆ ರೂ.7,500/- ಗಳ ಹೆಚ್ಚುವರಿ ಮಾಡಿ ಒಟ್ಟು ರೂ.45,000/-ಗಳನ್ನು ಮಾಹೆಯಾನ ಬಾಡಿಯನ್ನು ವಸೂಲ್ಮಾಡಬೇಕಾಗಿರುತ್ತದೆ. ಆದರೆ ರೂ.45,000/-ಗಳಂತೆ ಬಾಡಿಗೆಯನ್ನು ಸ್ವೀಕರಿಸದೇ ದಿನಾಂಕ:01.12.2017 ರಿಂದ ರೂ.30,000/-ರಂತೆ ಬಾಡಿಗೆ ಸ್ವೀಕರಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಪ್ರತಿ ಮಾಹೆ ರೂ.15,000/-ಗಳು ನಷ್ಟವುಂಟಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ಇಂ.ಶಾ/2011-12, ದಿನಾಂಕ:10.06.2011ರಲ್ಲಿನ ಆದೇಶದ ರೀತ್ಯಾ ರೂ.25,000/-ಗಳನ್ನು ಮಾಹೆಯಾನ ಬಾಡಿಗೆಯನ್ನಾಗಿ ಸದರಿ ಕಟ್ಟಡಕ್ಕೆ ನಿಗದಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವತಿಯಿಂದ ಸದರಿ ಕಟ್ಟಡವನ್ನು ಮರು ಅಳತೆ ಮಾಡಿಸಿ ಬಾಡಿಗೆಯನ್ನು ನಿಗದಿಪಡಿಸಲಾಯಿತೇ? ಯಾವ

| | |
|---|---|
| | ಆಧಾರದ ಮೇಲೆ ಎಷ್ಟು ಚದರಡಿಗೆ ರೂ.25,000/–ಗಳನ್ನು ಮಾಹೆಯಾನ ಬಾಡಿಗೆಯನ್ನಾಗಿ ನಿಗದಿಪಡಿಸಲಾಯಿತು ಎಂಬ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:26/2019–20 ದಿನಾಂಕ:09.08.2019ರಲ್ಲಿ ಕೋರಲಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅನುಪಾಲನಾ ವರದಿಯು ಅಸಮರ್ಪಕವಾಗಿರುತ್ತದೆ.<br>ಆದುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಬ್ಯಾಂಕ್ ಕಟ್ಟಡದಿಂದ ಸ್ವೀಕರಿಸಿದ ಮಾಹೆಯಾನ ಬಾಡಿಗೆಯ ದರದ ವ್ಯತ್ಯಾಸದ **ಮೊತ್ತ 02/2017 ರಿಂದ 02/2018 ರವರೆಗೆ ರೂ.1,90,000/–ಗಳನ್ನು ಎಸ್.ಬಿ.ಐ ಬ್ಯಾಂಕಿನಿಂದ ವಸೂಲಿಸಿ,** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. ವಿವರಗಳನ್ನು **ಅನುಬಂಧ–14ರಲ್ಲಿ** ಲಗತ್ತಿಸಿದೆ. ಹಾಗೂ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡಕ್ಕೆ ಬಾಡಿಗೆ ನಿಗಧಿಪಡಿಸಿರುವುದರ ಬಗ್ಗೆ ಮಾನ್ಯ ಕುಲಪತಿಗಳು ಹಾಗು ಕುಲಸಚಿವರವರು ಬ್ಯಾಂಕಿನ ಶಾಖಾ ವ್ಯವಸ್ಥಾಪಕರ ಮನವಿಯ ಕೋರಿಕೆಯಂತೆ ದಿನಾಂಕ: 10.06.2011 ರಂದು ಚರ್ಚಿಸಿದ್ದು, ಮಾನ್ಯ ಕುಲಪತಿಯವರು ಬಾಡಿಗೆ ಮೊತ್ತವನ್ನು ರೂ. 25,000/– ಗಳಿಗೆ ನಿಗಧಿಪಡಿಸಲು ಕಡತದಲ್ಲಿ ತಿಳಿಸಿರುತ್ತಾರೆ. ಅದರಂತೆ ಬಾಡಿಗೆಯನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಈ ಸಂಬಂಧ ಕಡತವನ್ನು ಲೆಕ್ಕ ತಪಾಸಣಾ ಸಮಯದಲ್ಲಿ ಈಗಾಗಲೇ ಲೆಕ್ಕ ತಪಾಸಣೆಗೆ ನೀಡಲಾಗಿರುತ್ತದೆ. ಆದ್ದುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 47 | **46. ವಿಶ್ವವಿದ್ಯಾನಿಲಯದ ಕಟ್ಟಡಗಳಿಗೆ ನಿಗದಿಪಡಿಸಿರುವ ಬಾಡಿಗೆಯನ್ನು ವಸೂಲಿ ಮಾಡದಿರುವುದು :–**<br>2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಿವಿಧ ದಿನಾಂಕಗಳಂದು ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾವೇರಿ ಕಟ್ಟಡವನ್ನು ವಿವಿಧ ಕಾರ್ಯಗಾರ ಸಮಾರಂಭದ ಉದ್ದೇಶಗಳಿಗೆ ಬಾಡಿಗೆಗೆ ನೀಡಲಾಗಿದ್ದು, ನಿಗದಿಪಡಿಸಿರುವ ಕಟ್ಟಡದ ಬಾಡಿಗೆಗಿಂತ ಕಡಿಮೆ ಬಾಡಿಗೆಯನ್ನು ವಸೂಲಿಸಿರುವುದು ಕಂಡುಬಂದಿರುತ್ತದೆ.<br>ಕುಲಸಚಿವರ ಪತ್ರ ಸಂಖ್ಯೆ:ಕರಾಮುವಿ/ಇಂ.ಶಾ/2013–14 ದಿನಾಂಕ:04.06.2013ರ ರೀತ್ಯಾ ಕಾವೇರಿ ಕಟ್ಟಡವನ್ನು ಪ್ರತಿ 1/2 ದಿನಕ್ಕೆ ರೂ.10,000/– ಹಾಗೂ ಒಂದು ದಿನಕ್ಕೆ ರೂ.15,000/–ಗಳನ್ನು ನಿಗದಿಪಡಿಸಲಾಗಿರುತ್ತದೆ. ಮೇಲ್ಕಂಡ ಆದೇಶದ ರೀತ್ಯಾ ಬಾಡಿಗೆಯನ್ನು ವಸೂಲಿಸದೇ ಕಡಿಮೆ ಬಾಡಿಗೆಯನ್ನು ವಸೂಲಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟಾಗಿರುತ್ತದೆ. ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಬಾಡಿಗೆಯ ಮೊತ್ತ ಹಾಗೂ ಸ್ವೀಕರಿಸಿದ ಬಾಡಿಗೆಯ ಮೊತ್ತದ ವ್ಯತ್ಯಾಸದ ಬಾಡಿಗೆಯ ವಿವರವನ್ನು ಅನುಬಂಧ–15 ರಲ್ಲಿ ವಿವರಿಸಿದೆ. ನಿಗದಿತ ದರಕ್ಕಿಂತ ಕಡಿಮೆ ದರ ವಸೂಲ್ಮಾಡಿರುವುದಕ್ಕೆ ಸೂಕ್ತ ಸ್ಪಷ್ಟೀಕರಣವನ್ನು ಹಾಗೂ ದಾಖಲಾತಿಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:50/2019–20 ದಿನಾಂಕ:29.08.2019ರಲ್ಲಿ ಕೋರಲಾಗಿ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅನುಪಾಲನಾ ವರದಿಯು ಅಸಮರ್ಪಕವಾಗಿದ್ದು, |

ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟಾಗಿರುವ ಕಾರಣ **ಅನುಬಂಧ–15ರಲ್ಲಿ** ವಿವರಿಸಿರುವ **ಮೊತ್ತ ರೂ.33,000/– ಗಳನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಸೂಚಿಸಿದೆ.**

ಉತ್ತರ

**1**. ಭವಾನಿ ಅಸೋಸಿಯೇಟ್ಸ್ ಇವರಿಗೆ ವ್ಯತ್ಯಾಸದ ಮತ್ತು ರೂ.5,000/– ಗಳನ್ನು ಕಾವೇರಿ ಸಭಾಂಗಣದ ಬಾಡಿಗೆ ಮೊತ್ತವಾಗಿ ಪಾವತಿಸುವಂತೆ ತಿಳಿಸಲು ಪತ್ರ ನೀಡಿ ಉಳಿಕೆಯ ಮೊತ್ತವನ್ನು ಭರಿಸಲು ಕ್ರಮವಹಿಸಲಾಗುವುದು.

**2**. Indian Virtual University ರವರು ಅರ್ಧ ದಿವಸಕ್ಕೆ ಕಾರ್ಯಕ್ರಮವನ್ನು ನಿರ್ವಹಿಸಿರುವುದರಿಂದ ರೂ.10,000/– ಗಳನ್ನು ಪಾವತಿಸಿಕೊಂಡಿರಲಾಗಿರುತ್ತದೆ.

**3**. ಯೂರೋಕಿಡ್ಸ್ ರವರಿಗೆ ಮಾನ್ಯ ಕುಲಸಚಿವರು ರೂ.5,000/–ಗಳನ್ನು ಭರಿಸಿಕೊಂಡು ಕಾವೇರಿ ಸಭಾಂಗಣವನ್ನು ಬಾಡಿಗೆಗೆ ನೀಡಲು ತಿಳಿಸಿರುತ್ತಾರೆ, ಆದ್ದುದರಿಂದ ರೂ.5,000/– ಗಳನ್ನು ಪಾವತಿಸಿಕೊಂಡಿರಲಾಗಿರುತ್ತದೆ

4. ಎಸ್.ಬಿ.ಐ. ಕಾನ್ಫರೆನ್ಸ್‌ರವರಿಗೆ ಮಾನ್ಯ ಕುಲಸಚಿವರು ರೂ.8,000/– ಗಳನ್ನು ಭರಿಸಿಕೊಂಡು ಕಾವೇರಿ ಸಭಾಂಗಣವನ್ನು ಬಾಡಿಗೆಗೆ ನೀಡಲು ತಿಳಿಸಿರುತ್ತಾರೆ, ಆದುದರಿಂದ ರೂ.8,000/– ಗಳನ್ನು ಪಾವತಿಸಿಕೊಂಡಿರಲಾಗಿರುತ್ತದೆ.

5,6,7,8. ಎನ್.ಎಸ್.ಎಸ್. ಇ.ಟಿ.ಐ. ಉದ್ಘಾಟನಾ ಸಮಾರಂಭಕ್ಕೆ ಮಾನ್ಯ ಕುಲಸಚಿವರ ಆದೇಶದ ಪ್ರಕಾರ ರೂ.6,000/–ಗಳನ್ನು ಪಾವತಿಸಿಕೊಂಡಿರಲಾಗಿರುತ್ತದೆ. ಆದ್ದುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ.

**ವಿವರ**

48 **47. ಆದಾಯ ತೆರಿಗೆ ಕಟಾಯಿಸದೇ ಪೂರ್ಣ ಬಿಲ್ಲಿನ ಮೊತ್ತವನ್ನು ಪಾವತಿ ಮಾಡಿರುವುದು ಹಾಗೂ ದರಪಟ್ಟಿ ಹಾಜರುಪಡಿಸದಿರುವುದು :–**

ಬಿ.ಆರ್.ಸಂಖ್ಯೆ 4758, ದಿನಾಂಕ:09.12.2015ರಲ್ಲಿ ರೂ.5,00,000/–ಗಳನ್ನು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ವಿವಿಧ ತಜ್ಞರುಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆಯನ್ನು ಪಾವತಿಸುವ ಉದ್ದೇಶಕ್ಕಾಗಿ ಧನಾದೇಶ ಸಂಖ್ಯೆ:464727 ದಿನಾಂಕ:09.12.2015ರಲ್ಲಿ ಎ.ಸಿ ಬಿಲ್ಲಿನ ಮೂಲಕ ಡ್ರಾ ಮಾಡಲಾಗಿದ್ದು, 2017–18ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, M/S TEJAS TOURS AND TRAVELS ರವರಿಂದ ದಿನಾಂಕ:15.12.2015 ರಂದು UGC EXPERT COMMITEE ಸದಸ್ಯರಿಗೆ ವಿಶ್ವವಿದ್ಯಾನಿಲಯದ ಪರವಾಗಿ ವಾಹನ ಸೌಲಭ್ಯವನ್ನು ಒದಗಿಸಿರುವುದಕ್ಕೆ ಬಿಡಿಬಿಡಿಯಾಗಿ ಬಿಲ್ಲುಗಳ ಮೊತ್ತವನ್ನು ಪಾವತಿಸಲಾಗಿರುತ್ತದೆ. ಪಾವತಿಯ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ | ಬಿಲ್ಲಿನ ಸಂಖ್ಯೆ | ದಿನಾಂಕ | ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 370 | 15.12.2015 | 13,120 |
| 2 | 354 | 15.12.2015 | 14,197 |
| 3 | 380 | 15.12.2015 | 5,681 |
| | | **ಒಟ್ಟು ಮೊತ್ತ** | **32,998** |

| | |
|---|---|
| | ಪಾವತಿಸಿರುವ ಹಣವು ರೂ.10,000/– ಕ್ಕಿಂತ ಅಧಿಕವಿರುವುದರಿಂದ ಮೇಲ್ಕಂಡಂತೆ ವಾಹನ ಸೌಲಭ್ಯ ಒದಗಿಸುವುದಕ್ಕೆ ದರಪಟ್ಟಿ ಕರೆದು ಕಡಿಮೆ ದರ ನಮೂದಿಸಿರುವವರಿಂದ ಸೌಲಭ್ಯ ಪಡೆಯಲಾಗಿದೆಯೇ ಎಂಬುದಕ್ಕೆ ಯಾವುದೇ ದರಪಟ್ಟಿ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ದರಪಟ್ಟಿಯ ಪ್ರಕ್ರಿಯೆಯ ಕಡತ ಹಾಗೂ ಆದಾಯ ತೆರಿಗೆ ಕಾಯ್ದೆ ರೀತ್ಯಾ TDS ಕಟಾವಣೆಯಾಗಿರುವ, ಜಮೆಯಾಗಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:50/2019–20, 31.08.2019ರಲ್ಲಿ ಕೋರಲಾಗಿ ಯಾವುದೇ ಅನುಪಾಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194 (ಸಿ) ಅಡಿಯಲ್ಲಿ ಸೇವೆ ಪಡೆದಿರುವುದಕ್ಕೆ ಗುತ್ತಿಗೆದಾರರು/ವ್ಯಕ್ತಿ/ಸಂಸ್ಥೆಗೆ ಪಾವತಿಸುವ ಮೊತ್ತವು ರೂ.30,000/–ಗಳನ್ನು ಮೀರಿದರೆ ಶೇ 2% ರಂತೆ ಆದಾಯ ತೆರಿಗೆ ಕಟಾಯಿಸಿ ಸರ್ಕಾರಕ್ಕೆ ಜಮಾ ಮಾಡಬೇಕಾಗಿರುತ್ತದೆ. ಆದಾಯ ತೆರಿಗೆ ಕಟಾವಣೆಯಾಗಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ **ರೂ.660/–ಗಳನ್ನು ವಸೂಲಾತಿಗೆ ಸೂಚಿಸಿದೆ.** ಹಾಗೂ ದರಪಟ್ಟಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ **ರೂ.32,998/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** |
| | ಉತ್ತರ |
| | 1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶಿಕ್ಷಣ ಕ್ರಮಗಳಿಗೆ ಮಾನ್ಯತೆ ನವೀಕರಣ ಸಂಬಂಧ ಕೇಂದ್ರ ಕಚೇರಿಗೆ ದಿನಾಂಕ:11.12.2020 ಮತ್ತು 12.12.2020 ರಂದು ಭೇಟಿ ನೀಡಿದ್ದ ಯುಜಿಸಿ ತಜ್ಞ ಸಮಿತಿ ಸದಸ್ಯರುಗಳು ವಿವಿಧ ಸಮಯದಲ್ಲಿ ಪ್ರತ್ಯೇಕವಾಗಿ ವಿಮಾನದ ಮೂಲಕ ಆಗಮಿಸಿದ್ದು, ಅವರುಗಳು ಬೆಂಗಳೂರಿನ ವಿಮಾನ ನಿಲ್ದಾಣದಿಂದ ಮೈಸೂರಿಗೆ ಆಗಮಿಸಲು, ನಿರ್ಗಮನ ಮತ್ತು ಸ್ಥಳೀಯವಾಗಿ ಉಪಯೋಗಿಸಲು ವಿಶ್ವವಿದ್ಯಾನಿಲಯದ ವತಿಯಿಂದ ಪ್ರತ್ಯೇಕ ವಾಹನ ವ್ಯವಸ್ಥೆ ಮಾಡಲಾಗಿರುತ್ತದೆ.<br>2. ಯುಜಿಸಿ ತಜ್ಞ ಸಮಿತಿ ಸದಸ್ಯರುಗಳ ಉಪಯೋಗಕ್ಕಾಗಿ ಮೆ.ತೇಜಾಸ್ ಟೂರ್ಸ್ & ಟ್ರಾವೆಲ್ಸ್, ಮೈಸೂರು, ಇವರಿಂದ ಮೂರು ಇನ್ನೋವಾ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿರುತ್ತದೆ.<br>3. ವಿಶ್ವವಿದ್ಯಾನಿಲಯಕ್ಕೆ ಬಾಡಿಗೆ ಆಧಾರದ ಮೇಲೆ ವಿವಿಧ ಮಾದರಿಯ ವಾಹನಗಳನ್ನು ಒದಗಿಸುವ ಸಂಬಂಧ ನಿಯಮಾನುಸಾರ ದರಪಟ್ಟಿ ಕರೆಯಲಾಗಿದ್ದು, ಕಡಿಮೆ ದರ ನಮೂದಿಸಿದ್ಧ ಮೆ. ಮೆ.ತೇಜಾಸ್ ಟೂರ್ಸ್ & ಟ್ರಾವೆಲ್ಸ್, ಮೈಸೂರು, ಇವರಿಗೆ ದಿನಾಂಕ:06.11.2015 ರಂದು ನೀಡಲಾಗಿರುವ ಕಾರ್ಯಾದೇಶದ ಪ್ರಕಾರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಕಾರ್ಯಾದೇಶದ ಅವಧಿಯು ದಿನಾಂಕ:05.11.2016 ರವರೆಗೆ (ಒಂದು ವರ್ಷಕ್ಕೆ) ಚಾಲ್ತಿಯಲ್ಲಿರುತ್ತದೆ<br>4. ಯುಜಿಸಿ ತಜ್ಞ ಸಮಿತಿ ಸದಸ್ಯರುಗಳ ಉಪಯೋಗಕ್ಕಾಗಿ ಪ್ರತ್ಯೇಕ ವಾಹನಗಳನ್ನು ವ್ಯವಸ್ಥೆ ಮಾಡಿದ್ದ ಹಿನ್ನೆಲೆಯಲ್ಲಿ ಸರಬರಾಜು ಸಂಸ್ಥೆಯವರು ಪ್ರತ್ಯೇಕ ಹುಂಡಿಗಳನ್ನು ಸಲ್ಲಿಸಿದ್ದು, ಸದರಿ ಹುಂಡಿಗಳನ್ನು ಪಾವತಿಗೆ ಅಂಗೀಕರಿಸಲಾಗಿದೆ. ಆದ್ದುದರಿಂದ ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 49 | **48. ಗ್ರಂಥಾಲಯಕ್ಕೆ ಪುಸ್ತಕಗಳನ್ನು ಹಿಂದಿರುಗಿಸದಿರುವುದು :–** |

| | |
|---|---|
| | ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ 2017-18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಬೋಧಕ ಸಿಬ್ಬಂದಿ ವರ್ಗದವರು ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಗ್ರಂಥಾಲಯದಿಂದ ಒಟ್ಟು 171 ಪುಸ್ತಕಗಳನ್ನು ವಿತರಣೆ ಮಾಡಲಾಗಿದ್ದು, 127 ಪುಸ್ತಕಗಳನ್ನು ಗ್ರಂಥಾಲಯಕ್ಕೆ ಹಿಂದಿರುಗಿಸಲಾಗಿದ್ದು, 44 ಪುಸ್ತಕಗಳನ್ನು ಹಿಂದಿರುಗಿಸದಿರುವುದು ಕಂಡುಬಂದಿದ್ದು, ವಿವರಗಳು ಕೆಳಕಂಡಂತಿರುತ್ತದೆ. |

| ಕ್ರ. ಸಂ | ಸದಸ್ಯರು | ಪುಸ್ತಕ ವಿತರಣೆ ಮಾಡಿರುವುದು | ಗ್ರಂಥಾಲಯಕ್ಕೆ ಹಿಂದಿರುಗಿಸಿರುವ ಪುಸ್ತಕಗಳು | ಗ್ರಂಥಾಲಯಕ್ಕೆ ಬಾಕಿ ಬರಬೇಕಾದ ಪುಸ್ತಕಗಳು |
|---|---|---|---|---|
| 1 | ಬೋಧಕ ವರ್ಗದವರು | 151 | 110 | 41 |
| 2 | ಬೋಧಕೇತರ ಸಿಬ್ಬಂದಿ ವರ್ಗದವರು | 20 | 17 | 03 |
| | ಒಟ್ಟು ಪುಸ್ತಕಗಳು | **171** | **127** | **44** |

| | |
|---|---|
| | ಸದರಿ ಸಾಲಿನಲ್ಲಿ ಗ್ರಂಥಾಲಯದಿಂದ ವಿತರಿಸಿದ ಪುಸ್ತಕಗಳು ಈ ಲೆಕ್ಕ ಪರಿಶೋಧನೆ ಕೈಗೊಂಡ 2019-20ನೇ ಸಾಲಿನವರೆಗೂ ಹಿಂದಿರುಗಿಸದಿರುವುದಕ್ಕೆ ಸೂಕ್ತ ಕ್ರಮಕೈಗೊಂಡು ಪುಸ್ತಕಗಳನ್ನು ಹಿಂಪಡೆಯುವುದು ಹಾಗೂ ನಿಯಮಾನುಸಾರ ವಿಳಂಬದ ದಿನಗಳಿಗೆ ದಂಡವನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಸೂಚಿಸಿದೆ. |
| | ಉತ್ತರ |
| | ಗ್ರಂಥಾಲಯದಿಂದ ವಿತರಿಸಿದ ಪುಸ್ತಕಗಳನ್ನು ಹಿಂಪಡೆಯಲು ಹಾಗೂ ನಿಯಮಾನುಸಾರ ವಿಳಂಬದ ದಿನಗಳಿಗೆ ದಂಡವನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಕ್ರಮವಹಿಸಲಾಗುವುದು. |
| | **ವಿವರ** |
| 50 | **<u>49. ಸರಬರಾಜುದಾರರ ಹೆಸರಿಗೆ ಧನಾದೇಶವನ್ನು ನೀಡದೆ ಪೀಠಗಳ ನಿರ್ದೇಶಕರ ಹೆಸರಿಗೆ ಧನಾದೇಶವನ್ನು ನೀಡಿರುವ ಕುರಿತು :-</u>**<br>2017-18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಪೀಠದ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಡಾ॥ ಬಿ.ಆರ್ ಅಂಬೇಡ್ಕರ್ ರವರ 126ನೇ ಜಯಂತೋತ್ಸವ ಹಾಗೂ ಡಾ॥ ಬಾಬು ಜಗಜೀವನ್ ರಾಮ್ ರವರ 110ನೇ ಜಯಂತೋತ್ಸವ ಸಮಾರಂಭಕ್ಕೆ ವಿವಿಧ ಸಾಮಗ್ರಿಗಳನ್ನು ಪಡೆದ ಬಾಬ್ತು ಪಾವತಿಸಲು ಪ್ರೋ.ಮಹಾದೇವಿ, ನಿರ್ದೇಶಕರು, ಅಂಬೇಡ್ಕರ್ ಪೀಠ ರವರ ಹೆಸರಿಗೆ ಧನಾದೇಶ ಸಂಖ್ಯೆ: 248944/ದಿನಾಂಕ:08.08.2017ರಲ್ಲಿ ರೂ.65,842/- ಹಾಗೂ ಶರಣಮ್ಮ, ನಿರ್ದೇಶಕರು, ಬಾಬು ಜಗಜೀವನ್ ರಾಮ್ ಪೀಠ ರವರ ಹೆಸರಿಗೆ ಧನಾದೇಶ ಸಂಖ್ಯೆ 33526/19.08.2017 ರಲ್ಲಿ ಇವರ ಹೆಸರಿಗೆ ರೂ.29,810/-ರ ಧನಾದೇಶವನ್ನು ನೀಡಿರುವುದು ಕಂಡುಬಂದಿದ್ದು, ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 72ರ ಪ್ರಕಾರ 1,000/- ರೂ ಮೇಲ್ಪಟ್ಟ ಯಾವುದೇ ಖರೀದಿಗೆ ಪಾವತಿಯನ್ನು ಧನಾದೇಶಗಳ ಮೂಲಕ ಸರಬರಾಜುದಾರರಿಗೆ ನೀಡಬೇಕಾಗಿದ್ದು, ಸದರಿ ಸಂಸ್ಥೆಯಲ್ಲಿ ಸರಬರಾಜುದಾರರ ಹೆಸರಿಗೆ ಧನಾದೇಶವನ್ನು ನೀಡಿರುವುದಿಲ್ಲ. ಹಾಗೂ ಸರಬರಾಜುದಾರರಿಂದ ಪಡೆದಿರುವ |

ಹಣ ಸ್ವೀಕೃತಿ ಪತ್ರವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ವಿವರಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:17/19–20 ದಿನಾಂಕ:22.07.2019 ರಲ್ಲಿ ನೀಡಲಾಗಿದ್ದು, ವಿಚಾರಣೆಗೆ ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ನಿರ್ದೇಶಕರುಗಳ ವೈಯಕ್ತಿಕ ಹೆಸರಿಗೆ ನೀಡಿರುವ **ಒಟ್ಟು ಮೊತ್ತ ರೂ.95,652/–ಗಳನ್ನು ಆಕ್ಷೇಪಿಸಲಾಗಿದೆ.** ಈ ಬಗ್ಗೆ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. ಸರಬರಾಜುದಾರರ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ಬಿ.ಆರ್.ಸಂಖ್ಯೆ/ ದಿನಾಂಕ | ಸರಬರಾಜುದಾರರ ವಿವರ | ಬಿಲ್ಲಿನ ಮೊತ್ತ (ರೂ.ಗಳಲ್ಲಿ) | ಬಿಲ್ಲಿನ ಸಂಖ್ಯೆ ದಿನಾಂಕ | |
|---|---|---|---|---|---|
| 1 | 461/27.06.2017 | ಮಾರುತಿ ಕ್ರಾಫ್ಟ್ & ಗಿಫ್ಟ್ಸ್ | 13,714 | | ಡಾ॥ ಬಿ.ಆರ್.ಸಂಬೇಡ್ಕರ್ ಪೀಠ |
| 2 | 461/27.06.2017 | ನವನೀತ್ ಕೇಟರರ್ಸ್ | 31828 | | |
| 3 | 461/27.06.2017 | ಗಾನವಿ ಡಿಜಿಟರ್ ಪೋಟೊ & ವಿಡಿಯೋ | 7,300 | | |
| 4 | 461/27.06.2017 | ನ್ಯೂ ಸಂಗಮಾ ಫ್ಲವರ್ ಸ್ಟಾಲ್ | 13,000 | | |
| 5 | 270/17.05.2017 | ಇಂದಿರಾ ಕೆಟರಿಂಗ್ & ಇವೆಂಟ್ ಮ್ಯಾನೆಜ್‌ಮೆಂಟ್ | 29,810 | 17/28.04.17 | ಡಾ॥ ಬಾಬು ಜಗಜೀವನರಾಮ್ ಪೀಠ |
| | | **ಒಟ್ಟು ಮೊತ್ತ** | **95,652** | | |

ಉತ್ತರ

ಡಾ. ಬಿ.ಆರ್. ಅಂಬೇಡ್ಕರ್‌ರವರ ಅವರ 126ನೇ ಜಯಂತೋತ್ಸವ ಸಮಾರಂಭ ಕಾರ್ಯಕ್ರಮವನ್ನು ದಿನಾಂಕ: 27.04.2017 ರಂದು ನಡೆಸಲಾಗಿದೆ. ಈ ಸಮಾರಂಭಕ್ಕೆ ತಗಲುವ ಖರ್ಚು ವೆಚ್ಚದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಮಾನ್ಯ ಕುಲಪತಿಗಳ ಅನುಮೋದನೆಗಾಗಿ ದಿನಾಂಕ: 21.04.2017 ರಂದು ವಿಭಾಗದಿಂದ ಕಡತವನ್ನು ಮಂಡಿಸಲಾಗಿತ್ತು. ಈ ಸಂಬಂಧ ಮಾನ್ಯ ಕುಲಪತಿಗಳು ಇದರ ಬಗ್ಗೆ ಚರ್ಚಿಸಿ ಅನುಮೋದಿಸಿ, ನಮ್ಮ ವಿಭಾಗಕ್ಕೆ ಕಡತವು ದಿನಾಂಕ: 28.04.2017 ರಂದು ಬಂದಿರುತ್ತದೆ. ಈ ಸಮಾರಂಭವು ದಿನಾಂಕ : 27.04.2017 ರಂದು ನಿಗಧಿಯಾಗಿದ್ದು, ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸಿ, ಆಹ್ವಾನ ಪತ್ರಿಕೆಯನ್ನು ಸಹ ಮುದ್ರಿಸಿ ವಿತರಿಸಿದ್ದು, ಸಮಾರಂಭಕ್ಕೆ ಬೇಕಾಗಿರುವ ನೆನಪಿನ ಕಾಣಿಕೆ, ಶಾಲು, ಏಲಕ್ಕಿ ಹಾರ, ಹೂವಿನ ಬೊಕ್ಕೆ, ಹೂವಿನ ಹಾರ, ಫೋಟೋ ಮತ್ತು ವೀಡಿಯೋ ಚಿತ್ರೀಕರಣ, ವೇದಿಕೆಗೆ ಹೂವಿನ ಆಲಂಕಾರ, ಲಘು ಉಪಹಾರ ಇತ್ಯಾದಿಗಳನ್ನು ವಿವಿಧ ಸರಬರಾಜುದಾರರಿಂದ ಖರೀದಿಸಬೇಕಾಗಿರುವ ಕಾರಣ (ವಿಶ್ವವಿದ್ಯಾನಿಲಯವು ಹಿಂತಿಷ್ಟೇ ಸರಬರಾಜುದಾರರಿಂದ ಖರೀದಿಸಬೇಕೆಂದು ಗುರುತಿಸಿರುವುದಿಲ್ಲ) ಅವರ ಹೆಸರಿಗೆ ಧನಾದೇಶದ ಹುಂಡಿಯನ್ನು ನೀಡಲು ಸಾಧ್ಯವಿಲ್ಲ. ಹಿಂದಿನಿಂದಲೂ ಯಾವುದೇ ಕಾರ್ಯಕ್ರಮವನ್ನು ಆಯೋಜಿಸಿದ್ದರು ವಿಶ್ವವಿದ್ಯಾನಿಲಯವು ಕಾರ್ಯಕ್ರಮಕ್ಕೆ ತಗಲುವ ಖರ್ಚು ವೆಚ್ಚದ ಧನಾದೇಶದ ಹುಂಡಿಯನ್ನು ಗೌರವ ನಿರ್ದೇಶಕರು ಹೆಸರಿಗೆ ನೀಡುತ್ತಾ ಬಂದಿದ್ದು ಅವರು ಧನಾದೇಶದ ಹುಂಡಿಯನ್ನು ತಮ್ಮ ಖಾತೆಗೆ ಜಮೆ ಮಾಡಿಕೊಂಡು ವಿವಿಧ ಸರಬರಾಜುದಾರರಿಗೆ ಹಣವನ್ನು ಭರಿಸಿರುತ್ತಾರೆ. ಅದೇ ರೀತಿ ತಾವು ಕೇಳಿರುವ ಸರಬರಾಜುದಾರರ ಹೆಸರಿಗೆ ಧನಾದೇಶವನ್ನು ನೀಡದೆ ನಿರ್ದೇಶಕರ ಹೆಸರಿಗೆ ಧನಾದೇಶವನ್ನು ನೀಡಿರುವ ಕುರಿತು ಲೆಕ್ಕ ಪರಿಶೋಧನೆಯಲ್ಲಿ ನೀಡಿರುವ ಆಕ್ಷೇಪಣೆಯಲ್ಲಿ ಸದರಿ ಸಮಾರಂಭಕ್ಕೆ (1)ಮೆ: ಮಾರುತಿ ಕ್ರಾಫ್ಟ್ಸ್ & ಗಿಫ್ಟ್ಸ್, ಮೈಸೂರು, ಇವರಲ್ಲಿ ನೆನಪಿನ ಕಾಣಿಕೆಗಳನ್ನು

| | |
|---|---|
| | ಖರೀದಿಸಲಾಗಿದ್ದು ಬಿ.ಆರ್. ಸಂಖ್ಯೆ: 461/27.06.2017 ಇವರ ಹುಂಡಿ ಸಂಖ್ಯೆ: 860/26.04.2017 ರೂ.13,714/– ಗಳಾಗಿರುತ್ತದೆ.<br>(2) ಮೆ: ನವನೀತ್ ಕೇಟರರ್ಸ್, ಮೈಸೂರು, ಇವರು ಲಘು ಉಪಹಾರವನ್ನು ಸರಬರಾಜು ಮಾಡಿರುತ್ತಾರೆ. ಬಿ.ಆರ್. ಸಂಖ್ಯೆ : 461/27.06.2017 – ಇವರ ಪರವಾಗಿ ಸಂಖ್ಯೆ :11213323000830/ 27.04.2017, ರೂ.31,828/– ಗಳಾಗಿರುತ್ತದೆ.<br>(3) ಮೆ: ಗಾನವಿ ಡಿಜಿಟಲ್ ಫೋಟೋ & ವೀಡಿಯೋ, ಮೈಸೂರು ರವರು ಕಾರ್ಯಕ್ರಮದ ಫೋಟೋ ಹಾಗು ವೀಡಿಯೋ ಚಿತ್ರೀಕರಣವನ್ನು ಮಾಡಿ ಫೋಟೋ & ವೀಡಿಯೋವನ್ನು ನೀಡಿರುತ್ತಾರೆ; ಬಿ.ಆರ್. ಸಂಖ್ಯೆ: 461/ 27.06.2017 ಹುಂಡಿ ಸಂಖ್ಯೆ: 28.04.2017, ರೂ.7,300/– ಗಳಾಗಿರುತ್ತದೆ.<br>(4) ಮೆ: ನ್ಯೂ ಸಂಗಮ್ ಸ್ಟಾಲ್, ಮೈಸೂರು ರವರು ಸಮಾರಂಭದಲ್ಲಿ ವೇದಿಕೆಯನ್ನು ಹೂವಿನಿಂದ ಅಲಂಕಾರಗೊಳಿಸಿರುತ್ತಾರೆ. ಬಿ.ಆರ್. ಸಂಖ್ಯೆ: 461/ 27.06.2017 ಹುಂಡಿ ಸಂಖ್ಯೆ: 28.04.2017 ರೂ.13,000/– ಗಳಾಗಿದ್ದು ಈ ಎಲ್ಲಾ ನಾಲ್ಕು ಸರಬರಾಜುದಾರರಿಗೆ ಗೌರವ ನಿರ್ದೇಶಕರು ಅವರುಗಳು ಸಲ್ಲಿಸಿರುವ ಹುಂಡಿಗಳ ಆಧಾರದ ಮೇಲೆ ಈ ಹುಂಡಿಗಳನ್ನು ಪಾವತಿಸಲಾಗಿದೆ.<br>ಡಾ. ಬಾಬು ಜಗಜೀವನರಾಂ ಅವರ ಜಯಂತಿ ಕಾರ್ಯಕ್ರಮಕ್ಕೆ ಇಂದಿರಾ ಕೇಟರಿಂಗ್ ಮತ್ತು ಇವೆಂಟ್ ಮ್ಯಾನೇಜ್‌ಮೆಂಟ್‌ರವರು ಊಟೋಪಚಾರವನ್ನು ಒದಗಿಸಿದ್ದು ಸದರಿಯವರು ನಮಗೆ ಚೆಕ್ ಬದಲು ನೇರವಾಗಿ ನಗದು ನೀಡುವಂತೆ ಕೇಳಿಕೊಂಡಿದ್ದರಿಂದ ಅವರಿಗೆ ನಗದು ನೀಡಲಾಗಿದ್ದು ಇದಕ್ಕೆ ಸಂಬಂಧಸಿದಂತೆ ಕ್ಯಾಷ್ ಬಿಲ್‌ಅನ್ನು ದೃಢೀಕರಿಸಿ ಲಗತ್ತಿಸಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಿದೆ. |
| | ವಿವರ |
| 51 | **<u>50. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳ ಸ್ಥಾಪನೆಗೆ ನಿವೇಶನ ಖರೀದಿಗೆ ಪೂರ್ಣ ಹಣ ಪಾವತಿಸಿದ್ದರೂ ಇದುವರೆವಿಗೆ ಸದರಿ ನಿವೇಶನ ನೊಂದಣಿ, ಖಾತೆ, ಕ್ರಯ ಪತ್ರ, ಕಂದಾಯ ಪಾವತಿ ಆಗಿಲ್ಲದೆ ಇರುವುದರ ಬಗ್ಗೆ :–</u>**<br>ಈ ಕೆಳಕಂಡ ಪ್ರಕರಣಗಳಲ್ಲಿ K.H.B ಗೆ ನಿವೇಶನಕ್ಕಾಗಿ ಹಣಪಾವತಿಸಿದ್ದರೂ ವಿಶ್ವವಿದ್ಯಾನಿಲಯದ ಹೆಸರಿಗೆ ನೊಂದಣಿ ಮಾಡಿಸಿಕೊಂಡಿರುವುದಿಲ್ಲ.<br>1) 2017–18ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಂದ ಸಿ.ಎ ಸೈಟ್ ಸಂಖ್ಯೆ:14, ಬಾಡ, ಕಾರವಾರ ಇಲ್ಲಿ 1170 ಚ.ಮೀ ನಿವೇಶನವನ್ನು ಖರೀದಿಸಿ ರೂ.1,51,67,656/–ಗಳನ್ನು ಡಿ.ಡಿ. ನಂ.199795/ದಿನಾಂಕ:31.01.2018ರಲ್ಲಿ ಕರ್ನಾಟಕ ಗೃಹ ಮಂಡಳಿ, ಬೆಂಗಳೂರುವರಿಗೆ ಪಾವತಿಸಲಾಗಿದ್ದು, (ಪೂರ್ಣ ಪಾವತಿ) ಇದುವರೆವಿಗೆ (8/2019) ಅಂದರೆ ಸುಮಾರು ಒಂದು ವರ್ಷ ಆರು ತಿಂಗಳು ಕಳೆದರೂ ಸಹ ಸದರಿ ನಿವೇಶನ KSOU ಹೆಸರಿಗೆ ನೊಂದಣಿಯಾಗಿರುವುದಿಲ್ಲ. ನೊಂದಣಿ ಮಾಡಿಕೊಳ್ಳುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರ ಬಗ್ಗೆ ವಿವರಣೆ ಕೋರಿ ಆಡಿಟ್ ವಿಚಾರಣೆ ಪತ್ರ ಸಂಖ್ಯೆ:40/2018–19 ನೀಡಲಾಗಿ ನೀಡಿರುವ ಉತ್ತರ ಸಮರ್ಪಕವಾಗಿಲ್ಲ. ಆದ್ದರಿಂದ ನಿವೇಶನಗಳನ್ನು ವಿಶ್ವವಿದ್ಯಾನಿಲಯದ ಹೆಸರಿಗೆ ನೊಂದಣಿ ಮಾಡಿಕೊಳ್ಳದಿರುವ ವಿಳಂಬ ನೀತಿ ಅನುಸರಿಸಲು ಕಾರಣರಾದವರ |

ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸುವುದು ಹಾಗೂ ನಿವೇಶನ ನೋಂದಣಿಯಾಗುವವರೆವಿಗೆ ಗೃಹಮಂಡಳಿಗೆ ಪಾವತಿಸಿರುವ ಮೊತ್ತ **ರೂ.1,51,67,656/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

2)2017–18ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿ, ಬೆಂಗಳೂರುರವರಿಂದ ಸಿ.ಎ ಸೈಟ್ ಸಂಖ್ಯೆ–2, ಅಮರಗೋಲ, 2ನೇ ಫಟ್ಟ ಧಾರವಾಡ ಜಿಲ್ಲೆ ಇಲ್ಲಿ 3126.82 ಚದರ ಮೀಟರ್‌ಗಳ ನಿವೇಶನವನ್ನು ಖರೀದಿಸಿ ರೂ.2,36,74,779/–ಗಳನ್ನು ಡಿ.ಡಿ ಸಂಖ್ಯೆ:199794/30.01.2018ರಲ್ಲಿ ಪೂರ್ಣವಾಗಿ ಹಣ ಪಾವತಿಸಿ 19 ತಿಂಗಳು ಕಳೆದರೂ ಸಹ ಇನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ ಇದರ ಬಗ್ಗೆ ವಿವರಣೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:41/20.08.2019 ನೀಡಲಾಗಿ ನೀಡಿರುವ ಉತ್ತರ ಸಮರ್ಪಕವಾಗಿಲ್ಲ ಆದುದರಿಂದ ವಿಳಂಬ ನೀತಿ ಅನುಸರಿಸಲು ಕಾರಣರಾದವರ ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ ಹಾಗೂ ನಿವೇಶನ ನೊಂದಣಿಯಾಗುವವರೆವಿಗೆ **ರೂ.2,36,74,779/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಮೇಲ್ಕಂಡ ಎರಡು ಮೊತ್ತಗಳು ಸೇರಿ ಆಕ್ಷೇಪಣಾ ಒಟ್ಟು ಮೊತ್ತ ರೂ.3,88,42,435/–ಗಳಾಗಿರುತ್ತದೆ.**

**(15167656 + 23674779)**

**ಉತ್ತರ**

ಕಾರವಾರದಲ್ಲಿ ಹಾಗೂ ಧಾರವಾಡದಲ್ಲಿ ಪ್ರಾದೇಶಿಕ ಕೇಂದ್ರ ಸ್ಥಾಪನೆಗಾಗಿ ಕರ್ನಾಟಕ ಗೃಹ ಮಂಡಳಿಯಿಂದ ಸಿ.ಎ. ನಿವೇಶನವನ್ನು ಖರೀದಿಸಿದ್ದು ಇದಕ್ಕೆ ತಗಲುವ ವೆಚ್ಚವನ್ನು ಪಾವತಿಸಲಾಗಿರುತ್ತದೆ, ಸದರಿ ನಿವೇಶನದ ನೋಂದಣಿ ಪತ್ರ, ಖಾತಾ ಪತ್ರ ಹಾಗು ಸ್ವಾಧೀನ ಪತ್ರವನ್ನು ಪಡೆಯಲು ಈಗಾಗಲೇ ಹಲವಾರು ಬಾರಿ ಪತ್ರಗಳನ್ನು ಬರೆಯಲಾಗಿರುತ್ತದೆ. ಹಾಗು ಕರ್ನಾಟಕ ಗೃಹ ಮಂಡಳಿಯ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಪ್ರಯತ್ನಿಸಲಾಗಿರುತ್ತದೆ. ಕ್ರಯ ಪತ್ರವನ್ನು ನೋಂದಣಿ ಮಾಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಿದೆ.

**ವಿವರ**

52 **51. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಛೇರಿ ವ್ಯಾಪ್ತಿಗೆ ಬರುವ ದುರಸ್ತಿಗೊಂಡ ವಾಹನಗಳ ಬಿಡಿ ಭಾಗಗಳ ವಿಲೇಗೆ ಕ್ರಮಜರುಗಿಸಿಲ್ಲದೆ ಇರುವುದು :–**

2017–18ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾಹನಗಳ ದುರಸ್ತಿ ಹಾಗೂ ಬಿಡಿ ಭಾಗಗಳ ಅಳವಡಿಕೆಗಳ ಲೆಕ್ಕದ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಿವರ ಕೆಳಕಂಡಂತಿದೆ.

1. ವಾಹನ ಸಂಖ್ಯೆ:KA-09-MB-5684 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:237722/ 13.11.2017, ರೂ. 57,024/–
2. ವಾಹನ ಸಂಖ್ಯೆ:KA-09-MH-2291 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:254849/ 03.06.2017, ರೂ. 26,136/–
3. ವಾಹನ ಸಂಖ್ಯೆ:KA-09-MH-1250 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:254995/ 17.07.2017, ರೂ. 22,069/–
4. ವಾಹನ ಸಂಖ್ಯೆ:KA-09-MB-133 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:254855/ 06.06.2017, ರೂ. 22,959/–

| | |
|---|---|
| | 5. ವಾಹನ ಸಂಖ್ಯೆ:KA-09-Z-9051 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:255037/03.08.2017, ರೂ. 30,241/–<br>6. ವಾಹನ ಸಂಖ್ಯೆ:KA-09-MA-1789 ಟೈರುಗಳ ಬದಲಾವಣೆ, ಧನಾದೇಶ ಸಂಖ್ಯೆ:254870/ 12.06.2017, ರೂ.38,921/–<br>ಮೇಲ್ಕಂಡ ವಾಹನಗಳಿಗೆ ಹೊಸ ಟೈರುಗಳನ್ನು ಖರೀದಿಸಿ ಸದರಿ ವಾಹನಗಳಿಗೆ ಅಳವಡಿಸಲಾಗಿದ್ದು, ಟೈರುಗಳ ಅಳವಡಿಕೆಯ ಅವಶ್ಯಕತೆಯನ್ನು ಸಕ್ಷಮ ಪ್ರಾಧಿಕಾರದಿಂದ ದೃಢಕರಿಸಿಕೊಂಡಿರುವುದಿಲ್ಲ. ಹಾಗೂ ವಾಹನಗಳ ಹಳೆ ಟೈರುಗಳ ದಾಸ್ತಾನು ವಿವರ ಹಾಗೂ ಹಳೆ ಟೈರುಗಳನ್ನು ವಿಲೇ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾಸ್ತಾನು ವಿವರ ಹಾಗೂ ಹಳೇ ಟೈರುಗಳನ್ನು ವಿಲೇ ಮಾಡುವವರೆಗೆ ಪಾವತಿಸಿರುವ **ಒಟ್ಟು ರೂ.1,97,350/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** |
| | ಉತ್ತರ |
| | ಕರ್ನಾಟಕ ಆರ್ಥಿಕ ಇಲಾಖೆಯ ಆದೇಶದನ್ವಯ ವಿ ವಿ ನಿಲಯದಲ್ಲಿರುವ ವಾಹನಗಳ ಟಯರುಗಳ ಬದಲಾವಣೆಗೆ ಕ್ರಮ ಅನುಸರಿಸಲಾಗುತ್ತಿದ್ದು, ಅಧಿಕೃತ ಸಂಸ್ಥೆಗಳಿಂದ ವಾಹನಗಳ ಹೊಸ ಟೈರುಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಹೊಸ ಟೈರುಗಳನ್ನು ಅಳವಡಿಸಿಕೊಳ್ಳುವುದಕ್ಕೆ ಆಯಾ ವಾಹನಗಳ ಲಾಗ್ ಪುಸ್ತಕಗಳ ಭಾಗ–2 (ಸರ್ವೀಸಿಂಗ್, ದುರಸ್ತಿ ಇತ್ಯಾದಿ) ರಲ್ಲಿ ವೋಚರ್‌ಗಳ ವಿವರಗಳನ್ನು ದಾಖಲಿಸಿ ದೃಢೀಕರಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿರುವ ವಾಹನಗಳ ದುರಸ್ತಿ ನಂತರದ ಅನುಪಯುಕ್ತ ಬಿಡಿಭಾಗಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವ ಸಂಬಂಧ ಕ್ರಮವಹಿಸಲಾಗುತ್ತಿದ್ದು, ಹಳೆಯ ಟೈರುಗಳನ್ನೂ ಸಹ ವಿಲೇವಾರಿ ಮಾಡಲಾಗುವುದು. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಿದೆ. |
| | **ವಿವರ** |
| 53 | **52. ಹಿಂದಿನ ಸಾಲುಗಳು ಸೇರಿದಂತೆ, 2017–18ನೇ ಸಾಲಿನಲ್ಲಿ ಪಾವತಿಸಲಾದ (ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವಂತೆ) ಎ.ಸಿ ಬಿಲ್ಲುಗಳು ಹಾಗೂ ಹೊಂದಾಣಿಕೆಯಾದ ಮತ್ತು 2017–18ರ ಅಂತ್ಯಕ್ಕೆ ಹೊಂದಾಣಿಕೆಯಾಗದೇ ಬಾಕಿ ಉಳಿದಿರುವ ಎ.ಸಿ ಬಿಲ್ಲುಗಳ ವಿವರ ಕೆಳಕಂಡಂತಿದೆ. :–** |

| ವಿವರಗಳು | ಎ.ಸಿ ಬಿಲ್ಲುಗಳ ಒಟ್ಟು ಸಂಖ್ಯೆ | ಎ.ಸಿ ಬಿಲ್ಲುಗಳ ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|
| ಪ್ರಾರಂಭಿಕ ಶಿಲ್ಕು | 38 | 93,02,440 |
| 2017–18ನೇ ಸಾಲಿನಲ್ಲಿ ಪಾವತಿಸಿದ ಎ.ಸಿ ಬಿಲ್ಲುಗಳು | 57 | 20,69,700 |
| **(ಎ) ಒಟ್ಟು** | **95** | **1,13,72,140** |
| ಅ) ಪ್ರಾರಂಭಿಕ ಶಿಲ್ಕು ಸೇರಿದಂತೆ 2017–18ನೇ ಸಾಲಿನಲ್ಲಿ ಪಾವತಿಸಲಾದ ಎ.ಸಿ ಬಿಲ್ಲುಗಳು ಸೇರಿ 2017–18ರಂತ್ಯಕ್ಕೆ ಹೊಂದಾಣಿಕೆಯಾದ ಎ.ಸಿ ಬಿಲ್ಲುಗಳು<br>ಆ) ವೆಚ್ಚವಾಗದೇ ಉಳಿದ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ಒಟ್ಟು ಮೊತ್ತ | 50 | 27,30,088<br>8,42,117 |
| **(ಬಿ) ಒಟ್ಟು ಮೊತ್ತ** | | **(–) 35,72,205** |
| (ಸಿ) ಪ್ರಾರಭಿಕ ಶಿಲ್ಕು ಸೇರಿದಂತೆ 2017–18ನೇ ಸಾಲಿನ ಅಂತ್ಯಕ್ಕೆ ಹೊಂದಾಣಿಕೆಯಾಗದೇ ಬಾಕಿ ಉಳಿದಿರುವ ಎ.ಸಿ ಬಿಲ್ಲುಗಳು (ಎ–ಬಿ) | 45 | 77,99,935 |

ಮೇಲ್ಕಂಡ ವಿವರಗಳಂತೆ 2017–18ರಂತ್ಯಕ್ಕೆ ಒಟ್ಟು 45 ಸಂಖ್ಯೆ ಎ.ಸಿ ಬಿಲ್ಲುಗಳ ಮೊತ್ತ ರೂ.77,99,935/–ಗಳು ಹೊಂದಾಣಿಕೆಯಾಗದೇ ಬಾಕಿ ಉಳಿದಿದ್ದು, ಇವು 2009 ರಿಂದಲೂ ಬಾಕಿ ಉಳಿದಿರುವುದು ಕಂಡುಬಂದಿದ್ದು, ಈ

ಕುರಿತು ಸೂಕ್ತ ಕ್ರಮ ಕೈಗೊಂಡು ಕೂಡಲೇ ಎನ್.ಡಿ.ಸಿ ಬಿಲ್ಲುಗಳನ್ನು ಪಡೆದು ತೀರುವಳಿಗೊಳಿಸಿಕೊಳ್ಳಲು ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. ಎ.ಸಿ ಬಿಲ್ಲುಗಳ ಮೂಲಕ ನಿಡಲಾದ ಹಣಕ್ಕೆ 30 ದಿವಸಗಳೊಳಗಾಗಿ ಎನ್.ಡಿ.ಸಿ ಲೆಕ್ಕ ಸಲ್ಲಿಸಬೇಕಾಗಿದ್ದು, ಲೆಕ್ಕ ಸಲ್ಲಿಸದಿರುವುದರಿಂದ ಬಾಕಿ ಇರುವ ಹಣವನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಸೂಚಿಸಿದೆ. ವಿವರಗಳನ್ನು **ಅನುಬಂಧ-16 ರಲ್ಲಿ** ನೀಡಲಾಗಿದೆ.

ಉತ್ತರ

| ಕ್ರಮ ಸಂಖ್ಯೆ | ಎಸಿ ಬಿಲ್ಲು ಬಿ.ಆರ್. ಸಂಖ್ಯೆ/ ದಿನಾಂಕ | ಧನಾದೇಶ ಸಂಖ್ಯೆ/ ದಿನಾಂಕ | ಪಾವತಿಸದ ಮೊತ್ತ |
|---|---|---|---|
| 1 | 4188/22.07.13 | 927764-25.07.13 | 25,000 |
| 2 | 1037/12.05.15 | 463628-13.05.15 | 4,25,000 |
| 3 | 1958/19.06.15 | 464441-30.10.15 | 94,500 |
| 4 | 2218/02.07.15 | 464039-15.07.15 | 1,79,000 |
| 5 | 22.09/02.07.13 | 464038-15.07.16 | 98,000 |
| 6 | 2807/03.08.15 | 464185-13.08.15 | 2,37,600 |
| 7 | 2964/11.08.15 | 464216-18.08.15 | 1,30,850 |
| 8 | 3379/05.09.15 | 463363-05.09.15 | 2,12,100 |
| 9 | 3515/11.09.15 | 464456-05.10.15 | 94,000 |
| 10 | 3754/28.09.16 | 464455-05.10.15 | 3,36,600 |
| 11 | 3516/11.09.15 | 464454-05.10.15 | 95,000 |
| 12 | 3804/29.09.15 | 464491-19.10.15 | 1,79,000 |
| 13 | 4448/16.12.15 | 464666-26.11.15 | 1,82,000 |
| 14 | 5576/10.02.16 | 464986-18.02.16 | 1,11,000 |
| 15 | 86/19.04.17 | 254707-25.04.17 | 5,000 |
| 16 | 169-28.04.17 | 254732-03.05.17 | 5,000 |
| 17 | 225-10.05.17 | 254750-10.05.17 | 10,000 |
| 18 | 411-14.06.17 | 254884-16.06.17 | 5,000 |
| 19 | 644-24.7.17 | 255029-03.08.17 | 10,000 |
| 20 | 858-11.09.17 | 937629-11.09.17 | 30,000 |
| 21 | 1001-23.10.17 | 237607-24.10.17 | 50,000 |
| 22 | 1154-29.11.17 | 237736-07.12.17 | 5,000 |
| 23 | 1418-03.02.18 | 237928-08.02.18 | 20,300 |
| 24 | 1467-12.02.18 | 237939-14.02.18 | 20,000 |
| 25 | 1477-15.02.18 | 237943-16.02.18 | 10,000 |
| 26 | 1537-01.03.18 | 237979-01.03.18 | 10,000 |
| 27 | 1617-23.03.18 | 238036-23.03.18 | 1,30,000 |
| 28 | 1619-23.03.18 | 238040-23.03.18 | 25,000 |
| 29 | 1499/20.02.18 | 377036-22.02.18 | 2,07,000 |
| 30 | 1514/23.02.18 | 377037-23.02.18 | 2,07,000 |
| 31 | 1548/03.03.18 | 602554-05.03.18 | 2,07,000 |
| 32 | 1595/16.03.18 | 602555-20.03.18 | 2,07,000 |
| 33 | 2307/28.02.17 | 890419-16.03.17 | 3,20,000 |
| 34 | 7894/29.12.13 | | 1,05,500 |
| 35 | 8080/05.01.13 | | 1,05,500 |
| 36 | 8079/05.01.13 | | 1,05,500 |
| 37 | 8081/05.01.13 | | 1,05,500 |
| 38 | 8157/08.01.13 | | 1,05,500 |
| 39 | 8944/15.02.13 | | 1,05,000 |
| 40 | 8945/15.02.13 | 112614-16.02.13 | 1,05,000 |
| 41 | 8946/15.02.13 | 112615-16.02.13 | 1,05,000 |
| 42 | 9659/30.03.13 | 1126717-30.03.13 | 6,91,700 |
| 43 | 7342/07.12.12 | | 2,50,000 |
| | | ಒಟ್ಟು ಮೊತ್ತ | 56,67,150 |

2017–18ರಂತ್ಯಕ್ಕೆ ಒಟ್ಟು ರೂ. 56,67,150/-ಗಳನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ಎಸಿ ಬಿಲ್ಲು ಬಿ.ಆರ್. ಸಂಖ್ಯೆ/ ದಿನಾಂಕ | ಯಾರಿಗೆ ಪಾವತಿಸಿದೆ | ಧನಾದೇಶ ಸಂಖ್ಯೆ/ ದಿನಾಂಕ | ಪಾವತಿಸಲಾದ ಮೊತ್ತ |
|---|---|---|---|---|
| 1 | 631/19.05.09 | ಭದ್ರಯ್ಯ (ಉಕುಸ) | 934688–22.05.09 | **8,000** |
| 2 | 1726/22.07.09 | ಭದ್ರಯ್ಯ (ಉಕುಸ) | 933686–23.07.09 | **5,000** |
| 3 | 2405/30.07.10 | ಎಚ್.ಎಲ್.ವಿಶ್ವನಾಥ(ಉಕುಸ) | 214992–30.07.10 | **15,663** |
| 4 | 1712/07.06.11 | ಎಚ್.ಎಲ್.ವಿಶ್ವನಾಥ(ಉಕುಸ) | 418690–08.06.11 | **15,122** |
| 5 | 2762/06.06.12 | ಎಚ್.ಎಲ್.ವಿಶ್ವನಾಥ(ಉಕುಸ) | 740558–07.06.12 | **8,000** |
| 6 | 7085/11.12.14 | ಎಚ್.ಎಲ್.ವಿಶ್ವನಾಥ(ಉಕುಸ) | 882104–12.12.14 | **5,00,000** |
| 7 | 3484/ 09.09.15 | ಡೀನ್ ಅಧ್ಯಯನ ಕೇಂದ್ರ | 464442–21.10.13 | **4,43,000** |
| 8 | 5836/03.03.16 | ಡೀನ್ ಅಧ್ಯಯನ ಕೇಂದ್ರ | 465081 –10.03.16 | **15,00,000** |
| | | | ಒಟ್ಟು= | **24,94,785** |

ಕ್ರಮ ಸಂಖ್ಯೆ 1 ಮತ್ತು 2ರ ನೌಕರರು ಮರಣ ಹೊಂದಿರುತ್ತಾರೆ. ಕ್ರಮ ಸಂಖ್ಯೆ 3ರಿಂದ 6ರ ನೌಕರರು ನಿವೃತ್ತಿ ಹೊಂದಿದ್ದು ನಿವೃತ್ತಿ ಸೌಲಭ್ಯದಿಂದ ವಸೂಲಾತಿ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಹಾಗೂ ಕ್ರಮ ಸಂಖ್ಯೆ 7 ಮತ್ತು 8ಕ್ಕೆ ಸಂಬಂಧಿಸಿದಂತೆ ಹೊಂದಾಣಿಕೆ ಬಿಲ್ಲು ಸಲ್ಲಿಸುವಂತೆ ಪತ್ರ ಬರೆಯಲಾಗಿದ್ದು ಕ್ರಮವಹಿಸಲಾಗುತ್ತದೆ. ಪರಿಶೀಲಿಸಿ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ.

ವಿವರ

54

**53. ನಿಗದಿತ ಅವಧಿಯೊಳಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವುದು :–**

ಹಿಂದಿನ ಸಾಲುಗಳು ಸೇರಿದಂತೆ 2017–18ನೇ ಸಾಲಿನಲ್ಲಿ ಎ.ಸಿ ಬಿಲ್ಲುಗಳ ಮೂಲಕ (ಹಾಜರುಪಡಿಸಿರುವಂತೆ) ವಿವಿಧ ವೆಚ್ಚಗಳಿಗಾಗಿ ಮುಂಗಡ ರೂಪದಲ್ಲಿ ಪಡೆದ ಮೊಬಲಗುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು **ಅನುಬಂಧ–17** ಕಾಲಂ–10 ರಲ್ಲಿರುವಂತೆ ನಿಗದಿತ ದಿನಾಂಕದೊಳಗೆ ಸಲ್ಲಿಸದೇ ಕಾಲಂ 11 ರಲ್ಲಿರುವಂತೆ ಕನಿಷ್ಠ 12 ದಿನಗಳಿಂದ ಗರಿಷ್ಠ 3 ವರ್ಷ, (33 ತಿಂಗಳು), 21 ದಿನಗಳವರೆಗೆ ವಿಳಂಬವಾಗಿ ಸಲ್ಲಿಸಿರುವುದು ಕಂಡುಬಂದಿದ್ದು, ಎ.ಸಿ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡುವುದು ತುರ್ತು ವೆಚ್ಚಗಳನ್ನು ಭರಿಸುವ ಉದ್ದೇಶವಾಗಿರುತ್ತದೆ. ಆದರೆ ಎನ್.ಡಿ.ಸಿ ಬಿಲ್ಲುಗಳನ್ನು ನಿಗದಿತ ಕಾಲಾವಧಿಯೊಳಗೆ ಸಲ್ಲಿಸದಿರುವುದನ್ನು ಗಮನಿಸಿದರೆ, ಎ.ಸಿ ಬಿಲ್ಲುಗಳಲ್ಲಿ ಡ್ರಾ ಮಾಡಿದ ಹಣವನ್ನು ನಿಗದಿತ ಉದ್ದೇಶಕ್ಕೆ ನಿಗದಿತ ಅವಧಿಯಲ್ಲಿ ವೆಚ್ಚ ಭರಿಸದೇ ದುರುಪಯೋಗಪಡಿಸಿಕೊಂಡಿರುವ ಸಾಧ್ಯತೆ ಇರುಬಹುದಾಗಿರುತ್ತದೆ. ಸಾದಿಲ್ವಾರು ವೆಚ್ಚದ ಕೈಪಿಡಿ (ಎಂ.ಸಿ.ಇ) ನಿಯಮ 36 ಮತ್ತು 37ರ ರೀತ್ಯಾ ಎ.ಸಿ ಬಿಲ್ಲುಗಳ ಮೂಲಕ ಹಣ ತೆಗೆಯುವ ಅಧಿಕಾರ ಹೊಂದಿರುವ ಎಲ್ಲಾ ಕಛೇರಿ ಮುಖ್ಯಸ್ಥರು ಎನ್.ಡಿ.ಸಿ ಬಿಲ್ಲುಗಳನ್ನು ಒಂದು ತಿಂಗಳ ಅವಧಿಯೊಳಗೆ ಮೇಲುಸಹಿ ಮಾಡುವ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿ ನಿಯಮಾನುಸಾರ ನಿಗದಿತ ಅವಧಿಯೊಳಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದೇ ಅತೀ ವಿಳಂಬವಾಗಿ ಸಲ್ಲಿಸಿರುವ ಮತ್ತು ಈವರೆವಿಗೂ ಸಲ್ಲಿಸದಿರುವ ಅಧಿಕಾರಿಗಳ ಮೇಲೆ ತ್ವರಿತವಾಗಿ ಆಡಳಿತಾತ್ಮಕ ಕ್ರಮಕೈಗೊಳ್ಳಲು ಮತ್ತು ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

ಉತ್ತರ

ಎನ್.ಡಿ.ಸಿ ಬಿಲ್ಲುಗಳನ್ನು ನಿಗದಿತ ಕಾಲಾವಧಿಯೊಳಗೆ ಸಲ್ಲಿಸಲು ಕ್ರಮವಹಿಸಲಾಗುವುದು.

| | ವಿವರ |
|---|---|
| 55 | **54. ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–** <br> ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕೆಂದು ವಿಚಾರಣಾ ಪತ್ರ ಸಂಖ್ಯೆ:29/2019–20 ದಿನಾಂಕ:14.08.2019 ರಂದು ವಿಚಾರಣಾ ಪತ್ರವನ್ನು ನೀಡಲಾಗಿತ್ತು. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ದಾಖಲಾತಿ/ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರದ ಕಛೇರಿಗಳಲ್ಲಿನ ಪೀಠೋಪಕರಣಗಳು ಮತ್ತು ಇತರೆ ಬೆಲೆ ಬಾಳುವ ಎಲ್ಲಾ ವಸ್ತುಗಳನ್ನು ಪ್ರತಿ ಆರ್ಥಿಕ ವರ್ಷದ ಏಪ್ರಿಲ್ ಮೊದಲನೆಯ ವಾರದಲ್ಲಿ ಅಧಿಕೃತ ಅಧಿಕಾರಿಯವರಿಂದ ಪರಿಶೀಲಿಸಿ ದೃಢೀಕರಣ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 169ರನ್ವಯ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಪೀಠೋಪಕರಣ ಮತ್ತು ಇತರೆ ಬೆಲೆಬಾಳುವ ವಸ್ತುಗಳ ಪಟ್ಟಿಯನ್ನು ತಯಾರಿಸಿ ಇದಕ್ಕೆ ಕರ್ನಾಟಕ ಆರ್ಥಿಕ ಸಂಹಿತೆ ಪ್ರಪತ್ರ (ನಮೂನೆ) 35ರಲ್ಲಿ ಪ್ರಮಾಣ ಪತ್ರವನ್ನು ಲಗತ್ತಿಸಿ ದೃಢೀಕರಣ ಪಡೆಯಬೇಕಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 168 (ಬಿ) ರನ್ವಯ ಉಪಯೋಗಿಸದೇ ಇರುವ ಅನುಪಯುಕ್ತ ವಸ್ತುಗಳ ಪಟ್ಟಿ ಸಿದ್ಧಪಡಿಸಿ ಪ್ರಪತ್ರ 34 (ಬಿ)ರಲ್ಲಿ ಸಮೀಕ್ಷಾ ವರದಿಯನ್ನು ಸಕ್ಷಮ ಅಧಿಕಾರಿಗೆ ಒಪ್ಪಿಸಿ ಅವರ ಆದೇಶಗಳ ಮೇರೆಗೆ ಮಾರಾಟ ಮಾಡಬೇಕಾಗಿರುತ್ತದೆ. ಆದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ವಿಭಾಗಗಳಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾನಿಲಯದಲ್ಲಿರುವ ವಸ್ತುಗಳನ್ನು ಭೌತಿಕ ಪರಿಶೀಲನೆ ನಡೆಸಿ ವಾಸ್ತವಿಕ ಶಿಲ್ಕಿನ ಬಗ್ಗೆ ಸತ್ಯಾಪನೆ ನಡೆಸಿರುವುದಿಲ್ಲ. ಆದ್ದರಿಂದ ಕರ್ನಾಟಕ ಆರ್ಥಿಕ ಸಂಹಿತೆ 1958ರ ಮೇಲ್ಕಂಡ ಅನುಚ್ಛೇದಗಳಲ್ಲಿ ಸೂಚಿಸಿರುವಂತೆ ದಾಸ್ತಾನು ಭೌತಿಕ ಪರಿಶೀಲನೆ ಕೈಗೊಂಡು ವರದಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ. |
| | ಉತ್ತರ |
| | ಕರಾಮುವಿಯ ವಿವಿಧ ವಿಭಾಗಗಳಲ್ಲಿನ ಚರ ಮತ್ತು ಸ್ಥಿರ ಆಸ್ತಿಗಳ ದಾಸ್ತಾನು ನಿರ್ವಹಣೆಯನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ ನಿರ್ವಹಣೆ ಮಾಡುವ ದೃಷ್ಟಿಯಿಂದ ಇದೇ ಕಾರ್ಯದಲ್ಲಿ ನಿಪುಣತೆ ಹೊಂದಿ ಹಲವಾರು ವರ್ಷಗಳ ಅನುಭವ ಹೊಂದಿರುವವರೊಬ್ಬರನ್ನು ಇದೇ ಕಾರ್ಯಕ್ಕಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದು, ಉದ್ದೇಶಿತ ಕಾರ್ಯವು ಚಾಲ್ತಿಯಲ್ಲಿರುತ್ತದೆ. ವಾರ್ಷಿಕ ದಾಸ್ತಾನು ವಹಿ, ನಮೂನೆಗಳು, ಹರಾಜು ಪ್ರಕ್ರಿಯೆಗಳ ಕಡತ, ಲೆಕ್ಕಪತ್ರ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗುವುದೆಂಬ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುತ್ತಾ ಈ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | ವಿವರ |
| 56 | **55. 2017–18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ (Annual Action Plan) ಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–** <br> 2017–18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:01.07.2019 ರಂದು ಹಾಗೂ ವಿಚಾರಣಾ ಪತ್ರ ಸಂಖ್ಯೆ:21/2019–20ನ್ನು |

| | |
|---|---|
| | ದಿನಾಂಕ:06.08.2019 ರಂದು ನೀಡಿದ್ದರೂ ಸಹ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸದ ಕಾರಣ 2017–18ನೇ ಸಾಲಿನಲ್ಲಿ ಪಾವತಿಸಿರುವ ಕಾಮಗಾರಿ ಬಿಲ್ಲುಗಳ ಹಿಂದಿನ ಸಾಲುಗಳ ವರೆಗಿನ ಭೌತಿಕ ಹಾಗೂ ಆರ್ಥಿಕ ಪ್ರಗತಿ, ಬಾಕಿ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ 2017–18ನೇ ಸಾಲಿನಲ್ಲಿ ಹೊಸದಾಗಿ ತೆಗೆದುಕೊಂಡ ಕಾಮಗಾರಿಗಳು, ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳು, ಪೂರ್ಣಗೊಂಡ ಕಾಮಗಾರಿಗಳು, ನಿಗದಿಪಡಿಸಿರುವ ಅನುದಾನ, ಬಳಕೆಯಾದ ಅನುದಾನ ಇತ್ಯಾದಿಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಕ್ರಿಯಾ ಯೋಜನೆ ತಯಾರಿಸಿರುವುದಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. |
| | ಉತ್ತರ |
| | ವಿವಿನಿಲಯದಲ್ಲಿ ನಿರ್ವಹಿಸಿರುವ ದೊಡ್ಡ ಕಾಮಗಾರಿಗಳು, ಸಣ್ಣ ಕಾಮಗಾರಿಗಳು, ಕಟ್ಟಡ ನಿರ್ವಹಣೆ ಮತ್ತು ದುರಸ್ತಿ, ಹೊಸ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಹಾಗೂ ಇನ್ನಿತರೆ ಕೆಲಸಗಳಿಗೆ ಸಂಬಂಧಪಟ್ಟಂತೆ ತಗಲುವ ವೆಚ್ಚದ ಪ್ರಸ್ತಾವನೆಯನ್ನು ಹಣಕಾಸು ಶಾಖೆಗೆ ಸಲ್ಲಿಸಿ ಆಯವ್ಯಯ ಅಂದಾಜುವಿನಲ್ಲಿ ಮೀಸಲಿಟ್ಟು ಸದರಿ ಮೊತ್ತದಲ್ಲಿ ಕಾಮಗಾರಿಯನ್ನು ನಿರ್ವಹಿಸುವ ಕ್ರಮವಾಗಿರುತ್ತದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | **ವಿವರ** |
| 57 | **<u>56. ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಕಾರ್ಮಿಕ ಕಲ್ಯಾಣ ಸುಂಕದ ಮೊತ್ತದಲ್ಲಿ ಶೇ.1 ರಷ್ಟನ್ನು ಆಡಳಿತಾತ್ಮಕ ವೆಚ್ಚವೆಂದು ಕಡಿತಗೊಳಿಸದಿರುವುದು :–</u>**<br>2017–18ನೇ ಸಾಲಿನಲ್ಲಿ ಪಾವತಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ, ಬಿಲ್ಲಿನ ಒಟ್ಟು ಮೊತ್ತದಲ್ಲಿ ಶೇ.1 ರಷ್ಟು ಅಂದರೆ ರೂ.8,04,270/–ಗಳನ್ನು ಕಾರ್ಮಿಕ ಕಲ್ಯಾಣ ಸುಂಕವನ್ನು ಕಟಾಯಿಸಲಾಗಿದ್ದು, ಈ ಸುಂಕವನ್ನು "Secretary Karnataka B.&O.C.W, Welfare Board, Bangalore" ರವರಿಗೆ ಪಾವತಿಸಲಾಗಿರುತ್ತದೆ.<br>ಹೀಗೆ ಕಾಮಗಾರಿ ಬಿಲ್ಲುಗಳಲ್ಲಿನ ಒಟ್ಟು ಮೊತ್ತದಲ್ಲಿ ಕಟಾಯಿಸುವ ಕಾರ್ಮಿಕ ಕಲ್ಯಾಣ ಸುಂಕದ ಶೇ.1 ರಷ್ಟರ ಮೊತ್ತದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಕಾ.ಇ.300 ಎಲ್‌ಇಟಿ 2006, ಬೆಂಗಳೂರು, ದಿನಾಂಕ: 18.01.2017 ರ ಆದೇಶದಂತೆ ಮತ್ತು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ 1996ರ ಆದೇಶದಂತೆ, ಆಡಳಿತಾತ್ಮಕ ವೆಚ್ಚವನ್ನು ಭರಿಸುವ ಸಲುವಾಗಿ ಕಟಾಯಿಸಲಾದ ಸುಂಕದಲ್ಲಿ ಶೇ 1 ರಷ್ಟನ್ನು ಆಡಳಿತಾತ್ಮಕ ವೆಚ್ಚವಾಗಿ ವಿಶ್ವವಿದ್ಯಾನಿಲಯವು ಕಡಿತಗೊಳಿಸಿಕೊಂಡು ಉಳಿದ ಮೊತ್ತವನ್ನು ಮಂಡಳಿಗೆ ಪಾವತಿಸಬೇಕಾಗಿರುತ್ತದೆ.<br>ಆದರೆ ಸದರಿ ಆಡಳಿತ ವೆಚ್ಚವನ್ನು ಕಡಿತಗೊಳಿಸದೇ ಸಂಪೂರ್ಣ ಸುಂಕವನ್ನು ಮೇಲ್ಕಂಡ ಮಂಡಳಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:31/2019–20ನ್ನು ದಿನಾಂಕ:16.08.2019 ರಂದು ನೀಡಿದರೂ ಸಹ ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ಆದುದರಿಂದ 2017–18ರಲ್ಲಿ ಪಾವತಿಸಲಾದ ಮೊತ್ತ ರೂ.8,04,270/–ಗಳಿಗೆ ಶೇ 1 ರಷ್ಟು ಅಂದರೆ |

| | |
|---|---|
| | **ರೂ. 8,042/–ಗಳನ್ನು** Secretry Karnataka B & O CW welfoare Board, ಬೆಂಗಳೂರುರವರಿಂದ ಹಿಂಪಡೆಯಲು ಸೂಚಿಸಿದೆ. ವಿವರಗಳನ್ನು **ಅನುಬಂಧ–18** ರಲ್ಲಿ ನೀಡಿದೆ. |
| | ಉತ್ತರ |
| | ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಕಾರ್ಮಿಕ ಕಲ್ಯಾಣ ಸುಂಕದ ಮೊತ್ತದ ಶೇ. 1 ರಷ್ಟನ್ನು ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಲಾಗಿರುತ್ತದೆ. ಆದರೆ ಸದರಿ ಮೊತ್ತದಲ್ಲಿ ಶೇ. 1 ರಷ್ಟನ್ನು ಕಟಾಯಿಸಿ ವಿವಿಯ ಸಾಮಾನ್ಯ ನಿಧಿ ಖಾತೆಗೆ ಜಮೆ ಮಾಡುವುದರ ಬಗ್ಗೆ ಮಾಹಿತಿ ಇಲ್ಲದ ಕಾರಣ ಕಟಾಯಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ಕಟಾಯಿಸಿಕೊಳ್ಳಲಾಗುವುದು ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | **ವಿವರ** |
| 58 | **57. ಕಾಮಗಾರಿ ವಹಿಯನ್ನು (Register of works) ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವದು :–**<br><br>ವಿಶ್ವವಿದ್ಯಾನಿಲಯದಲ್ಲಿ ವಿವಿಧ ಬಗೆಯ ಕಾಮಗಾರಿಗಳನ್ನು ನಿರ್ವಹಿಸಿದ್ದು, ನಿರ್ವಹಿಸಲಾದ ಕಾಮಗಾರಿಗಳ ವಿವರಗಳನ್ನು ದಾಖಲಿಸಿರುವ ಬಗ್ಗೆ ಕಾಮಗಾರಿ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಮೌಖಿಕವಾಗಿ ತಿಳಿಸಿ ನಂತರ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:01.07.2019 ಹಾಗೂ ವಿಚಾರಣಾ ಪತ್ರ ಸಂಖ್ಯೆ:34/2019–20ನ್ನು ದಿನಾಂಕ:16.08.2019 ರಂದು ನೀಡಿದ್ದರೂ ಸಹ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಕಾಮಗಾರಿ ವಹಿಯನ್ನು ನಿರ್ವಹಿಸಿಲ್ಲವೆಂದು ತಿಳಿಯಬಹುದಾಗಿದೆ. Karnataka Public works Departmental Code–2014 ರ ಪ್ಯಾರಾ–220 ರನ್ವಯ ಕಾಮಗಾರಿ ವಹಿಯು ಕಛೇರಿಯಲ್ಲಿ ಶಾಶ್ವತವಾಗಿ ನಿರ್ವಹಿಸಬೇಕಾದ ಪ್ರಮುಖ ಲೆಕ್ಕಪತ್ರ ದಾಖಲೆಯಾಗಿದ್ದು, ಇದನ್ನು ನಿರ್ವಹಿಸಲು ವರದಿಯಲ್ಲಿ ಸೂಚಿಸಿದೆ. |
| | ಉತ್ತರ |
| | ಕಾಮಗಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಯಾವುದೇ ಕಾಮಗಾರಿ ವಹಿ ನಿರ್ವಹಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ಹಾಗೂ ಹಿಂದಿನ ಕಾಮಗಾರಿ ಕೆಲಸಗಳ ವಿವರಗಳನ್ನು Work Register ನಲ್ಲಿ ನಿರ್ವಹಿಸಿ ಲೆಕ್ಕ ಪರಿಶೋಧಕರಿಗೆ ಹಾಜರುಪಡಿಸಲಾಗುವುದು. |
| | **ವಿವರ** |
| 59 | **58. EMD, Security deposit (Performance Security deposit) ಮತ್ತು Additional Security deposit (Unbalasced) ಸಂಬಂಧದ ವಹಿಗಳನ್ನು ಮತ್ತು ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು:–**<br><br>2017–18ನೇ ಸಾಲಿನ ಕಾಮಗಾರಿ ವೋಚರ್‌ಗಳಿಗೆ ಸಂಬಂಧಿಸಿದಂತೆ, Standard tender documents (STD) for procurement of works ನ Clause 9 ಮತ್ತು 9.1 ರನ್ವಯ ಸ್ವೀಕರಿಸಲಾದ Earnest money deposit (EMD), Clause 24 ಮತ್ತು 24 (1), 25 ಮತ್ತು 25(1) ಹಾಗೂ 29 ಮತ್ತು |

| | |
|---|---|
| | 29(1) ರನ್ವಯ ಗುತ್ತಿಗೆದಾರರಿಂದ ಸ್ವೀಕರಿಸಲಾದ Security deposit ಮತ್ತು Additional Security deposit for (Unbalanced amount) ಗಳ ಸ್ವೀಕೃತಿ, ನಿರ್ವಹಣೆ ಹಾಗೂ ಹಿಂಪಾವತಿಗಳಿಗೆ ಸಂಬಂಧಿಸಿದ ವಹಿಗಳು, ಕಡತಗಳು ಹಾಗೂ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಎಲ್ಲಾ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ, ಮೌಖಿಕವಾಗಿ ಹಾಗೂ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:01.07.2019 ರಂದು ಹಾಗೂ ವಿಚಾರಣಾ ಪತ್ರ ಸಂಖ್ಯೆ:33/2019–20ನ್ನು ದಿನಾಂಕ:16.08.2019 ರಂದು ವಿಚಾರಣಾ ಪತ್ರ ಸಂಖ್ಯೆ:57/2019–20ನ್ನು ದಿನಾಂಕ:09.09.2019 ರಂದು ನೀಡಿದರೂ ಸಹ ಹಾಜರುಪಡಿಸದಿರುವುದರಿಂದ ಮೇಲ್ಕಂಡ ಎಲ್ಲಾ ಸ್ವೀಕೃತಿ, ನಿರ್ವಹಣೆ ಹಾಗೂ ಹಿಂಪಾವತಿಗಳನ್ನು ಪರಿಶೋಧಸಲು ಸಾಧ್ಯವಾಗಿರುವುದಿಲ್ಲ, ಈ ಕುರಿತು ಮೌಖಿಕವಾಗಿ ತಿಳಿಸಿ, ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದು, ಈ ನ್ಯೂನತೆ ಕುರಿತಂತೆ, ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. ಹಾಗೂ ಈ ವಹಿಗಳನ್ನು ನಿರ್ವಹಿಸಲು ಸೂಚಿಸಿದೆ. |
| | ಉತ್ತರ |
| | ಗುತ್ತಿಗೆದಾರರಿಂದ ಸ್ವೀಕರಿಸಲಾದ Security deposit ಮತ್ತು Additional Security deposit for (Unbalanced amount) ಬಾಕಿಯಿರುವುದಿಲ್ಲ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 60 | <u>**59. ಆಸ್ತಿ ತೆರಿಗೆಯನ್ನು ಪಾವತಿಸಿಲ್ಲದಿರುವುದು :–**</u><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆಸ್ತಿ ವಹಿಯನ್ನು ಪರಿಶೀಲಿಸಲಾಗಿ, ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕಟ್ಟಡಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸಿರುವ ಕುರಿತು ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕೆಂದು ವಿಚಾರಣಾ ಪತ್ರ ಸಂಖ್ಯೆ:45/2019–20 ದಿನಾಂಕ:26.08.2019 ರಂದು ನೀಡಲಾಗಿತ್ತು. ಇದಕ್ಕೆ ಉತ್ತರವನ್ನು ದಿನಾಂಕ:31.08.2019 ರಂದು ನೀಡಿದ್ದು, ವಿವಿಧ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯವು ನಿವೇಶನವನ್ನು ಹೊಂದಿದ್ದು, ಈ ಆಸ್ತಿಗಳಿಗೆ ಸಂಬಂಧಪಟ್ಟ ಹೌಸಿಂಗ್‌ಬೋರ್ಡ್/ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ/ನಗರಸಭೆ/ಪುಸಭೆಗಳಿಗೆ ತೆರಿಗೆಯನ್ನು ಆಯಾ ವರ್ಷಕ್ಕೆ ಅನುಗುಣವಾಗಿ ಪಾವತಿಸಬೇಕಾಗಿದ್ದು, ಸಂಬಂಧಿಸಿದ ಪ್ರಾಧಿಕಾರವು ಆಸ್ತಿ ತೆರಿಗೆಯನ್ನು ಭರಿಸಲು ತಿಳಿಸಿದ ನಂತರ ಕ್ರಮವಹಿಸಲಾಗುವುದು ಎಂದು ಉತ್ತರ ನೀಡಲಾಗಿದೆ. ಆಯಾಯಾ ವರ್ಷದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಲು ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ. ಆಸ್ತಿಗಳ ವಿವರವನ್ನು <u>**ಅನುಬಂಧ – 19 ರಲ್ಲಿ**</u> ಲಗತ್ತಿಸಿದೆ. |
| | ಉತ್ತರ |
| | ಕ್ರಮವಹಿಸಲಾಗುವುದು. |

| | ವಿವರ |
|---|---|
| 61 | **<u>60. ಆಸ್ತಿ ವಹಿ ಹಾಗೂ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–</u>**<br><br>ವಿಶ್ವವಿದ್ಯಾನಿಲಯ ದಿಂದ ಸೃಜಿಸಲಾದ ಎಲ್ಲಾ ಸ್ಥಿರಾಸ್ತಿಗಳು ಹಾಗೂ 2017–18ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ, ಹೊಸದಾಗಿ ಸೃಜಿಸಲಾದ ಆಸ್ತಿಗಳ ಬಗ್ಗೆ ವಿವರಗಳನ್ನೊಳಗೊಂಡ ವಹಿಗಳು ಹಾಗೂ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:01.07.2019 ರಂದು ಹಾಗೂ ವಿಚಾರಣಾ ಪತ್ರ ಸಂಖ್ಯೆ:35/2019–20ನ್ನು ದಿನಾಂಕ:16.08.2019 ರಂದು ನೀಡಿದ್ದರೂ ಸಹ ಹಾಜರುಪಡಿಸಿರುವುದಿಲ್ಲ. ಈ ವಹಿಯನ್ನು ನಿರ್ವಹಿಸದಿದ್ದಲ್ಲಿ ವಿಶ್ವವಿದ್ಯಾನಿಲಯದಿಂದ ಸೃಜಿಸಲಾದ ಆಸ್ತಿಗಳ ವಿವರಗಳು ಲಭ್ಯವಿಲ್ಲದೆ ಆಸ್ತಿಗಳ ವಿವರಗಳನ್ನು ದಾಖಲಿಸುವುದು ಸಾಧ್ಯವಿಲ್ಲವಾಗುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಆಸ್ತಿ ವಹಿ ನಿರ್ವಹಿಸಿದ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ 2017–18ನೇ ಸಾಲಿಗೆ ಸಂಬಂಧಿಸಿದ ಎಲ್ಲಾ ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಗು ಕಾಮಗಾರಿಗಳನ್ನು ನಿರ್ವಹಿಸಿರುವ ದಾಖಲೆಗಳ ಕಡತ ಹಾಗು ವಹಿಯನ್ನು ಒಳಗೊಂಡಂತೆ ಲೆಕ್ಕಪರಿಶೋಧನಾಧಿಕಾರಿಗೆ ಲೆಕ್ಕಪರಿಶೋಧನೆಗೆ ನೀಡಲಾಗಿರುತ್ತದೆ. |
| | ವಿವರ |
| 62 | **<u>61. ನಿಗದಿತ ಪರಿಮಾಣಕ್ಕಿಂತ ಹೆಚ್ಚುವರಿ ಪರಿಮಾಣ ನಿರ್ವಹಿಸಿ, ಪಾವತಿಸಿರುವುದು:–</u>**<br>"Construction of KSOU Regional center building Hassan" ಈ ಕಾಮಗಾರಿಯ 2ನೇ ಮತ್ತು ಭಾಗಶಃ ಬಿಲ್ಲಿನ ಐಟಂ ಸಂಖ್ಯೆ:225 **"**Extra over item 15–15.1 for painting two coats with plastic emultion paint approved brand & shade on ceiling & or sloping roof as per specification, GROUND FLOOR–ರ ಅಂದಾಜು ಪಟ್ಟಿಯಲ್ಲಿನ ನಿಗದಿತ ಪರಿಮಾಣ 1644.36 Sqm ಗಳಾಗಿದ್ದು, ಸದರಿ ಬಿಲ್ಲಿನಲ್ಲಿ 3033.24 Sqm ಗಳ ನಿರ್ವಹಿಸಿ, ಪಾವತಿಸಲಾಗಿದೆ ಇದರಿಂದ, 1388.88 Sqm ಗಳು ಹೆಚ್ಚುವರಿಯಾಗಿ ಪಾವತಿಸಿದಂತಾಗಿರುತ್ತದೆ. ಹೀಗೆ ಹೆಚ್ಚುವರಿ ಪರಿಮಾಣ ನಿರ್ವಹಿಸಿ, ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ, ಅನುಮೋದಿತ Work slip ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿ, ವಿಚಾರಣಾ ಪತ್ರ ಸಂಖ್ಯೆ:59/2019–20ನ್ನು ದಿನಾಂಕ:11.09.2019 ರಂದು ನೀಡಿದ್ದರೂ ಸಹ ಹಾಜರುಪಡಿಸದ ಕಾರಣ ಹೆಚ್ಚುವರಿ ಪರಿಮಾಣ ನಿರ್ವಹಣೆಯ ಪಾವತಿ **ಮೊತ್ತ ರೂ.6,945/–ಗಳನ್ನು** (1388.88 Sqm X ರೂ.5/– = 6,945/–) **ವಸೂಲಾತಿಗೆ ಸೂಚಿಸಿದೆ.** |
| | ಉತ್ತರ |
| | ಹಾಸನ ಪ್ರಾದೇಶಿ ಕಟ್ಟಡ ಕಾಮಗಾರಿಯಲ್ಲಿ Item No. 225 ರಲ್ಲಿ ಪರಿಮಾಣಕ್ಕಿಂತ ಹೆಚ್ಚಾಗಿ ನಿರ್ವಹಿಸಿರುವುದರ |

| | |
|---|---|
| | ಸಂಬಂಧ ಸದರಿ ಕಟ್ಟಡದ ಕಾಮಗಾರಿ ಪ್ರಾರಂಭಗೊಂಡಾಗ ಜಾಗವು ಲೆವಲ್ ಡಿಫರೆನ್ಸ್ ಇದ್ದದರಿಂದ ಹೆಚ್ಚುವರಿಯಾಗಿ ಸೆಲ್ಲಾರ್ ಭಾಗಕ್ಕೆ ಕಟ್ಟಡವನ್ನು ನಿರ್ಮಿಸಲಾಗಿತ್ತು. ಆದ್ದುದರಿಂದ ಸೆಲ್ಲಾರ್ ಭಾಗದಲ್ಲಿ ಹೆಚ್ಚುವರಿಯಾಗಿ ಪರಿಮಾಣ ನಿರ್ವಹಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಂತಿಮ ಹುಂಡಿ ಪಾವತಿಸುವಾಗ ರಿವೈಸ್ಡ್ ಎಸ್ಟಿಮೇಟ್ ಅನ್ನು ಅನುಮೋದಿಸಿಕೊಂಡು ಪಾವತಿಸಲಾಗುತ್ತದೆ. ಆದ್ದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | ವಿವರ |
| 63 | **62. ಕಾಮಗಾರಿ ಬಿಲ್ಲಿನಲ್ಲಿ ರಸ್ತೆ ನಿರ್ಮಾಣದ ಪರಿಮಾಣದ ಅಳತೆಯಲ್ಲಿ ಕುಗ್ಗುವಿಕೆ (Shrinkage) ಕಳೆಯದಿರುವುದು ಮತ್ತು ರಾಜಧನ ಕಟಾಯಿಸದಿರುವುದು:–**<br><br>"Construction of KSOU Regional center building Chikkamangalore" ಈ ಕಾಮಗಾರಿಯ 6ನೇ ಮತ್ತು ಭಾಗಶಃ ಬಿಲ್ಲಿನ ಐಟಂ ಸಂಖ್ಯೆ:335 ರ Constriction of Embankment with material Graval/Murrum, KSRRB M 300-53, Construction of Embankment with approved material Graval, Murrum with all lift's & leads, transporting to site, spreading, grading to required slope & compacting to meet requirement table 300-2 Complete as per specifications Including cost of all materials with all lead lift & Labour Charges, Complete as directed by the Engineer in charge, of the work ಎಂದಿದ್ದು, ಈ ಕಾಮಗಾರಿಯಲ್ಲಿ ಒಟ್ಟು 1210.13 cum ಪರಿಮಾಣ ನಿರ್ವಹಿಸಿದ್ದು ಸರ್ಕಾರದ ಆದೇಶ ಸಂಖ್ಯೆ: PWD/11 GMS/64, ಬೆಂಗಳೂರು/ದಿನಾಂಕ:10.03.1966 ರನ್ವಯ ಈ ಪರಿಮಾಣದಲ್ಲಿ ಶೇ.10 ರಷ್ಟು ಪರಿಮಾಣವನ್ನು ಕುಗ್ಗುವಿಕೆಯಾಗಿ (Shrinkage) ಕಳೆಯಬೇಕಾಗಿದ್ದು, ಕಳೆದಿರುವುದಿಲ್ಲ.<br><br>ಹಾಗೆಯೇ, ಈ ಐಟಂ ನ ಕಾಮಗಾರಿಗೆ ಬಳಸಿರುವ ಗ್ರಾವೆಲ್/ಮುರಂ ಉಪಖನಿಜದ ಪರಿಮಾಣ 1210.13 Cum.ಗಳಿಗೆ, ಸರ್ಕಾರದ ಅಧಿಸೂಚನಾ ಪತ್ರ ಸಂಖ್ಯೆ: ಸಿಐ–81, ಎಂಎಂಎನ್–2014, ಬೆಂಗಳೂರು ದಿನಾಂಕ:05.03.2014 ಮತ್ತು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ:ಗಭೂಇ:ಡಿಸಿಟಿ/ಕಗಗು/ರಾಪಕೋ/2013–14/ದಿನಾಂಕ:13.03.2014 ರನ್ವಯ ಗ್ರಾವೆಲ್/ಮುರಂ ನ ಪ್ರತಿ ಘ.ನ.ಮೀ ಗೆ ರೂ.30/–ಗಳ ದರದಂತೆ ರಾಜಧನವನ್ನು ಕಟಾಯಿಸಬೇಕಾಗಿದ್ದು, ಕಟಾಯಿಸಿರುವುದಿಲ್ಲ. ಈ ಮೇಲ್ಕಂಡ ಎರಡೂ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಸೂಲಾತಿ ವಿವರಗಳು ಇಂತಿದೆ.<br><br>1) ಐಟಂ ಸಂಖ್ಯೆ:335 ರ ನಿರ್ಮಾಣದ ಪರಿಮಾಣ 1210.13 cum ಗೆ ರೂ. 200/– ರಂತೆ ಒಟ್ಟು ರೂ.2,42,026/– ಪಾವತಿಸಿದ್ದು, ಇದರಲ್ಲಿ ಕುಗ್ಗುವಿಕೆ (Shrinkage) ಶೇ.10 ರಷ್ಟು ಪರಿಮಾಣ ಅಂದರೆ 121.01 cum ಗಳನ್ನು ಕಳೆದು ಉಳಿಕೆ ಪರಿಮಾಣಕ್ಕೆ 1089.12ಕ್ಕೆ * ರೂ.200/– ರಂತೆ ರೂ.2,17,824/– ನ್ನು ಪಾವತಿಸಬೇಕಾಗಿರುತ್ತದೆ. ಆದರೆ ಇಲ್ಲಿ ರೂ. 2,42,026/– ಗಳನ್ನು ಪಾವತಿಸಿರುವುದರಿಂದ ಹೆಚ್ಚುವರಿಯಾಗಿ |

| | |
|---|---|
| | ರೂ.24,202/–ಗಳನ್ನು ಪಾವತಿಸಿದೆ. ಹೆಚ್ಚುವರಿಯಾಗಿ ಪಾವತಿಸಿರುವ **ರೂ.24,202/–ಗಳನ್ನು ವಸೂಲಾತಿಗೆ ಸೂಚಿಸಿದೆ.**<br>2) ಐಟಂ ಸಂಖ್ಯೆ:335 ರ ಏರಿ ನಿರ್ಮಾಣದ ಗ್ರಾವೆಲ್ ಪರಿಮಾಣ 10891.12 cum ಗೆ ಕಟಾಯಿಸಬೇಕಾದ ರಾಜಧನ ಪ್ರತಿ ಘನ ಮೀಟರ್‌ಗೆ ರೂ.30/– ರಂತೆ 10891.12 ಘ.ಮೀಗೆ ಒಟ್ಟು ರೂ.3,26,734/–ಗಳನ್ನು ಕಟಾಯಿಸಬೇಕಾಗಿತ್ತು ಆದರೆ ಕಟಾಯಿಸದಿರುವುದರಿಂದ ರಾಜಧನ ಒಟ್ಟು **ರೂ.3,26,734/–ಗಳನ್ನು ವಸೂಲಾತಿಗೆ ಸೂಚಿಸಿದೆ.**<br>3) **"**Construction of KSOU Regional center building Hassan" ಈ ಕಾಮಗಾರಿಯ 2ನೇ ಮತ್ತು ಭಾಗಶಃ ಬಿಲ್ಲಿನ ಐಟಂ ಸಂಖ್ಯೆ:365 ರ **"**Providing & filling to the foundation & basement with approved new ground, including watering & tamping in layers not exceeding 20 Cm's thick, etc Complete, including with all lead & lift, etc complete. ಐಟಂನಲ್ಲಿ ಒಟ್ಟು 50.46 cum ನಿರ್ವಹಿಸಿದ್ದು, ಗ್ರಾವೆಲ್‌ನ ಪರಿಮಾಣಕ್ಕೆ ರಾಜಧನ ಕಟಾಯಿಸಿರುವುದಿಲ್ಲ. ಆದುದರಿಂದ ರಾಜಧನದ ಮೊಬಲಗು (50.46 cum x 30/– =1514) **ರೂ.1,514/–ಗಳನ್ನು ವಸೂಲಾತಿಗೆ ಸೂಚಿಸಿದೆ.**<br>ಮೇಲ್ಕಂಡ ಈ ಎಲ್ಲಾ ನ್ಯೂನತೆಗಳಿಗೆ ಸಂಬಂಧಿಸಿದಂತೆ, ವಿವರಗಳನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:62/2019–20ನ್ನು ದಿನಾಂಕ:11.09.2019 ರಂದು ನೀಡಲಾಗಿ, ಈ ಸಂಬಂಧ ನೀಡಲಾದ ಉತ್ತರವು ಅಪೂರ್ಣವಾಗಿರುತ್ತದೆ. ಆದುದರಿಂದ, ಮೇಲ್ಕಂಡ ವಸೂಲಾತಿ ಮೊತ್ತ **ಒಟ್ಟು ರೂ.3,28,248/– (3,26,734 + 1514) ಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಿ,** ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ವಿವರಗಳನ್ನು/ದಾಖಲೆಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ತಿಳಿಸಿದೆ. |
| | ಉತ್ತರ |
| | ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಗುತ್ತಿಗೆದಾರರಿಂದ ಹಣವನ್ನು ವಸೂಲಿಸಿ ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ಚಲನ್ ಅನ್ನು ಹಾಜರುಪಡಿಸಲಾಗುತ್ತದೆ. ಹಾಗು ಸ್ಪೆಸಿಫಿಕೇಶನ್‌ನಲ್ಲಿರುವಂತೆ ಮಣ್ಣನ್ನು ಹಾಕಿ ರೋಲ್ ಮಾಡಿ ಎಲ್ಲಾ ತೆಗೆದುಕೊಳ್ಳಲಾಗಿರುವುದರಿಂದ ಸಂಗ್ರಹಿಸಲಾದ ಮಣ್ಣು ಹಾಗು ಇತರೆ ಸಾಮಾಗ್ರಿಗಳ ವಿವರಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ. ರೂ.1,514/–ಗಳ ರಾಜಧನವನ್ನು ಕಟಾಯಿಸಲು, ಕೈಗೊಳ್ಳಲಾಗುತ್ತದೆ.ಆದ್ದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 64 | **63. ಚಿಕ್ಕಮಗಳೂರು ಹಾಗೂ ಹಾಸನ ಪ್ರಾದೇಶಿಕ ಕಛೇರಿಗಳ ಕಟ್ಟಡಗಳಲ್ಲಿ ಅಳವಡಿಸಿರುವ ಪೀಠೋಪಕರಣಗಳ ದಾಸ್ತಾನು ಸ್ವೀಕೃತಿ ಮತ್ತು ವಿತರಣೆ ಹಾಗೂ ವಾರ್ಷಿಕ ದಾಸ್ತಾನು ಪರಿಶೀಲನಾ ವಿವರ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–**<br>"Construction of KSOU Regional center building Chikkamangalore" ಈ ಕಾಮಗಾರಿಯ 6ನೇ ಮತ್ತು ಭಾಗಶಃ ಬಿಲ್ಲಿನ ಐಟಂ ಸಂಖ್ಯೆ:368 ರಿಂದ 384 ರವರೆಗೆ ಒಟ್ಟು 657 ವಿವಿಧ |

| | |
|---|---|
| | ಬಗೆಯ ಪೀಠೋಪಕರಣಗಳನ್ನು ಖರೀದಿಸಿ ಅಳವಡಿಸಿದ ಬಾಬ್ತು ಒಟ್ಟು ರೂ.84,79,725/–ಗಳನ್ನು ಪಾವತಿಸಿದೆ.<br>ಹಾಗೆಯೇ, "Construction of KSOU Regional center building at Hassan" ಈ ಕಾಮಗಾರಿಯ 2ನೇ ಮತ್ತು ಭಾಗಶಃ ಬಿಲ್ಲಿನ ಐಟಂ ಸಂಖ್ಯೆ:408 ರಿಂದ 428 ರವರೆಗೆ ಒಟ್ಟು 447 ವಿವಿಧ ಬಗೆಯ ಪೀಠೋಪಕರಣಗಳನ್ನು ಖರೀದಿಸಿ, ಅಳವಡಿಸಿದ ಬಾಬ್ತು ಒಟ್ಟು ರೂ.1,11,28,652/–ಗಳನ್ನು ಪಾವತಿಸಿದೆ.<br>ಈ ಸಂಬಂಧ ವಾರ್ಷಿಕ ದಾಸ್ತಾನು ಪರಿಶೀಲನಾ ವಿವರ ಪಟ್ಟಿಯನ್ನು (Report of Annual stock Verification of furitures) ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:01.07.2019 ರಂದು ಹಾಗೂ ವಿಚಾರಣಾ ಪತ್ರ ಸಂಖ್ಯೆ:61/2019–20ನ್ನು ದಿನಾಂಕ:11.09.2019ರಲ್ಲಿ ಕೋರಿದ್ದರು ಸಹ ಹಾಜರುಪಡಿಸಿರುವುದಿಲ್ಲ. ಹಾಗೂ ಸಲ್ಲಿಸಿರುವ ಉತ್ತರವು ಅಸಮರ್ಪಕವಾಗಿರುತ್ತದೆ.<br>ವಿಚಾರಣಾ ಪತ್ರ ನೀಡಿದರೂ ಸಹ ಮೇಲ್ಕಂಡ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ಎರಡೂ ಕಾಮಗಾರಿಗಳ ಪೀಠೋಪಕರಣಗಳ ಬಗ್ಗೆ ಮೇಲಾಧಿಕಾರಿಗಳಿಂದ ದೃಢೀಕೃತಗೊಂಡ ವಾರ್ಷಿಕ ದಾಸ್ತಾನು ಪರಿಶೀಲನಾ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ಖರೀದಿಸಿರುವ ಸಾಮಗ್ರಿಗಳ ಒಟ್ಟು ಮೊತ್ತ **ರೂ.1,96,08,377/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** |
| | ಉತ್ತರ |
| | ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ ಕಟ್ಟಡದ ಕಾಮಗಾರಿಯ ಆರನೇ ಹಾಗು ಭಾಗಶಃ ಹುಂಡಿ ಹಾಗು ಹಾಸನ ಕೇಂದ್ರದ ಎರಡನೇ ಹಾಗು ಭಾಗಶಃ ಹುಂಡಿ ಸಂಬಂಧ ಕಟ್ಟಡಗಳಿಗೆ ಅಳವಡಿಸಿರುವ ಪೀಠೋಪಕರಣಗಳ ದಾಸ್ತಾನು ಸ್ವೀಕೃತಿಯನ್ನು ಪರಿಶೀಲನೆಗೆ ಸಲ್ಲಿಸಿದೆ. ಹಾಗು ವಾರ್ಷಿಕ ದಾಸ್ತಾನು ಪರಿಶೀಲನೆ ವಿವರಗಳನ್ನು ಕೇಂದ್ರ ಕಚೇರಿಯಿಂದ ನಡೆಯಬೇಕಿದ್ದು ದೊರೆತ ತಕ್ಷಣ ಪರಿಶೀಲನೆಗೆ ಸಲ್ಲಿಸಲಾಗುವುದು. |
| | **ವಿವರ** |
| 65 | **64. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಂಡಕಳ್ಳಿ ಜಮೀನಿನಲ್ಲಿ ಶೈಕ್ಷಣಿಕ ಭವನ ನಿರ್ಮಾಣ ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿನ ಆಡಳಿತ ಭವನ ಪರೀಕ್ಷಾ ಭವನ, ಘಟಿಕೋತ್ಸವ ಭವನ ಮತ್ತು ವಿಜ್ಞಾನ ಭವನಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಿರುವ ಕಾಮಗಾರಿಯಲ್ಲಿನ ನ್ಯೂನತೆಗಳು :–**<br>2017–18ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿದ ಮೇಲ್ಕಂಡ ಕಾಮಗಾರಿಯ 14ನೇ ಮತ್ತು ಅಂತಿಮ ಬಿಲ್ಲನ್ನು ಪರಿಶೀಲಿಸಿದಾಗ M/S\|\| BSR Infrastructre India Ltd, Bangalore ರವರಿಗೆ ರೂ.3,00,00,000/– (ರೂ. ಮೂರು ಕೋಟಿ)ಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.59,50,00,000/–ಗಳಾಗಿರುತ್ತದೆ. ಇದು ದಿನಾಂಕ:21.11.2012 ರಂದು ನಡೆದ 121ನೇ BOM ವ್ಯವಸ್ಥಾಪನಾ ಮಂಡಕಳ್ಳಿಯಿಂದ ಅನುಮೋದನೆಯಾಗಿರುತ್ತದೆ. ತಾಂತ್ರಿಕ ಪರಿಶೀಲನೆಯನ್ನು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದ) ಬೆಂಗಳೂರು ರವರಿಂದ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, |

| | |
|---|---|
| | ಗುತ್ತಿಗೆದಾರರಾದ M/S\|\| BSR Infrastructre India Ltd, Bangalore ರವರು ಅರ್ಹತೆ ಹೊಂದಿದ್ದು, ಸಂದಾನದ ಮೂಲಕ ಕಾಮಗಾರಿಯನ್ನು ನಿರ್ವಹಿಸಲು ಶೇ 24% ರಷ್ಟು ಹೆಚ್ಚಿಗೆ ಅಂದರೆ ರೂ.68,05,16,134/–ಗಳಿಗೆ ಕೆಲಸವನ್ನು ವಹಿಸಲು ದಿನಾಂಕ:27.11.2012 ರ 14ನೇ ವ್ಯವಸ್ಥಪನಾ ಮಂಡಳಿಯಲ್ಲಿ ಅನುಮೋದನೆಯಾಗಿರುತ್ತದೆ. ಟೆಂಡರ್ ನಿಯಮಾನುಸಾರ Mobilization advance ರೂ.3,40,00,000/–ಗಳನ್ನು ನೀಡಿದ್ದು, ಕಾಮಗಾರಿಯನ್ನು ದಿನಾಂಕ:26.11.2012 ರಿಂದ ಪ್ರಾರಂಭಿಸಿ 18 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸಿ ಒಟ್ಟು 14 ಭಾಗಶಃ ಹುಂಡಿಗಳ ಮೂಲಕ ಗುತ್ತಿಗೆದಾರರಿಗೆ ಒಟ್ಟು ರೂ.66,61,21,545/–ಗಳನ್ನು ಪಾವತಿ ಮಾಡಲಾಗಿರುತ್ತದೆ. ಇದರಲ್ಲಿ Civil ಕಾಮಗಾರಿ ರೂ.45,47,90,937/– Electrical ಗೆ ರೂ.1,49,89,078/– ಒಳಾಂಗಣ ವಿನ್ಯಾಸಕ್ಕೆ ರೂ.3,78,21,840/– ಮತ್ತು Furnitureಗೆ ರೂ.15,85,19,690/–ಗಳಾಗಿರುತ್ತದೆ. ಈ ಕಾಮಗಾರಿಗೆ Workslip ರೂ.5,50,10,447/– ಮತ್ತು E.I.R.Lಗೆ ರೂ.1,61,08,921/–ಗಳಾಗಿರುತ್ತದೆ. ದಿನಾಂಕ:05.10.2015ರ 20ನೇ ಕಟ್ಟಡ ಸಮಿತಿ ಮತ್ತು 136ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಇವುಗಳು ಅನುಮೋದನೆಯಾಗಿರುತ್ತದೆ. ಕಾಲವಿಸ್ತರಣೆಯನ್ನು (EOT) ಯನ್ನು ದಿನಾಂಕ:07.09.2018ರ 24ನೇ ಕಟ್ಟಡ ಸಮಿತಿ ಮತ್ತು 151ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.<br><br>ಲೆಕ್ಕಪರಿಶೋಧನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದ್ದು, ಅನುಪಾಲನಾ ವರದಿ ನೀಡಲು ಕೋರಿದೆ.<br><br>1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.59,50,00,000/–ಗಳಾಗಿರುವುದರಿಂದ ಸರ್ಕಾರದ ಇಲಾಖೆಗಳಲ್ಲಿ/ಅಂಗ ಸಂಸ್ಥೆಗಳಲ್ಲಿ ಕಾಮಗಾರಿ ಅಂದಾಜು ಮೊತ್ತವು ರೂ.5.00 ಕೋಟಿ ಮೀರಿದ್ದಲ್ಲಿ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಇಲ್ಲಿ ಸರ್ಕಾರದಿಂದ ಅನುಮೋದನೆಯನ್ನು ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.<br>2. ಕಾಮಗಾರಿಯನ್ನು ಪೂರ್ಣಗೊಳಿಸಲು 20 ತಿಂಗಳು ವಿಳಂಬವಾಗಿರುತ್ತದೆ. ವಿಳಂಬದ ಅವಧಿಗೆ ಕಾಲ ವಿಸ್ತರಣೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದ ಕಾಲ ವಿಸ್ತರಣೆ ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ.<br>3. Moblization Advance ನೀಡಿರುವುದಕ್ಕೆ Bank guarantee ಯನ್ನು ಪಡೆದಿರುವುದಿಲ್ಲ.<br><br>ಪೀಠೋಪಕರಣಗಳ ಖರೀದಿಯ ಅಂದಾಜು ಮೊತ್ತ ಎಷ್ಟು ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ. ಪೀಠೋಪಕರಣಗಳನ್ನು ಖರೀದಿ ಮಾಡಲು Purchase Committee ಯಿಂದ ಅನುಮೋದನೆ ಪಿಠೋಪಕರಣಗಳ ವಿವರ, ಸರಬರಾಜು ಮಾಡಿರುವ ಪೀಠೋಪಕರಣಗಳು ಉತ್ತಮ ಗುಣಮಟ್ಟ ಹೊಂದಿರುವ ಬಗ್ಗೆ ಸಕ್ಷಮ |

ಪ್ರಾಧಿಕಾರದಿಂದ ದೃಢೀಕರಣ ಪಡೆದಿರುವುದನ್ನು ಹಾಜರುಪಡಿಸಿರುವುದಿಲ್ಲ.

**I) ಪಾವತಿಸಿದ ಕಬ್ಬಿಣದ ಪರಿಮಾಣವನ್ನು ಅಂತಿಮ ಬಿಲ್ಲಿನಲ್ಲಿ ಕಟಾಯಿಸದಿರುವುದು :–**

ಈ ಕಾಮಗಾರಿಯ 14ನೇ ಮತ್ತು ಅಂತಿಮ ಬಿಲ್ಲಿನ 'E' M.B ಯಲ್ಲಿ ನಮೂದಿಸಿರುವ ಅಳತೆಗಳನ್ನು ಪರಿಶೀಲಿಸಿದಾಗ ಐಟಂ ಸಂಖ್ಯೆ 22 'A' ರಲ್ಲಿ TMT Steelಗೆ ಹಣ ಪಾವತಿಸಲಾಗಿರುತ್ತದೆ. (ಪಾವತಿಯು 1ನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಆಗಿರುತ್ತದೆ.) ಅದರ ವಿವರ ಈ ಕೆಳಕಂಡಂತಿದೆ.

| | | |
|---|---|---|
| 8 MM | 13320 X 0.395 | 5261.40 |
| 10 MM | 16080 X 0.620 | 9969.60 |
| 12 MM | 14640 X 0.890 | 13029.60 |
| 16 00 | 10620 X 1.58 | 16779.60 |
| 20 MM | 9360 X 247 | 23119.20 |
| 25 MM | 8544 X 3.85 | 32894.40 |
| **Total** | | **101053.80 KG ಅಥವಾ 1010.54 ಕ್ವಿಂಟಾಲ್** |

ಸದರಿ ಪರಿಮಾಣವನ್ನು ಗುತ್ತಿಗೆದಾರರಿಗೆ 1 ನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಪಾವತಿಸಿರುತ್ತಾರೆ. ಈ ಪರಿಮಾಣವನ್ನು ಮುಂದಿನ ಬಿಲ್ಲುಗಳಲ್ಲಿ ಕಟಾಯಿಸಬೇಕಾಗಿದ್ದು, ಕಟಾಯಿಸಿರುವುದಿಲ್ಲ. ಹಾಗೂ ಇದನ್ನು Steel Premeasurement ನಲ್ಲಿ ದಾಖಲಿಸಿರುವುದಿಲ್ಲ. ಹಾಗೂ ಅಂತಿಮ ಬಿಲ್ಲಿನಲ್ಲೂ ಈ ಕಬ್ಬಿಣದ ಪರಿಮಾಣದ ಮೊತ್ತವನ್ನು ಕಟಾಯಿಸಿರುವುದಿಲ್ಲ. ಇದರಿಂದಾಗಿ 1010.54 ಕ್ವಿಂಟಾಲ್ ಕಬ್ಬಿಣದ ಮೊತ್ತವನ್ನು ಗುತ್ತಿಗೆದಾರರಿಗೆ ಅಧಿಕವಾಗಿ ಪಾವತಿಸಿದಂತಾಗಿದ್ದು, ಇದರ **ಮೊತ್ತ ರೂ.96,00,130/–** (1010.54 x 9500) ಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲು ಸೂಚಿಸಿದೆ.

**II ಕಬ್ಬಿಣದ ಪರಿಮಾಣದಲ್ಲಿ ಹೆಚ್ಚಿಗೆ ಪಾವತಿಸಿರುವುದು :–**

ಈ ಕಾಮಗಾರಿಗೆ ಸಂಬಂಧಿಸಿದಂತೆ 4ನೇ ಮತ್ತು ಭಾಗಶಃ ಬಿಲ್ಲಿನ EMB ಯಲ್ಲಿ ನಮೂದಿಸಿರುವ Steel Measurement ನ್ನು ಪರಿಶೀಲಿಸಿದಾಗ Side Face Bar 12MM 1x1x4x3148 = 12592 ಎಂದು ನಮೂದಿಸಿ ಪಾವತಿಸಲಾಗಿರುತ್ತದೆ. ಇಷ್ಟು ಉದ್ದವಾದ (Length) rod ಗಳು ಇರುವುದಿಲ್ಲ. ಇಲ್ಲಿ 1x1x4x31.48 = 125.92 ಎಂದು ಪಾವತಿಸಬೇಕಾಗಿದ್ದು, ಹೆಚ್ಚುವರಿಯಾಗಿ 12592 - 125.92 = 12466.08 x .89 = 11094.81 ಕೆ.ಜಿ ಅಥವಾ 110.95 ಕ್ವಿಂಟಾಲ್ ಕಬ್ಬಿಣವನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ವಿಚಾರಣೆ ಪತ್ರ ಸಂಖ್ಯೆ:63/11.09.2019 ರಲ್ಲಿ ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಇದರಿಂದಾಗಿ 110.95 ಕ್ವಿಂಟಾಲ್ ಅಧಿಕವಾಗಿ ಪಾವತಿಸಿದಂತಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ವಿವರಣೆ/ಮಾಹಿತಿ ನೀಡದೆ ಇರುವುದರಿಂದ ಸದರಿ 110.95 ಕ್ವಿಂಟಾಲ್‌ಗಳ ಮೊತ್ತ ಪ್ರತಿ ಕ್ವಿಂಟಾಲ್‌ಗೆ ಟೆಂಡರ್ ದರ ರೂ.2,500/–ರಂತೆ ಒಟ್ಟು ರೂ.10,54,007/– (110.95 x 9,500) ಗಳನ್ನು ವಸೂಲಾತಿಗೆ ಸೂಚಿಸಿದೆ.

ಮೇಲ್ಕಂಡ I & II ರ ಒಟ್ಟು ಮೊತ್ತ ರೂ. (96,00,130 + 10,54,007) = **1,06,54,137/-ಗಳನ್ನು ಗುತ್ತಿಗೆದಾರರಿಂದ ವಸೂಲಾತಿ** ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.

ಉತ್ತರ

| | |
|---|---|
| | 1. ಕಾಮಗಾರಿಯನ್ನು ನಿರ್ವಹಿಸುವುದರ ಸಂಬಂಧ ದಿನಾಂಕ: 21.11.2012 ರಂದು ನಡೆದ 121ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಅನುಮೋದನೆಯನ್ನು ಪಡೆದು ನಿಯಮಾನುಸಾರ ಟೆಂಡರ್ ಕರೆದು ಕೆಲಸವನ್ನು ನಿರ್ವಹಿಸಲಾಗಿರುತ್ತದೆ.<br>2. ಕಾಮಗಾರಿಯ ವಿಳಂಬದ ಅವಧಿಗೆ ಕಾಲವಿಸ್ತರಣೆಯನ್ನು ದಿನಾಂಕ 07.09.2018 ರ 24 ನೇ ಕಟ್ಟಡ ಸಮಿತಿಸಭೆ ಹಾಗೂ 151 ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.<br>3. Mobalization Advance ನೀಡಿರುವುದಕ್ಕೆ Bank Guranteeಯನ್ನು ರೂ. 3,40,25,807/-ಗಳಿಗೆ ಗುತ್ತಿಗೆದಾರರು ದಿನಾಂಕ 03.11.2012ರಂದು (B.G No. 006961 G120000098) ಇಂಡಿಯನ್ ಬ್ಯಾಂಕ್, ಶ್ರೀನಗರ ಕಾಲೋನಿ ಶಾಖೆ, ಹೈದರಬಾದ್-500073 ರವರಿಂದ ಪಡೆದು ವಿವಿನಿಲಯಕ್ಕೆ ಸಲ್ಲಿಸಿರುತ್ತಾರೆ. ಪೀಠೋಪಕರಣಗಳನ್ನು ಸರಬರಾಜು ಮಾಡಿರುವುದರ ಬಗ್ಗೆ ಪೀಠೋಪಕರಣಗಳಿಗೆ ಅಂದಾಜನ್ನು ಸಕ್ಷಮ ಪ್ರಾಧಿಕಾರವಾದ ಮುಖ್ಯ ಅಭಿಯಂತರರು ಲೋಕೋಪಯೋಗಿ ಇಲಾಖೆ ರವರಿಗೆ ಅಂದಾಜಿಗೆ ಅನುಮೋದನೆಯನ್ನು ಪಡೆದು ಕೆಲಸವನ್ನು ನಿಯಮಾನುಸಾರ ಟೆಂಡರ್ ಮೂಲಕ ನಿರ್ವಹಿಸಲಾಗಿರುತ್ತದೆ ಹಾಗೂ ಸದರಿ ಪೀಠೋಪಕರಣಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಿಂದ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಪಡೆಯಲಾಗಿರುತ್ತದೆ.<br>ಸದರಿ ಕಾಮಗಾರಿಯಲ್ಲಿನ ಕಬ್ಬಿಣದ ವ್ಯತ್ಯಾಸದ ಪರಿಮಾಣದ ಮೊತ್ತ ರೂ. 1,06,54,137/- ಗಳನ್ನು ಗುತ್ತಿಗೆದಾರರಿಂದ ವಸೂಲಿಸಿ ವಿವಿನಿಲಯದ ಖಾತೆಗೆ ಜಮಾಮಾಡುವುದರ ಸಂಬಂಧ ಗುತ್ತಿಗೆದಾರರಿಗೆ ಈಗಾಗಲೇ ಪತ್ರವನ್ನು ದಿನಾಂಕ 29.01.2020ರಂದು ನೀಡಲಾಗಿದ್ದು, ಸದರಿ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿಸಲು ಕ್ರಮವಹಿಲಾಗುತ್ತಿದೆ. |
| | ವಿವರ |
| 66 | **65. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಆಡಳಿತ ಭವನ ಘಟಿಕೋತ್ಸವ ಭವನ ಮತ್ತು ವಿಜ್ಞಾನ ಕಟ್ಟಡದ ಕಾಮಗಾರಿಗೆ ಸಂಬಂಧಿಸಿದಂತೆ ಐಟಂ ಸಂಖ್ಯೆ:20, 21 ರಲ್ಲಿ TMT Steel ಪರಿಮಾಣವನ್ನು ನೀಡಿರುವುದನ್ನು ಬಿಲ್ಲಿನಲ್ಲಿ ಕಟಾಯಿಸದೆ ಇರುವುದು ಮತ್ತು ಐಟಂ ಸಂಖ್ಯೆ:33ರಲ್ಲಿ ಪರಿಮಾಣವನ್ನು ಹೆಚ್ಚುವರಿಯಾಗಿ ನೀಡಿರುವುದು:-**<br>(I)ಮೇಲ್ಕಂಡ ಕಾಮಗಾರಿಯ 'E'MBಯನ್ನು ಪರಿಶೀಲಿಸಿದಾಗ ಆಡಳಿತ ಭವನಕ್ಕೆ ಸಂಬಂಧಿಸಿದಂತೆ 'E'MBಯಲ್ಲಿ Measurementನ್ನು ಐಟಂ ಸಂಖ್ಯೆ 33 ರಲ್ಲಿ Centering & Shuttering ಪರಿಮಾಣವನ್ನು ಒಟ್ಟು (First floor & Second floor) Measurementನಲ್ಲಿ ಕಳೆದಿರುವುದಿಲ್ಲ (Minus/Deduct) ಅದರ ವಿವರ ಈ ಕೆಳಕಂಡಂತಿರುತ್ತದೆ. |

| | ಪಾವತಿಸಿರುವುದು | ಪಾವತಿಸಬೇಕಾದ್ದು | ವ್ಯತ್ಯಾಸ (ಅಧಿಕ ಪಾವತಿ) |
|---|---|---|---|
| First Floor | 821.68 | 584.70 | 236.98 Sqmt |
| Second Floor | 933.02 | 849.16 | 83.92 Sq mts |
| | | | 320.90 Sq Mts |
| | | ಪ್ರತಿ Sqm. ಗೆ | @ 400.00 |
| | | | Rs. 1,28,360.00 |

ಇದರಿಂದಾಗಿ ರೂ.1,28,360/-ಗಳನ್ನು ಅಧಿಕಪಾವತಿಸಿದ್ದು, ಗುತ್ತಿಗೆದಾರರಿಂದ ವಸೂಲಾತಿಗೆ ಸೂಚಿಸಿದೆ.

| | |
|---|---|
| | (II)ವಿಜ್ಞಾನ ಭವನಕ್ಕೆ ಸಂಬಂಧಿಸಿದಂತೆ ಐಟಂ 20ರಲ್ಲಿ TMT Steel ಅನ್ನು ಮುಂಗಡವಾಗಿ 'E'MB ಯ Measurement ನಲ್ಲಿ ನಮೂದಿಸಿ ಪಾವತಿಸಲಾಗಿರುತ್ತದೆ. ಆದರೆ ಮುಂದಿನ ಬಿಲ್ಲುಗಳಲ್ಲಿ ಈ ಕಬ್ಬಿಣದ ಪರಿಮಾಣವನ್ನು ಕಳೆದಿರುವುದಿಲ್ಲ. (Minus/Deduct) ಇದರಿಂದಾಗಿ ಗುತ್ತಿಗೆದಾರರಿಗೆ ಈ ಕೆಳಕಂಡ ಪರಿಮಾಣದ ಕಬ್ಬಿಣವನ್ನು ಅಧಿಕವಾಗಿ ಪಾವತಿಸಿದಂತಾಗಿರುತ್ತದೆ. ಇದರ ವಿವರ ಈ ಕೆಳಕಂಡಂತಿದೆ. |

| ವಿಜ್ಞಾನ ಭವನ | | | |
|---|---|---|---|
| ಐಟಂ 20 | 8MM | 26400 X 0.395 | 10428.00 kg |
| | 10MM | 21600 X 0.620 | 13392.00 kg |
| | 12MM | 13824 X 0.890 | 12303.36 kg |
| | 16MM | 10776 X 1.58 | 17026.08 kg |
| | 20MM | 2580 X 2.47 | 6372.60 kg |
| | 25MM | 2784 X 3.85 | 10718.40 kg |
| | | | 70240.36 kg or 70.24 Ton x 81,000 = 56,89,440.00 |

(III)ಘಟಿಕೋತ್ಸವ ಭವನ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ ಐಟಂ 21ರ (Basement floor) ಗೆ TMT Steel ನ್ನು EMB ಯಲ್ಲಿ ಪರಿಶೀಲಿಸಿದಾಗ ಈ ಕೆಳಕಂಡ ಕಬ್ಬಿಣದ ಪರಿಮಾಣವನ್ನು ಮುಂಗಡವಾಗಿ ಪಾವತಿಸಲಾಗಿರುತ್ತದೆ. ಆದರೆ ಮುಂದಿನ ಬಿಲ್ಲುಗಳಲ್ಲಿ ಈ Measurementಗಳನ್ನು ಕಬ್ಬಿಣದ ಒಟ್ಟು ಪರಿಮಾಣದಲ್ಲಿ ಕಳೆದಿರುವುದಿಲ್ಲ. ಇದರಿಂದಾಗಿ ಈ ಕೆಳಕಂಡ ಪರಿಮಾಣದ ಕಬ್ಬಿಣವನ್ನು ಗುತ್ತಿಗೆದಾರರಿಗೆ ಅಧಿಕವಾಗಿ ಪಾವತಿಸಿದಂತಾಗಿದೆ. ((Minus/Deduct ಆಗಿರುವುದಿಲ್ಲ) ಅದರ ವಿವರ ಕೆಳಕಂಡಂತಿದೆ.

| | | | |
|---|---|---|---|
| ಐಟಂ 21 | 8MM | 22560 X 0.395 | 8911.20 kg |
| | 10MM | 19944 X 0.620 | 12365.28 kg |
| | 12MM | 11760 X 0.890 | 10466.40 kg |
| | 16MM | 7440 X 1.58 | 11755.20 kg |
| | 20MM | 5820 X2.47 | 14375.40 kg |
| | 25MM | 4560 X 3.85 | 17556.00 kg |
| | | | 75429.48 kg or 75.43 Qlt x 79,000 = 59,58,970.00 |

ಮೇಲ್ಕಂಡಂತೆ ಸದರಿ ಕಾಮಗಾರಿಯಲ್ಲಿ ಮುಂಗಡವಾಗಿ ಪಾವತಿಸಿ ಅಂತಿಮ ಬಿಲ್ಲಿನಲ್ಲಿ ಕಟಾಯಿಸದಿರುವ ಒಟ್ಟು ಕಬ್ಬಿಣದ ಪರಿಮಾಣದ ಮೊತ್ತ ಮತ್ತು Centering & Shuttering ಪರಿಮಾಣದ ಮೊತ್ತ **ರೂ.1,17,96,770/–ಗಳನ್ನು (ರೂ.1,28,360 + 59,58,970 + 56,89,440 = 1,17,76,770) ಗುತ್ತಿಗೆದಾರರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.

| | |
|---|---|
| | ಉತ್ತರ |
| | ಸದರಿ ಕಾಮಗಾರಿಯಲ್ಲಿನ centering & shuttering ಕಬ್ಬಿಣದ ಪರಿಮಾಣ ಮೊತ್ತ ರೂ. 1,17,76,770/–ಗಳನ್ನು ಗುತ್ತಿಗೆದಾರರಿಂದ ವಸೂಲಿಸಿ ವಿವಿನಿಲಯದ ಖಾತೆಗೆ ಜಮಾಮಾಡುವುದರ ಸಂಬಂಧ ಗುತ್ತಿಗೆದಾರರಿಗೆ ಈಗಾಗಲೇ ಪತ್ರವನ್ನು ದಿನಾಂಕ 20.01.2020, 10.03.2020 ಮತ್ತು 19.08.2020 ರಂದು ನೀಡಲಾಗಿದ್ದು, ಸದರಿ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿಸಲು ಕ್ರಮವಹಿಲಾಗುತ್ತಿದೆ. |
| | ವಿವರ |
| 67 | **66. 2017–18ನೇ ಸಾಲಿನಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ಹಾಗೂ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದರ ಬಗ್ಗೆ (ಪರೀಕ್ಷಾ ವಿಭಾಗದ ಸಿಬ್ಬಂದಿ ಹೊರತುಪಡಿಸಿ):–** |

| | |
|---|---|
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2017-18ನೇ ಸಾಲಿನಲ್ಲಿ ಸಿಬ್ಬಂದಿವರ್ಗದವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಾವತಿಸಿರುವುದನ್ನು ಗಮನಿಸಿದ್ದು, ಕ.ಸ.ಸೇ ನಿಯಮ 449 ರಿಂದ 540 ಹಾಗೂ ವಿವಿಧ ಸರ್ಕಾರಿ ಆದೇಶದನ್ವಯ ನಿಗದಿಪಡಿಸಿದ ದರಗಳಲ್ಲಿ ಪಾವತಿಸದೆ ನಿಯಮಬಾಹಿರವಾಗಿ ಕರ್ನಾಟಕ ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ (ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ) ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಾವತಿಸಿದ್ದು, ಇದನ್ನು **ಅನುಬಂಧ-20ರಲ್ಲಿ** ಪಟ್ಟಿ ಮಾಡಿ ನೀಡಲಾಗಿದೆ. ನಿಯಮಬಾಹಿರವಾಗಿ ಪಾವತಿಸಿರುವ ಮೊತ್ತ **ರೂ.2,50,554/-ಗಳನ್ನು ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳಿಂದ ವಸೂಲಾತಿ** ಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಲು ಸೂಚಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಅಂಗೀಕೃತ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಕಾಯ್ದೆ ಹೊಂದಿದೆ. ಇದರ ಉಲ್ಲೋಕ್ತಿಯಲ್ಲಿ ಹಣಕಾಸು ಸಮಿತಿ/ ವ್ಯವಸ್ಥಾಪನಾ ಮಂಡಳಿಗಳಿಗೆ ವಿಶ್ವವಿದ್ಯಾನಿಲಯದ ಹಣಕಾಸು/ ಆಡಳಿತಾತ್ಮಕ ನಿರ್ವಹಣೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದನ್ನು ಅವಲೋಕಿಸಬಹುದಾಗಿದೆ. ಅದರಂತೆಯೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮದಂತೆಯೆ ಕರಾಮುವಿಯಲ್ಲಿಯು ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13-03-2012, ವರದಿಯನ್ನು ದಿನಾಂಕ:31.03.2012 ರ 46ನೇ ಹಣಕಾಸು ಸಮಿತಿ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ.ಅದರಂತೆ ಸಿಬ್ಬಂದಿವರ್ಗದವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಾವತಿಸಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | ವಿವರ |
| 68 | **67. ಆಡಿಟ್ ಶುಲ್ಕ ಪಾವತಿಸುವ ಬಗ್ಗೆ :-**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2017-18ನೇ ಸಾಲಿನ ಲೆಕ್ಕಪರಿಶೋಧನೆಯನ್ನು ದಿನಾಂಕ:01.07.2019 ರಿಂದ 12.09.2019ರವರೆಗೆ ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಇಲಾಖೆ, ಮೈಸೂರು ಈ ಕಛೇರಿ ಸಿಬ್ಬಂದಿ ವತಿಯಿಂದ ಲೆಕ್ಕಪರಿಶೋಧನಾ ಕಾರ್ಯವನ್ನು ಕೈಗೊಂಡಿದ್ದು, ವಿವರವನ್ನು **ಅನುಬಂಧ-21ರಲ್ಲಿ** ನೀಡಲಾಗಿದೆ. ಈ ಬಾಬ್ತು ಲೆಕ್ಕಪರಿಶೋಧನಾ **ಶುಲ್ಕ ರೂ.18,56,642/- ಗಳನ್ನು ಪಾವತಿಸಬೇಕಾಗಿದ್ದು,** ಇದನ್ನು ಸರ್ಕಾರಿ ಲೆಕ್ಕ ಶೀರ್ಷಿಕೆ:0700-60-110-001ಗೆ ತ್ವರಿತವಾಗಿ ಪಾವತಿಸಲು ಸೂಚಿಸಲಾಗಿದೆ ಹಾಗೂ ಈ ಬಗ್ಗೆ ವರದಿ ನೀಡಲು ಸೂಚಿಸಿದೆ. |
| | ಉತ್ತರ |
| | 2017-18ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕ ಪಾವತಿಸಲು ಕ್ರಮವಹಿಸಲಾಗುವುದು. |

ಹಣಕಾಸು ಅಧಿಕಾರಿ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು-570 006.

ಕುಲಸಚಿವ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-570 006.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತ ಗಂಗೋತ್ರಿ, ಮೈಸೂರು-570006**

# Karnataka State Open University

**Muktha Gangothri, Mysore-570006**

## ವಾರ್ಷಿಕ ಲೆಕ್ಕಪತ್ರಗಳು 2017-18

## ANNUAL ACCOUNTS 2017-18

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2017–18 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ 07.09.2018 ರಂದು ನಡೆದ 72ನೇ ಹಣಕಾಸು ಸಮಿತಿ ಸಭೆ ಮತ್ತು 151ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

# ವಿಷಯ ಸೂಚಿ


| ಕ್ರಮ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಸಾಮಾನ್ಯ ನಿಧಿ /General Fund | 1–6 |
| 2 | ಪರೀಕ್ಷಾ ನಿಧಿ /Examination Fund | 7–9 |
| 3 | ಪಿಂಚಣಿ ನಿಧಿ ಖಾತೆ /Pension Fund | 10–11 |
| 4 | ನೂತನ ಪಿಂಚಣಿ ಯೋಜನೆ ನಿಧಿ / New Pension Scheme Fund | 12–13 |
| 5 | ದತ್ತಿ ನಿಧಿ /Endowment Fund | 14 |
| 6 | ಭದ್ರತಾ ಠೇವಣಿ ನಿಧಿ /Security Deposit Fund | 15 |
| 7 | ಜ್ಞಾನವಾಣಿ ನಿಧಿ /Gyanavani Fund | 16 |
| 8 | ಮುಕ್ತ ಸಂಜೀವಿನಿ ನಿಧಿ /Mukta Sanjeevini Fund | 17 |
| 9 | ಶಿಷ್ಯವೇತನ ನಿಧಿ /Scholarship Fund | 18 |
| 10 | ದೂರ ಶಿಕ್ಷಣ ಮಂಡಳಿ ನಿಧಿ /Distance Education Council Fund | 19 |
| 11 | ಅಭಿವೃದ್ಧಿ ಅನುದಾನ ನಿಧಿ /Development Grant Fund | 20 |
| 12 | ಕನ್ನಡ ಅಭಿವೃದ್ಧಿ ಅನುದಾನ ನಿಧಿ /Kannada Development Grant Fund | 21 |
| 13 | ಡಾ. ಬಿ.ಆರ್.ಅಂಬೇಡ್ಕರ್ ಪೀಠ ನಿಧಿ /Dr. B.R.Ambedkar Peeta Fund | 22 |
| 14 | ಮಹಾತ್ಮ ಗಾಂಧೀಜಿ ಪೀಠ ನಿಧಿ / Mahatma Gandhiji Peeta Fund | 23 |
| 15 | ರಾಷ್ಟ್ರಕವಿ ಕುವೆಂಪು ಪೀಠ ನಿಧಿ /Rashtrakavi Kuvempu Peeta Fund | 24 |
| 16 | ಸ್ವಾಮಿ ವಿವೇಕಾನಂದ ಪೀಠ ನಿಧಿ / Swamy Vivekananda Peeta Fund | 25 |
| 17 | ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ ನಿಧಿ / Nalwadi Krishnaraja Wodeyar Peeta Fund | 26 |
| 18 | ಬಾಬು ಜಗಜೀವನ್ ರಾಮ್ ಪೀಠ ನಿಧಿ / Babu Jagajeevanram Peeta Fund | 27 |
| 19 | ಅಕ್ಕ ಮಹಾದೇವಿ ಪೀಠ ನಿಧಿ /Akka Mahadevi Peeta Fund | 28 |
| 20 | ಅಮಾನತ್ತು ಖಾತೆ ನಿಧಿ /Suspense Account Fund | 29 |

## ೨೦೧೭–೧೮ ನೇ ಸಾಲಿನ ಸಾಮಾನ್ಯ ನಿಧಿ ಸ್ವೀಕೃತಿ

## General Fund Receipts For the year 2017-18

| ಕ್ರ.ಸಂ Sl. No | ಕೋಡ್ Tran Code | ಲೆಕ್ಕ ಶೀರ್ಷಿಕೆ / Head | 2017–18 ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು Revised Budget Estimates for 2017-18 | 2017–18 ನೇ ಸಾಲಿನ ವಾಸ್ತವಿಕ ರೂ.ಗಳಲ್ಲಿ Actuals For 2017-18 in Rupees | ಒಟ್ಟು ರೂ.ಗಳಲ್ಲಿ Total in Rupees |
|---|---|---|---|---|---|
| | | ಆರಂಭ ಶಿಲ್ಕು / OPENING BALANCE | | | **408,00,73,861** |
| | | | | **213,83,06,190** | |
| | | | | **182,58,30,964** | |
| | | | | **11,59,36,707** | |
| | | **ಭಾಗ- 1 : Part -1** | | | |
| 1 | 101 | ಬೋಧನಾ ಶುಲ್ಕ<br>Tuition fee | 10,00,000 | 0 | |
| 2 | 102 | ನೊಂದಣಿ ಶುಲ್ಕ<br>Registration Fee | 1,00,000 | 0 | |
| 3 | 103 | ಅರ್ಹತಾ ಶುಲ್ಕ<br>Eligibility Fee | 2,00,000 | 0 | |
| 4 | 104 | ವರ್ಗಾವಣೆ ಶುಲ್ಕ<br>Transfer Fee | 4,00,000 | 3,74,529 | |
| 5 | 105 | ಪ್ರವೇಶಾತಿ ಪ್ರಕ್ರಿಯೆ ಶುಲ್ಕ<br>Admission Processing Fee | 7,50,000 | 0 | |
| 6 | 184 | ಆನ್‌ಲೈನ್ ಕಾರ್ಯಕ್ರಮಗಳು<br>Online Programmes | 0 | 0 | |
| 7 | 136 | ಕಟ್ಟಡಗಳಿಂದ ಆದಾಯ<br>Revenue from Buildings | 5,00,000 | 4,85,220 | |
| 8 | 122 | ಪ್ರಸಾರಾಂಗ<br>Prasaranga | 50,000 | 29,068 | |
| 9 | 127 | ಅತಿಥಿ ಗೃಹ ಮತ್ತು ಹಾಸ್ಟೆಲ್ ಬಾಡಿಗೆ ವರಮಾನ<br>Rental Income from Guest House/Hostel | 25,00,000 | 21,58,069 | |
| 10 | 144 | ಠೇವಣಿ ಮತ್ತು ಠೇವಣಿಗಳ ಮೇಲಿನ ಬಡ್ಡಿ<br>Deposits & interest on Deposit (Gen fund) | 10,00,00,000 | 14,24,04,813 | |
| 11 | 125 | ಹಳೆಯ ಪತ್ರಿಕೆಗಳ ಮಾರಾಟ<br>Sale of Old Papers | 1,00,000 | 0 | |
| 12 | 182 | ವೇತನ ಕಾರ್ಪಸ್ ನಿಧಿ ಮೇಲಿನ ಬಡ್ಡಿ ಮೊತ್ತ<br>Salary Corpus Fund Interest | 6,00,00,000 | 6,04,69,353 | |
| 13 | 192 | ಐಸಿಸ್‌ಎಸ್‌ಆರ್ / ಎಸ್‌ಇಆರ್‌ಬಿ ಯೋಜನೆ<br>ICSSR/ SERB PROJECT | 4,55,000 | 4,55,000 | |
| 14 | 195 | ಸಮಾಜ ಕಲ್ಯಾಣ ಇಲಾಖೆಯಿಂದ ಪ್ರವೇಶಾತಿ ಶುಲ್ಕ ಮರುಪಾವತಿ<br>Admission Refund from Social Welfare Dept | 2,00,00,000 | 49,74,845 | |
| 15 | 130 | ವೇತನ ವಸೂಲಾತಿ /Salary Recovery | 27,00,000 | 20,57,070 | |
| 16 | 156 | ಇತರೆ /Miscellaneous | 2,10,00,000 | 84,56,935 | |
| | | **ಬಾಹ್ಯ ಅನುದಾನ ಸಂಸ್ಥೆಗಳಿಂದ ಸ್ವೀಕೃತ ಅನುದಾನ<br>Grant Received from External Funding Agencies** | | | |
| 17 | 191 | ಎನ್.ಎಸ್.ಎಸ್. (ಈಟಿಐ) /NSS ETI | 0 | 0 | |
| 18 | | ಸಿಓಎಲ್ ಯೋಜನಾ ಕಾರ್ಯಕ್ರಮ ಮತ್ತು ತರಬೇತಿ<br>COL Project Orientation Programme & Training | 0 | 0 | |
| | | **ಒಟ್ಟು : Total** | **20,97,55,000** | **22,18,64,902** | |

--

| 2017-18 ರ ವಾಸ್ತವ ವೆಚ್ಚಗಳು<br>Actual Expenditure for 2017-18 | 4,79,67,393 | |
| **ಒಟ್ಟು ವೆಚ್ಚಗಳು**<br>**Total Expenditure** | **4,79,67,393** | |
| ಭಾಗ–2 | | |
| ಠೇವಣಿ ಹೂಡಿಕೆ | 0 | |
| ಒಟ್ಟು ಮೊತ್ತ ಭಾಗ– 1 + ಭಾಗ–2<br>**Total Part 1 + Part 2** | **4,79,67,393** | |
| ಅಂತಿಮ ಶಿಲ್ಕು **31.03.2018**<br>**Closing Balance as on 31.03.2018** | | **2,61,236** |
| **FDR** | **0** | |
| **Cash book** | **2,61,236** | |

ಹಣಕಾಸು ಅಧಿಕಾರಿ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು-570 006.

103

ಕುಲಸಚಿವ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬.

**ಆದೇಶ ಸಂಖ್ಯೆ:** ಕರಾಮುವಿ/ಅಸಾವಿ/01–07/2020–21 ದಿನಾಂಕ: 05.02.2021
ಮುದ್ರಕರು : **ಪೂರ್ಣಿಮ ಪ್ರಿಂಟರ್ಸ್,** ಬೆಂಗಳೂರು – 560 040
ಒಳಪುಟ ಕಾಗದ : 70 ಜಿಎಸ್‌ಎಂ ಮ್ಯಾಪ್ಲಿಥೋ, ರಕ್ಷಾಪುಟಕ್ಕೆ : 220 ಜಿಎಸ್‌ಎಂ ಆರ್ಟ್ ಕಾಗದ, ಪ್ರತಿಗಳು : 200

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು– 570006**

# Karnataka State Open University

Mukthagangothri,Mysuru-570006

**2016–17ನೇ ಸಾಲಿನ ಲೆಕ್ಕ ತಪಾಸಣಾ ವರದಿಗೆ ಅನುಪಾಲನಾ ವರದಿ**

## Compliance report for 2016-17 Audit

**2016–17ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿ ಸಿದ್ಧಪಡಿಸಿ, ದಿನಾಂಕ 22.10.2020 ರಂದು ನಡೆದ 80ನೇ ಹಣಕಾಸು ಸಮಿತಿ ಸಭೆ ಮತ್ತು ದಿನಾಂಕ 23.10.2020 ರಂದು ನಡೆದ 162ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತ ಗಂಗೋತ್ರಿ, ಮೈಸೂರು-570006

ವಿಷಯ: 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸಲ್ಲಿಸಲು ಆಗಿರುವ ವಿಳಂಬಕ್ಕೆ ಕಾರಣ

| ಕ್ರ ಸಂ | ವರ್ಷ | ಲೆಕ್ಕ ಪತ್ರಗಳನ್ನು ವರ್ಷವಾರು ಪೂರ್ಣಗೊಳಿಸಿ ಲೆಕ್ಕ ಪರಿಶೋಧನೆಗೆ ಸಿದ್ಧ ಪಡಿಸಬೇಕಾದ ದಿನಾಂಕ | ವರ್ಷವಾರು ಲೆಕ್ಕ ಪತ್ರಗಳನ್ನು ಸಿದ್ದಪಡಿಸಿದ ದಿನಾಂಕ | ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ | ಸರ್ಕಾರಿ ಲೆಕ್ಕ ಪರಿಶೋಧಕರಿಗೆ ಪರಿಶೋಧನೆ ನಡೆಸಲು ಕೋರಿ ಪತ್ರ ಬರೆದ ದಿನಾಂಕ | ಸರ್ಕಾರಿ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ | ಸರ್ಕಾರಿ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆಯ ಪ್ರಮಾಣ ಪತ್ರವನ್ನು ನೀಡಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಕರಾಮುವಿ ನಿಲಯದ ವ್ಯವಸ್ಥಾಪನಾ ಹಾಗೂ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆದ ವಿವರ | ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣಗಳು |
|---|---|---|---|---|---|---|---|---|---|---|---|
| 01 | 02 | 03 | 04 | 05 | 06 | 07 | 08 | 09 | 10 | 11 | 12 |
| 1. | 2016-17 | ಜೂನ್ 30 (ಆರ್ಥಿಕ ವರ್ಷ ಮುಗಿದ ನಂತರ) | 15.07.2017 | - | 22.07.2017 ಮತ್ತು 25.01.2018 | ದಿನಾಂಕ: 03.11.2018 ರಿಂದ 23.02.2019 ರವರೆಗೆ<br>ಮರುಪರಿಶೀಲನಾ ದಿನಾಂಕ: 27.03.2019 | ಸಂಖ್ಯೆ:ಅನಿ/ಪ್ರಾಕಮೈ/ಸಿಬ್ಬಂದಿ/ಲೆತವ/2019-20/971-72 ದಿನಾಂಕ 03.07.2019. | ವ್ಯವಸ್ಥಾಪನಾ ಮಂಡಳಿ ಸಭೆಯ ದಿನಾಂಕ: 23.10.2020<br>ಹಣಕಾಸು ಸಮಿತಿ ಸಭೆಯ ದಿನಾಂಕ: 22.10.2020 | ಅಚ್ಚಿಗಾಗಿ ನೀಡಿದ ದಿನಾಂಕ<br>ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ | ಸಂಖ್ಯೆ: ಕರಾಮುವಿ/ಹವಿ-08/20/2018-19 ದಿನಾಂಕ | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016-17 ನೇ ಸಾಲಿನ ಲೆಕ್ಕ ಪರಿಶೋಧನೆಯು ದಿನಾಂಕ 23.02.2019 ರಂದು ಮುಕ್ತಾಯಗೊಂಡಿದ್ದು ದಿನಾಂಕ 05.07.2019 ರಂದು ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಒಟ್ಟು 150 ಕಂಡಿಕೆಗಳಿದ್ದು, ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಂದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಸಮರ್ಪಕ ಉತ್ತರ ಪಡೆದು ಕಂಡಿಕೆವಾರು ಅನುಸರಣಾ ವರದಿಗಳನ್ನು ಕ್ರೋಡೀಕರಿಸಿ, ವಿ.ವಿ ಯ ಹಣಕಾಸು ಸಮಿತಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸಲು ಸಾಕಷ್ಟು ಸಮಯ ಬೇಕಾಗಿದ್ದರಿಂದ ಮತ್ತು ಕೋವಿಡ್-19 ನಿಂದಾಗಿ ಅನುಪಾಲನಾ ವರದಿಯನ್ನು ಶಾಸಕಾಂಗ ಸಭೆಗೆ ಸಲ್ಲಿಸಲು ವಿಳಂಬವಾಗಿರುತ್ತದೆ. ಇನ್ನು ಮುಂದೆ ಸಕಾಲದಲ್ಲಿ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಕ್ರಮ ವಹಿಸಲಾಗುವುದು ಎಂದು ವಿನಂತಿಸುತ್ತಾ ವಿಳಂಬ ಮನ್ನಾ ಮಾಡಲು ಕೋರಿದೆ. |

ಕುಲಸಚಿವ

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿಯ ವಿವರ.

| ಕ್ರ ಸಂ | ವಿವರ |
|---|---|
| 01 | **1. ಹಿಂದಿನ ವರ್ಷಗಳ ಲೆಕ್ಕಪರಿಶೋಧನೆಯ ಆಡಿಟ್ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ :-** |

2016-17ನೇ ವರ್ಷದ ಲೆಕ್ಕಪರಿಶೋಧನೆಯನ್ನು ಕೈಗೊಂಡ ಅವಧಿಯಲ್ಲಿ ಹಿಂದಿನ ವರ್ಷಗಳ ಲೆಕ್ಕಪರಿಶೋಧನೆಯ ವರದಿಯ ಕಂಡಿಕೆಗಳಿಗೆ ಸೂಕ್ತ ದಾಖಲಾತಿಗಳೊಂದಿಗೆ, ಆದೇಶದೊಂದಿಗೆ ಸಮಂಜಸವಾದ ವಿವರಣೆ ನೀಡದೆ ಇರುವುದರಿಂದ ಆಡಿಟ್ ಕಂಡಿಕೆಗಳ ಆಕ್ಷೇಪಣೆ ವಸೂಲಾತಿ ಮೊಬಲಗು ತೀರುವಳಿಯಾಗದೆ ಹಾಗೆಯೇ ಮುಂದುವರೆದಿರುತ್ತದೆ. 1996-97 ರಿಂದ 2015-16ನೇ ವರ್ಷಗಳ ಲೆಕ್ಕಪರಿಶೋಧನೆಗೆ ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಅಧಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಆದುದರಿಂದ ಸಂಬಂಧಿಸಿದ ಅಧಿಕಾರಿಗಳ/ನೌಕರರ ಮೇಲೆ ಕ್ರಮಕೈಗೊಂಡು ಲೆಕ್ಕಪರಿಶೋಧನೆಯ ಕಂಡಿಕೆಗೆ ಅನುಪಾಲನ ವರದಿಯನ್ನು ಸಲ್ಲಿಸಲು ತಿಳಿಸಿದೆ. ಇದುವರೆವಿಗೂ ತೀರುವಳಿಯಾಗದೆ ಬಾಕಿ ಉಳಿದಿರುವ ವಿವರ **ಅನುಬಂಧ (1)ರಲ್ಲಿ** ನೀಡಿದೆ.

| ಕ್ರ.ಸಂ | ವರ್ಷ | ಒಟ್ಟು ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊತ್ತ | ಒಟ್ಟು ಕಂಡಿಕೆ ಸಂಖ್ಯೆ | ವಸೂಲಾತಿ ಮೊತ್ತ |
|---|---|---|---|---|---|
| 1 | 1996 ರಿಂದ 1997 ರವರೆಗೆ 2014-15 | 388 | 356,99,31,886 | 306 | 35,58,19,239 |
| 2 | 2015-2016 | 39 | 92,30,83,842 | 21 | 21,98,81,021 |
| | ಒಟ್ಟು | **427** | **450,30,00,942** | **327** | **57,57,00,260** |

ಕುಲಸಚಿವರವರ ಪತ್ರ ಸಂಖ್ಯೆ:ಕರಾಮುವಿ/ಹವಿ/8/18/2017-18 ದಿನಾಂಕ:08.02.2019 ರಂದು ಅನುಸರಣಾ ವರದಿಯನ್ನು ಪ್ರಾಂತೀಯ ವಿಭಾಗ ಕಛೇರಿ, ಮೈಸೂರಿಗೆ ಸಲ್ಲಿಸಿದ್ದರೂ ಸದರಿ ಅನುಸರಣಾ ವರದಿಯನ್ನು ಪರಿಶೀಲಿಸಲು ಯಾವುದೇ ಪೂರಕ ದಾಖಲಾತಿ ಒದಗಿಸದೆ ಇರುವುದರಿಂದ ಹಾಗೂ ನಿಗದಿತ ನಮೂನೆಯಲ್ಲಿ ಸಲ್ಲಿಸದ ಕಾರಣ ಪತ್ರ ಸಂಖ್ಯೆ:ಅನಿ/ಪ್ರಾಕಮೈ/ಲೆತವಿ/2018-19/948, ದಿನಾಂಕ:11.03.2019ರಂದು ಹಿಂದಿರುಗಿಸಿದ್ದು, ಪುನಃ ಅನುಸರಣಾ ವರದಿಯು ಈ ವರದಿ ಬಿಡುಗಡೆಯಾಗುವವರೆಗೂ ಸ್ವೀಕೃತವಾಗಿರುವುದಿಲ್ಲ.

ಉತ್ತರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 1996-97ನೇ ಸಾಲಿನಿಂದ 2015-16ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಸಿದ್ಧಪಡಿಸಿ, ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋಧನೆ ಪಡೆದು ಲೆಕ್ಕಪರಿಶೋಧಕರಿಗೆ, ಸರ್ಕಾರದ ವಿಧಾನಸಭೆಯ ಉಭಯ ಸದನಗಳಿಗೆ ಹಾಗೂ ಘನತೆವೆತ್ತ ರಾಜ್ಯಪಾಲರ ಕಛೇರಿಗೆ ನಿಗಧಿತ ಪ್ರತಿಗಳನ್ನು ಸಲ್ಲಿಸಲಾಗಿರುತ್ತದೆ. ಹಾಗೂ ಆಡಿಟ್ ಕಂಡಿಕೆಗಳ ಆಕ್ಷೇಪಣೆ ಮತ್ತು ವಸೂಲಾತಿ ಮೊಬಲಗು ತೀರುವಳಿ ಸಂಬಂಧ ಸರ್ಕಾರವು ಅಡ್‌ಹಾಕ್ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದ್ದು, ಆಡಿಟ್ ಕಂಡಿಕೆಗಳ ಆಕ್ಷೇಪಣೆ ಮತ್ತು

| | |
|---|---|
| | ವಸೂಲಾತಿ ಮೊಬಲಗನ್ನು ತೀರುವಳಿಗೊಳಿಸಲು ಕ್ರಮವಹಿಸಲಾಗುತ್ತಿದೆ. |
| | **ವಿವರ** |
| 02 | **2. ಆಯವ್ಯಯ ಅಂದಾಜು ತಯಾರಿಸಿರುವುದು:-**<br><br>2016-17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಮೂಲ ಆಯವ್ಯಯ ಪ್ರತಿಯನ್ನು ಪರಿಶೀಲಿಸಿದಾಗ ಅಂತಿಮ ಶಿಲ್ಕು (-) ಆಗಿದ್ದು, 2016-17ನೇ ವರ್ಷದ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಪ್ರಾರಂಭ ಶಿಲ್ಕು ರೂ.1,08,55,650 (-) ಪರಿಗಣಿಸಬೇಕಾಗಿದ್ದು, (2015-16ನೇ ಸಾಲಿನಲ್ಲಿ ಅಂತಿಮ ಶಿಲ್ಕು) ಆದರೆ 2016-17ನೇ ವರ್ಷದ ಆಯವ್ಯಯ ಪಟ್ಟಿಯಲ್ಲಿ ಪ್ರಾರಂಭ ಶಿಲ್ಕು (Opening Balance) ರೂ.47,08,70,139/- ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ. ಈ ಮೊತ್ತದ ವ್ಯತ್ಯಾಸದ ರೂ.46,00,14,489/-ಗಳಿಗೆ ಯಾವುದೇ ರೀತಿಯ ಕಾರಣಗಳನ್ನು ಆಯವ್ಯಯದಲ್ಲಿ ದಾಖಲಿಸಿರುವುದಿಲ್ಲ. ಈ ಬಗ್ಗೆ ಲೆಕ್ಕ ವಿಚಾರಣೆ ಸಂಖ್ಯೆ:47/2018-19 ದಿನಾಂಕ:23.11.2018 ನೀಡಿದ್ದು, ವಿವರಣೆ ನೀಡದೆ ದಾಖಲಾತಿಯನ್ನು ಹಾಜರುಪಡಿಸದೆ ಇರುವುದರಿಂದ ಈ ವ್ಯತ್ಯಾಸವನ್ನು ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.<br><br>2016-17ನೇ ವರ್ಷದ ಆಯವ್ಯಯದಲ್ಲಿ ನಿರೀಕ್ಷಿತ ಜಮೆ ಸ್ವೀಕೃತಿ ರೂ.117,17,00,000/- ಹಾಗೂ ನಿರೀಕ್ಷಿತ ವೆಚ್ಚ ರೂ.167,06,40,145/-ಗಳಾಗಿದ್ದು, ಕೊರತೆ ಮೊತ್ತ ರೂ.49,89,40,145/-ಗಳಾಗಿರುತ್ತದೆ. ಆದರೆ ಸ್ವೀಕೃತಿ ಜಮಾಗಿಂತ ವೆಚ್ಚವನ್ನು ಹೆಚ್ಚು ತೋರಿಸಿರುವುದರಿಂದ ಕೊರತೆ ಮೊಬಲಗನ್ನು ಹೇಗೆ ಸರಿದೂಗಿಸಲಾಗುವುದು ಎಂಬ ಬಗ್ಗೆ ಆಯವ್ಯಯದಲ್ಲಿ ತೋರಿಸದಿರುವುದು ಕಂಡುಬಂದಿರುತ್ತದೆ.<br><br>2016-17ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ದಿನಾಂಕ:02.04.2016 ರಂದು ಹಣಕಾಸು ಸಮಿತಿ ಮತ್ತು ದಿನಾಂಕ:22.04.2016ರ ವ್ಯವಸ್ಥಾಪನಾ ಮಂಡಳಿ(BOM) ಹಾಗೂ ದಿನಾಂಕ:25.03.2017ರಂದು ಪರಿಷ್ಕೃತ ಆಯವ್ಯಯವನ್ನು ಅನುಮೋದಿಸಲಾಗಿದೆ. ಆಯವ್ಯಯ ಅಂದಾಜುಗಳನ್ನು ಸಮರ್ಪಕವಾಗಿ, ಲಭ್ಯವಾಗುವ ಸ್ವೀಕೃತಿ ಜಮೆಯ ಮಿತಿಯೊಳಗೆ ಸಿದ್ಧಪಡಿಸಿರುವುದನ್ನು ವ್ಯವಸ್ಥಾಪನಾ ಮಂಡಳಿಯು ಖಚಿತಪಡಿಸಿಕೊಳ್ಳದಿರುವುದನ್ನು ಲೆಕ್ಕತನಿಖೆಯಲ್ಲಿ ಗಮನಿಸಲಾಗಿದೆ. ಇನ್ನುಮುಂದೆ ಲೆಕ್ಕ ಶೀರ್ಷಿಕೆವಾರು ಆಯವ್ಯಯವನ್ನು ನಿಖರವಾಗಿ ಸಿದ್ಧಪಡಿಸಿಕೊಳ್ಳಲು ಕ್ರಮವಹಿಸುವಂತೆ ಸೂಚಿಸಿದೆ. |
| | ಉತ್ತರ |
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಅಂತಿಮ ಶಿಲ್ಕು ರೂ.1,08,55,650/- ಎಂದು ನಮೂದಾಗಿರುವುದು ಸರಿಯಷ್ಟೆ. ಆದರೆ 2015-16ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಅಂತಿಮ ಶಿಲ್ಕು ರೂ. 47,08,70,139/-ಯಿದ್ದು, ಸದರಿ ಮೊತ್ತವನ್ನು 2016-17ನೇ ಸಾಲಿಗೆ ಪ್ರಾರಂಭ ಶಿಲ್ಕಾಗಿ ಪರಿಗಣಿಸಲಾಗಿರುತ್ತದೆ. ಆದುದರಿಂದ ಯಾವುದೆ |

| | |
|---|---|
| | ವ್ಯತ್ಯಾಸವಾಗಿರುವುದಿಲ್ಲ.<br>2016–17ನೇ ಸಾಲಿನಲ್ಲಿ ಕೊರತೆ ಆಯವ್ಯಯ ಅಂದಾಜುಗಳಿದ್ದು, ಕೊರತೆ ಮೊಬಲಗನ್ನು ವಿ ವಿ ಯ ಠೇವಣಿ ಮತ್ತು ಠೇವಣಿಗಳ ಮೇಲಿನ ಬಡ್ಡಿಯಿಂದ ಭರಿಸಲು ಅಂದಾಜಿಸಿ ಆಯವ್ಯಯ ಅಂದಾಜನ್ನು ಸಿದ್ಧಪಡಿಸಲಾಗಿತ್ತು. ಈ ಬಗ್ಗೆ ಮಾಹಿತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಲೆಕ್ಕಪರಿಶೋಧಕರಿಗೆ ನೀಡಲಾಗಿರುತ್ತದೆ. ಇನ್ನು ಮುಂದೆ ಲೆಕ್ಕ ಶೀರ್ಷಿಕೆವಾರು ಆಯವ್ಯಯವನ್ನು ನಿಖರವಾಗಿ ಸಿದ್ಧಪಡಿಸಿಕೊಳ್ಳಲು ಕ್ರಮವಹಿಸಲಾಗುವುದು. |
| | **ವಿವರ** |
| 03 | **3. ಪರಿಷ್ಕೃತ ಅಂದಾಜು ಸಿದ್ದಪಡಿಸಿ ಸಕಾಲದಲ್ಲಿ ಅನುಮೋದನೆ ಪಡೆಯದಿರುವುದು :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ವರ್ಷದ ಆಯ–ವ್ಯಯವನ್ನು ತಯಾರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಬಜೆಟ್ ಕೈಪಿಡಿ ನಿಯಮಗಳ ರೀತ್ಯಾ ಸೆಪ್ಟೆಂಬರ್ 16 ರಿಂದ ಡಿಸೆಂಬರ್ 2016ರೊಳಗೆ ಪರಿಷ್ಕೃತ ಅಂದಾಜು ತಯಾರಿಸಿ ಜನವರಿ–2017 ರಿಂದ ಮಾರ್ಚಿ–2017 ರೊಳಗೆ ಹಣಕಾಸು ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ಪಡೆದುಕೊಂಡ ನಂತರ BOM ಸಭೆಯಲ್ಲಿ ಅನುಮತಿ ಅಥವಾ ಅನುಮೋದನೆ ಪಡೆಯಬೇಕಾಗಿದ್ದು, ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸದರಿ ಪ್ರಕ್ರಿಯೆಯನ್ನು ದಿನಾಂಕ:18.02.2017 ರಂದು ಹಣಕಾಸು ಸಮಿತಿ ಸಭೆಯಲ್ಲಿ ಹಾಗೂ ದಿನಾಂಕ 25.03.2017 ರಂದು ನಡೆದ ವ್ಯವಸ್ಥಾಪನಾ ಮಂಡಳಿ ಸಭೆಯಿಂದ ಅನುಮೋದನೆ ಪಡೆಯಲಾಗಿದೆ. ಮುಂದೆ ಸಕಾಲದಲ್ಲಿ ಅನುಮೋದನೆ ಪಡೆಯಲು ಸೂಚಿಸಲಾಗಿದೆ.<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಆಯವ್ಯಯ, ಪರಿಷ್ಕೃತ ಆಯವ್ಯಯ ಹಾಗೂ ವಾರ್ಷಿಕ ಲೆಕ್ಕಪತ್ರಗಳ ವಿವರ ಕೆಳಕಂಡಂತಿದೆ. |

| | Asper Budget | Asper Revised Budget | Asper Annual Account |
|---|---|---|---|
| ಪ್ರಾರಂಭ ಶಿಲ್ಕು | 47,08,70,139 | 238,25,44,448 | 441,77,24,370 |
| ಸ್ವೀಕೃತಿ | 117,17,00,000 | 38,41,60,000 | 124,03,73,303 |
| ಒಟ್ಟು | 164,25,70,139 | 276,67,04,448 | 565,80,97,673 |
| ವೆಚ್ಚ | 167,06,40,145 | 97,12,22,000 | 157,80,23,811 |
| ಅಂತಿಮ ಶಿಲ್ಕು | (–) 2,80,70,006 | 179,54,82,448 | 408,00,73,862 |

2015–16ನೇ ಸಾಲಿನ ಆಡಿಟ್ ಕಂಡಿಕೆ 09ರಲ್ಲಿ ಪ್ರಾರಂಭಶಿಲ್ಕು ವಾರ್ಷಿಕ ಲೆಕ್ಕಪತ್ರದಂತೆ Corpus Fund FDR 203,51,79,921 ಹಾಗೂ General Fund FDR 234,17,89,607 ಹಾಗೂ Cash book ರೂ.4,07,54,842/– ಇದ್ದು, ಇವುಗಳ ಮೊತ್ತ ರೂ.4,41,77,24,370/– ತೆಗೆದುಕೊಳ್ಳುವ ಬದಲು ಕೇವಲ

| | |
|---|---|
| | Cash book ಶಿಲ್ಕು ರೂ.4,07,54,842/– ಮಾತ್ರ ತೆಗೆದುಕೊಂಡಿರುವುದರಿಂದ ವ್ಯತ್ಯಾಸ ಕಂಡುಬಂದಿರುತ್ತದೆ. FDR ಗಳ ಮೊತ್ತ ರೂ.4,37,69,69,528/–ಗಳನ್ನು ಪ್ರಾರಂಭ ಶಿಲ್ಕು ತೆಗೆದುಕೊಳ್ಳದೆ ಇರುವುದರಿಂದ ಒಟ್ಟಾರೆ 2015–16ನೇ ಸಾಲಿನ 31.03.2016 ಅಂತಿಮ ಶಿಲ್ಕು 2016–17ನೇ ಸಾಲಿನ ಪ್ರಾರಂಭಿಕ ಶಿಲ್ಕಿನಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಈ ವ್ಯತ್ಯಾಸಕ್ಕೆ ವಿವರಣೆ ನೀಡಬೇಕಾಗಿ ತಿಳಿಸಿದೆ.<br><br>ಈ ಬಗ್ಗೆ ವಿಚಾರಣೆ ಸಂಖ್ಯೆ:47/23.11.2018ನ್ನು ಋಣಾತ್ಮಕ ಶಿಲ್ಕು ತೋರಿಸಿರುವ ಬಗ್ಗೆ ಯಾವ ಯಾವ ಮೊಬಲಗುಗಳಿಂದ ವೆಚ್ಚ ಭರಿಸಲಾಗಿದೆ ಎಂಬುದರ ವಿವರ ನೀಡಲು ಕೋರಿದ್ದು, ವಿವರ ನೀಡದೆ ಇರುವುದರಿಂದ ಕಂಡಿಕೆ ಮುಂದುವರೆದಿದೆ. |
| | ಉತ್ತರ |
| | ಲೆಕ್ಕಪರಿಶೋಧಕರು ಸೂಚಿಸಿರುವಂತೆ ಮುಂದೆ ಸಕಾಲದಲ್ಲಿ ಆಯವ್ಯಯ ಅಂದಾಜು ಹಾಗೂ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ತಯಾರಿಸಿ ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಕ್ರಮವಹಿಸಲಾಗುವುದು.<br><br>2016–17ನೇ ಸಾಲಿನ ಆಯವ್ಯಯ ಅಂದಾಜು ಪ್ರತಿಯಲ್ಲಿ Corpus Fund FDR ಹಾಗೂ General Fund FDR ನ್ನು ಪ್ರಾರಂಭ ಶಿಲ್ಕಿನಲ್ಲಿ ಸೇರಿಸಿರುವುದಿಲ್ಲ. Cash book ಮೊತ್ತವನ್ನು ಮಾತ್ರ ಪರಿಗಣಿಸಲಾಗಿದ್ದು, ವ್ಯತ್ಯಾಸ ಕಂಡುಬಂದಿರುತ್ತದೆ. 2018–19ನೇ ಸಾಲಿನಿಂದ Corpus Fund FDR, General Fund FDR ಹಾಗೂ Cash book ಮೊತ್ತವನ್ನು ಪ್ರಾರಂಭಿಕ ಶಿಲ್ಕಿನಲ್ಲಿ ಸೇರಿಸಿ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸಲಾಗಿರುತ್ತದೆ.<br><br>ಕೊರತೆ ಮೊಬಲಗನ್ನು ವಿ ವಿ ಯ ಠೇವಣಿ ಮತ್ತು ಠೇವಣಿಗಳ ಮೇಲಿನ ಬಡ್ಡಿಯಿಂದ ಭರಿಸಲು ಅಂದಾಜಿಸಿ ಆಯವ್ಯಯ ಅಂದಾಜನ್ನು ಸಿದ್ಧಪಡಿಸಲಾಗಿತ್ತು. ಈ ಬಗ್ಗೆ ಮಾಹಿತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಲೆಕ್ಕಪರಿಶೋಧಕರಿಗೆ ನೀಡಲಾಗಿರುತ್ತದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | **ವಿವರ** |
| 04 | **4. 2016–17ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನವನ್ನು ವ್ಯಯ ಮಾಡದೆ ಇರುವುದು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ವಿವಿಧ ಯೋಜನೆಗಳಿಗೆ/ಬಾಬ್ತುಗಳಿಗೆ ಉಪಶೀರ್ಷಿಕೆವಾರು ಅನುದಾನ ನಿಗದಿಪಡಿಸಲಾಗಿದೆ. ಕೆಲವು ಉಪಶೀರ್ಷಿಕೆಯಡಿಯಲ್ಲಿ ಬಿಡುಗಡೆಗೊಂಡಿರುವ ಅನುದಾನ ರೂ.6,88,95,145/–ಗಳಲ್ಲಿ ಯಾವುದೇ ವೆಚ್ಚ ಭರಿಸದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಬಗ್ಗೆ ವಿಚಾರಣೆ ಸಂಖ್ಯೆ:76/2018–19 |

| | |
|---|---|
| | ದಿನಾಂಕ:07.12.2018 ರಂದು ನೀಡಲಾಗಿದ್ದು, ಈ ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ವಿವಿಧ ಉದ್ದೇಶಗಳಿಗೆ ಮಂಜೂರಾದ ಆಯವ್ಯಯದ ಅನುದಾನವನ್ನು ಬಳಸಿಕೊಳ್ಳದೆ ಆಯವ್ಯಯದಲ್ಲಿ ನಿಗದಿಪಡಿಸಿರುವ ಭೌತಿಕ ಗುರಿ ಪ್ರಗತಿ ಸಾಧಿಸದಿರುವುದಕ್ಕೆ ಸೂಕ್ತ ವಿವರಣೆಯನ್ನು ನೀಡಬೇಕಾಗಿ ತಿಳಿಸಿದೆ. ವೆಚ್ಚ ಭರಿಸದ ಉಪಶೀರ್ಷಿಕೆಗಳ ವಿವರಗಳನ್ನು ಅನುಬಂಧ (2)ರಲ್ಲಿ ಲಗತ್ತಿಸಿದೆ. ಜಾರಿ ಮಾಡಲಾದ ವಿಚಾರಣೆಗೆ ದಿನಾಂಕ:14.12.2018ರಂದು ಪಾಲನಾ ವರದಿಯನ್ನು ನೀಡಿದ್ದು, ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ ಮಾನ್ಯತೆ ಇಲ್ಲದ ಕಾರಣ ವಿದ್ಯಾರ್ಥಿಗಳ ಪ್ರವೇಶಾತಿಯಾಗದಿರುವುದರಿಂದ ವೆಚ್ಚ ಭರಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಲಾಗಿದೆ. ಇನ್ನು ಮುಂದೆ ಆಯವ್ಯಯ ಅಂದಾಜುಗಳ ಅವಶ್ಯಕತೆಯನ್ನು ಆಧರಿಸಿ ನಿಖರವಾಗಿ ಸಿದ್ಧಪಡಿಸಿಕೊಳ್ಳುವಂತೆ ತಿಳಿಸಿದೆ. 2016-17ನೇ ಸಾಲಿನಲ್ಲಿ ವಿವಿಧ ಉಪಶೀರ್ಷಿಕೆಗಳಿಗೆ ಕಾಯ್ದಿರಿಸಿದ ಹಣ **ರೂ.6,88,95,145/-ಗಳನ್ನು ವ್ಯಯ ಮಾಡದಿರುವುದರಿಂದ ಆಕ್ಷೇಪಣೆಗೆ ಸೂಚಿಸಿದೆ.** |
| | ಉತ್ತರ |
| | ಕ ರಾ ಮು ವಿ ಯ 2016-17ನೇ ಸಾಲಿನ ಆಯವ್ಯಯ ಅಂದಾಜು ಸಿದ್ಧಪಡಿಸುವ ಸಂಬಂಧ ವಿ. ವಿ. ಯ ಎಲ್ಲಾ ವಿಭಾಗಗಳು ನೀಡುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ ಆಯವ್ಯಯ ಅಂದಾಜನ್ನು ಸಿದ್ಧಪಡಿಸಲಾಗಿರುತ್ತದೆ. ಸದರಿ ಸಾಲಿನಲ್ಲಿ ಯು.ಜಿ.ಸಿ. ಮಾನ್ಯತೆಯಿಲ್ಲದ ಕಾರಣ ಯಾವುದೇ ಪ್ರವೇಶಾತಿ, ಪರೀಕ್ಷೆಗಳು, ಸಂಪರ್ಕ ಕಾರ್ಯಕ್ರಮಗಳು ಹಾಗೂ ಇನ್ನತರೆ ಕಾರ್ಯಚಟುವಟಿಕೆಗಳು ನಡೆಯದಿರುವ ಕಾರಣ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಮೀಸಲಿಟ್ಟ ಮೊಬಲಗು ವ್ಯಯವಾಗದೇ ಉಳಿದಿರುತ್ತದೆ. ಇದರಿಂದಾಗಿ ಆಯವ್ಯಯ ಅಂದಾಜಿನಲ್ಲಿ ನಿಗಧಿಪಡಿಸಿರುವ ಅನುದಾನವು ವ್ಯರ್ಥವಾಗುವುದಿಲ್ಲ. ಬದಲಿಗೆ ವಿ ವಿ ಗೆ ಉಳಿಕೆಯಾಗುವುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ |
| | **ವಿವರ** |
| 05 | **5. ವಾರ್ಷಿಕ ಲೆಕ್ಕಪತ್ರ ಅನುಮೋದನೆಯಾಗಿರುವ ಬಗ್ಗೆ :-**<br><br>2016-17ನೇ ವರ್ಷದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಲೆಕ್ಕಪತ್ರಗಳನ್ನು ದಿನಾಂಕ:15.07.2017ರಂದು ಹಣಕಾಸು ಸಮಿತಿ ಸಭೆಯಲ್ಲಿ ಹಾಗೂ ದಿನಾಂಕ:27.02.2017 ರಂದು ನಡೆದ ವ್ಯವಸ್ಥಾಪನಾ ಮಂಡಳಿ ಸಭೆಯಿಂದ ಅನುಮೋದನೆ ಪಡೆಯಲಾಗಿದೆ. |
| | ಉತ್ತರ |
| | ಯಾವುದೇ ಕ್ರಮ ಇರುವುದಿಲ್ಲ. |
| | **ವಿವರ** |
| 06 | **6. ವಾರ್ಷಿಕ ಲೆಕ್ಕಪತ್ರಗಳಲ್ಲಿ 8 ಖಾತೆಗಳ ವಿವರಗಳನ್ನು ಸೇರಿಸದಿರುವ ಬಗ್ಗೆ. :-**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಒಟ್ಟು 20 ಖಾತೆಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿರುವ ಹಾಗೂ ವಾರ್ಷಿಕ |

| | |
|---|---|
| | ಲೆಕ್ಕಪತ್ರದಲ್ಲಿ ತೋರಿಸದಿರುವ 8 ಖಾತೆಗಳು ಸೇರಿ ಒಟ್ಟು 28 ವಿವಿಧ ಬ್ಯಾಂಕ್ ಖಾತೆಗಳ ವಿವರವನ್ನು **ಅನುಬಂಧ (3)ರಲ್ಲಿ** ನೀಡಲಾಗಿದೆ. |
| | ಉತ್ತರ |
| | ಅನುಬಂಧ (3)ರಲ್ಲಿ ಉಲ್ಲೇಖಿಸಿರುವ 8 ವಿವಿಧ ಬ್ಯಾಂಕ್ ಖಾತೆಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಸಾಮಾನ್ಯ ನಿಧಿ ಖಾತೆಯೊಂದಿಗೆ ವಿಲೀನಗೊಳಿಸಲಾಗಿದ್ದು, ನಗದು ಪುಸ್ತಕವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿರುತ್ತದೆ. |
| | **ವಿವರ** |
| 07 | **7. ಬ್ಯಾಲನ್ಸ್‌ಶೀಟ್ ತಯಾರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ನ್ಯೂನತೆಗಳನ್ನು ಗಮನಿಸಿರುವುದು :–**<br><br>2016–17ನೇ ವರ್ಷದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಜಮಾ ಸ್ವೀಕೃತಿ ಮತ್ತು ಪಾವತಿ (Receipts & Payments) ಆದಾಯ ಮತ್ತು ವೆಚ್ಚದ (Income & Expenditure) ಸನ್ನದು ಲೆಕ್ಕಿಗರಿಂದ ಬ್ಯಾಲನ್ಸ್‌ಶೀಟ್‌ನ್ನು ತಯಾರಿಸಿದ್ದು, ಪುನರ್ ಪರಿಶೀಲನೆ ಸಂದರ್ಭದಲ್ಲಿ ಒದಗಿಸಿರುತ್ತಾರೆ.<br><br>**ಸದರಿ ವರದಿಯಲ್ಲಿನ ನ್ಯೂನತೆಗಳು**<br><br>1. **Revenue recognition**<br>Expenditure are considered in the books of accounts on accrual basis Amounts withdrawn using Advance Contingency Bills (A.C Bills) are considered as expenditure in the year of drawing the amount. Any unspend balance deposited to bank account is treated as income in the year of deposit to the bank account.<br>2. **Contingent Liabilities and assets**<br>In the High Court of Kerala at Ernakulam on Monday 20.11.2017 as per the court order W.A.NO.1275 of 2017, it is stated that there is no merit in writ appeal filed by the Karnataka State Open University. Therefore, the writ appeals fail and accordingly the University should either allow the course to continue, permit the students to write the examinations or shall compensate such students by paying a sum of Rs.3,00,000/- (Rupees Three lakhs) each. The benefit of the order shall be available only to candidates who are petitioners in the above mentioned case.<br>3. The books of accounts does not include incomes and expenditures of bank |

| | |
|---|---|
| | accounts held in the name such as all regional centers, registrar evaluation (examination), NSSETI Director account, KSOU temporary employees association etc. |
| | ಉತ್ತರ |
| | ಸರಿಪಡಿಸಿ ಮುಂದಿನ ಲೆಕ್ಕತಪಾಸಣೆಯ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 08 | **8. ವಾರ್ಷಿಕ ಲೆಕ್ಕಪತ್ರದಂತೆ 2016–17ನೇ ಸಾಲಿನ ಆರ್ಥಿಕ ಪರಿಸ್ಥಿತಿ :–** |

2016–17ನೇ ವರ್ಷದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಿಂದ ಹಣಕಾಸು ಅಧಿಕಾರಿಗಳ ದೃಢೀಕೃತ ಪ್ರತಿಯ ಆಧಾರದ ಮೇಲೆ ಸಾಮಾನ್ಯ ನಿಧಿ ಖಾತೆ 08, ಪರೀಕ್ಷಾ ಖಾತೆ ನಿಧಿ 09 ಮತ್ತು ವಿವಿಧ ಪೀಠಗಳ ಖಾತೆಗಳ ಆರ್ಥಿಕ ಪರಿಸ್ಥಿತಿಯ ವಿವರ ಈ ರೀತಿ ನೀಡಲಾಗಿದೆ.

| **2016–17 ವಾರ್ಷಿಕ ಲೆಕ್ಕಪತ್ರ** | |
|---|---|
| ದಿನಾಂಕ:01.04.2016ರಂದು ಪ್ರಾರಂಭ ಶಿಲ್ಕು | 657,00,46,177 |
| **2016–17ನೇ ಸಾಲಿನ ಸ್ವೀಕೃತಿ**<br>Part - I 82,12,53,799<br>Part - II 117,62,18,577<br>**Total - 199,74,72,376** | 199,74,72,376 |
| **ಒಟ್ಟು** | **856,75,18,553** |
| **2016–17ನೇ ಸಾಲಿನ ವೆಚ್ಚ**<br>Part - I 124,52,88,282<br>Part - II 107,64,82,632<br>**Total - 232,17,70,914** | 232,17,70,914 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 624,57,47,639 |
| ಎಫ್.ಡಿ.ಆರ್<br>ನಗದು ಪುಸ್ತಕ | 589,87,66,884<br>34,69,80,755 |

2016–17ನೇ ಸಾಲಿಗೆ ಸನ್ನದು ಲೆಕ್ಕಿಗರು ನೀಡಿರುವ ವಾರ್ಷಿಕ ವರದಿಯ ಪ್ರಕಾರ ಕ.ರಾ.ಮು.ವಿಯ ಆರ್ಥಿಕ ಪರಿಸ್ಥಿತಿಯ ವಿವರ ಕೆಳಗಿನಂತಿದೆ.

| **ಸನ್ನದ್ದು ಲೆಕ್ಕಿಗರ ವಾರ್ಷಿಕ ವರದಿ** | |
|---|---|
| ದಿನಾಂಕ:01.04.2016ರಂದು ಪ್ರಾರಂಭ ಶಿಲ್ಕು | 257,40,85,325 |
| 2016–17ನೇ ಸಾಲಿನ ಸ್ವೀಕೃತಿ | 176,56,96,378 |

| | |
|---|---|
| ಒಟ್ಟು | **433,97,81,703** |
| 2016–17ನೇ ಸಾಲಿನ ವೆಚ್ಚ | 393,46,99,857 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 40,50,81,846 |

**ಘೋಷ್ವಾರೆ**

| **ವಾರ್ಷಿಕ ಲೆಕ್ಕಪತ್ರದ ಪ್ರಕಾರ** | **ಸನ್ನದು ಲೆಕ್ಕಿಗರ ವಾರ್ಷಿಕ ವರದಿ ಪ್ರಕಾರ** | **ವ್ಯತ್ಯಾಸ** |
|---|---|---|
| 34,69,80,755 | 40,50,81,846 | 5,81,01,091 |

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ ಹಾಗೂ ಸನ್ನದು ಲೆಕ್ಕಿಗರು ಸಲ್ಲಿಸಿರುವ ವಾರ್ಷಿಕ ವರದಿಯ ಪ್ರಕಾರ ರೂ. 5,81,01,090/–ಗಳ ವ್ಯತ್ಯಾಸ ಕಂಡುಬಂದಿದ್ದು, ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ವಿವರವನ್ನು **ಅನುಬಂಧ (4)ರಲ್ಲಿ** ಲಗತ್ತಿಸಿದೆ.

ಉತ್ತರ

2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ಶೀರ್ಷಿಕೆವಾರು ಆದಾಯ ಮತ್ತು ವೆಚ್ಚಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದ್ದು, ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ಸರಿಯಿರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.

**ವಿವರ**

09 **9. ಸಾಮಾನ್ಯ ನಿಧಿ ಖಾತೆ 08 ನಗದು ಪುಸ್ತಕ ಹಾಗೂ ಬ್ಯಾಂಕ್ ಸ್ಕ್ರೋಲ್ ಪ್ರಕಾರ ಆರ್ಥಿಕ ಪರಿಸ್ಥಿತಿಯ ವಿವರ :–**

2016–17ನೇ ವರ್ಷದ ಕರ್ನಾಟಕ ವಿಶ್ವವಿದ್ಯಾನಿಲಯ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ನಗದು ಪುಸ್ತಕ ಹಾಗೂ ಬ್ಯಾಂಕ್ ಸ್ಕ್ರೋಲ್ ಪ್ರಕಾರ ಆರ್ಥಿಕ ಪರಿಸ್ಥಿತಿಯ ವಿವರ ನೀಡಲಾಗಿದೆ.

| **ಸಾಮಾನ್ಯ ನಿಧಿ 08 ಖಾತೆಯ ಸಂಖ್ಯೆ: 54035420117** | |
|---|---|
| ದಿನಾಂಕ:01.04.2016ಕ್ಕೆ ಪ್ರಾರಂಭ ಶಿಲ್ಕು | 1,22,33,400.06 |
| 2016–17ನೇ ಸಾಲಿನ ಒಟ್ಟು ಸ್ವೀಕೃತಿಗಳು | 99,62,22,201.92 |
| ಒಟ್ಟು | **100,84,55,601.98** |
| 2016–17ನೇ ಸಾಲಿನ ವೆಚ್ಚ | 92,36,83,070.00 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 8,47,72,531.98 |
| Asper Bank Scroll closing Balance as 31.03.2017 | 12,97,92,987.00 |
| Asper cash book Closing Balance | 8,47,72,531.98 |
| ವ್ಯತ್ಯಾಸ | 4,50,20,456.98 |

| | |
|---|---|
| | ವ್ಯತ್ಯಾಸಕ್ಕೆ ಕಾರಣಗಳನ್ನು ನೀಡುವಂತೆ ಕೋರಲಾಗಿ ಈ ಮೊತ್ತವು ನಗದಾಗದ ಧನಾದೇಶಗಳ ಮೊತ್ತವಾಗಿದೆ ಎಂದು ತಿಳಿಸಿರುತ್ತಾರೆ. ರೂ.450,20,456/– ನಗದಾಗದೆ ಇರುವ ಧನಾದೇಶದ ಕುರಿತು ವಿಚಾರಣೆ ಸಂಖ್ಯೆ:3/05.11.2018 ರಂದು ನೀಡಿದ್ದು, ದಿನಾಂಕ:26.12.2018 ನೀಡಿರುವ ಅನುಪಾಲನಾ ವರದಿ ಹಾಗೂ ನಗದಾಗದೆ ಇರುವ ಧನಾದೇಶಗಳ ಪಟ್ಟಿಯನ್ನು ಪರಿಶೀಲಿಸಿದಾಗಿ ಬ್ಯಾಂಕ್ ಖಾತೆಯ ಸಂಖ್ಯೆ:54035420117 ಹಾಗೂ ನಗದು ಪುಸ್ತಕದೊಂದಿಗೆ ಸಮನ್ವಯಗೊಳಿಸಿದ BSR ತಃಖ್ತೆ ದೃಢೀಕರಿಸಿ ಹಣಕಾಸು ಅಧಿಕಾರಿಗಳು ನಗದು ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಇದರಿಂದ ಅವಧಿ ಮೀರಿದ ಧನಾದೇಶಗಳು ನಗದಾಗಿರುವ ಧನಾದೇಶಗಳು ಹಿಂದಿನಿಂದಲು ನಗದಾಗದೇ ಬಂದಿರುವ ಧನಾದೇಶ ಇತ್ಯಾದಿಯ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ನಗದು ಪುಸ್ತಕದೊಂದಿಗೆ ದೃಢೀಕರಿಸಿ ಕಂಡಿಕೆಗೆ ಅನುಪಾಲನ ವರದಿ ನೀಡಲು ಸೂಚಿಸಿದೆ. ವಿವರವನ್ನು **ಅನುಬಂಧ (5), 5(ಎ) ರಲ್ಲಿ ಲಗತ್ತಿಸಿದೆ.** |
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 10 | **10. ವಾರ್ಷಿಕ ಲೆಕ್ಕಪತ್ರದಲ್ಲಿ ಆಂತರಿಕ ನಿಧಿ ವರ್ಗಾವಣೆಯ ಸ್ವೀಕೃತಿ ಹಾಗೂ ವೆಚ್ಚದಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ :–**<br><br>2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ವಾರ್ಷಿಕ ಲೆಕ್ಕಪತ್ರದಲ್ಲಿನ ಆಂತರಿಕ ನಿಧಿ ವರ್ಗಾವಣೆಯಲ್ಲಿ ಕೆಳಕಂಡ ವ್ಯತ್ಯಾಸ ಕಂಡುಬಂದಿರುತ್ತದೆ. ಈ ವ್ಯತ್ಯಾಸ ಕುರಿತು ವಿಚಾರಣೆ ಸಂಖ್ಯೆ:3/2018–19 ದಿನಾಂಕ:20.11.2018 ರಂದು ಜಾರಿ ಮಾಡಲಾಗಿದ್ದು, ವ್ಯತ್ಯಾಸದ ಬಗ್ಗೆ ಸೂಕ್ತ ದಾಖಲಾತಿ ಒದಗಿಸದೆ ಇರುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ಒಟ್ಟು ಸ್ವೀಕೃತಿ ಹಾಗೂ ವೆಚ್ಚ ಮಾಡಿರುವುದಲ್ಲಿ ಆಂತರಿಕ ನಿಧಿ ವರ್ಗಾವಣೆಯ ಸಾಮಾನ್ಯ ನಿಧಿ ಖಾತೆ ಪರೀಕ್ಷಾ ಖಾತೆ ಹಾಗೂ ಇತರೆ ಬ್ಯಾಂಕ್ ಖಾತೆಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಈ ರೀತಿ ಇದೆ. |

| **Internal Fund Transfer as per Annual A/C's 2016-17** | | | |
|---|---|---|---|
| **Receipts** | | **Payments** | |
| 1) Transfer from Exam fund Account No.54035420128 - | 8,05,18,745 | Transfer to General fund Account No:54035420117 - | 8,05,18,745 |
| 2) Transfer from Exam fund Account No.54035420128 - | 2,00,00,000 | Transfer to General fund Account No:54035420117 - | 2,00,00,000 |
| 3) ಪರೀಕ್ಷಾ ನಿಧಿ ಸ್ವೀಕೃತಿ | 0 | ಹೆಚ್.ಡಿ.ಎಫ್.ಸಿ ಬ್ಯಾಂಕ್(ಸಾ/ನಿ) ಖಾತೆಯಿಂದ ಪರೀಕ್ಷಾ ನಿಧಿ ಖಾತೆಗೆ | 36,20,300 |

| | | | |
|---|---|---|---|
| | | ವರ್ಗಾವಣೆ – ಎಸ್.ಬಿ.ಐ ಖಾತೆ ಸಂಖ್ಯೆ:54035420128 – | |
| 4) ಶಿಷ್ಯ ವೇತನ ಖಾತೆ | 0 | Transfer from SBI New Account to Scholarship Account No.54035421417 - | 5,47,940 |

ವಾರ್ಷಿಕ ಲೆಕ್ಕಪತ್ರದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು ಎಸ್.ಬಿ.ಐ ಹೊಸ ಖಾತೆಯಿಂದ ಪರೀಕ್ಷಾ ಖಾತೆಗೆ ಹಾಗೂ ಶಿಷ್ಯವೇತನ ಖಾತೆಗೆ ವರ್ಗಾವಣೆ ಮಾಡಿದ್ದರೂ (ರೂ.36,20,300 + 5,47,940 = 41,68,240/–) ಈ ವರ್ಗಾವಣೆ ಕಾಂಟ್ರಾ ನಮೂದು (Contra Entry) ತೋರಿಸಿರುವುದಿಲ್ಲ. ಲೆಕ್ಕ ಹೊಂದಾಣಿಕೆ ಸಮನ್ವಯಗೊಳಿಸದೆ ಇರುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ಅಂಕಿ ಅಂಶಗಳು ಸಮರ್ಪಕವಾಗಿ ಚಿತ್ರಣ (depict) ಆಗಿಲ್ಲದ ಕಾರಣ ವಾರ್ಷಿಕ ಲೆಕ್ಕಪತ್ರ ಅಂತಿಮಗೊಳಿಸುವಿಕೆಯಲ್ಲಿ ದೋಷ/ನ್ಯೂನತೆಗಳು ಕಂಡುಬಂದಿದೆ.

ಉತ್ತರ

ಕಾಂಟ್ರಾ ನಮೂದು (Contra Entry) ತೋರಿಸಿ ಲೆಕ್ಕ ಹೊಂದಾಣಿಕೆ ಸಮನ್ವಯಗೊಳಿಸಲು ಕ್ರಮವಹಿಸಲಾಗುವುದು.

**ವಿವರ**

11 **11. 2015–16ನೇ ಸಾಲಿನ ದಿನಾಂಕ:31.03.2016ರ ಅಂತಿಮ ಶಿಲ್ಕು ಮೊಬಲಗು 2016–17ನೇ ಸಾಲಿನ ದಿನಾಂಕ:01.04.2016ರ ಸಾಲಿಗೆ ಪ್ರಾರಂಭಶಿಲ್ಕಾಗಿ ತೆಗೆದುಕೊಳ್ಳುವಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ :–**

(ಎ) 2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿದಾಗ 2015–16ನೇ ಸಾಲಿನ ದಿನಾಂಕ:31.03.2016ರ ಅಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರದಂತೆ ಸಾಮಾನ್ಯ ನಿಧಿ ಖಾತೆ, ಪರೀಕ್ಷಾ ನಿಧಿ ಖಾತೆ, ಹಾಗೂ ಇತರೆ ಬ್ಯಾಂಕ್ ಖಾತೆಗಳ ಒಟ್ಟು ಅಂತಿಮ ಶಿಲ್ಕಿನ ಮೊಬಲಗು ರೂ.27,99,95,751/– ಕಂಡುಬಂದಿರುತ್ತದೆ. ಈ ಅಂತಿಮ ಶಿಲ್ಕನ್ನು 2016–17ನೇ ಸಾಲಿನಲ್ಲಿ ಪ್ರಾರಂಭ ಶಿಲ್ಕಾಗಿ ತೆಗೆದುಕೊಳ್ಳಬೇಕಾಗಿರುತ್ತದೆ. ಆದರೆ 2016–17ನೇ ಸಾಲಿನ ಪ್ರಾರಂಭಿಕ ಶಿಲ್ಕಾಗಿ ಎಫ್.ಡಿ.ಆರ್ ಮೊತ್ತ ರೂ.597,97,96,726/– ಮತ್ತು Cash book ಮೊಬಲಗು ರೂ.28,73,02,613/– ಒಟ್ಟು ರೂ.657,37,09,025/–ಗಳನ್ನು ಆರಂಭ ಶಿಲ್ಕಾಗಿ ತೆಗೆದುಕೊಳ್ಳಲಾಗಿದೆ. ಇದರಿಂದಾಗಿ ದಿನಾಂಕ:31.03.2017ರ ಅಂತ್ಯಕ್ಕೆ ನಗದು ಪುಸ್ತಕದ ವ್ಯತ್ಯಾಸ ರೂ.73,06,862/– ವ್ಯತ್ಯಾಸ ಕಂಡುಬಂದಿದೆ. ಈ ವ್ಯತ್ಯಾಸ ಕುರಿತು ಸೂಕ್ತ ವಿವರಣೆಯೊಂದಿಗೆ ಲೆಕ್ಕಸಮನ್ವಯ ವರದಿಯನ್ನು ಬ್ಯಾಂಕ್ ಖಾತೆವಾರು ಠೇವಣಿ ಹೂಡಿಕೆ ಹಾಗೂ ನಗದು ಪುಸ್ತಕದ ಶಿಲ್ಕುಗಳ ವಿವರದೊಂದಿಗೆ ಸೂಕ್ತ ದಾಖಲಾತಿಗಳೊಂದಿಗೆ ವಿವರಣೆ ನೀಡಬೇಕೆಂದು ವಿಚಾರಣೆ ಸಂಖ್ಯೆ:39/29.11.2018ರಂದು ನೀಡಲಾಗಿದ್ದು, ವಿವರ ನೀಡದೆ ಸಂಬಂಧಿಸಿದ ದಾಖಲಾತಿಗಳನ್ನು ಒದಗಿಸದೆ ಇರುವುದು ಗಂಭೀರ ಲೋಪವಾಗಿರುತ್ತದೆ. ಈ ರೀತಿ ಆರಂಭ ಶಿಲ್ಕನ್ನು ಹೆಚ್ಚಾಗಿ ತೆಗೆದುಕೊಂಡಿರುವುದಕ್ಕೆ

| | |
|---|---|
| | ಹಾಗೂ ನಗದು ವ್ಯತ್ಯಾಸದ ಮೊತ್ತಕ್ಕೆ ಯಾವುದೇ ವಿವರಣೆ ನೀಡದ ಕಾರಣ ಮುಂದಿನ ಲೆಕ್ಕತಪಾಸಣೆಗೆ ವಿವರಗಳನ್ನು ಹಾಜರುಪಡಿಸುವುದು.<br><br>(ಬಿ) 2015-16ನೇ ವರ್ಷದ ಅಂತಿಮ ಶಿಲ್ಕು ವಾರ್ಷಿಕ ಲೆಕ್ಕಪತ್ರದಂತೆ 2016-17ನೇ ವರ್ಷದ ಪ್ರಾರಂಭ ಶಿಲ್ಕು ತೆಗೆದುಕೊಳ್ಳದೆ ವಾರ್ಷಿಕ ಲೆಕ್ಕಪತ್ರದಲ್ಲಿ ಪ್ರಾರಂಭಿಕ ಶಿಲ್ಕು ಹೆಚ್ಚಾಗಿ ತೆಗೆದುಕೊಂಡಿರುವುದು.<br><br>2016-17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಂತೆ ಪ್ರಾರಂಭಿಕ ಶಿಲ್ಕು: 27,99,95,751<br>ನಗದು ಪುಸ್ತಕದ ಪ್ರಕಾರ ಪ್ರಾರಂಭಿಕ ಶಿಲ್ಕು: 28,73,02,613<br>ವ್ಯತ್ಯಾಸ: 73,06,862<br><br>**(ಸಿ) 2016-17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ವಿವಿಧ ಬ್ಯಾಂಕ್ ಖಾತೆಯ ಪ್ರಾರಂಭಶಿಲ್ಕು ಮತ್ತು ಅಂತಿಮ ಶಿಲ್ಕಿನಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ :-**<br><br>ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರದಂತೆ ವಿವಿಧ ಬ್ಯಾಂಕ್ ಖಾತೆಯ ಎಫ್.ಡಿ.ಆರ್ ಪ್ರಾರಂಭಶಿಲ್ಕು ಹಾಗೂ ಅಂತಿಮ ಶಿಲ್ಕು ವ್ಯತ್ಯಾಸ ಕಂಡುಬಂದಿರುತ್ತದೆ. ಈ ವ್ಯತ್ಯಾಸದ ಕುರಿತು ವಿಚಾರಣೆ ಸಂಖ್ಯೆ:49/23.11.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ವ್ಯತ್ಯಾಸದ ಬಗ್ಗೆ ಹೂಡಿಕೆಯ ವಿವರವನ್ನು ಹಾಜರುಪಡಿಸದೆ ಇರುವುದರಿಂದ ವಿವಿಧ ಬ್ಯಾಂಕ್ ಖಾತೆಗಳಲ್ಲಿ ತೊಡಗಿಸಿರುವ ಹೂಡಿಕೆಯ ಬಗ್ಗೆ ವ್ಯತ್ಯಾಸತಿಳಿಯಲು ಸಾಧ್ಯವಾಗಿರುವುದಿಲ್ಲ. ಈ ವ್ಯತ್ಯಾಸದ ಕುರಿತು ಯಾವುದೇ ರೀತಿಯ ಅಪವ್ಯಯ ಕಂಡುಬಂದಲ್ಲಿ ಆಡಳಿತಾತ್ಮಕವಾಗಿ ಕ್ರಮಕೈಗೊಳ್ಳಲು ಸೂಚಿಸಿದೆ.<br><br>1) 2016-17ನೇ ಸಾಲಿನ ವಿವಿಧ ಬ್ಯಾಂಕ್ ಖಾತೆಗಳ ಪ್ರಾರಂಭ ಶಿಲ್ಕು ಎಫ್.ಡಿ.ಆರ್ ರೂ.629,49,96,212<br>2) 2016-17ನೇ ಸಾಲಿನ ವಿವಿಧ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕು ಎಫ್.ಡಿ.ಆರ್ ರೂ. 589,87,66,883<br>ಎಫ್.ಡಿ.ಆರ್ ವ್ಯತ್ಯಾಸ ರೂ. 39,62,29,329<br><br>ಈ ವ್ಯತ್ಯಾಸ ಎಫ್.ಡಿ.ಆರ್‌ಗಳ ಅಂತಿಮಶಿಲ್ಕಿನಲ್ಲಿ ಕಂಡುಬರದೆ ಇರುವುದರಿಂದ ಎಫ್.ಡಿ.ಆರ್‌ಗಳು 2016-17ನೇ ಸಾಲಿನ ನಗದಾಗದಿರುವ ಬಗ್ಗೆ, ಪುನರ್ ವಿನಿಯೋಗ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ವಿವರ ಅನುಬಂಧ (6) ರಲ್ಲಿ ನೀಡಿದೆ. |
| | ಉತ್ತರ |
| | 2014-15ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಎಪ್.ಡಿ.ಆರ್. ಮೊತ್ತವನ್ನು ವಾರ್ಷಿಕ ಲೆಕ್ಕ ಪತ್ರದಲ್ಲಿ ತೆಗೆದುಕೊಳ್ಳಲು ನಿರ್ದೇಶನ ನೀಡಿರುವುದರಿಂದ ಕ್ರಮಕೈಗೊಂಡು 2016-17ನೇ ಸಾಲಿನಲ್ಲಿ ಎಲ್ಲಾ ಖಾತೆಗಳ ಎಫ್.ಡಿ.ಆರ್.ನ ಪ್ರಾರಂಭಶಿಲ್ಕಿನ ಮೊತ್ತವನ್ನ ವಾರ್ಷಿಕ ಲೆಕ್ಕ ಪತ್ರದಲ್ಲಿ ತೆಗೆದುಕೊಂಡಿದ್ದು, ವ್ಯತ್ಯಾಸದ ಮೊತ್ತವು ಎಲ್ಲಾ ಖಾತೆಗಳ ಠೇವಣಿಗಳ ಪ್ರಾರಂಭಿಕ ಶಿಲ್ಕಿನ ಮೊತ್ತವಾಗಿರುತ್ತದೆ. ಈ ವಾರ್ಷಿಕ ಲೆಕ್ಕ ಪತ್ರಗಳನ್ನು ಹಣಕಾಸು |

ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

| Sl.No | Bank Account Number | 31.03.2017 Difference |
|---|---|---|
| 1 | 54035420117 (General Fund ) | -4376969528/- |
| 2 | 54035420128 (Examination Fund) | -842785536/- |
| 3 | 54035421279(Pension Fund) | -900000000/- |
| 4 | 64090010482(NPS) | -83151938/- |
| 5 | 54035421257 (Endowment Account) | -2999410/- |
| 6 | 54035421224 (Security Deposit A/c) | -7252648/- |
| 7 | 64018806640 (Mukthasanjeevini) | -70000000/- |
| 8 | 54035421698 (B.R.Ambedkar Peeta) | -1500000/- |
| 9 | 64099279571 (Mahatma Gandhiji Peeta) | -1500000/- |
| 10 | 64099279627 (Kuvempu Peeta) | -1500000/- |
| 11 | 64099279435 (Vivekananda Peeta) | -1500000/- |
| 12 | 64099276682(Krishnarajawodeyar peeta) | -1500000/- |
| 13 | 64099279491(jagajeevanram Peeta) | -1500000/- |
| 14 | 64099279661 (akka mahadevi peeta) | -1500000/- |
| 15 | 54035121315 (Miscellaneous A/c) | 0 |
| | Total | -629,49,96,213/- |

ಈ ಮೇಲಿನ ಎಲ್ಲಾ ಋಣಾತ್ಮಕ ಮೊಬಲಗು ಠೇವಣಿ ಖಾತೆಯ ವಿವರದಲ್ಲಿ ಪ್ರತಿ ಖಾತೆಯ ಆರಂಭ ಶಿಲ್ಕು ರೂ -629,49,96,213/- ಆಗಿರುತ್ತದೆ. ಠೇವಣಿ ವಿವರ ಮತ್ತು ಠೇವಣಿ ವಹಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಾಗಿರುತ್ತದೆ. ಕ್ರಮ ಸಂಖ್ಯೆ 15 ರ ಖಾತೆಯ 2015–2016 ಅಂತಿಮ ಶಿಲ್ಕು ಮತ್ತು 2016–17 ರ ಆರಂಭ ಶಿಲ್ಕು ಒಂದೇ ಆಗಿದ್ದು ವ್ಯತ್ಯಾಸವಿರುವುದಿಲ್ಲ ಆದುದರಿಂದ ಈ ವಿಚಾರಣೆಯನ್ನು ಕೈಬಿಡಲು ಕೋರಲಾಗಿದೆ.

2016–17ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದಲ್ಲಿ ಹಿಂದಿನ ಸಾಲಿನ ಲೆಕ್ಕಪರಿಶೋಧಕರ ಸಲಹೆಯಂತೆ ಠೇವಣಿ ವಿವರಗಳನ್ನು ದಾಖಲಿಸಲಾಗಿದೆ.

ಪ್ರಾರಂಭ ಶಿಲ್ಕು ಮತ್ತು ಅಂತಿಮ ಶಿಲ್ಕಿನ ವ್ಯತ್ಯಾಸಕ್ಕೆ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

| ಆರಂಭ | ಬಡ್ಡಿ | ನಗದೀಕರಣ | ಬಡ್ಡಿ ನಗದೀಕರಣ | ಮರು ಹೂಡಿಕೆ | ಹೊಸ ಹೂಡಿಕೆ | ಅಂತಿಮ ಶಿಲ್ಕು |
|---|---|---|---|---|---|---|

| | | | | | | |
|---|---|---|---|---|---|---|
| ಶಿಲ್ಕು | | | | | | |
| 6294996213 | 447414499 | 982841369 | 16800233 | 35000000 | 121000000 | 5898766884 |

ಈ ಸಂಬಂಧ ವಿವರಗಳನ್ನೊಳಗೊಂಡ ಠೇವಣಿ ವಹಿ ಮತ್ತು ಎಫ್.ಡಿ.ಆರ್. ಸರ್ಟಿಫಿಕೇಟ್‌ಗಳೊಂದಿಗೆ ಪರಿಶೀಲನೆಗೆ ಹಾಜರುಪಡಿಸಲಾಗಿದೆ. ವ್ಯತ್ಯಾಸವಿಲ್ಲದಿರುವುದನ್ನು ಗಮನಿಸಬಹುದಾಗಿದೆ ಆದುದರಿಂದ ಈ ವಿಚಾರಣೆಯನ್ನು ಕೈಬಿಡಬೇಕಾಗಿ ಕೋರಿದೆ.

**ವಿವರ**

12 **12. 2016–17ನೇ ಸಾಲಿನಲ್ಲಿ ವಿವಿಧ ಬ್ಯಾಂಕ್ ಖಾತೆಗಳ ಜಮಾ ಖರ್ಚುಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಳ್ಳದೆ ಇರುವ ಬಗ್ಗೆ :–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಹಣಕಾಸು ವಿಭಾಗದಲ್ಲಿ ತಪಾಸಣೆಗೆ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿದಾಗ ಮತ್ತು ನಗದು ಪುಸ್ತಕದೊಂದಿಗೆ ತಾಳೆ ನೋಡಿದಾಗ ವಿವಿಧ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಿರುವ ಜಮಾ ಖರ್ಚುಗಳ ವಿವರವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಳ್ಳದೆ ಹಾಗೂ ಬ್ಯಾಂಕ್ ಖಾತೆ ಸಂಖ್ಯೆ ನಮೂದಿಸದೆ/ಅನುಮೋದನೆ ಪಡೆಯದೆ ಇರುವ ಬಗ್ಗೆ ವಿಚಾರಣೆ ಸಂಖ್ಯೆ:40/2018–19ನೇ ಸಾಲಿನ 20.11.2018ನೇ ರಂದು ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಈ ಬಗ್ಗೆ ಯಾವುದೇ ರೀತಿಯ ಪರಿಷ್ಕೃತ ಮಂಜೂರಾತಿ ಹಾಗೂ ಹಣಕಾಸು ಅಧಿಕಾರಿಗಳ ಅನುಮೋದನೆ ನೀಡಿರುವ ಬಗ್ಗೆ ವಿವರಗಳನ್ನು ಹಾಜರುಪಡಿಸದ ಕಾರಣ ಅನುಸರಣೆ ಸಲ್ಲಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2016–17ನೇ ಸಾಲಿನಲ್ಲಿ ಈ ಕೆಳಕಂಡ ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರ ನಡೆಸಲಾಗಿದೆ.

1. SBI old A/C No. 10562326495
2. SBI New A/C No. 31051187090
3. HDFC Bank Saraswathipuram A/C No. 651450000190
4. SBM Guest house & Hostel A/C No. 64068987296
5. SBM online A/C No. 64089378530
6. Vijaya Bank Saraswathipuram A/C No. 141900541000001
7. ಪಂಜಾಬ್ ನ್ಯಾಷಿನಲ್ ಬ್ಯಾಂಕ್ A/C No. 3950002100002105
8. HDFC Bank V.V.Mohalla A/C No. 50200010317069

ಮೇಲೆ ತಿಳಿಸಿರುವ ವಿವಿಧ ಬ್ಯಾಂಕ್ ಖಾತೆಗಳ ಒಟ್ಟು ಜಮೆ, ಒಟ್ಟು ಖರ್ಚುಗಳ ವಿವರಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಳ್ಳದೆ ಇರುವುದರಿಂದ ಯಾವ ಮೂಲಗಳಿಂದ ಸ್ವೀಕರಿಸಲಾಗಿದೆ. ಸ್ವೀಕರಿಸಿರುವ ವಿವರ, ಪಾವತಿಸಿರುವ ಉದ್ದೇಶ ಇತ್ಯಾದಿಗಳ ಬಗ್ಗೆ ಲೆಕ್ಕ ತಪಾಸಣೆ ಅವಧಿಯಲ್ಲಿ ಸ್ಪಷ್ಟವಾಗಿ ಪರಿಶೀಲಿಸಲು

ಸಾಧ್ಯವಾಗಿರುವುದಿಲ್ಲ. ವಿವರವನ್ನು <u>ಅನುಬಂಧ (7)ರಲ್ಲಿ</u> ನೀಡಲಾಗಿದೆ.

| **8 ವಿವಿಧ ಬ್ಯಾಂಕ್ ಖಾತೆಗಳ ಆರ್ಥಿಕ ಪರಿಸ್ಥಿತಿಯ ವಿವರ** | |
|---|---|
| 01.04.2016 ರಂದು ಪ್ರಾರಂಭ ಶಿಲ್ಕು | 2,85,21,441 |
| 2016–17ಕ್ಕೆ ಸ್ವೀಕೃತಿ | 14,39,66,857 |
| **ಒಟ್ಟು** | **17,54,88,298** |
| 2016–17ಕ್ಕೆ ವೆಚ್ಚ | 14,13,24,240 |
| 31.03.2017ಕ್ಕೆ ಅಂತಿಮ ಶಿಲ್ಕು | 3,11,64,059 |

ಈ ಜಮಾ ಖರ್ಚುಗಳ ಮೊಬಲಗನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಳ್ಳದಿರುವುದಕ್ಕೆ ಕಾರಣಗಳೊಂದಿಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ.

ಉತ್ತರ

ಬ್ಯಾಂಕಿನ ಸ್ಟ್ರೋಲ್‌ಗಳನ್ನು ನಗದು ಪುಸ್ತಕದೊಂದಿಗೆ ತಾಳೆ ಮಾಡಿ ಒದಗಿಸಲಾಗಿರುತ್ತದೆ. ಹಾಗೂ ಆದಾಯ ಮತ್ತು ವೆಚ್ಚದ ಕ್ರೋಢಿಕೃತ ಪಟ್ಟಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗಿದೆ.

1. SBI Old A/C No: 10562326495
2. SBI New A/C No: 31051187090
3. HDFC Bank Sarswathipuram A/C No: 651450000190
4. SBM Guest House & Hostel A/C No: 64068987296
5. SBM Online A/C No: 64089378530
6. Vijaya Bank Saraswathipuram A/C:141900541000001
7. Punjab National Bank, SJCE A/C: 3950002100002105
8. HDFC Bank, V.V.Mohalla A/C: 50200010317069
9. SBI A/C No:54035420117, Ksou, Mysuru.

ಈ ಮೇಲೆ ತಿಳಿಸಿರುವ 09 ಖಾತೆಯನ್ನು ಪ್ರತಿ ಮಾಹೆಯಾನ ಬ್ಯಾಂಕಿನ ಅಂತಿಮ ಶಿಲ್ಕಿನೊಂದಿಗೆ ತಾಳೆಮಾಡಲಾಗಿದ್ದು ನಗದು ಪುಸ್ತಕ ಮತ್ತು ಬ್ಯಾಂಕ್ ಸ್ಟ್ರೋಲ್‌ಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲಾಗಿರುವುದರಿಂದ ಪರಿಶೀಲಿಸಿ ಸದರಿ ವಿಚಾರಣೆಯನ್ನು ಕೈ ಬಿಡಲು ಕೋರಿದೆ.

**ವಿವರ**

13 **<u>13. 2016–17ನೇ ಸಾಲಿನಲ್ಲಿ BOM ಸಭೆಯಲ್ಲಿ ಅನುಮೋದನೆಗೊಂಡಿರುವ ವಾರ್ಷಿಕ ಲೆಕ್ಕಪತ್ರ ವಿವಿಧ ಬ್ಯಾಂಕ್ ಖಾತೆಗಳಲ್ಲಿನ ಸಾಮಾನ್ಯ ನಿಧಿ ಖಾತೆಯ ಜಮಾ/ಖರ್ಚುಗಳನ್ನು ಸರ್ಕಾರದಿಂದ/ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ ಇರುವುದು :–</u>**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆ – 08 ರಲ್ಲಿ ವಾರ್ಷಿಕ

| | |
|---|---|
| | ಲೆಕ್ಕಪತ್ರದಲ್ಲಿನ ಒಟ್ಟು ಬ್ಯಾಂಕ್ ಖಾತೆಗಳಲ್ಲಿ (20) ಜಮಾ ಹಾಗೂ ಖರ್ಚು ಕುರಿತು BOM ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರದಿಂದ/ಮಾನ್ಯ ಕುಲಾಧಿಪತಿಗಳಿಂದ ಮಾಡಿರುವ ವೆಚ್ಚಗಳಿಗೆ ಅನುಮೋದನೆ ಪಡೆದಿರುವ ಮಂಜೂರಾತಿ ಆದೇಶದ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಪತ್ರ ಸಂಖ್ಯೆ:58/2018–19 ದಿನಾಂಕ:27.11.2018ರಂದು ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವ ಆದೇಶದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರದಿಂದ ಅನುಮೋದನೆ ಇಲ್ಲದೆ ಸದರಿ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದಿದ್ದರೂ ಆರ್ಥಿಕ ಪ್ರಗತಿಗೆ ಆದ್ಯತೆ ನೀಡಿರುವುದು ಕಂಡುಬಂದಿರುತ್ತದೆ. ಈ ವಿಚಾರದಲ್ಲಿ ಸೂಕ್ತ ವಿವರಣೆ ನೀಡಬೇಕಾಗಿ ಹಾಗೂ ಮಾನ್ಯ ಕುಲಾಧಿಪತಿಗಳಿಂದ ಮಾಡಿರುವ ವೆಚ್ಚದ ಬಗ್ಗೆ ಅನುಮೋದನೆಪಡೆದು ಕಂಡಿಕೆಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ. |
| | ಉತ್ತರ |
| | ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ, ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋಧನೆ ಪಡೆದು ನಂತರ ಮಾನ್ಯ ಕುಲಪತಿಗಳ ಅನುಮೋಧನೆ ಪಡೆಯಲಾಗುವುದು. ಆರ್ಥಿಕ ವರ್ಷದ ಲೆಕ್ಕ ಪರಿಶೋಧನೆ ಮುಕ್ತಾಯಗೊಂಡು ಅಂತಿಮ ಲೆಕ್ಕಪರಿಶೋಧನಾ ವರದಿಬಂದ ನಂತರ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯೊಂದಿಗೆ ವಾರ್ಷಿಕ ಲೆಕ್ಕಪತ್ರಗಳನ್ನು ಮುದ್ರಣ ಮಾಡಿಸಿ ಉನ್ನತ ಶಿಕ್ಷಣ ಇಲಾಖೆ, ಸರ್ಕಾರದ ಉಭಯ ಸಧನಗಳಿಗೆ ಹಾಗೂ ಮಾನ್ಯ ಕುಲಾಧಿಪತಿಗಳಿಗೆ ಸಲ್ಲಿಸಲಾಗುವುದು. ಈಗಾಗಲೇ 2015–16ನೇ ಸಾಲಿನವರೆಗೆ ಸಲ್ಲಿಸಲಾಗಿದ್ದು, 2016–17ನೇ ವಾರ್ಷಿಕ ಲೆಕ್ಕಪತ್ರಗಳನ್ನು ಈ ವರದಿಯ ಜೊತೆ ಸೇರಿಸಿ ಸಲ್ಲಿಸಲಾಗಿರುತ್ತದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ |
| | **ವಿವರ** |
| 14 | **<u>14. 2016–17ನೇ ಸಾಲಿನ ಸಾಮಾನ್ಯ ನಿಧಿ ಖಾತೆಯ ವಾರ್ಷಿಕ ಲೆಕ್ಕಪತ್ರದಲ್ಲಿರುವಂತೆ ವಿವಿಧ ಲೆಕ್ಕಶೀರ್ಷಿಕೆಯಡಿ ವಿವಿಧ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ರಶೀದಿ ಪುಸ್ತಕ, ದಿನವಹಿ ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ ಹಾಜರುಪಡಿಸದೇ ಇರುವುದು :–</u>**<br>ಸಾಮಾನ್ಯ ನಿಧಿ ಖಾತೆಯ ವಾರ್ಷಿಕ ಲೆಕ್ಕಪತ್ರದಲ್ಲಿರುವ ವಿವರಗಳಂತೆ 2016–17ನೇ ಸಾಲಿನಲ್ಲಿ ಕೆಳಕಂಡ ಸ್ವೀಕೃತಿಯಡಿ ವಿವಿಧ ಶುಲ್ಕಗಳ ಜಮೆಗಳಿಗೆ ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆ ಪಡೆಯಲಾಗಿದೆ ಆದರೆ ಇದಕ್ಕೆ ಸಂಬಂಧಿಸಿದ ರಶೀದಿ ಪುಸ್ತಕಗಳು, ದಿನವಹಿ ಪುಸ್ತಕ, ಇರಸಾಲು ಪುಸ್ತಕ, ಬ್ಯಾಂಕ್ ಸ್ಕ್ರೋಲ್, ಬ್ಯಾಂಕ್ ಚಲನ್ Online ಮುಖಾಂತರ ಜಮೆಯಾಗಿರುವ Online Credit Statement ಇತ್ಯಾದಿ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣಾ ಪತ್ರ ಸಂಖ್ಯೆ:53/24.11.2018 ಮತ್ತು 32/17.11.2018 ಹಾಗೂ 30/16.11.2018 ರಂದು ಜಾರಿ ಮಾಡಿದ್ದರೂ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಜಮೆ ತೆಗೆದುಕೊಂಡಿರುವ ಅಂಕಿ ಅಂಶಗಳನ್ನು ಖಚಿತಪಡಿಸಿಕೊಳ್ಳಲು |

| | |
|---|---|
| | ಸಾಧ್ಯವಾಗಿರುವುದಿಲ್ಲ. |

| ಕ್ರಸಂ | ಶುಲ್ಕದ ವಿವರ | ಮೊತ್ತ | ಸ್ವೀಕೃತಿ ಕೋಡ್ ಸಂಖ್ಯೆ |
|---|---|---|---|
| 1 | ಬೋಧನಾ ಶುಲ್ಕ | 39,31,465 | 101 |
| 2 | ನೋಂದಣಿ ಶುಲ್ಕ | – | 102 |
| 3 | ಅರ್ಹತಾ ಶುಲ್ಕ | 10,000 | 103 |
| 4 | ವರ್ಗಾವಣೆ ಶುಲ್ಕ | 6,14,000 | 104 |
| | **ಒಟ್ಟು** | **45,55,465** | |

ವಿದ್ಯಾರ್ಥಿಗಳಿಂದ ವಸೂಲಾತಿಯಾಗಿ ಜಮೆಯಾಗಿರುವ ಬಗ್ಗೆ ವಾರ್ಷಿಕ ಲೆಕ್ಕಪತ್ರದಲ್ಲಿ ಸಾಮಾನ್ಯ ನಿಧಿ ಖಾತೆಗೆ ತೆಗೆದುಕೊಳ್ಳಲಾಗಿದೆ. ಹೀಗೆ ತೆಗೆದುಕೊಂಡಿರುವ ಜಮೆಗಳು ವಿದ್ಯಾರ್ಥಿಗಳ ಪ್ರವೇಶಾತಿ ಪಡೆದಿರುವ in house/online ಮುಖಾಂತರ ಶುಲ್ಕ ಪಾವತಿಯಾಗಿದೆಯೇ ಅಥವಾ ಸದರಿ ಸಾಲಿನಲ್ಲಿ ಹೊಸ ಪ್ರವೇಶಾತಿಯಾಗದಿರುವುದರಿಂದ ಪುನರಾವರ್ತಿತ (Repeaters) ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಜಮೆ ತೆಗೆದುಕೊಂಡಿರಬಹುದಾಗಿದ್ದು, ಈ ಮೊತ್ತವು ಯಾವ ಯಾವ ಮೂಲಗಳಿಂದ ಪಡೆಯಲಾಗಿದೆ ಎಂಬುದರ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಸ್ವೀಕೃತಿ ಮೂಲಗಳ ವಿವರಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

| | |
|---|---|
| | ಉತ್ತರ |
| | 2016–17ನೇ ಸಾಲಿನಲ್ಲಿ ಸಹಭಾಗಿತ್ವ ಸಂಸ್ಥೆಯಿಂದ ಬಂದಂತಹ ಡಿ.ಡಿ.ಗಳ ಮೊತ್ತ ರೂ 35,86,215/– 2015–16ನೇ ಸಾಲಿನ ಆರ್ಥಿಕ ವರ್ಷ ಮುಗಿದ ನಂತರ ವಿಧ್ಯಾರ್ಥಿಗಳು ಪಾವತಿಸಿರುವ ಬೋಧನಾ ಶುಲ್ಕದ ಮೊತ್ತ ರೂ 3,45,250/– ಮತ್ತು ಅರ್ಹತಾ ಶುಲ್ಕದ ಮೊತ್ತ ರೂ 10,000/– 2016–17ನೇ ಸಾಲಿಗೆ ಜಮೆಯಾದ ಮೊತ್ತವಾಗಿರುತ್ತದೆ. ಹಾಗೂ ರೂ 6,14,000/– ವಿದ್ಯಾರ್ಥಿಗಳು ವರ್ಗಾವಣೆ ಪತ್ರ ಕೋರಿ ಪಾವತಿಸಿರುವ ಮೊತ್ತವಾಗಿರುತ್ತದೆ. |
| | **ವಿವರ** |
| 15 | **15. 2016–17ನೇ ಸಾಲಿನ ಸಾಮಾನ್ಯ ನಿಧಿ ಖಾತೆಯ ವಾರ್ಷಿಕ ಲೆಕ್ಕಪತ್ರದಲ್ಲಿರುವಂತೆ ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದು :–** |

ಸಾಮಾನ್ಯ ನಿಧಿ ಖಾತೆಯ ವಾರ್ಷಿಕ ಲೆಕ್ಕಪತ್ರದಂತೆ 2016–17ನೇ ಸಾಲಿನಲ್ಲಿ ಜಮೆ ವಿವರವನ್ನು ಪರಿಶೀಲಿಸಲಾಗಿ. ಸದರಿ ಸಾಲಿನಲ್ಲಿ ರೂ.2,35,88,213/–ಗಳ ಜಮೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆಗೊಂಡಿದ್ದು, ಲೆಕ್ಕಪರಿಶೋಧನೆ ವೇಳೆಯಲ್ಲಿ ಸದರಿ ಮೊತ್ತಕ್ಕೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:64/2018–19 ದಿನಾಂಕ:30.11.2018 ರಂದು ವಿಚಾರಣೆ ಕೋರಿಯು ಸಹ ಯಾವುದೇ ದಾಖಲೆಗಳನ್ನು

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಇತರ ಜಮೆ ತೆಗೆದುಕೊಂಡಿರುವ ವಿಚಾರದಲ್ಲಿ ಪರಿಶೀಲಿಸಿ ಕ್ರಮಕೈಗೊಂಡು ಯಾವುದೇ ರೀತಿಯ ಹಣದ ದುರುಪಯೋಗ ಕಂಡರೆ ಆಡಳಿತಾತ್ಮಕ ಕ್ರಮಕೈಗೊಂಡು ವರದಿ ಮಾಡಬೇಕಾಗಿ ಸೂಚಿಸಿದೆ.

ಉತ್ತರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಕೋಡ್ ನಂ.156 ರಲ್ಲಿ ಲೆಕ್ಕ ಶೀರ್ಷಿಕೆ ಇತರೆಯಲ್ಲಿ ಒಟ್ಟು ರೂ 2,35,88,213/–ಗಳು ಜಮೆಯಾಗಿದ್ದು ವಿವರ ಈ ಕೆಳಕಂಡಂತಿದೆ.

| | | |
|---|---|---|
| 1 | Audit Recovery | 5,75,834 |
| 2 | RTI Fee | 4,272 |
| 3 | Penal Fee | 10,400 |
| 4 | Bharath Post Graduate College, Chennai, Revalidation DDs Amount | 63,64,225 |
| 5 | Transfer from Exam A/C | 99,72,923 |
| 6 | Mangaluru Urban Development refund amount | 14,78,750 |
| 7 | Competative Exam Training Centre Fee | 2,19,400 |
| 8 | Library Fine | 3,697 |
| 9 | Duplicate IDCard, Ph.d reg fee, Lesson fee,NDC fee etc | 98,927 |
| 10 | Leave salary contribution of Dr.Ramananda | 13,30,330 |
| 11 | FKMK College A/C Closed amount | 4,823 |
| 12 | LIC Maturity Amt | 2,83,706 |
| 13 | Scholarship amt | 9,27,340 |
| 14 | Prospectus old due amt | 53,860 |
| 15 | Vat tax refund from commercial amt | 3,47,399 |
| 16 | Prof. M.G Krishnan V.C house advance reg | 1,20,000 |
| 17 | COL Canada U/S | 1,66,145 |
| 18 | Unspent amt | 11,56,149 |
| 19 | SB Interest | 4,70,033 |
| | **Total** | **2,35,88,213** |

| | ವಿವರ |
|---|---|
| 16 | **<u>16. ನಗದು ಪುಸ್ತಕ ದೈನಂದಿನ ಜಮಾ ಖರ್ಚುಗಳ ವಿವರವನ್ನು ಬ್ಯಾಂಕ್ ಖಾತೆಯೊಂದಿಗೆ ಕ್ರಮಬದ್ಧವಾಗಿ ನಿರ್ವಹಿಸದೆ ಇರುವುದು :–</u>**<br><br>2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ನಿರ್ವಹಿಸಿರುವ ನಗದು ಪುಸ್ತಕವನ್ನು ನಿಗದಿತ ನಮೂನೆಯಲ್ಲಿ ಕೆ.ಎಫ್.ಸಿ 329 ರಿಂದ 331ರಲ್ಲಿ ತಿಳಿಸಿರುವಂತೆ ನಿರ್ವಹಿಸಿರುವುದಿಲ್ಲ. ಇದೊಂದು ಪ್ರಮುಖ ದಾಖಲೆಯಾಗಿದ್ದು, ದೈನಂದಿನ ಜಮಾ ಖರ್ಚುಗಳನ್ನು ಬ್ಯಾಂಕ್ ಖಾತೆಯ ಜಮಾ ಖರ್ಚಿನೊಂದಿಗೆ ತಾಳೆ ಮಾಡಿ ಪ್ರತಿ ಮಾಹೆಯ ಅಂತ್ಯಕ್ಕೆ ಸಮನ್ವಯಗೊಳಿಸಿ ಅಂತಿಮ ಶಿಲ್ಕಿಗೆ ನಗದಾಗದೆ ಇರುವ ಧನಾದೇಶ ಬ್ಯಾಂಕಿನ ಅಂತಿಮ ಶಿಲ್ಕನ್ನು ತಾಳೆ ಮಾಡಿ ಹಣಕಾಸು ಅಧಿಕಾರಿಯವರು ಬಿ.ಆರ್.ಎಸ್ ತಯಾರಿಸಿ ದೃಢೀಕರಿಸದೆ ಇರುವುದರಿಂದ ಇನ್ನು ಈ ಕ್ರಮದಂತೆ ಅನುಸರಿಸಲು ತಿಳಿಸಿದೆ. ಹಣಕಾಸು ಅಧಿಕಾರಿಗಳು ಭೌತಿಕವಾಗಿ ಪರಿಶೀಲಿಸಿ ದೃಢೀಕರಿಸದಿರುವುದರಿಂದ ಅಂಕಿ ಅಂಶಗಳಲ್ಲಿ ವ್ಯತ್ಯಾಸವುಂಟಾಗಿ ತಾಳೆಯಾಗದಿರುವುದಲ್ಲದೆ ಕರ್ತವ್ಯ ಲೋಪವಾಗುವ ಸಂಭವವಿರುತ್ತದೆ. ಹಾಗೂ ಮಾಸಿಕ ವರ್ಗೀಕೃತ ಜಮಾ ಖರ್ಚುಗಳನ್ನು ತಯಾರಿಸದೆ ಇರುವುದರಿಂದ ವ್ಯತ್ಯಾಸ ತಿಳಿಯಲು ಸಾಧ್ಯವಾಗಿರುವುದಿಲ್ಲ. ಎಲ್ಲಾ ಬ್ಯಾಂಕ್ ಖಾತೆಗಳ ಪ್ರತಿ ಮಾಹೆ ನಗದು ಪುಸ್ತಕ ಜಮಾ ಖರ್ಚುಗಳನ್ನು ಅಂತಿಮ ಶಿಲ್ಕಿನೊಂದಿಗೆ ದೃಢೀಕರಿಸಿ ಸಹಿ ಮಾಡಿ ನಿರ್ವಹಿಸಬೇಕಾಗಿದೆ.<br><br>1. ನಗದು ಪುಸ್ತಕ ನಿಗದಿತ ವಹಿಯಲ್ಲಿರದೆ Computer printout ಗಳಿಂದ ನಿರ್ವಹಿಸಿದ್ದರೂ ದೃಢೀಕರಿಸಿ ಪುಟ ಸಂಖ್ಯೆ ನಮೂದಿಸಿರುವುದಿಲ್ಲ.<br>2. ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿನೊಂದಿಗೆ ತಾಳೆ ಮಾಡಿ BRS ತಯಾರಿಸಿ ದೃಢೀಕರಿಸಿರುವುದಿಲ್ಲ.<br>3. ನಗದಾಗದೆ ಇರುವ ಧನಾದೇಶಗಳ ಸಂಖ್ಯೆ ಹಾಗೂ ದಿನಾಂಕ, ಅವಧಿ ಮೀರಿದ ಧನಾದೇಶಗಳನ್ನು ರದ್ದುಗೊಳಿಸುವುದು ಇತ್ಯಾದಿಯ ಬಗ್ಗೆ ಸ್ಪಷ್ಟವಾಗಿ ದಾಖಲು ಮಾಡಿರುವುದಿಲ್ಲ.<br>4. ನಗದು ಪುಸ್ತಕದಲ್ಲಿ ಜಮೆ ಕಡೆ ವಿವಿಧ ಸಂಸ್ಥೆ ಕಛೇರಿ, ಅಂಗ ಸಂಸ್ಥೆ, ವಿದ್ಯಾರ್ಥಿಗಳಿಂದ ಸ್ವೀಕರಿಸಿದ ಶುಲ್ಕದ ಬಾಬ್ತು, ಡಿ.ಡಿ ನಂಬರ್, ದಿನಾಂಕ, ಸಂಸ್ಥೆಯ ಹೆಸರು ನಗದು ರೂಪದಲ್ಲಿ ಸ್ವೀಕರಿಸಿದ ಹಣ ಚೆಕ್ ನಂ. ದಿನಾಂಕ ರಶೀದಿ ಸಂಖ್ಯೆ ವಿವರ ತೋರಿಸಿರುವುದಿಲ್ಲ.<br>5. Bank Statement ನೊಂದಿಗೆ ತಾಳೆ ಮಾಡಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ.<br>6. ದೈನಂದಿನ ನಗದು ಪುಸ್ತಕವನ್ನು ಸ್ವೀಕೃತಿ ವೆಚ್ಚದೊಂದಿಗೆ ಕ್ರಮಬದ್ಧವಾಗಿ ನಮೂದಿಸಿ ಅಂತಿಮ ಶಿಲ್ಕನ್ನು ದೃಢೀಕರಿಸಿರುವುದಿಲ್ಲ.<br><br>ವಿಚಾರಣೆ ಸಂಖ್ಯೆ:44/2018–19 ದಿನಾಂಕ:23.11.2018ರಂದು ನೀಡಲಾಗಿದ್ದರೂ ವಿವರಣೆ ನೀಡಿರುವುದಿಲ್ಲ. ಇನ್ನು ಮುಂದೆ ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಂಡು ಕಾರ್ಯನಿರ್ವಹಿಸಲು ಸೂಚಿಸಿದೆ. |
| | ಉತ್ತರ |
| | ಲೆಕ್ಕಪರಿಶೋಧಕರು ಸೂಚಿಸಿರುವಂತೆ ಕ್ರಮವಹಿಸಲಾಗುವುದು. |
| | **ವಿವರ** |
| 17 | **<u>17. ದಿನಾಂಕ:31.03.2017 ವರ್ಷದ ಅಂತ್ಯಕ್ಕೆ ವಿವಿಧ ಬ್ಯಾಂಕ್ ಖಾತೆಗಳಲ್ಲಿನ ನಗದಾಗದೆ ಇರುವ ಧನಾದೇಶಗಳ</u>** |

| | |
|---|---|
| | **ವಿವರ :–**<br><br>2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ 08 ವಿವಿಧ ಖಾತೆಯ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಮಾರ್ಚ್–2017ರ ಅಂತ್ಯಕ್ಕೆ ರೂ.6,48,48,001/–ಗಳು ನಗದಾಗದೆ (un encased cheque) ಉಳಿದಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆ ಸಂಖ್ಯೆ:3/05.11.2018ರಂದು ನೀಡಿರುವ ವಿಚಾರಣೆಗೆ ಸಲ್ಲಿಸಿರುವ ಅನುಪಾಲನಾ ವರದಿಯಂತೆ ವಿವರ ಈ ಕೆಳಕಂಡಂತೆ ನೀಡಲಾಗಿದೆ. |

| ಕ್ರ.ಸಂ | ಬ್ಯಾಂಕ್ ಖಾತೆ ಸಂಖ್ಯೆ | ನಗದು ಪುಸ್ತಕದ ಪ್ರಕಾರ ಪ್ರಾರಂಭಿಕ ಶಿಲ್ಕು | ಬ್ಯಾಂಕ್ ಸ್ಟೇಟ್ಮೆಂಟ್‌ನ ಪ್ರಕಾರ ಪ್ರಾರಂಭಿಕ ಶಿಲ್ಕು | ವ್ಯತ್ಯಾಸ |
|---|---|---|---|---|
| 1 | Suspense A/C Fund 54035421315 | 2897057.53 | 2897632.53 | 575 |
| 2 | Scholarship Accounts 53100059343995 | 16419286.82 | 16427236.82 | 7950 |
| 3 | Distance Education council Fund 54035421235 | 8393538.92 | 8952519.92 | 558981 |
| 4 | Mukktha sanjeevini 64018806640 | 321223036.00 | 32296306 | 87000 |
| 5 | Gnanvani A/C No.54035421177 | 357575.00 | 399565 | 43560 |
| 6 | SD/EMD Account No.54035421224 | 19334804.58 | 233138 | 19101666 |
| 7 | Endowment Account No.54035421257 | 229346.45 | 257159 | 27813 |
| 8 | General Fund 54035420117 | 54772531.98 | 129792988 | 45020456 |
| | | | **Total** | **64848001** |

ಈ ಲೆಕ್ಕಗಳನ್ನು ಸಮನ್ವಯಗೊಳಿಸಿ 2017–18ನೇ ಸಾಲಿನ ಬ್ಯಾಂಕ್ ಜಮಾ ಖರ್ಚನ್ನು ಪರಿಶೀಲಿಸಿ ನಗದಾಗದೆ ಇರುವ ಅವಧಿಮೀರಿದ ಧನಾದೇಶಗಳ ಬಗ್ಗೆ ಧನಾದೇಶಗಳನ್ನು ಸ್ವೀಕೃತಿ ತೆಗೆದುಕೊಂಡು ಈ ಸಾಲಿನ ಲೆಕ್ಕಸಮನ್ವಯಗೊಳಿಸಿ ತಃಖ್ತೆಗಳನ್ನು ಪರಿಷ್ಕರಿಸಿ ವಾರ್ಷಿಕ ಲೆಕ್ಕದಲ್ಲಿ ಸರಿಪಡಿಸಿ ಕ್ರಮಕೈಗೊಂಡು ವರದಿ ನೀಡಲು ಸೂಚಿಸಿದೆ.

ಮೇಲ್ಕಂಡ ಕಂಡಿಕೆ ಸಂಖ್ಯೆ 6 ರಿಂದ 17ರವರೆಗಿನ ಅಂಶಗಳನ್ನು ಆಧರಿಸಿ ವಾರ್ಷಿಕ ಲೆಕ್ಕಪತ್ರಗಳಲ್ಲಿ ಲೋಪದೋಷಗಳಿರುವ ಪ್ರಯುಕ್ತ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಕಂಡುಬಂದಿದ್ದು, ದೃಢೀಕರಿಸಲು ಸಾಧ್ಯವಾಗಿರುವುದಿಲ್ಲವೆಂದು ಅಭಿಪ್ರಾಯಿಸಿದೆ.

| | |
|---|---|
| | ಉತ್ತರ |
| | ಮೇಲಿನ ಲೆಕ್ಕಗಳನ್ನು ಸಮನ್ವಯಗೊಳಿಸಿ ಬ್ಯಾಂಕ್ ಜಮಾ ಖರ್ಚನ್ನು ಪರಿಶೀಲಿಸಿ ನಗದಾಗದೆ ಇರುವ |

| | |
|---|---|
| | ಅವಧಿಮೀರಿದ ಧನಾದೇಶಗಳ ಬಗ್ಗೆ ಧನಾದೇಶಗಳನ್ನು ಸ್ವೀಕೃತಿಗೆ ತೆಗೆದುಕೊಂಡು ಲೆಕ್ಕಸಮನ್ವಯಗೊಳಿಸಿ ತಃಖ್ತೆಗಳನ್ನು ಪರಿಷ್ಕರಿಸಿ ವಾರ್ಷಿಕ ಲೆಕ್ಕದಲ್ಲಿ ಸರಿಪಡಿಸಿ ಕ್ರಮಕೈಗೊಂಡು ವರದಿಯನ್ನು ಮುಂದಿನ ಲೆಕ್ಕತಪಾಸಣೆಯ ಸಮಯದಲ್ಲಿ ಸಲ್ಲಿಸಲಾಗುವುದು. |
| | **ವಿವರ** |
| 18 | **18. 2016–17ನೇ ಸಾಲಿಗೆ ಹೂಡಿಕೆ ಮಾಡಿರುವ ಠೇವಣಿಯನ್ನು ಬ್ಯಾಂಕ್ ಖಾತೆವಾರು ತೊಡಗಿಸಿರುವ ವಿವರ :–** |

ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಸಾಮಾನ್ಯ ನಿಧಿ, ಪರೀಕ್ಷಾ ನಿಧಿ ಹಾಗೂ ಇತರೆ ಖಾತೆಗಳಲ್ಲಿ ಹೂಡಿಕೆ ಮಾಡಿರುವ ಠೇವಣಿ ಮೊತ್ತವು ದಿನಾಂಕ:31.03.2017ರ ಅಂತ್ಯಕ್ಕೆ ರೂ.589,87,66,884/–ಗಳನ್ನು ವಿವಿಧ ಬ್ಯಾಂಕ್ ಖಾತೆಗಳಲ್ಲಿ ತೊಡಗಿಸಲಾಗಿದ್ದು, ತೊಡಗಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ BOM ಸಭೆಯಲ್ಲಿ ಅನುಮೋದನೆ ಪಡೆದಿರುವ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ವಿವರವನ್ನು ಅನುಬಂಧ (8)ರಲ್ಲಿ ನೀಡಿದೆ.

ಈ ಬಗ್ಗೆ ವಿಚಾರಣೆ ಸಂಖ್ಯೆ:13/17.11.2018 ಹಾಗೂ 28/16.11.2018 ಮತ್ತು 103/19.12.2018 ರಂದು ವಿಚಾರಣೆಗಳನ್ನು ನೀಡಲಾಗಿದ್ದು, ಯಾವುದೇ ರೀತಿಯ ಮೂಲ ಬ್ಯಾಂಕ್ ಪಾಸ್ ಶೀಟ್ ಉಳಿತಾಯ/ಚಾಲ್ತಿ ಖಾತೆ ತೆರೆದಿರುವ ಬ್ಯಾಂಕ್ ವಿವರ, ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದ ಉಳಿತಾಯ ಖಾತೆಯಲ್ಲಿ ನಿರ್ವಹಿಸದೆ ಉಂಟಾಗಿರುವ ನಷ್ಟದ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ ಎಫ್.ಡಿ.ಆರ್‌ಗಳು ಚಾಲ್ತಿಯಲ್ಲಿರುವ ಬಗ್ಗೆ ಸಂಬಂಧಿಸಿದ ಬ್ಯಾಂಕ್‌ಗಳಿಂದ ದೃಢೀಕರಣವನ್ನು ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುತ್ತಾರೆ.

**ವಿವಿಧ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿರುವ ಎಫ್.ಡಿ.ಆರ್ (FDRS)**

| ಕ್ರ.ಸಂ | ಬ್ಯಾಂಕ್‌ಗಳ ಹೆಸರು | ಠೇವಣಿ ಹೂಡಿಕೆ ಮೊತ್ತ |
|---|---|---|
| 1 | State Bank of India | 397,78,02,468 |
| 2 | Cauvery Grameena Bank | 181,05,97,333 |
| 3 | Canara bank | 9,96,66,292 |
| 4 | Punjab National Bank | 1,07,00,791 |
| | **Total** | **5,89,87,66,884** |

| ನಿಶ್ಚಿತ ಠೇವಣಿ/ಹೂಡಿಕೆ/ಮರು ಹೂಡಿಕೆ ವಿವರ | |
|---|---|
| ದಿನಾಂಕ:01.04.2016ಕ್ಕೆ ಪ್ರಾರಂಭ ಶಿಲ್ಕು | 629,49,96,213 |
| 2016–17ನೇ ಬ್ಯಾಂಕಿನಿಂದ ಬಡ್ಡಿ ಜಮೆಯಾಗಿರುವುದು | 44,74,14,499 |
| Re investment Amount | 350,00,000 |
| Fresh investment | 12,10,00,000 |
| Total | 6,89,84,10,713 |
| Interest with draw Rs.16802460 | 99,96,43,829 |

| | | | |
|---|---|---|---|
| | | Rs. 16802460 | |
| | | with drawl 982841369 | |
| | | ದಿನಾಂಕ:31.03.2017ರ ಅಂತಿಮ ಶಿಲ್ಕು | 5,89,87,66,884 |
| | ಉತ್ತರ | | |
| | ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಸಾಮಾನ್ಯ ನಿಧಿ, ಪರೀಕ್ಷಾ ನಿಧಿ ಹಾಗೂ ಇತರೆ ಖಾತೆಗಳಲ್ಲಿ ಹೂಡಿಕೆ ಮಾಡಿರುವ ಠೇವಣಿ ಮೊತ್ತ ರೂ.589,87,66,884/–ಗಳನ್ನು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಿ ದಿನಾಂಕ 15.07.2017 ರಂದು ನಡೆದ ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. | | |
| | **ವಿವರ** | | |
| 19 | **<u>19. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ – 08, ಪರೀಕ್ಷಾ ನಿಧಿ – 09 ಮತ್ತು ಪೀಠಗಳಲ್ಲಿ ಬ್ಯಾಂಕ್ ಖಾತೆಯಲ್ಲಿ ತೊಡಗಿಸಿರುವ ಠೇವಣಿಗೆ ಕಡಿಮೆ ಬಡ್ಡಿ ಬಂದಿರುವುದು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ದರಪಟ್ಟಿ ಆಹ್ವಾನಿಸದೆ ಇರುವುದು :–</u>**<br><br>2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ – 08, ಪರೀಕ್ಷಾ ನಿಧಿ – 09 ಮತ್ತು ಪೀಠಗಳ ನಿಧಿಗಳ ಠೇವಣಿ ಮೊತ್ತ (FDR) ವಿವರಗಳನ್ನು ಆರ್ಥಿಕ ವರ್ಷದ ದಿನಾಂಕ:31.03.2017ರ ಅಂತ್ಯಕ್ಕೆ ಹಾಜರುಪಡಿಸಿರುವ ಹಣಕಾಸು ಅಧಿಕಾರಿಗಳು ದೃಢೀಕರಿಸಿ ಹಾಜರುಪಡಿಸಿರುವ FDR Statement ಆಧಾರದ ಮೇಲೆ **<u>ಅನುಬಂಧ (9)ರಲ್ಲಿ</u>** ತೋರಿಸಿರುವ ಒಟ್ಟು ಠೇವಣಿ ಮೊಬಲಗು ರೂ.589,87,66,884/– ಗಳ ಠೇವಣಿ ಮೊತ್ತವನ್ನು ವಿವಿಧ ಬ್ಯಾಂಕ್‌ಗಳಾದ (SBI, CGB, Vijaya, Canara, Syndicate Bank)ಗಳಲ್ಲಿ ಠೇವಣಿ ತೊಡಗಿಸಿರುವುದು ಕಂಡುಬಂದಿರುತ್ತದೆ. ಆದರೆ ಬ್ಯಾಂಕ್‌ಗಳ ಬಡ್ಡಿದರ ತುಲನೆ ಮಾಡಿದಾಗ ಎಸ್.ಬಿ.ಎಂ ಬ್ಯಾಂಕ್‌ನ ಬಡ್ಡಿಯದರ ಶೇಕಡ 8.25 ರಂತೆ 1 ವರ್ಷದ ಅವಧಿಗೆ ರೂ.487,39,41,693/–ಗಳ ಮೊತ್ತವನ್ನು ನಿಗದಿಪಡಿಸಿ ಠೇವಣಿಯಾಗಿ ಹೂಡಿಕೆಮಾಡಲಾಗಿದೆ. ಆದರೆ CGB (ಕಾವೇರಿ ಗ್ರಾಮೀಣ ಬ್ಯಾಂಕ್) ಬ್ಯಾಂಕ್‌ನ ಬಡ್ಡಿಯದರ ಶೇಕಡ 8.60 ಹೆಚ್ಚಿಗೆ ಇದ್ದು, ಹಾಗೂ ಉಳಿದ ಬ್ಯಾಂಕ್ ಬಡ್ಡಿದರವನ್ನು ಹೋಲಿಸಿದಾಗ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ದರಪಟ್ಟಿ ಆಹ್ವಾನಿಸಿ ಹೆಚ್ಚಿನ ಬಡ್ಡಿದರ ನೀಡಲಿರುವ ಬ್ಯಾಂಕಿನಲ್ಲಿ ಠೇವಣಿ ತೊಡಗಿಸಬೇಕಾಗುತ್ತದೆ. ಈ ಕ್ರಮ ಅನುಸರಿಸದ ಕಾರಣ ಕಡಿಮೆ ಬಡ್ಡಿದರದಲ್ಲಿ ಹೂಡಿಕೆ ಮಾಡಿರುವುದರಿಂದ ಕಡಿಮೆ ಬಡ್ಡಿ ದರ ಲಭ್ಯವಾಗಿದ್ದು, ರೂ.1,81,01,591/–ಗಳು ಆರ್ಥಿಕ ನಷ್ಟ ಉಂಟಾಗಿರುತ್ತದೆ.<br><br>ದರಪಟ್ಟಿಯನ್ನು ಆಹ್ವಾನಿಸಿರುವ ಬಗ್ಗೆ ಹಾಗೂ ವ್ಯವಸ್ಥಾಪನಾ ಮಂಡಳಿಯ ಪೂರ್ವಾನುಮತಿ ಪಡೆದಿರುವ ಬಗ್ಗೆ ಮತ್ತು ಕುಲಪತಿಗಳಿಂದ ಅನುಮೋದನೆಗೊಂಡಿರುವ ಕಡತ/ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸದ ಕಾರಣ ಬಡ್ಡಿದರದ ಖಚಿತತೆಯನ್ನು ಸಮರ್ಪಕವಾಗಿ ಪರಿಶೀಲಿಸಲು ಸಾಧ್ಯವಾಗದೆ | | |

| | |
|---|---|
| | ಹೂಡಿಕೆಯಲ್ಲಿ ಪಾರದರ್ಶಕ ಕ್ರಮ ಅನುಸರಿಸಿರುವುದನ್ನು ಗಮನಿಸಲಾಗಿದೆ. ಆದುದರಿಂದ ವಿಶ್ವವಿದ್ಯಾನಿಲಯಕ್ಕೆ ಉಂಟಾದ ನಷ್ಟದ ಠೇವಣಿ ಮೇಲಿನ ಬಡ್ಡಿಯ ಮೊತ್ತ **ರೂ.1,81,01,591/-ಗಳನ್ನು ವಸೂಲಾತಿ ಮಾಡಲು** ಕ್ರಮಕೈಗೊಂಡು ಪಾಲನ ವರದಿ ನೀಡಲು ಸೂಚಿಸಿದೆ. ವಿವರಗಳನ್ನು ಅನುಬಂಧ (9)ರಲ್ಲಿ ನೀಡಿದೆ. |

| ಕಡಿಮೆ ಬಡ್ಡಿದರದಲ್ಲಿ (FDR) ನಿಗದಿತ ಠೇವಣಿಯಲ್ಲಿ ಮೊತ್ತವನ್ನು ಹೂಡಿಕೆ ಮಾಡಿರುವ ವಿವರ | | |
|---|---|---|
| **ಲೆಕ್ಕಶೀರ್ಷಿಕೆ** | **ಠೇವಣಿ ಹೂಡಿಕೆ ಮೊತ್ತ** | **ಕಡಿಮೆ ಬಡ್ಡಿದರ** |
| ಸಾಮಾನ್ಯ ಖಾತೆ-08<br>ಪರೀಕ್ಷಾ ಖಾತೆ-09<br>ಪೀಠಗಳು | 487,39,41,693 | 1,81,01,591 |

| | |
|---|---|
| | ಉತ್ತರ |
| | ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್.ಬಿ.ಐ ಮುಖ್ಯ ಶಾಖೆ ಮೈಸೂರು ಈ ಬ್ಯಾಂಕ್‌ಗಳಲ್ಲಿ ವಿದ್ಯಾರ್ಥಿಗಳು ದೇಶಾದ್ಯಂತ ಶುಲ್ಕ ಪಾವತಿಸಲು ವಿಶ್ವವಿದ್ಯಾನಿಲಯದ ಆರಂಭದಿಂದಲೂ ವಿಶ್ವವಿದ್ಯಾನಿಲಯಕ್ಕಾಗಲಿ / ವಿದ್ಯಾರ್ಥಿಗಳಿಗಾಗಲಿ ಯಾವುದೇ ಶುಲ್ಕವನ್ನು ವಿಧಿಸದೆ (At Par) ಶುಲ್ಕ ಪಾವತಿಸಲು ಅನುವು ಮಾಡಿಕೊಡಲಾಗಿರುತ್ತದೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಯನ್ನು ಒದಗಿಸುತ್ತಿದ್ದು ವಿವಿಧ ಖಾತೆಗಳಲ್ಲಿ ಸಂಗ್ರಹವಾದ ಹಣವನ್ನು ಸದರಿ ಬ್ಯಾಂಕ್‌ನಲ್ಲಿ ಲಭ್ಯವಿದ್ದ ಗರಿಷ್ಠ ಬಡ್ಡಿ ದರದಲ್ಲಿ ಠೇವಣಿ ತೊಡಗಿಸಲಾಗಿರುತ್ತದೆ.<br><br>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾನಸಗಂಗೋತ್ರಿ ಶಾಖೆಯೂ ವಿಶ್ವವಿದ್ಯಾನಿಲಯದ ಸೇವೆಗಾಗಿಯೇ ವಿವಿ ಆವರಣದಲ್ಲಿ ತೆರೆದಿರುವ ಶಾಖೆಯಾಗಿದ್ದು ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಯನ್ನು ವಿಶ್ವವಿದ್ಯಾನಿಲಯಕ್ಕೆ ಒದಗಿಸುತ್ತಿರುತ್ತದೆ. ಎಸ್.ಬಿ.ಎಂ ಬಡ್ಡಿ ದರವು 2016-17ನೇ ಸಾಲಿನಲ್ಲಿ ಶೇ 8.25 % ಇದ್ದು ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾದ ಹಣವನ್ನು ಆಯಾಯ ತಿಂಗಳಲ್ಲಿ ಚಾಲ್ತಿಯಲ್ಲಿದ್ದ ಗರಿಷ್ಠ ಬಡ್ಡಿದರದಲ್ಲಿ ಠೇವಣಿ ಹೂಡಿಕೆ ಮಾಡಲಾಗಿರುವುದನ್ನು ಸಹ ಠೇವಣಿ ವಹಿಯಲ್ಲಿ ಗಮನಿಸಬಹುದಾಗಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ ಆಇ/53/ಇಸಾಂಹ/2012 ದಿನಾಂಕ 10.07.2012 ರ ಅನುಸಾರ ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾದ ಹೆಚ್ಚುವರಿ ಹಣವನ್ನು ಆಯಾಯ ತಿಂಗಳಲ್ಲಿ ಚಾಲ್ತಿಯಲ್ಲಿದ್ದ ಗರಿಷ್ಠ ಬಡ್ಡಿದರದಲ್ಲಿ ಹೂಡಿಕೆ ಮಾಡಲಾಗಿರುತ್ತದೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಗರಿಷ್ಠ ಬಡ್ಡಿದರವು ಲಭ್ಯವಾಗಿರುವುದನ್ನು ಸಹ ಠೇವಣಿ ವಹಿಯಲ್ಲಿ ಗಮನಿಸಬಹುದಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಸೆಮಿನಾರ್, ಕಾರ್ಯಾಗಾರ, ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಸದರಿ ಬ್ಯಾಂಕ್‌ಗಳು ಆರ್ಥಿಕ ಸಹಾಯ ಮಾಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ಗ್ರಾಮೀಣ ಬ್ಯಾಂಕ್‌ಗಳ ಬಡ್ಡಿದರವು ರಾಷ್ಟ್ರೀಕೃತ ಬ್ಯಾಂಕ್‌ಗಳ ಬಡ್ಡಿದರಕ್ಕಿಂತ ಸ್ವಲ್ಪ ಹೆಚ್ಚಿದ್ದು ಹೆಚ್ಚುವರಿ ಹಣವನ್ನು ಗ್ರಾಮೀಣ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲಾಗಿದೆ. ಉಳಿದಂತೆ ವೇತನ ಕಾರ್ಪಸ್ ನಿಧಿ, ಪಿಂಚಣಿ ನಿಧಿಯಂತ ಪ್ರಮುಖ ನಿಧಿಗಳನ್ನು ಸುರಕ್ಷತೆ |

| | |
|---|---|
| | ದೃಷ್ಠಿಯಿಂದ ವಿವಿ ಆವರಣದ ಎಸ್ ಬಿ ಐ ನಲ್ಲಿ ಗರಿಷ್ಠ ಬಡ್ಡಿದರದಲ್ಲಿ ಠೇವಣಿ ಹೂಡಿಕೆ ಮಾಡಲಾಗಿದೆ ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 20 | **20. ಬ್ಯಾಂಕ್ ಖಾತೆಗಳನ್ನು ಉಳಿತಾಯ ಖಾತೆಯಲ್ಲಿ ನಿರ್ವಹಿಸದೆ ಚಾಲ್ತಿ ಖಾತೆಯಲ್ಲಿ ನಿರ್ವಹಿಸಿರುವುದು :–** |

(ಎ) 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಾಮಾನ್ಯನಿಧಿ ಖಾತೆ–(08) ಮತ್ತು ಪರೀಕ್ಷಾ ಖಾತೆ–(09)ಗಳಿಗೆ ಸಂಬಂಧಪಟ್ಟಂತೆ ಬ್ಯಾಂಕ್ ಖಾತೆಗಳನ್ನು ಉಳಿತಾಯ ಖಾತೆಯಲ್ಲಿ ನಿರ್ವಹಿಸದೆ ಚಾಲ್ತಿ ಖಾತೆಯಲ್ಲಿ (Current A/c) ನಿರ್ವಹಿಸಲಾಗಿದೆ. ಸರ್ಕಾರದ ಮಾರ್ಗಸೂಚಿಗಳನ್ವಯ ಬ್ಯಾಂಕ್ ಖಾತೆಗಳನ್ನು ಉಳಿತಾಯ ಖಾತೆಗಳಲ್ಲಿ ನಿರ್ವಹಿಸಿದ್ದಲ್ಲಿ ಉಳಿತಾಯ ಖಾತೆಯಲ್ಲಿರುವ ಮೊತ್ತಕ್ಕೆ ಬಡ್ಡಿ (Interest) ಲಭ್ಯವಾಗುತ್ತಿತ್ತು. ಆದರೆ ಚಾಲ್ತಿ ಖಾತೆಯಲ್ಲಿ ವ್ಯವಹಾರ ನಿರ್ವಹಣೆ ಮಾಡಿರುವುದರಿಂದ ಯಾವುದೇ ರೀತಿ ಬಡ್ಡಿ ಲಭ್ಯವಾಗದಿರುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಬಡ್ಡಿ ಹಣ ನಷ್ಟವಾಗಿರುತ್ತದೆ. ಆದ್ದರಿಂದ ಈ ನಷ್ಟಕ್ಕೆ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ಜವಾಬ್ದಾರರನ್ನಾಗಿಸಿ ವಸೂಲಿಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ. ಸಾಮಾನ್ಯ ನಿಧಿ–08 ಮತ್ತು ಪರೀಕ್ಷಾ ಖಾತೆ–09 ರ ಬ್ಯಾಂಕ್‌ನ ಚಾಲ್ತಿ ಖಾತೆಗಳನ್ನು ಪ್ರತ್ಯೇಕವಾಗಿ ಕೆಳಗಿನಂತೆ ವಿವರಿಸಿದೆ.

2015–16ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಪ್ರಸ್ತಾಪಿಸಲಾಗಿದ್ದರೂ ಸಹ ಪ್ರಸ್ತುತ ಸಾಲಿನ ಲೆಕ್ಕಪರಿಶೋಧನೆಗೆ ಯಾವುದೇ ರೀತಿಯ ದಾಖಲೆ ಹಾಜರುಪಡಿಸದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಉಂಟಾದ ನಷ್ಟದ ಬಗ್ಗೆ ಸಂಬಂಧಪಟ್ಟ ಅಧಿಕಾರಿ/ನೌಕರರ ಮೇಲೆ ಆಡಳಿತಾತ್ಮಕ ಕ್ರಮಕೈಗೊಂಡು ವರದಿ ನೀಡಬೇಕಾಗಿ ಸೂಚಿಸಿದೆ.

**BANK ACCOUNT DETAILS –2016–17**

| SL. NO | BANK NAME | ACCOUNT NO | PURPOSE | NAME OF A/C | RATE OF INETREST |
|---|---|---|---|---|---|
| 1 | SBI | 54035420117 | General Fund | Current | |
| 2 | SBI (New) | 31051187090 | General Fund | Current | |
| 3 | SBM KSOU | 6408937850 | Online Program | Current | |
| 4 | Panjab National Bank | 3950002100002105 | | Current | |
| 5 | HDFC Bank | 50200010317069 | | Current | |

| ಪರೀಕ್ಷಾ ಖಾತೆ–09 | | | | | |
|---|---|---|---|---|---|
| 1 | SBH (SBI) | 54035420128 | Exam Fund | Current | |
| 2 | SBI (New) | 31106997538 | Exam Fund | Current | |
| 3 | Vijaya Bank | 141900541000002 | Exam Fund | Current | |
| 4 | HDFC Bank | 50200015842381 | Exam Fund | Current | |

(ಸಿ) ನಿಶ್ಚಿತ ಠೇವಣಿಯ ಹೂಡಿಕೆಯಲ್ಲಿನ ನ್ಯೂನತೆಗಳು :–

Policy lapses

Department of public enterprises ಹೊರಡಿಸಿರುವ ಸುತ್ತೋಲೆಯಲ್ಲಿ ಠೇವಣಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾನದಂಡಗಳನ್ನು ನೀಡಿದೆ. ವಿಶ್ವವಿದ್ಯಾನಿಲಯವು ಠೇವಣಿ ಇಡುವ ಮೊದಲು ಈ ಮಾನದಂಡಗಳನ್ನು ಪಾಲಿಸುವುದು ಹೂಡಿಕೆಯ ಸುರಕ್ಷಾಹಿತದೃಷ್ಟಿಯಿಂದ ಅಗತ್ಯವಿರುತ್ತದೆ.

ಮಾನದಂಡಗಳು

| | | |
|---|---|---|
| 1 | Bank Network for Nationalised SC BS for RRBS | 500 Corers<br>100 Corers |
| 2 | Bank Profitability track Record | 3 years |
| 3 | Capital Adequacy Ratio | 10% |
| 4 | NPA | 2% |
| 5 | Participation in Govts Developments Program | At least 5 program |

ಈ ವಿಶ್ವವಿದ್ಯಾನಿಲಯದಲ್ಲಿ investment committeeಯ ಸಮಿತಿಯ ನಿರ್ಣಯಗಳಂತೆ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವುದು investment policy (ಹೂಡಿಕೆ ನಿಯಮ) ಯಾಗಿರುತ್ತದೆ. ಈ ಸಮಿತಿಯು ಠೇವಣಿ ಇಡಲು, ಇಚ್ಚಿಸಿದಂತಹ ಬ್ಯಾಂಕ್‌ಗಳಿಂದ Quotation ದರಪಟ್ಟಿ ಹಾಗೂ ಬ್ಯಾಂಕ್ ಹೊಂದಿರುವ Track record (Based on DPSE Parameters)ನ್ನು ಪಡೆದು ಸಮಿತಿಯಲ್ಲಿ ಮಂಡಿಸಿ ಯಾವ ಬ್ಯಾಂಕಿನಲ್ಲಿ ಠೇವಣಿ ಇಡಬೇಕು ಹಾಗು ಯಾವ ಬ್ಯಾಂಕ್ ನಲ್ಲಿ ಠೇವಣಿ ಸುರಕ್ಷಿತ ಎಂಬುದನ್ನು ನಿರ್ಣಯಿಸಿ ಕ್ರಮಕೈಗೊಳ್ಳುವುದು ಸೂಕ್ತವಾದ ಹೂಡಿಕೆ ಕ್ರಮವಾಗಿದೆ.

ವರದಿ ಸಾಲಿನ ಎಲ್ಲಾ ನಿಶ್ಚಿತ ಠೇವಣಿಗಳ ಹೂಡಿಕೆ/ಮರು ಹೂಡಿಕೆಗೆ ಸಂಬಂಧಿಸಿದಂತೆ

ದಿನಾಂಕ:31.03.2017ರ ಅಂತ್ಯಕ್ಕೆ ಎಲ್ಲಾ ಠೇವಣಿಗಳ ಬ್ಯಾಂಕ್‌ವಾರು ಅಂತಿಮ ಶಿಲ್ಕಿನ ವಿವರಗಳ ದೃಢೀಕರಣ ಪತ್ರಗಳನ್ನು ಬ್ಯಾಂಕ್ ವ್ಯವಸ್ಥಾಪಕರಿಂದ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲದ ಕಾರಣ ಖಚಿತಪಡಿಸಲು ಸಾಧ್ಯವಾಗಿರುವುದಿಲ್ಲ.

1. ಹೂಡಿಕೆ ಮಾಡಿರುವ ಸಂಪನ್ಮೂಲವನ್ನು ಯಾವ ಉದ್ದೇಶಕ್ಕೆ ಹೂಡಿಕೆ ಮಾಡಲಾಗಿದೆ ಎನ್ನುವ ವಿವರಗಳನ್ನು ಮತ್ತು ನಿಶ್ಚಿತ ಠೇವಣಿಗಳ ನಿಗದಿತ ನಮೂನೆಯ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
2. 2016–17ನೇ ಸಾಲಿನಲ್ಲಿ ಒಟ್ಟು 580 ಸಂಖ್ಯೆ ಎಫ್.ಡಿ.ಆರ್‌ಗಳನ್ನು ನಿರ್ವಹಿಸಲಾದ ಗಣಕೀಕೃತ ಪ್ರತಿಯಲ್ಲಿ ಪರಿಶೀಲಿಸಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ದರಪಟ್ಟಿ ಆಹ್ವಾನಿಸಿರುವ ತುಲನಾತ್ಮಕ ದರಪಟ್ಟಿ ಹಾಜರುಪಡಿಸಿರುವುದಿಲ್ಲ.
3. ಠೇವಣಿ ಮೊತ್ತದ ಮೇಲೆ ಆದಾಯ ತೆರಿಗೆ ಕಟಾಯಿಸಿರುವ ಟಿ.ಡಿ.ಎಸ್ ಪ್ರಮಾಣಪತ್ರ ಹಾಜರುಪಡಿಸಿರುವುದಿಲ್ಲ.

ಎಫ್.ಡಿ.ಆರ್‌ಗಳನ್ನು ಹಿಂಪಡೆದ ಮತ್ತು ಮರು ಹೂಡಿಕೆ ಮಾಡಿದ ವಿವರಗಳ ಕಡತಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ ಹಾಗೂ ನವೀಕರಿಸುವ ಸಂದರ್ಭಗಳಲ್ಲಿ ಜೆರಾಕ್ಸ್ ಪ್ರತಿ ನಿರ್ವಹಿಸಿ ಲೆಕ್ಕ ಪರಿಶೋಧನೆಗೆ (ಪಕ್ವವಾದ ಠೇವಣಿ ರಶೀದಿಗಳನ್ನು) ಹಾಜರುಪಡಿಸಿರುವುದಿಲ್ಲ. ಇನ್ನು ಮುಂದಿನ ಲೆಕ್ಕಪರಿಶೋಧನೆಗಾಗಿ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಿದೆ.

ಉತ್ತರ

ವಿಶ್ವವಿದ್ಯಾನಿಲಯದ ಪರೀಕ್ಷಾ ನಿಧಿ ಖಾತೆಯಡಿಯಲ್ಲಿ ನಿರ್ವಹಿಸುತ್ತಿರುವ SBI ನ ಖಾತೆಗಳು 1996 ರಲ್ಲಿ ವಿಶ್ವವಿದ್ಯಾನಿಲಯ ಆರಂಭಗೊಂಡಾಗ ತೆರೆದಿರುವ ಖಾತೆಗಳಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಅಥವಾ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿಧಿಸದೆ ದೇಶದಾದ್ಯಂತ ಶುಲ್ಕ ಪಾವತಿಸುವ ಅವಕಾಶ ನೀಡಿರುತ್ತಾರೆ atpar ಸೌಲಭ್ಯದಡಿಯಲ್ಲಿ ಈ ಖಾತೆಗಳನ್ನು ನಿರ್ವಹಿಸಲಾಗುತ್ತಿದ್ದು ಪ್ರತಿ ವಿದ್ಯಾರ್ಥಿಗೆ ರೂ 50/– ಕ್ಕೂ ಹೆಚ್ಚು ಶುಲ್ಕವನ್ನು ಇತರೆ ಶಾಖೆಗಳಲ್ಲಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿದ ಶುಲ್ಕಕ್ಕೆ Intercity charges ವಿಧಿಸುತ್ತಿದ್ದು ಈ ಶುಲ್ಕವನ್ನು ವಿವಿಗೆ ಮರುಭರಿಕೆ ಮಾಡಿಕೊಡಲಾಗುತ್ತದೆ ಮತ್ತು ವಿವಿಗೆ ಯಾವುದೇ ಶುಲ್ಕವಿಲ್ಲದೆ DD, RTGS, NEFT and Bank Statement ಗಳನ್ನು ನೀಡಲಾಗುತ್ತಿರುತ್ತದೆ. ಚಾಲ್ತಿ ಖಾತೆಯಲ್ಲಿ ದಿನ ಒಂದಕ್ಕೆ ಹಲವಾರು ಬಾರಿ ನಗದು ವ್ಯವಹಾರ ಮಾಡಬಹುದಾಗಿದ್ದು, ಯಾವುದೇ ಮಿತಿ ಇರುವುದಿಲ್ಲ, ಆದರೆ ಉಳಿತಾಯ ಖಾತೆಯಲ್ಲಿ ನಿರ್ದಿಷ್ಟ ಬ್ಯಾಂಕ್ ವ್ಯವಹಾರ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

ಠೇವಣಿ ಹೂಡಿಕೆ ಮರುಹೂಡಿಕೆ ಮತ್ತು ನಗದೀಕರಣ ಬಡ್ಡಿ ಹಿಂಪಡೆತ ಮುಂತಾದ ಎಲ್ಲಾ ವಿವರಗಳನ್ನು

| | |
|---|---|
| | ಠೇವಣಿ ವಹಿಯಲ್ಲಿ ದಾಖಲಿಸಿದ್ದು ಹಣಕಾಸು ಅಧಿಕಾರಿಗಳಿಂದ ದೃಢೀಕರಿಸಿ ಹಾಜರುಪಡಿಸಲಾಗಿದೆ. ಲೆಕ್ಕ ತಪಾಸಣೆ ಸಂದರ್ಭದಲ್ಲಿ ಬಹುತೇಕ ಬ್ಯಾಂಕ್ ಠೇವಣಿಗಳನ್ನು ಮುಕ್ತಾಯಗೊಳಿಸಲಾಗಿದ್ದು ಪ್ರಸ್ತುತ ವಿವಿ ಆವರಣದ ಎಸ್ ಬಿ ಐ ಶಾಖೆ (ಹಿಂದಿನ ಎಸ್‌ಬಿಎಂ) ಮತ್ತು ಕೆನರಾ ಬ್ಯಾಂಕ್ ಹಾಗೂ ಕಾವೇರಿ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಮಾತ್ರ ವಿಶ್ವವಿದ್ಯಾನಿಲಯದ ಠೇವಣಿ ಹೂಡಿಕೆ ಮಾಡಲಾಗಿರುತ್ತದೆ. ವಿವರವನ್ನು ಲೆಕ್ಕತಪಾಸಣೆಗೆ ಹಾಜರು ಪಡಿಸಲಾಗಿದೆ. ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಠೇವಣಿ ಹೂಡಿಕೆ ಮತ್ತು ನವೀಕರಣವನ್ನು ಮಾಡಲಾಗಿದ್ದು ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ.<br><br>2016–17 ನೇ ಸಾಲಿನಲ್ಲಿ ಹೂಡಿಕೆ ಮಾಡಲಾಗಿರುವ ಠೇವಣಿಗಳನ್ನು ವಿವಿ ಆವರಣದ ಎಸ್.ಬಿ.ಐ ಶಾಖೆಯಲ್ಲಿ ಪಿಂಚಣಿ ನಿಧಿ, ಮತ್ತು ಕಾರ್ಪಸ್ ನಿಧಿ ಹಾಗೂ ಇತರೆ ನಿಧಿಗಳನ್ನು ನಿರ್ವಹಿಸಲಾಗುತ್ತಿದ್ದು ಸದರಿ ಬ್ಯಾಂಕ್‌ನಲ್ಲಿ ಲಭ್ಯವಾಗುವ ಗರಿಷ್ಠ ಬಡ್ಡಿದರದಲ್ಲಿ ಹೂಡಿಕೆ ಮಾಡಲಾಗಿದೆ. ಹಾಗೂ ಹೆಚ್ಚುವರಿ ಹಣವನ್ನು ಕಾವೇರಿ ಗ್ರಾಮೀಣ ಬ್ಯಾಂಕ್ ನ ಶಾಖೆಗಳಲ್ಲಿ ಹೂಡಿಕೆ ಮಾಡಲಾಗಿದ್ದು ಗರಿಷ್ಠ ಬಡ್ಡಿದರ ವಿವಿ ಗೆ ಲಭ್ಯವಾಗಿರುತ್ತದೆ.<br><br>ಠೇವಣಿ ಹೂಡಿಕೆ ಮಾಡಿರುವ ಮೂಲ ಸಂಪನ್ಮೂಲದ ಉದ್ದೇಶ ಹಾಗೂ ಮಾರ್ಗಸೂಚಿ ವಿವರವನ್ನು ಮತ್ತು ನಿಶ್ಚಿತ ಠೇವಣಿ ಮೂಲವಹಿಯನ್ನು ಹಾಗೂ Soft copy ಯನ್ನು ಲೆಕ್ಕತಪಾಸಣೆಗೆ ಒದಗಿಸಲಾಗಿದೆ. ಠೇವಣಿ ಹೂಡಿಕೆಗೆ ಸಂದ ಬಡ್ಡಿಯನ್ನು ಲೆಕ್ಕಕ್ಕೆ ತೆಗೆದುಕೊಂಡು 31.03.2017 ರ ಅಂತ್ಯಕ್ಕೆ ಠೇವಣಿ ವಹಿಯನ್ನು ನಿರ್ವಹಿಸಲಾಗಿದ್ದು ವಿವರವನ್ನು ಒದಗಿಸಿ ವಿವರಣೆ ನೀಡಲಾಗಿದೆ. ಠೇವಣಿ ಪ್ರಾರಂಭ ಶಿಲ್ಕನ್ನು ಮುಂದಿನ ಸಾಲಿನಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸಿಕೊಂಡು ಅಂತಿಮ ಶಿಲ್ಕನ್ನು ಠೇವಣಿ ವಹಿ ಮತ್ತು ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿಗೆ ತಾಳೆಮಾಡಲಾಗಿದೆ. ಠೇವಣಿ ಪ್ರಾರಂಭ ಶಿಲ್ಕನ್ನು ಮುಂದಿನ ಸಾಲಿನಿಂದ ಆಯವ್ಯಯದಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆಯಲಾಗಿದೆ ಮತ್ತು ಆಸ್ತಿ ಮತ್ತು ಹೊಣೆಗಾರಿಕೆ ತಃಖ್ತೆಯನ್ನು ಸನ್ನದು ಲೆಕ್ಕಿಗರಿಂದ ಸಿದ್ಧಪಡಿಸಲಾಗಿದ್ದು ವಿವರವನ್ನು ಸ್ಥಳೀಯ ಲೆಕ್ಕತಪಾಸಣೆಗೆ ಹಾಜರು ಪಡಿಸಲಾಗುವುದು. ಠೇವಣಿ ಮೇಲಿನ ಮೊತ್ತದ ಆದಾಯ ತೆರಿಗೆಯನ್ನು 2016–17 ನೇ ಸಾಲಿನಿಂದ ಕಡಿತಗೊಳಿಸಲಾಗಿದ್ದು ಸನ್ನದು ಲೆಕ್ಕಿಗರಿಂದ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಲು ಕ್ರಮವಹಿಸಲಾಗುವುದು.<br><br>2015–16ನೇ ಸಾಲಿನ ಬಹುತೇಕ ಠೇವಣಿಗಳನ್ನು ನವೀಕರಿಸಲಾಗಿದ್ದು ಸದರಿ ಸಾಲಿನ ಠೇವಣಿ ರಶೀತಿಗಳ ನಕಲು ಪ್ರತಿಗಳನ್ನು ಲೆಕ್ಕ ತಪಾಸಣೆಗೆ ಹಾಜರು ಪಡಿಸಿ ವಿವರಣೆ ನೀಡಲಾಗಿದೆ. ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಠೇವಣಿ ಪ್ರಾರಂಭ ಶಿಲ್ಕು ಠೇವಣಿಗೆ ಸಂದಾಯವಾದ ಬಡ್ಡಿ, ನಗದೀಕರಿಸಿದ ಠೇವಣಿ ಮೊಬಲಗು, ಹೂಡಿಕೆ ಮತ್ತು ಅಂತಿಮ ಶಿಲ್ಕಿನ ವಿವರವನ್ನು ದಾಖಲಿಸಲು ಕ್ರಮವಹಿಸಿದ್ದು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಠೇವಣಿ ವಹಿಯನ್ನು ನಿರ್ವಹಿಸಿ ಹಣಕಾಸು ಅಧಿಕಾರಿಗಳಿಂದ ದೃಢೀಕರಿಸಲಾಗಿದ್ದು ವಿವರವನ್ನು ಲೆಕ್ಕತನಿಖೆಗೆ ಹಾಜರು ಪಡಿಸಲಾಗಿದೆ ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ಕಂಡಿಕೆಯನ್ನು ಕೈಬಿಡಲು |

| | |
|---|---|
| | ಕೋರಲಾಗಿದೆ. |
| | ವಿವರ |
| 21 | **21. 2016–17ನೇ ವರ್ಷದ ನಿಶ್ಚಿತ ಠೇವಣಿ ಹೂಡಿಕೆಯಲ್ಲಿನ ಅಂತಿಮ ಶಿಲ್ಕಿನಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ:–**<br><br>2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಹಣಕಾಸು ಅಧಿಕಾರಿಗಳು, ಹೂಡಿಕೆ ವಹಿಯನ್ನು ಹಾಗೂ ಸಂಬಂಧಿಸಿದ ಎಫ್.ಡಿ.ಆರ್‌ನಲ್ಲಿ ಗಳಿಸಬಹುದಾದ ಬಡ್ಡಿ ಲೆಕ್ಕಾಚಾರ ಮಾಡಿದ ವಿವರಗಳಿರುವ ವಹಿ ನಿರ್ವಹಿಸದೆ ದೃಢೀಕೃತ ಕಂಪ್ಯೂಟರ್ ಪ್ರಿಂಟ್ ಸಹಿ ಮಾಡಿರುವ ಆಧಾರದ ಮೇಲೆ ನೀಡಿರುವ ದಾಖಲೆಗಳಲ್ಲಿ ದಿನಾಂಕ:01.04.2016ರಂದು ಪ್ರಾರಂಭಿಕ ಶಿಲ್ಕು ರೂ.629,49,96,212/– ಹೂಡಿಕೆ ಮೊತ್ತವಿರುತ್ತದೆ. ಆದರೆ ದಿನಾಂಕ:31.03.2017ರ ಅಂತ್ಯಕ್ಕೆ ಹೂಡಿಕೆಯ ಅಂತಿಮ ಶಿಲ್ಕು ರೂ.589,87,66,884/– ಈ ವ್ಯತ್ಯಾಸವು ಹಿಂದಿನ ಆಡಿಟ್ ವರದಿಯ ಹಾಗೂ ಹಣಕಾಸು ವಿಭಾಗದಿಂದ ಸಲ್ಲಿಸಿರುವ ವರದಿಯಲ್ಲಿ ವ್ಯತ್ಯಾಸ ರೂ.5,26,92,70,671/– ಕಂಡುಬಂದಿರುತ್ತದೆ. ಈ ವ್ಯತ್ಯಾಸದ ಬಗ್ಗೆ ಹಣಕಾಸು ಅಧಿಕಾರಿಗಳು ಸ್ಪಷ್ಟ ವಿವರಣೆ ನೀಡಬೇಕಾಗಿರುತ್ತದೆ. ಹಾಗೂ ಪರಿಷ್ಕೃತ ಹೂಡಿಕೆ ವರದಿ ಪಟ್ಟಿಯನ್ನು ಬ್ಯಾಂಕ್‌ವಾರು ತಯಾರಿಸಿ ಅನುಪಾಲನಾ ವರದಿಯೊಂದಿಗೆ ಆಡಳಿತಾತ್ಮಕ ಕ್ರಮದೊಂದಿಗೆ ಸೂಕ್ತ ಆಧಾರದೊಂದಿಗೆ ವಿವರಣೆ ನೀಡಬೇಕಾಗಿ ತಿಳಿಸಿದೆ. |
| | ಉತ್ತರ |
| | ಪರಿಷ್ಕೃತ ಹೂಡಿಕೆ ವರದಿ ಪಟ್ಟಿಯನ್ನು ಬ್ಯಾಂಕ್‌ವಾರು ತಯಾರಿಸಿ ಅನುಪಾಲನ ವರದಿನ್ನು ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | ವಿವರ |
| 22 | **22. ಹಿಂದಿನ ಮೂರು ವರ್ಷಗಳ ವಾರ್ಷಿಕ ಲೆಕ್ಕಪತ್ರದಂತೆ ಸರಾಸರಿ ಹಣಕಾಸು ವಿವರ :–** |

| ಕ್ರ.ಸಂ | ವರ್ಷ | ಸ್ವೀಕೃತಿ | ಪಾವತಿ |
|---|---|---|---|
| 1 | 2013–14 | 301,48,26,110 | 94,63,47,506 |
| 2 | 2014–15 | 3362263172 | 3,20,98,60,346 |
| 3 | 2015–16 | 2810786110 | 294,36,17,395 |

| | |
|---|---|
| | ವಿವರದಲ್ಲಿ ತಿಳಿಸಿರುವಂತೆ ಹಿಂದಿನ 2 ವರ್ಷಗಳ 2013–14 ರಿಂದ 2014–15ನೇ ಸಾಲಿನ ಸ್ವೀಕೃತಿ ಹಾಗೂ ಪಾವತಿಗಿಂತ 2015–16ನೇ ಸಾಲಿನ ಸ್ವೀಕೃತಿ ಪಾವತಿ ಕಡಿಮೆಯಾಗಿರುವುದು ಕಂಡುಬಂದಿದ್ದು, ಸದರಿ ಸಾಲಿನಲ್ಲಿ ಯು.ಜಿ.ಸಿಯಿಂದ ಮಾನ್ಯತೆ ದೊರೆಯದ ಕಾರಣ ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದೆ ಸದರಿ ಸಾಲಿನ ಆರ್ಥಿಕ ವಹಿವಾಟು ಕಡಿಮೆಯಾಗಿದೆ ಎಂದು ಭಾವಿಸಬಹುದಾಗಿದೆ. |
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |

**ವಿವರ**

23 **23. ಠೇವಣಿ ತಃಖ್ತೆಯಂತೆ ಠೇವಣಿ ಇಡಲಾದ ಮೊತ್ತದ ವಿವರ :–**

ಹಿಂದಿನ ಮೂರು ವರ್ಷಗಳಲ್ಲಿ ಠೇವಣಿ ಇಡಲಾದ ಮೊತ್ತದ ವಿವರ ಈ ಕೆಳಕಂಡಂತಿದೆ.

| ವರ್ಷ | ಠೇವಣಿ ಮೊತ್ತ ಪ್ರಾರಂಭಿಕ ಶಿಲ್ಕು + ಬಡ್ಡಿ, ಹಣ + ಹೊಸದಾಗಿ ಹೂಡಿಕೆ ಸೇರಿ |
|---|---|
| 2013–14 | 46,79,13,349 |
| 2014–15 | 650,64,93,953 |
| 2015–16 | 629,43,61,100 |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

24 **24. ವಿವಿಧ ಶಿಕ್ಷಣ ಕ್ರಮಗಳಾದ ಎಂ.ಎ, ಎಂ.ಕಾಂ, ಎಂ.ಟಿ.ಎಂ, ಎಸಿಜೆ ಇತರೆ ಪದವಿ ಶಿಕ್ಷಣ ಕ್ರಮಗಳನ್ನು ನಿಯಮ 1 ಮತ್ತು 2ಗಳ ಅಡಿಯಲ್ಲಿ ಪ್ರವೇಶಾತಿ ಪಡೆದಿರುವ ವಿವರ ಹಾಜರುಪಡಿಸದೆ ಇರುವುದು :–**

2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಪ್ರವೇಶಾತಿ ಪಡೆದಿರುವ ವಿವರ ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:57/2018–19 ದಿನಾಂಕ27.11.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ಯಾವುದೇ ದಾಖಲಾತಿ ಹಾಜರುಪಡಿಸದೆ ಇರುವುದರಿಂದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ ನಿಗದಿಪಡಿಸಿರುವ ಶುಲ್ಕದ ದರ ವಸೂಲಾತಿಯಾಗಿರುವ ವಿವಿಧ ಶುಲ್ಕ ಜಮೆಯಾಗಿರುವ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಸದರಿ ವಿವರಣೆ ನೀಡಬೇಕಾಗಿ ತಿಳಿಸಿದೆ.

1. ಕರ್ನಾಟಕ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ವಿತರಣೆ ಹಾಜರುಪಡಿಸಿಲ್ಲ.
2. ಹೊರರಾಜ್ಯದ ವ್ಯಾಸಂಗ ಮಾಡಿದ ಮತ್ತು ಹೊರರಾಜ್ಯಗಳಲ್ಲಿ ವಾಸಿಸುತ್ತಿರುವ ಕರ್ನಾಟಕ ಪದವೀದರ ಪ್ರವೇಶಾತಿ ಶಿಲ್ಕು ಹಾಗೂ ಪ್ರವೇಶಾತಿ ವಿವರ.
3. ಕರ್ನಾಟಕದಲ್ಲಿ ಕನಿಷ್ಠ 5 ವರ್ಷಗಳಿಂದ ವಾಸಿಸುತ್ತಿರುವ ಟಿಬೇಟಿಯನ್ ವಿದ್ಯಾರ್ಥಿಗಳ ಪ್ರವೇಶಾತಿ ಶಿಲ್ಕು ಹಾಗೂ ವಿವರ.
4. ಅನಿವಾಸಿ ಭಾರತೀಯರು ಮತ್ತು ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಶಿಲ್ಕು ವಿವರ ಹಾಜರುಪಡಿಸಿಲ್ಲ.

ವಿವರದಲ್ಲಿ ತಿಳಿಸಿರುವಂತೆ ಪ್ರಥಮ/ಅಂತಿಮ ವರ್ಷದ ನೊಂದಣಿ ಶುಲ್ಕ, ಬೋಧನಾ ಶುಲ್ಕ, ಅರ್ಹತ ಶುಲ್ಕ, ಇತರೆ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ವಿಷಯವಾರು ವರ್ಗವಾರು, ಸೆಮಿಸ್ಟರ್‌ವಾರು ಯು.ಜಿ & ಪಿ.ಜಿ ಸರ್ಟಿಫಿಕೇಟ್ ಕೋರ್ಸ್ ಇತರೆ ಸಂಬಂಧಿಸಿದ ವಿದ್ಯಾರ್ಥಿಗಳು ಶುಲ್ಕ ವಸೂಲಾತಿ, ಬೇಡಿಕೆ, ಬಾಕಿ ಇರುವ ಪ್ರವೇಶಾತಿ ವಿವರ ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪ್ರವೇಶಾತಿ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಹಾಗೂ ನಿಗದಿಪಡಿಸಿರುವ ಶುಲ್ಕದ ವಿವರವನ್ನು ಒದಗಿಸದೆ

| | |
|---|---|
| | ಇರುವುದರಿಂದ ವಿವಿಧ ಶುಲ್ಕ ವಸೂಲಾತಿಯಾಗಿ ಜಮೆಯಾಗಿರುವ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲದ ಕಾರಣ ಕಂಡಿಕೆಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ. |
| | ಉತ್ತರ |
| | 2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ ಮಾನ್ಯತೆ ಇಲ್ಲದಿರುವುದರಿಂದ ಯಾವುದೇ ಪ್ರವೇಶಾತಿ ಪ್ರಕ್ರಿಯೆ ಇರುವುದಿಲ್ಲ. |
| | **ವಿವರ** |
| 25 | **<u>25. 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಡಿ.ಸಿ.ಬಿ ವಿವರ ಹಾಜರುಪಡಿಸದೆ ಇರುವುದು :–</u>**<br><br>2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಪಡೆದಿರುವ ಯು.ಜಿ ಮತ್ತು ಪಿ.ಜಿ, ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಿವಿಧ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ವರ್ಗವಾರು, ವಿಷಯವಾರು, ವಿಭಾಗವಾರು, ಸೆಮಿಸ್ಟರ್‌ವಾರು ಶುಲ್ಕ ನಿಗದಿಪಡಿಸಿ ವಸೂಲಿ ಮಾಡಿರುವ ಶುಲ್ಕದ ವಿವರ ಹಾಗೂ ದಿನಾಂಕ:31.03.2017ರ ಅಂತ್ಯಕ್ಕೆ ವಿದ್ಯಾರ್ಥಿಗಳಿಂದ ವಸೂಲಿ ಆಗದೆ ಬಾಕಿ ಉಳಿದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:27/15.11.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಡಿ.ಸಿ.ಬಿ ವಿವರವನ್ನು ಹಾಜರುಪಡಿಸದೆ ಇರುವುದರಿಂದ ಈ ಬಗ್ಗೆ ಕ್ರಮಕೈಗೊಂಡು ಆಡಿಟ್ ಕಂಡಿಕೆಗೆ ಅನುಪಾಲನವರದಿ ನೀಡಲು ಸೂಚಿಸಿದೆ. |
| | ಉತ್ತರ |
| | 2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ ಮಾನ್ಯತೆ ಇಲ್ಲದಿರುವುದರಿಂದ ಯಾವುದೇ ಪ್ರವೇಶಾತಿ ಪ್ರಕ್ರಿಯೆ ಇರುವುದಿಲ್ಲ. |
| | **ವಿವರ** |
| 26 | **<u>26. 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಷ್ಯವೇತನ ಖಾತೆಯ ಆರ್ಥಿಕ ಪರಿಸ್ಥಿತಿ:–</u>** |

| ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಖಾತೆ ಸಂಖ್ಯೆ:54035421417 | |
|---|---|
| ದಿನಾಂಕ:01.04.2016 ಕ್ಕೆ ಪ್ರಾರಂಭಿಕ ಶಿಲ್ಕು | 6,28,35,692 |
| 2016–17ನೇ ಸಾಲಿನ ಒಟ್ಟು ಸ್ವೀಕೃತಿ (+) | 2,81,94,861 |
| **ಒಟ್ಟು** | **9,10,30,553** |
| 2016–17ನೇ ಸಾಲಿನ ಒಟ್ಟು ಪಾವತಿ (–) | 5,71,24,046 |
| ದಿನಾಂಕ:31.03.2017 ಕ್ಕೆ ಅಂತಿಮ ಶಿಲ್ಕು | 3,39,06,507 |

ಬ್ಯಾಂಕಿನ ಅಂತಿಮ ಶಿಲ್ಕು ನಗದು ಪುಸ್ತಕದ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

| | | |
|---|---|---|
| | | |

| ಹೆಚ್.ಡಿ.ಎಫ್.ಸಿ ಬ್ಯಾಂಕ್ ಖಾತೆ ಸಂಖ್ಯೆ: 50100059343995 | |
|---|---|
| ದಿನಾಂಕ:01.04.2016 ಕ್ಕೆ ಪ್ರಾರಂಭಿಕ ಶಿಲ್ಕು | 1,99,66,452.32 |
| 2016–17ನೇ ಸಾಲಿನ ಒಟ್ಟು ಸ್ವೀಕೃತಿ (+) | 11,77,092.50 |
| **ಒಟ್ಟು** | **2,11,43,544.82** |
| 2016–17ನೇ ಸಾಲಿನ ಒಟ್ಟು ಪಾವತಿ (–) | 47,16,308 |
| ದಿನಾಂಕ:31.03.2017 ಕ್ಕೆ ಅಂತಿಮ ಶಿಲ್ಕು | 1,64,27,236.82 |

ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು 1,64,19,286.82/–ಗಳಾಗಿದ್ದು, ನಗದಾಗದೇ ಇರುವ ಚೆಕ್‌ಗಳ ಮೊತ್ತ ರೂ.7,950/–ಗಳಿರುತ್ತವೆ. ಇದು ಮೇಲ್ಕಂಡ ಅಖೈರು ಶಿಲ್ಕಿಗೆ ತಾಳೆಯಾಗಿರುತ್ತದೆ.

ವಿಚಾರಣೆ ಸಂಖ್ಯೆ:78/07.12.2018 ನೀಡಿರುವ ವಿಚಾರಣೆಗೆ ದಿನಾಂಕ:18.02.2018 ರಂದು ಅನುಪಾಲನಾ ವರದಿಯನ್ನು ಹಾಜರುಪಡಿಸಿದಂತೆ ಕಂಡಿಕೆಗೆ ಮರುಅನುಪಾಲನಾ ನೀಡಲು ಸೂಚಿಸಿದೆ.

| | |
|---|---|
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 27 | **27. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ/ವರ್ಗ ವಿದ್ಯಾರ್ಥಿಗಳ ಶಿಷ್ಯವೇತನ ಬಾಬ್ತು ಬೇಡಿಕೆ ಮೊತ್ತ ಹೊಂದಾಣಿಕೆಯಾಗದಿರುವ ಬಗ್ಗೆ :–** |

2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಸಾಮಾನ್ಯ ನಿಧಿ 08 ಖಾತೆಯಲ್ಲಿ ಶಿಷ್ಯ ವೇತನ ಬೇಡಿಕೆ ಬಾಕಿಯಿರುವ ಪಟ್ಟಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲಾಗಿದ್ದು, ಸ್ವೀಕೃತಿಯ ಕ್ರಮ ಸಂಖ್ಯೆ:17 Fee refund social department (Free Admission) ಆಯವ್ಯಯದ ಪ್ರಕಾರ ಸ್ವೀಕೃತವಾಗಬೇಕಿದ್ದು, ವಾಸ್ತವಿಕವಾಗಿ ಸದರಿ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರೂ.4,57,25,272/–ಗಳು ಬಾಕಿ ಉಳಿದಿದ್ದು, ಮರುಭರಿಕೆಯಾಗದೆಯಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:140/24.01.2019 ರಂದು ವಿಚಾರಣೆ ನೀಡಲಾಗಿದ್ದು, ನೀಡಿರುವ ವಿಚಾರಣೆಗೆ ಅನುಪಾಲನಾ ವರದಿಯಂತೆ ಬಾಕಿ ಉಳಿದಿರುವ ಮೊತ್ತವನ್ನು ಕೂಡಲೇ ಕ್ರಮಕೈಗೊಂಡು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗಬೇಕಿದೆ ವಿದ್ಯಾರ್ಥಿವೇತನ ಬಾಬ್ತು ಹೊಂದಾಣಿಕೆ ಮಾಡಿಕೊಂಡು ಅನುಪಾಲನಾ ವರದಿ ನೀಡಲು ತಿಳಿಸುತ್ತಾ 2016–17ನೇ ಸಾಲಿನ ಪ್ರವೇಶಾತಿ ಕೇಂದ್ರ, ಪ್ರಾದೇಶಿಕ ಕೇಂದ್ರ ಪ್ರವೇಶಾತಿ ನೀಡಿದ ವಿದ್ಯಾರ್ಥಿಗಳ ಪ್ರಕ್ರಿಯೆ ನಡೆದಿಲ್ಲದ ಕಾರಣ ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದುಕೊಂಡುಬಂದಿರುವ ಶಿಷ್ಯವೇತನವನ್ನು ಪೂರ್ಣಪ್ರಮಾಣದಲ್ಲಿ ಮರುಭರಿಕೆ ಮಾಡಿಕೊಳ್ಳಲು ತಿಳಿಸಿದೆ. ವಿವರವನ್ನು **ಅನುಬಂಧ (10)ರಲ್ಲಿ** ನೀಡಿದೆ.

ಉತ್ತರ

ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗಬೇಕಿರುವ ವಿದ್ಯಾರ್ಥಿವೇತನವನ್ನು ಪೂರ್ಣಪ್ರಮಾಣದಲ್ಲಿ ಮರುಭರಿಕೆ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ವಿವರ

28 **28. 2016–17ನೇ ಸಾಲಿನ ವಿದ್ಯಾರ್ಥಿವೇತನ ಬ್ಯಾಂಕ್ ಖಾತೆಯಲ್ಲಿ ಬಂದಿರುವ ಬಡ್ಡಿಯನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡದೆ ಇರುವುದು :–**

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2 ಶಿಷ್ಯವೇತನ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ಜಮೆಯಾಗಿರುವ ಬಡ್ಡಿ ಮೊತ್ತವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಬೇಕಾಗಿರುತ್ತದೆ. ಈ ವಿಚಾರವಾಗಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:62/ 2018–19 ದಿನಾಂಕ:27.11.2018 ರಂದು ವಿವರವನ್ನು ನೀಡಲು ವಿಚಾರಣೆಯನ್ನು ಕೋರಲಾಗಿದ್ದು, ಯಾವುದೇ ವಿವರವಾದ ಮಾಹಿತಿಯನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ 2 ಶಿಷ್ಯವೇತನ ಬ್ಯಾಂಕ್ ಖಾತೆಯ ಬಡ್ಡಿ ಮೊತ್ತವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಿದ ವಿವರವನ್ನು ಸೂಕ್ತ ಮಾಹಿತಿಯೊಂದಿಗೆ ಮುಂದಿನ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

**ಜಮೆಯಾಗಿರುವ ಬಡ್ಡಿ ವಿವರ ಈ ಕೆಳಕಂಡಂತೆ ವಿವರಿಸಲಾಗಿದೆ.**

| ಕ್ರ.ಸಂ | ಬ್ಯಾಂಕ್ ಖಾತೆ ಸಂಖ್ಯೆ | ಬಡ್ಡಿ ಜಮೆಯಾಗಿರುವ ದಿನಾಂಕ | ಮೊತ್ತ |
|---|---|---|---|
| 1 | 50100059343995 ಹೆಚ್.ಡಿ.ಎಫ್.ಸಿ ಬ್ಯಾಂಕ್ | 01.04.2016 | 4,33,536 |
| | | 01.07.2016 | 1,97,844 |
| | | 01.10.2016 | 1,92,570 |
| | | 01.01.2017 | 1,88,910 |
| | | (a) ಒಟ್ಟು | **10,12,900** |
| 2 | 54035421417 ಎಸ್.ಬಿ.ಎಂ ಬ್ಯಾಂಕ್ | 30.06.2016 | 12,97,147 |
| | | 25.09.2016 | 4,64,315 |
| | | 25.12.2016 | 3,93,893 |
| | | 25.03.2017 | 3,21,456 |
| | | (b) ಒಟ್ಟು | **24,76,811** |

ಒಟ್ಟು ಬಡ್ಡಿ ಮೊಬಲಗು **ರೂ.34,89,711/- (a + b) ಗಳನ್ನು** ಸಂಬಂಧಿಸಿದ ಖಾತೆಗಳಿಗೆ ಜಮಾ ಮಾಡಿ ವಿವರಣೆ ನೀಡುವುದು.

ಉತ್ತರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ 2 ಶಿಷ್ಯವೇತನ ಬ್ಯಾಂಕ್ ಖಾತೆಗಳ ಬಡ್ಡಿ ಮೊತ್ತ ರೂ 34,89,711/–ನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರವನ್ನು ಸೂಕ್ತ

| | |
|---|---|
| | ಮಾಹಿತಿಯೊಂದಿಗೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | ವಿವರ |
| 29 | **29. 2016–17ನೇ ಸಾಲಿನ ಶಿಷ್ಯವೇತನ ಖಾತೆಯಿಂದ ಸಾಮಾನ್ಯ ನಿಧಿ ಖಾತೆಗೆ ಪ್ರವೇಶ ಶುಲ್ಕ ಮರುಪಾವತಿ ವರ್ಗಾವಣೆ ಮಾಡಿರುವ ಕುರಿತು :–** |

2016–17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ಶಿಷ್ಯವೇತನ ಬ್ಯಾಂಕ್ ಖಾತೆ ಸಂಖ್ಯೆ:54035421417 ರಿಂದ ಸಾಮಾನ್ಯ ನಿಧಿ ಖಾತೆ ಸಂಖ್ಯೆ:54035420117 ಕ್ಕೆ ಪ್ರವೇಶ ಶುಲ್ಕ ಮರುಪಾವತಿ ಮೊತ್ತವನ್ನು ವರ್ಗಾವಣೆ ಮಾಡಿರುವ ರೂ.5,59,89,708/–ಗಳನ್ನು ನಗದು ಪುಸ್ತಕದಲ್ಲಿ ಜಮೆ ತೆಗೆದುಕೊಂಡಿರದೆ ಹಾಗೂ ಸಾಮಾನ್ಯ ನಿಧಿ ಖಾತೆಯ ನಗದು ಪುಸ್ತಕದಲ್ಲಿ ಸಮನ್ವಯಗೊಳಿಸದೆ ಇರುವುದರಿಂದ ಪ್ರವೇಶ ಶುಲ್ಕ ಮರುಪಾವತಿಯ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗದ ಕಾರಣ ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:77/2018–19 ದಿನಾಂಕ:07.12.2018 ರಂದು ವಿಚಾರಣೆ ನೀಡಲಾಗಿದ್ದು, ಪೂರ್ಣ ವಿವರ ಒದಗಿಸದೆ ಇರುವುದರಿಂದ ಮೊಬಲಗು **ರೂ.5,59,89,708/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

2016–17ನೇ ಸಾಲಿನ ಲೆಕ್ಕಪರಿಶೋಧನೆ ಅವಧಿಯಲ್ಲಿ ನೀಡಲಾದ ವಿಚಾರಣೆ ಸಂಖ್ಯೆ:64/2018–19 ದಿನಾಂಕ:30.11.2018 ಹಾಗೂ ವಿಚಾರಣೆ ಸಂಖ್ಯೆ:7/2018–19 ದಿನಾಂಕ:05.11.2018 ನೀಡಿರುವ ವಿಚಾರಣೆಗೆ ಸಲ್ಲಿಸಿರುವ ಅನುಪಾಲನಾ ವರದಿಯಂತೆ ಈ ಕೆಳಕಂಡ ವಿವರದಲ್ಲಿ ತೋರಿಸಿರುವಂತೆ ಉಚಿತ ಪ್ರವೇಶಾತಿ ಶುಲ್ಕವನ್ನು ಶಿಷ್ಯವೇತನ ಖಾತೆಯಿಂದ ಸಾಮಾನ್ಯ ನಿಧಿ ಖಾತೆಗೆ ಜಮೆ ತೆಗೆದುಕೊಳ್ಳುವಾಗ ವರ್ಗಾಯಿಸಿರುವ ಮೊಬಲಗನ್ನು ಆಯಾ ದಿನಗಳಂದು ಜಮೆ ತೆಗೆದುಕೊಳ್ಳದೆ ನಗದು ಪುಸ್ತಕದಲ್ಲಿ ಸಮನ್ವಯಗೊಳಿಸದೆ ಇರುವುದರಿಂದ ನಿಖರವಾಗಿ ಶಿಷ್ಯವೇತನ ಖಾತೆಯ ಶುಲ್ಕ ಜಮೆಯಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗದೆ ಹಾಗೂ ನೀಡಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಂತೆ ಈ ಕೆಳಕಂಡ ವಿವರದಂತೆ ದೈನಂದಿನ ಜಮೆ ತೆಗೆದುಕೊಳ್ಳದೆ ಇರುವುದರ ವಿಚಾರವಾಗಿ ಸೂಕ್ತ ವಿವರಣೆ ನೀಡಬೇಕಾಗಿದೆ.

| ಕ್ರ.ಸಂ | ದಿನಾಂಕ | ಜಮೆ ಮೊತ್ತ |
|---|---|---|
| 1 | 29.08.2016 | 59,15,600 |
| 2 | 29.08.2016 | 8,30,626 |
| 3 | 06.07.2016 | 76,88,600 |
| 4 | 12.12.2016 | 13,61,100 |
| 5 | 27.09.2016 | 5,41,395 |
| 6 | 16.09.2016 | 14,47,275 |
| 7 | 20.08.2016 | 13,02,520 |
| 8 | 20.08.2016 | 2,26,465 |
| 9 | 10.08.2016 | 12,59,000 |
| 10 | 28.07.2016 | 6,41,550 |
| 11 | 28.07.2016 | 34,99,125 |
| 12 | 20.07.2016 | 18,18,375 |

| | | | | |
|---|---|---|---|---|
| | | 13 | 21.06.2016 | 11,93,550 |
| | | 14 | 09.06.2016 | 1,09,45,524 |
| | | 15 | 23.05.2016 | 1,53,410 |
| | | 16 | 23.05.2016 | 1,04,350 |
| | | 17 | 03.05.2016 | 10,25,300 |
| | | 18 | 02.05.2016 | 20,70,700 |
| | | 19 | 30.11.2016 | 1,39,65,243 |
| | | **ಒಟ್ಟು** | | **5,59,89,708** |

| | |
|---|---|
| | ಉತ್ತರ |
| | 2016–17ನೇ ಸಾಲಿನಲ್ಲಿ ಶಿಷ್ಯವೇತನ ಖಾತೆಯಿಂದ ಸಾಮಾನ್ಯ ನಿಧಿಗೆ ಪ್ರವೇಶ ಶುಲ್ಕ ಮರುಪಾವತಿ ವರ್ಗಾವಣೆಗೆ ಸಂಬಂಧಿಸಿದಂತೆ ದಿನನಿತ್ಯ ಸ್ವೀಕೃತಿ ಮೊತ್ತದಲ್ಲಿ ರೂ. 5,59,89,708/–ಮೊತ್ತವು ಸೇರಿಕೊಂಡಿರುತ್ತದೆ. ಈ ಸಂಬಂಧಿಸಿದಂತೆ ದಿನಾಂಕವಾರು ಹಾಗೂ ಮಾಹೆವಾರು ಪಟ್ಟಿಯನ್ನು ತಯಾರಿಸಿ ವಿವರದೊಂದಿಗೆ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | ವಿವರ |
| 30 | **30 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ ಆದೇಶದ ಕಾರ್ಯ ಹಂಚಿಕೆಯ ಪ್ರತಿಯನ್ನು ಹಾಜರುಪಡಿಸದೆ ಇರುವುದು :–** <br><br> 2016–17ನೇ ಸಾಲಿನ ವಿಶ್ವವಿದ್ಯಾನಿಲಯದ, ವೇತನ ಬಿಲ್ಲು, ಸಾದಿಲ್ವಾರು ಬಿಲ್ಲು, ವಿದ್ಯುತ್ ಕಾಮಗಾರಿ ಬಿಲ್ಲು, ಎ.ಸಿ ಬಿಲ್ಲು ಇತ್ಯಾದಿ ಪರಿಶೀಲನೆಗಾಗಿ ಮೇಲು ಸಹಿಗಾಗಿ ಶಾಸನಬದ್ಧ ಅಧಿಕಾರಿಗಳು ಕುಲಸಚಿವರು ಹಣಕಾಸು ಅಧಿಕಾರಿಗಳು ಸರ್ಕಾರದ ಅಧೀನ ಕಾರ್ಯಪಾಲಕ ಅಭಿಯಂತರರು, ತಾಂತ್ರಿಕ/ಆರ್ಥಿಕ ಆಡಳಿತಾತ್ಮಕ ಅನುಮೋದನೆ ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ Delegation of Financial power ನ್ನು ಅನುಮೋದನೆ ಆರ್ಥಿಕ ಕಾರ್ಯ ಹಂಚಿಕೆಯ ಆದೇಶದ ಪ್ರತಿ ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:2/2018–19 ದಿನಾಂಕ:03.11.2018 ವಿಚಾರಣೆ ನೀಡಲಾಗಿದ್ದು, ವಿಚಾರಣೆ ವಿವರಣೆ ಆದೇಶದ ಪ್ರತಿ ಹಾಜರುಪಡಿಸದೆ ಇರುವುದರಿಂದ 2016–17ನೇ ಸಾಲಿನಲ್ಲಿ ವೆಚ್ಚ ಭರಿಸಲಾದ ಕಾಮಗಾರಿ ಅಂದಾಜು ಮೊತ್ತ ವೆಚ್ಚಗಳು ಸಾಧ್ಯವಾಗಿದೆ. ಈ ಕುರಿತು ಸೂಕ್ತ ವಿವರಣೆಯನ್ನು ಹಾಗೂ ಪ್ರತ್ಯಾಧಿಕಾರದ ಅನುಮೋದಿತ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದರಿಂದ ವಿಶ್ವವಿದ್ಯಾನಿಲಯ ಉಪಲೆಕ್ಕ ಶೀರ್ಷಿಕೆ ವಾರ್ಷಿಕ ಲೆಕ್ಕಪತ್ರ ಮಾಡಿರುವ ವೆಚ್ಚವು ಕ್ರಮಬದ್ಧವಾಗಿಲ್ಲದ ಕಾರಣ ಕಂಡಿಕೆ ಸೂಕ್ತ ದಾಖಲಾತಿಯೊಂದಿಗೆ ವಿವರಣೆ ನೀಡಲು ತಿಳಿಸಿದೆ. |
| | ಉತ್ತರ |
| | ಮುಂದಿನ ಲೆಕ್ಕತಪಾಸಣೆ ಸಮಯದಲ್ಲಿ ಹಾಜರುಪಡಿಸಲಾಗುವುದು. |

| | ವಿವರ |
|---|---|
| 31 | **<u>31. ಆಸ್ತಿವಹಿ ನಿರ್ವಹಿಸದೆ ಇರುವುದು :–</u>**<br><br>2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಒಟ್ಟು ಆಸ್ತಿಗಳ ವಿವರವನ್ನು ನಿಗದಿತ ನಮೂನೆಯಲ್ಲಿ ದಾಖಲಿಸಿ ದಿನಾಂಕ:31.03.2017ರ ಅಂತ್ಯಕ್ಕೆ KFC ಅನುಚ್ಛೇದ 165 ಪ್ರಪತ್ರ 33ರ ರೀತ್ಯಾ ಜಡವಸ್ತು ದಾಸ್ತಾನು ವಹಿಯಲ್ಲಿ ಕಟ್ಟಡಗಳು, ಪಿಠೋಪಕರಣಗಳು, ಪರೀಕ್ಷಾ ಕೇಂದ್ರಗಳು, ಮೌಲ್ಯಮಾಪನ ಕಟ್ಟಡ, ಬಾಡಿಗೆ ನೀಡಿರುವ ಕಟ್ಟಡಗಳು, ವಸತಿ ಗೃಹಗಳು, ಲ್ಯಾಪ್‌ಟಾಪ್, ಕಂಪ್ಯೂಟರ್ ಪ್ರಯೋಗಾಲಯದ ಉಪಕರಣಗಳು, ಬಯಲು ಮಂದಿರ, ಘಟಿಕೋತ್ಸವ ಭವನ, ಸಮಾರಂಭ ಸ್ಥಳಗಳು, ಅಂಚೆ ಕಛೇರಿ ಇತ್ಯಾದಿ ಸ್ಥಿರ ಆಸ್ತಿಗಳ ಚರಾಸ್ತಿ ವಿವರವನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸಿ ಎಲ್ಲಾ ಆಸ್ತಿಗಳ ಬಗ್ಗೆ ವಾರ್ಷಿಕ ಭೌತಿಕ ಪರಿಶೋಧನೆ ಮಾಡಿ ಆಸ್ತಿಯ ಮೌಲ್ಯ, ಚದರಡಿ ಇತ್ಯಾದಿ ವಿವರವನ್ನು ದಾಖಲು ಮಾಡಿ ಆಸ್ತಿ ಹೊಣೆಗಾರಿಕೆಯ ತಾಳೆ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಮುಖ್ಯಸ್ಥರು ಹಾಗೂ ಚಾರ್ಟೆಡ್ ಅಕೌಂಟೆಡ್‌ಗಳಿಂದ ಆಸ್ತಿಯ ಹೊಣೆಗಾರಿಕೆಯ ಪಟ್ಟಿ ತಯಾರಿಸಿ ಭೌತಿಕವಾಗಿ ಪರಿಶೀಲಿಸಿ ವರದಿ ಸಲ್ಲಿಸಬೇಕಾಗಿರುತ್ತದೆ. ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕಾಗಿದ್ದು, ಆಸ್ತಿವಹಿ ನಿರ್ವಹಿಸದೆ ಇರುವುದರಿಂದ ಸ್ಥಿರಾಸ್ತಿ/ಚರಾಸ್ತಿ ಮೇಲೆ ಉಂಟಾಗುವ ನಷ್ಟದ ಬಗ್ಗೆ ವಿಶ್ವವಿದ್ಯಾನಿಲಯದ ಸಂಬಂಧಿಸಿದ ಅಧಿಕಾರಿಗಳು ನೌಕರರ ಮೇಲೆ ಆಡಳಿತಾತ್ಮಕ ಕ್ರಮಕೈಗೊಂಡು ನಿರ್ವಹಿಸಲು ಸೂಚಿಸಿದೆ. |
| | ಉತ್ತರ |
| | ಕ್ರಮವಹಿಸಲಾಗುವುದು. |
| | ವಿವರ |
| 32 | **<u>32. 2016–17ನೇ ಸಾಲಿಗೆ ಲೆಕ್ಕಪರಿಶೋಧನೆಗೆ ಸಾಮಾನ್ಯ ನಿಧಿ ಖಾತೆಯ ರಶೀದಿ ಪುಸ್ತಕಗಳ ದಾಸ್ತಾನು ಲೆಕ್ಕದ ರಶೀದಿ ಪುಸ್ತಕದ ವಿವರಣೆ ಹಾಗೂ ವಿವರ :–</u>**<br><br>ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಯಲ್ಲಿ ಉಪಯೋಗಿಸಲಾಗುತ್ತಿರುವ ಬಳಕೆ ಆಗಿರುವ ರಶೀತಿ ಪುಸ್ತಕಗಳಿಗೆ ಸಂಬಂಧಪಟ್ಟಂತೆ ದಾಸ್ತಾನು ವಹಿ, ಉಪಯೋಗಿಸದೆ ಖಾಲಿ ಇರುವ ಪುಸ್ತಕ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:35/19.11.2018 ರಂದು ವಿಚಾರಣೆ ನೀಡಲಾಗಿದ್ದು, ದಿನಾಂಕ:10.01.2019 ರಂದು ವಿವರಣೆಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.<br><br>2016–17ನೇ ಸಾಲಿನ 'ಸಾಮಾನ್ಯ ನಿಧಿ' ರಶೀದಿ ದಾಸ್ತಾನು ವಹಿ ಬಳಕೆಯಾಗಿರುವ ರಶೀದಿ ಪುಸ್ತಕ ಹಾಗೂ ಉಪಯೋಗಿಸದೇ ಇರುವ ರಶೀದಿ ಪುಸ್ತಕ, ನಗದು ಪುಸ್ತಕ, ದಿನವಹಿ ಪುಸ್ತಕ ಮತ್ತು ಚಲನ್‌ಗಳು ಜಮಾ ಪುಸ್ತಕ ಹಾಗೂ ಬ್ಯಾಂಕ್ ಸ್ಕ್ರೋಲ್‌ಗಳನ್ನು ಹಾಜರುಪಡಿಸಿರುತ್ತಾರೆ. |

| | | | |
|---|---|---|---|
| ಕ್ರ.ಸಂ | ವಿತರಿಸಿದ ಸ್ಥಳ/ಕೇಂದ್ರ | ವಿತರಿಸಿದ ರಶೀದಿ ಪುಸ್ತಕಗಳ ಕ್ರ.ಸಂ | ಒಟ್ಟು ರಶೀದಿ ಪುಸ್ತಕ ಸಂಖ್ಯೆ |
| 1 | ದಾವಣಗೆರೆ | 1337 ರಿಂದ 1340 | 4 |
| 2 | ಶಿವಮೊಗ್ಗ | 1333 ರಿಂದ 1336 | 4 |
| 3 | ಹಾಸನ | 1341 ರಿಂದ 1344 | 4 |

ಮೇಲಿನ ಕೇಂದ್ರಗಳಿಗೆ 2018-19ನೇ ಸಾಲಿನ ಪ್ರವೇಶಾತಿ ಅವಧಿ ಕಡಿಮೆ ಇದ್ದುದ್ದರಿಂದ ವಿಶ್ವವಿದ್ಯಾನಿಲಯದ ಸುತ್ತೋಲೆ ಸಂಖ್ಯೆ:ಕರಾಮುವಿ/ಆರ್.ಪಿ.ಎ/51/2018-19 ದಿನಾಂಕ: 01.10.2018ರಂತೆ ಪ್ರವೇಶಾತಿ ಅವಧಿಯೊಳಗೆ ಬರುವ ಎಲ್ಲಾ ರಜಾದಿನಗಳಲ್ಲಿ ಹಾಗೂ ಬ್ಯಾಂಕ್ ರಜಾ ದಿನಗಳಲ್ಲಿ ಪ್ರವೇಶಾತಿ ಶುಲ್ಕ ಪಾವತಿಸಿಕೊಳ್ಳುವ ಸಂಬಂಧ ಸದರಿ ಕೇಂದ್ರಗಳಿಗೆ ಖುದ್ದಾಗಿ ನೀಡಿ ಪ್ರವೇಶಾತಿ ನಿರ್ದೇಶಕರಿಂದ ಸ್ವೀಕೃತಿ ಪಡೆಯಲಾಗಿದೆ.

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

33 **33. ಪ್ರಸಾರಾಂಗದಲ್ಲಿ ಬಳಕೆಯಾಗಿರುವ ರಶೀದಿ ಪುಸ್ತಕಗಳ ದಾಸ್ತಾನು ಲೆಕ್ಕವಿತರಣೆ ಪುಸ್ತಕವನ್ನು ಕ್ರಮಬದ್ಧವಾಗಿ ನಿರ್ವಹಿಸದೆ ಇರುವುದು :-**

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಪ್ರಸಾರಂಗದಲ್ಲಿ ಬಳಕೆಯಾಗಿರುವ ರಶೀದಿ ಪುಸ್ತಕಗಳನ್ನು ಪಡೆದುಕೊಂಡಿದ್ದು, ವಿತರಣೆಯಾಗಿರುವುದು, ಬಾಕಿ ಉಳಿದಿರುವ ರಶೀದಿ ಪುಸ್ತಕಗಳ ವಿವರವನ್ನು ದಾಖಲು ಮಾಡಿ ಬಾಕಿ ಎಷ್ಟಿದೆ ಎಂಬುದನ್ನು ನಿಖರವಾಗಿ ತೋರಿಸದೆ ಇರುವುದರಿಂದ ಭೌತಿಕವಾಗಿ ಎಷ್ಟಿದೆ ಎಂಬುದನ್ನು ಪರಿಶೀಲಿಸಲು ಸಾದ್ಯವಿರುವುದಿಲ್ಲ. ದಾಸ್ತಾನು ಲೆಕ್ಕದಲ್ಲಿ ದಾಖಲಿಸಿರುವಂತೆ ರಶೀದಿ ಪುಸ್ತಕ ಸಂಖ್ಯೆ:76 ರಿಂದ 104ರ ವರೆಗೆ ಕ್ರಮಬದ್ಧವಾಗಿ ವಾರ್ಷಿಕವಾರು ವಿತರಣೆಯನ್ನು ತೋರಿಸದೆ ಇರುವುದರಿಂದ 2015-16ನೇ ಸಾಲಿನಿಂದ 2016-17 ಮತ್ತು 2018-19 ಈ ರೀತಿಯಾಗಿ ಮಧ್ಯೆ ರಶೀದಿ ಪುಸ್ತಕಗಳು ಮಧ್ಯಂತರ ವಿತರಣೆಯಾಗಿರುತ್ತದೆ. ಈ ರೀತಿ ಕ್ರಮಸಂಖ್ಯೆಗೆ ತಕ್ಕಂತೆ ವಾರ್ಷಿಕವಾರು ವಿತರಣೆಯಾಗಿರುತ್ತದೆ ಹಾಗೂ ಸಂಬಂಧಿಸಿದ ಹಣಕಾಸು ವಿಭಾಗದಿಂದ ಭೌತಿಕ ತಪಾಸಣೆ ಕೈಗೊಳ್ಳದೆ ಲೋಪದೋಷ ಕಂಡುಬಂದಿದೆ. ಈ ಬಗ್ಗೆ ಸ್ಪಷ್ಟ ವಿವರಣೆ ಬಗ್ಗೆ ವಿಚಾರಣೆ ಸಂಖ್ಯೆ:65/30.11.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದ ಕಾರಣ ಉಗ್ರಾಣದ ಅಧೀಕ್ಷಕರು, ಉಪಕುಲಸಚಿವರು ಭೌತಿಕವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಿದೆ.

ಉತ್ತರ

ಪ್ರಸಾರಾಂಗದಲ್ಲಿ ರಶೀದಿ ಪುಸ್ತಕ ಬಳಕೆ ಅಲ್ಲದೆ ಹೊರಗಡೆ ನಡೆಯುವಂತ ಸಮ್ಮೇಳನದಲ್ಲಿ ಪುಸ್ತಕ

| | |
|---|---|
| | ಮಾರಾಟ ಮಾಡಲು ಹೊದ ಸಂದರ್ಭದಲ್ಲಿ ರಶೀದಿ ಪುಸ್ತಕಗಳು ಬಳಕೆ ಮಾಡಲಾಗಿದ್ದು, ರಶೀದಿ ಪುಸ್ತಕಗಳು ಕ್ರಮ ಬದ್ದವಾಗಿ ವಿತರಣೆ ಮಾಡಲಾಗಿರುವುದಿಲ್ಲ. ಪ್ರಸಾರಂಗದಲ್ಲಿ ಮೂರು ವಿಷಯದ ಪುಸ್ತಕಗಳಿದ್ದು ಆ ವಿಷಯಕ್ಕೆ ಸಂಬಂಧಿಸಿದಂತೆ ಆಯಾಯ ರಶೀದಿ ಪುಸ್ತಕಗಳನ್ನು ಬಳಸಲಾಗುತ್ತಿದ್ದು ಆ ಪುಸ್ತಕಗಳು ಮುಗಿಯುವ ತನಕ ಹೊಸ ಪುಸ್ತಕ ಬಳಸಲಾಗುವುದಿಲ್ಲ. ಆದ್ದರಿಂದ ರಶೀದಿ ಪುಸ್ತಕಗಳು ಯಾವುದೇ ರೀತಿಯ ಮಧ್ಯಂತರ ಬಳಕೆಯಾಗಿರುವುದಿಲ್ಲ. ಈ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಈ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 34 | **34. ಪ್ರಸಾರಾಂಗದ ಪುಸ್ತಕ ಮಾರಾಟ ಮಾಡಿದ ಒಟ್ಟು ಜಮೆ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ :–** |

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಲೆಕ್ಕಶೀರ್ಷಿಕೆ 122ಕ್ಕೆ ಸಂಬಂಧಿಸಿದಂತೆ, ಪ್ರಸಾರಾಂಗದ ಪುಸ್ತಕಗಳ ಮಾರಾಟದಿಂದ ಬಂದ ಜಮೆ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಂಡಿರುವ ಜಮೆಯಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಈ ಬಗ್ಗೆ ವಿಚಾರಣೆ ಸಂಖ್ಯೆ:66/ದಿನಾಂಕ:04.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರ ನೀಡದೆ ಹಾಗೂ ಲೆಕ್ಕಸಮನ್ವಯದ ಬಗ್ಗೆ ಹಣಕಾಸು ಅಧಿಕಾರಿಗಳಿಂದ ದೃಢೀಕರಿಸಿ ಲೆಕ್ಕಸಮನ್ವಯ ವರದಿಯನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಸೂಕ್ತ ವಿವರಣೆ ನೀಡಬೇಕಂದು ತಿಳಿಸುತ್ತಾ

| | |
|---|---|
| ಮಾರಾಟ ನಗದು ಪುಸ್ತಕದ ಪ್ರಕಾರ ಮಾರಾಟದಿಂದ ಬಂದ ರೂ. | 66,952 |
| 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಜಮೆಯಾಗಿರುವುದು | 73,660 |
| ವ್ಯತ್ಯಾಸ | 6,708 |

ವಾಸ್ತವಿಕವಾಗಿ ಮಾರಾಟದ ಜಮೆ ಮೊತ್ತಕ್ಕಿಂತ ವಾರ್ಷಿಕ ಲೆಕ್ಕಪತ್ರದಲ್ಲಿ ಹೆಚ್ಚುವರಿಯಾಗಿ ತೆಗೆದುಕೊಂಡಿರುವುದು ಈ ಹೆಚ್ಚುವರಿ ಬಾಬ್ತು ಯಾವ ಮೂಲಗಳಿಂದ ಸ್ವೀಕರಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟ ವಿವರಣೆ ನೀಡಬೇಕೆಂದು ತಿಳಿಸುತ್ತಾ ಸದರಿ 2016–17ನೇ ಸಾಲಿಗೆ ನಿರ್ವಹಿಸಿರುವ ದೈನಂದಿನ ಮಾರಾಟ ನಗದು ಪುಸ್ತಕವನ್ನು ಕ್ರಮಬದ್ಧವಾಗಿ ವಸೂಲಾತಿ ವಿವರವನ್ನು ದಾಖಲು ಮಾಡಿರುವುದಿಲ್ಲ. ಇದು ಪ್ರಮುಖವಾದ ದಾಖಲೆಯಾಗಿದ್ದು, ದೈನಂದಿನ ಮಾರಾಟದ ವಸೂಲಿ ಜಮಾ ಮಾಡಿರುವುದಿಲ್ಲ. ಇದು ಪ್ರಮುಖವಾದ ದಾಖಲೆಯಾಗಿದ್ದು, ದೈನಂದಿನ ಮಾರಾಟದ ವಸೂಲಿ ಜಮಾ ಹಾಗೂ ನಗದು ಪುಸ್ತಕ/ದಿನವಹಿ ಪುಸ್ತಕ ಈ ವ್ಯತ್ಯಾಸದ ಬಗ್ಗೆ ವಿವರಣೆ ನೀಡಲು ತಿಳಿಸಿದೆ. ವಿಚಾರಣೆ ಸಂಖ್ಯೆ:66/04.12.2018 ರಂದು ನೀಡಿರುವ ವಿಚಾರಣೆಗೆ ದಿನಾಂಕ:30.12.2018 ರಂದು ನೀಡಿರುವ ಅನುಪಾಲನ ವರದಿಯನ್ನು ಪಾಲಿಸಿದಾಗ ವ್ಯತ್ಯಾಸದ ಮೊತ್ತ ರೂ.6,708/–ಗಳಿಗೆ ಸಂಬಂಧಿಸಿದಂತೆ ನಗದು ಪುಸ್ತಕದಲ್ಲಿ ಜಮೆಯಾಗಿರುವ ಲೆಕ್ಕದೊಂದಿಗೆ ಅನುಪಾಲನ ವರದಿ ನೀಡಲು ಸೂಚಿಸಿದೆ.

ವಿಚಾರಣೆ ಸಂಖ್ಯೆ:65/30.11.2018ಕ್ಕೆ ಅನುಪಾಲನ ವರದಿ ಪರಿಶೀಲಿಸಿದಂತೆ ರಶೀದಿ ಪುಸ್ತಕ ದೈನಂದಿನ

| | |
|---|---|
| | ಬಳಕೆ ವಿತರಣೆ ತೋರಿಸಿರುವಂತೆ ಸಂಬಂಧಿಸಿದ ವಿಭಾಗ, ಇಲಾಖಾ ಮುಖ್ಯಸ್ಥರಿಂದ ಸಹಿ ಪಡೆದು ಭೌತಿಕವಾಗಿ ಪರಿಶೀಲಿಸದ ಕಾರಣ ಕಂಡಿಕೆಗೆ ಮರುವಿವರಣೆ ನೀಡಲು ತಿಳಿಸಿದೆ. ವಿವರವನ್ನು **ಅನುಬಂಧ (11)ರಲ್ಲಿ ನೀಡಿದೆ.** |
| | ಉತ್ತರ |
| | 2016–17 ನೇ ಸಾಲಿನಲ್ಲಿ ಪ್ರಸಾರಾಂಗ ವಿಭಾಗದಿಂದ ಮಾರಾಟವಾದ ಪುಸ್ತಕಗಳ ವಿವರಗಳು ಈ ಕೆಳಕಂಡಂತಿದೆ.<br><br>1. ಪ್ರಸಾರಾಂಗ ಪುಸ್ತಕಗಳು ರೂ. 48,495.00<br><br>2. ಜನಪ್ರಿಯ ಕನ್ನಡ ಮಾಲೆ ರೂ. 9,457.00<br><br>3. ಶಿಕ್ಷಣಶಾಸ್ತ್ರ ವಿಷಯ ಕೋಶ ಸಂಪುಟ ರೂ 9,000.00<br><br>2016–17ನೇ ಸಾಲಿನಲ್ಲಿ ಒಟ್ಟು ಮಾರಾಟವಾದ ಪುಸ್ತಕಗಳ ಮೊತ್ತ ರೂ. 66,952.00<br><br>2016–17ನೇ ವಾರ್ಷಿಕ ಲೆಕ್ಕ ಪತ್ರದಲ್ಲಿ ಜಮೆಯಾಗಿರುವ ಮೊತ್ತ ರೂ 73,660.00 ಗಳಾಗಿರುತ್ತದೆ. ಮಾರಾಟದಿಂದ ಬಂದಿರುವ ಮೊತ್ತಕ್ಕೂ ವಾರ್ಷಿಕ ಲೆಕ್ಕ ಪತ್ರದಲ್ಲಿ ಜಮೆಯಾಗಿರುವ ಮೊತ್ತಕ್ಕೆ ವ್ಯತ್ಯಾಸದ ಮೊತ್ತ ರೂ. 6,708.00 ಗಳಾಗಿರುತ್ತದೆ. ಈ ವ್ಯತ್ಯಾಸದ ಮೊತ್ತವು 2015–16ನೇ ಸಾಲಿನ ಮೊತ್ತವಾಗಿರುತ್ತದೆ ಎಂಬ ಅಂಶವನ್ನು ಲೆಕ್ಕತಪಾಸಣೆಯ ಸಮಯದಲ್ಲಿ ದಾಖಲೆಯೊಂದಿಗೆ ವಿವರಿಸಲಾಗಿದೆ. ಆದುದರಿಂದ ಸದರಿ ಕೈಬಿಡಬೇಕೆಂದು ಕೋರಲಾಗಿದೆ. |
| | **ವಿವರ** |
| 35 | **35. ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲಿಸಲಾಗಿ ಉಪಯೋಗಿಸದೆ ಖಾಲಿ ಉಳಿದಿರುವ ರಶೀದಿ ಪುಸ್ತಕಗಳ ವಿವರ :–**<br><br>1. ದಿನಾಂಕ:13.11.2018 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲಿಸಲಾಗಿ ಒಟ್ಟು 155 ರಶೀದಿ ಪುಸ್ತಕಗಳು ರಶೀದಿ ಪುಸ್ತಕ ಸಂಖ್ಯೆ:1346 ರಿಂದ 1500 (92251 ರಿಂದ 100000) ರವರೆಗೆ ಉಪಯೋಗಿಸದೆ ಖಾಲಿ ಉಳಿದಿದ್ದು, 50 ಹಾಳೆಗಳ ದ್ವಿಪ್ರತಿಯಲ್ಲಿರುತ್ತದೆ ಹಾಗೂ ದಾಸ್ತಾನಿನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ವಿವರ ಲಗತ್ತಿಸಿದೆ.<br><br>2. ದಿನಾಂಕ:13.11.2018 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿಗೃಹಕ್ಕೆ ಸಂಬಂಧಿಸಿದ ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲಿಸಲಾಗಿ ರಶೀದಿ ಪುಸ್ತಕ ಸಂಖ್ಯೆ:1282ರಲ್ಲಿ ರಶೀದಿ ಸಂಖ್ಯೆ 089070 ರಿಂದ 089100 ರವರೆಗೆ ಭಾಗಶಃ ಖಾಲಿ ಉಳಿದಿದ್ದು, ಪೂರ್ಣ ಖಾಲಿ |

ಉಳಿದಿರುವ ರಶೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ಯಿಂದ | ವರೆಗೆ |
|---|---|---|---|
| 1 | 1283 | 089101 | 089150 |
| 2 | 1284 | 089151 | 089200 |
| 3 | 1285 | 089201 | 089250 |
| 4 | 1286 | 089251 | 089300 |

3. ದಿನಾಂಕ:13.11.2018 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಾಸ್ಟೆಲ್ ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನುವಹಿ ಪರಿಶೀಲಿಸಲಾಗಿ ರಶೀದಿ ಪುಸ್ತಕ ಸಂಖ್ಯೆ:1272ರಲ್ಲಿ ರಶೀದಿ ಸಂಖ್ಯೆ:088554 ರಿಂದ 088600 ರವರೆಗೆ ಭಾಗಶಃ ಖಾಲಿ ಉಳಿದಿದ್ದು, ಪೂರ್ಣ ಖಾಲಿ ಉಳಿದಿರುವ ರಶೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ಯಿಂದ | ವರೆಗೆ |
|---|---|---|---|
| 1 | 1273 | 088601 | 088650 |
| 2 | 1274 | 088651 | 088700 |
| 3 | 1275 | 088701 | 088750 |

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದ 2016-17ನೇ ಸಾಲಿನಲ್ಲಿ ವಿವಿಧ ರೀತಿಯ ಶುಲ್ಕ ಸ್ವೀಕೃತಿಗೆ ಉಪಯೋಗಿಸಿರುವ ರಶೀದಿ ಪುಸ್ತಕಗಳ ವಿವರ**

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ | | ರಶೀದಿ ದಿನಾಂಕ | | ಷರಾ |
|---|---|---|---|---|---|---|
| | | ಯಿಂದ | ವರೆಗೆ | ಪ್ರಾರಂಭ | ಮುಕ್ತಾಯ | |
| 1 | 355 | 017715 | 017750 | 01.04.2016 | 17.08.2016 | 2015-16ನೇ ಸಾಲಿನ ಭಾಗಶಃ 2016-17ನೇ ಸಾಲಿಗೆ ಪೂರ್ಣಗೊಂಡಿದೆ |
| 2 | 381 | 019001 | 019047 | 17.08.2016 | 25.03.2017 | 2016-17ನೇ ಸಾಲಿಗೆ ಭಾಗಶಃ ಪರಿಶೀಲಿಸಲಾಗಿದೆ |

**ವಿವರಗಳನ್ನು ಅನುಬಂಧ (12)ರಲ್ಲಿ ಲಗತ್ತಿಸಿದೆ.**

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

**ವಿವರ**

36 **36. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹ 2016-17ನೇ ಲೆಕ್ಕಪರಿಶೋಧನೆಗೆ ಹಾಜರುಪಡಿಸಿ ಪರಿಶೀಲಿಸಿರುವ ರಶೀತಿ ಪುಸ್ತಕಗಳ ವಿವರ :-**

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ | | ದಿನಾಂಕ | | ಷರಾ |
|---|---|---|---|---|---|---|
| | | ಯಿಂದ | ವರೆಗೆ | ಪ್ರಾರಂಭ | ಮುಕ್ತಾಯ | |
| 1 | 356 | 017787 | 017800 | 01.04.2016 | 06.04.2016 | ಹಿಂದಿನ ಸಾಲಿನ ಭಾಗಶಃ 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 2 | 357 | 017801 | 017850 | 06.04.216 | 23.04.2016 | 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 3 | 358 | 017851 | 017900 | 23.04.2016 | 04.05.2016 | |
| 4 | 359 | 017901 | 017950 | 04.05.2016 | 15.05.2016 | |
| 5 | 360 | 017951 | 018000 | 15.05.2016 | 26.05.2016 | |
| 6 | 361 | 018001 | 018050 | 26.05.2016 | 03.06.2016 | |
| 7 | 362 | 018051 | 018100 | 04.06.2016 | 17.06.2016 | 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 8 | 363 | 018101 | 018150 | 17.06.2016 | 01.07.2016 | |
| 9 | 364 | 018151 | 018200 | 02.07.2016 | 19.07.2016 | |
| 10 | 365 | 018201 | 018250 | 20.07.2016 | 29.07.2016 | |
| 11 | 426 | 021251 | 021300 | 31.07.2016 | 11.08.2016 | 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 12 | 427 | 021301 | 021350 | 11.08.2016 | 31.08.2016 | |
| 13 | 428 | 021351 | 021400 | 01.09.2016 | 25.09.2016 | |
| 14 | 429 | 021401 | 021450 | 26.09.2016 | 13.10.2016 | |
| 15 | 430 | 0021451 | 021500 | 13.10.2016 | 27.10.2016 | |
| 16 | 431 | 021501 | 021550 | 27.10.2016 | 11.11.2016 | |
| 17 | 432 | 021511 | 021600 | 11.11.2016 | 26.11.2016 | |
| 18 | 433 | 021601 | 021650 | 26.11.2016 | 12.12.2016 | |
| 19 | 434 | 021651 | 021700 | 12.12.2016 | 28.12.2016 | |
| 20 | 435 | 021701 | 021750 | 28.12.2016 | 03.01.2017 | |
| 21 | 436 | 021751 | 021800 | 03.01.2017 | 11.01.2017 | |
| 22 | 437 | 021801 | 021850 | 12.01.2017 | 28.01.2017 | |
| 23 | 438 | 021851 | 021900 | 28.01.2017 | 12.02.2017 | |
| 24 | 439 | 021901 | 021950 | 12.02.2017 | 18.02.2017 | |
| 25 | 440 | 021955 | 022000 | 20.02.2017 | 06.03.2017 | |
| 26 | 1241 | 087001 | 087050 | 07.03.2017 | 25.03.2017 | |
| 27 | 1242 | 087051 | 087061 | 26.03.2017 | 31.03.2017 | 2016–17ನೇ ಸಾಲಿಗೆ ಭಾಗಶಃ ಪರಿಶೀಲಿಸಿದೆ. |

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹ 2016–17ನೇ ಲೆಕ್ಕಪರಿಶೋಧನೆಗೆ ಹಾಜರುಪಡಿಸಿ ಪರಿಶೀಲಿಸಿರುವ ರಶೀತಿ ಪುಸ್ತಕಗಳ ವಿವರ :–**

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ | | ದಿನಾಂಕ | | ಷರಾ |
|---|---|---|---|---|---|---|
| | | ಯಿಂದ | ವರೆಗೆ | ಪ್ರಾರಂಭ | ಮುಕ್ತಾಯ | |
| 1 | 349 | 017447 | 017450 | 06.04.2016 | 06.04.2016 | 2016–17ನೇ ಸಾಲಿಗೆ |

| | | | | | | |
|---|---|---|---|---|---|---|
| 2 | 350 | 017451 | 017500 | 06.04.2016 | 18.04.2016 | ಪೂರ್ಣ ಪರಿಶೀಲಿಸಲಾಗಿದೆ. |
| 3 | 351 | 017501 | 017550 | 18.04.2016 | 22.04.2016 | |
| 4 | 352 | 017551 | 017600 | 22.04.2016 | 29.04.2016 | |
| 5 | 366 | 018251 | 018300 | 29.04.2016 | 07.05.2016 | |
| 6 | 367 | 018301 | 018350 | 07.05.2016 | 10.05.2016 | 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 7 | 368 | 018351 | 018400 | 11.05.2016 | 11.05.2016 | |
| 8 | 369 | 018401 | 018450 | 12.05.2016 | 12.05.2016 | |
| 9 | 370 | 018451 | 018500 | 13.05.2016 | 13.05.2016 | |
| 10 | 371 | 018501 | 018550 | 13.05.2016 | 16.05.2016 | |
| 11 | 372 | 018551 | 018600 | 17.05.2016 | 19.05.2016 | 2016–17ನೇ ಸಾಲಿಗೆ ಪೂರ್ಣ ಪರಿಶೀಲಿಸಲಾಗಿದೆ. |
| 12 | 373 | 018601 | 018650 | 19.05.2016 | 28.05.2016 | |
| 13 | 374 | 018651 | 018700 | | 06.06.2016 | |
| 14 | 375 | 018701 | 018750 | 13.06.2016 | 15.06.2016 | |
| 15 | 376 | 018751 | 018800 | 18.06.2016 | 30.06.2016 | |
| 16 | 377 | 018801 | 018850 | 08.07.2016 | 23.07.2016 | |
| 17 | 378 | 018851 | 018900 | 23.07.2016 | 25.07.2016 | |
| 18 | 379 | 018901 | 018950 | 25.07.2016 | 25.07.2016 | |
| 19 | 380 | 018951 | 019000 | 06.08.2016 | 27.08.2016 | |
| 20 | 382 | 019051 | 019100 | 27.08.2016 | 27.08.2016 | |
| 21 | 383 | 019101 | 019150 | 27.08.2016 | 16.10.2016 | |
| 22 | 384 | 019151 | 019200 | 17.10.2016 | 02.11.2016 | |
| 23 | 385 | 019201 | 019250 | 03.11.2016 | 08.11.2016 | |
| 24 | 386 | 019251 | 019300 | 08.11.2016 | 11.11.2016 | |
| 25 | 387 | 019301 | 019350 | 11.11.2016 | 17.12.2016 | |
| 26 | 388 | 019351 | 019400 | 19.12.2019 | 29.12.2016 | |
| 27 | 389 | 019401 | 019450 | 29.12.2016 | 30.12.2016 | |
| 28 | 390 | 019451 | 019500 | 30.12.2016 | 31.12.2016 | |
| 29 | 1231 | 086501 | 086550 | 02.01.2017 | 02.01.2017 | |
| 30 | 1232 | 086551 | 086600 | 02.01.2017 | 03.01.2017 | |
| 31 | 1233 | 086601 | 086650 | 04.01.2017 | 21.02.2017 | |
| 32 | 1234 | 086651 | 086679 | 09.02.2017 | 30.03.2017 | 2016–17ನೇ ಸಾಲಿಗೆ ಭಾಗಶಃ ಪರಿಶೀಲಿಸಲಾಗಿದೆ. |

| | |
|---|---|
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 37 | **37. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿಗೃಹಗಳ ಕೊಠಡಿ ಬಾಡಿಗೆಯನ್ನು ನಿಗದಿತ ದರಕ್ಕಿಂತ** |

| | |
|---|---|
| | **<u>ಕಡಿಮೆ ದರದಲ್ಲಿ ವಸೂಲಿ ಮಾಡಿರುವುದು :-</u>**<br><br>2016-17ನೇ ಸಾಲಿನ ಲೆಕ್ಕಪರಿಶೋಧನೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ರಶೀದಿ ಪುಸ್ತಕಗಳು, ದಿನವಹಿ, ಜಮಾ ಪುಸ್ತಕ ಹಾಗೂ ಅತಿಥಿಗಳು ತಂಗಿರುವ ವಿವರದ ವಹಿಗಳನ್ನು ಪರಿಶೀಲಿಸಿದಾಗ ಕೊಠಡಿಗಳಿಗೆ ನಿಗದಿಪಡಿಸಿದ ಬಾಡಿಗೆ ದರಕ್ಕಿಂತ ಕಡಿಮೆ ದರದಲ್ಲಿ ಬಾಡಿಗೆಯನ್ನು ವಸೂಲಿ ಮಾಡಿ ಜಮೆ ಮಾಡಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಇಂಶಾ/2013-14 ದಿನಾಂಕ:04.06.2013ರಲ್ಲಿ ಅತಿಥಿಗೃಹಗಳ ಕೊಠಡಿಗಳ ಬಾಡಿಗೆ ದರವನ್ನು ನಿಗದಿಪಡಿಸಲಾಗಿರುತ್ತದೆ. ಆದಾಗ್ಯೂ ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರದಲ್ಲಿ ಕೊಠಡಿ ಬಾಡಿಗೆ ವಸೂಲಿ ಮಾಡಲಾಗಿರುವುದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಿದಂತಾಗಿರುತ್ತದೆ. ಈ ಬಗ್ಗೆ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:137/07.01.2018 ರಲ್ಲಿ ವ್ಯತ್ಯಾಸದ ಮೊತ್ತ **ರೂ.2,14,625/-ಗಳಿಗೆ** ಸೂಕ್ತ ವಿವರಣೆ ಕೋರಲಾಗಿತ್ತು. ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ವಿವರಗಳನ್ನು **<u>ಅನುಬಂಧ (13)ರಲ್ಲಿ</u>** ನೀಡಲಾಗಿದೆ.<br><br>ಇದುವರೆವಿಗೂ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಪೂರ್ಣ ಮಾಹಿತಿ ಒದಗಿಸುವವರೆಗೆ ಒಟ್ಟು ಮೊತ್ತ **ರೂ.2,14,625/-ಗಳನ್ನು ವಸೂಲಾತಿಗೆ** ಸೂಚಿಸಲಾಗಿದೆ. ಪರಿಷ್ಕೃತ ಕಂಡಿಕೆ ಸಂಖ್ಯೆ: 37 ಹಾಗೂ ವಿಚಾರಣಾ ಸಂಖ್ಯೆ:137/07.01.2019 ರಂದು ನೀಡಿರುವ ವಿಚಾರಣೆಗೆ ಹಾಗೂ ದಿನಾಂಕ:27.03.2019ರ ಪುನರ್ ಪರಿಶೀಲನಾ ಅವಧಿಯಲ್ಲಿ ಹಾಜರುಪಡಿಸಿರುವ ದಾಖಲಾತಿ ಹಾಗೂ ಅನುಪಾಲನಾ ವರದಿಯನ್ನು ಪರಿಶೀಲಿಸಿದಂತೆ ಪರಿಷ್ಕೃತ ಬಿ.ಓ.ಎಂ ಸಭೆಯ ಅನುಮೋದನೆ ಪಡೆದು ಕೊಠಡಿ ಬಾಡಿಗೆ ನಿಗದಿತ ದರದ ಆದೇಶದ ಪ್ರತಿಯನ್ನು ಹಾಗೂ ಕಂಡಿಕೆಗೆ ಅನುಪಾಲನಾ ವರದಿಯನ್ನು ನೀಡುವವರೆಗೆ ಮೇಲಿನ ವಿವರದಂತೆ ಸೂಚಿಸಲಾಗಿದೆ. |
| | ಉತ್ತರ |
| | ಕರಾಮುವಿಯ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳು ಕಛೇರಿ ಕೆಲಸಕ್ಕೆ ತುರ್ತಾಗಿ ಬರುವ ಹಾಗೂ ವಿ.ವಿ. ನಿಲಯದಲ್ಲಿ ಮೌಲ್ಯಮಾಪನಕ್ಕಾಗಿ ಬರುವ ಅಧ್ಯಾಪಕರುಗಳಿಗೆ ದಿನವೊಂದಕ್ಕೆ ರೂ. 250 ಗಳಂತೆ OFFICIAL VISIT ನ ಬಾಡಿಗೆಯ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದು, ಆದರೆ ಒಂದು ರೂಂ ನಲ್ಲಿ ಎರಡು ಹಾಸಿಗೆಗಳಿದ್ದ ಕಾರಣ ಒಬ್ಬರಿಗೆ ರೂ. 125 ರಂತೆ ರಶೀದಿ ಹಾಕಲಾಗಿರುತ್ತದೆ. ಈ ಸಂಬಂಧ ರಶೀದಿ ಪುಸ್ತಕದಲ್ಲಿ, ದಿನವಹಿ ಪುಸ್ತಕದಲ್ಲಿ ಹಾಗೂ ಜಮಾ ಪುಸ್ತಕದಲ್ಲಿ ದಾಖಲಿಸಿ ಆಯಾ ಮುಂದಿನ ದಿನದಂದು ಬ್ಯಾಂಕಿಗೆ ಈ ಬಾಡಿಗೆ ಹಣವನ್ನು ಜಮಾ ಮಾಡಿರುವ ರಶೀದಿಗಳನ್ನು ದಿನವಾರು, ತಿಂಗಳುವಾರು, ವರ್ಷವಾರಿನ ಪ್ರತಿಗಳನ್ನು ಅತಿಥಿಗೃಹದ ಎಸ್ಟೇಟ್ ಅಧಿಕಾರಿಯವರಿಂದ ದೃಢೀಕರಿಸಿದ್ದು, ಲೆಕ್ಕ ತನಿಖಾ ವಿಚಾರಣೆಗೆ ಹಾಜರುಪಡಿಸಲಾಗಿದೆ. ಈ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | ವಿವರ |
|---|---|
| 38 | **<u>38. 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯ ಹಿಂದಿನ ಬಾಕಿ ವೇತನ ಹಾಗೂ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ತುಟ್ಟಿಭತ್ಯೆ ಬಾಕಿ ಮೊತ್ತವನ್ನು ಪಾವತಿಸಿರುವುದು:–</u>**<br>2016–17ನೇ ವರ್ಷದ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರದಂತೆ ಸಾಮಾನ್ಯ ನಿಧಿ ಖಾತೆಯಲ್ಲಿ ಲೆಕ್ಕಶೀರ್ಷಿಕೆ 333ರಲ್ಲಿ 2006ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯ ವೇತನವನ್ನು <u>ಅನುಬಂಧ **(14)ರಲ್ಲಿ**</u> ನೀಡಿರುವಂತೆ ಒಟ್ಟು ರೂ.2,87,96,013/– ಬಾಕಿ ವೇತನ ಪಾವತಿಸಲಾಗಿದೆ. ಆದರೆ ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದೆ ಶೈಕ್ಷಣಿಕ ಪ್ರಗತಿಯಿಲ್ಲದೆ ಹಾಗೂ ಸರ್ಕಾರದ ಮಾನ್ಯತೆ ಇಲ್ಲದೆ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಸರ್ಕಾರದಿಂದ ಹಾಗೂ ಮಾನ್ಯ ಕುಲಾಧಿಪತಿಗಳಿಂದ ವೆಚ್ಚದ ಅನುಮೋದನೆ ಪಡೆಯದ ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:52/2018–19 ದಿನಾಂಕ:24.11.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪಾವತಿಸಿರುವ ಮೊಬಲಗಿನಿಂದ ವಿಶ್ವವಿದ್ಯಾನಿಲಯ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸರ್ಕಾರದಿಂದ ಯಾವುದೇ ರೀತಿಯ ಮಾನ್ಯತೆ ಪಡೆಯದೆ ಬಾಕಿ ವೇತನ ಪಾವತಿಸಿರುವುದು ವಿಶ್ವವಿದ್ಯಾನಿಲಯದ ನಿಯಮ ಉಲ್ಲಂಘನೆಯಾಗಿರುವ ಬಗ್ಗೆ ಅನುಪಾಲನಾ ವರದಿ ನೀಡಬೇಕಾಗಿ ಸೂಚಿಸಿದೆ.<br>ವಿಚಾರಣೆ ಸಂಖ್ಯೆ:52/24.11.2018 ರಂದು ನೀಡಿರುವ ವಿಚಾರಣೆಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿದಂತೆ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದ ಸಿಬ್ಬಂದಿಗಳ ಬಾಕಿ ವೇತನ ಪಾವತಿಸಿರುವ ಮೊತ್ತವು ಶೈಕ್ಷಣಿಕ ಭೌತಿಕ ಪ್ರಗತಿ ಇಲ್ಲದೆ ಹಾಗೂ ಮಾನ್ಯ ಕುಲಾದಿಪತಿಗಳಿಂದ ವೆಚ್ಚದ ಅನುಮೋದನೆ ಪಡೆಯದೆ ಇರುವುದರಿಂದ ಕಂಡಿಕೆ ಮುಂದುವರಿಸಲಾಗಿದೆ.<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೋಧಕ ವರ್ಗದವರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–1/205–ಎ/2009–10, ದಿನಾಂಕ:12.12.2016ರನ್ವಯ ಪರಿಷ್ಕೃತ ಯು.ಜಿ.ಸಿ ವೇತನದ ವ್ಯತ್ಯಾಸದ ಬಾಕಿ ಸೌಲಭ್ಯವನ್ನು ದಿನಾಂಕ:01.01.2006 ರಿಂದ 31.08.2009ರವರೆಗೆ ವೇತನ ವ್ಯತ್ಯಾಸದ ಮೊತ್ತ **ರೂ.2,87,96,013/–** ಬಿ.ಆರ್.ಸಂಖ್ಯೆ:1869/27.12.2016ರಲ್ಲಿ ಪಾವತಿಸಲಾಗಿರುವುದನ್ನು ಕಡತ ಹಾಗೂ ವೇತನ ಬಟವಾಡೆ ವಹಿಯಿಂದ ಗಮನಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ:ಇಡಿ37/ಯು.ಎನ್.ಇ/2009, ದಿನಾಂಕ:08.04.2010ರಲ್ಲಿ 2006 ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ:01.01.2006 ರಿಂದ 23.12.2009ರವರೆಗೆ ಯು.ಜಿ.ಸಿ ಮೂಲ ವೇತನವನ್ನು ಮಾತ್ರ ಬಾಕಿ ಎಂದು ಪರಿಗಣಿಸಿ ಪಾವತಿಸಲು ಸೂಚಿಸಿದೆ. ಆದರೆ ಇಲ್ಲಿ ವೇತನ ವ್ಯತ್ಯಾಸವನ್ನು ಪಾವತಿಸುವಾಗ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಒಳಗೊಂಡು ಪಾವತಿಸಲಾಗಿದೆ. ಹೀಗೆ ಸರ್ಕಾರಿ ಆದೇಶಕ್ಕೆ ವಿರುದ್ಧವಾಗಿ ಪಾವತಿಸಿರುವ ಮೊತ್ತವನ್ನು ವಸೂಲಾತಿ ಮಾಡುವಂತೆ ಆದೇಶಿಸಲಾಗಿದೆ. ಮೇಲಿನ ಪ್ರಕರಣದಲ್ಲಿ ಯು.ಜಿ.ಸಿ ಹಿಂಬಾಕಿ ಮೊತ್ತದಲ್ಲಿ ತುಟ್ಟಿ ಭತ್ಯೆ ಬಾಕಿ ಮೊತ್ತ ರೂ.64,87,112/–ಗಳನ್ನು ಪಾವತಿಸಲಾಗಿರುವುದು ಕಂಡುಬಂದಿದ್ದು, ಈ ಸಂಬಂಧ **ರೂ.64,87,112/–ಗಳನ್ನು ಬೋಧಕರುಗಳಿಂದ ವಸೂಲಾತಿಗೆ ಸೂಚಿಸಿದೆ. ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿ ಮೊತ್ತ ಹೊರತುಪಡಿಸಿ (2,87,96,013–64,87,112) ರೂ.2,23,08,901/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು <u>ಅನುಬಂಧ</u> |

| | |
|---|---|
| | (14) ರಲ್ಲಿ ನೀಡಿದೆ.<br><br>**ಆಕ್ಷೇಪಣಾ ಮೊತ್ತ ರೂ. 2,23,08,901/– ಮತ್ತು ವಸೂಲಾತಿ ಮೊತ್ತ ರೂ.64,87,112/–** |
| | ಉತ್ತರ |
| | 2006 ರ ಪರಿಷ್ಕೃತ ಶ್ರೇಣಿಯನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 37 ಯುಎನ್‌ಇ 2009 ದಿನಾಂಕ: 24.12.2009ರ ಆದೇಶದನ್ವಯ ವಿಶ್ವವಿದ್ಯಾನಿಲಯದಲ್ಲಿ ಜಾರಿಗೊಳಿಸಲಾಗಿರುತ್ತದೆ. ಈ ಪರಿಷ್ಕೃತ ಶ್ರೇಣಿಗೆ ಒಳಪಡುವ ಬೋಧಕ ವೇತನ ಬಾಕಿ ಪಾವತಿಸುವ ಕುರಿತು ಸರ್ಕಾರವು ಆಗಿಂದ್ದಾಗೆ ಹೊರಡಿಸುತ್ತಿದ್ದ ಸೂಚನೆಗಳನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡು ಪರಿಷ್ಕೃತ ವೇತನ ಶ್ರೇಣಿಯನ್ನು ಬಿಓಎಂ 105ನೇ ಸಭೆಯ ತೀರ್ಮಾನದಂತೆ ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಯಾವುದೇ ಬ್ಲಾಕ್ ಅನುದಾನ ದೊರಕಿರುವುದಿಲ್ಲ. ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದಿಂದಲೇ ವಿಶ್ವವಿದ್ಯಾನಿಲಯವು ಸಂಪೂರ್ಣ ಖರ್ಚು ವೆಚ್ಚ ಭರಿಸಲಾಗಿರುತ್ತದೆ. ಈ ಸಂಬಂಧ ಲೆಕ್ಕತಪಾಸಣಾ ಸಮಯದಲ್ಲಿ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | **ವಿವರ** |
| 39 | **39. ಭದ್ರತಾ ಸೇವಾ ಸಿಬ್ಬಂದಿಗಳ ವೇತನ ಬಿಲ್ಲುಗಳಲ್ಲಿ ಸೇವಾ ತೆರಿಗೆ ಪಾವತಿಸದೇ ಇರುವುದು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಕೋಡ್ ಸಂಖ್ಯೆ:208ರಲ್ಲಿ ಭದ್ರತಾ ಸೇವಾ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನ ಬಿಲ್ಲುಗಳನ್ನು ಪರಿಶೀಲಿಸಿದಾಗ ಒಟ್ಟು 53 ಭದ್ರತಾ ಸಿಬ್ಬಂದಿಗೆ ಪ್ರತಿ ಮಾಹೆ ರೂ.8,723/–ರಂತೆ ಏಪ್ರಿಲ್–2016 ರಿಂದ ಮಾರ್ಚಿ–2017ರವರೆಗೆ ಒಟ್ಟು ರೂ.55,47,828/– ಪಾವತಿಸಲಾಗಿದೆ. ಆದರೆ ಪಾವತಿಸಿರುವ ಬಿಲ್ಲಿನಲ್ಲಿ ಸೇವಾ ತೆರಿಗೆಯನ್ನು ಶೇಕಡ 12–36 ರಂತೆ ಕಟಾಯಿಸದೆ ಇರುವುದರಿಂದ ಮೊಬಲಗು ರೂ.6,85,711/– ಕಟಾಯಿಸದೆ ಹಾಗೂ ಕರಾರು ಪತ್ರದಲ್ಲಿ ನಿಬಂಧನೆ ಸೇರಿಸದೆ ಇರುವುದರಿಂದ ಮೊಬಲಗು **ರೂ.6,85,711/–ನ್ನು ವಸೂಲಾತಿಗೆ** ಸೂಚಿಸುತ್ತ ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:142/2018–19 ದಿನಾಂಕ:09.01.2019 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆಯನ್ನು ದಿನಾಂಕ:16.01.2019 ಸಲ್ಲಿಸಿರುವ ಅನುಪಾಲನ ವರದಿಯನ್ನು ಸಮಂಜಸವಲ್ಲದ ಕಾರಣ ಮೊಬಲಗು ವಸೂಲಾತಿಗೆ ಸೂಚಿಸಿದೆ.<br><br>ಮೆ॥ ಉಷ ಸೆಕ್ಯೂರಿಟಿ ಸರ್ವಿಸ್, ಮೈಸೂರು ರವರಿಗೆ ಕನಿಷ್ಠ ದರದಲ್ಲಿ ಅಂಗೀಕರಿಸಿ ದಿನಾಂಕ:01.11.2015 ರಿಂದ 31.10.2016ರವರೆಗೆ ಅವಧಿಗೆ ಒಬ್ಬ ಭದ್ರತಾ ಸಿಬ್ಬಂದಿಗೆ ರೂ.8,723/–ರಂತೆ 53 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ದಿನಾಂಕ:20.10.2015 ರಂದು ಕಾರ್ಯಾದೇಶ ನೀಡಿ ಕರಾರು ಒಪ್ಪಂದ ಮಾಡಿರುವಂತೆ ದಿನಾಂಕ:01.11.2016 ರಿಂದ 31.03.2017ರವರೆಗೆ ಟೆಂಡರ್ ಕರೆಯದ ಹಳೆ ಟೆಂಡರ್‌ನಲ್ಲಿ ಮುಂದುವರಿಸಿ ಹಾಗೂ ಕರಾರು ಪತ್ರ ಮರು ಪರಿಷ್ಕೃತ ಒಪ್ಪಂದ ಮಾಡದೆ ದಿನಾಂಕ:01.02.2017 ರಿಂದ ಅನುಮತಿ ನೀಡಿರುವ ವಿಷಯ ಸಂಖ್ಯೆ:143–12/18.02.2017 ಆರ್ಥಿಕ ಬಿಡ್ ತೆರೆಯುವ ಸಂಬಂಧ |

ದಿನಾಂಕ:21.01.2017 ರಂದು ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸೇವಾ ತೆರಿಗೆ ಒಟ್ಟು ರೂ.**6,85,711/–ಗಳನ್ನು ವಸೂಲಿ** ಮಾಡಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಕಂಡಿಕೆ ಪಾಲನ ವರದಿ ನೀಡಲು ತಿಳಿಸಿದೆ.

**ಭದ್ರತಾ ಸೇವೆಗಳಿಗೆ 2016–17ರಲ್ಲಿ ಪಾವತಿಸಿರುವ ಮೊಬಲಗಿನ ವಿವರ ಕೆಳಕಂಡಂತಿದೆ.**

| ಕ್ರ.ಸಂ | ಮಾಹೆ | ಪಾವತಿ |
|---|---|---|
| 1 | ಏಪ್ರಿಲ್–2016 | – |
| 2 | ಮೇ–2016 | 3462319 |
| 3 | ಜೂನ್–2016 | 462319 |
| 4 | ಜುಲೈ–2016 | 924638 |
| 5 | ಆಗಸ್ಟ್–2016 | – |
| 6 | ಸೆಪ್ಟೆಂಬರ್–2016 | 462319 |
| 7 | ಆಕ್ಟೋಬರ್–2016 | – |
| 8 | ನವೆಂಬರ್–2016 | 462319 |
| 9 | ಡಿಸಂಬರ್–2016 | 924638<br>924638 |
| 10 | ಜನವರಿ–2017 | – |
| 11 | ಫೆಬ್ರವರಿ–2017 | – |
| 12 | ಮಾರ್ಚ–2017 | 924638 |
| | **ಒಟ್ಟು** | **5547828** |

ಉತ್ತರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2016–17ನೇ ಸಾಲಿನಲ್ಲಿ ಭದ್ರತಾ ಸಿಬ್ಬಂದಿಗಳ ಸೇವಾ ಹುಂಡಿಯಲ್ಲಿ ಸೇವಾ ತೆರಿಗೆ ಕಟಾಯಿಸದೇ ಇರುವುದಕ್ಕೆ ಸೂಕ್ತ ಆದೇಶಗಳನ್ನು ಹಾಜರುಪಡಿಸಬೇಕೆಂದು ಕೋರಿದ್ದು, ಅದರಂತೆ ಭಾರತ ಸರ್ಕಾರದ Department of Revenue, Central Board of Excise & Customs Tax Research Unit ದಿನಾಂಕ: 19.09.2013ರ ಆದೇಶದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಸೇವಾ ತೆರಿಗೆ ವಿನಾಯಿತಿಗೆ ಆದೇಶ ಹೊರಡಿಸಿರುತ್ತಾರೆ. ಅದರಂತೆ ಈ ಬಗ್ಗೆ ಬಿಓಎಂ ಸಭೆಯ ಅನುಮೋದನೆ ಪಡೆಯಲಾಗಿರುತ್ತದೆ. ಆದೇಶದ ಪ್ರತಿಗಳನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಆದುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ.

**ವಿವರ**

40

**40 (A & B). K.S.O.U Creation of Post and Absoption of Temporary Teachers Recruitment Procedure:-**

**ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವುದು :–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ 28 ಜನ ಅತಿಥಿ ಉಪನ್ಯಾಸಕರನ್ನು 2013ರ ಮೇ ಮಾಹೆಯಲ್ಲಿ ಖಾಯಂಗೊಳಿಸಿರುವುದನ್ನು ಗಮನಿಸಲಾಗಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿಗಳನ್ನು ಪರಿಶೀಲಿಸಲಾಗಿ 6 ಜನ ಅತಿಥಿ ಉಪನ್ಯಾಸಕರು

ತಮ್ಮನ್ನು ಖಾಯಂಗೊಳಿಸುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು 6 ಜನ ಅಧ್ಯಾಪಕರ ಮನವಿಯನ್ನು ಸಹಾನೂಭೂತಿಯಿಂದ ಪರಿಶೀಲಿಸಲು ಸೂಚಿಸಿರುತ್ತಾರೆ.

ಆದರೆ 6 ಜನ ಅಧ್ಯಾಪಕರನ್ನು ಮಾತ್ರ ಖಾಯಂಗೊಳಿಸುವ ಬದಲು 28 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮ ಗಮನಿಸಲಾಗಿದೆ. ಈ ಬಗ್ಗೆ ವಿವರ ನೀಡಲು ಆಡಿಟ್ ವೇಳೆಯಲ್ಲಿ ಖಾಯಂಗೊಳಿಸಲಾದ ಅಧ್ಯಾಪಕರಲ್ಲಿ ಕೆಲವರು ವಿದ್ಯಾರ್ಹತೆ ಹೊಂದಿಲ್ಲದಿದ್ದರೂ ಸಹ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಳಿಸಿರುವುದು ನಿಯಮಬಾಹಿರ ಕ್ರಮವಾಗಿದೆ.

ಈ ಸಂಬಂಧ ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಖಾಯಂಗೊಳಿಸಲು ಅವಕಾಶವಿದ್ದು, ಖಾಯಂನ್ನು ನಿಯಮಾನುಸಾರ ಮಾಡಲಾಗಿದೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ನ್ಯಾಯಾಲಯದ ಆದೇಶದ ರೀತ್ಯಾ ಆರು ಜನ ಅತಿಥಿ ಉಪನ್ಯಾಸಕರನ್ನು ಹೊರತುಪಡಿಸಿ ಉಳಿದ 22 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವುದು ಸರ್ಕಾರಿ ಆದೇಶಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ 22 ಜನ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿರುವ ಪ್ರಕ್ರಿಯೆಯನ್ನು ಆಕ್ಷೇಪಿಸಲಾಗಿದೆ.

**ಈ ಸಂಬಂಧ ಕೆಳಕಂಡ ಆಕ್ಷೇಪಣೆಗಳನ್ನು ಮಾಡಲಾಗಿದೆ.**

1. ಬೋಧಕ ವರ್ಗದವರ ನೇಮಕಾತಿ ಅಧಿಸೂಚನೆಯಲ್ಲಿ I & II ವ್ಯತ್ಯಾಸ ಕಂಡುಬಂದಿರುವುದು.
2. ರೋಸ್ಟರ್ ಪದ್ಧತಿ ಪಾಲಿಸಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿಲ್ಲದಿರುವುದು.
3. 22 ಮಂದಿ ಅತಿಥಿ ಉಪನ್ಯಾಸಕರಾಗಿ ಆಯ್ಕೆಗೊಂಡಂದಿನಿಂದ ಖಾಯಂ ಆಗುವ ತನಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಹಾಜರಾತಿ ವಿವರ.
4. ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಮುನ್ನ ನಿಯಮಾನುಸಾರ ಪತ್ರಿಕಾ ಪ್ರಕಟಣೆ ನೀಡಲಾಗಿರುವ ಪ್ರತಿ. (National News Paper) ಹಾಜರುಪಡಿಸಿರುವುದಿಲ್ಲ.
5. ಉಪನ್ಯಾಸಕರ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.
6. ಸರ್ಕಾರಿ ಆದೇಶ ಸಂಖ್ಯೆ:ಇಡಿ37/ಯುಎನ್ಇ/2009/24.12.2009ರ ಪ್ರಕಾರ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಾರೆಯೇ ಎಂಬ ಬಗ್ಗೆ ಯಾವುದೇ ದೃಢೀಕರಣಗಳು ಸೇವಾವಹಿಯಲ್ಲಿ ಇರುವುದಿಲ್ಲ. 2013–14ನೇ ಸಾಲಿನ ಲೆಕ್ಕಪರಿಶೋಧನೆ ವರದಿಯಲ್ಲಿಯೂ ಸಹ ಆಕ್ಷೇಪಿಸಲಾಗಿದ್ದು, ಇದುವರೆಗೂ ತಮ್ಮಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಇದರಿಂದ ಒಟ್ಟಾರೆ ಬೋಧಕ ವರ್ಗದ ನೇಮಕಾತಿ ವಿಧಾನದಲ್ಲಿ ಯು.ಜಿ.ಸಿ ನಿಯಮಗಳಂತೆ ಕ್ರಮಬದ್ಧತೆಯನ್ನು ಕಾಪಾಡಿಕೊಂಡಿರುವುದಿಲ್ಲ. ಹಾಗೂ ವೇತನ

ಪಾವತಿಯು ಸಹ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಉಂಟುಮಾಡಿದಂತಾಗಿದೆ.

ಮೇಲಿನ ವಿವರದಲ್ಲಿ ತಿಳಿಸಿರುವಂತೆ ಅತಿಥಿ ಉಪನ್ಯಾಸಕರನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಅರ್ಹತೆ ಇಲ್ಲದವರ ಸೇವೆಯನ್ನು ಸಹಾಯಕ ಪ್ರಾಧ್ಯಾಪಕರಾಗಿ ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ. ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮವು ವಿಶ್ವವಿದ್ಯಾನಿಲಯದಲ್ಲಿ ಅಧಿಸೂಚನೆಗೊಳಿಸಿ ಅನುಷ್ಠಾನಗೊಳಿಸಿರುವ ಮೂಲ ಆದೇಶದ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಹಾಗೂ ವಿಚಾರಣೆ ಸಂಖ್ಯೆ:119/ದಿನಾಂಕ:22.12.2018 ಹಾಗೂ 121/ದಿನಾಂಕ:30.11.2018, 126/ದಿನಾಂಕ:03.01.2019, 70/ದಿನಾಂಕ:04.12.2018 ವಿಚಾರಣೆಗಳನ್ನು ನೀಡಲಾಗಿದ್ದು, ವಿಚಾರಣೆಗೆ ಸಂಬಂಧಿಸಿದಂತೆ ಮೂಲ ಕಡತ ಹಾಗೂ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ **ರೂ.1,53,30,099/-ಗಳನ್ನು ಆಕ್ಷೇಪಣೆಗೆ** ಸೂಚಿಸಲಾಗಿದೆ. ಆಡಿಟ್ ಕಂಡಿಕೆಗೆ ಸೂಕ್ತ ಆದೇಶಗಳೊಂದಿಗೆ ಅನುಪಾಲನ ವರದಿ ಸಲ್ಲಿಸಲು ಸೂಚಿಸಿದೆ. ವಿವರವನ್ನು **ಅನುಬಂಧ (15)ರಲ್ಲಿ** ನೀಡಿದೆ.

**K.S.O.U Reguluraised (May-2013) 22 Temporary lecturers and appointed them as Assistant Professors directly withour following the due procedure of calling for all India Advertisement and Compation of selection committee we aslo observed that 18 of these 22 temporury lecturers did not even porsess the minimum required qualification for the posts :-**

3 Universities as given in table below 14 posts of state pay scale caders to entry level UGC payscale cadree, which can be filled up throught direct requirement only. However existing staff were appointed directly to those newly created posts instead of calling for All India Advertisement and Constitution of selection committee for the prapose

| Sl. No | Name of University | State cadreupgladed | No.of posts | Period | Up graded post | Repoting date |
|---|---|---|---|---|---|---|
| 1 | Mysore University | Re search/ fild/ assistant | 06 | March-2008 | lecturer | April-2008 |
| 2 | Kannada University | Planning/Public Assistent | 07 | Feb-2005 | lecturer | Feb-2005 |
| 3 | Mangalore University | Physical Cullutral Inspector | 01 | Nov-2011 | Assistent Director | Nov-2013 |

**Appointment of Assistant Professor :-**

The Direct Requritment to the posts of Assistant Professors in the University and college shall professors in the University and college shall be on the basis of merit through the India Advistisement and section by the duly constituted selection committee as per the provisions made under these regulations to be Incorporated under the satus/ordinales of the concerned University. The composition of such commitieess should be as prescribed by the UGC in these Regulations. 22 Assistant professors Appointed in the year 2013 are not fullfilling the criteria of passing the Phd During the time of Appointment as Assistant Professors. Hence this is proposed to Audit objection.

**22 ಜನ ಅತಿಥಿ ಉಪನ್ಯಾಸಕರು ಮತ್ತು ವಿಭಾಗ**

| ಕ್ರ.ಸಂ | ಹೆಸರು | ವಿಭಾಗ | ವೇತನ |
|---|---|---|---|
| 1 | ಡಾ॥ ಜ್ಯೋತಿ ಶಂಕರ್ | ಕನ್ನಡ | 699367 |
| 2 | ಎಸ್. ಶ್ರೀಕಾಂತ್ | ಇಂಗ್ಲೀಷ್ | 699367 |
| 3 | ಎ.ಎಸ್.ಮಧುರ | ಇಂಗ್ಲೀಷ್ | 699367 |
| 4 | ಡಾ॥ ಕೃಷ್ಣಪ್ಪ.ಜಿ | ರಾಜ್ಯಶಾಸ್ತ್ರ | 699367 |
| 5 | ಎಸ್.ರಮ್ಯ | ಸಮಾಜಶಾಸ್ತ್ರ | 699367 |
| 6 | ಬಿ.ವಿ.ನವೀನ್ | ವಾಣಿಜ್ಯಶಾಸ್ತ್ರ | 699367 |
| 7 | ಕೆ.ಎಸ್.ಶಿವಕುಮಾರ | ವಾಣಿಜ್ಯಶಾಸ್ತ್ರ | 699367 |
| 8 | ಆರ್.ಸಿರಾಜ್ ಬಾಷಾ | Management | 699367 |
| 9 | ಡಾ॥ ಜೆ.ಎಲ್.ಬನಶಂಕರಿ | ಅರ್ಥಶಾಸ್ತ್ರ | 699367 |
| 10 | ಡಾ॥ಕೆ.ಎಸ್.ವಿರೇಂದ್ರಕುಮಾರ್ | ಅರ್ಥಶಾಸ್ತ್ರ | 699367 |
| 11 | ಡಾ॥ ಎನ್.ಎಸ್. ಸುಜಾತ | ಇತಿಹಾಸ | 699367 |
| 12 | ಡಾ॥ ಸಿ.ರಾಮೇಗೌಡ | ಇತಿಹಾಸ | 699367 |
| 13 | ಡಾ॥ ಸಿ.ಅನಿತಾ | ಆಹಾರ ವಿಜ್ಞಾನ ಮತ್ತು ಪೋಷಕಾಂಶ | 699367 |
| 14 | ಡಾ॥ಪಿ. ಮಂಜುನಾಥ | ಮನೋವಿಜ್ಞಾನ | 699367 |
| 15 | ಡಾ॥ ಟಿ.ಎಸ್.ಹರ್ಷ | ಪರಿಸರ ವಿಜ್ಞಾನ | 699367 |
| 16 | ಹೆಚ್.ಎಂ.ನಂದಿನಿ | ಮಾಹಿತಿ ಮತ್ತು ತಂತ್ರಜ್ಞಾನ | 699367 |
| 17 | ಡಿ.ಎಂ.ಮಹೇಶ | ಗಣಕ ವಿಜ್ಞಾನ | 699367 |
| 18 | ಡಿ.ಎನ್.ಭವ್ಯ | ಗಣಕ ವಿಜ್ಞಾನ | 699367 |
| 19 | ಸುಮತಿ ರಾಮಕೃಷ್ಣೆಗೌಡ | ಗಣಕ ವಿಜ್ಞಾನ | 699367 |
| 20 | ಜೆ.ಬಿ.ಶೈಲೇಶ್‌ರಾಜ್ ಅರಸ್ | ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ | 699367 |
| 21 | ವೈ.ಪಿ.ಚಂದ್ರಶೇಖರ್ | ಭೂಗೋಳಶಾಸ್ತ್ರ | 699367 |
| 22 | ಎಸ್.ಎಸ್.ಜಾಹ್ನವಿ | ಕಾನೂನು | 699367 |
| | | ಒಟ್ಟು | **1,53,30,099** |

**ಅತಿಥಿ ಉಪನ್ಯಾಸಕರುಗಳನ್ನು ಖಾಯಂಗೊಳಿಸಿರುವ ವಿವರ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲಾಗಿದೆ. ಈ ಬಗ್ಗೆ ಹಿಂದಿನ ವರದಿಗಳಲ್ಲಿ ಕಂಡಿಕೆ ಪ್ರಸ್ತಾಪವಾಗಿರುತ್ತದೆ.

| ಕ್ರ.ಸಂ | ಹೆಸರು | ವಿಭಾಗ |
|---|---|---|
| 1 | ಡಾ॥ ಜ್ಯೋತಿ ಶಂಕರ್ | Doctor of Philosophy + KSET |
| 2 | ಎಸ್. ಶ್ರೀಕಾಂತ್ | Master of Philosophy in English |
| 3 | ಎ.ಎಸ್.ಮಧುರ | M.A English, Phd ಆಗಿರುವುದಿಲ್ಲ |
| 4 | ಡಾ॥ ಕೃಷ್ಣಪ್ಪ.ನಿಂಬಕ್ಕನವರ್ | Doctor of Philosophy in Politicalscience |
| 5 | ಎಸ್.ರಮ್ಯ | M.A Sociology, Phd ಆಗಿರುವುದಿಲ್ಲ |
| 6 | ಬಿ.ವಿ.ನವೀನ್ | Master of Commerce No- NET/SLET |
| 7 | ಕೆ.ಎಸ್.ಶಿವಕುಮಾರ | M.Com No- NET/SLET |
| 8 | ಆರ್.ಸಿರಾಜ್ ಬಾಷಾ | MBA Phd ಆಗಿರುವುದಿಲ್ಲ |
| 9 | ಡಾ॥ ಜೆ.ಎಲ್.ಬನಶಂಕರಿ | KSET |
| 10 | ಡಾ॥ಕೆ.ಎಸ್.ವಿರೇಂದ್ರಕುಮಾರ್ | KSET |
| 11 | ಡಾ॥ ಎನ್.ಎಸ್. ಸುಜಾತ | Doctor of History |
| 12 | ಡಾ॥ ಸಿ.ರಾಮೇಗೌಡ | Doctor of Philosophy |
| 13 | ಡಾ॥ ಸಿ.ಅನಿತಾ | Doctor of Philosophy |
| 14 | ಡಾ॥ಪಿ. ಮಂಜುನಾಥ | Doctor of Philosophy + KSET |
| 15 | ಡಾ॥ ಹರ್ಷ | KSET + UGC Refresher course |
| 16 | ಹೆಚ್.ಎಂ.ನಂದಿನಿ | KSET + UGC Refresher course |
| 17 | ಡಿ.ಎಂ.ಮಹೇಶ | KSET |
| 18 | ಡಿ.ಎನ್.ಭವ್ಯ | KSET + UGC Orientation course |
| 19 | ಸುಮತಿ ರಾಮಕೃಷ್ಣೆಗೌಡ | Computer science |
| 20 | ಜಿ.ಬಿ.ಶೈಲೆಶ್‌ರಾಜ್ ಅರಸ್ | MA + UGC Refresher Course |
| 21 | ವೈ.ಪಿ.ಚಂದ್ರಶೇಖರ್ | KSET + Doctor of Philosophy |
| 22 | ಎಸ್.ಎಸ್.ಜಾಹ್ನವಿ | M.phil + Phd |

ಉತ್ತರ

ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳನ್ನು ಸೇವೆಯನ್ನು BOM ತೀರ್ಮಾನದ ಮೇರೆಗೆ ರಚಿಸಲ್ಪಟ್ಟ ಪರಿನಿಯಮ The KSOU (Creation of Posts and Absorpation of Temporary Teachers) Statutes-2012 ಮೂಲಕ 28 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಸೃಜಿಸಿ ಅ ಹುದ್ದೆಗೆ ಎದುರಾಗಿ ಇವರುಗಳ ಸೇವೆಯನ್ನು ವಿಲೀನಗೊಳಿಸಿ ದಿನಾಂಕ:10–05–2013 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಈ ಪರಿನಿಯಮಕ್ಕೆ ಘನತೆವೆತ್ತ ಕುಲಾಧಿಪತಿಗಳು ದಿನಾಂಕ 06–02–2013 ರಂದು ಅಂಕಿತ ಹಾಕಿರುತ್ತಾರೆ. ಸದರಿ ಪರಿನಿಯಮದ ಕ್ಲಾಸ್ 3 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

| | |
|---|---|
| | Notwithstanding anything contained in Statute 12 of the First Statutes attached to the Act, the services of all those temporary teacher working in the university whose names are shown in the Appendix, shall be regularized with the designation of Assistant professor and in the pay scale of Rs. 15600-39100 with AGP Rs. 6000/-, from the date of notifying these Statutes after its approval by His Excellency the Chancellor. In case of those who are yet to pass NET/SLET, they shall be given 5 years time, either to acquire Ph.D in the concerned subject under the new Regulations in force in the University (which is bassed on UGC Minimum standards and procedures for awards of Ph.D Degree Regulations2009)<br><br>ಅದರಂತೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ವಿಲೀನಗೊಂಡ ಸಹಾಯಕ ಪ್ರಾಧ್ಯಾಪಕರುಗಳು SELT/NET ವಿದ್ಯಾರ್ಹತೆಯಾಗಿ ಹೊಂದಿರುವ ಪಟ್ಟಿಯನ್ನು ಆಡಿಟ್ ಪರಿಶೀಲನೆಗೆ ಸಲ್ಲಿಸಿದೆ. ಸಂಬಂಧ ಪಟ್ಟ ಕಡತವು ಆಡಿಟ್ ಪರಿಶೀಲನೆಗೆ ಲಭ್ಯವಿರುತ್ತದೆಂದು ತಿಳಿಸುತ್ತಾ, ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | ವಿವರ |
| 41 | **41. ಬೋಧಕ ವರ್ಗದವರ ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ ಕಂಡುಬಂದ ನ್ಯೂನತೆಗಳು :–** |

| ಕ್ರ. ಸಂ | ಹೆಸರು | ವಿವರ | ಗಮನಿಸಲಾದ ಅಂಶಗಳ |
|---|---|---|---|
| 1 | ಸುಮತಿ ರಾಮಕೃಷ್ಣೇಗೌಡ | ಸಹ ಪ್ರಾಧ್ಯಾಪಕರು, ಗಣಕವಿಜ್ಞಾನ | 1)ಪರೀಕ್ಷತಾ ಅವಧಿ ಘೋಷಣೆಯಾಗಿರುವುದಿಲ್ಲ.<br>2) ವಾರ್ಷಿಕ ಅವಧಿ ವೇತನ ಬಡ್ತಿಗಳು ಮಂಜೂರು ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ. |
| 2 | ಸಿರಾಜ್‌ಬಾಷಾ | ಸಹ ಪ್ರಾಧ್ಯಾಪಕರು, ನಿರ್ವಹಣಾ ಶಾಸ್ತ್ರ | 1)ಪರೀಕ್ಷತಾ ಅವಧಿ ಘೋಷಣೆಯಾಗಿರುವುದಿಲ್ಲ.<br>2) ವಾರ್ಷಿಕ ಅವಧಿ ವೇತನ ಬಡ್ತಿಗಳು ಮಂಜೂರು ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ. |
| 3 | ಹೆಚ್.ಎಂ.ನಂದಿನಿ | ಸಹ ಪ್ರಾಧ್ಯಾಪಕರು, ಮಾಹಿತಿತಂತ್ರಜ್ಞಾನ | 1) NET/SLET/Phd ಪದವಿ ಹೊಂದಿರುವುದಿಲ್ಲ.<br>2) ಪರೀಕ್ಷತಾ ಅವಧಿ ಘೋಷಣೆಯಾಗಿರುವುದಿಲ್ಲ.<br>3) ವಾರ್ಷಿಕ ಅವಧಿ ವೇತನ ಬಡ್ತಿಗಳು ಮಂಜೂರು ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ. |

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿ ಲೆಕ್ಕತಪಾಸಣೆಗೆ ವರದಿ ಮಾಡುವುದು.

| | |
|---|---|
| | ಉತ್ತರ |
| | ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳನ್ನು ಸೇವೆಯನ್ನು BOM |

| | |
|---|---|
| | ತೀರ್ಮಾನದ ಮೇರೆಗೆ ರಚಿಸಲ್ಪಟ್ಟ ಪರಿನಿಯಮ The KSOU (Creation of Posts and Absorpation of Temporary Teachers) Statutes-2012 ಮೂಲಕ 28 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಸೃಜಿಸಿ ಅ ಹುದ್ದೆಗೆ ಎದುರಾಗಿ ಇವರುಗಳ ಸೇವೆಯನ್ನು ವಿಲೀನಗೊಳಿಸಿ ದಿನಾಂಕ:10–05–2013 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಈ ಪರಿನಿಯಮಕ್ಕೆ ಘನತೆವೆತ್ತ ಕುಲಾಧಿಪತಿಗಳು ದಿನಾಂಕ 06–02–2013 ರಂದು ಅಂಕಿತ ಹಾಕಿರುತ್ತಾರೆ. ಸದರಿ ಪರಿನಿಯಮದ ಕ್ಲಾಸ್ 3 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.<br><br>Notwithstanding anything contained in Statute 12 of the First Statutes attached to the Act, the services of all those temporary teacher working in the university whose names are shown in the Appendix, shall be regularized with the designation of Assistant professor and in the pay scale of Rs. 15600-39100 with AGP Rs. 6000/-, from the date of notifying these Statutes after its approval by His Excellency the Chancellor. In case of those who are yet to pass NET/SLET, they shall be given 5 years time, either to acquire Ph.D in the concerned subject under the new Regulations in force in the University (which is bassed on UGC Minimum standards and procedures for awards of Ph.D Degree Regulations2009)<br><br>ಅದರಂತೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ವಿಲೀನಗೊಂಡ ಸಹಾಯಕ ಪ್ರಾಧ್ಯಾಪಕರುಗಳು SLET/NET ವಿದ್ಯಾರ್ಹತೆಯಾಗಿ ಹೊಂದಿರುವ ಪಟ್ಟಿಯನ್ನು ಆಡಿಟ್ ಪರಿಶೀಲನೆಗೆ ಸಲ್ಲಿಸಿದೆ. ಸಂಬಂಧ ಪಟ್ಟ ಕಡತವು ಆಡಿಟ್ ಪರಿಶೀಲನೆಗೆ ಲಭ್ಯವಿರುತ್ತದೆಂದು ತಿಳಿಸುತ್ತಾ ಮೇಲಿನ ಮಾಹಿತಿಯನ್ನು ಒದಗಿಸಿದೆ. |
| | **ವಿವರ** |
| 42 | **42. 2016–17ನೇ ಸಾಲಿನ ಸಹಾಯಕ ಪ್ರಾಧ್ಯಾಪಕರ ಸೇವಾ ಪುಸ್ತಕವನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದೆ ಇರುವುದು :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ಸಹಾಯಕ ಪ್ರಾಧ್ಯಾಪಕರ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಇವುಗಳನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿರುವುದಿಲ್ಲ. ಅವರುಗಳ ಹುಟ್ಟಿದ ದಿನಾಂಕ ದೃಢೀಕರಿಸಿಲ್ಲ, ಜಾತಿ ಪ್ರಮಾಣ ಪತ್ರ ಲಗತ್ತಿಸಿಲ್ಲ, ಹಾಗೂ ಪಿ.ಹೆಚ್.ಡಿ, KSET, NET ಉತ್ತೀರ್ಣತೆ ವಿವರ ದಾಖಲು ಮಾಡಿರುವುದಿಲ್ಲ ಮತ್ತು ಇವರ ರಜೆಯ ಲೆಕ್ಕವನ್ನು ಪೂರ್ಣ ಪ್ರಮಾಣದಲ್ಲಿ ದಾಖಲು ಮಾಡಿರುವುದಿಲ್ಲ. ಇದರಿಂದ ಗೈರುಹಾಜರಿ, ರಜೆಯ ಬಳಕೆ ಇತ್ಯಾದಿ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಸಹ ಪ್ರಾಧ್ಯಾಪಕರುಗಳನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಯಾವುದೇ ರೀತಿಯ ವಿವರಗಳು ಸೇವಾ ಪುಸ್ತಕದಲ್ಲಿ ಲಭ್ಯವಿರುವುದಿಲ್ಲ |

| | |
|---|---|
| | ಮತ್ತು ನೌಕರರ ಸೇವಾವಹಿಯಲ್ಲಿ ಕುಲಸಚಿವರ ಸಹಿ ಇರುವುದಿಲ್ಲ. ಈ ಎಲ್ಲಾ ಪ್ರಮುಖ ಅಂಶಗಳಿಗೆ ವಿವರಣೆ ನೀಡುವ ಕುರಿತಂತೆ ವಿವರ ನೀಡಲು ವಿಚಾರಣೆ ಸಂಖ್ಯೆ:117/28.12.2018 ರಂದು ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಸಂಬಂಧಿಸಿದ ನ್ಯೂನತೆಗಳ ಕುರಿತು ದಾಖಲಾತಿಗಳನ್ನು ಹಾಜರುಪಡಿಸದೆ ಮತ್ತು ಸಹಾಯಕ ಪ್ರಾಧ್ಯಾಪಕರು ಸಂಬಂಧಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಹೊಂದಿರುವ ಮೂಲ ದಾಖಲಾತಿಗಳು (Marks card, Phd, KSET, NET etc) ಹಾಗೂ ಪದವಿ ಅಂಕಪಟ್ಟಿಗಳು Verification report ಕಡತದಲ್ಲಿ ಲಭ್ಯವಿಲ್ಲದ ಕಾರಣ, ಇವರ ನೇಮಕಾತಿ ಸಂಬಂಧ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ವಿವರಣೆ ನೀಡಲು ಸೂಚಿಸಿದೆ. |
| | ಉತ್ತರ |
| | ಶ್ರೀ.ಕೆ.ಎಸ್.ಶಿವಕುಮಾರ್, ಸಹಾಯಕ ಪ್ರಾಧ್ಯಾಪಕರವರು ನೇಮಕಗೊಂಡ ಹಿನ್ನಲೆಯಲ್ಲಿ ಸದರಿಯವರು ಸೇವಾ ಪುಸ್ತಕವನ್ನು ವಿಳಂಬವಾಗಿ ಸಲ್ಲಿಸಿರುತ್ತಾರೆ. ಸದರಿಯವರ ಇಲಾಖಾ ವಿಚಾರಣೆಯು ಮುಕ್ತಾಯಗೊಂಡಿದ್ದು ವಿಚಾರಣಾ ಅಧಿಕಾರಿಯವರು ಅಂತಿಮ ವರದಿ ಸಲ್ಲಿಸಿರುವುದಿಲ್ಲ. ಮುಂದೆ ತಾವು ಸೂಚಿಸಿರುವಂತೆ ಕ್ರಮವಹಿಸಿ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ವಿವರಣೆ ನೀಡಲಾಗುವುದು. |
| | **ವಿವರ** |
| 43 | **43. ಪ್ರಕಾಶ್, ಗ್ರಂಥಪಾಲಕರು ದಿನಾಂಕ:21.12.2012 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ದಿನಾಂಕದಂದು ಪಿ.ಹೆಚ್.ಡಿ SLET, NET ಪದವಿ ಪಡೆಯದೆ UGC ವೇತನ ಪಾವತಿಸಿರುವುದು :–**<br>2016–17ನೇ ವರ್ಷದ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಡಾ॥ ಪ್ರಕಾಶ್, ಗ್ರಂಥಪಾಲಕರು ಸೇವಾಪುಸ್ತಕದಲ್ಲಿ ಕಂಡುಬಂದಂತೆ<br>1. ಸೇವಾ ಪುಸ್ತಕದಲ್ಲಿ ನೌಕರರ ಸಹಿ ಇರುವುದಿಲ್ಲ.<br>2. ನಾಮ ನಿರ್ದೇಶನ ಕುಟುಂಬ ಸದಸ್ಯರ ವಿವರವನ್ನು ನಿಗದಿತ ನಮೂನೆಯಲ್ಲಿ ದಾಖಲು ಮಾಡಿರುವುದಿಲ್ಲ.<br>3. ಪಿ.ಹೆಚ್‌ಡಿ, SLET, NET ಪದವಿ ಪ್ರಮಾಣ ಪತ್ರಗಳು, ಅಂಕಪಟ್ಟಿ ಇತರೆ ಮೂಲ ದಾಖಲಾತಿಗಳು ಸಂಬಂಧಪಟ್ಟ ವಿಶ್ವವಿದ್ಯಾನಿಲಯ/ಕಾಲೇಜುಗಳಿಂದ Verification Report ಕಡತದಲ್ಲಿ ಲಭ್ಯವಿರುವುದಿಲ್ಲ.<br>4. UGC ವೇತನ ನಿಗದಿಪಡಿಸುವ ಮುನ್ನ ಸರ್ಕಾರದ ಉನ್ನತ ಕಾರ್ಯದರ್ಶಿ ಶಿಕ್ಷಣ ಇಲಾಖೆವತಿಯಿಂದ ಅನುಮತಿ ಪಡೆದಿರುವ ಬಗ್ಗೆ ವಿವರ ಲಭ್ಯವಿರುವುದಿಲ್ಲ.<br>5. ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಹಾಗೂ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವ ಪರಿನಿಯಮ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸುವವರೆಗೆ ಇವರಿಗೆ 2016–17ನೇ ಸಾಲಿನಲ್ಲಿ ಪಾವತಿಸಿರುವ ವೇತನ **ರೂ.1636973/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |

| | |
|---|---|
| | ಉತ್ತರ |
| | ನ್ಯೂನತೆಗಳನ್ನು ಸರಿಪಡಿಸಿ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 44 | **<u>44. ಶ್ರೀಮತಿ ಶೀಲಾ.ವಿ, ಸಹಾಯಕ ಗ್ರಂಥಪಾಲಕರು, ನೇಮಕಾತಿ ಹೊಂದಿದ ಅವಧಿಯಲ್ಲಿ ಪಿ.ಹೆಚ್.ಡಿ, SLET/NET ಪದವಿ ಪಡೆಯದೆ ಯು.ಜಿ.ಸಿ ವೇತನ ನಿಗದಿಪಡಿಸಿರುವುದು :–</u>**<br>2016–17ನೇ ವರ್ಷದ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಶ್ರೀಮತಿ ಶೀಲಾ.ವಿ ಸಹಾಯಕ ಗ್ರಂಥಪಾಲಕರ ಸೇವಾಪುಸ್ತಕವನ್ನು ಪರಿಶೀಲಿಸಿದಾಗ ಪ್ರಮುಖ ನ್ಯೂನತೆ ಕಂಡುಬಂದಿರುತ್ತದೆ.<br>1. ಸೇವಾ ಪುಸ್ತಕದಲ್ಲಿ ವರ್ಷದ ಅಂತ್ಯಕ್ಕೆ ನೌಕರರ ಸಹಿ ಪಡೆದಿರುವುದಿಲ್ಲ.<br>2. ಕುಟುಂಬ ಸದಸ್ಯರ ನಾಮ ನಿರ್ದೇಶನ ನಮೂನೆ ಲಗತ್ತಿಸಿರುವುದಿಲ್ಲ.<br>3. ಪದವಿ ಪ್ರಮಾಣ ಪತ್ರ ಅಂಕಪಟ್ಟಿ, ಪಿ.ಹೆಚ್.ಡಿ ಇತ್ಯಾದಿ ಸಂಬಂಧಪಟ್ಟ ಕಾಲೇಜು/ವಿಶ್ವವಿದ್ಯಾನಿಲಯದಿಂದ Verification Report ವೈಯಕ್ತಿಕ ಕಡತದಲ್ಲಿ ಲಭ್ಯವಿಲ್ಲ ಹಾಗೂ ಸೇವಾ ಪುಸ್ತಕದಲ್ಲಿ ದಾಖಲು ಮಾಡಿರುವ ಬಗ್ಗೆ ವಿವರ ಇಲ್ಲ.<br>4. ಯು.ಜಿ.ಸಿ ವೇತನ ನಿಗದಿಪಡಿಸುವ ಮುನ್ನ ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆಯವರಿಂದ ಅನುಮತಿ ಪಡೆದಿರುವ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ.<br>5. ನೇಮಕಾತಿ ಮಾಡಿಕೊಳ್ಳುವ ಮುನ್ನ ಸರ್ಕಾರದಿಂದ ಅನುಮೋದನೆ ಪಡೆದು ಅಥವಾ ಮಾನ್ಯ ರಾಜ್ಯಪಾಲರವರಿಂದ ಮಂಜೂರಾತಿ ಪಡೆದ ಪರಿನಿಯಮ ಆದೇಶದ ಪ್ರತಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸುವವರೆಗೆ ಇವರಿಗೆ 2016–17ನೇ ಸಾಲಿನಲ್ಲಿ ಪಾವತಿಸಿರುವ ವೇತನ **ರೂ.9,29,064/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 45 | **<u>45. ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಂಡಿರುವ ವೇತನ ಪಾವತಿಸಿರುವ ವಿಚಾರ ಕುರಿತು :–</u>**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಅತಿಥಿ ಉಪನ್ಯಾಸಕರ ವೇತನ ವಹಿಗಳನ್ನು ಪರಿಶೀಲಿಸಿದಾಗ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಮಾಹೆಯಾನ ಗೌರವ ಸಂಭಾವನೆ ರೂ.20,000/–ಗಳನ್ನು ನಿಗದಿಪಡಿಸಿ ಗೌರವ ಸಂಭಾವನೆ ಪಾವತಿಸಲಾಗಿದೆ.<br>ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಂಡಿರುವ ಕಡತವನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:114/22.12.2018 ರಂದು ನೀಡಲಾಗಿದ್ದು, ವಿಚಾರಣೆಗೆ ವಿವರ ನೀಡದೆ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಉಪನ್ಯಾಸಕರ ಅರ್ಹತೆ |

ಪಡೆದಿರುವ PHd, SLET, NET ಉತ್ತೀರ್ಣತೆಯ ಬಗ್ಗೆ ಹಾಗೂ ಖಾಲಿ ಹುದ್ದೆಗೆ ಎದುರಾಗಿ ನೇಮಕಾತಿ ಮಾಡಿಕೊಂಡಿರುವ ವಿವರಗಳು ಲಭ್ಯವಿಲ್ಲದ ಕಾರಣ ಹಾಗೂ 2016-17ನೇ ಸಾಲಿನಲ್ಲಿ ಭೌತಿಕ ಶೈಕ್ಷಣಿಕ ಪ್ರಗತಿ ಇಲ್ಲದೆ ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದೆ ವೇತನ ಪಾವತಿಸಿರುವುದು ವಿಶ್ವವಿದ್ಯಾನಿಲಯಕ್ಕೆ ಫಲಪ್ರದವಲ್ಲದ ವೆಚ್ಚವಾಗಿರುತ್ತದೆ. ಈ ಬಗ್ಗೆ ವಿಚಾರಣೆಗೆ ವಿವರಣೆ ನೀಡುವತನಕ ಈ ಕೆಳಕಂಡ ವಿವರದಂತೆ **ರೂ.4,46,368/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

1. ಪವಿತ್ರ.ಎಂ, ಅತಿಥಿ ಉಪನ್ಯಾಸಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾರ್ಚ್-16 ರಿಂದ ಫೆಬ್ರವರಿ-2017 ರವರೆಗೆ ರೂ.2,29,593/-ಗಳನ್ನು ಪಾವತಿಸಲಾಗಿದೆ.

2. ಡಾ.ಸಿ.ಹೆಚ್.ಗುರುರಾಜ್ ರಾವ್ ಅತಿಥಿ ಉಪನ್ಯಾಸಕರು, ಸಂಸ್ಕೃತ ಅಧ್ಯಯನ ವಿಭಾಗ ಮಾರ್ಚ್-2016 ರಿಂದ ಫೆಬ್ರವರಿ-2017 ರೂ.2,36,775/- ಗಳನ್ನು ಪಾವತಿಸಲಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು) ಸಂಖ್ಯೆ:ಇಡಿ/49/UOV/2014, ದಿನಾಂಕ:03.11.2011 ವಿಶ್ವವಿದ್ಯಾನಿಲಯದ ಧನ ಆಯೋಗದಿಂದ UGC ಮಾನ್ಯತೆ ನವೀಕರಣ ಆಗುವವರೆಗೆ 2015-16ರ ಸಾಲಿಗೆ ಹೊಸ ಕೋರ್ಸ್‌ಗಳಿಗೆ ಪ್ರವೇಶ ನೀಡಬಾರದೆಂದು ತಿಳಿಸಲಾಗಿದ್ದು, ಸದರಿ ಅತಿಥಿ ಉಪನ್ಯಾಸಕರನ್ನು ಮುಂದುವರಿಸಿ ವೇತನ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ.

ವಿಚಾರಣೆ ಸಂಖ್ಯೆ:114 ದಿನಾಂಕ:22.12.2018 ರಂದು ನೀಡಿರುವ ವಿಚಾರಣೆ ದಿನಾಂಕ:10.01.2019 ರಂದು ನೀಡಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ವಿವರಣೆ ಸೂಕ್ತವಲ್ಲದ ಕಾರಣ ಹಾಗೂ ಶೈಕ್ಷಣಿಕ ಪ್ರವೇಶಾತಿ ಇಲ್ಲದೆ ವೇತನ ಪಾವತಿಸಿರುವುದು ಕ್ರಮಬದ್ಧವಾಗಿರುವುದಿಲ್ಲ. ಆದ್ದರಿಂದ ಕಂಡಿಕೆಯನ್ನು ಮುಂದುವರೆಸಲಾಗಿದೆ.

ಉತ್ತರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ 2012-13ರ ನಂತರ ಮಾನ್ಯತೆ ಇರುವುದಿಲ್ಲವೆಂದು ಯುಜಿಸಿ ದಿನಾಂಕ: 26.06.2015ರಲ್ಲಿ ಸಾರ್ವಜನಿಕ ತಿಳುವಳಿಕೆ ನೀಡಿರುವ ಆ ವೇಳೆಗಾಗಲೇ ವಿ.ವಿ.ನಿಲಯದಲ್ಲಿ 2013-14, 2014-15ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡಿರುತ್ತವೆ. ಸದರಿ ಸಾರ್ವಜನಿಕ ತಿಳುವಳಿಕೆಯನ್ವಯ 2015-16ನೇ ಸಾಲಿನಿಂದ ಯಾವುದೇ ಹೊಸ ಪ್ರವೇಶಾತಿಗಳನ್ನು ಮಾಡಿರುವುದಿಲ್ಲ ಸರ್ಕಾರವು ದಿನಾಂಕ: 03.12.2015ರ ತನ್ನ ಪತ್ರದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರವೇಶಾತಿಗೊಂಡು ನವೀಕರಣಗೊಳ್ಳಬೇಕಾದ ಪ್ರವೇಶಾತಿಗಳನ್ನು ಮಾತ್ರ ಮಾಡುವಂತೆ ನೀಡಿದ ನಿರ್ದೇಶನದ ಅನ್ವಯ 2015-16ನೇ ಸಾಲಿನಲ್ಲಿ ದ್ವಿತೀಯ ಮತ್ತು ಅಂತಿಮ ಬಿ.ಎ/ಬಿ.ಕಾಂ, ಹಾಗೂ ಸ್ನಾತಕೋತ್ತರ ಅಂತಿಮ ಸಾಲಿನ ಪ್ರವೇಶಾತಿಗೆ

| | |
|---|---|
| | ನವೀಕರಣವನ್ನು ಮಾತ್ರ ಮಾಡಲಾಗಿರುತ್ತದೆ. 2016–17ನೇ ಸಾಲಿನಲ್ಲಿ ಒಟ್ಟಾರೆ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಈ ವಿದ್ಯಾರ್ಥಿಗಳಿಗೆ ನೀಡಬೇಕಾದ ಶೈಕ್ಷಣಿಕ ಕಾರ್ಯಕ್ರಮ ಪರೀಕ್ಷೆಗಳ ಕಾರ್ಯ ವಿ.ವಿ.ನಿಲಯದ ಮೇಲೆ ಇರುತ್ತದೆ. ಹಾಗಾಗಿ ಈ 2 ವಿಭಾಗಗಳ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದು ವೇತನ ಪಾವತಿಸಲಾಗಿರುತ್ತದೆ. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 46 | **<u>46. ಶ್ರೀ ರಾಜಶೇಖರ ಸವಣೂರುರವರನ್ನು ತಾತ್ಕಾಲಿಕವಾಗಿ ಯುಜಿಸಿ, ಡಿ.ಎಸ್.ಟಿ, ಐಸಿಎಸ್ಆರ್ಆರ್ ಮತ್ತು ಎನ್ಸಿಇಆರ್ಟಿಯಡಿಯಲ್ಲಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು :–</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ ಬಿ.ಆರ್ ಸಂಖ್ಯೆ:307/04.05.2016 ಧನಾದೇಶ ಸಂಖ್ಯೆ: 889544/04.05.2016 ಓಚರ್ ಸಂಖ್ಯೆ: 29ರ ಮೂಲಕ ಶ್ರೀ ರಾಜಶೇಖರ್ ಸವಣೂರು ಇವರಿಗೆ ಮಾಹೆಯಾನ ರೂ.37,683/–ಗಳನ್ನು ಪಾವತಿಸಲಾಗಿದ್ದು, ಇವರನ್ನು ಯು.ಜಿ.ಸಿ, ಡಿ.ಎಸ್.ಟಿ, ಪಿ.ಸಿ.ಎಸ್.ಆರ್.ಆರ್ ಮತ್ತು ಎನ್.ಸಿ.ಇ.ಆರ್.ಟಿಯಡಿಯಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ. ಸದರಿಯವರನ್ನು ನೇಮಕಮಾಡಿಕೊಂಡಿರುವ ಬಗ್ಗೆ ನೇಮಕ ಪ್ರಕ್ರಿಯೆಯ ಕಡತ ಹಾಗೂ ಇತರೆ ಅಗತ್ಯ ಆದೇಶ ಇತ್ಯಾದಿ ವಿವರ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:110/21.12.2018ರಲ್ಲಿ ಕೋರಲಾಗಿ, ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ವಿವರಗಳು/ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವುದರಿಂದ ಸದರಿ ನೇಮಕಾತಿಯ ಅಗತ್ಯತೆ/ನೈಜತೇ ನಿಯಮ ಪಾಲನೆಗಳನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿಯವರಿಗೆ ಒಟ್ಟಾರೆ ವಾರ್ಷಿಕವಾಗಿ ಪಾವತಿಸಿರುವ ವೇತನ ರೂ.37,683 x 12 = **4,52,196/–ಗಳನ್ನು ದಾಖಲಾತಿಗಳನ್ನು** ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 47 | **<u>47. ಶ್ರೀ ಎಂ.ಗೋಪಾಲಸ್ವಾಮಿ, ಉಪಗ್ರಂಥಪಾಲಕರ ಸೇವಾಪುಸ್ತಕದಲ್ಲಿ ನ್ಯೂನತೆ :–</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಶ್ರೀ ಎಂ.ಗೋಪಾಲಸ್ವಾಮಿ, ಸೇವಾವಹಿಗಳನ್ನು ಪರಿಶೀಲಿಸಿದಂತೆ ವಿಚಾರಣೆ ಸಂಖ್ಯೆ:146/2018–19ಕ್ಕೆ ಸಂಬಂಧಿಸಿದಂತೆ ದಿನಾಂಕ:27.03.2019 ರಂದು ಪುನರ್ ಪರಿಶೀಲನೆ ಅವಧಿಯಲ್ಲಿ ಚರ್ಚಿಸಿದಂತೆ ನೀಡಿರುವ ದಾಖಲಾತಿಗಳು ಹಾಗೂ ಅನುಪಾಲನಾ ವರದಿ ಪರಿಶೀಲಿಸಿದಾಗ ಭಾಗಶಃ ಅನುಪಾಲನಾ ವರದಿ ನೀಡಿದ್ದು, ಕಂಡಿಕೆಗೆ ಈ ಕೆಳಕಂಡ ವರದಿಯಂತೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. |

| | |
|---|---|
| | 1. ಜನ್ಮದಿನಾಂಕ ಮೂಲ ದಾಖಲಾತಿಯೊಂದಿಗೆ ದೃಢೀಕರಿಸಿ ಸಹಿ ಮಾಡಿರುವುದಿಲ್ಲ.<br>2. ಮೂಲ ಅಂಕಪಟ್ಟಿಗಳ (Verification Report) ದಾಖಲಾತಿಗಳು ಲಭ್ಯವಿರುವುದಿಲ್ಲ.<br>3. ಸೇವಾಪುಸ್ತಕದಲ್ಲಿ ನಾಮ ನಿರ್ದೇಶನ ಇರುವುದಿಲ್ಲ.<br>4. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ ಅಂಗಿಕೃತಗೊಂಡ ಇತರೆ ಯಾವುದೇ ಸಂಸ್ಥೆಯಿಂದ ರಾಷ್ಟ್ರೀಯ, ರಾಜ್ಯಮಟ್ಟದ ಅರ್ಹತೆ ಪರೀಕ್ಷೆಯಲ್ಲಿ SLET, NET ಉತ್ತೀರ್ಣವಾಗಿರುವ ದಾಖಲಾತಿ ಹಾಜರುಪಡಿಸಿಲ್ಲ.<br>5. ಸರ್ಕಾರಿ ಆದೇಶ ಸಂಖ್ಯೆ: ED/37/UNE 2009/24.12.2009 ಫಾರಂ 17ರಲ್ಲಿ ವಿಶ್ವವಿದ್ಯಾನಿಲಯದ ಗ್ರಂಥಪಾಲಕರು/ಸಹಾಯಕ ಗ್ರಂಥಪಾಲಕರು ಕಾಲೇಜುಗಳ ಸಹಾಯಕ ಗ್ರಂಥಪಾಲಕರು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮಾತ್ರ ಭರ್ತಿ ಮಾಡಬೇಕಾಗಿರುತ್ತದೆ. ಹಾಗೂ ಸರ್ಕಾರಿ ಆದೇಶದಲ್ಲಿ ಸಹಾಯಕ ಗ್ರಂಥಪಾಲಕರ ಹುದ್ದೆಗೆ ವಿದ್ಯಾರ್ಹತೆ ತಕ್ಕಂತೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>6. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:KSOU/ಅವಿ/ಸಿಬ್ಬಂದಿ9/794/2010–11/32, ದಿನಾಂಕ:13.05.2010 ರಂದು ಮಾನ್ಯ ಕುಲಾಧಿಪತಿಗಳ ಆದೇಶದ ಮೇರೆಗೆ ಹಾಗೂ ವ್ಯವಸ್ಥಾಪನಾ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ ಶ್ರೀಯುತ ಉಪಗ್ರಂಥಪಾಲಕರನ್ನು ದಿನಾಂಕ:28.11.2009ರಲ್ಲಿ ಪರೀಕ್ಷಾರ್ಥ ಅವಧಿಯೆಂದು ಘೋಷಿಸಲಾಗಿದೆ. ಉಚ್ಚ ನ್ಯಾಯಾಲಯದಲ್ಲಿ ದಾವೆಯ ಅಂತಿಮ ಆದೇಶಕ್ಕೆ ಒಳಪಟ್ಟು, ಈ ಅವಧಿಯಲ್ಲಿ ಪರೀಕ್ಷಾರ್ಥ ಅವಧಿ ಘೋಷಣೆ ಮಾಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ಆಡಳಿತಾತ್ಮಕವಾಗಿ ಪರಿಶೀಲಿಸಿ ಅನುಪಾಲನ ವರದಿ ನೀಡಲು ತಿಳಿಸಿದೆ.<br>ನೇಮಕಾತಿ ಮಾಡಿಕೊಂಡಿರುವ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಕಾಯದರ್ಶಿ/ರಾಜ್ಯಪಾಲರಿಂದ ಅನುಮೋದನೆಗೊಂಡು ಮಂಜೂರಾತಿಯಾಗಿರುವ ಪರಿನಿಯಮ ಆದೇಶದ ಪ್ರತಿ ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. |
| | ಉತ್ತರ |
| | ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 48 | **48. ಕೆ.ಎಸ್.ಶಿವಕುಮಾರ್, ಸಹಾಯಕ ಪ್ರಾಧ್ಯಾಪಕರು, ಸೇವಾ ಪುಸ್ತಕದಲ್ಲಿ ನ್ಯೂನತೆ :–**<br>2016–17ನೇ ವರ್ಷದ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಶ್ರೀ ಕೆ.ಎಸ್.ಶಿವಕುಮಾರ್‌ರವರ ಸೇವಾ ಪುಸ್ತಕವನ್ನು ಪರಿಶೀಲಿಸಿದಾಗ ಹಾಗೂ ದಿನಾಂಕ:27.03.2019ರ ಪುನರ್ ಪರಿಶೀಲನೆಯ ಅವಧಿಯಲ್ಲಿ ಹಾಜರುಪಡಿಸಿರುವ ದಾಖಲಾತಿ/ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ಅನುಪಾಲನಾ ವರದಿಯು |

| | |
|---|---|
| | ಸಮಂಜಸವಲ್ಲದ ಕಾರಣ ಹಾಗೂ ಭಾಗಶಃ ಅನುಪಾಲನಾ ವರದಿ ನೀಡದಿರುವುದರಿಂದ ಕಂಡಿಕೆ ಮುಂದುವರಿಸುತ್ತ ವಿವರ ಈ ರೀತಿ ಇದೆ.<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರ ಸೇವಾ ಪುಸ್ತಕವನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿರುವುದಿಲ್ಲ. ಸೇವಾಪುಸ್ತಕದಲ್ಲಿ ಅಂಕಪಟ್ಟಿ, ಜಾತಿ ಪ್ರಮಾಣಪತ್ರ Phd, KSET, NET ಉತ್ತೀರ್ಣತೆಯ ವಿವರ ದಾಖಲು ಮಾಡಿರುವುದಿಲ್ಲ. ಇದರಿಂದ ಹಕ್ಕಿನಲ್ಲಿರುವ ರಜೆ, ಗೈರುಹಾಜರಿ ಅವಧಿ, ಅಮಾನತ್ತಿನ ಅವಧಿ ನಗದೀಕರಣ ಸೌಲಭ್ಯಕ್ಕಾಗಿ ಬಾಕಿ ಉಳಿದಿರುವ ರಜೆ ಬಗ್ಗೆ ಸೇವಾವಹಿಯಲ್ಲಿ ದಾಖಲು ಮಾಡದೆ ಇರುವುದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ:117/28.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ಸಮಂಜಸವಲ್ಲದ ಕಾರಣ ಹಾಗೂ 27.03.2019 ರಂದು ಪುನರ್ ಪರಿಶೀಲನೆಯ ಅವಧಿಯಲ್ಲಿ ಹಾಜರುಪಡಿಸಿರುವ ದಾಖಲಾತಿ/ಅನುಪಾಲನ ವರದಿ ಸೂಕ್ತವಲ್ಲದ ಭಾಗಶಃ ನೀಡಿರುವುದರಿಂದ ಕಂಡಿಕೆ ಮುಂದುವರಿಸುತ್ತ, ಸಹಾಯಕ ಪ್ರಾಧ್ಯಾಪಕರು ಉತ್ತೀರ್ಣತೆ ಹೊಂದಿರುವ ಮೂಲ ದಾಖಲಾತಿಗಳಿಂದ ಅಂಕಪಟ್ಟಿ, ಪದವಿ ಪ್ರಮಾಣಪತ್ರ ಸಂಬಂಧಪಟ್ಟ ವಿಶ್ವವಿದ್ಯಾನಿಲಯ/ಕಾಲೇಜಿನಿಂದ Verification Report ಪಡೆದಿರುವುದಿಲ್ಲ.<br>ನೇಮಕಾತಿ ಮಾಡಿಕೊಳ್ಳುವ ಮುನ್ನ ಸರ್ಕಾರದ ಉನ್ನತ ಶಿಕ್ಷಣ ಇಲಾಖೆವತಿಯಿಂದ ಅನುಮತಿ ಪಡೆದಿರುವ ಹಾಗೂ ರಾಜ್ಯಪಾಲರಿಂದ ಪರಿನಿಯಮ ಅನುಮೋದನೆಗೊಂಡು ಮಂಜೂರಾತಿ ನೀಡಿರುವ ಆದೇಶದ ಪ್ರತಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.<br>ಅಮಾನತ್ತುಗೊಂಡಿರುವ ಇವರ ಇಲಾಖಾ ವಿಚಾರಣೆಯ ವಿವರ ಹಾಗೂ ಶಿಸ್ತು ಪ್ರಾಧಿಕಾರವು ತೆಗೆದುಕೊಂಡ ತೀರ್ಮಾನದ ದಂಡನೆಯ ಕ್ರಮಗಳ ವಿವರವನ್ನು ಸೇವಾವಹಿಯಲ್ಲಿ ದಾಖಲಿಸದೆ ಇರುವುದರಿಂದ ಈ ಎಲ್ಲಾ ನ್ಯೂನತೆಗಳ ಕುರಿತು ಅನುಪಾಲನಾ ವರದಿ ನೀಡಲು ಸೂಚಿಸಿದೆ. |
| | ಉತ್ತರ |
| | ಶ್ರೀ.ಕೆ.ಎಸ್.ಶಿವಕುಮಾರ್, ಸಹಾಯಕ ಪ್ರಾಧ್ಯಾಪಕರವರು ನೇಮಕಗೊಂಡ ಹಿನ್ನಲೆಯಲ್ಲಿ ಸದರಿಯವರು ಸೇವಾ ಪುಸ್ತಕವನ್ನು ವಿಳಂಬವಾಗಿ ಸಲ್ಲಿಸಿರುತ್ತಾರೆ. ಸದರಿಯವರ ಇಲಾಖಾ ವಿಚಾರಣೆಯು ಮುಕ್ತಾಯಗೊಂಡಿದ್ದು ವಿಚಾರಣಾ ಅಧಿಕಾರಿಯವರು ಅಂತಿಮ ವರದಿ ಸಲ್ಲಿಸಿರುವುದಿಲ್ಲ. ವರದಿ ಸಲ್ಲಿಕೆಯಾದ ನಂತರ ತಾವು ಸೂಚಿಸಿರುವಂತೆ ಕ್ರಮ ಕೈಗೊಂಡು ವರದಿ ನೀಡಲಾಗುವುದು. |
| | **ವಿವರ** |
| 49 | **49. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ/ದಿನಗೂಲಿ/ಸಿಬ್ಬಂದಿ/ಹೊರಗುತ್ತಿಗೆ ಆಧಾರದ ನೌಕರರುಗಳಿಗೆ ಇಪಿಎಫ್ ಮತ್ತು ಇಎಸ್ಐ ವಂತಿಗೆಗಳನ್ನು ಕಟಾಯಿಸದಿರುವ ಕುರಿತು :–**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಶೀರ್ಷಿಕೆ 208ರಲ್ಲಿ |

| | |
|---|---|
| | ತಾತ್ಕಾಲಿಕ/ದಿನಗೂಲಿ/ಸಂಚಿತ/ಹೊರಗುತ್ತಿಗೆ ಹಾಗೂ ಗ್ರೇಡೆಡ್ ಪೇ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಒಟ್ಟು ರೂ.2,69,71,228/–ಗಳ ವೇತನ ಪಾವತಿಸಲಾಗಿದ್ದು, ಕಾರ್ಮಿಕ ಇಲಾಖೆ ಮಾರ್ಗಸೂಚಿಗಳನ್ವಯ ನಿಗದಿತಿ ಕನಿಷ್ಠ ವೇತನದೊಂದಿಗೆ ನೌಕರರುಗಳು ಉದ್ಯೋಗಿ ಹಾಗೂ ಉದ್ಯೋಗಸ್ಥರ ವಂತಿಗೆಯೊಂದಿಗೆ 'EPF' 'ESI' ಕಟಾಯಿಸಿರುವ ಹಾಗೂ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರುವ ಬಗ್ಗೆ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:61/29.11.2018ರಲ್ಲಿ ವಿಚಾರಣೆ ನೀಡಲಾಗಿದ್ದು, ಸದರಿ ಪತ್ರಕ್ಕೆ ಸಲ್ಲಿಸಿರುವ ಉತ್ತರ/ಸಮಜಾಯಿಷಿಯಲ್ಲಿ ಕೇವಲ 'ಗ್ರೇಡೆಡ್ ಪೇ' ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 86 ನೌಕರರುಗಳಿಗೆ ಮಾತ್ರ 'EPF' 'ESI' ವಂತಿಗೆ ಕಟಾಯಿಸಿರುವುದು ಹಾಗೂ ಉದ್ಯೋಗದಾತರ ವಂತಿಗೆ ಮೂಲದೊಂದಿಗೆ ರೂ.69,90,062/– ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರುವುದು ಕಂಡುಬಂದಿರುತ್ತದೆ. ವಿವರವನ್ನು ಅನುಬಂಧ (16)ರಲ್ಲಿ ವರದಿಗೆ ಲಗತ್ತಿಸಿದೆ. ಈ ಸಂಬಂಧ ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:157/17.01.2019ರಲ್ಲಿ ಕೋರಲಾಗಿ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಸ್ಪಷ್ಟ ಸಮಜಾಯಿಷಿ/ದಾಖಲಾತಿ/ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದೆ ಇರುವುದರಿಂದ ಈಗಾಗಲೇ 'EPF' 'ESI' ಕಟಾಯಿಸಲಾಗಿರುವ ಗ್ರೇಡೆಡ್ ಪೇ ನೌಕರರನ್ನು ತಾತ್ಕಾಲಿಕ/ಸಂಚಿತ/ದಿನಗೂಲಿ ನೌಕರರುಗಳಿಗೆ 'EPF' 'ESI' ನ್ನು ಕಟಾಯಿಸಿ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಸೂಚಿಸಲಾಗಿದೆ. |
| | ಉತ್ತರ |
| | 2016–17ನೇ ಸಾಲಿನಲ್ಲಿ ತಾತ್ಕಾಲಿಕ/ದಿನಗೂಲಿ/ಸಂಚಿತ/ಹೊರಗುತ್ತಿಗೆ ಹಾಗೂ ಗ್ರೇಡೆಡ್ ಪೇ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಇ.ಪಿ.ಎಫ್, ಮತ್ತು ಇ.ಎಸ್.ಐ. ವಂತಿಕೆಯ ಮೊಬಲಗು ಒಟ್ಟು ರೂ.69,90,062.00 ಗಳಿಗೆ ಸಂಬಂಧಿಸಿದಂತೆ ಇ.ಪಿ.ಎಫ್, ಮತ್ತು ಇ.ಎಸ್.ಐ. ಬಟವಾಡೆ ವಹಿ, ಕಡತವನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿದ್ದು, ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 50 | **50. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಕೇಂದ್ರಗಳಲ್ಲಿನ ಸಂಯೋಜನಾಧಿಕಾರಿ ಹಾಗೂ ಸಹಾಯಕ ಸಂಯೋಜನಾಧಿಕಾರಿ, ಗುಮಾಸ್ತರು, 'ಡಿ' ದರ್ಜೆ ನೌಕರರಿಗೆ ಸಂಭಾವನೆ ಪಾವತಿಸಿರುವ ಬಗ್ಗೆ :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ General study centre co-ordinator manual 2011-12 Apendex 5 ರಂತೆ ಪ್ರತಿ ಅಧ್ಯಯನ ಕೇಂದ್ರಗಳಿಗೆ ಒಬ್ಬ ಸಂಯೋಜನಾಧಿಕಾರಿ ಹಾಗೂ ಸಹಾಯಕ ಸಂಯೋಜನಾಧಿಕಾರಿ, ಗುಮಾಸ್ತರು, 'ಡಿ' ಗ್ರೂಪ್ ನೌಕರರನ್ನು ನೇಮಿಸಿಕೊಂಡು ಪ್ರತಿ ಮಾಹೆ ಸಂಭಾವನೆ ಪಾವತಿಸಿರುವುದು ಕಂಡುಬಂದಿರುತ್ತದೆ. 2016–17ನೇ ಸಾಲಿನ ಸಾದಿಲ್ವಾರು ಬಿಲ್ಲುಗಳನ್ನು ಪರಿಶೀಲಿಸಿದಾಗ |

| | |
|---|---|
| | ಅಧ್ಯಯನ ಕೇಂದ್ರಗಳಲ್ಲಿನ ಸಂಯೋಜನಾಧಿಕಾರಿ ಮಾಹೆ ಹಣ ರೂ.2000/– ರಂತೆ ಹಾಗೂ ಸಹಾಯಕ ಸಂಯೋಜನಾಧಿಕಾರಿ ರೂ.1,000/–, ಗುಮಾಸ್ತರು ರೂ.800/– ಹಾಗೂ 'ಡಿ' ದರ್ಜೆ ನೌಕರರು/ಸಹಾಯಕರು ರೂ.500/– ಒಟ್ಟು ರೂ.50,37,071/– ಸಂಭಾವನೆ ಪಾವತಿಸಲಾಗಿದೆ. ಪಾವತಿಸಿರುವ ವಿವರವನ್ನು **ಅನುಬಂಧ (17)ರಲ್ಲಿ** ತಿಳಿಸಿರುವಂತೆ ಹಾಗೂ ವಿಚಾರಣೆಗೆ ಸಂಬಂಧಿಸಿದಂತೆ ಸೂಕ್ತ ಸರ್ಕಾರಿ ಆದೇಶದೊಂದಿಗೆ ಹಾಜರುಪಡಿಸಲು ತಿಳಿಸಲಾಗಿತ್ತು. ಆದರೂ ಹಾಜರುಪಡಿಸದೆ ಇರುವುದರಿಂದ ಹಾಗೂ 2016–17ನೇ ಸಾಲಿನಲ್ಲಿ ಪ್ರವೇಶಾತಿ ಇಲ್ಲದೆ ಹಾಗೂ ಪರೀಕ್ಷೆಗೆ ಹಾಜರಾತಿ ಇಲ್ಲದೆ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. 2015–16ನೇ ಸಾಲಿನ ಪಾವತಿಯನ್ನು 2016–17ನೇ ಸಾಲಿನಲ್ಲಿ ಪಾವತಿಸಿರುವುದು ಡಿಲೆ ಕಂಡಲೇಷನ್ ಕೆ.ಎಫ್.ಸಿ ನಿಯಮ 131, 132 ವಿರುದ್ಧವಾಗಿರುತ್ತದೆ. ಹಾಗೂ ಕೆ.ಸಿ.ಎಸ್.ಆರ್ ನಿಯಮದಂತೆ ಗೌರವ ಸಂಭಾವನೆ ಪಾವತಿ ಮಾಡಲು ಬರುವುದಿಲ್ಲ. ವಿಶ್ವವಿದ್ಯಾನಿಲಯದ ಪರಿನಿಯಮ GO NO D100 UNE 99 Dated 15th Nov 1999 ಹಾಗೂ GO NO ED 100 UNE 2000 Bangalore dated 8th August 2000 Hence there statutes ಈ ಆದೇಶದನ್ವಯ ಯಾವುದೇ ರೀತಿಯ ಸಂಭಾವನೆ ಪಾವತಿಸಲು ಬರುವುದಿಲ್ಲ. ಗೌರವ ಸಂಭಾವನೆ ಮೊತ್ತ ರೂ.50,37,071/– ಪಾವತಿಸಿರುವುದು ಹಾಗೂ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಡೀನ್ (ಅ.ಕೇ)/2015–16 ದಿನಾಂಕ:28.06.2016 ರಂದು ಬೇರೆ ಬೇರೆ ಕಾಲೇಜುಗಳಲ್ಲಿ ದಿನಾಂಕ:01.01.2016 ರಂದು ಜಾರಿಗೆ ಬಂದಂತೆ ಸಹಾಯಕ ಸಂಯೋಜನಾಧಿಕಾರಿ ಹುದ್ದೆಯನ್ನು ರದ್ದು ಮಾಡಿರುವುದಕ್ಕೆ ಸದರಿ ಅವಧಿಯಲ್ಲಿ ಗೌರವ ಸಂಭಾವನೆ ಪಾವತಿಸಿರುವುದು ಕ್ರಮಬದ್ದವಾಗಿರುವುದಿಲ್ಲ. ರದ್ದುಗೊಳಿಸಿರುವ ಹುದ್ದೆಗೆ ಗೌರವ ಸಂಭಾವನೆ ಪಾವತಿಸಿರುವುದು ವಿಶ್ವವಿದ್ಯಾನಿಲಯದ ಆರ್ಥಿಕ ನಷ್ಟ ಕಂಡುಬಂದಿರುವುದಿಲ್ಲ. ಸೂಕ್ತ ವಿವರಣೆ ಹಾಗೂ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ ಆದೇಶದ ಪ್ರತಿ ಹಾಗೂ BOM ಸಭೆಯಲ್ಲಿ ಮಂಜೂರಾತಿಯಾಗಿರುವ ಆದೇಶವನ್ನು ಹಾಗೂ ನಿಯಮಬಾಹಿರವಾಗಿ ಪಾವತಿಸಿರುವ ವಿಚಾರದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ವಿವರಣೆ ನೀಡಲು ಸೂಚಿಸಿದೆ.<br>ಮೇಲಿನ ವಿವರದಲ್ಲಿ ತಿಳಿಸಿರುವಂತೆ ಸರ್ಕಾರಿ ಆದೇಶದ ಉಲ್ಲಂಘನೆ ಮಾಡಿ ಹಾಗೂ ಕೆ.ಸಿ.ಎಸ್.ಆರ್ ನಿಯಮ ಬಾಹಿರವಾಗಿ ಪಾವತಿಸಿರುವ ಮೊಬಲಗು **ರೂ.50,37,071/– ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | 2011–12ನೇ ಸಾಲಿನಲ್ಲಿ ಅಧ್ಯಯನ ಕೇಂದ್ರಗಳಲ್ಲಿ ಸಹಾಯಕ ಸಂಯೋಜನಾಧಿಕಾರಿಗಳ ಸಂಭಾವನೆ ಪಾವತಿಸುವ ಸಂಬಂಧ ಕಚೇರಿ ಆದೇಶ ಸಂಖ್ಯೆ ಕರಾಮುವಿ/ಡಿ.ಅಕೇ/2011–12 ದಿನಾಂಕ 20–10–2011 ರಲ್ಲಿ ಸಂಭಾವನೆ ನೀಡಲು ಮೊತ್ತವು ನಿಗದಿಯಾಗಿದೆ. ಇದರ ಪ್ರಕಾರ ಸಂಭಾವನೆ ಪಾವತಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ, ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |

| | ವಿವರ |
|---|---|
| 51 | **51. ಬಾಹ್ಯ ಬರಹಗಾರರಿಗೆ ಸಂಭಾವನೆ ಪಾವತಿ ಮಾಡಿರುವ ಬಗ್ಗೆ :–**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಪಾವತಿ ಓಚರ್‌ಗಳಲ್ಲಿ ಎಸ್‌ಐಎಲ್.ಎಂ ಸಿದ್ಧಪಾಠಗಳನ್ನು ರಚಿಸಿರುವ ಬಾಹ್ಯ ಬರಹಗಾರರಿಗೆ 1 ಯುನಿಟ್‌ಗೆ ರೂ.6,000/–ಗಳಂತೆ ಒಟ್ಟು ರೂ.36,93,000/–ಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ. ಹಾಗೂ 2015–16ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಗಳಲ್ಲಿ ಸಿದ್ಧಪಾಠ ಬರಹಗಾರರ ಸಂಭಾವನೆಗಾಗಿ ರೂ.36,93,000/–ಗಳ ವೆಚ್ಚ ಭರಿಸಿರುವುದನ್ನು ನಮೂದಿಸಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿರುವ ಪರಿಣಿತ ಪ್ರಾಧ್ಯಾಪಕರಿಂದಲೇ ಸಿದ್ಧಪಾಠ ರಚಿಸುವ ಕಾರ್ಯ ಮಾಡಿಸಿದ್ದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅಧಿಕ ಮೊತ್ತದ ಆರ್ಥಿಕ ಹೊರೆಯಾಗುವುದನ್ನು ತಪ್ಪಿಸಬಹುದಾಗಿತ್ತು. ಈ ರೀತಿ ಸಂಭಾವನೆ ಪಾವತಿಸಿರುವುದು ಕೆ.ಸಿ.ಎಸ್.ಆರ್ (28)ರ ನಿಯಮದ ಉಲ್ಲಂಘನೆಯಾಗಿರುತ್ತದೆ. ಸಂಭಾವನೆ ಪಾವತಿ ಬಗ್ಗೆ ವಿಚಾರಣೆ ಸಂಖ್ಯೆ: 128/ದಿನಾಂಕ:05.01.2019 ರಲ್ಲಿ ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿತ್ತು. ನೀಡಿರುವ ವಿವರಣೆಯಲ್ಲಿನ ಉತ್ತರ ಸಮಂಜಸವಾಗಿರುವುದಿಲ್ಲ. ಬಾಹ್ಯ ಬರಹಗಾರರಿಗೆ ಪಾವತಿ ಸಂಬಂಧ<br>1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಕಾರ್ಯಭಾರ ಹಂಚಿಕೆ.<br>2. ಪ್ರಾಧ್ಯಾಪಕರುಗಳಿಗೆ ಸಿದ್ಧಪಾಠ ರಚಿಸುವ ಕಾರ್ಯ ಹಂಚಿಕೆ.<br>ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಿದೆ. ಲೆಕ್ಕಪರಿಶೋಧನೆಗೆ ನೀಡಿರುವ ಉತ್ತರ ಸಮಂಜಸವಾಗಿಲ್ಲದ ಕಾರಣ ಬಾಹ್ಯ ಬರಹಗಾರರಿಗೆ ಪಾವತಿಸಲಾಗಿರುವ ಮೊತ್ತ **ರೂ.36,93,000/–ಗಳನ್ನು ವಸೂಲಾತಿಗೆ ಸೂಚಿಸಿದೆ.** ಪಾವತಿಸಿರುವ ವಿವರಗಳನ್ನು **ಅನುಬಂಧ (18)ರಲ್ಲಿ** ನೀಡಲಾಗಿದೆ. ಹಿಂದಿನ ವರ್ಷದ ಸಂಭಾವನೆಯನ್ನು ವಿಳಂಬವಾಗಿ ಪಾವತಿಸಿರುವುದು ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 131 ರಿಂದ 133ರ ಪ್ರಕಾರ Delay Condanation ದೃಢೀಕರಿಸದೆ ಬಿಲ್ಲು ಪಾವತಿಸಿರುವುದು ನಿಯಮಬಾಹಿರವಾಗಿರುವುದರಿಂದ ವಸೂಲಾತಿಗೆ ಸೂಚಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ ಆಯಾಯ ವಿಭಾಗಗಳ ಎಲ್ಲಾ ಪ್ರಾಧ್ಯಾಪಕರುಗಳಿಗೆ ಆಯಾ ವರ್ಷದಲ್ಲಿ ನಿರ್ದಿಷ್ಟ ಪ್ರಮಾಣದ ಸಿದ್ಧಪಾಠಗಳನ್ನು ರಚಿಸಲು ಹಂಚಿಕೆ ಮಾಡಿಯೂ, ಹೆಚ್ಚುವರಿಯಾಗಿ ಉಳಿಕೆ ಪಾಠಗಳ ಬರವಣಿಗೆ ಕಾರ್ಯವನ್ನು ಮಾತ್ರ ಬಾಹ್ಯ ಪ್ರಾಧ್ಯಾಪಕರಿಗೆ ಹಂಚಿಕೆ ಮಾಡಲಾಗಿದೆ.<br><br>1. ಪ್ರಾಧ್ಯಾಪಕರ ಕಾರ್ಯಭಾರ ಹಂಚಿಕೆಯ ಸಂಬಂಧ Statutes ಮಾಡಿಕೊಳ್ಳಲಾಗಿದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ. |

| | |
|---|---|
| | **2.** ಆಯಾ ವಿಭಾಗದ ಮುಖ್ಯಸ್ಥರು, ವಿಷಯ ತಜ್ಞರುಗಳ ಪಟ್ಟಿಯನ್ನು ಸಿದ್ಧಪಾಠ ರಚಿಸುವ ಕಾರ್ಯ ಹಂಚಿಕೆಯನ್ನು ಸಲ್ಲಿಸಿರುವಂತೆ ನಿಯಮಾನುಸಾರ ಕ್ರಮ ವಹಿಸಲಾಗಿರುವ ಕಛೇರಿ ಆದೇಶಗಳ ಪ್ರತಿಯನ್ನು ಲೆಕ್ಕ ತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಆದುದರಿಂದ ವಸೂಲಾತಿ ಕಂಡಿಕೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| | ವಿವರ |
| 52 | **52. 2016–17ನೇ ಸಾಲಿನ ಸಂಪರ್ಕ ಕಾರ್ಯಕ್ರಮ ವೆಚ್ಚಕ್ಕೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರದ ಕೋಡ್ ಸಂಖ್ಯೆ 288ರಲ್ಲಿ ಗೌರವ ಸಂಭಾವನೆಯ ಸ್ಥಳೀಯ ಭತ್ಯೆ ಇತರೆ ಭತ್ಯೆಯನ್ನು ಎ.ಸಿ ಬಿಲ್ಲುಗಳ ಮೂಲಕ ಪಾವತಿಸಲಾಗಿದ್ದು, ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸದೆ ಇರುವುದು :–** |

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ವಾರ್ಷಿಕ ಲೆಕ್ಕಪತ್ರ ಕೋಡ್ ಸಂಖ್ಯೆ 288ರಲ್ಲಿ ರೂ.26,76,513/– ಸಾದಿಲ್ವಾರು ಬಿಲ್ಲನ್ನು ಹಾಜರುಪಡಿಸಿ ಉಳಿದ ರೂ.11,85,850/–ಗಳಿಗೆ ಎನ್.ಡಿ.ಸಿ ಬಿಲ್ಲುಗಳಿಗೆ ಹಾಜರುಪಡಿಸದೆ ಇರುವುದರಿಂದ ಪಾವತಿಸಿರುವ ಮೊಬಲಗನ್ನು ಅಕ್ಷೇಪಣೆಯಲ್ಲಿಡಲಾಗಿದೆ. ವಿಚಾರಣೆ ಸಂಖ್ಯೆ:128/05.01.2019 ಈ ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಮೊಬಲಗು **ರೂ.11,85,850/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಸಂಪರ್ಕ ಕಾರ್ಯಕ್ರಮಗಳಿಗೆ ಎ.ಸಿ ಹುಂಡಿಗಳ ಮೂಲಕ ಹಣಪಾವತಿಸಿರುವ ವಿವರಗಳು**

| ಕ್ರ.ಸಂ | ಬಿ.ಆರ್ ಸಂಖ್ಯೆ ದಿನಾಂಕ | ಅಧ್ಯಯನ ಕೇಂದ್ರದ ಹೆಸರು | ಕಾರ್ಯಕ್ರಮದ ವಿಷಯ | ಓಚರ್ ನಂ | ಪಾವತಿಸಿರುವ ಮೊತ್ತ | ಧನಾದೇಶ ಸಂಖ್ಯೆ | ದಿನಾಂಕ |
|---|---|---|---|---|---|---|---|
| 1 | 80/ 12.04.2016 | ಡೀನ್ (ಅಧ್ಯಯನ ಕೇಂದ್ರ), ಮೈಸೂರು | ಡೀನ್ (ಅಧ್ಯಯನ ಕೇಂದ್ರ) ಎಂ.ಎ, ದ್ವಿತೀಯ ವರ್ಷ | 08 | 1000000 | 889558 | 03.05.16 |
| 2 | 294/ 04.05.2016 | ಕರಾಮುವಿ ಕೇಂದ್ರ ಕಛೇರಿ, ಮೈಸೂರು | ಅಧ್ಯಕ್ಷರು ಡಾ.ಜೆ.ಎಸ್.ಚಂದ್ರಶೇಖರ್, ಎಂ.ಎಸ್ಸಿ ಪರಿಸರ ವಿಜ್ಞಾನ, 3ನೇ ಸೆಮಿಸ್ಟರ್ | 37 | 44850 | 889552 | 11.05.16 |
| 3 | 534/ 01.06.2016 | ಮಹಾರಾಣಿ ಕಾಲೇಜು, ಬೆಂಗಳೂರು ಕರಾಮುವಿ ಕೇಂದ್ರ 1ಕಛೇರಿ, ಮೈಸೂರು | ಅಧ್ಯಕ್ಷರು, ಡಾ.ಎಸ್. ಸುಷ್ಮ, ಬಿ.ಎ, ಮನೋವಿಜ್ಞಾನ, 3ನೇ ಸೆಮಿಸ್ಟರ್ | 30 | 141000 | 889632 | 06.06.16 |
| | | | | ಒಟ್ಟು | **11,85,850** | | |

| | |
|---|---|
| | ವಿಚಾರಣೆ ಪತ್ರ ಸಂಖ್ಯೆ:85/2018–19 ದಿನಾಂಕ:11.12.2018 Manual Contingent Expenditure ನಿಯಮ 37 (ಬಿ) (ಸಿ) ರ ಪ್ರಕಾರ ಒಂದು ತಿಂಗಳೊಳಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಬೇಕಾಗಿದ್ದು, ಇದುವರೆವಿಗೂ ಸಲ್ಲಿಸದೆ ಇರುವುದರಿಂದ ಸರ್ಕಾರಿ ದರದಂತೆ ಒಟ್ಟು ವಸೂಲಾತಿ ಕ್ರಮವನ್ನು ತಿಳಿಸುತ್ತಾ ಎನ್.ಡಿ.ಸಿ ಬಿಲ್ಲುಗಳನ್ನು ಹೊಂದಾಣಿಕೆಯಾಗದೆ ವಿಳಂಬಮಾಡಿರುವ ವಿಚಾರದಲ್ಲಿ ಸೂಕ್ತ ವಿವರಣೆ ನೀಡಬೇಕೆಂದು ತಿಳಿಸಲಾಗಿದೆ. |
| | ಉತ್ತರ |
| | ಆಡಿಟ್ ವೇಳೆಯಲ್ಲಿ ಸದರಿ ಎನ್ ಡಿ ಸಿ ಹುಂಡಿಗಳನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಿರುವ ಬಗ್ಗೆ ಮಾಹಿತಿ ನೀಡಲಾಗಿದೆ. ಆದರೆ ಎನ್ ಡಿ ಸಿ ಹುಂಡಿಗಳಲ್ಲಿ ನ್ಯೂನತೆ ಸರಿ ಪಡಿಸುವಂತೆ ತಿಳಿಸಲಾಗಿತ್ತು. ವಿಭಾಗದಿಂದ ಹುಂಡಿಗಳನ್ನು ಹಿಂದಿರುಗಿಸಲಾಗಿದೆ. ನ್ಯೂನತೆಯನ್ನು ಸರಿಪಡಿಸಿ ಮುಂಗಡ ಪಡೆದ ಲೆಕ್ಕ ಹೊಂದಾಣಿಕೆ ಹುಂಡಿಗಳನ್ನು ಸಿದ್ದಪಡಿಸಲಾಗಿದ್ದು ಸ್ಥಳೀಯ ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲು ಕೋರಿದೆ, |
| | **ವಿವರ** |
| 53 | **53. ಅಧಿಕಾರಿ ಮತ್ತು ಬೋಧಕ ಸಿಬ್ಬಂದಿ ವರ್ಗದವರಿಗೆ ಕೆ.ಸಿ.ಎಸ್.ಆರ್ ನಿಯಮಗಳನ್ವಯ ಟಿ.ಎ/ಡಿ.ಎ ಪಾವತಿಸಿರುವ ಬಗ್ಗೆ :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿಸೂಚನೆ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–02/856/20112–13, ದಿನಾಂಕ:18.05.2012ರ ರೀತ್ಯಾ ಕೆ.ಸಿ.ಎಸ್.ಆರ್ ನಿಯಮಗಳನ್ವಯ ಸರ್ಕಾರಿ ನೌಕರರಿಗೆ ನೀಡಬಹುದಾದ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ವಿಶೇಷ ದಿನಭತ್ಯೆಗಳ ದರಗಳನ್ನು ಪರಿಷ್ಕರಿಸಿ ತಮ್ಮದೇ ಆದ ದರವನ್ನು ನೀಡುತ್ತಿದ್ದು, ಸದರಿ ಅಧಿಸೂಚನೆ ಸರ್ಕಾರದ ಅನುಮೋದನೆ ಪಡೆದು ಪರಿನಿಯಮ (Statute) ಆಗದೇ ಇರುವುದರಿಂದ ಸದರಿ ಅಧಿಸೂಚನೆಯನ್ವಯ ನೀಡಲಾಗುತ್ತಿರುವ ದರಗಳನ್ನು ಪ್ರಶ್ನಿಸಿ ನೀಡಲಾಗಿದ್ದ ಆಡಿಟ್ ವಿಚಾರಣೆಗೆ ಅನುಪಾಲನಾ ವರದಿಯು ಸಮಂಜಸವಾಗಿಲ್ಲದಿರುವುದರಿಂದ ಕೆ.ಸಿ.ಎಸ್.ಆರ್ ನಿಯಮಗಳನ್ವಯ ಅವಕಾಶವಿರುವಂತೆ ಲೆಕ್ಕಚಾರ ಮಾಡಿ ಹೆಚ್ಚುವರಿ ಪಾವತಿಯಾಗಿರುವ ಟಿ.ಎ/ಡಿ.ಎ **ರೂ.14,90,663/– ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಿ ವಿವರವನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ. ವಿವರವನ್ನು **ಅನುಬಂಧ (19)ರಲ್ಲಿ** ನೀಡಿದೆ. ಕೆ.ಸಿ.ಎಸ್.ಆರ್ ನಿಯಮ 28ರಂತೆ ಪ್ರಾಧ್ಯಾಪಕರುಗಳಿಗೆ ಹಾಗೂ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಸಂಭಾವನೆ ಪಾವತಿಸಲು ಬರುವುದಿಲ್ಲ. ಈ ಬಗ್ಗೆ ವಿವರಣೆ ನೀಡುವವರೆಗೆ ಮೊಬಲಗನ್ನು ವಸೂಲಾತಿಗೆ ಸೂಚಿಸಿದೆ. ವಿಚಾರಣೆ ಸಂಖ್ಯೆ:128/05.01.2019 ಈ ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಹಾಗೂ ವಿಚಾರಣೆ ಸಂಖ್ಯೆ:54ಕ್ಕೆ ಸಂಬಂಧಿಸಿದಂತೆ ನೀಡಿರುವ ಅನುಪಾಲನ ವರದಿ ಸಮಂಜಸವಲ್ಲದ ಕಾರಣ ಹಾಗೂ ಬಿಲ್ಲುಗಳ ನ್ಯೂನತೆ ಇರುವುದರಿಂದ ಕಂಡಿಕೆ ಮುಂದುವರಿಸಿದೆ. ಕೋಡ್ ಸಂಖ್ಯೆ 288 ವಾರ್ಷಿಕ ಲೆಕ್ಕಪತ್ರದಂತೆ. |

**<u>ಬಿಲ್ಲಿನ ನ್ಯೂನತೆಗಳು</u> :–**

1. ಸಂಪರ್ಕ ಕಾರ್ಯಕ್ರಮದ ತರಗತಿಗಳಿಗೆ ಆಯಾಯ ದಿನಾಂಕಗಳಂದು ವಿದ್ಯಾರ್ಥಿಗಳು ಹಾಜರಾಗಿ ಸಹಿ ಮಾಡಿರುವ ಹಾಜರಾತಿ ಪಟ್ಟಿಯ ಪ್ರತಿಗಳನ್ನು ಲಗತ್ತಿಸಿರುವುದಿಲ್ಲ. (ಸಂಯೋಜನಾಧಿಕಾರಿಗಳು ದೃಢೀಕರಿಸಿರುವ)
2. ಬೆಂಗಳೂರು ಹಾಗೂ ಹಾಸನ ಕೇಂದ್ರಗಳಲ್ಲಿ ನಡೆದ ರಾಜ್ಯ ಶಾಸ್ತ್ರ ವಿಷಯದ ಸಂಪರ್ಕ ಕಾರ್ಯಕ್ರಮದ ತರಗತಿಯ ವೇಳಾಪಟ್ಟಿಗಳನ್ನು ಲಗತ್ತಿಸಿರುವುದಿಲ್ಲ.
3. ಬೆಂಗಳೂರು ಹಾಗೂ ಹಾಸನ ಕೇಂದ್ರಗಳಲ್ಲಿ ನಡೆದ ವಾಣಿಜ್ಯ ಶಾಸ್ತ್ರ ವಿಷಯದ ಸಂಪರ್ಕ ಕಾರ್ಯಕ್ರಮದ ತರಗತಿಯ ವೇಳಾಪಟ್ಟಿಗಳನ್ನು ಲಗತ್ತಿಸಿರುವುದಿಲ್ಲ.
4. ಶಿವಮೊಗ್ಗ ಕೇಂದ್ರದಲ್ಲಿ ನಡೆದ ಕನ್ನಡ ವಿಷಯದ ಸಂಪರ್ಕ ಕಾರ್ಯಕ್ರಮದ ತರಗತಿಯ ವೇಳಾಪಟ್ಟಿಗಳನ್ನು ಲಗತ್ತಿಸಿರುವುದಿಲ್ಲ.
5. ಹಾಸನ ಕೇಂದ್ರದಲ್ಲಿ ನಡೆದ ಇತಿಹಾಸ ವಿಷಯದ ಸಂಪರ್ಕ ಕಾರ್ಯಕ್ರಮದ ತರಗತಿಯ ವೇಳಾಪಟ್ಟಿಗಳನ್ನು ಲಗತ್ತಿಸಿದ್ದು, ತರಗತಿಗಳ ವಿವರ ಇರುವುದಿಲ್ಲ.
6. ಶಿವಮೊಗ್ಗ ಕೇಂದ್ರದಲ್ಲಿ ನಡೆದ ಸಮಾಜಶಾಸ್ತ್ರ ವಿಷಯದ ಸಂಪರ್ಕಕಾರ್ಯಕ್ರಮಕ್ಕೆ ಅಧ್ಯಾಪಕರುಗಳಾದ ಶ್ರೀ ಸಂತೋಷನಾಯಕ್.ಆರ್ ಹಾಗೂ ಶ್ರೀಮತಿ ಎಸ್. ರಮ್ಯಾ ಇವರನ್ನು ನಿಯೋಜನೆ ಮಾಡಲಾಗಿದೆ. (ನಿಯೋಜನೆ ಪಟ್ಟಿಯಲ್ಲಿರುವಂತೆ) ಆದರೆ ಹೊಂದಾಣಿಕೆ ಹುಂಡಿಯ ಓಚರ್‌ಗಳಲ್ಲಿ ಅಧ್ಯಾಪಕರುಗಳಾದ ಪ್ರೊ॥ ಎಂ.ಹೆಚ್.ಕೃಷ್ಣಪ್ಪ ಹಾಗೂ ಜಯಪಾಲ್ ಇವರು ಸಂಭಾವನೆಗಳನ್ನು ಪಡೆದಿರುತ್ತಾರೆ. ಇದರ ಬಗ್ಗೆ ಲಿಖಿತ ಮಾಹಿತಿ ಹಾಗೂ ನಿಯೋಜಿತ ಪಟ್ಟಿಗಳನ್ನು ಒದಗಿಸುವುದು.
7. ಬೆಂಗಳೂರು, ಹಾಸನ ಕೇಂದ್ರಗಳಲ್ಲಿ ನಡೆದ ಸಂಪರ್ಕ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರುಗಳು ಸಂಭಾವನೆಯನ್ನು ಪಡೆದಿದ್ದು, ಇದರ ಬಗ್ಗೆ ಲಿಖಿತ ಮಾಹಿತಿ ಹಾಗೂ ನಿಯೋಜಿತ ಪಟ್ಟಿ ಒದಗಿಸಿರುವುದಿಲ್ಲ.

ವೋಚರ್ ನಂ.107–108 ಮತ್ತು ಕ್ರ.ಸಂ 187–189 ವೋಚರ್‌ಗಳಿಗೆ ದೃಢೀಕರಣ ಇರುವುದಿಲ್ಲ.

ಉತ್ತರ

ಕರಾಮುವಿ ಕಾಯ್ದೆ 1994ರ 2ನೇ ಅನುಸೂಚಿಯ ಮೊದಲನೆಯ ಪರಿನಿಯಮದ ನಿಯಮ 8(2)(ಎಂ) ರನ್ವಯ ವ್ಯವಸ್ಥಾಪನಾ ಮಂಡಳಿಗೆ ಪ್ರದತ್ತವಾಗಿರುವ ಅಧಿಕಾರದಂತೆ ದಿ:31–03–2012ರಂದು ನಡೆದ ಹಣಕಾಸು ಸಮಿತಿ ಸಭೆಯು ಅನುಮೋದಿಸಿ, ಸದರಿ ಪರಿಷ್ಕೃತ ದರಗಳು ದಿ:13–03–12012ರಿಂದ ಜಾರಿಗೆ ಬರುವಂತೆ ತೀರ್ಮಾನವನ್ನು ವ್ಯವಸ್ಥಾಪನಾ ಮಂಡಳಿಯು ದಿ:31–03–2012ರಂದು ನಡೆದ 118ನೇ ಸಭೆಯಲ್ಲಿ ಅನುಮೋದಿಸಿರುತ್ತದೆ. ಅದರಂತೆ ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿದೆ. ಈ ಮೇಲಿನ ಅಂಶಗಳನ್ನು ಪರಿಗಣಿಸಿ, ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ.

| | ವಿವರ |
|---|---|
| 54 | **54. 2016–17ನೇ ಸಾಲಿನ ಶೀರ್ಷಿಕೆ – 221ರಲ್ಲಿ ಕಾನೂನು ವೆಚ್ಚ ಮಾಡಿರುವ ಬಗ್ಗೆ :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರ ಹಾಗೂ ಕಾನೂನು ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿದಾಗ ತೀರುವಳಿ ದಾವೆಗಳು ಬಾಕಿ ಉಳಿದಿರುವ ಮೊಕದ್ದಮೆಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣ ಸಂಭಾವನೆ ಬಿಲ್ಲುಗಳನ್ನು ವಕೀಲರಿಗೆ ಪಾವತಿಸಲಾಗಿದೆ. ಆದರೆ ಪಾವತಿಸಿರುವ ಮೊತ್ತವು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನಿಗದಿಪಡಿಸಿರುವ ಪ್ರತಿ ಪ್ರಕರಣದಲ್ಲಿ 5000 ರಿಂದ 20000 ರವರೆಗೆ ಪಾವತಿಸಲು ಆದೇಶಿಸಲಾಗಿದೆ. ಆದರೆ ಪಾವತಿಸಿರುವ ಬಿಲ್ಲುಗಳಲ್ಲಿ 20,000ಕ್ಕಿಂತ ಹೆಚ್ಚಿಗೆ ರೂ.9,75,000 ರವರೆಗೆ ಪಾವತಿಸಲಾಗಿದೆ. ಹಾಗೂ BOM ಸಭೆಯಲ್ಲಿ ಅನುಮೋದನೆ ಪಡೆದಿರುವ ಸರ್ಕಾರಿ ಆದೇಶ ಸಂಖ್ಯೆ: ಕರಾಮುವಿ/ಅವಿ/ಯುಎ–01/ಕಾನೂನು–818/2015–16 ದಿನಾಂಕ:22.03.2017ರ ಆದೇಶದಂತೆ ನಿಗದಿಪಡಿಸಿರುವ ದರಗಳು ಹೆಚ್ಚಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಪಾವತಿಸಿರುವ ಬಿಲ್ಲುಗಳ ವಹಿ ನಿರ್ವಹಿಸಿ ಪ್ರತ್ಯೇಕ ಉಚ್ಚನ್ಯಾಯಾಲಯದಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ಕಾರ್ಮಿಕರ ನ್ಯಾಯಾಲಯ High Court ಇತ್ಯಾದಿ ನ್ಯಾಯಾಂಗಗಳ ದರಗಳನ್ನು ನಿಗದಿಪಡಿಸಿ ಅಥವಾ Legal cell ಕಾನೂನು ತಜ್ಞರ ಅಭಿಪ್ರಾಯ ಪಡೆದು ದರ ನಿಗದಿಪಡಿಸಿ ಪಾವತಿಸಬೇಕಾಗುತ್ತದೆ. ಇದರಿಂದ ಯಾವ ಯಾವ ಪ್ರಕರಣಗಳಲ್ಲಿ ಎಷ್ಟು ನಿಗದಿಪಡಿಸಿದೆ ಎಂದು ತಿಳಿಯಪಡಿಸುವುದಿಲ್ಲ. ಹಾಗೂ ವಾರ್ಷಿಕ ಲೆಕ್ಕಪತ್ರದಂತೆ 32, 19, 105 ಪಾವತಿಸಿರುವುದು ಅನುಮೋದನೆ ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ **ರೂ.5,72,255/–ಗಳಿಗೆ** ಕಾನೂನು ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಓಚರ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ **ಆಕ್ಷೇಪಣೆಯಲ್ಲಿಡಲಾಗಿದೆ.**<br><br>ವಿಚಾರಣೆ ಸಂಖ್ಯೆ:15/13.11.2018 ರಂದು ನೀಡಿರುವ ವಿಚಾರಣೆಗೆ 23.01.2019 ರಂದು ನೀಡಿರುವ ಅನುಪಾಲನ ವರದಿಯನ್ನು ಪಾವತಿಸಿರುವ ಬಿಲ್ಲುಗಳಲ್ಲಿ ಪೂರಕ ದಾಖಲೆಗಳು ಇಲ್ಲದೆ ಹಾಗೂ ಭಾಗಶಃ ಕಾನೂನು ವೆಚ್ಚ ಬಿಲ್ಲುಗಳನ್ನು ನೀಡದೆ ಇರುವುದರಿಂದ ಭಾಗಶಃ ಕಾನೂನು ವೆಚ್ಚಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಯನ್ನು ಮುಂದುವರೆಸಲಾಗಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಅನುಮೋದನೆ ಮತ್ತು ಕುಲಪತಿಯವರ ಆದೇಶದಂತೆ ಪಾವತಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |

55

**<u>55. 2016–17ನೇ ಸಾಲಿನಲ್ಲಿ ಪ್ರಾದೇಶಿಕ ಕಚೇರಿಗಳ ಬಾಡಿಗೆ ಪಾವತಿ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ದರದಂತೆ ಪಾವತಿಸದೆ ಇರುವುದು ಹಾಗೂ ಕರಾರು ಒಪ್ಪಂದಗಳು ಪ್ರತಿ ವರ್ಷಕ್ಕೊಮ್ಮೆ ಪರಿಷ್ಕೃತ ಒಪ್ಪಂದ ಮಾಡಿಕೊಳ್ಳದೆ ಇರುವುದು :–</u>**

2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಪ್ರಾದೇಶಿಕ ಕಚೇರಿಗಳ ಬಾಡಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ. ಆದರೆ ಬಾಡಿಗೆ ನಿಗದಿಪಡಿಸಿರುವ ಕುರಿತು ಲೋಕೋಪಯೋಗಿ ಇಲಾಖೆ ವತಿಯಿಂದ ದರ ನಿಗದಿಪಡಿಸಿರುವ ಹಾಗೂ BOM ಸಭೆಯಲ್ಲಿ ವಿವಿಧ ಪ್ರಾದೇಶಿಕ ಕಛೇರಿಗಳ ಬಾಡಿಗೆ ನಿಗದಿಪಡಿಸಲು ಅನುಮೋದನೆ ಪಡೆದಿರುವ ಹಾಗೂ ಕುಲಸಚಿವರಿಂದ ಮಂಜೂರಾತಿ ಪಡೆದಿರುವ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವ 2016–17ನೇ ಸಾಲಿನ ಪರಿಷ್ಕೃತ ಬಾಡಿಗೆದರದ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ ಹಾಗೂ ಕರಾರು ಒಪ್ಪಂದವನ್ನು ಪ್ರತಿವರ್ಷ ದೃಢೀಕರಿಸಬೇಕಾಗಿದ್ದು, ಮೂರು ವರ್ಷಗಳಿಂದ ಹಳೆ ಕರಾರಿನಲ್ಲೆ ಮುಂದುವರೆಸಲಾಗಿದೆ. ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:14 ದಿನಾಂಕ:09.11.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಪಾವತಿಸಿರುವ ಮೊಬಲಗು **ರೂ.23,85,691/– ಆಕ್ಷೇಪಣೆಯಲ್ಲಿಡಲಾಗಿದೆ.** ವಿವರ ಈ ಕೆಳಗಿನಂತಿದೆ.

| **2016–17** | | |
|---|---|---|
| **ಕ್ರ.ಸಂ** | **ಪ್ರಾದೇಶಿಕ ಕೇಂದ್ರ** | **ಮೊತ್ತ** |
| 1 | ಬೀದರ್ | 2,24,250 |
| 2 | ರಾಮನಗರ | 1,93,200 |
| 3 | ಚಿಕ್ಕಮಗಳೂರು | 2,07,000 |
| 4 | ಕಾರವಾರ | 64,000 |
| 5 | ತುಮಕೂರು | 99,000 |
| 6 | ಬೆಂಗಳೂರು–2 | 80,000 |
| 7 | ಬೆಂಗಳೂರು–1 | 1,20,000 |
| 8 | ಮಂಡ್ಯ | 80,000 |
| 9 | ಶಿವಮೊಗ್ಗ | 2,30,000 |
| 10 | ಮಂಗಳೂರು | 2,30,000 |
| 11 | ಗುಲ್ಬರ್ಗ | 91,000 |
| 12 | ಬೆಂಗಳೂರು–3 | 30,000 |
| 13 | ಉಡುಪಿ | 1,50,820 |
| 14 | ಹಾಸನ | 1,68,000 |
| 15 | ಬಳ್ಳಾರಿ | 40,000 |
| 16 | ಚಾಮರಾಜನಗರ | 54,421 |
| 17 | ಬೆಳಗಾವಿ | 1,68,000 |
| 18 | ಬಿಜಾಪುರ | 1,56,000 |
| | **ಒಟ್ಟು** | **23,85,691** |

| | ಉತ್ತರ |
|---|---|
| | ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಅಧ್ಯಯನ ಕೇಂದ್ರಗಳಿಗೆ ಯಾವುದೆ ಬಾಡಿಗೆಯನ್ನು ನಿಗದಿಪಡಿಸಿರುವುದಿಲ್ಲ. ಕೇವಲ ನಿರ್ವಹಣಾ ವೆಚ್ಚವನ್ನು ಮಾತ್ರ ಪಾವತಿಸಲಾಗುತ್ತಿದೆ. ಮುಂದುವರೆದು, ಪ್ರಾದೇಶಿಕ ಕೇಂದ್ರಗಳ ಬಾಡಿಗೆ ನಿಗದಿಪಡಿಸುವಾಗ ಲೋಕೋಪಯೋಗಿ ಇಲಾಖೆಯ ದರಗಳು ಅಧಿಕವಾಗಿದ್ದರಿಂದ ಲೋಕೋಪಯೋಗಿ ಇಲಾಖಾ ವತಿಯಿಂದ ಬಾಡಿಗೆ ನಿಗದಿಪಡಿಸಿರುವುದಿಲ್ಲ. ಪ್ರಸ್ತುತ ನೂತನ ಬಾಡಿಗೆಯ ಕರಾರು ಮಾಡಿಕೊಳ್ಳುವ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಬಾಡಿಗೆಯನ್ನು ನಿಗದಿಪಡಿಸುವ ಸಂಬಂಧ ಕ್ರಮವಹಿಸಲಾಗುವುದು. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡುಂತೆ ಕೋರಲಾಗಿದೆ. |
| | **ವಿವರ** |
| 56 | **<u>56. 2016–17ನೇ ಸಾಲಿನ ಲೆಕ್ಕಪತ್ರದ ಕೋಡ್ ಸಂಖ್ಯೆ:283ರ ಸಿದ್ದಪಾಠ ಮುದ್ರಣದ ದಾಸ್ತಾನು ವಿತರಣೆ ಹಾಗೂ ಟೆಂಡರ್ ಕರೆಯದೆ ಇರುವುದು :–</u>**<br><br>2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ಸಿದ್ದಪಾಠ ಮುದ್ರಣಕ್ಕಾಗಿ ರೂ.81,99,797/– ಪಾವತಿಸಲಾಗಿದೆ. ಆದರೆ ಪಾವತಿಸಿರುವ ಮೊತ್ತವು ಕೆ.ಟಿ.ಪಿ.ಪಿ ನಿಯಮದಂತೆ ರೂ.5,00,000ಕ್ಕಿಂತ ಹೆಚ್ಚಿದ್ದರೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಕರೆಯದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆಯಾಗಿರುವುದರಿಂದ ಹಾಗೂ 2015–16ನೇ ಸಾಲಿನಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಖೈರು ಶಿಲ್ಕುಯಿರುವ ಸಿದ್ದಪಾಠ ಮುದ್ರಣದ ದಾಸ್ತಾನು ಲೆಕ್ಕದ ವಿವರಣೆಯನ್ನು ಕರ್ನಾಟಕ ಆರ್ಥಿಕ ಸಂಹಿತೆ 131, 132ರ ಪ್ರಕಾರ Delay condonation ಆಗಿರುತ್ತದೆ. ಈ ಬಗ್ಗೆ ಯಾವುದೇ ರೀತಿಯ ಘಟನೋತ್ತರ ಮಂಜೂರಾತಿ ಹಾಗೂ BOM ಸಭೆಯಲ್ಲಿ ಪ್ರಸ್ತಾಪ ಇರುವುದಿಲ್ಲ ಹಾಗೂ ಆರ್ಥಿಕ ವರ್ಷದಲ್ಲಿ ಪ್ರತಿ ವರ್ಷ ಸಂಬಂಧಿಸಿದ Cost of printing Lessonsಗೆ Tender ಕರೆಯಬೇಕಾಗಿದ್ದು, ಈ ರೀತಿ ಟೆಂಡರ್ ಕರೆಯದೇ ಹಾಗೂ ಉಳಿಕೆ ಇರುವ ಸಿದ್ದಪಾಠಗಳಿಗೆ ಲೆಕ್ಕ ನಿರ್ವಹಿಸದೇ ಹೊಸದಾಗಿ ಸಿದ್ದಪಾಠಗಳಿಗೆ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆಯಾದ್ದರಿಂದ ಮೊಬಲಗು **ರೂ.81,99,797/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br><br>**ಈ ಕೆಳಕಂಡ ದಾಖಲೆಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ.**<br><br>1. 2016–17ನೇ ಸಾಲಿಗೆ ಒಟ್ಟು ಸಿದ್ಧಪಾಠ ಮುದ್ರಣ ವಿತರಣೆ, ಬಾಕಿ ವಿಭಾಗವಾರು ಹಾಗೂ ವಿಷಯವಾರು ವಿವರಣೆ ನೀಡಬೇಕಾಗಿದೆ.<br>2. ಟೆಂಡರ್ ನೋಟಿಫಿಕೇಷನ್ ಹಾಗೂ ಟೆಂಡರ್ ಕಡತ ಹಾಜರುಪಡಿಸಬೇಕಾಗಿದೆ. |

3. ಸರ್ಕಾರದಿಂದ/ಯುಜಿಸಿಯಿಂದ 2016–17ನೇ ಸಾಲಿನಲ್ಲಿ ಶಿಕ್ಷಣ ಕ್ರಮ ಮುಂದುವರೆಸಲು ನೀಡಲಾಗಿರುವ ಮಂಜೂರಾತಿ ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ.
4. ಯು.ಜಿ.ಸಿ ಯಿಂದ ಅನುಮೋದನೆ ದೊರೆಯದಿದ್ದಲ್ಲಿ ಸಿದ್ಧಪಾಠಗಳ ಅವಶ್ಯಕತೆ ಬಗ್ಗೆ ವಿವರಣೆ ಹಾಜರುಪಡಿಸಿಲ್ಲ.
5. BOM ಸಭೆಯಲ್ಲಿ ಅನುಮೋದನೆ ಪಡೆದಿರುವ ಸಿದ್ದಪಾಠ ಮುದ್ರಣದ ಒಪ್ಪಿಗೆ ಅನುಮತಿ ಪತ್ರ.
6. 2016–17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪಟ್ಟಿ.
7. 2014–15, 2015–16 ಮತ್ತು 2016–17ನೇ ಸಾಲಿನವರೆಗೆ ಒಟ್ಟು ಸಿದ್ದಪಾಠ ಮುದ್ರಣದ ದಾಸ್ತಾನು ಲೆಕ್ಕ ಹಾಗೂ ವಿತರಣೆ ಲೆಕ್ಕ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ ವಿವರ. ಹಾಗೂ ಆಖೈರು ಶಿಲ್ಕಿನ ವಿವರ
8. 2016–17ನೇ ಸಾಲಿನಲ್ಲಿ ಸಿದ್ದಪಾಠ ಮುದ್ರಣದ ದಾಸ್ತಾನು ಲೆಕ್ಕ ಹಾಗೂ ಒಟ್ಟು ಸಿದ್ಧಪಾಠದ ಯುನಿಟ್‌ಗಳು.

2015–16ನೇ ಸಾಲಿನ ಆಡಿಟ್ ಕಂಡಿಕೆ 8 ಮತ್ತು 9ರಲ್ಲಿ ಪ್ರಸ್ತಾಪಿಸಿರುವಂತೆ ಅಂತಿಮ ಶಿಲ್ಕು ಕಂಡಿಕೆಯಲ್ಲಿ ಲಭ್ಯವಿಲ್ಲದ ಕಾರಣ 2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಅನುಬಂಧದಂತೆ ಈ ಕೆಳಕಂಡಂತೆ ವಿವರಿಸಿದೆ.

**ಘೋಷ್ವಾರೆ**

| | |
|---|---|
| 2016–17ನೇ ಸಾಲಿನ ಪ್ರಾರಂಭಿಕ ಶಿಲ್ಕು | 1131223 |
| 2015–16ರ ದಾಸ್ತಾನು ಪಟ್ಟಿಯಲ್ಲಿ ದಾಖಲಿಸಿದಂತೆ | (–) 13180 |
| ಒಟ್ಟು | 1118034 |
| 2016–17ನೇ ಸಾಲಿನ ವಿತರಣೆ | (–) 664 |
| 2016–17ರ ಅಂತಿಮ ಶಿಲ್ಕು | 1117370 |

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆ ಸಂಖ್ಯೆ:31/17.11.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಹಾಗೂ 2016–17ನೇ ಸಾಲಿನಲ್ಲಿ ಶೈಕ್ಷಣಿಕ ಪ್ರವೇಶಾತಿ ಇಲ್ಲದೆ ಹಾಗೂ ಭೌತಿಕ ಪ್ರಗತಿಯಿಲ್ಲದೆ ಹಿಂದಿನ ವರ್ಷದ ಸಿದ್ಧಪಾಠ ಮುದ್ರಣ ಸರಬರಾಜು ಮಾಡಿಸಿಕೊಂಡಿರುವ ಕ್ರಮಬದ್ದವಾಗಿರುವುದಿಲ್ಲ. ಈ ಬಗ್ಗೆ ಕಂಡಿಕೆಗೆ ಅನುಪಾಲನಾ ವರದಿ ಸಲ್ಲಿಸುವವರೆಗೆ ಪಾವತಿಸಿರುವ ಮೊತ್ತ

| | |
|---|---|
| | **ರೂ.81,99,797/-ನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು <u>ಅನುಬಂಧ (20) ರಲ್ಲಿ</u> ಲಗತ್ತಿಸಿದೆ.<br><br>ವಿಚಾರಣೆ:59/27.11.2018ರಲ್ಲಿ ನೀಡಿರುವ ವಿಚಾರಣೆಗೆ ದಿನಾಂಕ:22.12.2018ರಲ್ಲಿ ಸಲ್ಲಿಸಿರುವ ಪಾಲನ ವರದಿ ಸಮಂಜಸವಲ್ಲದ ಕಾರಣ ಹಾಗೂ ಟೆಂಡರ್ ಕರೆಯದೆ 2015-16ನೇ ಸಾಲಿನ ಸಾಮಾಗ್ರಿ 2016-17ನೇ ಸಾಲಿನಲ್ಲಿ ವಿತರಣೆ ಮಾಡಿರುವುದು ಸಮಂಜಸವಲ್ಲದ ಕಾರಣ ಕಂಡಿಕೆಯನ್ನು ಆಕ್ಷೇಪಣೆಯಲ್ಲಿ ಮುಂದುವರೆಸಲಾಗಿದೆ. |
| | ಉತ್ತರ |
| | 2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಸಿದ್ಧಪಾಠ ಮುದ್ರಣ ವೆಚ್ಚಕ್ಕಾಗಿ ರೂ 81,99,797ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ಟೆಂಡರ್ ಕರೆಯದೆ K.T.P.P. ನಿಯಮ ಉಲ್ಲಂಘಿಸಿ ಪಾವತಿಗೆ ಸಲ್ಲಿಸಲಾಗಿದೆ ಎಂದು ಸೂಚಿಸಲಾಗಿದೆ. ಈ ಮುಂದಿನಂತೆ ತಮಗೆ ದಾಖಲೆಗಳೊಂದಿಗೆ ಸ್ಪಷ್ಟೀಕರಣ ಒದಗಿಸಲಾಗಿದೆ.<br>2014-15ನೇ ಸಾಲಿನಲ್ಲಿ ಅಧ್ಯಯನ ಸಾಮಗ್ರಿ ಮುದ್ರಣಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಿದ್ದು (ಸಂಖ್ಯೆ:ಕರಾಮುವಿ/ಅಸಾವಿ/03-269/2014-15, ದಿ: 31/10/2014.) ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪ್ರಕ್ರಿಯೆಯು ಒಂದು ವರ್ಷದ ಕಾಲ ವಿಳಂಬವಾಗಿದ್ದು ಅಂತಿಮವಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ದರ ನಿಗಧಿ ಸಂಬಂಧ BOM ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಸ್ಥಾಯಿ ಆದೇಶ ಸಂಖ್ಯೆ: ಕರಾಮುವಿ/ಅಸಾವಿ/03-269/2014-15, ದಿ: 15/12/2015ರಂದು ಆದೇಶ ಹೊರಡಿಸಲಾಗಿದ್ದು ಸದರಿ ದಿನದಂದು ಚಾಲ್ತಿಗೆ ಬಂದಿರುತ್ತದೆ. ಟೆಂಡರ್ ಆಹ್ವಾನದ ನಿಯಮ ಮತ್ತು ಷರತ್ತುಗಳ ಪಟ್ಟಿಯಲ್ಲಿ ದರಪಟ್ಟಿ ಸಲ್ಲಿಸುವ ವಿವರಗಳು I/7 ರಲ್ಲಿ ಸ್ಥಾಯಿ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿ ಇರುತ್ತದೆ ಎಂಬ ಅಂಶವನ್ನು ಷರತ್ತಿನಲ್ಲಿ ಅಳವಡಿಸಿಕೊಂಡು ನಮೂದಿಸಲಾಗಿರುತ್ತದೆ.<br>2015-16ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಅಧೀನಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಇವರು ಕೇಂದ್ರದ ಧನಸಹಾಯ ಆಯೋಗದಿಂದ ಈ ಹಿಂದೆ ಮಾನ್ಯತೆ ಪಡೆದ ಕೋರ್ಸ್‌ಗಳಿಗೆ ಮಾತ್ರ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ದ್ವಿತೀಯ ಮತ್ತು ತೃತೀಯ ವರ್ಷಗಳ ಪ್ರವೇಶಾತಿಗಳನ್ನು ಮುಂದುವರೆಸಲು ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಅಗತ್ಯವಿದ್ದ ಅಧ್ಯಯನ ಸಾಮಗ್ರಿಗಳನ್ನು ಟೆಂಡರ್ ನಿಯಮದಡಿ ಮುದ್ರಿಸಿ ದಾಸ್ತಾನು ಪಡೆದು ಸಂಬಂಧಪಟ್ಟ ದ್ವಿತೀಯ ಹಾಗೂ ತೃತೀಯ ಬಿ.ಎ./ಬಿ.ಕಾಂ ಅಂತಿಮ ಎಂ.ಎ. / ಎಂ.ಕಾಂ., ಹಾಗೂ ಎಂ.ಎಸ್ಸಿ., 3 ಮತ್ತು 4 ಸೆಮಿಸ್ಟರ್‌ಗಳಿಗೆ ನವೀಕರಣಗೊಂಡ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಾಗ್ರಿಗಳನ್ನು ವಿತರಿಸಿ ದಾಸ್ತಾನು ವಹಿ ನಿರ್ವಹಿಸಲಾಗಿದೆ.<br>2015-16ನೇ ಸಾಲಿನಲ್ಲಿ ಟೆಂಡರ್ ಅವಧಿಯೊಳಗೆ ಮುದ್ರಿಸಿ ದಾಸ್ತಾನು ಪಡೆಯಲಾಗಿದ್ದ ಅಧ್ಯಯನ ಸಾಮಗ್ರಿಗಳ ಹುಂಡಿಗಳು 2016-17ನೇ ಸಾಲಿನ ಹಣಕಾಸು ವರ್ಷಕ್ಕೆ ಪಾವತಿಗೆ ಸಲ್ಲಿಸಲಾಗಿರುತ್ತದೆ. ಕಾಗದ ಗುಣಮಟ್ಟದ ಆಂತರಿಕ ಸಮಿತಿಯ ವರದಿಯನ್ನು ಪಡೆದು ಸದರಿ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಹುಂಡಿ ಪಾವತಿಗೆ ಸಲ್ಲಿಸಲು ವಿಳಂಬವಾಗಿರುತ್ತದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ವಿಳಂಬತೆಗೆ |

| | |
|---|---|
| | ಎಚ್ಚರವಹಿಸಲಾಗುವುದು.<br><br>ಲೆಕ್ಕ ತನಿಖಾ ವಿಚಾರಣೆ ಪ್ರಾರಂಭವಾದ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ 31ಕ್ಕೆ ಅಧ್ಯಯನ ಸಾಮಾಗ್ರಿ ವಿಭಾಗವು ಪತ್ರಸಂಖ್ಯೆ:ಕರಾಮುವಿ/ಅಸಾವಿ/03-15/2018-19, ದಿನಾಂಕ:06-12-2018ರಲ್ಲಿ ಆಡಿಟ್‌ವಿಚಾರಣೆಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳನ್ನು ಸಲ್ಲಿಸಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.<br><br>1. 2016-17ರ ಅಧ್ಯಯನ ಸಾಮಗ್ರಿಗಳ ವಿತರಣೆ, ಬಾಕಿ ವಿವರದ ಪಟ್ಟಿ<br>2. ಟೆಂಡರ್ ನೋಟಿಫಿಕೇಷನ್ / ಟೆಂಡರ್‌ನ ಷರತ್ತು ಮತ್ತು ನಿಯಮದ ಪ್ರತಿ ಸ್ಥಾಯಿ ಆದೇಶದ ಪ್ರತಿ<br>3. 2015-16ನೇ ಸಾಲಿನ ಪ್ರವೇಶಾತಿ ಸಂಬಂಧದ ಸರ್ಕಾರದಿಂದ ಬಂದ ಆದೇಶದ ಪ್ರತಿ<br>4. ಟೆಂಡರ್ ಆಹ್ವಾನಕ್ಕೆ ಸಂಬಂಧಿಸಿದ 136ನೇ ವ್ಯವಸ್ಥಾಪನಾ ಮಂಡಳಿ ಸಭೆಯ ಒಪ್ಪಿಗೆ ಪ್ರತಿ<br>5. 2016-17ನೇ ಸಾಲಿನಲ್ಲಿಪ್ರವೇಶಾತಿ ಪ್ರಕ್ರಿಯೇ ನಡೆದಿರುವುದಿಲ್ಲ ಹಾಗೆಯೇ ಪಾಠಗಳ ವಿತರಣೆ ವಿಚಾರಣೆ ವಿಚಾರ ಬರುವುದಿಲ್ಲ.<br>6. 2012-13 ರಿಂದ 2016-17ನೇ ಸಾಲಿನ ಅಧ್ಯಯನ ಸಾಮಾಗ್ರಿ, ದಾಸ್ತಾನು ವಿತರಣೆಗೆ ಸಂಬಂಧಿಸಿದ ವಿವರದ ಪ್ರತಿಗಳನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br><br>2014-15ರ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೇ 2015-16ರಲ್ಲಿ ಚಾಲ್ತಿಗೆ ಬಂದು ಸದರಿ ಟೆಂಡರ್‌ನಲ್ಲೆ ನಮೂದಿಸಿದ ದರದಲ್ಲಿಯೇ ಮುದ್ರಿಸಿ ದಾಸ್ತಾನಿಗೆ ಪಡೆದು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ನಿಯಮದಂತೆ ಮುದ್ರಿಸಿ 2016-17ನೇ ಸಾಲಿಗೆ ಹುಂಡಿ ಪಾವತಿರುವ ಒಟ್ಟು ಮೊತ್ತ ರೂ 81,99,797 ಗಳಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ದಾಖಲಾತಿಗಳನ್ನು ಸಲ್ಲಿಸಲಾಗುವುದು. ಸದರಿ ಕಂಡಿಕೆಯನ್ನು ಆಕ್ಷೇಪಣೆಯಿಂದ ಕೈಬಿಡಬೇಕಾಗಿ ಕೋರಲಾಗಿದೆ. |
| | **ವಿವರ** |
| 57 | **<u>57. ಸೇಫ್ಟಿ ಗ್ರಿಲ್ ಗೇಟ್‌ಗಳನ್ನು ಹಾಗೂ ಅಲ್ಯೂಮಿನಿಯಂ ಡೋರ್‌ಗಳನ್ನು ಅಳವಡಿಸಿದ ಕೆಲಸವನ್ನು ಅಳತೆ ಪುಸ್ತಕದಲ್ಲಿ ದಾಖಲು ಮಾಡದೆ ಇರುವುದು :-</u>**<br><br>2016-17ನೇ ಸಾಲಿನಲ್ಲಿ ಹಾಜರುಪಡಿಸಿರುವ ಸಾದಿಲ್ವಾರು ಬಿಲ್ಲುಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯದ ಅತಿಥಿ ಗೃಹ ಕಟ್ಟಡದ ಗೌರ್ನರ್‌ಸೂಟ್‌ನ ಕಿಟಕಿಗಳಿಗೆ ಮೆಸ್ ಹಾಕುವ ಕೆಲಸ ಹಾಗೂ ಪರೀಕ್ಷಾ ಭವನ ಒಳ ಆವರಣದಲ್ಲಿ ಸೇಫ್ಟಿ ಗ್ರಿಲ್ ಗೇಟ್‌ಗಳನ್ನು ಮತ್ತು ಅಲ್ಯೂಮಿನಿಯಂ ಡೋರ್‌ಗಳನ್ನು ಪರೀಕ್ಷಾ ಭವನದ ಒಳ ಆವರಣದಲ್ಲಿ ಅಳವಡಿಸಿದ ಬಾಬ್ತು ಮೆ॥ ಹರಿಕಿರಣ್ ಇಂಜಿನಿಯರಿಂಗ್ಸ್, ಮೈಸೂರು ಎಂಬುವವರಿಗೆ ಬಿಲ್ಲು ಪಾವತಿಸಲಾಗಿದೆ. |

| | | | | |
|---|---|---|---|---|
| | | ಓಚರ್ ನಂ | ಬಿ.ಆರ್.ನಂ | ಮೊತ್ತ |
| | | 132 | 569 | 53448 |
| | | 133 | 570 | 99099 |
| | | | ಒಟ್ಟು ಮೊತ್ತ | **152547** |

ಪಾವತಿಸಿರುವ ಮೊತ್ತವು 1,00,000/–ಕ್ಕಿಂತ ಹೆಚ್ಚಿಗೆ ಇರುವುದರಿಂದ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಕರೆಯದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆಯಾಗಿ ಹಾಗೂ ವಿಚಾರಣಾ ಪತ್ರ ಸಂಖ್ಯೆ:93/14.12.2018 ವಿಚಾರಣೆ ನೀಡಲಾಗಿದೆ.

ವಿಚಾರಣೆಗೆ ವಿವರ ನೀಡದೆ ಎಂ.ಬಿ.ಗೆ ದಾಖಲು ಮಾಡದೆ ಇರುವುದರಿಂದ ಆಕ್ಷೇಪಣೆಯಲ್ಲಿಡಲಾಗಿದೆ.

ಪಾವತಿಸಿರುವ ಬಿಲ್ಲುಗಳಲ್ಲಿ ಕೆಲಸಕ್ಕೆ ಬಳಕೆ ಆಗಿರುವ ಹಾಗೂ ಕಾರ್ಯಪಾಲಕ ನಿಯಂತ್ರಕರು ಗುಣ ನಿಯಂತ್ರಕ ವಿಭಾಗವತಿಯಿಂದ ದೃಢೀಕರಣ ಪತ್ರ ಪಡೆದು ಹಾಜರುಪಡಿಸದ ಕಾರಣ **ರೂ.1,52,547/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ದಿನಾಂಕ:14.12.2018 ರಂದು ವಿಚಾರಣೆ ಸಂಖ್ಯೆ:93/14.12.2018 ರಲ್ಲಿ ನೀಡಿರುವ ವಿಚಾರಣೆಗೆ ದಿನಾಂಕ:11.01.2019ರಂದು ಪಾಲನಾ ವರದಿಯನ್ನು ಪರಿಶೀಲಿಸಿದಾಗ ಪರೀಕ್ಷಾ ಭವನ ಒಳ ಆವರಣದಲ್ಲಿ ಗ್ರಿಲ್‌ಗೇಟ್ ಮತ್ತು ಅಲ್ಯೂಮಿನಿಯಂ ಡೋರ್ ಕೆಲಸ ಅಳತೆ ಪುಸ್ತಕದಲ್ಲಿ ದಾಖಲು ಮಾಡದೆ ಇರುವ ಕಾರಣ ವಿಚಾರಣೆ ಸಮಂಜಸವಿಲ್ಲದ ಕಾರಣ ಕಂಡಿಕೆ ಮುಂದುವರೆಸಲಾಗಿದೆ.

ಉತ್ತರ

ವಿಶ್ವವಿದ್ಯಾನಿಲಯದ ಅತಿಥಿ ಗೃಹ ಕಟ್ಟಡದ ಗೌರ್ನರ್‌ಸೂಟ್‌ನ ಕಿಟಕಿಗಳಿಗೆ ಮೆಸ್ ಹಾಕುವ ಕೆಲಸ ಹಾಗೂ ಪರೀಕ್ಷಾ ಭವನ ಒಳ ಆವರಣದಲ್ಲಿ ಸೇಫ್ಟಿ ಗ್ರಿಲ್ ಗೇಟ್‌ಗಳನ್ನು ಮತ್ತು ಅಲ್ಯೂಮಿನಿಯಂ ಡೋರ್‌ಗಳನ್ನು ಪರೀಕ್ಷಾ ಭವನದ ಒಳ ಆವರಣದಲ್ಲಿ ಅಳವಡಿಸಿದ ಕೆಲಸಗಳನ್ನು ಒಂದೇ ಮಾಹೆಯಲ್ಲಿ ನಿರ್ವಹಿಸದೇ ಬೇರೆ ಬೇರೆ ಮಾಹೆಗಳಲ್ಲಿ ಪ್ರತ್ಯೇಕವಾಗಿ ನಿರ್ವಹಿಸಿದ್ದು, ಸದರಿ ಕೆಲಸಗಳಿಗೆ ಬೇರೆ ಬೇರೆಯಾಗಿಯೇ ದರಪಟ್ಟಿಗಳನ್ನು ಆಹ್ವಾನಿಸಿ, ಕೆಲಸ ನಿರ್ವಹಿಸಲಾಗಿರುತ್ತದೆ. ಸದರಿ ಕೆಲಸಗಳು 1.00 ಲಕ್ಷದ ಮಿತಿಯೊಳಗಿರುವುದರಿಂದ ನಿಯಮಾನುಸಾರ ದರಪಟ್ಟಿ ಮೂಲಕ ಸದರಿ ಕೆಲಸಗಳನ್ನು ನಿರ್ವಹಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಲಾಗಿದೆ.

**ವಿವರ**

58

**58. ಗೌರವ ಸಂಭಾವನೆ ಪಾವತಿಸಿರುವ ಬಿಲ್ಲಿನಲ್ಲಿ ಸಹಾಯಕರ ಸಹಿ ಇಲ್ಲದೆ ಇರುವುದು :–**

2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಗೌರವ ಸಂಭಾವನೆ ಬಿಲ್ಲುಗಳನ್ನು ಪರಿಶೀಲಿಸಿದಂತೆ Vol (7) July 2016 VR 87 ರಲ್ಲಿ Cauvery College Gonikoppa ಸಹಾಯಕರುಗಳಿಗೆ

| | |
|---|---|
| | ಗೌರವ ಸಂಭಾವನೆ ಪಾವತಿ ಬಿಲ್ಲುಗಳಲ್ಲಿ ಸಹಿ ಇಲ್ಲದೆ ಇರುವುದರಿಂದ ಮೊಬಲಗು **ರೂ.3,900/–ಗಳನ್ನು ವಸೂಲಾತಿಗೆ ಸೂಚಿಸಿದೆ.** |

| | | | |
|---|---|---|---|
| 1 | ಶ್ರೀ ಬಿ.ಎನ್. ಕಾರ್ಯಪ್ಪ, ಸಹಾಯಕ | 2400 | 04/16.06.2016 |
| 2 | ಹೆಚ್.ಎಸ್.ಮನು, ಸಹಾಯಕ | 1500 | 04/16.06.2016 |
| | **ಒಟ್ಟು** | **3900** | |

| | |
|---|---|
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 59 | **58 (ಎ). ವಾರ್ಷಿಕ ದಾಸ್ತಾನು ಲೆಕ್ಕದ ಭೌತಿಕ ತಪಾಸಣೆ ವರದಿಯಲ್ಲಿ ಸೇರಿಸದೆ ಹಾಗೂ ಟೆಂಡರ್ ಕಡತ ಹಾಜರುಪಡಿಸದೆ ಇರುವುದು :–**<br><br>2016–17ನೇ ವರ್ಷದಲ್ಲಿ ಲೆಕ್ಕಶೀರ್ಷಿಕೆ 217ರಲ್ಲಿ ಪಿಠೋಪಕರಣ ಖರೀದಿಗಾಗಿ ರೂ.2,62,556/– ಪಾವತಿಸಿದೆ ಇದಕ್ಕೆ ಸಂಬಂಧಿಸಿದ ಟೆಂಡರ್ ಕಡತ ದಾಸ್ತಾನು ಲೆಕ್ಕದ ವಿತರಣೆ ವಹಿ ವಾರ್ಷಿಕ ಭೌತಿಕ ದಾಸ್ತಾನು ಲೆಕ್ಕಪರಿಶೋಧನೆಯು ವರದಿಯಲ್ಲಿ ಸೇರಿಸದೆ ಮಂಜೂರಾತಿ ಆದೇಶ ಕಡತ ಹಾಜರುಪಡಿಸದೆ. ಟೆಂಡರ್ ಕರೆಯದೆ ನಿಯಮ ಉಲ್ಲಂಘನೆಯಾಗಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:25/2018–19 ದಿನಾಂಕ:14.11.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಕಡತ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.2,62,556/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಸದರಿ ಆಕ್ಷೇಪಣೆಗೆ ಸಂಬಂಧಪಟ್ಟಂತೆ ನಿಯಮಾನುಸಾರ ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ಅನುಮೋದನೆಯನ್ನು ಪಡೆದು ಕೆಲಸ ನಿರ್ವಹಿಸಲಾಗಿರುತ್ತದೆ. ಹಾಗೂ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ. ಈ ಸಂಬಂಧ ಆಡಿಟ್ ತಪಾಸಣೆಯ ಸಮಯದಲ್ಲಿ ಕಡತಗಳನ್ನು ಲೆಕ್ಕ ತಪಾಸಣೆಗೆ ನೀಡಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 60 | **59. 2016–17ನೇ ಸಾಲಿನ ಗ್ರಂಥಾಲಯದಿಂದ ಪಡೆದ ಪುಸ್ತಕಗಳನ್ನು ಹಿಂದಿರುಗಿಸದೆ ಇರುವುದು :–**<br><br>ವಿಶ್ವವಿದ್ಯಾನಿಲಯದ ಗ್ರಂಥಾಲಯದ ವಿಭಾಗದಿಂದ ಗ್ರಂಥಾಲಯದ ಪುಸ್ತಕಗಳ ವಿತರಣೆ ವಹಿಯಂತೆ ಹಿಂದಿನ ಸಾಲುಗಳಿಂದ ವಿದ್ಯಾರ್ಥಿಗಳಿಗೆ ಬೋಧಕ, ಬೋಧಕೇತರ ವರ್ಗದವರಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ 2016–17ನೇ ಸಾಲಿನಲ್ಲಿ ಪುಸ್ತಕಗಳು ವಿತರಣೆಯಾಗಿರುತ್ತದೆ. 15 ದಿನದೊಳಗೆ ಹಿಂದಿರುಗಿಸಿ ಗ್ರಂಥಾಲಯ ದಾಸ್ತಾನುವಹಿಗೆ ತೆಗೆದುಕೊಂಡಿರುವ ಹಾಗೂ ಗ್ರಂಥಾಲಯ ಪುಸ್ತಕಗಳನ್ನು ಹಿಂದಿರುಗಿಸದೆ ಇರುವ ವಿವರವನ್ನು ಪರಿಶೀಲನೆಗೆ ನೀಡಬೇಕೆಂದು ಸೂಚಿಸಿದೆ. |

ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ಪುಸ್ತಕಗಳ ವಿತರಣಾ ವಹಿಯನ್ನು ಲೆಕ್ಕಪರಿಶೋಧನಾ ಕಾರ್ಯಕ್ಕೆ ಹಾಜರುಪಡಿಸಲಾಗಿದ್ದು, 2016–17ನೇ ಸಾಲಿನಲ್ಲಿ ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳ ವಿವರಗಳು ಈ ಕೆಳಕಂಡಂತೆ ಇದೆ.

| Sl.NO | Members | Total No.of Books | Total No of Books Returned | Overdue Books | Remarks |
|---|---|---|---|---|---|
| 1 | Students | 86 | 86 | 00 | - |
| 2 | Research scholors | 07 | 05 | 02 | Reminder sent |
| 3 | Faculty | 301 | 200 | 101 | Reminder sent |
| 4 | Non-Teaching | 30 | 20 | 10 | Reminder sent |
| | **Total** | **424** | **311** | **113** | |

ದಿನಾಂಕ:31.03.2017ರವರೆಗೆ Over due Books 113 ಬುಕ್ ಬಾಕಿ ಉಳಿದಿದ್ದು, ಈ ಪುಸ್ತಕಗಳು ಹಿಂಪಡೆಯದೆ ಇದ್ದಲ್ಲಿ ಇದರ ಎರಡುಪಟ್ಟು ಬೆಲೆಯ ಮೊಬಲಗನ್ನು ವಸೂಲಿ ಮಾಡಿ GRA ಖಾತೆಗೆ ಜಮೆ ಮಾಡಲು ಸೂಚಿಸಿದೆ.

ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:139/08.01.2019 ನೀಡಿರುವ ವಿಚಾರಣೆಗೆ ಸಲ್ಲಿಸಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ Over Due Books ಬಾಕಿ ಉಳಿದಿರುವ ಬಗ್ಗೆ ಕ್ರಮ ಕೈಗೊಳ್ಳದೆ ಇರುವುದರಿಂದ ಕಂಡಿಕೆಯನ್ನು ಮುಂದುವರಿಸಲಾಗಿದೆ.

ಉತ್ತರ

ಕ.ರಾ.ಮು.ವಿ. ಗ್ರಂಥಾಲಯ ಪುಸ್ತಕಗಳ ವಿತರಣಾ ವಹಿಯನ್ನು ಲೆಕ್ಕಪರಿಶೋಧನಾ ಕಾರ್ಯಕ್ಕೆ ಹಾಜರುಪಡಿಸಲಾಗಿದ್ದು, 2015–16, 2016–17ನೇ ಸಾಲಿನನಲ್ಲಿ ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳನ್ನು ಹಿಂಪಡೆದು ಕ್ರಮವಹಿಸಲಾಗುವುದು.

**ವಿವರ**

61 **60. ಅಂಚೆ ವೆಚ್ಚದ ವಹಿಯಲ್ಲಿ ಗಮನಿಸಲಾದ ನ್ಯೂನತೆಗಳ ಬಗ್ಗೆ :–**

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಶೀರ್ಷಿಕೆ "069–220" ನಿಧಿಯಿಂದ ವೆಚ್ಚ ಭರಿಸಲಾಗಿರುವ ಅಂಚೆ ವೆಚ್ಚದ ವಹಿಯ ಪರಿಶೀಲನೆಯಲ್ಲಿ;

1. ದಿನಾಂಕ:24.11.2016 ರಂದು ಅಂಚೆ ವೆಚ್ಚದ ವಹಿಯಲ್ಲಿ ರೂ.1,869/– ಗಳನ್ನು ವೆಚ್ಚ ಭರಿಸಿರುವುದಾಗಿ ನಮೂದಿಸಲಾಗಿದೆ. ಆದರೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಅಂಚೆ ಕಛೇರಿಯ ಮುದ್ರಿತ ಪಟ್ಟಿಯಲ್ಲಿನ (Statement of mailing) ವಿವರದನ್ವಯ ವೆಚ್ಚದ ಮೊತ್ತ ರೂ.716/– ಎಂದು ಮುದ್ರಿಸಿರುವುದನ್ನು ಗಮನಿಸಲಾಗಿದ್ದು, ವ್ಯತ್ಯಾಸದ ಹೆಚ್ಚುವರಿ ಮೊತ್ತ ರೂ.1153/–ಗಳಿಗೆ

| | |
|---|---|
| | ಸಂಬಂಧಿಸಿದಂತೆ ಸೂಕ್ತ ವಿವರಣೆ ಮತ್ತು ಸ್ಪಷ್ಟೀಕರಣ ನೀಡಬೇಕೆಂದು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:43/2018-19 ದಿನಾಂಕ:22.11.2018ರಲ್ಲಿ ಕೋರಲಾಗಿ, ಸದರಿ ವಿಚಾರಣೆಗೆ ಸಂಬಂಧಿಸಿದಂತೆ ದಿನಾಂಕ:30.11.2018 ರಂದು ಅನುಪಾಲನಾ ವರದಿ ನೀಡಿರುವುದನ್ನು ಪರಿಶೀಲಿಸಿದಾಗ, ಹೆಚ್ಚುವರಿ ವ್ಯತ್ಯಾಸದ ಮೊತ್ತವು ಯಂತ್ರದಲ್ಲಿ ಮುದ್ರಿತ ಕವರ್‌ಗಳನ್ನು ರವಾನಿಸಲಾಗಿದ್ದು, ದಿನದ ಲೆಕ್ಕವನ್ನು ಪರಿಶೀಲಿಸಿದಾಗ ಯಂತ್ರದ ದೋಷದಿಂದ ವ್ಯತ್ಯಾಸವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ದಿನಾಂಕದಲ್ಲಾಗಿರುವ ವ್ಯತ್ಯಾಸ ಕುರಿತು ವಿಭಾಗದ ಮುಖ್ಯಸ್ಥರು ದೃಢೀಕರಿಸಬೇಕಾಗಿರುತ್ತದೆ. ಆದರೆ ಸದರಿ ವ್ಯತ್ಯಾಸವು ಯಂತ್ರದ ದೋಷದಿಂದಲೇ ಆಗಿರುತ್ತದೆ ಎಂಬುದಕ್ಕೆ ವಿಭಾಗದ ಮುಖ್ಯಸ್ಥರ ದೃಢೀಕರಣವಿರುವುದಿಲ್ಲ.<br>2. ವಿಚಾರಣೆ ಪತ್ರ ಸಂಖ್ಯೆ:43 ಕ್ರಮಸಂಖ್ಯೆ:3ಕ್ಕೆ ಸಂಬಂಧಿಸಿದಂತೆ ಕಛೇರಿಯ ಎಲೆಕ್ಟ್ರಾನಿಕ್ ಫ್ರ್ಯಾಂಕಿಂಗ್ ಯಂತ್ರಕ್ಕೆ ಧನಾದೇಶಸಂಖ್ಯೆ:890419, ದಿನಾಂಕ:16.03.2017ರಲ್ಲಿ ಎ.ಸಿ ಬಿಲ್ಲಿನ ಮುಖಾಂತರ ಪಾವತಿಸಿರುವ ಮೊತ್ತ ರೂ.3,20,000/-ಗಳು ಆದರೆ ಎ.ಸಿ ಬಿಲ್ಲಿನಲ್ಲಿ ಪಡೆಯುವ ಮುಂಗಡ ಹಣ ರೂ.2,00,000/-ಕ್ಕಿಂತ ಹೆಚ್ಚಿಗೆ ವೆಚ್ಚ ಭರಿಸಿರುವುದರಿಂದ ಸಾದಿಲ್ವಾರು ನಿಯಮದ ಉಲ್ಲಂಘನೆಯಾಗಿರುವುದರಿಂದ ಸೂಕ್ತ ವಿವರಣೆ ಮತ್ತು ಸ್ಪಷ್ಟೀಕರಣ ನೀಡಲು ಸೂಚಿಸಿದೆ. |
| | ಉತ್ತರ |
| | ಅಂಚೆ ವೆಚ್ಚದ ವಹಿಯಲ್ಲಿ ಕಂಡುಬಂದ ವ್ಯತ್ಯಾಸದ ಕುರಿತು ವಿವರಣೆ ಈ ಕೆಳಕಂಡಂತಿವೆ.<br>1. ಕ್ರಮ ಸಂಖ್ಯೆ 1 ಕ್ಕೆ ಸಂಬಂದಿಸಿದ ದಿನಾಂಕ 24.11.2016 ರಂದು ಸದರಿ ವಹಿಯಲ್ಲಿ ಮೊತ್ತ ರೂ. 1,869.00ಗಳನ್ನು ವೆಚ್ಚ ಭರಿಸುವುದಾಗಿ ನಮೂದಿಸಲಾಗಿದೆ. ವೆಚ್ಚದ ವ್ಯತ್ಯಾಸದ ರೂ.716.00 ಎಂದು ಮುದ್ರಿಸಲಾಗಿದ್ದು ವ್ಯತ್ಯಾಸದ ಹೆಚ್ಚುವರಿ ಮೊತ್ತ ರೂ.1,153.00ಗಳಿಗೆ ಸಂಬಂಧಿಸಿದಂತೆ ಯಂತ್ರದಲ್ಲಿ ಮುದ್ರಿತ ಕವರ್‌ಗಳನ್ನು ರವಾನಿಸಲಾಗಿದ್ದು. ದಿನದ ಲೆಕ್ಕವನ್ನು ಪರಿಶೀಲಿಸಿದಾಗ ಯಂತ್ರದ ದೋಷದಿಂದ ವ್ಯತ್ಯಾಸವಾಗಿರುತ್ತದೆ. ಆದರೆ (Statement of Mailing) ಮುಂದಿನ ದಿನದ ಲೆಕ್ಕದಲ್ಲಿ ಸರಿಯಾಗಿ ಹೊಂದಾಣಿಕೆ ಆಗಿರುತ್ತದೆ.<br>2. ಕ್ರಮ ಸಂಖ್ಯೆ 02 ಕ್ಕೆ ಸಂಬಂಧಿಸಿದ ಡಿಜಿಟಲ್ ಫ್ರಾಂಕಿಂಗ್ ಯಂತ್ರಕ್ಕೆ (ಧನಾದೇಶ ಸಂಖ್ಯೆ: 890419, ದಿನಾಂಕ: 16.03.2017) ರೂ.3,20,000.00ಗಳನ್ನು ಮಾತ್ರ ಯಂತ್ರಕ್ಕೆ ಭರಿಸಲಾಗಿದೆ. ಕಾರಣ 2016-17 ರಲ್ಲಿ ಪ್ರವೇಶ ಪ್ರಕ್ರಿಯೆ ನೆಡೆದಿರುವುದಿಲ್ಲ. ಹಾಗಾಗಿ 3,20,000.00 ರೂ ಗಳನ್ನು ಮಾತ್ರ ಪಡೆದಿರುತ್ತೇವೆ. ವಿ.ವಿ.ಯಲ್ಲಿ ಪ್ರವೇಶ ಪ್ರಕ್ರಿಯೆ ನೆಡೆದಾಗ ಮತ್ತು ವಿ.ವಿ.ಯ ವಿವಿದ ವಿಭಾಗಗಳಿಂದ ಬಂದಂತಹ ಲಕೋಟೆಗಳು ಸೇರಿ ಸುಮಾರು ಅಂದಾಜು ದಿನಕ್ಕೆ 25,000.00 ರೂ.ಗಳಷ್ಟು ಖರ್ಚಾಗುತ್ತಿತ್ತು. ಹಾಗೂ ಡಿಜಿಟಲ್ ಯಂತ್ರಕ್ಕೆ ಧನಾದೇಶವನ್ನು ಭರಿಸಲು ಒಂದು ವಾರ ಕಾಲಾವಕಾಶ |

ಬೇಕಾಗಿರುತ್ತದೆ. ಆದ್ದರಿಂದ ಮುಂಚಿತವಾಗಿ ಮುಂಗಡವಾಗಿ ಸಂದಾಯವನ್ನು ಪಡೆದಿರುತ್ತವೆ. ಇನ್ನೂ ಮುಂದೆ 2 ಲಕ್ಷ ರೂ.ಗಳಿಗೆ ಮಾತ್ರ ಮುಂಗಡ ಹಣವನ್ನು ಯಂತ್ರಕ್ಕೆ ಭರಿಸಿಕೊಳ್ಳುವ ನಿಯಮವನ್ನು ಅಳವಡಿಸಿಕೊಳ್ಳುತ್ತೇವೆ.

ವಿವರ

62 **61. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾಹನಗಳಿಗೆ ಟೈರ್‌ಗಳನ್ನು ಖರೀದಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಆಯುಕ್ತರಿಂದ ದೃಢೀಕರಣ ಪತ್ರ ಪಡೆಯದೇ ಇರುವುದು ಹಾಗೂ ಹಳೇ ಟೈರ್‌ಗಳ ದಾಸ್ತಾನು ಲೆಕ್ಕವನ್ನು ಹಾಜರುಪಡಿಸದೆ ಇರುವುದು :–**

2016–17ನೇ ಸಾಲಿನ ಲೆಕ್ಕಪರಿಶೋಧನೆ ಅವಧಿಯಲ್ಲಿ ಸಾಮಾನ್ಯ ನಿಧಿ ಖಾತೆ 08ರಲ್ಲಿ ವಿವಿಧ ವಾಹನಗಳಿಗೆ ಎನ್.ಡಿ.ಸಿ ಬಿಲ್ಲುಗಳ ಮುಖಾಂತರ ಟೈರ್‌ಗಳನ್ನು ಖರೀದಿಸಿ ಬದಲಾವಣೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಆಯುಕ್ತರಿಂದ (RTO) ದೃಢೀಕರಣ ಪತ್ರ ಪಡೆದಿರುವುದಿಲ್ಲ ಹಾಗೂ ಸರ್ಕಾರಿ ಅಧಿಕೃತ ಮಾರಾಟಗಾರರಿಂದ ಖರೀದಿಸದೆ ಇರುವುದನ್ನು ಗಮನಿಸಲಾಗಿರುತ್ತದೆ. (ಖರೀದಿ ವಿವರಗಳನ್ನು ಈ ಕೆಳಗೆ ವಿವರಿಸಲಾಗಿದೆ) ಹಾಗೂ ಸದರಿ ಖರೀದಿಗಳನ್ನು ದಾಸ್ತಾನು ಲೆಕ್ಕಕ್ಕೆ ತೆಗೆದುಕೊಂಡಿರುವ ವಿವರವನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ಕೋರಿ ವಿಚಾರಣಾ ಪತ್ರ ಸಂಖ್ಯೆ:74/2018–9 ದಿನಾಂಕ:05.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ಸೂಕ್ತ ವಿವರಣೆ ನೀಡಿರುವುದಿಲ್ಲ. ಈ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಕೆಳಗೆ ತಿಳಿಸಿರುವ ಮೊತ್ತ **ರೂ.1,06,234/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

| ಕ್ರ ಸಂ | ಎ.ಸಿ ಬಿ.ಆರ್ ನಂ | ಎನ್.ಡಿ.ಸಿ ಬಿ.ಆರ್ ನಂ | ಧನಾದೇಶ ಸಂಖ್ಯೆ ದಿನಾಂಕ | ವಾಹನ ಸಂಖ್ಯೆ & ವಿವರ | ಸರಬರಾಜುದಾರರ ವಿವರ | ಮೊತ್ತ | ಷರಾ |
|---|---|---|---|---|---|---|---|
| 1 | 1742 | 1953 | 890126/ 12.12.16 | KA09MB 134 Mahindra rerito | M/S IG work shop Mysore | 58386 | 5 Tyres engine oil ಬದಲಾವಣೆ & ಜನರಲ್ ಸರ್ವೀಸ್ |
| 2 | 2089 | 2300 | 890270/ 31.01.17 | KAOPZ 9048 INDIGO ECS | Madhus Tyre care, Mysore | 20200 | 5 Tyres & ಸರ್ವೀಸ್ ಚಾರ್ಜ್ |
| 3 | 564/ 06.06.2016 | | | KA09Z9052 | Urs Kar services | 27648 | Tyres & ಬಿಡಿಭಾಗಗಳನ್ನು ಅಳವಿಡಿ, ಸರ್ವೀಸ್/ರಿಪೇರಿ ಕಾರ್ಯ ನೆರವೇರಿಸಿದೆ |
| | | | | | ಒಟ್ಟು | **1,06,234** | |

ಉತ್ತರ

ವಿ.ವಿ. ನಿಲಯದ ಮಹೀಂದ್ರ ವೆರೀಟೋ (ಕೆಎ09 ಎಂಬಿ134) ವಾಹನವನ್ನು ಸುಸ್ಥಿಯಲ್ಲಿಡಲು ಅಗತ್ಯವಿದ್ದ ಟೈರ್ ಮತ್ತು ಟ್ಯೂಬ್‌ಗಳನ್ನು ವಾಹನ ಅಧಿಕೃತ ಸಂಸ್ಥೆಯಾದ ಮೇ॥ ಐ ಜಿ ವರ್ಕ್‌ಶಾಪ್ ಇವರಿಂದ ಆಳವಡಿಸಲಾಗಿರುತ್ತದೆ. ಹಾಗೂ ಟಾಟಾ ಇಂಡಿಗೋ (ಕೆಎ 09 ಜೆಡ್9048) ಅಗತ್ಯವಿದ್ದ ಟೈರ್‌ಗಳನ್ನು ಮೆ॥

| | |
|---|---|
| | ಮಧೂಸ್ ಟೈರ್ ಕೇರ್, ಮೈಸೂರು ರವರು ಸಲ್ಲಿಸಿರುವ ದರ ಇತರೆ ಸಂಸ್ಥೆಯವರ ದರಗಳಿಗಿಂತ ಕನಿಷ್ಠ ದರವಾಗಿರುತ್ತದೆ. ಹಿನ್ನೆಲೆಯಲ್ಲಿ 5 ಟೈರ್‌ಗಳನ್ನು ಅಳವಡಿಸಲಾಗಿರುತ್ತದೆ. ಎಂಬ ಮಾಹಿತಿಯನ್ನು ಗಮನಕ್ಕೆ ತರಲಾಗಿದೆ. ಮುಂದುವರೆದು ವಾಹನದಿಂದ ಬಿಡಿಸಲಾದ ಹಳೆಯ ಟೈರುಗಳು ಟ್ಯೂಬ್‌ಗಳನ್ನು ಹಾಗೂ ಎಲ್ಲಾ ಹಳೆಯ ಬಿಡಿಭಾಗಗಳನ್ನು ವಿ.ವಿ. ನಿಲಯದ ಕೊಠಡಿಯೊಂದರಲ್ಲಿ ಶೇಖರಿಸಿಡಲಾಗಿದೆ. ಸದರಿ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರಲಾಗುತ್ತಿದ್ದು ಸಂಬಂಧ ಪಟ್ಟ ಕಡತಗಳು/ವಹಿಗಳು ಪರಿಶೀಲನೆಗೆ ಸಿದ್ಧವಿದ್ದು ಪರಿಶೀಲಿಸಬಹುದಾಗಿದೆ. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | ವಿವರ |
| 63 | **62. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಾಲ್ಕು ವಿವಿಧ ವಾಹನಗಳಿಗೆ ಟರ್ಕಿ ಕ್ಲಾತ್ ಸೀಟ್, ಕವರ್‌ಗಳನ್ನು ಹೆಚ್ಚುವರಿಯಾಗಿ ಖರೀದಿಸಿರುವ ಕುರಿತು :–**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ನಾಲ್ಕು ವಾಹನಗಳಿಗೆ ಕೆ.ಟಿ.ಪಿ.ಪಿ ನಿಯಮಬಾಹಿರವಾಗಿ Coolin car window film vinyl stickar, ಮೈಸೂರು ರವರಿಂದ KQ1 ರ ಪ್ರಕಾರ ಕೊಟೇಶನ್ ಪಡೆಯದೆ ನೇರವಾಗಿ ಪತ್ರ ವ್ಯವಹಾರ ನಡೆಸಿ ತಲಾ ಒಂದು ಸೆಟ್‌ನಂತೆ ನಾಲ್ಕು ವಾಹನಗಳಿಗೆ ಹೆಚ್ಚುವರಿಯಾಗಿ ಟರ್ಕಿ ಕ್ಲಾತ್‌ಗಳನ್ನು ಖರೀದಿಸಿ, ಬಿ.ಆರ್. ನಂ.1552/28.10.2016 ಧನಾದೇಶ ಸಂಖ್ಯೆ: 890040/04.11.2016 ಓಚರ್ ಸಂಖ್ಯೆ: 20 ರ ಮೂಲಕ 43,200/– ಗಳನ್ನು ಪಾವತಿಸಲಾಗಿದ್ದು, ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಟರ್ಕಿ ಕ್ಲಾತ್ ಖರೀದಿಸಿರುವುದು ನಿಯಮಬಾಹಿರವಾಗಿರುತ್ತದೆ. ವಿವರಗಳು ಈ ಮುಂದಿನಂತಿವೆ.<br><br><table><tr><th>ಕ್ರ.ಸಂ</th><th>ವಾಹನ ಸಂಖ್ಯೆ/ Model</th><th>ಖರೀದಿ ಮೊತ್ತ</th><th>ಷರಾ</th></tr><tr><td>1</td><td>Honda Accord KA-09 Z 1636</td><td>4950 x 2 = 9900</td><td></td></tr><tr><td>2</td><td>Toyota Innova KA-09 MB 5684</td><td>6000 x 2 = 12000</td><td></td></tr><tr><td>3</td><td>Toyota Innova KA-09 MH 2291</td><td>6000 x 2 = 12000</td><td></td></tr><tr><td>4</td><td>Mahindra Verito KA-09 MA 1250</td><td>4650 x 2 = 9300</td><td></td></tr><tr><td colspan="2">Total</td><td>43200</td><td></td></tr></table><br>ಈ ಸಂಬಂಧ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:86/13.12.2018ರಲ್ಲಿ ಸ್ಪಷ್ಟೀಕರಣ ಕೋರಲಾಗಿ ಸಮಜಾಯಿಷಿ ಪತ್ರದ ದಿನಾಂಕ:21.2.2018ರಲ್ಲಿ ಒದಗಿಸಿರುವ ವಿವರಗಳು ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊಬಲಗು ರೂ.43,200 – 21,600 = **21,600/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** |
| | ಉತ್ತರ |
| | ವಿವಿ ನಿಲಯದ ವಾಹನಗಳನ್ನು ಅಧಿಕಾರಿಗಳ ಅಧಿಕೃತ ಕಛೇರಿ ವಾಹನಗಳನ್ನಾಗಿ ನಿಯೋಜಿಸಲಾಗಿರುತ್ತದೆ. |

| | |
|---|---|
| | ಶುಚಿಯಾಗಿ ಇರಿಸಿಕೊಳ್ಳುವ ದೃಷ್ಠಿಯಿಂದ ಎರಡು ಜೊತೆ ಕ್ಲಾತ್ ಸೀಟ್ ಕವರ್‌ಗಳನ್ನು ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. ಮುಂದುವರೆದು ಒಂದು ಜೊತೆ ಸೀಟ್ ಕವರ್‌ಗಳನ್ನು ಡ್ರೈವಾಷಿಂಗ್‌ಗೆ ನೀಡಿದ ಸಂದರ್ಭದಲ್ಲಿ ಮತ್ತೊಂದು ಜೊತೆ ಸೀಟ್ ಕವರ್‌ಗಳನ್ನು ಅಳವಡಿಸಿಕೊಳ್ಳಲಾಗುವುದು. ಈ ಹಿನ್ನೆಲೆಯಲ್ಲಿ ಎರಡು ಜೊತೆ ಸೀಟ್ ಕವರ್‌ಗಳನ್ನು ಖರೀದಿಸಲಾಗಿದೆ ಇನ್ನೂ ಮುಂದೆ ಒಂದು ಸೆಟ್ ಮಾತ್ರ ಖರೀದಿಸಲು ಕ್ರಮವಹಿಸಲಾಗುವುದು ಎಂಬ ಅಂಶವನ್ನು ತರಲಾಗಿದೆ. ಆದ್ದರಿಂದ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | ವಿವರ |
| 64 | **<u>63. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಾಹನಗಳ ವಿಮೆಯನ್ನು ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ಮಾಡಿಸಿರುವ/ನವೀಕರಿಸಿರುವ ಕುರಿತು :–</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಾಹನಗಳ ವಿಮಾಪಾಲಿಸಿ (Insurence) ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ಮಾಡಿಸಿರುವುದು ಹಾಗೂ ನವೀಕರಿಸಿರುವುದು ಕಂಡುಬಂದಿರುತ್ತದೆ. ವಿವರವನ್ನು **<u>ಅನುಬಂಧ (21)ರಲ್ಲಿ</u>** ನೀಡಿದೆ. ನಿಯಮಾನುಸಾರ ಯಾವುದೇ ಕರ್ನಾಟಕ ಸರ್ಕಾರದ ಇಲಾಖೆ/ಸಂಸ್ಥೆ/ನಿಗಮ/ಮಂಡಳಿ/ವಿಶ್ವವಿದ್ಯಾನಿಲಯದ ಮೂಲಗಳಿಂದ ಕಡ್ಡಾಯವಾಗಿ ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲಿ ಮಾಡಿಸುವುದು ಹಾಗೂ ವಾರ್ಷಿಕವಾರು ನವೀಕರಿಸಿರುವುದು ಕ್ರಮವಾಗಿರುತ್ತದೆ. ಇದರಿಂದಾಗಿ ಕರ್ನಾಟಕ ಸರ್ಕಾರಕ್ಕೆ ರಾಜಸ್ವ ಸಂಗ್ರಹಣೆ ಸಾಧ್ಯವಾಗುತ್ತದೆ. ಆದರೆ ಇಲಾಖೆ ವತಿಯಿಂದ ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ವಿಮೆಗಳ ಮಾಡಿಸಿ, ನವೀಕರಿಸಿರುವುದರಿಂದ ಕರ್ನಾಟಕ ಸರ್ಕಾರಕ್ಕೆ ಬರಬೇಕಾಗಿದ್ದ, ರಾಜಸ್ವದಲ್ಲಿ ಕೊರತೆಯುಂಟಾಗುತ್ತದೆ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:106/20.12.2018ರಲ್ಲಿ ಸ್ಪಷ್ಟೀಕರಣ ಕೋರಲಾಗಿ ಸಮಜಾಯಿಷಿ ಪತ್ರ ದಿನಾಂಕ:26.12.2018ರಲ್ಲಿ ನೀಡಿರುವ ಉತ್ತರಗಳನ್ನು ಒಪ್ಪಲು ಸಾಧ್ಯವಾಗದೆ ಇರುವುದರಿಂದ ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ವಿಮೆ ಮಾಡಿಸಿರುವ/ನವೀಕರಿಸಿರುವ ಮೊಬಲಗು **ರೂ.87,851/–ಗಳನ್ನು ಆಕ್ಷೇಪಣೆಗೆ** ಸೂಚಿಸುತ್ತ ಇನ್ನು ಮುಂದೆ ಕೆ.ಜಿ.ಐ.ಡಿಯನ್ನು ವಿಮಾ ಮೂಲಕವೆ ವಿಮಾ ಪಾಲಿಸಿಗಳನ್ನು ಪಡೆಯಲು ಹಾಗೂ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯದ ವಾಹನಗಳನ್ನು ಖರೀದಿಸುವ ಸಂದರ್ಭದಲ್ಲಿ ಸದರಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ವಿಮಾ ಕಂಪನಿಗಳ ಮೂಲಕ ವಾಹನ ವಿಮೆಯನ್ನು ಮಾಡಿಕೊಟ್ಟಿರುತ್ತಾರೆ. ತುರ್ತು ಸಂದರ್ಭಗಳಲ್ಲಿ ತಕ್ಷಣ ದುರಸ್ಥಿ ಕಾರ್ಯಕ್ಕೆ ಅನುಕೂಲಕರವಾಗುವುದರಿಂದ ಸದರಿ ಸಂಸ್ಥೆಗಳ ಮೂಲಕ ವಿಮಾ ಪಾಲಿಸಿಯನ್ನು ಮಾಡಿಸಲಾಗಿರುತ್ತದೆ. 2017–18ನೇ ಸಾಲಿನಿಂದ United India Insurance Com.Ltd. ಒಂದೆ ವಿಮಾ ಸಂಸ್ಥೆಯಲ್ಲಿ ವಿಮಾ ಪಾಲಿಸಿಯನ್ನು ನವೀಕರಿಸಲಾಗಿರುತ್ತದೆ. ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |

| | ವಿವರ |
|---|---|
| 65 | **<u>64. 2016–17 ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದುರಸ್ತಿ ಬಿಡಿ ಭಾಗಗಳ ಖರೀದಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಆಯುಕ್ತರಿಂದ ದೃಢೀಕರಣ ಪತ್ರ ಪಡೆಯದೆ ಇರುವುದು ಹಾಗೂ ದಾಸ್ತಾನು ವಹಿಯನ್ನು ಹಾಜರುಪಡಿಸದಿರುವುದು :–</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ವಾಹನ ದುರಸ್ಥಿ ಬಿಲ್ಲುಗಳು ಹಾಗೂ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿ, ಭಾಗ–3ರಲ್ಲಿ ಬಿಡಿ ಭಾಗಗಳ ವಿವರಗಳನ್ನು ಕ್ರಮಬದ್ಧವಾಗಿ ದಾಖಲು ಮಾಡಿರುವುದಿಲ್ಲ. ಹಾಗೂ ಹಳೇ ಬಿಡಿ ಭಾಗಗಳನ್ನು ದಾಸ್ತಾನು ಲೆಕ್ಕಕ್ಕೆ ತೆಗೆದುಕೊಂಡಿರುವ ಬಗ್ಗೆ ದಾಸ್ತಾನು ವಹಿ ಹಾಜರುಪಡಿಸದೆ ಇರುವುದು ಮತ್ತು ವಾಹನಗಳ ದುರಸ್ಥಿ ಹಾಗೂ ಟೈರ್‌ಗಳ ಖರೀದಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಆಯುಕ್ತರಿಂದ ದೃಢೀಕರಣ ಪತ್ರ ಪಡೆಯದೆ ಬಿಲ್ಲು ಪಾವತಿಸಲಾಗಿರುವುದನ್ನು ಗಮನಿಸಲಾಗಿದೆ. ವಾಹನಗಳ ವಾರ್ಷಿಕ ದುರಸ್ಥಿ ವೆಚ್ಚ ಕುರಿತು ಅಂದಾಜು ಪಟ್ಟಿಯನ್ನು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಿಂದ ಪಡೆದು ಅನುಮೋದನೆಗೊಂಡಿರುವ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಮತ್ತು ಪಾವತಿಸಿರುವ ಬಿಲ್ಲುಗಳಲ್ಲಿ ಪ್ರವಾಸಕ್ಕೆಗೊಂಡಿರುವ ದಿನಚರಿಯನ್ನು ಸಹ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ವಿಚಾರಣಾ ಪತ್ರ ಸಂಖ್ಯೆ:88/2018–19 ದಿನಾಂಕ:13.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಪಾವತಿಸಿರುವ ಮೊಬಲಗು ಒಟ್ಟು **ರೂ.1,83,468/–ಗಳನ್ನು ಆಕ್ಷೇಪಣೆಗೆ** ಸೂಚಿಸಲಾಗಿದೆ. ವಿವರವನ್ನು <u>**ಅನುಬಂಧ (22)ರಲ್ಲಿ**</u> ನೀಡಲಾಗಿದೆ.<br><br>ವಿಚಾರಣೆ ಸಂಖ್ಯೆ:88/13.12.2018 ರಂದು ನೀಡಿರುವ ವಿಚಾರದಲ್ಲಿ ಅನುಪಾಲನ ವರದಿಯನ್ನು ದಿನಾಂಕ:22.12.2018 ನೀಡಿರುವುದರಿಂದ ಭಾಗಶಃ ಅನುಪಾಲನಾ ವರದಿ ಹಾಗೂ ವಿವರಣೆ ಸಮಂಜಸವಲ್ಲದ ಕಾರಣ ಕಂಡಿಕೆ ಮುಂದುವರೆಸಲಾಗಿದೆ.<br><br>ಕೆ.ಎಫ್.ಸಿ ಅನುಚ್ಛೇಧ 174 ರಂತೆ ಮತ್ತು ಕರ್ನಾಟಕ ಕಛೇರಿ ಕೈಪಿಡಿ ನಿಯಮ 55(40) ನಿಯಮದಂತೆ ಮತ್ತು ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ6/ಟಿ.ಸಿ.ಇ/87/ಬೆಂಗಳೂರು, ದಿನಾಂಕ:15.12.1992ರ ಆದೇಶದಂತೆ ಯಾವುದೇ ಸರ್ಕಾರದ ವಾಹನಗಳ ಸಣ್ಣ ಪ್ರಮಾಣದ ಮತ್ತು ದೊಡ್ಡ ಪ್ರಮಾಣದ ದುರಸ್ಥಿಗಳ ಕಾರ್ಯವನ್ನು ಕೈಗೊಳ್ಳುವ ಪೂರ್ವನ್ವಯವಾಗಿ ಪರಿಶೀಲನಾ ವರದಿಯನ್ನು ಮತ್ತು ವಾಹನ ದುರಸ್ಥಿಯಾದ ನಂತರ ದುರಸ್ಥಿ ದೃಢೀಕರಣ ಪ್ರಮಾಣ ಪತ್ರಗಳನ್ನು ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳಿಂದ ಪಡೆಯಬೇಕಾಗಿರುತ್ತದೆ. |
| | ಉತ್ತರ |
| | **1.** ಪ್ರತಿ ವರ್ಷ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಸೂಚಿಸಲಾಗುವ ಅಂಶಗಳನ್ನು ಸೂಕ್ತ ಬದಲಾವಣೆಗಳೊಂದಿಗೆ ಲಾಗ್ ಪುಸ್ತಕಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br>**2.** ವಿ.ವಿ.ನಿಲಯದ ವಾಹನಗಳನ್ನು ಆಯಾ ಅಧಿಕೃತ ಸಂಸ್ಥೆಗಳಿಂದಲೇ ರಿಪೇರಿ / ದುರಸ್ತಿ ಕಾರ್ಯಗಳನ್ನು |

| | |
|---|---|
| | ನೆರವೇರಿಸಲಾಗುತ್ತಿದ್ದು ಸದರಿ ಹುಂಡಿಗಳಲ್ಲಿ ಪ್ರತಿಯೊಂದು ಬಿಡಿ ಭಾಗಗಳನ್ನು ಹೆಸರಿಸಿರುವುದರಿಂದ ಸದರಿ ಹುಂಡಿಗಳನ್ನು ದೃಢೀಕರಿಸಿ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಪ್ರತಿಯೊಂದು ವಾಹನಕ್ಕೂ ಪ್ರತ್ಯೇಕ ಕಡತಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br>**3.** 2016–17ನೇ ಸಾಲಿನ ಲಾಗ್ ಪುಸ್ತಕಗಳನ್ನು ಪ್ರತಿಯೊಂದು ವಾಹನಕ್ಕೂ ಪ್ರತ್ಯೇಕವಾಗಿ ತೆರದಿದ್ದು ಆಯಾಯ ಲಾಗ್ ಪುಸ್ತಕಗಳ ಸರ್ವೀಸಿಂಗ್, ದುರಸ್ತಿ ಪುಟಗಳಲ್ಲಿ ವಿವರವಾಗಿ ನಮೂದಿಸಿದೆ.<br>**4.** ವಾಹನಗಳ ದುರಸ್ಥಿಗೆ ಸಂಬಂಧಿಸಿದಂತೆ ಆರ್.ಟಿ.ಓ. ಗೆ ಇನ್ನೂ ಮುಂದೆ ಪತ್ರ ಬರೆದು ಕ್ರಮವಹಿಸಲಾಗುವುದು<br>**5.** ಪ್ರವಾಸದ ಸಂದರ್ಭದಲ್ಲಿ ಹೊರಡಿಸಲಾಗುವ ಕಛೇರಿ ಆದೇಶಗಳ ನಕಲು ಪ್ರತಿಗಳನ್ನು ಲಾಗ್ ಪುಸ್ತಕದಲ್ಲಿ ಈಗಾಗಲೇ ಲಗತ್ತಿಸಿರುವುದನ್ನು ಗಮನಿಸಬಹುದಾಗಿರುತ್ತದೆ.<br>**6.** ಅಧಿಕೃತ ಸಂಸ್ಥೆಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ನೀಡಿದ ಅಂದಾಜು ವೆಚ್ಚದ ಪಟ್ಟಿಪಡೆದು ಮುಂದೆ ಕ್ರಮವಹಿಸಲಾಗುವುದು. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 66 | **<u>65. ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಕರೆಯದೆ ಸಾಫ್ಟ್‌ವೇರ್‌ನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿರುವ ಗಣಕಯಂತ್ರಗಳಿಗೆ ಎಂ.ಎಸ್ ಆಫೀಸ್ ಸಾಫ್ಟ್‌ವೇರ್ ಬಿಲ್ಲು ಪಾವತಿಸಿರುವುದು :–</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಹಾಜರುಪಡಿಸಿರುವ ಇನ್‌ವಾಯ್ಸ್ ನಂ.NOCIPD/2016-17/DGS & DR901 ದಿನಾಂಕ:31.03.2017 Office proplys 2016 SNG LOLPN2 Acadmic 250 Nos. x 4319.50 ರಂತೆ 12,95,868/– ಪಾವತಿಸಲಾಗಿದೆ. ಆದರೆ ಪಾವತಿಸಿರುವ ಬಿಲ್ಲಿನ ಮೊತ್ತ ರೂ.5.00 ಲಕ್ಷಕ್ಕಿಂತ ಹೆಚ್ಚಾಗಿ ಪಾವತಿಸಿರುವುದರಿಂದ ಇ–ಪ್ರಕ್ಯೂರ್‌ಮೆಂಟ್ ಪ್ಯಾಕೇಜ್ ಸಿಸ್ಟಂ ಟೆಂಡರ್ ಕರೆಯಬೇಕಾಗಿದ್ದು, ಟೆಂಡರ್ ಕರೆಯದೆ ಬಿಲ್ಲು ಪಾವತಿಸಿರುವುದು ಪಾರದರ್ಶಕತೆ ನಿಯಮ ಉಲ್ಲಂಘನೆಯಾಗಿರುವ ಹಾಗೂ ಸಾಫ್ಟ್‌ವೇರ್ ತಾಂತ್ರಿಕ ವರದಿಯನ್ನು ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆಯದ ಕರಾರು ಒಪ್ಪಂದ ಮಾಡಿಕೊಳ್ಳದೆ ತೆರಿಗೆ ಸೇರಿಸಿ ಬಿಲ್ಲಿನ ಪಾವತಿ ಮಾಡಿದೆ. ತೆರಿಗೆ ನೊಂದಾಯಿತ ಪತ್ರವನ್ನು ಬಿಲ್ಲಿನಲ್ಲಿ ಲಗತ್ತಿಸಿದೆ. ವ್ಯಾಟ್ ಆದಾಯ ತೆರಿಗೆ ಬಿಲ್ಲಿನಲ್ಲಿ ಸೇರಿಸಿದೆ. ಆದರೆ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರುವ ದಾಖಲಾತಿ ಹಾಜರುಪಡಿಸದೆ ಇರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:97/2018–19 ದಿನಾಂಕ:14.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿ ಹಾಜರುಪಡಿಸದೆ ದಿನಾಂಕ:31.03.2017ರಂದು ಸಾಫ್ಟ್‌ವೇರ್ ಖರೀದಿಸಿ ಸದರಿ ದಿನಾಂಕದಂದು ದಾಸ್ತಾನು ಲೆಕ್ಕದ ಪುಟ ಸಂಖ್ಯೆ:118ರಲ್ಲಿ ನಿರ್ದೇಶಕರವರಿಗೆ ವಿತರಣೆ ಮಾಡಿರುವ 250 ಲೈಸೆನ್ಸ್‌ನ ಲೈಫ್‌ಟೈಮ್ ಅಳವಡಿಸಿರುವ ವಿವರ |

ವಿಭಾಗವಾರು ಹಾಜರುಪಡಿಸದೆ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ 2017–18ನೇ ಸಾಲಿಗೆ ಚೆಕ್ ನೀಡಲಾಗಿರುವ ಮೊಬಲಗು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಸೇರಿಸಿ ಅನುಮೋದಿಸಿರುವುದು ಮೇಲ್ನೋಟಕ್ಕೆ ಸಂಶಯಸ್ಪದವಾಗಿರುವ ವಿಚಾರದಲ್ಲಿ ಆಡಳಿತಾತ್ಮಕವಾಗಿ ಕ್ರಮಕೈಗೊಂಡು ಅನುಪಾಲನಾ ವರದಿ ನೀಡುವತನಕ ಮೊಬಲಗು **ರೂ.12,95,868/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ವಿವಿಧ ವಿಭಾಗಗಳಲ್ಲಿ ಅಳವಡಿಸಿರುವ ಗಣಕಯಂತ್ರಗಳು ಹಾಗೂ ಲ್ಯಾಪ್ ಟಾಪ್‌ಗಳಿಗೆ ಅಗತ್ಯವಾಗಿ ಬೇಕಾಗಿದ್ದ ಒಟ್ಟು 250 MS office software License ಅನ್ನು ರೂ. 4,319.56 ರಂತೆ ಒಟ್ಟು ಎಲ್ಲಾ ತೆರಿಗೆ ಸೇರಿ ರೂ. 12,95,868.00 (ರೂ. ಹನ್ನೆರಡು ಲಕ್ಷದ ತೊಂಬತ್ತೈದು ಸಾವಿರದ ಎಂಟು ನೂರ ಅರವತ್ತೆಂಟು ಮಾತ್ರ.) ವೆಚ್ಚದಲ್ಲಿ ಡಿ.ಜಿ.ಎಸ್ ಮತ್ತು ಡಿ ನ ಅಧಿಕೃತ ಸರಬರಾಜುದಾರರಾದ "corporate infotech Private LTD" New Delhi ರವರಿಂದ ದಿ: 31.03.2017 ಖರೀದಿಸಿ ದಾಸ್ತಾನು ಪುಸ್ತಕದ ಪುಟ ಸಂಖ್ಯೆ: 118 ರಲ್ಲಿ ದಾಸ್ತಾನು ಪಡೆದು ಗಣಕಯಂತ್ರಗಳು ಮತ್ತು ಲ್ಯಾಪ್ ಟ್ಯಾಪ್‌ಗಳಿಗೆ ಅಳವಡಿಸಿಕೊಳ್ಳಲಾಗಿರುತ್ತದೆ. ಈ ಸಂಬಂಧವಾಗಿ ಸದರಿಯವರ ಹುಂಡಿಯ ಪಾವತಿಗೆ ವಿವಿಯು ಕ್ರಮವಹಿಸಲಾಗಿದೆ. ಹಾಗೂ ಸದರಿಯವರು ತೆರಿಗೆ ಪಾವತಿಸಿರುವ ಬಗ್ಗೆ ಪತ್ರ ನೀಡಿರುತ್ತಾರೆ. (ಲಗತ್ತಿಸಿದೆ) MS office software License ಅನ್ನು ಡಿ.ಜಿ.ಎಸ್ ಮತ್ತು ಡಿ ಅಡಿಯಲ್ಲಿ ಮೂಲ ದರ ರೂ. 5161.87 ಗಳಾಗಿದ್ದು ಆದರೆ ವಿವಿಯು ಪರಿಷ್ಕೃತ ದರವಾದ ರೂ. 4319.56 ಗಳಂತೆ ಖರೀದಿಸಲಾಗಿರುತ್ತದೆ. ಪರಿಷ್ಕೃತ ದರವು ಪ್ರಮಾಣ ಒಂದರಿಂದ 1,00,000 ದ ಲೈಸೆನ್ಸ್ ಪ್ರತಿಗಳಿಗೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಮಾತ್ರ ಈ ದರವು ಅನ್ವಯಿಸುತ್ತದೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿ.ಜಿ.ಎಸ್, & ಡಿ ದರದ ವಿವರ, ಕ್ರಮವಹಿಸಿದ ಮಾಹಿತಿ ಸದರಿಯವರ ಹುಂಡಿ ಹಾಗೂ ಕಡತ, ದಾಸ್ತಾನು ವಹಿ, ಗಣಕಯಂತ್ರಗಳಿಗೆ ಅಳವಡಿಸಿರುವ ಸದರಿ ಮಾಹಿತಿಯನ್ನು ಈಗಾಗಲೇ ಲೆಕ್ಕತಪಾಸಣಾ ಸಮಯದಲ್ಲಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

**ವಿವರ**

67 **<u>66. ಕೆ.ಟಿ.ಪಿ.ಪಿ ನಿಯಮ 1999/2000ರನ್ವಯ ಕೊಟೇಶನ್ ಆಹ್ವಾನಿಸದಿರುವ ಹಾಗೂ ದಾಸ್ತಾನು ಮತ್ತು ವಿತರಣಾ ವಹಿ, ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿಗಳನ್ನು ಹಾಜರುಪಡಿಸದಿರುವ ಕುರಿತು :–</u>**

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ವಿವಿಧ ಸಾಮಾಗ್ರಿಗಳನ್ನು ಖರೀದಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ಬಿ.ಆರ್ ಸಂಖ್ಯೆ ದಿನಾಂಕ | ಧನಾದೇಶ ಸಂಖ್ಯೆ ದಿನಾಂಕ | ಓಚರ್ ಸಂಖ್ಯೆ | ಮೊಬಲಗು | ಷರಾ |
|---|---|---|---|---|---|
| 1 | 1402/29.09.2016 | 889991/20.10.2016 | 42 | 26,000 | |
| 2 | 1362/22.09.2016 | 889992/20.10.2016 | 43 | 52,670 | |
| | | | **ಒಟ್ಟು** | **78,670** | |

ಮೇಲ್ಕಂಡಂತೆ ಖರೀದಿಸಲಾದ ವಿವಿಧ ಸಾಮಾಗ್ರಿಗಳ ಖರೀದಿಗೆ ಸಂಬಂಧ ಕೆ.ಟಿ.ಪಿ.ಪಿ ನಿಯಮ 1999–2000ರನ್ವಯ ಆಹ್ವಾನಿಸಲಾದ ಕೊಟೇಶನ್ ಕಡತ, ದಾಸ್ತಾನು ಮತ್ತು ವಿತರಣಾ ವಹಿ ಹಾಗೂ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:110/21.12.2018ರಲ್ಲಿ ಕೋರಲಾಗಿ ಮುಕ್ತ ವಿಶ್ವವಿದ್ಯಾನಿಲಯದಿಂದ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದಿರುವ ಕಾರಣ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಒಟ್ಟು ಮೊತ್ತ **ರೂ.78,670/–ಗಳನ್ನು ಆಕ್ಷೇಪಣೆಯಲ್ಲಿಡಲು ಸೂಚಿಸಲಾಗಿದೆ.**

ಉತ್ತರ

ಕೊಟೇಶನ್ ಕಡತ, ದಾಸ್ತಾನು ಮತ್ತು ವಿತರಣಾ ವಹಿ ಹಾಗೂ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿಗಳನ್ನು ಲೆಕ್ಕಪರಿಶೋಧನೆ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು.

**ವಿವರ**

68 **67. ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆ ಪಡೆದಿರುವ ಸಾದಿಲ್ವಾರು ವೆಚ್ಚದ ಪಾವತಿ ಬಿಲ್ಲು ದಾಸ್ತಾನು ವಿತರಣಾ ವಹಿ ಹಾಜರುಪಡಿಸದೆ ಇರುವುದು :–**

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಹಾಜರುಪಡಿಸಿರುವಂತೆ ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆಗೊಂಡಿರುವಂತೆ ಸಾದಿಲ್ವಾರು ವೆಚ್ಚಕ್ಕೆ ಸಂಬಂಧಿಸಿದಂತೆ ಕೊಟೇಶನ್ ಮಂಜೂರಾತಿ ಆದೇಶ ಟೆಂಡರ್ ಫೈಲ್ ದಾಸ್ತಾನು ವಿತರಣೆ ವಹಿ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ 148/2018–19 ದಿನಾಂಕ:09.01.2019ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದ ಲೆಕ್ಕಶೀರ್ಷಿಕೆ 279ರ ರೂ.6,77,505/– ಹಾಗೂ ಲೆಕ್ಕಶೀರ್ಷಿಕೆ 301 ರೂ.52,364/–ಗಳಿಗೆ ಓಚರ್‌ಗಳನ್ನು ಹಾಜರುಪಡಿಸಿ ಉಳಿದ **ಮೊಬಲಗು ರೂ.12,01,069/–** ಗಳಿಗೆ ಓಚರ್‌ಗಳನ್ನು ಹಾಜರುಪಡಿಸದೆ ಇರುವುದರಿಂದ **ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರ.ಸಂ | ಕೋಡ್ ನಂಬರ್ | ಮೊಬಲಗು | ವಿವರ |
|---|---|---|---|
| 1 | 302 | 48,671 | ಸಾದಿಲ್ವಾರು ಬಿಲ್ಲು |
| 2 | 314 | 24,627 | ಟೆಂಡರ್ ಕಡತ ಹಾಜರುಪಡಿಸಿಲ್ಲ ಹಾಗೂ ಓಚರ್ |
| 3 | 215 | 1,07,227 | ಹಾಜರುಪಡಿಸಿಲ್ಲ |

| | | | |
|---|---|---|---|
| 4 | 217 | 2,62,556 | ಪೀಠೋಪಕರಣ |
| 5 | ಕ್ರ.ಸಂ.80 ವಾ.ಲೆ.ಪ | 5,36,345 | ಸಾದಿಲ್ವಾರು ವೆಚ್ಚ |
| | **ಒಟ್ಟು** | **12,01,069** | |

ಉತ್ತರ

ಲೆಕ್ಕಪರಿಶೋಧಕರು ಕೋರಿರುವ ದಾಖಲಾತಿಗಳನ್ನು ಲೆಕ್ಕಪರಿಶೀಲನೆ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು.

ವಿವರ

69

**68. ವಾರ್ಷಿಕ ಲೆಕ್ಕದಂತೆ ಕೋಡ್ ಸಂಖ್ಯೆ:281 Cost of land purchase ಸಂಬಂಧಿಸಿದ ಕಡತ ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದು :–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ವರ್ಷದ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರ ಹಾಗೂ ಪಾವತಿಸಿರುವ ಬಿಲ್ಲುಗಳನ್ನು ಪರಿಶೀಲಿಸಿದಾಗ Payment Code No 281 Cost of Land Purchase ಗೆ ಸಂಬಂಧಿಸಿದಂತೆ ರೂ.15,08,857/–ಗಳನ್ನು ಪಾವತಿಸಿದ್ದು, ಇದಕ್ಕೆ ವಿವರಣೆ ನೀಡುವಂತೆ ವಿಚಾರಣೆ ಸಂಖ್ಯೆ:79/2018–19 ದಿನಾಂಕ:10.12.2018 ರಲ್ಲಿ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿಲ್ಲವಾದ್ದರಿಂದ **ರೂ.15,91,357/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಪ್ರಾದೇಶಿಕ ಕಚೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ಜಮೀನು ಖರೀದಿಸಿರುವ ವಿವರ ಇತ್ಯಾದಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

1. ನಿವೇಶನ ನೊಂದಣಿ ಶುಲ್ಕ ಪಾವತಿ ರಶೀತಿ.
2. KHB ಪ್ರಾಧಿಕಾರದ ನಿವೇಶನ ಹಂಚಿಕೆ ಮಂಜೂರಾತಿ ಆದೇಶದ ಪ್ರತಿ.
3. ಅನ್ಯ ಪ್ರಾಂತ ಭೂ ಸ್ವಾಧೀನ ಪತ್ರ.
4. ಭೂ ನಕ್ಷೆ ಮಂಜೂರಾತಿಯಾಗಿರುವ ಆದೇಶದ ಪ್ರತಿ.
5. ಕೆ.ಹೆಚ್.ಬಿ/ಬಿ.ಡಿ.ಎ ನೊಂದಣಿ ಅಧಿಕಾರಿಗಳಿಂದ ದರ ನಿಗದಿಪಡಿಸಿರುವ ಆದೇಶದ ಪ್ರತಿ.
6. ನೊಂದಣಿ ಅಧಿಕಾರಿಗಳ ಸೇಲ್ಸ್ ಡೀಡ್ (ಪ್ರಮಾಣ ಪತ್ರ).
7. BOM ಸಭೆಯಲ್ಲಿ ಒಪ್ಪಿಗೆ ಪಡೆದು/ಕುಲಪತಿಯಿಂದ ಅನುಮೋದನೆಗೊಂಡಿರುವ ಮಂಜೂರಾತಿ ಆದೇಶದ ಪ್ರತಿ.
8. ಸ್ಥಿರ ಹಾಗೂ ಚರಾಸ್ತಿಯ ವಹಿಯಲ್ಲಿ ದಾಖಲು ಮಾಡಿರುವ ನಿವೇಶನ ಖರೀದಿಯ ವಿವರ.

| **As per Expendeture Register Total Details** | | |
|---|---|---|
| 1 | ಬಿ.ಆರ್.ನಂಬರ್ 1776/16.12.2016 ಧಾರವಾಡ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ | 82,500 |

| | | |
|---|---|---|
| | ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕಛೇರಿ ಸ್ಥಾಪಿಸಲು ಸಿ.ಎ.ನಿವೇಶನ ಸಂಖ್ಯೆ:26 ಮರಗೋಲ, 2ನೇ ಹಂತ | |
| 2 | ಬಿ.ಆರ್.2218/15.07.2017ರ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ | 14,71,668 |
| 3 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸರ್.ಎಂ.ವಿಶ್ವೇಶ್ವರಯ್ಯ, ಬಡಾವಣೆ 5ನೇ ಬ್ಲಾಕ್ CA ಸೈಟ್ ನಂ.4 | 37,189 |
| | **ಒಟ್ಟು** | **15,91,357** |
| | 2016–17ನೇ ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆಗೊಂಡಿರುವುದು | 15,08,857 |
| | **ವ್ಯತ್ಯಾಸ** | **82,500** |

ವಿವರದಲ್ಲಿ ತಿಳಿಸಿರುವಂತೆ ಜಮೀನು ಖರೀದಿಗಾಗಿ ಪಾವತಿಸಿರುವ ಮೊಬಲಗಿಗೆ ಸಂಬಂಧಿಸಿದಂತೆ ಬಿಲ್ಲುಗಳು ದಾಖಲಾತಿ ಕಡತ ಹಾಜರುಪಡಿಸದೆ ಇರುವುದರಿಂದ ಪಾವತಿಸಿರುವ ಮೊಬಲಗು ರೂ.**15,91,357 ಆಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ವಿ.ವಿ. ನಿಲಯಕ್ಕೆ ಮಂಜೂರಾದ ಧಾರವಾಡ ಜಿಲ್ಲೆಯ ನಿವೇಶನಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯ KHB (ಕರ್ನಾಟಕ ಗೃಹ ಮಂಡಳಿ) ಇವರಿಗೆ ಹುಂಡಿಯನ್ನು ಪಾವತಿಸಿದ ಸಮಯದಲ್ಲಿ ಕೆಲವು ತಾಂತ್ರಿಕ ಕಾರಣಗಳಿಂದ ಒಟ್ಟು ರೂ 15,91,357/– ಗಳ ಮೊತ್ತದಲ್ಲಿ ರೂ 82,500/– ಗಳನ್ನು ಪಾವತಿಸದೆ ತಡೆಹಿಡಿಯಲಾಗಿರುತ್ತದೆ. ಆದುದರಿಂದ ಒಟ್ಟು ಮೊತ್ತ ರೂ 15,91,357/– ಗಳಲ್ಲಿ ರೂ15,08,857/– ಗಳನ್ನು ಸಂಬಂಧಪಟ್ಟ ನಿವೇಶನಗಳಿಗೆ ಪಾವತಿಸಿರುವುದರಿಂದ ಧಾರವಾಡ ಕೇಂದ್ರದ ಮೊತ್ತ ರೂ 82,500/– ಗಳು ವ್ಯತ್ಯಾಸ ಕಂಡುಬಂದಿರುತ್ತದೆ.

ವಿ.ವಿ ನಿಲಯಕ್ಕೆ ಮಂಜೂರಾದ ನಿವೇಶನ / ಜಾಗಗಳನ್ನು ಖರೀದಿ ಮಾಡಿರುವ ಸಂಬಂಧ ಸದರಿ ನಿವೇಶನಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮತ್ತು ಮಾಹಿತಿಗಳನ್ನು ಲೆಕ್ಕ ತಪಾಸಣೆಯ ಸಮಯದಲ್ಲಿ ಒದಗಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**ವಿವರ**

70 **<u>69. ಭದ್ರತಾ ಠೇವಣಿ ಹಾಗೂ ಇ.ಎಂ.ಡಿ ಮರುಪಾವತಿ ವಿಚಾರ :–</u>**

2016–17ನೇ ಸಾಲಿನಲ್ಲಿ ಎಸ್.ಡಿ/ಇ.ಎಂ.ಡಿ ಖಾತೆಗಾಗಿ ನಗದು ಪುಸ್ತಕವನ್ನು ನಿರ್ವಹಿಸಲಾಗಿದ್ದು, ವಿವರವು ಈ ಕೆಳಕಂಡಂತೆ ಇರುತ್ತದೆ. ಬ್ಯಾಂಕ್ ಖಾತೆ ಸಂಖ್ಯೆ:ಎಸ್.ಬಿ.ಐ ಅಕೌಂಟ್ ಸಂಖ್ಯೆ:54035421224 ರಲ್ಲಿ ವ್ಯವಹಾರ ಈ ರೀತಿ ಇದೆ. M/S KSOU/SD/EMD

| | |
|---|---|
| ದಿನಾಂಕ:01.04.2016 ಪ್ರಾರಂಭ ಶಿಲ್ಕು | 1,66,79,544.58 |
| 2016–17ನೇ ಸ್ವೀಕೃತಿ | 29,77,541 |
| **ಒಟ್ಟು** | **1,96,57,085.58** |
| 2016–17ನೇ ಮರು ಪಾವತಿ | 3,22,281.00 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 1,93,34,804.00 |

**ಮರುಪಾವತಿಯ ಬಿಲ್ಲಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ ಹಾಜರುಪಡಿಸದೆ ಇರುವುದು**

2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಖರ್ಚು ಹಾಕಿರುವಂತೆ ಬ್ಯಾಂಕ್ ಖಾತೆಯ ಸಂಖ್ಯೆ:5403541224 ರಲ್ಲಿ ಎಸ್.ಡಿ/ ಇ.ಎಂ.ಡಿ ಮರುಪಾವತಿಸಿರುವ ಭದ್ರತಾ ಠೇವಣಿ ಬಿಲ್ಲುಗಳನ್ನು ಬ್ಯಾಂಕ್ ಖಾತೆಯ ಖರ್ಚು ಹಾಕಿರುವಂತೆ ಇದರಲ್ಲಿ ರೂ.3,22,281/– ಭದ್ರತಾ ಠೇವಣಿ ಮರುಪಾವತಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ರೂ.2,18,250/– ಭದ್ರತಾ ಠೇವಣಿ ಬಿಲ್ಲು ಹಾಜರುಪಡಿಸಿ ಉಳಿದ ರೂ.1,04,031/– ಪಾವತಿ ಬಿಲ್ಲು, ಎಂ.ಬಿ ಸಂಖ್ಯೆ:3426, 9011, 4926, 1556 ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:72/2018–19 ದಿನಾಂಕ:05.12.2018 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಬಿಲ್ಲು ಎಂ.ಬಿ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.3,22,281/–ಗಳನ್ನ ಆಕ್ಷೇಪಣೆಯಲ್ಲಿಡಲಾಗಿದೆ.**

| | |
|---|---|
| ಬ್ಯಾಂಕ್ ಖಾತೆಯ ಪ್ರಕಾರ ಒಟ್ಟು ಖರ್ಚು ಮಾಡಿರುವುದು. | 3,22,281 |
| ವಾರ್ಷಿಕ ಲೆಕ್ಕಪತ್ರದಲ್ಲಿ ಖರ್ಚು ಹಾಕಿರುವುದು | 2,84,781 |
| **ವ್ಯತ್ಯಾಸ** | **37,500** |

ಈ ಬಗ್ಗೆ ವಿವರಣೆ ನೀಡಲು ತಿಳಿಸಿದೆ.

ಉತ್ತರ

ಲೆಕ್ಕಪರಿಶೋಧಕರು ಕೋರಿರುವ ದಾಖಲಾತಿಗಳನ್ನು ಲೆಕ್ಕಪರಿಶೀಲನೆ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು.

**ವಿವರ**

71 **70. ಎಸ್.ಡಿ/ಇ.ಎಂ.ಡಿ ರಿಜಿಸ್ಟರ್ ನಲ್ಲಿ ದಾಖಲು ಇರುವಂತೆ ಪಾವತಿಸಿರುವ ರಿಫಂಡ್ ಬಿಲ್ಲುಗಳನ್ನು ಇತರೆ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದು :–**

2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಎಸ್.ಡಿ/ಇ.ಎಂ.ಡಿ ರಿಜಿಸ್ಟರ್ ನಲ್ಲಿ ದಾಖಲು ಇರುವಂತೆ ಭದ್ರತಾ ಠೇವಣಿ, ಇ.ಎಂ.ಡಿಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದ್ದು, ಬಿಡುಗಡೆಗೆ ಮರುಪಾವತಿಯ ಬಿಲ್ಲುಗಳು ಅಳತೆ ಪುಸ್ತಕ ಹಾಗೂ ಕಾಮಗಾರಿ ಬಿಲ್ಲಿನ ವಿವರ ಮಂಜೂರಾತಿ ಆದೇಶ ಇತ್ಯಾದಿ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:71/2018–19 ದಿನಾಂಕ:05.12.2018 ರಂದು ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿ ಹಾಜರುಪಡಿಸದೆ ಇರುವುದರಿಂದ **ರೂ.5,67,796/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರ ಕೆಳಕಂಡಂತಿದೆ.

| ಕ್ರ.ಸಂ | ಬಿ.ಆರ್ ನಂಬರ್ ದಿನಾಂಕ | ಮೊಬಲಗು | ವಿವರ |
|---|---|---|---|
| 1 | 941/ 21.07.2016 | 1,19,251 | ಚೆಕ್ ನಂಬರ್ 889860/ 30.08.2016 ಮೆ॥ ಮಣಿಪಾಲ್ ಟೆಕ್ನಾಲಜಿಸ್ |
| 2 | 942/ 21.07.2016 | 70,875 | |
| 3 | 943/ 21.07.2016 | 51,867 | |
| 4 | 944/ 29.07.2016 | 2,12,408 | ಮೆ॥ ರಾಜ್‌ಪ್ರಿಂಟರ್ಸ್ |
| 5 | 945/ 21.07.2016 | 21,908 | M/S Daba cons Technology, Bangalore |
| 6 | 946/ 21.07.2016 | 33,721 | |
| 7 | 940/ 21.07.2016 | 48,724 | ಮೆ॥ ಪೂರ್ಣಿಮಾ ಪ್ರಿಂಟರ್ಸ್ |
| 8 | 1012/ 29.07.2016 | 9,042 | ಮೆ॥ ರಾಜ್‌ಪ್ರಿಂಟರ್ಸ್ |
| ಒಟ್ಟು | | 5,67,796 | |

ಉತ್ತರ

ಎಸ್.ಡಿ/ಇ.ಎಂ.ಡಿ ಮರುಪಾವತಿಗೆ ಸಂಬಂಧಿಸಿದ ಬಿಲ್ಲುಗಳು ಅಳತೆ ಪುಸ್ತಕ ಹಾಗೂ ಕಾಮಗಾರಿ ಬಿಲ್ಲಿನ ವಿವರ ಮಂಜೂರಾತಿ ಆದೇಶ ಇತ್ಯಾದಿ ದಾಖಲಾತಿಗಳನ್ನು ಲೆಕ್ಕಪರಿಶೀಲನೆ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು.

ವಿವರ

72

**<u>71. ವಾಸ್ತವಿಕ ಮಾರಾಟ ತೆರಿಗೆ ಸಂಗ್ರಹಣೆಯ ಮೊತ್ತಕ್ಕಿಂತ ಕಡಿಮೆ ಮೊತ್ತದ ಮಾರಾಟ ತೆರಿಗೆಯನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಿರುವ ಕುರಿತು :–</u>**

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ ಕ.ರಾ.ಮು.ವಿ ವತಿಯಿಂದ 2016–17ನೇ ಸಾಲಿಗೆ ವಿವಿಧ ಮೂಲಗಳಿಂದ ಸಂಗ್ರಹಿಸಲಾದ ಮಾರಾಟ ತೆರಿಗೆ ಬಾಬ್ತು ರೂ.1,10,31,984/–ಗಳನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗಿರುತ್ತದೆ. ಈ ಸಂಬಂಧ, ವಿಚಾರಣಾ ಪತ್ರದ ಸಂಖ್ಯೆ:60/ ದಿ:29.11.2018 ರಲ್ಲಿ ಪೂರ್ಣ ವಿವರಗಳೊಂದಿಗೆ ಕಡತಗಳನ್ನು ಹಾಜರುಪಡಿಸಲು ಕೋರಲಾಗಿ, ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುತ್ತದೆ. ರೂ.1,10,31,984/–ಗಳನ್ನು ಮಾರಾಟ ತೆರಿಗೆಯ ಬಾಬ್ತನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗಿದ್ದು, ಇದನ್ನು ಕ.ರಾ.ಮು.ವಿ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ರೂ.85,62,468/–ಗಳೆಂದು ತಪ್ಪಾಗಿ ನಮೂದಿಸಲಾಗಿರುತ್ತದೆ. ಇದರಿಂದಾಗಿ ರೂ.24,69,516/–ಗಳ ವ್ಯತ್ಯಾಸ ಕಂಡುಬಂದಿರುತ್ತದೆ. ಇದು ತಪ್ಪು ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ನೀಡಿದಂತಾಗಿರುತ್ತದೆ. ಇದರಿಂದಾಗಿ ವಾಸ್ತವಿಕ ಮೊತ್ತವನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ, ಲೆಕ್ಕಪರಿಶೋಧನೆ ವಿಚಾರಣಾ ಪತ್ರದ ಸಂಖ್ಯೆ:109/ ದಿ:21.12.2018 ರಂದು ಸೂಕ್ತ ಸ್ಪಷ್ಟೀಕರಣ ಕೋರಲಾಗಿ, ಮುಕ್ತ ವಿ.ವಿ ಯಿಂದ ಯಾವುದೇ ಸಮಜಾಯಿಷಿಯನ್ನಾಗಲೀ/ ವಿವರಗಳನ್ನಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಆದ್ದರಿಂದ ವ್ಯತ್ಯಾಸದ/ ಕಡಿಮೆ ನಮೂದಿಸಿರುವ ಮೊಬಲಗು **ರೂ.24,69,516/–ಗಳಿಗೆ ವಿವರಣಾತ್ಮಕವಾಗಿ ದಾಖಲೆಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಯಲ್ಲಿಡಲು ಸೂಚಿಸಲಾಗಿದೆ.**

| ವಿವರಗಳು | ಮೊತ್ತ |
|---|---|
| ವಾಸ್ತವಿಕ ಸಂಗ್ರಹಣೆ/ ಜಮೆ ಮಾಡಿದ ಮಾರಾಟತೆರಿಗೆ ಮೊಬಲಗು | 1,10,31,984 |
| 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಿರುವ ಮೊಬಲಗು | 85,62,468 |
| **ಕಡಿಮೆ ನಮೂದಿಸಿರುವ ಮೊಬಲಗು** | **24,69,516** |

ಉತ್ತರ

ತಾವು ನಮೂದಿಸಿರುವ ಮೊತ್ತವು ಕಾಮಗಾರಿಗೆ ಸಂಬಂಧಿಸಿದ್ದಾಗಿದ್ದು, ಗುತ್ತಿಗೆದಾರರಿಂದ ಮಾರಾಟ ತೆರಿಗೆಯನ್ನು ಸಂಗ್ರಹಿಸಿದ್ದ ಮೊತ್ತವಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

**2016-2017 COMMERCIL TAXES DETAILS**

| Sl. No | B.R.NO/ Date | Name of the Contractor and address | Name Of the Work | Amount Paid Credited (Rs) | Amount of Sales tax deducted (Rs) |
|---|---|---|---|---|---|
| 1 | 5869/ 05.03.16 | M/S Vandana Electricals mysuru | Electrical work at lesson sec, | 212791 | 8512 |
| 2 | 5870/ 05.03.16 | M/S Vandana Electricals mysuru | supplying of electrical cable ksou building | 205772 | 8231 |
| 3 | 243/ 27.04.16 | M/S BSR Infratech India Ltd,Bangalore | contruction of reg,center c.h.nagara,mandya,shimogga&Davanagere | 84698762 | 635241 |
| 4 | 244/ 27.04.16 | M/S BSR Infratech India Ltd,Bangalore | construction of reg,center Bellary,kolar, chikkamagalore & tumkur 7th part bill | 82576664 | 825767 |
| 5 | 1123/ 10.08.16 | M/S BSR Infratech India Ltd,Bangalore | providing interior works&other works for the convocation building | 69375189 | 3468760 |
| 6 | 1124/ 10.08.16 | M/S BSR Infratech India Ltd,Bangalore | Construction of Acadamic Block& Mandakali Villege, provindig interior works&other works for the convocation building | 61804418 | 1236089 |
| 7 | 1145/ 17.08.16 | B.N.Vijetha Contractor Mysore | supplying & fixing of fumbling& sanitarr work at gen boy hostel, guest house | 200625 | 10032 |
| 8 | 1987/ 13.01.17 | M/S S.B.Electricals mysore | Ksou Exam& Lesson sec, Electrical work | 195553 | 9777 |
| 9 | 2068/ 24.01.17 | M/S BSR Infratech India Ltd,Bangalore | provindig interior works&other works for the convocation building | 45655545 | 2282777 |
| 10 | 2088/ 28.01.17 | M/S BSR Infratech India Ltd,Bangalore | Provindig interior works & other works for the convocation building contrucation of reg,center kolar,chikkamagalore & tumkur | 115841438 | 1158414 |
| 11 | 2396/ 14.03.17 | M/S Welcome Traders Bangalore | Raddi paper Bill Amount | 962468 | 57750 |
| 12 | 2087/ 28.01.17 | M/S BSR Infratech India Ltd,Bangalore | construction of reg, center c.h.nagara,mandya, shimogga & Davanagere | 138364162 | 1037731 |
| 13 | 2520/ 30.03.17 | M/S BSR Infratech India Ltd,Bangalore | Contruction of Acadamic Block convocation building science block final bill | 14645120 | 292903 |
| | | | **2016-2017 Grand Total** | **11031984** | |

ಹಾಗೂ ರೂ 85,62,468/– ಗಳು ವಿವರಣಾ ಪುಸ್ತಕಗಳ ಮಾರಾಟದ ತೆರಿಗೆ ಮೊತ್ತವಾಗಿರುತ್ತದೆ. ಆದ್ದರಿಂದ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ. ಆದುದರಿಂದ ಸದರಿ ಆಕ್ಷೇಪಣಾ ಕಂಡಿಕೆಯನ್ನು ಕೈಬಿಡಲು

| | |
|---|---|
| | ಕೋರಿದೆ. |
| | **ವಿವರ** |
| 73 | **<u>72. 2016–17ನೇ ಸಾಲಿಗೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಿರುವ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ತಯಾರಿಸದೆ ಇರುವುದು :–</u>**<br><br>2016–17ನೇ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ. ಇದರಿಂದ ಕಾಮಗಾರಿ ಭೌತಿಕ ಆರ್ಥಿಕ ಪ್ರಗತಿ ಮತ್ತು ಸಣ್ಣ ಕಾಮಗಾರಿ ಇತರೆ ಕಾಮಗಾರಿಯ ಬಗ್ಗೆ ಆಡಳಿತಾತ್ಮಕವಾಗಿ ಮಂಜೂರಾತಿ ನೀಡಿರುವ ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದಿರುವ ಕಾಮಗಾರಿ ಹೊಸದಾಗಿ ಈ ಸಾಲಿನಲ್ಲಿ ಕೈಗೊಳ್ಳಲಾಗುವ ಕಾಮಗಾರಿ ಪೂರ್ಣಗೊಂಡ ಕಾಮಗಾರಿ, ಬಾಕಿ ಉಳಿದಿರುವ ಕಾಮಗಾರಿ, ನಿಗದಿಪಡಿಸಿರುವ ಅನುದಾನ ಬಳಕೆಯಾಗಿರುವ ಅನುದಾನ ಇತ್ಯಾದಿಯ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಕೂಡಲೇ ಕ್ರಮಕೈಗೊಂಡು ಕ್ರಿಯಾ ಯೋಜನೆ ತಯಾರಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ. |
| | ಉತ್ತರ |
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ. ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದು. |
| | **ವಿವರ** |
| 74 | **<u>73. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Major work, Regional Centres Buliding Construction :-</u>**<br>2016–17ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಂಡು ಹಣ ಪಾವತಿಸಲಾಗಿದೆ.<br>**<u>ಪ್ಯಾಕೇಜ್ 1 :–</u>**<br>2016–17ನೇ ವರ್ಷದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ಯಾಕೇಜ್–1 ರಲ್ಲಿ ಒಟ್ಟು 5 ಪ್ರಾದೇಶಿಕ ಕಛೇರಿ ಕಟ್ಟಡಗಳ ಅನುಷ್ಠಾನಗೊಳಿಸಲು ಕ್ರಮವಹಿಸಿದ್ದು ರೂ.5,255/– ಲಕ್ಷಗಳ ಅಂದಾಜಿನ ಪಟ್ಟಿಗೆ ಅನುಮೋದನೆ ಪಡೆಯಲಾಗಿದೆ. ಹಾಗೂ ರೂ.6,358/–ಗಳಿಗೆ ಟೆಂಡರ್ ಅನುಮೋದಿಸಲಾಗಿದೆ. ಶೇಕಡ 24 ರ ಹೆಚ್ಚುವರಿ ಮೊತ್ತದಲ್ಲಿ M/S BSRL Constructions, Bangalore ರವರಿಗೆ ಟೆಂಡರ್ ಪ್ರಿಮಿಯಂ ರೂ.1,103.04 ಲಕ್ಷಗಳಿಗೆ ಅಂಗೀಕರಿಸಿ ಟೆಂಡರ್ ಕರಾರು ಪತ್ರದ ಸಂಖ್ಯೆ:KSOU/ES18/2013-14 ದಿನಾಂಕ:04.03.2014 ರಂದು ಒಪ್ಪಂದ ಮಾಡಿಕೊಂಡು ಕಾಮಗಾರಿಯನ್ನು ವಹಿಸಿಕೊಡಲಾಗಿರುತ್ತದೆ.<br>ಕೆಲಸವನ್ನು ಪ್ರಾರಂಭಿಸಲು ದಿನಾಂಕ:15.09.2014 ರಂದು ಸ್ಥಳವನ್ನು ವಹಿಸಿಕೊಟ್ಟು 18 ತಿಂಗಳು ಕಾಲವಕಾಶವನ್ನು ನೀಡಿ ದಿನಾಂಕ:14.03.2016 ಅಂತ್ಯಕ್ಕೆ ನಿಶ್ಚಿತ ಪ್ರಗತಿಯನ್ನು ಸಾಧಿಸಲು ಸೂಚಿಸಲಾಗಿದೆ ವೆಚ್ಚದ |

| | |
|---|---|
| | ವಿವರ **ಅನುಬಂಧ (23)** ರಲ್ಲಿ ನೀಡಿದೆ.<br><br>**ಪ್ಯಾಕೇಜ್ 2 :–**<br><br>2016–17ನೇ ಸಾಲಿಗೆ ಕ.ರಾ.ಮು.ವಿ ವ್ಯಾಪ್ತಿಗೆ ಸೇರಿದ ಒಟ್ಟು 5 ಕಾಮಗಾರಿ ಕೆಲಸವನ್ನು ಅನುಷ್ಠಾನಗೊಳಿಸಲು ರೂ.5,310/– ಲಕ್ಷ ಅಂದಾಜು ಪಟ್ಟಿಯನ್ನು ಅನುಮೋದಿಸಲಾಗಿದೆ. ಇದರಲ್ಲಿ ರೂ.6258.26 ಲಕ್ಷಗಳಿಗೆ ಟೆಂಡರ್ ಪ್ರೀಮಿಯಂ 948.26ಅನ್ನು ಶೇ.24 ರಷ್ಟು ಹೆಚ್ಚುವರಿ ದರದಲ್ಲಿ M/S BSR Infratech India pvt ltd, Bangalore ಇವರಿಗೆ ಅನುಮೋದಿಸಿ ಟೆಂಡರ್ ಕರಾರು ಪತ್ರದ ಸಂಖ್ಯೆ:69/2013–14 ದಿನಾಂಕ:14.11.2014ರ ಪ್ರಕಾರ ಕಾಮಗಾರಿಯನ್ನು ವಹಿಸಿಕೊಡಲಾಗಿದೆ.<br>ಟೆಂಡರ್ ಕೆಲಸವನ್ನು ಪ್ರಾರಂಭಿಸಲು ದಿನಾಂಕ:14.11.2014 ರಂದು ಸ್ಥಳವನ್ನು ವಹಿಸಿಕೊಟ್ಟ 18 ತಿಂಗಳು ಕಾಲಾವಧಿಯ ಅವಕಾಶವನ್ನು ನೀಡಿ ದಿನಾಂಕ:24.05.2016 ಅಂತ್ಯಕ್ಕೆ ಪೂರ್ಣಗೊಳಿಸುವಂತೆ ಹಾಗೂ ಪ್ರತಿ ಮಾಹೆಯಲ್ಲಿ ನಿಶ್ಚಿತ ಪ್ರಗತಿಯನ್ನು ಸಾಧಿಸಲು ಸೂಚಿಸಲಾಗಿದೆ. ಸದರಿ ಸಾಲಿನಲ್ಲಿ ಕೈಗೊಂಡಿರುವ ಪ್ರಗತಿ ವಿವರ **ಅನುಬಂಧ–(23)** ರಲ್ಲಿ ನೀಡಿದೆ. |
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 75 | **74. 2016–17ನೇ ಸಾಲಿನ ಪರಿಷ್ಕೃತ ಆಯ–ವ್ಯಯದಲ್ಲಿ ನಿಗದಿಪಡಿಸಿರುವ ಅಂದಾಜು ಮೊತ್ತ ಹಾಗೂ ವಾರ್ಷಿಕ ಲೆಕ್ಕಪತ್ರದ ವಾಸ್ತವಿಕವಾಗಿ ಅನುಮೋದನೆಗೊಂಡಿರುವ ಕಾಮಗಾರಿಯ ವೆಚ್ಚದ ವಿವರ :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಪರಿಷ್ಕೃತ ಆಯ–ವ್ಯಯದಲ್ಲಿ ನಿಗದಿಪಡಿಸಿರುವ ಹಾಗೂ ವಾರ್ಷಿಕ ಲೆಕ್ಕಪತ್ರ ಅಧಿಕೃತವಾಗಿ ಸೇರಿಸಿ ವೆಚ್ಚ ಮಾಡಿರುವುದು ಈ ರೀತಿ ಇದೆ. |

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿನ ಕಾಮಗಾರಿಯ ವಿವರ | ಪರಿಷ್ಕೃತ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅಂದಾಜು ಮೊತ್ತ | 2016–17ನೇ ವರ್ಷದ ವಾರ್ಷಿಕ ಲೆಕ್ಕಪತ್ರದಲ್ಲಿ ಅಧಿಕೃತವಾಗಿ ಮಾಡಿರುವ ವೆಚ್ಚ |
|---|---|---|---|---|
| 1 | 270 | ಪ್ರಾದೇಶಿಕ ಕೇಂದ್ರಗಳ ಅಭಿವೃದ್ಧಿ | – | – |
| 2 | 271 | ದೊಡ್ಡ ಕಾಮಗಾರಿ | 20,00,00,000 | 19,14,80,272 |
| 3 | 272 | ಸಣ್ಣ ಕಾಮಗಾರಿ | 20,00,000 | 8,14,741 |
| 4 | 273 | ಕಟ್ಟಡಗಳ ನಿರ್ವಹಣೆ | 10,00,000 | 9,86,362 |
| 5 | 315 | ಪ್ರಾದೇಶಿಕ ಕೇಂದ್ರಗಳ ನಿರ್ವಹಣೆ | 10,000 | – |
| 6 | 341 | ಹೊಸ ಪ್ರಾದೇಶಿಕ ಕೇಂದ್ರಗಳ ಕಟ್ಟಡ ನಿರ್ವಹಣಾ ವೆಚ್ಚ | 43,00,00,000 | 42,14,81,026 |
| | | **ಒಟ್ಟು** | **63,30,10,000** | **61,47,62,401** |

**List of completed spill over and ongoing work details of Engineering section for the year 2016-17**

## Major works A/C 022/271

| | | | | | | |
|---|---|---|---|---|---|---|
| | | | | | | Rs. in Lakhs |
| S. N | Name of Work | Tender Amt in lakhs | Expt up to 2015-16 | Expt 2016-17 | Ongoing New Work | Up to Date Exp |
| 1 | Construction of Academic Block at Mandakalli site | 6805-16 | 5673.20 | 618.04 | on going work | 6291.24 Bal 513.92 |
| 2 | Providing interior and other works for newly constructed convocation hall | 2082.65 | 725.70 | 1150.30 | on going work | 1876 Bal 206.65 |
| | **TOTAL** | **8887.81** | **6398.90** | **1768.34** | **-** | **8169.24 Bal 720.57** |

ಉತ್ತರ

ಯಾವುದೇ ಕ್ರಮಯಿರುವುದಿಲ್ಲ.

ವಿವರ

76 **75. ಟೆಂಡರ್ ಮೊತ್ತಕ್ಕಿಂತ ಪಾವತಿಸಿರುವ ಬಿಲ್ಲುಗಳ ಒಟ್ಟು ಮೊತ್ತದಲ್ಲಿ ಹೆಚ್ಚಾಗಿ ಪಾವತಿಸಿರುವುದು :–**

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ Major works ಲೆಕ್ಕಶೀರ್ಷಿಕೆ:022/271 ರಲ್ಲಿ construction of administration Science Block convocation hall ಕಾಮಗಾರಿ ಬಿಲ್ಲು BSR Constructions, ಬೆಂಗಳೂರುರವರಿಗೆ ಪಾವತಿಸಿದೆ. ಆದರೆ ಪಾವತಿಸಿರುವ ಕಾಮಗಾರಿ ಬಿಲ್ಲಿನಲ್ಲಿ ಟೆಂಡರ್ ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ. ಹೆಚ್ಚಾಗಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಅಂದಾಜು ಪಟ್ಟಿ ಅನುಮೋದನೆಗೊಂಡಿರುವ ಮಂಜೂರಾತಿ ಆದೇಶದ ಪ್ರತಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಕಾಮಗಾರಿ ಪೂರ್ಣಗೊಂಡ ಮುಕ್ತಾಯ ವರದಿ ಹಾಜರುಪಡಿಸಿರುವುದಿಲ್ಲ. ಹಿಂದಿನ ಸಾಲುಗಳ ಇ.ಎಂ.ಬಿ ಹಾಗೂ ಮ್ಯಾನುಯಲ್ ಎಂ.ಬಿ ಹಾಜರುಪಡಿಸದೆ ಇರುವುದರ ವಿಚಾರದಲ್ಲಿ ವಿಚಾರಣೆ ಸಂಖ್ಯೆ:139/2018–19 ದಿನಾಂಕ:07.12.2018 ರಂದು ವಿಚಾರಣೆ ನೀಡಲಾಗಿದ್ದು, ವಿವರಣೆ ನೀಡಲು ಸೂಚಿಸಿದೆ.

| | | | | |
|---|---|---|---|---|
| | | | | Rs. in Lakhs |
| Tender Amount in lakhs | Expt for the Year 2015-16 | Expt 2016-17 | Up to date Expt | Excess payment |
| 7088.22 | 7064.45 | 146.45 | 7210.09 | 121.81 |

| | |
|---|---|
| | ಹೆಚ್ಚುವರಿ ಪಾವತಿಗೆ ಸಂಬಂಧಿಸಿದಂತೆ Board of Member ಸಭೆಯ ಅನುಮೋದನೆ ಪಡೆದು ಕಟ್ಟಡ ಸಮಿತಿಯಿಂದ ಒಪ್ಪಿಗೆ ಪಡೆದು Work slip ಅನುಮೋದನೆ ಪಡೆದಿರುವ ಆದೇಶದ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಕಂಡಿಕೆಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ. |
| | ಉತ್ತರ |
| | ವಿ.ವಿ. ನಿಲಯದ ಆಡಳಿತ ಭವನ, ವಿಜ್ಞಾನ ಭವನ, ಘಟಿಕೋತ್ಸವ ಭವನ ಕಾಮಗಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರು ಕಾಮಗಾರಿಯ ಟೆಂಡರ್ ಮೊತ್ತಕ್ಕಿಂತ ಅಂದರೆ ರೂ. 7088.32 ಲಕ್ಷಗಳಿಗಿಂತ ರೂ. 7065.39 ಲಕ್ಷಗಳಿಗೆ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಕಾಮಗಾರಿಯ ಟೆಂಡರ್ ಮೊತ್ತಕ್ಕಿಂತ ರೂ. 22,92,959/– ಗಳಷ್ಟು ಉಳಿತಾಯವಾಗಿರುತ್ತದೆ. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಹುಂಡಿಯನ್ನು ಪಾವತಿಸಲಾಗಿರುವುದಿಲ್ಲ. ಈ ಸಂಬಂಧ ಮುಖ್ಯ ಅಭಿಯಂತರರವರಿಂದ ಪರಿಷ್ಕೃತಗೊಂಡಿರುವ ಅಂದಾಜು ಪ್ರತಿಯನ್ನು ಲೆಕ್ಕ ತಪಾಸಣೆಯ ಸಮಯದಲ್ಲಿ ಈಗಾಗಲೇ ನೀಡಲಾಗಿರುತ್ತದೆ. ಮತ್ತೊಮ್ಮೆ ತಾವು ಕೋರಿರುವ ದಾಖಲಾತಿಗಳನ್ನು ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗುವುದು. |
| | **ವಿವರ** |
| 77 | **<u>76. ಮ್ಯಾನುಯಲ್ ಎಂ.ಬಿ ಹಾಗೂ ಇ.ಎಂ.ಬಿ, ಸಿ.ಡಿ ದಾಸ್ತಾನು ಲೆಕ್ಕದಲ್ಲಿ ತೆಗೆದುಕೊಂಡಿರುವ ವಹಿ ಹಾಜರುಪಡಿಸದೆ ಇರುವುದು :–</u>**<br><br>2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಅಳತೆ ಪುಸ್ತಕಗಳ ದಾಸ್ತಾನು ವಹಿ ಹಾಜರುಪಡಿಸಿರುವುದಿಲ್ಲ. ಇದರಿಂದ ಚಾಲ್ತಿಯಲ್ಲಿರುವ ಎಂ.ಬಿ ಬಳಕೆಯಾಗದೇ ಖಾಲಿ ಉಳಿದಿರುವ ಎಂ.ಬಿ ಮುಕ್ತಾಯವಾಗಿರುವ ಎಂ.ಬಿ ಕಾಮಗಾರಿ ಪೂರ್ಣಗೊಂಡ ನಂತರ ಎಂ.ಬಿ ಅಳತೆ ಪೂರ್ಣ ಪ್ರಮಾಣದಲ್ಲಿ ದಾಖಲಾಗಿರುವುದಕ್ಕೆ ದೃಢೀಕರಿಸಿ, ದಾಸ್ತಾನು ವಹಿಯಲ್ಲಿ ದಾಖಲು ಮಾಡಿ ಭೌತಿಕವಾಗಿ ಪರಿಶೀಲಿಸಿ ಕಛೇರಿಯಲ್ಲಿ ಇಡಬೇಕಾಗಿದ್ದು, ಮುದ್ರಣಾಲಯದಿಂದ ಪ್ರಸಾರಾಂಗದಿಂದ ಬೇರೆ ಬೇರೆ ಇಲಾಖೆಗಳಿಂದ ಸರಬರಾಜು ಮಾಡಿರುವ/ ಪಡೆದಿರುವ ಎಂ.ಬಿ ಗಳ ವಿವರವನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ ಹಾಗೂ ಮ್ಯಾನುಯಲ್ ಎಂ.ಬಿ, ಇ.ಎಂ.ಬಿ, ಸಿ.ಡಿ ದಾಸ್ತಾನು ಲೆಕ್ಕದಲ್ಲಿ ತೆಗೆದುಕೊಳ್ಳದೆ ಇರುವುದರಿಂದ ಯಾವುದೇ ರೀತಿಯ ಕಾಮಗಾರಿಗೆ ಸಂಬಂಧಿಸಿದ ಇಲಾಖಾ ವಿಚಾರಣೆ/ ನ್ಯಾಯಲಯ ಪ್ರಕರಣ ಇತ್ಯಾದಿ ಪ್ರಕರಣಗಳಲ್ಲಿ ಅವಶ್ಯಕವಾಗಿ ಎಂ.ಬಿ ದಾಸ್ತಾನು ವಹಿ ಪ್ರಮುಖವಾಗಿರುತ್ತದೆ. ಸದರಿ ವಿಚಾರಕ್ಕೆ ಅಗತ್ಯ ಮಾಹಿತಿ ನೀಡುವಂತೆ ವಿಚಾರಣೆ ಸಂಖ್ಯೆ:80/2018–19 ದಿನಾಂಕ:10.12.2018 ರಂದು ನೀಡಲಾಗಿದ್ದರು ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಎಂ.ಬಿ ಹಾಗೂ ಇ.ಎಂ.ಬಿ ಬಳಕೆಯ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಕಾಮಗಾರಿ ಅವ್ಯವಹಾರ ವಿಚಾರ |

| | |
|---|---|
| | ಕಂಡುಬಂದಲ್ಲಿ ಸಂಬಂಧಪಟ್ಟ ವಿಭಾಗ ನೌಕರರ ಮೇಲೆ ಕ್ರಮ ಕೈಗೊಳ್ಳಲು ತಿಳಿಸುತ್ತಾ ಕಂಡಿಕೆಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ. |
| | ಉತ್ತರ |
| | ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಮುಕ್ತಾಯವಾಗಿರುವ ಎಂ.ಬಿ. ಚಾಲ್ತಿಯಲ್ಲಿರುವ ಎಂ.ಬಿ. ಹೊಸದಾಗಿ ಮುದ್ರಿತಗೊಂಡಿರುವ ಎಂ.ಬಿ. ಹಾಗೂ ಇ.ಎಂ.ಬಿ. ಗಳ ಬಗ್ಗೆ ದಾಸ್ತಾನು ಲೆಕ್ಕ ತೆಗೆದುಕೊಳ್ಳಲು ಕ್ರಮವಹಿಸಲಾಗುತ್ತಿದ್ದು, ಈ ಬಗ್ಗೆ ಮುಂದಿನ ಲೆಕ್ಕ ತಪಾಸಣೆಯ ಸಮಯದಲ್ಲಿ ನೀಡಲು ಕ್ರಮವಹಿಸಲಾಗುವುದು. ಆದುದರಿಂದ ಸದರಿ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | ವಿವರ |
| 78 | **77. ಕರ್ನಾಟಕ ವಿಶ್ವವಿದ್ಯಾನಿಲಯ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕ್‌ನಿಂದ ಕಡಿಮೆ ಬಾಡಿಗೆ ವಸೂಲಿ ಮಾಡಿರುವ ಬಗ್ಗೆ:–**<br><br>ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕಟ್ಟಡದಲ್ಲಿ 2016–17ನೇ ಸಾಲಿನಲ್ಲಿ ಎಸ್.ಬಿ.ಎಂ ಮಾನಸ ಗಂಗೋತ್ರಿ, ಮೈಸೂರು ಬ್ರ್ಯಾಂಚ್ ನಡೆಸಲು ಎಸ್.ಬಿ.ಎಂ ರವರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಬಾಡಿಗೆ ನಿಗದಿಪಡಿಸಿ ಬಾಡಿಗೆ ವಸೂಲಿ ಮಾಡಲಾಗುತ್ತಿದೆ. ಬ್ಯಾಂಕ್ ಕಟ್ಟಡಕ್ಕೆ ಮಾಸಿಕ ಬಾಡಿಗೆ ರೂ.25,000/– ದಂತೆ ಒಟ್ಟು ರೂ.3,00,000/– ವಸೂಲಿಯಾಗಬೇಕಿದ್ದು ಇದರಲ್ಲಿ 10 ತಿಂಗಳು ಮಾತ್ರ ಬಾಡಿಗೆ ವಸೂಲಿ ಮಾಡಿ ಬಾಕಿ 2 ತಿಂಗಳು ರೂ.50,000/– ವಸೂಲಿ ಮಾಡಿರುವುದಿಲ್ಲ ಈ ಕಟ್ಟಡಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, PWD ಉಪವಿಭಾಗ, ಮೈಸೂರು ರವರು ನಿಗದಿಪಡಿಸಿರುವ ದರದಂತೆ ಪ್ರತಿ ತಿಂಗಳು ರೂ.37,500/– ವಸೂಲಿ ಮಾಡಬೇಕಾಗಿರುತ್ತದೆ. ಆದರೆ ಇಲ್ಲಿ ರೂ.25,000/–ದಂತೆ ವಸೂಲಿ ಮಾಡಲಾಗುತ್ತಿದೆ ಇದರಿಂದ ರೂ.12,500/– ಪ್ರತಿ ಮಾಹೆ ಕಡಿಮೆ ವಸೂಲಾಗುತ್ತಿದೆ. 2016–17ರಲ್ಲಿ ರೂ.4,50,000/– ವಸೂಲಿಯಾಗಬೇಕಿದ್ದು, ಇದರಲ್ಲಿ ರೂ.2,50,000/– ವಸೂಲಿಯಾಗಿ ರೂ.2,00,000 ಇದುವರೆಗೂ ವಸೂಲಿ ಮಾಡಿರುವುದಿಲ್ಲ. ಹಾಗೂ ಲೋಕೋಪಯೋಗಿ ಇಲಾಖೆಯ ಆದೇಶವನ್ನು ಉಲ್ಲಂಘಿಸಿ ವಸೂಲಿ ಮಾಡದೆ ಇರುವ **ರೂ.2,00,000/–ಗಳನ್ನು ಎಸ್.ಬಿ.ಎಂ ಶಾಖೆಯಿಂದ ವಸೂಲಿ ಮಾಡಲು ಸೂಚಿಸಿದೆ.** |

| ಕ್ರ.ಸಂ | ಮಾಹೆವಾರು | ಪಿ.ಡಬ್ಲ್ಯೂಡಿ ದರ ನಿಗಧಿಪಡಿಸಿರುವುದು | ವಿ.ವಿ ನಿಗಧಿಪಡಿಸಿ ವಸೂಲಿ ಮಾಡಿರುವ ಮೊಬಲಗು |
|---|---|---|---|
| 1 | 11.04.2016 | 37,500 | 25,000 |
| 2 | 08.05.2016 | 37,500 | 25,000 |
| 3 | 01.06.2016 | 37,500 | 25,000 |
| 4 | 02.07.2016 | 37,500 | 25,000 |
| 5 | 08.08.2016 | 37,500 | 25,000 |
| 6 | 02.09.2016 | 37,500 | 25,000 |
| 7 | 05.09.2016 | 37,500 | 25,000 |
| 8 | 03.01.2017 | 37,500 | 25,000 |

| | | | |
|---|---|---|---|
| 9 | 05.02.2017 | 37,500 | 25,000 |
| 10 | 04.03.2017 | 37,500 | 25,000 |
| **ಒಟ್ಟು** | | **3,75,000** | **2,50,000** |

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬ್ಯಾಂಕ್ ಬಾಡಿಗೆ ಕಡಿಮೆ ವಸೂಲಿ ಮಾಡಿದ್ದು ವಿಚಾರಣೆ ಸಂಖ್ಯೆ:89 ದಿನಾಂಕ:14.12.2016 ವಿಚಾರಣೆಗೆ ನೀಡಲಾಗಿದ್ದು, ವಿಚಾರಣೆಯ ಅನುಪಾಲನಾ ವರದಿಯ ಸಮಂಜಸವಾದ ಕಾರಣ ವ್ಯತ್ಯಾಸದ ಮೊಬಲಗು **ರೂ.2,00,000/-ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.**

ಉತ್ತರ

ವಿ.ವಿ. ನಿಲಯದ ಆವರಣದಲ್ಲಿರುವ ಬ್ಯಾಂಕ್ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸಿರುವುದರ ಬಗ್ಗೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರವರು ಸದರಿ ಬ್ಯಾಂಕಿನ ಎ.ಜಿ.ಎಂ. ರವರೊಂದಿಗೆ ಚರ್ಚೆ ಮಾಡಿದ್ದು, ಅದರಂತೆ ದಿನಾಂಕ: 10.06.2011 ರಲ್ಲಿ ಮಾನ್ಯ ಕುಲಪತಿಯವರು ಬಾಡಿಗೆ ಮೊತ್ತವನ್ನು ರೂ. 25,000/- ಗಳಿಗೆ ನಿಗದಿಪಡಿಸಲು ಕಡತದಲ್ಲಿ ತಿಳಿಸಿರುತ್ತಾರೆ. ಅದರಂತೆ ಬಾಡಿಗೆಯನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಉತ್ತರವನ್ನು ದಿನಾಂಕ: 30.01.2019 ರಂದು ಲೆಕ್ಕ ತಪಾಸಣೆಯ ಸಮಯದಲ್ಲಿ ನೀಡಲಾಗಿರುತ್ತದೆ. ಆದ್ದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಿದೆ.

**ವಿವರ**

79 **78. 2016-17ನೇ ಸಾಲಿನ ಕ್ಯಾಂಟೀನ್ ಬಾಡಿಗೆ ಟೆಂಡರ್ ಕರೆಯದೆ ಹಾಗೂ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಆದೇಶದಂತೆ ಬಾಡಿಗೆ ವಸೂಲಿ ಮಾಡದೆ ಇರುವುದು :-**

2016-17ನೇ ಸಾಲಿನ ಕ್ಯಾಂಟೀನ್ ಕಟ್ಟಡದ ಏಪ್ರಿಲ್-2016 ಹಾಗೂ ಮೇ-2016 ವಸೂಲಿ ಮಾಡದೆ ಹಾಗೂ ಟೆಂಡರ್ ಕರೆಯದೆ ಬಾಡಿಗೆ ವಸೂಲಿ ಮಾಡುತ್ತಿರುವುದು ಹಾಗೂ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿರುವ ಮಾಸಿಕ ಬಾಡಿಗೆ ವಸೂಲಿ ಮಾಡದೆ ಕಡಿಮೆ ಬಾಡಿಗೆ ವಸೂಲಿ ಮಾಡಿರುವುದು ನಿಯಮಬಾಹಿರವಾಗಿರುತ್ತದೆ. 2016-17ನೇ ಸಾಲಿನಲ್ಲಿ ಮಾಸಿಕ ನಿಗದಿಪಡಿಸಿರುವ ದರ ಕುರಿತು Board of Member ಸಭೆಯಲ್ಲಿ ಅನುಮೋದನೆಗೊಂಡಿರುವ ಆದೇಶದ ಪ್ರತಿ ಹಾಗೂ ಕರಾರು ಪ್ರತಿಯ ಪ್ರಕಾರ ಬಾಡಿಗೆ ವಸೂಲಿ ಮಾಡಿರುವುದು ಕಂಡುಬಂದಿದೆ. ಮಾಸಿಕ ದರ ನಿಗದಿಪಡಿಸಿರುವಂತೆ ಮಾಹೆಯಾನ ರೂ.35,500/- ರಂತೆ ರೂ.35,500 x 12 = 4,20,000/- ಕ್ಯಾಂಟಿನ್ ಬಾಡಿಗೆ ಬಾಬ್ತನ್ನು ಚಂದ್ರಹಾಸ, ಗುತ್ತಿಗೆದಾರರಿಂದ ರೂ.4,26,000/-ಗಳಲ್ಲಿ ರೂ.35,500 x 9 = 3,19,500/- ವಸೂಲಿಯಾಗಿದ್ದು, ಬಾಕಿ ರೂ.1,06,500/- ಕೆಳಕಂಡಂತೆ ಬಾಕಿ ಇರುತ್ತದೆ.

| ಮಾಹೆ | ಬಾಡಿಗೆ ಮೊತ್ತ |
|---|---|
| ಡಿಸೆಂಬರ್-2015 | 35,500 |

| | |
|---|---|
| ಏಪ್ರಿಲ್–2016 | 35,500 |
| ಮೇ–2016 | 35,500 |
| **ಒಟ್ಟು** | **1,06,500** |

ಕುಲಸಚಿವರ ಪತ್ರದ ಸಂಖ್ಯೆ: KSOU /Engg/55 Vol II/12-13 ದಿ:15.06.16 ರಂದು ಅಂತಿಮ ತಿಳುವಳಿಕೆ ಪತ್ರ ನೀಡಿರುವಂತೆ ರೂ.1,06,500/–ಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡಿ ಕರಾಮುವಿ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

ಗುತ್ತಿಗೆದಾರ ಚಂದ್ರಹಾಸ್ ರವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರ ತಿಳುವಳಿಕೆ ಪತ್ರದ ಸಂಖ್ಯೆ:KSOU/Engg/55 Vol II/12-13 ದಿ:05.05.16 ರಂದು ಅಂತಿಮ ತಿಳುವಳಿಕೆ ಪತ್ರ ನೀಡಿದ ನಂತರ 1 ತಿಂಗಳು ಕ್ಯಾಂಟಿನ್ ಬಾಡಿಗೆ ವಸೂಲಿಯಾಗಿದ್ದು, 3 ತಿಂಗಳ ಬಾಡಿಗೆ ಬಾಬ್ತು 1,42,000/– – 35,500/– = 1,06,500/– ಬಾಕಿ ಇರುತ್ತದೆ. 2016–17ನೇ ಸಾಲಿನ ಕ್ಯಾಂಟೀನ್ ಬಾಡಿಗೆ ಟೆಂಡರ್ ಕರೆಯದೆ ಹಾಗೂ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಆದೇಶದಂತೆ **ರೂ.1,06,500/– ಬಾಡಿಗೆ ವಸೂಲಿ** ಮಾಡದೆ ಇರುವುದು ಕಂಡು ಬಂದಿದ್ದು, ವಸೂಲಿಸಿ ಜಮೆ ಮಾಡಿ ವಿವರ ನೀಡಲು ತಿಳಿಸಿದೆ.

ವಿಚಾರಣೆ ಸಂಖ್ಯೆ:102/18.12.18 ನೀಡಲಾಗಿದ್ದು, ದಿನಾಂಕ:11.01.2019ರಲ್ಲಿ ಸಲ್ಲಿಸಿರುವ ಅನುಪಾಲನಾ ವರದಿಯಂತೆ ಬಾಡಿಗೆ ಬಾಬ್ತು ವಸೂಲಿ ಮಾಡಿ ಜಮೆ ಮಾಡಿರುವ ವಿವರದೊಂದಿಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ.

ಉತ್ತರ

ಏಪ್ರಿಲ್–2016 ಹಾಗೂ ಮೇ–2016 ರ ಕ್ಯಾಂಟೀನ್ ಕಟ್ಟಡದ ಬಾಡಿಗೆಯನ್ನು ಬಾಡಿಗೆದಾರರು ಪಾವತಿಸಿರುತ್ತಾರೆ. ಈ ಸಂಬಂಧದ ಮಾಹಿತಿಯನ್ನು ಲೆಕ್ಕ ತಪಾಸಣೆ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಕರಾರಿನ ಅನ್ವಯ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯಂತೆ ಮತ್ತೊಂದು ಅವಧಿಗೆ ಕ್ಯಾಂಟೀನ್ ಕಟ್ಟಡದ ಬಾಡಿಗೆಯನ್ನು ಬಾಡಿಗೆದಾರರಿಗೆ ಕ್ಯಾಂಟೀನ್ ಮುಂದುವರೆಸುವಂತೆ ತಿಳಿಸಲಾಗಿದ್ದು, ಅದರಂತೆ ಬಾಡಿಗೆಯನ್ನು ಜಮಾ ಮಾಡಿರುತ್ತಾರೆ. ಆದುದರಿಂದ ಟೆಂಡರ್ ಕರೆಯಲು ಸಾಧ್ಯವಾಗಿರುವುದಿಲ್ಲ

ಕ್ಯಾಂಟೀನ್ ಕಟ್ಟಡದ ಬಾಡಿಗೆಯನ್ನು ಅಕ್ಟೋಬರ್–2015 ರಿಂದ ಏಪ್ರಿಲ್–2016 ರ ವರೆಗೆ ಜಮಾ ಮಾಡಿರುವುದರ ಬಗ್ಗೆ ಮಾಹಿತಿಯನ್ನು ಲೆಕ್ಕ ತಪಾಸಣೆಯ ಸಮಯದಲ್ಲಿ ಹಾಜರುಪಡಿಸಲಾಗಿದ್ದು, ಆದರೆ ಮೇ–2016 ರಿಂದ ಮಾರ್ಚ್–2017 ರ ವರೆಗೆ ಬಾಡಿಗೆಗೆ ಸಂಬಂಧಿಸಿದಂತೆ ಜನವರಿ–2017 ರಿಂದ ಮಾರ್ಚ್–2017 ರ (03 ಮಾಹೆಯ) ಬಾಡಿಗೆಯನ್ನು ಬಾಡಿಗೆದಾರರು ಜಮಾ ಮಾಡದೇ ಇರುವುದಕ್ಕೆ ಬಾಡಿಗೆದಾರರ ಇ.ಎಂ.ಡಿ. ಮೊತ್ತದಲ್ಲಿ 03 ಮಾಹೆಯ ಬಾಡಿಗೆಯನ್ನು ಕಟಾಯಿಸಿಕೊಂಡು ವಿ.ವಿ. ನಿಲಯದ ನಿಧಿಗೆ ಜಮಾ ಮಾಡಲು ಕ್ರಮ ವಹಿಸಲಾಗುವುದು.

| | ವಿವರ |
|---|---|
| 80 | **79. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ಥಿರ ಆಸ್ತಿ ಕಟ್ಟಡಗಳು ಚರ ಆಸ್ತಿ ವಹಿಯನ್ನು ಹಾಜರುಪಡಿಸುವ ವಿಚಾರ ಕುರಿತು :–**<br><br>ಈ ಮೇಲಿನ ವಿಷಯದಲ್ಲಿ 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳು, ವಸತಿ ಗೃಹಗಳು conference halls, ಹಾಗೂ ನೂತನವಾಗಿ ನಿರ್ಮಿಸಿರುವ ಕಟ್ಟಡಗಳ ಆಸ್ತಿಯ ವಿವರವನ್ನು ಸ್ಥಿರ ಆಸ್ತಿಯ ವಹಿಯಲ್ಲಿ ದಾಖಲು ಮಾಡಿರುವ ವಿವರ ಹಾಗೂ 2016–17ನೇ ಸಾಲಿನಲ್ಲಿ ನಡೆದಿರುವ Annual conference ಸಭೆ ಸಮಾರಂಭಗಳು ಇತ್ಯಾದಿ Board of Member ಸಭೆ ನಿಗಧಿಪಡಿಸಿರುವ ದರ, ಮಂಜೂರಾತಿ ಆದೇಶ ಇತರೆ ಸಂಬಂಧಿಸಿದ ಸ್ಥಿರ ಆಸ್ತಿ ವಹಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.<br><br>ದಿನಾಂಕ:16.01.2019 ರಂದು ವಿಚಾರಣೆ ಸಂಖ್ಯೆ:145/ದಿನಾಂಕ:09.01.2019 ನೀಡಿರುವ ವಿಚಾರಣೆಗೆ ಅನುಪಾಲನಾ ವರದಿಗೆ ಸಮಂಜಸವಲ್ಲದ ಕಾರಣ ಕಂಡಿಕೆ ಮುಂದುವರಿಸಲಾಗಿದೆ. ಸ್ಥಿರ ಹಾಗೂ ಚರ ಆಸ್ತಿಗಳ ವಹಿಯನ್ನು ನಿರ್ವಹಿಸದೆ ಇರುವುದರಿಂದ ಈ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಆಸ್ತಿಗಳು ಎಷ್ಟಿವೆ ಎಲ್ಲಲ್ಲಿ ಇವೆ. ಎಂಬ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ 2016–17ರಲ್ಲಿ ಸೃಜಿಸಿದ ಆಸ್ತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. |
| | ಉತ್ತರ |
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳು, ವಸತಿ ಗೃಹಗಳು conference halls, ಹಾಗೂ ನೂತನವಾಗಿ ನಿರ್ಮಿಸಿರುವ ಕಟ್ಟಡಗಳ ಆಸ್ತಿಯ ವಿವರವನ್ನು ಸ್ಥಿರ ಆಸ್ತಿಯ ವಹಿಯಲ್ಲಿ ದಾಖಲು ಮಾಡಿರುವ ವಿವರ ಹಾಗೂ 2016–17ನೇ ಸಾಲಿನಲ್ಲಿ ನಡೆದಿರುವ Annual conference ಸಭೆ ಸಮಾರಂಭಗಳು ಇತ್ಯಾದಿ Board of Member ಸಭೆ ನಿಗಧಿಪಡಿಸಿರುವ ದರ, ಮಂಜೂರಾತಿ ಆದೇಶ ಇತರೆ ಸಂಬಂಧಿಸಿದ ಸ್ಥಿರ ಆಸ್ತಿ ವಹಿಗಳನ್ನು ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | ವಿವರ |
| 81 | **80. 2016–17ನೇ ಸಾಲಿನಲ್ಲಿ ಪಾವತಿಸಿರುವ ಕಾಮಗಾರಿ ಬಿಲ್ಲುಗಳ ಗುತ್ತಿಗೆದಾರರ ಕರಾರು ಪತ್ರ ಇ–ಸ್ಟ್ಯಾಂಪ್ ಫೀಯನ್ನು ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪಡೆಯದೆ ಕಡಿಮೆ ಇ–ಸ್ಟ್ಯಾಂಟ್ ಫೀ ಪಡೆದಿರುವ ವಿಚಾರ ಕುರಿತು:–**<br>ಕ.ರಾ.ಮು.ವಿ 2016–17ನೇ ಸಾಲಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವ ಕಾಮಗಾರಿ ಬಿಲ್ಲುಗಳ ಟೆಂಡರ್ ಕಡತದಲ್ಲಿ ಕಂಡು ಬಂದಂತೆ ಬಿ.ಎಸ್.ಆರ್ ಬೆಂಗಳೂರು ರವರಿಗೆ ಕಾಮಗಾರಿಯನ್ನು ವಹಿಸಿಕೊಡಲಾಗಿದೆ ಹಾಗೂ ಬಿಲ್ಲುಗಳನ್ನು ಪಾವತಿ ಮಾಡಲಾಗಿದೆ. ಆದರೆ ಗುತ್ತಿಗೆದಾರರ ಕರಾರು ಒಪ್ಪಂದದ ಇ–ಸ್ಟ್ಯಾಂಟ್ ಖರೀದಿಸಿದನ್ನು ಪರಿಶೀಲಿಸಿದಾಗ ಕಾಮಗಾರಿಯ ಮೊತ್ತ (ಟೆಂಡರ್ ಮೊತ್ತ) ಕ್ಕೆ ಅನುಗುಣವಾಗಿ |

ಶೇ 0.01 ಇ–ಸ್ಟ್ಯಾಂಪ್ ಖರೀದಿ ಮಾಡದೆ ಕಡಿಮೆ ಬೆಲೆಯ ಇ–ಸ್ಟ್ಯಾಂಪ್ ಖರೀದಿಸಿರುವುದರಿಂದ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ವಿಚಾರಣಾ ಸಂಖ್ಯೆ:131 ದಿನಾಂಕ:07.01.2019 ರಂದು ವಿಚಾರಣೆ ನೀಡಲಾಗಿದ್ದು ನೀಡಿರುವ ವಿವರಣೆಯಂತೆ ಮೊಬಲಗು **ರೂ.2,84,922/– ವಸೂಲಾತಿಗೆ ಸೂಚಿಸುತ್ತಾ** ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಆಡಿಟ್ ಕಂಡಿಕೆಗೆ ಪಾಲನಾ ವರದಿ ನೀಡಲು ತಿಳಿಸುತ್ತಾ ಸರ್ಕಾರಿ ಆದೇಶ ಸಂಖ್ಯೆ: Karnataka Stamp Amendment Act-2012 ರಲ್ಲಿ ತಿಳಿಸಿರುವಂತೆ ಕ್ರಮಕೈಗೊಂಡು ಜಮಾ ಮಾಡಲು ಸೂಚಿಸಿದೆ

ವಿಚಾರಣೆ ಸಂಖ್ಯೆ:122/2018–19 ದಿನಾಂಕ:31.12.2018 ರಂದು ನೀಡಿರುವ ವಿಚಾರಣೆಗೆ ದಿನಾಂಕ:16.01.19 ಸಲ್ಲಿಸಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಮರು ಅನುಪಾಲನಾ ವರದಿ ಸಲ್ಲಿಸುವವರೆಗೆ ಮುಂದುವರಿಸಲಾಗಿದೆ.

**Stamp Duty Collection Details**

| Sl. No | Name of Work | Tender Cost | Date of Agreement | E-Stamp Collection | Actual E-Stamp Amt | Differene |
|---|---|---|---|---|---|---|
| 1 | Construction of Regional centres at Mandya, Chamaraja Nagara, Hassan, Shimoga & Davanagere BSR Infratech ltd | 63,58,04,032 | 04.03.2014 | 200 | 63,580 | 63,380 |
| 2 | Construction of KSOU Regional centre at Tumkur, Kolara, Chikkamagaluru, Bellary & Dharwad BSR Infratech ltd Bangalore 4th part bill BR No.243/ 27.04.2016 ch no.889643/47 Dt:07.06.2016 | 62,58,26,104 | 14.11.2014 | 200 | 62,582 | 62,382 |
| 3 | Providing Interior works & other works for the newly constructed convocation buliding at KSOU campus Mysore, BSR Infratech ltd Bangalore BR No.1123/ 10.08.2016 ch no.88990/904 Dt:07.09.2016 Agreement No:KSOU/ES/68/2014-15 Dt:17.10.2015 | 20,82,65,450 | 17.10.2015 | 200 | 20,826 | 20,626 |
| 4 | Construction of | 68,05,16,134 | 26.11.2012 | 200 | 68,051 | 67,851 |

| | | | | | |
|---|---|---|---|---|---|
| | Academic Block at Mandakalli Village, Mysore District BSR Infratech ltd Bangalore BR No.1124/ 10.08.2016 ch no.88990/905 Dt:07.09.2016 Agreement No:KSOU/ES/76/2012-13 Dt:26.11.2012 | | | | |
| 5 | Administration Science Hall BSR Infratech ltd | 70,88,32,274 | 25.01.2012 | 200 | 70,883 | 70,683 |
| **TOTAL** | | | | **1,000** | **2,85,922** | **2,84,922** |

ಉತ್ತರ

ಕಾಮಗಾರಿಗಳಿಗೆ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಇ–ಪೇಪರ್ ಅನ್ನು ಖರೀದಿಸಿರುವುದಲ್ಲಿನ ವ್ಯತ್ಯಾಸದ ಮೊತ್ತವನ್ನು (ರೂ.2,84,922/–) ಗುತ್ತಿಗೆದಾರರ ಹುಂಡಿಯಲ್ಲಿನ ಉಳಿಕೆ ಮೊಬಲಗಿನಲ್ಲಿ ಕಟಾಯಿಸಿಕೊಳ್ಳಲು ಕ್ರಮವಹಿಸಲಾಗುವುದು.

ವಿವರ

82 **81. ಲೆಕ್ಕಶೀರ್ಷಿಕೆ 271 ರಲ್ಲಿ ಗುತ್ತಿಗೆದಾರರಿಗೆ ಪಾವತಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ ಕಡಿಮೆ ಕಟಾಯಿಸಿರುವ ವಿಚಾರ ಕುರಿತು :–**

ಮೇಲಿನ ವಿಷಯದಲ್ಲಿ ಕ.ರಾ.ಮು.ವಿ ಇಂಜಿನಿಯರಿಂಗ್ ವಿಭಾಗದ ಕಾಮಗಾರಿ ಬಿಲ್ಲುಗಳಲ್ಲಿ ಶೇಕಡ 4 ರಂತೆ ಮಾರಾಟ ತೆರಿಗೆಯನ್ನು ಕಟಾಯಿಸಬೇಕಾಗಿದ್ದು, ಇದರಲ್ಲಿ ಶೇಕಡ 2 ರಂತೆ ಬಿಲ್ಲುಗಳಲ್ಲಿ ಕಟಾಯಿಸಿದೆ. ಕಡಿಮೆ ಕಟಾಯಿಸಿರುವ ಕುರಿತು ವಿಚಾರಣಾ ಸಂಖ್ಯೆ:141 ದಿನಾಂಕ:09.01.2019 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ಸೂಕ್ತ ಪರಿಷ್ಕೃತ ಆದೇಶ (2016–17) ಆಯುಕ್ತರು ಕಮಿಷನರ್ ಮಾರಾಟ ತೆರಿಗೆ ಇಲಾಖೆಯಿಂದ ಹಾಜರುಪಡಿಸದೆ ಇರುವುದರಿಂದ ವ್ಯತ್ಯಾಸದ ಮೊಬಲಗು **ರೂ.15,28,991/– ವಸೂಲಾತಿಗೆ ಸೂಚಿಸುತ್ತಾ** ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಆಡಿಟ್ ಕಂಡಿಕೆಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಬಿಲ್ಲಿನ ಮೊತ್ತ | ಶೇಕಡ 4 ರಂತೆ ತೆರಿಗೆ ಕಟಾಯಿಸಬೇಕಾಗಿದ್ದು | ಶೇಕಡಾ 2 ರಂತೆ ಬಿಲ್ಲಿನಲ್ಲಿ ತೆರಿಗೆ ಕಟಾಯಿಸಿರುವ ಮೊತ್ತ | ವ್ಯತ್ಯಾಸದ ಮೊಬಲಗು |
|---|---|---|---|---|---|
| 1 | Construction of Academic block Mantakalli village, Mysore | 6,18,04,418 | 24,72,177 | 12,36,089 | 12,36,088 |
| 2 | ಕ.ರಾ.ಮು.ವಿ ಆಡಳಿತ ಭವನ ವಿಜ್ಞಾನ ಭವನ, ಘಟಿಕೋತ್ಸವ | 1,46,45,120 | 5,85,805 | 2,92,902 | 2,92,903 |

| | | | | | |
|---|---|---|---|---|---|
| | ಭವನ ಕಾಮಗಾರಿ | | | | |
| **ಒಟ್ಟು** | | **7,64,49,535** | **30,57,982** | **15,28,990** | **15,28,991** |

ವಿವರದಲ್ಲಿ ತಿಳಿಸಿರುವಂತೆ ಮಾರಾಟ ತೆರಿಗೆ ಬಾಬ್ತು ವಿನಾಯಿತಿ ಹೊಂದಿದ್ದರೆ ಪರಿಷ್ಕೃತ ಮಂಜೂರಾತಿ ಆದೇಶದ ಪ್ರತಿಯನ್ನು ಹಾಜರುಪಡಿಸುವವರೆಗೆ ಮೊಬಲಗು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿ ಮಾಡುವಂತೆ ಸೂಚಿಸಿದೆ.

ಉತ್ತರ

ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಲಸದ ಪ್ರಾರಂಭದಲ್ಲೇ ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೀದರ್. ರವರು ಸದರಿ ಗುತ್ತಿಗೆದಾರರು ಪಾವತಿಗೆ ಸಲ್ಲಿಸುವ ಹುಂಡಿಗಳಲ್ಲಿ ಮಾರಾಟ ತೆರಿಗೆಯನ್ನು ಶೇ 4. ರ ಬದಲಿಗೆ ಶೇ 2 ರಂತೆ ಕಟಾಯಿಸಲು ಆದೇಶ ನೀಡಿರುತ್ತಾರೆ. ಅದರಂತೆ ಶೇ 2 ರಂತೆ ಮಾರಾಟ ತೆರಿಗೆಯನ್ನು ಕಟಾಯಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿಯನ್ನು ಲೆಕ್ಕ ಪರಿಶೋಧಕರಿಗೆ ನೀಡಲಾಗಿರುತ್ತದೆ. ಆದುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.

**ವಿವರ**

83

**82. Construction of Administrative Building convocation Buliding and Science Block at KSOU ಪಾವತಿಸಿರುವ ಕಾಮಗಾರಿ ಬಿಲ್ಲಿನಲ್ಲಿ ರಾಜಧನ ಕಡಿಮೆ ದರದಲ್ಲಿ ಕಟಾಯಿಸಿರುವುದು :–**

2016–17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ಕಾಮಗಾರಿ ಬಿಲ್ಲು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯದ ಆವರಣದಲ್ಲಿನ ನೂತನ ಆಡಳಿತ ಭವನ, ಘಟಿಕೋತ್ಸವ ಭವನ ಹಾಗೂ ವಿಜ್ಞಾನ ಭವನ ಕಟ್ಟಡ ನಿರ್ಮಾಣ ಕಾಮಗಾರಿಯ 12ನೇಯ ಬಿಲ್ಲು ಪಾವತಿಯಲ್ಲಿ ರಾಜಧನ ಕಡಿಮೆ ದರದಲ್ಲಿ ಕಟಾಯಿಸಿರುವುದು ಕಂಡುಬಂದಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಸರ್ಕಾರದ ಅಧಿಸೂಚನಾ ಪತ್ರದ ಸಂಖ್ಯೆ:ಸಿಐ81/ಎಂಎಂಎನ್ 2014, ಬೆಂಗಳೂರು ದಿನಾಂಕ:05.03.2014ರನ್ವಯ ಈ ಕೆಳಕಂಡ ದರದಲ್ಲಿ ರಾಜಧನ ವಸೂಲಿ ಮಾಡಬೇಕಾಗಿದ್ದು, ವಸೂಲಿ ಮಾಡಿರುವುದಿಲ್ಲ. ಹಾಗೂ ಹಿಂದಿನ ರಾಜಧನ ಕಟಾಯಿಸಿರುವ ಬಿಲ್ಲುಗಳ ಪಾವತಿ ವಿವರ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.22,53,507/–ಗಳನ್ನು ವಸೂಲಾತಿಗೆ ಸೂಚಿಸಿದೆ.**

ವಿಚಾರಣೆ ಸಂಖ್ಯೆ:134/2018–19 ದಿನಾಂಕ:07.01.2019 ರಂದು ವಿಚಾರಣೆ ನೀಡಲಾಗಿದ್ದು ವಿವರಣೆ ನೀಡದೆ ಎಂ.ಬಿ ಹಿಂದಿನ ಪಾವತಿಯ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ.

| S.N | Description | | to be Deduct | | Deduct | | |
|---|---|---|---|---|---|---|---|
| | | | Rate | Amount | Rate | Amount | Difference |
| 1 | Sand | 10777-47 | 103 | 1110079.41 | 55 | 592760.85 | 517318.56 |
| 2 | 20 mm Metal | 13076-15 | 108 | 1412224.20 | 75 | 980711.25 | 431512.95 |
| 3 | 40 mm Metal | 3394-74 | 108 | 366631.92 | 75 | 254605.50 | 112026.42 |
| 4 | New Earth | 72124-32 | 30 | 2163729.60 | 15 | 1081864.80 | 1081864.80 |
| 5 | Size stone | 1614-93 | 104 | 167952.72 | 35-40 | 57168.52 | 110784.20 |
| | | | | **5220617.85** | | **2967110.92** | **2253507** |

| | | |
|---|---|---|
| 1 | ವಾಸ್ತವಿಕ ಹೊಸ ದರದಂತೆ ರಾಜಧನ ಕಟಾಯಿಸಬೇಕಾದುದು | **52,20,618** |
| 2 | ಮೇಲಿನ ವಿವರದಲ್ಲಿ ತಿಳಿಸಿರುವಂತೆ ಹಿಂದಿನ ಬಿಲ್ಲುಗಳ ರಾಜಧನ ಕಟಾಯಿಸಿರುವುದು ಮೊಬಲಗು | **29,67,111** |
| 3 | ಕಡಿಮೆ ಕಟಾಯಿಸಿರುವ ವ್ಯತ್ಯಾಸದ ಮೊಬಲಗು | **22,53,507** |

ವಿಚಾರಣೆ ಸಂಖ್ಯೆ:134 ದಿನಾಂಕ:07.01.2019 ರಂದು ನೀಡಿರುವ ವಿಚಾರಣೆಗೆ ದಿನಾಂಕ:09.01.2019 ರಂದು ಸಲ್ಲಿಸಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ಸಮಂಜಸವಲ್ಲದ ಕಾರಣ ಹಾಗೂ ನೀಡಿರುವ ವರದಿಯಲ್ಲಿ ಸಹಿ ಇಲ್ಲದ ಕಾರಣ ಕಂಡಿಕೆ ಮುಂದುವರೆಸಲಾಗಿದೆ.

ಉತ್ತರ

ಗುತ್ತಿಗೆದಾರರ ಕಾಮಗಾರಿಯ ಕೆಲಸಗಳಿಗೆ ಸಂಬಂಧಿಸಿದಂತೆ ರಾಜಧನವನ್ನು (Administrative Building, Convocation Building and Science Block) 2013–14ನೇ ಸಾಲಿನ ಪರಿಷ್ಕೃತ ದರಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸದ ಮೊತ್ತವನ್ನು ಕಾಮಗಾರಿಯ ಅಂತಿಮ ಹುಂಡಿಯಲ್ಲಿ (12ನೇ ಅಂತಿಮ ಹುಂಡಿ) ಮಾತ್ರ ಕಟಾಯಿಸಬೇಕಾಗಿರುತ್ತದೆ. ಈ ಸಂಬಂಧ ಅಂತಿಮ ಹುಂಡಿಯಲ್ಲಿನ ವ್ಯತ್ಯಾಸದ ಮೊತ್ತವು ರೂ. 22,53,507/– ಗಳಷ್ಟು ಆಗಿರದೇ ವ್ಯತ್ಯಾಸದ ಮೊತ್ತವು ರೂ. 36,320/– ಗಳಷ್ಟಾಗಿದ್ದು, ಈ ವ್ಯತ್ಯಾಸದ ಮೊತ್ತವನ್ನು ಗುತ್ತಿಗೆದಾರರಿಂದ ಕಟಾಯಿಸಿಕೊಳ್ಳಲು ಕ್ರಮವಹಿಸಲಾಗುವುದು.

**ವಿವರ**

84 **83. 2016–17ನೇ ಸಾಲಿನಲ್ಲಿ ಪ್ರಮುಖವಾಗಿ ನಿರ್ವಹಿಸದೆ ಇರುವ ವಹಿಗಳ ಕುರಿತು :–**

ಕ.ರಾ.ಮು.ವಿ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಮುಖವಾದ ಕಾಮಗಾರಿಗೆ ಸಂಬಂಧಿಸಿದಂತೆ ವಹಿಗಳನ್ನು ನಿರ್ವಹಿಸಿರುವುದಿಲ್ಲ. ಇದು PWD Code ನಿಯಮದ ವಿರುದ್ಧವಾಗಿರುತ್ತದೆ. ಈ ಬಗ್ಗೆ ಕ್ರಮಕೈಗೊಂಡು ಈ ಕೆಳಕಂಡ ವಿವರದಂತೆ ವಹಿಗಳನ್ನು ನಿರ್ವಹಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

1) ವಾರ್ಷಿಕ ಅಳತೆ ಪುಸ್ತಕ ದಾಸ್ತಾನು ಮತ್ತು ಅರ್ಧವಾರ್ಷಿಕ ವಹಿ

2) ಅಂದಾಜು ಪಟ್ಟಿ ಮಂಜೂರಾತಿ ವಹಿ (ಬಿ.ಆರ್ ರಿಜಿಸ್ಟರ್)

3) ಆಡಿಟ್ ಆಕ್ಷೇಪಣೆ ವಹಿ

4) ಅಳತೆ ಪುಸ್ತಕದ ದಾಸ್ತಾನು ವಹಿ

5) ಅನುಪಯುಕ್ತ ವಸ್ತು ಮತ್ತು ಸಾಮಗ್ರಿಗಳ ವಿಲೇವಾರಿ ವಹಿ

6) ಕ್ರಿಯಾ ಯೋಜನೆ

7) ಕರಾರು ವಹಿ (ತುಂಡು ಗುತ್ತಿಗೆ ಮತ್ತು ಟೆಂಡರ್ ಕಾಮಗಾರಿಗಳಿಗೆ ವಿವರಗಳನ್ನು ಪ್ರತ್ಯೇಕವಾಗಿ

| | |
|---|---|
| | ನಿರ್ವಹಿಸುವುದು)<br>8) Major and minor work register<br>9) Work Slip approval & EIRL ರಿಜಿಸ್ಟರ್<br>10) ವಾರ್ಷಿಕ ದಾಸ್ತಾನು ಮತ್ತು ಅರ್ಧವಾರ್ಷಿಕ ದಾಸ್ತಾನು ವಹಿ<br>11) ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿ<br>12) ಅಳತೆ ಪುಸ್ತಕ (MB) ವಹಿ<br>13) EMD/ ಭದ್ರತಾ ಠೇವಣಿ ವಹಿ ಹಾಗೂ ಇತರೆ.<br>ಮೇಲಿನ ವಿವರದಂತೆ ವಿಚಾರಣಾ ಸಂಖ್ಯೆ:133 ದಿನಾಂಕ:07.01.2019 ರಲ್ಲಿ ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಹಾಗೂ ವಹಿಗಳನ್ನು ಹಾಜರುಪಡಿಸದ ಕಾರಣ PWD Code ನಲ್ಲಿ ತಿಳಿಸಿರುವಂತೆ ಕ್ರಮಕೈಗೊಳ್ಳಲು ಸೂಚಿಸಿದೆ. |
| | ಉತ್ತರ |
| | ಕಾಮಗಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಪ್ರಮುಖ ವಹಿಗಳನ್ನು ಲೆಕ್ಕ ತಪಾಸಣೆಯಲ್ಲಿ ನೀಡಲಾಗಿದ್ದು, ಇನ್ನುಳಿದಂತೆ ಕೆಲವು ವಹಿಗಳನ್ನು ಲೆಕ್ಕಪರಿಶೋಧಕರು ಸೂಚಿಸಿರುವಂತೆ ನಿರ್ವಹಿಸಲು ಕ್ರಮವಹಿಸಲಾಗುವುದು. |
| | **ವಿವರ** |
| 85 | **84. 2016-17ನೇ ಸಾಲಿನಲ್ಲಿ ಪೀಠೋಪಕರಣ ಖರೀದಿಸಿರುವ ಬಿಲ್ಲುಗಳಲ್ಲಿನ ಸಾಮಾಗ್ರಿಗಳನ್ನು ವಾರ್ಷಿಕ ದಾಸ್ತಾನು ಭೌತಿಕ ತಪಾಸಣೆಯ ವರದಿಯಲ್ಲಿ ಸೇರಿಸದೆ ಹಾಗೂ ಎಂ.ಬಿ ಯಲ್ಲಿ ದಾಖಲು ಮಾಡದೆ ಇರುವುದು :-**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಪೀಠೋಪಕರಣ, ವಾಟರ್ ಪ್ಯೂರಿಫಯರ್, ಸಿ.ಸಿ ಕ್ಯಾಮೆರಾ, ಯು.ಪಿ.ಎಸ್ ಸೆಟ್, ವಿದ್ಯುತ್ ಉಪಕರಣ, ವಿದ್ಯುತ್ ಜನರೇಟರ್, ನಾಮಫಲಕ ಟ್ಯೂಬ್‌ಲೈಟ್ ಇತ್ಯಾದಿಗಳನ್ನು ಖರೀದಿಸಲಾಗಿದೆ. ಲೆಕ್ಕಶೀರ್ಷಿಕೆ 273 ರಲ್ಲಿ ರೂ.9,86,362/- ವೆಚ್ಚ ಮಾಡಲಾಗಿ ವಾರ್ಷಿಕ ಲೆಕ್ಕಪತ್ರದಲ್ಲಿ ಅನುಮೋದನೆಗೊಂಡಿರುವ ಸರಬರಾಜು ಬಿಲ್ಲುಗಳನ್ನು ಡಿ.ಸಿ ಬಿಲ್ ಲೆಕ್ಕಶೀರ್ಷಿಕೆ 008-069/217 ರಲ್ಲಿ ಪಾವತಿಸಲಾಗಿದೆ. ಆದರೆ ಬಿಲ್ಲುಗಳ ವಿವರವನ್ನು ಎಂ.ಬಿ ಯಲ್ಲಿ ದಾಖಲು ಮಾಡಿರುವುದಿಲ್ಲ. ಖರೀದಿಸಿರುವ ಸಾಮಾಗ್ರಿಗಳ ದಾಸ್ತಾನು ಲೆಕ್ಕದಲ್ಲಿ ಸಮರ್ಪಕವಾಗಿ ವಿತರಣೆ ತೋರಿಸಿಲ್ಲ ಇದರಿಂದ ದಾಸ್ತಾನು ವಹಿಯಲ್ಲಿ ಯಾರಿಗೆ ನೀಡಿದೆ, ಎಷ್ಟು ಪ್ರಮಾಣ ಬಾಕಿ ಎಷ್ಟಿದೆ ಎಂಬುದನ್ನು ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಆಡಳಿತ ವಿಭಾಗದಿಂದಾಗಲೀ ಅಥವಾ ಹಣಕಾಸು ವಿಭಾಗದಿಂದಾಗಲೀ ವಾರ್ಷಿಕ ದಾಸ್ತಾನು ಲೆಕ್ಕದ ಭೌತಿಕ ತಪಾಸಣೆ ಕೈಗೊಂಡಿರುವ ವರದಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದ ದಾಸ್ತಾನು ಭೌತಿಕವಾಗಿ ಬಾಕಿ ಉಳಿದಿರುವ ಉಪಕರಣ ಪೀಠೋಪಕರಣ ಸಾಮಾಗ್ರಿಗಳ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಕಂಡಿಕೆಗೆ ಅನುಪಾಲನಾ ವರದಿ ನೀಡುವ ತನಕ ಮೊಬಲಗು **ರೂ.9,86,362/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು ಅನುಬಂಧ **ಅನುಬಂಧ (24)ರಲ್ಲಿ** |

| | |
|---|---|
| | ನೀಡಿದೆ. |
| | ಉತ್ತರ |
| | ನಿಯಮಾನುಸಾರ ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ಅನುಮೋದನೆಯನ್ನು ಪಡೆದು ಕೆಲಸ ನಿರ್ವಹಿಸಲಾಗಿರುತ್ತದೆ. ಹಾಗೂ ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ. ಈ ಸಂಬಂಧ ಆಡಿಟ್ ತಪಾಸಣೆಯ ಸಮಯದಲ್ಲಿ ಕಡತಗಳನ್ನು ಲೆಕ್ಕ ತಪಾಸಣೆಗೆ ನೀಡಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 86 | **<u>85. ಇಂಜಿನಿಯರಿಂಗ್ ವಿಭಾಗ ಲೆಕ್ಕ ಶೀರ್ಷಿಕೆ 273 ರಲ್ಲಿ ಪಾವತಿಸಿರುವ ಸಾದಿಲ್ವಾರು ಬಿಲ್ಲು ಆದಾಯ ತೆರಿಗೆ ಕಟಾಯಿಸದೆ ಇರುವುದು :–</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಸಾದಿಲ್ವಾರು ಬಿಲ್ಲುಗಳಲ್ಲಿ ಶೇ. 2 ರಂತೆ ಆದಾಯತೆರಿಗೆ ಕಟಾಯಿಸಬೇಕಾಗಿದ್ದು, ಆದಾಯ ತೆರಿಗೆ **ರೂ.5,882/– + ರೂ.3,860 = ಒಟ್ಟು ರೂ.9,742/–** ಗಳನ್ನು ಕಟಾಯಿಸದೆ ಲೆಕ್ಕಶೀರ್ಷಿಕೆ ಜಮೆ ಮಾಡದೆ ಇರುವುದರಿಂದ ಮೊಬಲಗು ವಸೂಲಾತಿಗೆ ಸೂಚಿಸಿದೆ. |

| ಕ್ರ.ಸಂ | ವಿವರ | ಬಿಲ್ಲಿನ ಮೊತ್ತ | ಶೇಕಡಾ 2 ರಂತೆ ಆದಾಯತೆರಿಗೆ |
|---|---|---|---|
| 1 | ಪರೀಕ್ಷ ಭವನಕ್ಕೆ ವರ್ಕಿಂಗ್ ಟೇಬಲ್‌ಗಳನ್ನು ಸರಬರಾಜು ಮಾಡಿದ ಬಿಲ್ಲು:492/ ದಿ:19.05.2016 ದಾಸ್ತಾನು ವಿತರಣೆಯಲ್ಲಿ ಸಹಿ ಇರುವುದಿಲ್ಲ. | 78,547 | 1,571 |
| 2 | ಮೇ। ಪ್ರಣವ್ ಎಂಟರ್ ಪ್ರೈಸಸ್ ಮೈಸೂರು ವಾಟರ್ ಪ್ಯೂರಿಫಿಕೇಷನ್ | 96,500 | 1,930<br>ST 3,860 |
| 3 | ಶ್ರೀ ಶಂಕರ್ ಮೇ॥ ಚಿನ್ನು ಲೆಟರ್ ವರ್ಕ್ಸ್ ಮೈಸೂರು ನಾಮಫಲಕದ ಬಿಲ್ಲು ಪಾವತಿ | 26,000 | 520 |
| 4 | M/S॥ Hyflex Technology ಮೈಸೂರು 069/217 ಕುಡಿಯುವ ನೀರಿನ ಯಂತ್ರ ಸರಬರಾಜು ಮಾಡಿ ಅಳವಡಿಸಿರುವುದು. | 52,670 | 1,053 |
| 5 | ಮೇ॥ ಕೆನರಾ ಟೆಲಿ ಕಮ್ಯೂನಿಕೇಷನ್ ಸಿ.ಸಿ ಕ್ಯಾಮೆರಾಗಳನ್ನು ಸ್ಥಳಾಂತರ ಅಳವಡಿಸಿರುವುದು. | 40,400 | 808 |
| **ಒಟ್ಟು** | | **2,94,117** | **9,742** |

ವಿವರದಲ್ಲಿ ತಿಳಿಸಿರುವಂತೆ ಮಾರಾಟ ತೆರಿಗೆ ರೂ.3,860/– ಹಾಗೂ ಆದಾಯ ತೆರಿಗೆ ರೂ.5,882/– ಆಯಾಯ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಆಡಿಟ್ ಕಂಡಿಕೆಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ.

| | |
|---|---|
| | ಉತ್ತರ |
| | ಕ್ರಮವಹಿಸಲಾಗುವುದು. |

| | ವಿವರ |
|---|---|
| 87 | **86. ಟೆಂಡರ್ ಕರೆಯದೇ/ನಿಗಧಿತ ನಮೂನೆಯಲ್ಲಿ ಕೊಟೇಷನ್ ಪಡೆಯದೆ ಇರುವುದು :–** |

2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಬಿಲ್ಲುಗಳನ್ನು ಪರಿಶೀಲಿಸಿದಾಗ ಒಂದು ಸಂಸ್ಥೆಯಿಂದ ಬಿಡಿ–ಬಿಡಿ ಬಿಲ್ಲುಗಳಲ್ಲಿ ಟೆಂಡರ್ ಕರೆಯದೇ ದೋಷಪೂರಿತ ಕೊಟೇಷನ್ ಪಡೆದು ಸಾದಿಲ್ವಾರು ಬಿಲ್ಲುಗಳನ್ನು ನಿಯಮಬಾಹಿರವಾಗಿ ಪಾವತಿಸಿದೆ ಹಾಗೂ ಬಿಲ್ಲಿನ ವಿವರವನ್ನು ಎಂ.ಬಿ ಯಲ್ಲಿ ದಾಖಲು ಮಾಡದೆ ಪಾವತಿಸಿದೆ ಬಿಲ್ಲುಗಳಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಿ ಮಾಡಿರುವ ಯಾವುದೇ ಬಿಲ್ಲು 10,000 ಕ್ಕಿಂತ ಮೇಲ್ಪಟ್ಟಿದ್ದರೆ ಅದನ್ನು ಎಂ.ಬಿ ಯಲ್ಲಿ ದಾಖಲು ಮಾಡಬೇಕಾಗಿರುತ್ತದೆ. ಹಾಗೂ ಇಂಜಿನಿಯರ್‌ರವರು ಬಿಲ್ಲಿನಲ್ಲಿ ದೃಢೀಕರಿಸಿರುವುದರಿಂದ ಉಪಯೋಗದ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಈ ವಿಚಾರದಲ್ಲಿ ವಿಚಾರಣೆ ಸಂಖ್ಯೆ:116/2018–19/ದಿನಾಂಕ:24.12.2018ನ್ನು ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ವಿವರಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.2,21,637/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಕೆನರಾ ಟೆಲಿ ಕಮ್ಯೂನಿಕೇಷನ್, ಮೈಸೂರು**

| ಕ್ರ.ಸಂ | ಬಿಲ್ ಸಂಖ್ಯೆ/ ದಿನಾಂಕ | ಮೊಬಲಗು | ವಿವರ |
|---|---|---|---|
| 1 | 4145/ 15.07.2016 | 35,397 | ಮಹಿಳಾ ವಿದ್ಯಾರ್ಥಿನಿಲಯ ಮತ್ತು ಗ್ರಂಥಾಲಯ ಕಟ್ಟಡಗಳ ಸುತ್ತಲು ಸೋಲಾರ್ ದಾರಿ ದೀಪಗಳನ್ನು ರಿಪೇರಿ ಮಾಡುವ ಕೆಲಸವನ್ನು ದಾಖಲು ಮಾಡಿಲ್ಲ. |
| 2 | 4217/ 18.10.2016 | 87,000 | ಯು.ಪಿ.ಎಸ್ ಅಳವಡಿಸುವ ಕೆಲಸ. |
| 3 | 4266/ 22.12.2016 | 72,875 | ಸಿ.ಸಿ ಕ್ಯಾಮೆರಾ ಅಳವಡಿಸುವುದು |
| 4 | 4300/ 07.02.2017 | 26,365 | ಎಂ.ಬಿ ಹಾಜರುಪಡಿಸಿಲ್ಲ ಆಂತರೀಕ ದೂರವಾಣಿ ಸಂಪರ್ಕ ಸಲ್ಲಿಸುವುದು ಹಣ ಸಂದಾಯ ರಶೀತಿ ಇಲ್ಲ. |
| ಒಟ್ಟು | | 2,21,637 | |

ಕೊಟೇಷನ್ ಪರಿಶೀಲಿಸಿದಾಗ ಸರಬರಾಜುದಾರರ ಮುದ್ರಿತ ಸಂಸ್ಥೆಯ ಲೆಟರ್‌ಹೆಡ್ ಮೇಲೆ ಕೊಟೇಷನ್ ಪಡೆಯದೇ ಕ.ರಾ.ಮು.ವಿ ಬೆರಳಚ್ಚು ಪ್ರತಿಯ ಮೇಲೆ ಬಿಲ್ಲು ಪಾಸ್ ಮಾಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ವಿವರಣೆ ನೀಡುವ ತನಕ ಹಾಗೂ ದೋಷಪೂರಿತ ಕೊಟೇಷನ್ ಪಡೆದಿರುವ ವಿಚಾರದಲ್ಲಿ ವಿವರಣೆ ನೀಡುವ ತನಕ ಮೊಬಲಗು ಆಕ್ಷೇಪಣೆಯಲ್ಲಿಡಲಾಗಿದೆ.

ಉತ್ತರ

ಸದರಿ ಕೆಲಸಗಳನ್ನು ಒಟ್ಟಾರೆಯಾಗಿ ನಿರ್ವಹಿಸದೇ ಸಮಯ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಆಯಾಯ ಕಾಲಕ್ಕೆ ತಕ್ಕಂತೆ ಕೆಲಸದ ತುರ್ತು ಅವಶ್ಯಕತೆಯನ್ನು ಪರಿಗಣಿಸಿದ ನಂತರ ಕಡತದಲ್ಲಿ ಮಾನ್ಯ ಕುಲಪತಿಯವರಿಂದ ಅನುಮೋದನೆ ಪಡೆದು, ಸದರಿ ಕೆಲಸಗಳು 1.00 ಲಕ್ಷದ ಮಿತಿಯೊಳಗಿರುವುದರಿಂದ ನಿಯಮಾನುಸಾರ ದರಪಟ್ಟಿ ಮೂಲಕ ಕೆಲಸವನ್ನು ನಿರ್ವಹಿಸಲು ಕ್ರಮವಹಿಸಲಾಗಿರುತ್ತದೆ. ಸದರಿ ಕೆಲಸಗಳನ್ನು ನಿರ್ವಹಿಸಿರುವುದರ ಬಗ್ಗೆ ಅಳತೆ ಪುಸ್ತಕ / ದಾಸ್ತಾನು ವಹಿಯಲ್ಲಿ ನಮೂದಿಸಲಾಗಿರುತ್ತದೆ. ಈಗಾಗಲೇ ಲೆಕ್ಕ ತಪಾಸಣೆಗೆ ಹಾಜರು ಪಡಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ.

| | ವಿವರ |
|---|---|
| 88 | **<u>87. Construction of Academic Block at Mandakalli site ಮೈಸೂರು ಕಾಮಗಾರಿ ನಿಗಧಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ಪ್ರಸ್ತಾವನೆ ಅನುಮೋದನೆಯಾಗದೇ ದಂಡ ವಸೂಲಿ ಮಾಡದೆ ಇರುವುದು :-</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಇಂಜಿನಿಯರ್ ವಿಭಾಗದ 2016-17ನೇ ಸಾಲಿನ ಲೆಕ್ಕಪರಿಶೋಧನೆ ಅವಧಿಯಲ್ಲಿ ಹಾಜರುಪಡಿಸಿರುವ ಲೆಕ್ಕಶೀರ್ಷಿಕೆ 022/271 ರಲ್ಲಿನ ಕಾಮಗಾರಿ ಬಿಲ್ಲಿನ ಬಿ.ಆರ್ ಸಂಖ್ಯೆ:1124 ದಿನಾಂಕ:10.08.2016 ರಂದು M/S BSR Bangalore ರವರಿಗೆ ರೂ.61,80,448/- ಪಾವತಿಸಿದೆ ಆದರೆ ಕಾಮಗಾರಿ ಬಿಲ್ಲಿನಲ್ಲಿ ವಿಳಂಬವಾಗಿರುವ ಕಾಲ ಅವಧಿಗೆ ದಂಡ ವಸೂಲಿ ಮಾಡದೆ ದಂಡ ಪ್ರಸ್ತಾವನೆ ಅನುಮೋದನೆ ಇಲ್ಲದೆ ಬಿಲ್ಲನ್ನು ಅಂಗೀಕರಿಸಲಾಗಿದೆ. ಅಲ್ಲದೆ ಇ.ಐ.ಆರ್.ಎಲ್ Workslip ಅನುಮೋದನೆಗೊಂಡಿರುವ ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ. ಇವುಗಳ ಮಂಜೂರಾತಿ ಆದೇಶ ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:130/2018-19 ದಿನಾಂಕ:07.01.2019 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಐಟಂವಾರು ಇ.ಐ.ಆರ್.ಎಲ್ ಅನುಮೋದನೆಗೊಂಡಿರುವ ಕಡತ/ಆದೇಶ ಹಾಜರುಪಡಿಸದೆ ಇರುವುದರಿಂದ ಇ.ಐ.ಆರ್.ಎಲ್ ಬಾಬ್ತು ಪಾವತಿಸಿರುವ ಮೊಬಲಗು **ರೂ.33,28,544/- ಆಕ್ಷೇಪಣೆಯಲ್ಲಿಡಲಾಗಿದೆ.** |

| ಕ್ರ.ಸಂ | ಐಟಂವಾರು ಸಂಖ್ಯೆ | ಪರಿಮಾಣ ದರ | ಮೊಬಲಗು |
|---|---|---|---|
| 1 | 12 | 172.42 x 235.62 | 1075145.60 |
| 2 | 13 | 1846.36 x 320.32 | 591426.00 |
| 3 | 14 | 188.26 x 8828.11 | 1661973.00 |
| ಒಟ್ಟು | | | **3328544** |

| | ಉತ್ತರ |
|---|---|
| | ವಿ.ವಿ. ನಿಲಯಕ್ಕೆ ಸೇರಿದ ಮಂಡಕಳ್ಳಿ ಜಾಗದಲ್ಲಿ ಶೈಕ್ಷಣಿಕ ಭವನ ಕಟ್ಟಡ ನಿರ್ಮಾಣ ಕಾಮಗಾರಿಯ ಕೆಲಸಕ್ಕೆ ಸಂಬಂಧಿಸಿದಂತೆ, ಸದರಿ ಕಾಮಗಾರಿಯು AIRPORT AUTHORITY OF INDIA ರವರಿಂದ NOC ಯನ್ನು ಪಡೆಯುವವರೆಗೆ ಹಾಗೂ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಸ್ಥಗಿತಗೊಳಿಸಲಾಗಿದ್ದು, ನಂತರ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗಿರುತ್ತದೆ. ಈ ಸಂಬಂಧ ವಿಳಂಬದ ಅವಧಿಗೆ ದಿನಾಂಕ : 07.09.2018 ರಂದು ಜರುಗಿದ 24ನೇ ಕಟ್ಟಡ ಸಮಿತಿ ಸಭೆ ಹಾಗೂ ದಿನಾಂಕ : 07.09.2018 ರಂದು ಜರುಗಿದ 151ನೇ BOM ಸಭೆಯಲ್ಲಿ ಗುತ್ತಿಗೆದಾರರಿಗೆ ಕಾಲ ವಿಸ್ತರಣೆಯನ್ನು ಮಾಡಲಾಗಿರುತ್ತದೆ EIRL ಹಾಗೂ WORKSLIP ಕೆಲಸಗಳನ್ನು ನಿರ್ವಹಿಸಿರುವುದರ ಸಂಬಂಧ ದಿನಾಂಕ : 05.10.2015 ರ 20ನೇ ಕಟ್ಟಡ ಸಮಿತಿ ಸಭೆಯಲ್ಲಿ ಹಾಗೂ 136ನೇ BOM (ದಿನಾಂಕ:05.10.15) ಯಲ್ಲಿ ಅನುಮೋದನೆಯಾಗಿರುತ್ತದೆ. ಅದರಂತೆ EIRL |

| | |
|---|---|
| | ಹಾಗೂ WORKSLIP ಕೆಲಸ ನಿರ್ವಹಿಸಲಾಗಿರುತ್ತದೆ. ಪ್ರತಿಗಳನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 89 | **<u>88. Providing Interior works and others for newly constructed convocation building at KSOU ವಿಳಂಭಿತ ಅವಧಿಯ ದಂಡ ವಸೂಲಿ ಮಾಡದೆ ಇರುವುದು :-</u>**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಕಾಮಗಾರಿ ಬಿಲ್ಲು ರೂ.456,55,545/- ಬಿ.ಎಸ್.ಆರ್ ಬೆಂಗಳೂರು ರವರಿಗೆ ಪಾವತಿಸಿದೆ ಆದೇಶ ಸಂಖ್ಯೆ:ಕೆ.ಎಸ್.ಓ.ಯು/ಇಂ.ಶಾ/68/2014-15 ದಿನಾಂಕ:28.10.2016 ರಂದು ಓಚರ್ಸ್ ನಂ.92 ಬಿ.ಆರ್ ಸಂಖ್ಯೆ:2068 ದಿನಾಂಕ:24.01.2017 ರಂದು ಬಿಲ್ಲು ಸಲ್ಲಿಸಿದ ದಿನಾಂಕದಂದು ಲೆಕ್ಕಶೀರ್ಷಿಕೆ 271 ರಲ್ಲಿ ಕಾಮಗಾರಿ Division statement ಪ್ರಕಾರ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಾಮಗಾರಿ ಬಿಲ್ಲಿಗೆ ವಾಸ್ತವಿಕವಾಗಿ ಪಾವತಿಸಿರುವ ಮೊತ್ತ ರೂ.4,56,55,545/- ಹಾಗೂ Abstract work copy ಪ್ರಕಾರ ರೂ.5,64,92,153/- ಕಂಡುಬಂದಿರುತ್ತದೆ. ಒಟ್ಟು ವ್ಯತ್ಯಾಸ ರೂ.1,08,36,608/-ಗಳಾಗಿರುತ್ತದೆ. ವ್ಯತ್ಯಾಸದ ಮೊತ್ತ ಬಿಲ್ಲಿನಲ್ಲಿ ಮಾತ್ರ ಸೇರಿದ್ದು, ಈ ವ್ಯತ್ಯಾಸದ ಮೊತ್ತವು ಪಾವತಿಯಾಗಿರುವುದಿಲ್ಲ. ಪಾವತಿಸಿರುವ ಬಿಲ್ಲಿನ ಐಟಂಗಳು ಎಂ.ಬಿಯಲ್ಲಿ ದಾಖಲು ಮಾಡಿರುವ ಪರಿಮಾಣ, ದರ, ಮೊಬಲಗು ಮತ್ತು ಮೂಲ ಅಂದಾಜು ಪಟ್ಟಿ ಅನುಮೋದನೆಗೊಂಡಿರುವ ಐಟಂವಾರು ಸಮನ್ವಯಗೊಳಿಸಿ ವ್ಯತ್ಯಾಸದ ಬಗ್ಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ. ಕಾರ್ಯ ಆದೇಶದ (Work Order)ಪ್ರಕಾರ 12 ತಿಂಗಳಲ್ಲಿ ಪೂರ್ಣಗೊಳಿಸಬೇಕಾಗಿದ್ದು, ಅಂದರೆ ದಿನಾಂಕ:17.10.2015 ರಿಂದ 16.10.2016 ರವರೆಗೆ ಕಾಮಗಾರಿ ಪೂರ್ಣಗೊಳಿಸಬೇಕಾಗಿದ್ದು ದಿನಾಂಕ:17.10.2016 ರಿಂದ ಬಿಲ್ಲು ಸಲ್ಲಿಸಿರುವ ದಿನಾಂಕ:24.01.2017 ಕ್ಕೆ 102 ದಿನಗಳು ವಿಳಂಬವಾಗಿರುತ್ತದೆ. KW 4 ನಿಯಮದಡಿ Condition of contract A General clause-41 ರ ಪ್ರಕಾರ ಹಾಗೂ KW-65 ರ clause 2(d) ರ ಪ್ರಕಾರ ವಿಳಂಬ ಪ್ರಗತಿಗೆ ದಂಡವನ್ನು ವಿಧಿಸಬೇಕಾಗಿದ್ದು, ಹಾಗೂ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದೇ ಕುಂಠಿತ ಪ್ರಗತಿಯಾಗಿರುವುದರಿಂದ ವಿಳಂಬ ಅವಧಿಗೆ **ಪಾವತಿಸಿದ ಮೊಬಲಗಿನ ಶೇ 1 % ರಷ್ಟು ಅಂದರೆ ಮೊಬಲಗು ರೂ.4,56,555/- ದಂಡವನ್ನು ವಸೂಲಾತಿಗೆ ಸೂಚಿಸಿದೆ.** (ವಿಚಾರಣೆ ಸಂಖ್ಯೆ:150/2018-19 ದಿನಾಂಕ:17.01.2019)<br>**<u>ಕಾಮಗಾರಿ ಬಿಲ್ಲುಗಳಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.</u>**<br>1) ಐಟಂವಾರು ಸಿ.ಎಫ್.ಸಿ ದೃಢೀಕರಿಸಿ ಸಹಿ ಮಾಡಿರುವುದಿಲ್ಲ.<br>2) Third party Inspection report ಬಿಲ್ಲಿನಲ್ಲಿ ಲಭ್ಯವಿರುವುದಿಲ್ಲ. |

| | |
|---|---|
| | 3) ಗುಣ ನಿಯಂತ್ರಣ ವಿಭಾಗದ ಮೂಲ ದೃಢೀಕರಣ ಪತ್ರ ಹಾಜರುಪಡಿಸಿರುವುದಿಲ್ಲ.<br>4) ಕಾಮಗಾರಿ ಅಳತೆಯನ್ನು ಅಂದಾಜುಪಟ್ಟಿ, ಎಂ.ಬಿ ಯಲ್ಲಿ ತಾಂತ್ರಿಕ ಪರಿಶೀಲನೆ ಮಾಡಿರುವುದಿಲ್ಲ.<br>5) ಸಿ.ಸಿ ಕ್ಯಾಮೆರಾ ಅಳವಡಿಸಿರುವ ದಾಸ್ತಾನು ಲೆಕ್ಕದ ವಿವರ ಹಾಜರುಪಡಿಸಿಲ್ಲ.<br>6) ಕೆ.ಇ.ಬಿ ಅಂದಾಜು ಮೊತ್ತ ತಯಾರಿಸಿ, ಕೆ.ಇ.ಬಿ ಇಲಾಖಾವತಿಯಿಂದ ಮೇಲು ಸಹಿ ಪಡೆದು ಹಾಜರುಪಡಿಸಿರುವುದಿಲ್ಲ.<br>7) S.A.Shivkumar AE (Electrical) ರವರಿಗೆ ಎಂ.ಬಿ, ಅಂದಾಜುಪಟ್ಟಿ, ಕಾಮಗಾರಿಗಳ ಐಟಂವಾರು ಸಹಿ ಮಾಡಿರುವುದಕ್ಕೆ ಕುಲಸಚಿವರ ಪ್ರತ್ಯೇಕ ಅಧಿಕಾರ ಹಂಚಿಕೆ ಮಾಡಿರುವ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ. ಅಂದಾಜುಪಟ್ಟಿಯಲ್ಲಿ AEE, EE ಸಹಿ ಮಾಡಬೇಕಾಗಿದ್ದು AE (Electrical Engineer ಸಹಿ ಮಾಡಿರುವುದು ಕಂಡು ಬಂದಿರುತ್ತದೆ. |
| | ಉತ್ತರ |
| | ವಿ.ವಿ. ನಿಲಯದ ಘಟಿಕೋತ್ಸವ ಭವನ ಕಟ್ಟಡದ ಒಳಾಂಗಣ ವಿನ್ಯಾಸ ಮತ್ತು ಇತರೆ ಕೆಲಸಗಳ ಮೂರನೇ ಹುಂಡಿಯನ್ನು ರೂ. 4,56,55,545/– ಗಳ ಮೊತ್ತಕ್ಕೆ ಐಟಂವಾರು ಸಿದ್ಧಪಡಿಸಲಾಗಿತ್ತು. ಸದರಿ ಹುಂಡಿಯನ್ನು ಸಿದ್ಧಪಡಿಸುವಾಗ ಈ ಕೆಲಸಕ್ಕೆ ಸಂಬಂಧಿಸಿದಂತೆ ಮೂರನೇ ಹುಂಡಿಯ ತನಕ ಕೆಲವು ಐಟಂಗಳಲ್ಲಿ ಹೆಚ್ಚುವರಿ ಕೆಲಸ ಆಗಿರುವ (ವರ್ಕ್ ಸ್ಲಿಪ್) ಮೊತ್ತದ ಬಗ್ಗೆ ಸ್ಟೇಟ್‌ಮೆಂಟ್ ಅನ್ನು ಸಿದ್ಧಪಡಿಸಿರುವುದರ ಸಂಬಂಧ ಮ್ಯಾನುಯಲ್ ಎಂ.ಬಿ. ಯ Abstract ನಲ್ಲಿ ಡಿವಿಯೇಷನ್ ಸ್ಟೇಟ್‌ಮೆಂಟ್ ಅನ್ನು ಸಿದ್ಧಪಡಿಸಿ ಅಳವಡಿಸಲಾಗಿರುತ್ತದೆ. ಆದುದರಿಂದ ರೂ. 1,08,36,608/– ಈ ಮೊತ್ತವು ಮೂರನೇ ಭಾಗಶಃ ಹುಂಡಿ ಮೊತ್ತವಾಗಿರದೇ ಮೂರನೇ ಹುಂಡಿಯ ತನಕವಾಗಿರುವ ವರ್ಕ್‌ಸ್ಲಿಪ್ ಮೊತ್ತವಾಗಿರುತ್ತದೆ. ಈ ಕೆಲಸವನ್ನು ಗುತ್ತಿಗೆದಾರರು ದಿನಾಂಕ: 17.10.2015 ರಂದು ಪ್ರಾರಂಭಿಸಿ, 12 ತಿಂಗಳುಗಳ ಅವಧಿ (ದಿನಾಂಕ : 14.10.2016) ಯೊಳಗೆ ಪೂರ್ಣಗೊಳಿಸಿರುತ್ತಾರೆ. ಈ ಸಂಬಂಧ ಮ್ಯಾನುಯಲ್ ಎಂ.ಬಿ. ಸಂಖ್ಯೆ 4 ರಲ್ಲಿ ದಾಖಲಿಸಿದೆ. ಆದುದರಿಂದ ಈ ಕೆಲಸವು ನಿಗದಿತ ಅವಧಿಯೊಳಗೆ ಪೂರ್ಣಗೊಂಡಿರುವುದರಿಂದ ಕೆಲಸವು ವಿಳಂಬವಾಗಿರುವುದಿಲ್ಲ.<br>1. ಐಟಂವಾರು ಸಿ. ಅಂಡ್ ಎಫ್.ಸಿ. ಮಾಡಲು ಕ್ರಮವಹಿಸಲಾಗಿರುತ್ತದೆ.<br>2. ಮೂರನೇ ವ್ಯಕ್ತಿ ಪರಿಶೀಲನಾ ವರದಿಯನ್ನು ಪ್ರತ್ಯೇಕವಾಗಿ ಆಯಾ ಹುಂಡಿಯಲ್ಲಿಯೇ ಲಗತ್ತಿಸಿದೆ.<br>3. ಸಿ.ಸಿ. ಕ್ಯಾಮೆರಾ ಅಳವಡಿಸುವುದರ ಬಗ್ಗೆ ಇ–ಎಂ.ಬಿ. ಹಾಗೂ ಮ್ಯಾನುಯಲ್ ಎಂ.ಬಿ. ಯಲ್ಲಿ ದಾಖಲಿಸಿದೆ (ಈ ಕೆಲಸವು ಸರಬರಾಜು ಮಾಡಿ ಅಳವಡಿಸುವ ಕೆಲಸವಾಗಿರುವುದರಿಂದ).<br>ವಿದ್ಯುತ್ ಕೆಲಸಕ್ಕೆ ಸಂಬಂಧಿಸಿದಂತೆ ಅಂದಾಜು ಪ್ರತಿಯು ಮುಖ್ಯ ಅಭಿಯಂತರರವರಿಂದ ತಾಂತ್ರಿಕವಾಗಿ |

| | |
|---|---|
| | ಪರಿಶೀಲನೆಗೊಂಡಿರುತ್ತದೆ. ಸದರಿ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತಾ ವಸೂಲಾತಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 90 | **<u>89. ಕ.ರಾ.ಮು.ವಿ ಆವರಣದಲ್ಲಿ ನೂತನವಾಗಿ ಆಡಳಿತ ಭವನ ಘಟಿಕೋತ್ಸವ ಭವನ ಹಾಗೂ ವಿಜ್ಞಾನಭವನ ಕಟ್ಟಡದ ನಿರ್ಮಾಣದ ಕಾಮಗಾರಿ ಬಿಲ್ಲು ಪಾವತಿಸಿರುವುದು :-</u>**<br><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಕಾಮಗಾರಿ ಬಿಲ್ಲನ್ನು ಪರಿಶೀಲಿಸಿದಾಗ ಲೆಕ್ಕಶೀರ್ಷಿಕೆ 271 ರಲ್ಲಿ ಬಿ.ಆರ್ ಸಂಖ್ಯೆ:2520 ದಿನಾಂಕ:30.03.2017 ರಂದು ಬಿ.ಎಸ್.ಆರ್ ಬೆಂಗಳೂರು ರವರಿಗೆ ರೂ.1,46,45,120/- ಪಾವತಿಸಿದೆ ಆದರೆ ಬಿಲ್ಲಿನಲ್ಲಿ ಮಾರಾಟತೆರಿಗೆ ರಾಜಧನ ಕಡಿಮೆ ದರದಲ್ಲಿ ಕಟಾಯಿಸಿರುವುದು ಕಾಮಗಾರಿ ವಿಳಂಬವಾಗಿ ಪೂರ್ಣಗೊಂಡಿರುವುದಕ್ಕೆ ದಂಡ ವಸೂಲಿ ಮಾಡದೆ ಇರುವುದು ಹಾಗೂ ದಂಡ ಪ್ರಸ್ತಾವನೆ ಅನುಮೋದನೆಗೊಂಡಿರುವ ಆದೇಶದ ಪ್ರತಿ ಹಾಜರುಪಡಿಸದೆ ಇರುವುದರಿಂದ ಹಾಗೂ ಹಿಂದಿನ ಸಾಲುಗಳಲ್ಲಿ ಪಾವತಿಸಿರುವ ಬಿಲ್ಲುಗಳ ವಿವರ ಹಾಜರುಪಡಿಸದೆ ಇರುವುದರಿಂದ ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:129/2018-19 ದಿನಾಂಕ:07.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿ ಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.1,46,45,120/- ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.**<br>1) Tender price amount Rs.70,88,32,274 ಸಂಬಂಧಿಸಿದಂತೆ ಇದುವರೆವಿಗೂ ಒಟ್ಟು ಪಾವತಿಸಿರುವ ಆರ್.ಎ ಬಿಲ್ಲು, ಅಂತಿಮ ಬಿಲ್ಲು completion reports, ಪರಿಷ್ಕೃತ ಅಂದಾಜುಪಟ್ಟಿ ಅನುಮೋದನೆ ಪಡೆದಿರುವ ಹಾಗೂ withheld amount ಕಾಯ್ದಿರಿಸಿರುವ ಆರ್.ಎ ಬಿಲ್ಲನ್ನು (ರೂ.1,46,45,120/-) ಪರಿಶೀಲನೆ ಅವಧಿಯಲ್ಲಿ ಮೂಲ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು ಆಕ್ಷೇಪಣೆಯಲ್ಲಿಡಲಾಗಿದೆ.<br>2) ಇ.ಐ.ಆರ್.ಎಲ್ ಹಾಗೂ workship ಅನುಮೋದನೆಗೊಂಡಿರುವ ಐಟಂವಾರು ಅನುಮೋದನೆ ಪಡೆದಿರುವ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ.<br>3) Work order ಪ್ರಕಾರ 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಅವಕಾಶ ನೀಡಲಾಗಿದೆ ಆದರೆ ಕರಾರು ಒಪ್ಪಂದದ ಪತ್ರಕ್ಕೆ ದಿನಾಂಕ:20.01.2012 ರಂದು ಸಹಿ ಹಾಕಿರುವಂತೆ ದಿನಾಂಕ:30.08.2014 ರಂದು ಪೂರ್ಣಗೊಳಿಸಬೇಕಾಗಿದ್ದು, ನಿಗದಿತ ಅವಧಿಯಲ್ಲಿ ಅಂತಿಮ ಬಿಲ್ಲು ಸಲ್ಲಿಸದೆ ವಿಳಂಬವಾಗಿರುವ ಬಗ್ಗೆ ವಿವರಣೆ ನೀಡಬೇಕಾಗಿ ತಿಳಿಸಿದೆ.<br>4) ರಾಜಧನವನ್ನು ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿ ಜಮೆ ಮಾಡಿರುವ ವಿವರ ಹಾಜರುಪಡಿಸಿರುವುದಿಲ್ಲ.<br>5) Expenditure upto date total Rs.7,219.90 2015-16= 7064 ಹಾಗೂ 2016-17 ರೂ.146.90 |

| | |
|---|---|
| | ಒಟ್ಟು ರೂ.7,219.90. Tender price amount in lakhs Rs.7,088.22 Excess amt Rs.122.68<br>ಮೂಲ ಅಂದಾಜುಪಟ್ಟಿ ಮೊತ್ತಕ್ಕಿಂತ ಹೆಚ್ಚಾಗಿ ಕಾಮಗಾರಿ ಬಿಲ್ಲು ಪಾವತಿಸಿರುವ ಪರಿಷ್ಕೃತ ಅಂದಾಜುಪಟ್ಟಿ ಮಂಜೂರಾತಿ ಆದೇಶ ಪ್ರತಿ ಹಾಗೂ ಕಾಮಗಾರಿ ಅಂತಿಮವಾಗಿ completion reportನ್ನು ಪರಿಶೀಲನೆಯ ಅವಧಿಯಲ್ಲಿ ಹಾಜರುಪಡಿಸದೆ ಇರುವುದರಿಂದ ಕಂಡಿಕೆ ದಾಖಲಾತಿಯೊಂದಿಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ.<br>6) ಟೆಂಡರ್ KW4 ರ ನಿಯಮದಂತೆ condition of contract a general clause (41) d ಪ್ರಕಾರ ಹಾಗೂ PWD 65 clause 2(d) ಪ್ರಕಾರ ವಿಳಂಬದ ಕಾಲಾವಧಿಯಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ವಿಧಿಸಬೇಕಾಗಿರುತ್ತದೆ. ಆದರೆ ವಿಧಿಸಿರುವುದಿಲ್ಲ.<br>ವಿವರದಲ್ಲಿ ತಿಳಿಸಿರುವಂತೆ ಒಟ್ಟಾರೆ ಟೆಂಡರ್ ಅಂದಾಜುಪಟ್ಟಿ ಮೊತ್ತಕ್ಕಿಂತ ಹೆಚ್ಚುವರಿಯಾಗಿರುವ ಕಾಯ್ದಿರಿಸಿರುವ ಬಿಲ್ಲನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಆಕ್ಷೇಪಣೆಗೆ ತರಲಾಗಿದೆ. |
| | ಉತ್ತರ |
| | (1) ಟೆಂಡರ್ ಮೊತ್ತ ರೂ. 70,80,32,274/– ಗಳಾಗಿದ್ದು, ಈ ಸಂಬಂಧ ಹುಂಡಿ ಪಾವತಿಸಿರುವುದರ ಹುಂಡಿಯ ಒಟ್ಟು ಮೊತ್ತ ರೂ. 70,75,57,478/– ಗಳಾಗಿದ್ದು ಒಟ್ಟು 12 ಹುಂಡಿಗಳ ವಿವರದ ಪ್ರತಿ ಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>(2) ಪರಿಷ್ಕೃತ ಅಂದಾಜು ಪಟ್ಟಿಯು ಮುಖ್ಯ ಅಭಿಯಂತರರಿಂದ ಪರಿಷ್ಕೃತಗೊಂಡಿದ್ದು ಈ ಸಂಬಂಧ EIRL ಹಾಗೂ WORKSLIP ಒಳಗೊಂಡಂತೆ ಪರಿಷ್ಕೃತ ಅಂದಾಜು ಮೊತ್ತವು ರೂ. 70,75,57,478/– ಗಳಾಗಿರುತ್ತದೆ. ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>(3) ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ದಿನಾಂಕ : 31.03.2014 ರಂದು ಪೂರ್ಣಗೊಳಿಸಿರುತ್ತಾರೆ. ಈ ಸಂಬಂಧ ಗುತ್ತಿಗೆದಾರರಿಗೆ ಕಾಲ ವಿಸ್ತರಣೆಯನ್ನು ನೀಡುವುದರ ಬಗ್ಗೆ BOM ಪ್ರತಿಯನ್ನು (130ನೇ BOM, Dt. 02.08.14) ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>(4) ಗುತ್ತಿಗೆದಾರರಿಗೆ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕಾಲ ವಿಸ್ತರಣೆಯನ್ನು ಮಾಡಲಾಗಿರುವುದರಿಂದ BOM ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>(5) ಐಟಂವಾರು EIRL ಹಾಗೂ WORKSLIP ಕೆಲಸಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಲೆಕ್ಕ ತಪಾಸಣೆಯ (2015–16ರ) ಸಮಯದಲ್ಲಿ (12ನೇ ಅಂತಿಮ ಹುಂಡಿಗೆ) ವಿವರವನ್ನು ಸಲ್ಲಿಸಿ ಲೆಕ್ಕ ತಪಾಸಣೆ ಮಾಡಿಸಲಾಗಿರುತ್ತದೆ. EIRL ಹಾಗೂ WORKSLIP ಕೆಲಸಗಳಿಗೆ ಮುಖ್ಯ ಅಭಿಯಂತರರಿಂದ ತಾಂತ್ರಿಕ ಪರಿಶೀಲನೆ ಮಾಡಿಸಲಾಗಿರುತ್ತದೆ.<br>(6) ರಾಜಧನವನ್ನು ಕಾಮಗಾರಿಯಲ್ಲಿ ಕಟಾಯಿಸಿರುವುದರ ವಿವರದ ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ |

| | |
|---|---|
| | ಸಲ್ಲಿಸಲಾಗಿದೆ. ಈ ಸಂಬಂಧ ವ್ಯತ್ಯಾಸದ ರಾಜಧನದ ಮೊತ್ತ ರೂ. 36,320/– ಗಳನ್ನು ಗುತ್ತಿಗೆದಾರರಿಂದ ಮುಂದಿನ ಹುಂಡಿಗಳಲ್ಲಿ ಕಟಾಯಿಸಿಕೊಳ್ಳಲು ಕ್ರಮವಹಿಸಲಾಗುವುದು.<br>(7) ಕಡಿಮೆ ಮಾರಾಟ ತೆರಿಗೆ (ಶೇಕಡ 2) ಕಟಾಯಿಸಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರವರು ನೀಡಿರುವ ಪ್ರತಿಯನ್ನು ಮಾಹಿತಿಗಾಗಿ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>(8) Mobalization Advance ಗೆ ಸಂಬಂಧಪಟ್ಟಂತೆ R.A. ಬಿಲ್ಲುಗಳಲ್ಲಿ ಕಟಾಯಿಸಿ ಹೊಂದಾಣಿಕೆಯಾಗಿರುವ ವಿವರದ ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ.<br>**(9)** ಕಾಮಗಾರಿಗೆ ಸಂಬಂಧಿಸಿದಂತೆ ವಿಚಾರಣಾ ಸಂಖ್ಯೆ : 131/2018–19, ದಿನಾಂಕ : 07.01.2014 ರಲ್ಲಿ ವ್ಯತ್ಯಾಸದ ಮೊತ್ತವನ್ನು ರೂ. 2,84,922/– ಗಳನ್ನು ವಸೂಲಿಸಲು ಸೂಚಿಸಿರುವಂತೆ ಕ್ರಮವಹಿಸಲಾಗುವುದು. |
| | **ವಿವರ** |
| 91 | **<u>90. ಐಟಂವಾರು ಇ.ಐ.ಆರ್.ಎಲ್ ಕಾಮಗಾರಿ ಅನುಮೋದನೆ ಪಡೆದಿರುವ ಆದೇಶ ಹಾಗೂ ಪಾವತಿಸಿರುವ ಬಿಲ್ಲಿನಲ್ಲಿ ವ್ಯತ್ಯಾಸ ಕಂಡು ಬಂದಿರುವ ವಿಚಾರ :–</u>**<br>ಚಾಮರಾಜನಗರ ಪ್ರಾದೇಶಿಕ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ ಬಿಲ್ಲನ್ನು ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ಬಿ.ಆರ್ ಸಂಖ್ಯೆ:243/ ದಿ:27.04.2016 ರಂದು ಓಚರ್ಸ್ ಸಂಖ್ಯೆ:43/ ಜೂನ್ 16 ರಲ್ಲಿ ಬಿ.ಎಸ್.ಆರ್ ಬೆಂಗಳೂರು ರವರಿಗೆ ರೂ.1,85,39,202/– ಬಿಲ್ಲು ಪಾವತಿಸಿದೆ. ಆದರೆ ಪಾವತಿಸಿರುವ ಬಿಲ್ಲಿನ ಪ್ರಕಾರ ರೂ.1,85,39,202/– ಆದರೆ ವಾಸ್ತವಿಕವಾಗಿ ಪಾವತಿಸಿರುವುದು ರೂ.185,09,772/– ಪಾವತಿಸಬೇಕಾಗಿರುತ್ತದೆ.<br>ಇ.ಐ.ಆರ್.ಎಲ್ ಐಟಂವಾರು ದರ ಅನುಮೋದನೆಗೊಂಡಿರುವ ಹಾಗೂ ಹೆಚ್ಚುವರಿ ಭದ್ರತಾ ಠೇವಣಿ ಕಟ್ಟಿಸಿಕೊಂಡಿರುವ ವಿವರ ಹಾಜರುಪಡಿಸದೆ ಇರುವುದರಿಂದ ಇ.ಐ.ಆರ್.ಎಲ್ ಮತ್ತು ವರ್ಕ್ಸ್‌ಸ್ಲಿಪ್ ಬಾಬ್ತು ಪಾವತಿಸಿರುವ ಮೊಬಲಗು **ರೂ.12,32,766/– ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಕೆಳಕಂಡಂತಿದೆ.** |

| ಕ್ರಸಂ | ದರ | ಪರಿಮಾಣ | ಮೊಬಲಗು |
|---|---|---|---|
| 1 | 145 | 50.54 | 7,329 |
| 2 | 153.76 | 5101.43 | 7,84,396 |
| 3 | 3928.32 | 23.28 | 91,456 |
| 4 | 586.52 | 233.80 | 1,37,128 |
| 5 | 3932.04 | 19.80 | 77,854 |
| 6 | 3935.76 | 34.20 | 1,34,603 |
| **ಒಟ್ಟು** | | | **12,32,766** |

ಐಟಂವಾರು ಎಂ.ಬಿ ಯಲ್ಲಿ (ಇ.ಎಂ.ಬಿ) ಸಿ.ಎಫ್.ಸಿ ದೃಢೀಕರಿಸಿ AEE/EE ದೃಢೀಕರಿಸಿ ಸಹಿ

| | |
|---|---|
| | ಮಾಡದೆ ಇರುವುದರಿಂದ ಪಾವತಿಸಿರುವ ಮೊಬಲಗಿನಲ್ಲಿ ವ್ಯತ್ಯಾಸ ಕಂಡು ಬಂದಿರುವ ವಿಚಾರದಲ್ಲಿ ವಿವರಣೆ ನೀಡಬೇಕಾಗಿ ತಿಳಿಸಿದೆ.<br><br>ಗುತ್ತಿಗೆ ಕರಾರಿನ ಪ್ರಕಾರ ದಿನಾಂಕ:25.02.2014 ರಿಂದ 18 ತಿಂಗಳು ಕಾಲ ಅವಕಾಶ ನೀಡಲಾಗಿತ್ತು ಕಾಮಗಾರಿ ನಿಗದಿತ ಅವಧಿಯಲ್ಲಿ ಮುಕ್ತಾಯಗೊಳಿಸದೆ ವಿಳಂಬವಾಗಿ ಬಿ.ಆರ್ ನಂಬರ್:243 ದಿನಾಂಕ:27.04.2016 ರಂದು 6th RA Bill ಸಲ್ಲಿಸಿರುವುದು ಸರಿಯಷ್ಟೇ ವಾಸ್ತವಿಕವಾಗಿ ದಿನಾಂಕ:30.08.2015 ರಂದು 18 ತಿಂಗಳು ಮುಕ್ತಾಯಗೊಳಿಸಿ ಕಾಮಗಾರಿ ಪೂರ್ಣಗೊಳಿಸಬೇಕಾಗಿರುತ್ತದೆ. ಬಿ.ಆರ್ ಸಂಖ್ಯೆ:243/ ದಿ:27.04.2016 ನೇ ಭಾಗಶಃ ಬಿಲ್ಲು ಸಲ್ಲಿಸಿರುವ ದಿನಾಂಕಕ್ಕೆ ಅನುಗುಣವಾಗಿ 237 ದಿನಗಳು ವಿಳಂಬವಾಗಿರುವ ಕಾಲಕ್ಕೆ, ಕಾಲವಕಾಶ ವಿಸ್ತರಣೆಯ ಮಂಜೂರಾತಿ ಆದೇಶ ಹಾಗೂ ದಂಡ ಪ್ರಸ್ತಾವನೆ ಮಂಜೂರಾಗಿರುವುದಿಲ್ಲ. ದಂಡ ವಸೂಲಿ ಮಾಡದೆ ಇರುವುದರ ವಿಚಾರದಲ್ಲಿ ದಂಡ ವಸೂಲಿ ಕ್ರಮ ಕೈಗೊಂಡು ವರದಿ ಮಾಡಲು ಸೂಚಿಸಿದೆ. |
| | ಉತ್ತರ |
| | ಚಾಮರಾಜನಗರದ 6ನೇ ಭಾಗಶಃಹುಂಡಿಯಲ್ಲಿ ಪಾವತಿಸಲಾಗಿರುವ ಮೊತ್ತ ರೂ.1,85,39,202/-ಗಳ ವಿವರವನ್ನು ಉತ್ತರದೊಂದಿಗೆ ಸಿದ್ದಪಡಿಸಿ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ. ಸದರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ದಿನಾಂಕ:25-02-2014 ರಂದು ಕಾರ್ಯಾದೇಶ ನೀಡಿರುವುದು ಸರಿಯಷ್ಟೆ. ಆದರೆ ಸದರಿಯವರಿಗೆ Site Handover ಮಾಡಿರುವ ದಿನಾಂಕ ಬೇರೆಯಾಗಿದ್ದು, ಇದಕ್ಕೆ ಸಂಬಂಧಿಸಿದ ದಾಖಲಾತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ. ಹಾಗೂ ಸದರಿ ಕಾಮಗಾರಿಯು Site Handover ಮಾಡಿದ 18 ತಿಂಗಳೊಳಗೆ ಪೂರ್ಣಗೊಂಡಿದ್ದು, ಹುಂಡಿ ಪಾವತಿ ಬಾಕಿ ಇರುತ್ತದೆ ಎಂಬ ಅಂಶವನ್ನು ಮುಂದಿನ ಅವಗಾಹನೆಗೆ ತರುತ್ತಾ, ಸದರಿ ಆಕ್ಷೇಪಣೆಗೆ ನೀಡಲಾಗಿರುವ ದಾಖಲಾತಿಗಳನ್ನು ಪರಿಶೀಲಿಸಿ ಆಕ್ಷೇಪಣೆಯನ್ನು ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| | **ವಿವರ** |
| 92 | **<u>91. ವಾರ್ಷಿಕ ಲೆಕ್ಕಪತ್ರದ ಲೆಕ್ಕಶೀರ್ಷಿಕೆ 271 ರ ಕಾಮಗಾರಿ ಬಿಲ್ಲು ಘಟಿಕೋತ್ಸವ ಭವನ ಕಟ್ಟಡದಲ್ಲಿನ ಒಳಾಂಗಣ ವಿನ್ಯಾಸ ಇತರೆ ಕಾಮಗಾರಿ ಬಿಲ್ಲು ಪಾವತಿಸಿರುವುದು :-</u>**<br>ಇಂಜಿನಿಯರ್ ವಿಭಾಗದ 2016-17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ಬಿ.ಆರ್ ಸಂಖ್ಯೆ:1123/ ದಿ:10.08.2016 ರಂದು ಓಚರ್ಸ್ ನಂಬರ್ 29 ರಲ್ಲಿ ರೂ.6,93,75,189/-ಗಳನ್ನು ಬಿ.ಎಸ್.ಆರ್ ಬೆಂಗಳೂರು ರವರಿಗೆ ಪಾವತಿಸಿದೆ. ಆದೇಶ ಸಂಖ್ಯೆ:ಕೆ.ಎಸ್.ಓ.ಯು/ಇಂ.ಶಾ/08/2014-15 ದಿನಾಂಕ:16.07.2016 ರಂದು ಮಂಜೂರಾತಿ ನೀಡಲಾಗಿದೆ. ಆದರೆ ಪಾವತಿಸಿರುವ ಐಟಂವಾರು ಬಿಲ್ಲಿನ ಮೊತ್ತ ಹಾಗೂ 2 RA Bill ಪ್ರಕಾರ ಪಾವತಿಸಿರುವ ಕಾಮಗಾರಿ ಬಿಲ್ಲಿನಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಈ ವ್ಯತ್ಯಾಸವು ಕ್ರಮಬದ್ಧವಾಗಿಲ್ಲದೆ ಐಟಂವಾರು ಒಟ್ಟು ಪರಿಮಾಣ ದರ ಮೊಬಲಗಿಗೆ ಬಿಲ್ ಪಾಸ್ ಮಾಡದೆ |

ವ್ಯತ್ಯಾಸ ಕಂಡು ಬಂದಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:123/2018-19 ದಿನಾಂಕ:31.12.2018 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

| | | |
|---|---|---|
| 1 | Description vide page No. 001 ರಿಂದ 80 ವರೆಗೆ ಐಟಂವಾರು ಒಟ್ಟು ಬಿಲ್ಲಿನ ಮೊತ್ತದ ವಿವರ | ರೂ.7,72,47,293/- |
| 2 | ಬಿಲ್ ಪಾಸ್ ಆರ್ಡರ್ ಪ್ರಕಾರ ಕಾಮಗಾರಿ ಬಿಲ್ಲು ಪಾವತಿಸಿರುವುದು | ರೂ.6,93,75,189/- |
| | **ವ್ಯತ್ಯಾಸ** | **ರೂ.78,72,104** |

ಧನಾದೇಶದ ಸಂಖ್ಯೆ:889901-904 ದಿನಾಂಕ:07.09.2016 ರಂದು ರೂ.6,93,75,189/-ಗಳನ್ನು ಓಚರ್ಸ್ ಸಂಖ್ಯೆ 29/ದಿನಾಂಕ:10.08.2016 ರಲ್ಲಿ ಬಿ.ಎಸ್.ಆರ್ ಬೆಂಗಳೂರು ರವರಿಗೆ ಪಾವತಿಸಿದೆ. ಆದರೆ ಐಟಂವಾರು ಬಿಲ್ಲುಗಳ ಕ್ರೂಢೀಕೃತ ಒಟ್ಟು ಮೊತ್ತಕ್ಕೆ ಹಾಗೂ ಬಿಲ್ ಪಾಸ್ ಮಾಡಿರುವ ಮೊತ್ತಕ್ಕೂ ವ್ಯತ್ಯಾಸ ಕಂಡು ಬಂದಿರುತ್ತದೆ. ಬಿಲ್ಲಿನ ತಾಂತ್ರಿಕ ಪರಿಶೀಲನೆಯಾಗದೇ ಐಟಂವಾರು ಸಿ.ಎಫ್.ಸಿ ದೃಢೀಕರಿಸದೆ ಇರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ವಿಚಾರಣೆ ಸಂಖ್ಯೆ:123/ ದಿ:31.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಹಾಗೂ AE/EE S.A.Shashikumar ಎಂ.ಬಿಯಲ್ಲಿ ಹಾಗೂ ಬಿಲ್ಲಿನಲ್ಲಿ ಸಹಿ ಮಾಡಿರುವುದಕ್ಕೆ ಕುಲಸಚಿವರು ಕಾರ್ಯ ಆದೇಶ ನೀಡಿರುವ ದಾಖಲಾತಿ ಹಾಜರುಪಡಿಸಿರುವುದಿಲ್ಲ ಹಾಗೂ ಅಂದಾಜು ಮೊತ್ತ 5 ಕೋಟಿಗಿಂತ ಹೆಚ್ಚಿಗೆ ಇರುವುದರಿಂದ ಅಂದಾಜುಪಟ್ಟಿ ಸಹಿ ಮಾಡುವುದಕ್ಕೆ ಬರುವುದಿಲ್ಲ ಹಾಗೂ ಕಾರ್ಯಪಾಲಕ ಅಭಿಯಂತರರವರು ಎಂ.ಬಿಯಲ್ಲಿ ಕಾಮಗಾರಿ ಐಟಂಗಳನ್ನು ಪರಿಶೀಲಿಸಿ ದೃಢೀಕರಿಸಿ ಸಹಿ ಮಾಡದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆ.

ವಿಚಾರಣೆ ಸಂಖ್ಯೆ:135/2018-19 ದಿನಾಂಕ:07.01.2019 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ವ್ಯತ್ಯಾಸ ಕುರಿತು Abstract ಐಟಂವಾರು ಪರಿಮಾಣ ದರ ಮೊತ್ತ ಕ್ರೂಢೀಕರಿಸಿ ಬಿಲ್ ಪಾಸ್ ಮಾಡದೆ, ಐಟಂವಾರು ಅಳತೆ ದಾಖಲು ಮಾಡಿರುವ ಮೊಬಲಗಿನಲ್ಲಿ ವ್ಯತ್ಯಾಸ ಕಂಡು ಬಂದಿರುವ ವಿಚಾರದಲ್ಲಿ ವಿವರಣೆ ನೀಡಬೇಕಾಗಿ ತಿಳಿಸಿದೆ.

**ಐಟಂವಾರು ಪಾವತಿಸಬೇಕಾದ ವಿವರ ಕೆಳಕಂಡಂತಿದೆ.**

| | | |
|---|---|---|
| 1 | Fire Lighting work P No.1 to 5 | Rs.85,19,605 |
| 2 | Fire Lighting work p 6 to 19 | Rs.77,13,815 |
| 3 | Audio System works p 20 to 25 | Rs.59,87,680 |
| 4 | Projector work p 26 to 29 | Rs.36,39,370 |
| 5 | Stage Lighting work p 30 to 34 | Rs.34,78,120 |
| 6 | Auditorium lighting works p no 35 to 52 | Rs.1,23,64,084 |
| 7 | Stage curtain works p 53 to 56 | Rs.2,41,500 |

| | | | |
|---|---|---|---|
| | | | |
| | 8 | ways CC Camera works p 57 to 65 | Rs.11,02,000 |
| | 9 | HVAC works p 66 to 67 | Rs.1,06,40,625 |
| | 10 | works 68 to 80 | Rs.2,35,60,494 |
| | | **TOTAL** | **Rs. 7,72,47,273** |

ವಿವರದಲ್ಲಿ ತಿಳಿಸಿರುವಂತೆ ಪಾಸ್ ಮಾಡಿರುವ ಬಿಲ್ಲಿನ ಮೊಬಲಗು ರೂ.6,93,75,189/- ಗಳಾದರೆ ಮೇಲಿನ ಐಟಂವಾರು ಒಟ್ಟು ರೂ.7,72,47,273/- ಬಿಲ್ ಅಂಗೀಕರಿಸಬೇಕಾಗಿರುತ್ತದೆ. ಆದರೆ ವಾಸ್ತವಿಕವಾಗಿ ಅಳತೆ ದಾಖಲು ಹಾಗೂ ಬಿಲ್ ಪಾಸ್ ಆರ್ಡರ್ ಮೊತ್ತದಲ್ಲಿ ವ್ಯತ್ಯಾಸ ಕಂಡು ಬಂದಿರುವ ವಿಚಾರದಲ್ಲಿ ಸೂಕ್ತ ವಿವರಣೆ ನೀಡಬೇಕಾಗಿ ಸೂಚಿಸಿದೆ.

ಉತ್ತರ

ವಿ.ವಿ. ನಿಲಯದ ನೂತನ ಘಟಿಕೋತ್ಸವ ಭವನ ಕಟ್ಟಡದಲ್ಲಿನ ಒಳಾಂಗಣ ವಿನ್ಯಾಸ ಮತ್ತು ಇತರೆ ಕೆಲಸಗಳಿಗೆ ಸಂಬಂಧಿಸಿದಂತೆ ಹುಂಡಿಯ (ಅಳತೆ ಪುಸ್ತಕ) ಪುಟ ಸಂಖ್ಯೆ : 01 ರಿಂದ 80 ರ ವರೆಗೆ ಐಟಂಗಳ ಪ್ರಕಾರ ಒಟ್ಟು ಮೊತ್ತವಾದ ರೂ. 7,72,47,293/- ಗಳಾಗಿರುತ್ತದೆ. ಆದರೆ ಬಿಲ್‌ಪಾಸ್ ಹುಂಡಿಯ ಒಟ್ಟು ಮೊತ್ತ ರೂ. 6,93,75,189/- ಗಳಾಗಿದ್ದು ವ್ಯತ್ಯಾಸ ರೂ. 78,72,104/- ಗಳಾಗಿದ್ದು, ಸದರಿ ಹುಂಡಿಯ II RA Billನ ಪ್ರಕಾರ ಹುಂಡಿಯ ಕ್ರಮವಾಗಿ (ಅಳತೆ ಪುಸ್ತಕ) ಪುಟ ಸಂಖ್ಯೆ : 06 ರಿಂದ 80 ರ ವರೆಗೆ ಒಟ್ಟಾರೆಯಾಗಿ ಹುಂಡಿಯ ಒಟ್ಟು ಮೊತ್ತ ರೂ. 6,93,75,189/- ಗಳಾಗಿದ್ದು ಹುಂಡಿಯಲ್ಲಿ ವ್ಯತ್ಯಾಸವಿರುವುದಿಲ್ಲ. ಹುಂಡಿಯಲ್ಲಿನ CFC ವಿಷಯಕ್ಕೆ ಸಂಬಂಧಿಸಿದಂತೆ ಐಟಂವಾರು CFC ಸಹಿಯನ್ನು ಮಾಡಲು ಕ್ರಮವಹಿಸಲಾಗಿರುತ್ತದೆ.

**ವಿವರ**

93

**92. Construction of building for regional centres at Shimoga ಶಿವಮೊಗ್ಗ ಕಾಮಗಾರಿ ಬಿಲ್ಲು ಪಾವತಿಸಿರುವ ವಿಚಾರ ಕುರಿತು :-**

2016-17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಪ್ರಾದೇಶಿಕ ಕಛೇರಿಯ ಕಟ್ಟಡ ನಿರ್ಮಾಣ ಶಿವಮೊಗ್ಗ ಬಿ.ಆರ್ ನಂಬರ್ 243/ ದಿ:27.04.2016 VR43/ ಜೂನ್ 2016 ರಂದು ರೂ.2,86,81,135 ಬಿಲ್ಲು ಪಾವತಿಸಿದೆ. 4$^{th}$ RA ಬಿಲ್ಲನ್ನು ಗುತ್ತಿಗೆದಾರರಾದ ಬಿ.ಎಸ್.ಆರ್ ಬೆಂಗಳೂರು ರವರಿಗೆ ವಹಿಸಿ ಕಾಮಗಾರಿ ಬಿಲ್ಲಿನ ಪ್ರಕಾರ vide page no 6 to 32 ರಲ್ಲಿ ಒಟ್ಟು ಬಿಲ್ಲಿನ ಮೊತ್ತ ರೂ.2,86,81,135/- ಪಾವತಿಸಿದೆ. ಇ.ಐ.ಆರ್.ಎಲ್ ಐಟಂವಾರು ಅನುಮೋದನೆ ಪಡೆದಿರುವ ಹಾಗೂ ಪರಿಮಾಣ ದರ ಮೊತ್ತ ವಾಸ್ತವಿಕ ಬಿಲ್ಲಿನ ಮೊತ್ತದಲ್ಲಿ ವ್ಯತ್ಯಾಸ ಕಂಡು ಬಂದಿದ್ದು ಈ ವ್ಯತ್ಯಾಸದ ಬಗ್ಗೆ ಬಿಲ್ಲಿನಲ್ಲಿ ದಾಖಲು ಮಾಡಿರುವ ಬಗ್ಗೆ ಸ್ಪಷ್ಟೀಕರಣ ನೀಡಿರುವುದಿಲ್ಲ. vide page no 92 to 102 ಕೆಲವು ಐಟಂಗಳನ್ನು ಪೆನ್ನಿನಲ್ಲಿ ಬರೆದು ದಾಖಲು ನೀಡಿದೆ ಹಾಗೂ ಐಟಂವಾರು ಸಿ.ಎಫ್.ಸಿ ದೃಢೀಕರಿಸಿ ಸಹಿ ಮಾಡದೆ ವ್ಯತ್ಯಾಸ ದೃಢೀಕರಿಸದೆ

ಹೆಚ್ಚುವರಿ ಇ.ಐ.ಆರ್.ಎಲ್ ಮೊಬಲಗು ದಾಖಲು ಮಾಡಿರುವ ವಿಚಾರದಲ್ಲಿ ಮಂಜೂರಾತಿ ಆದೇಶದ ಪ್ರತಿ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ವಿವರಣೆ ನೀಡಬೇಕಾಗಿ ಹಾಗೂ ಅನುಮೋದಿತ ಇ.ಐ.ಆರ್.ಎಲ್ ಆದೇಶದ ಪ್ರತಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರದ ಸಂಖ್ಯೆ:152/2018–19 ದಿನಾಂಕ:10.01.2019 ರಂದು ವಿವರಣೆ ಕೋರಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಇರುವ ವಿಚಾರದಲ್ಲಿ ವಿವರಣೆ ನೀಡಬೇಕಾಗಿ ತಿಳಿಸಿದೆ.

ಇ.ಐ.ಆರ್.ಎಲ್ ಐಟಂವಾರು ಹೆಚ್ಚುವರಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಹೆಚ್ಚುವರಿ ಭದ್ರತಾ ಠೇವಣಿ ಪಡೆದಿರುವ ವಿವರ ಲಭ್ಯವಿರುವುದಿಲ್ಲ ಐಟಂವಾರು ಪರಿಮಾಣ ದರ ಮೊಬಲಗು ಅನುಮೋದನೆ ನೀಡಿರುವ ಆದೇಶದ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

**ಇ.ಐ.ಆರ್.ಎಲ್ Item wise Details:**

| Sl. No | Item No | Rate | Qty | ವಾಸ್ತವಿಕವಾಗಿ ಪಾವತಿಸಬೇಕಾದದ್ದು | Bill ನಲ್ಲಿ ಬರೆದಿರುವುದು | ವ್ಯತ್ಯಾಸ |
|---|---|---|---|---|---|---|
| 1 | 238 | 4700 | 5.76 | 27072 | 18950 | 8122 |
| 2 | 239 | 4000 | 25.35 | 101400 | 70980 | 30420 |
| 3 | 246 | 7500 | 18.03 | 135225 | 94557 | 40668 |
| 4 | 247 | 7500 | 2.51 | 18825 | 13177 | 5648 |
| 5 | 259 | 1700 | 145.87 | 247979 | 173585 | 74394 |
| 6 | 260 | 1700 | 82.41 | 140097 | 98068 | 42029 |
| 7 | 256 | 1.75 | 1300 | 2275 | 1592 | 683 |
| **TOTAL** | | | | **672873** | **470909** | **201964** |

ಮೇಲಿನ ವಿವರದಲ್ಲಿ ತಿಳಿಸಿರುವಂತೆ ಐಟಂವಾರು ಪರಿಮಾಣ ದರ ಮೊಬಲಗು ರೂ.201964/– ಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿದ ಐಟಂವಾರು ಇ.ಐ.ಆರ್.ಎಲ್‌ನ ಆದೇಶದ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವವರೆಗೆ ಮೊಬಲಗು **ರೂ.2,01,964/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ಲೆಕ್ಕ ಪರಿಶೋಧಕರು ನೀಡಿರುವ Annexure ನಲ್ಲಿ ಕೆಲವು ಐಟಂಗಳು ಬಿಟ್ಟು ಹೋಗಿರುತ್ತದೆ. ಹಾಗೂ ಲೆಕ್ಕ ಪರಿಶೋಧನೆ ಸಮಯದಲ್ಲಿ ಆಡಿಟ್ ರವರು ಐಟಂ ನಂ: 468ರ ಮೊತ್ತ ರೂ. 1,20,75,000/– ಬದಲಿಗೆ ರೂ.12,075/– ಗಳನ್ನು ದಾಖಲಿಸಿಕೊಂಡು ಕೂಡಿದಾಗ ಮೊತ್ತದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಇದಕ್ಕೆ ಸಂಬಂಧಿಸಿದ ವಿವರವನ್ನು ಉತ್ತರದೊಂದಿಗೆ ಲೆಕ್ಕ ತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಒಟ್ಟಾರೆ ಶಿವಮೊಗ್ಗ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಯ 4ನೇ ಭಾಗಶಃ ಹುಂಡಿಯಲ್ಲಿ

ಪಾವತಿಸಲಾಗಿರುವ ಮೊತ್ತವು ಬಿಲ್ ಪ್ರಕಾರ ಸರಿಯಾಗಿರುತ್ತದೆ.

EIRL & Workslip ಮೊತ್ತಗಳಿಗೆ ಅಂತಿಮ ಹುಂಡಿ ಪಾವತಿ ಸಮಯದಲ್ಲಿ ಪರಿಷ್ಕೃತ ಅಂದಾಜಿಗೆ ಅನುಮೋದನೆ ಪಡೆದು ಪಾವತಿಸಲಾಗುವುದು. ಹಾಗೂ ಅಂತಿಮ ಹುಂಡಿಯ ಮೊತ್ತವು ಟೆಂಡರ್ ಮೊತ್ತಕ್ಕಿಂತ ಜಾಸ್ತಿಯಾಗದೆ ಇರುವುದರಿಂದ Additional performance Deposite ಪಡೆದುಕೊಂಡಿರುವುದಿಲ್ಲ. ಮತ್ತು ಸದರಿ ಭಾಗಶಃ ಹುಂಡಿಯಲ್ಲಿನ EIRL ಐಟಂಗಳಿಗೆ ಮೊತ್ತವನ್ನು ಪಾವತಿಸುವಾಗ Part Rate ಮಾತ್ರ ಪಾವತಿಸಲಾಗಿರುತ್ತದೆ. ಆದುದರಿಂದ EIRLನ ಮೊತ್ತದಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಮುಖ್ಯ ಅಭಿಯಂತರರಿಂದ ಅನುಮೋದನೆಗೊಂಡ ಅಂದಾಜಿನಲ್ಲೇ Furnitureಗಳ ಡೇಟಾ ರೆಟ್ ಅನ್ನು ಅನುಮೋದಿಸಿ ನೀಡಿರುತ್ತಾರೆ. ಆದುದರಿಂದ Furniture ಖರೀದಿಗಾಗಿ ಪ್ರತ್ಯೇಕ ಟೆಂಡರ್ ಕರೆದಿರುವುದಿಲ್ಲ. ಲೆಕ್ಕ ತಪಾಸಣಾ ಸಮಯದಲ್ಲಿ ನೀಡಲಾಗಿರುವ ದಾಖಲಾತಿಗಳನ್ನು ಪರಿಶೀಲಿಸಿ ಆಕ್ಷೇಪಣೆಯನ್ನು ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿದೆ.

**ವಿವರ**

94

**93. Construction of building for regional centre at Bellary District ನ RA Bill ಪಾವತಿಸಿರುವುದು :–**

2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಾಮಗಾರಿ ಬಿಲ್ಲು ಪರಿಶೀಲಿಸಿದಾಗ ಪ್ರಾದೇಶಿಕ ಕೇಂದ್ರದ ಕಟ್ಟಡ ನಿರ್ಮಾಣ ಬಳ್ಳಾರಿ ಜಿಲ್ಲೆಯ 5th RA ಬಿಲ್ಲನ್ನು ಬಿ.ಎಸ್.ಆರ್ ರವರಿಗೆ ರೂ.211,37,199/– ಪಾವತಿಸಿದೆ. ಆದರೆ ಪಾವತಿಸಿರುವ ಬಿಲ್ಲುಗಳ ಅಳತೆ ವೆಚ್ಚವಾರು ಪರಿಮಾಣ ದರ ಮೊಬಲಗು ವಿವರವನ್ನು Abstract Item wise manual MB ಯಲ್ಲಿ ದಾಖಲು ಮಾಡಿ ಬಿಲ್ ಪಾಸ್ ಆರ್ಡರ್ ಹಾಕಿರುವ ಮ್ಯಾನುಯಲ್ ಎಂ.ಬಿ ಹಾಗೂ ಇ.ಎಂ.ಬಿಯನ್ನು ಪರಿಶೀಲಿಸಿದಾಗ ಐಟಂವಾರು ಸಿ.ಎಫ್.ಸಿ ಯನ್ನು ದೃಢೀಕರಿಸಿ ಎ.ಇ.ಇ/ಇ.ಇ ಸಹಿ ಇಲ್ಲದ ಕಾರಣ ಕಾಮಗಾರಿ ಬಿಲ್ಲು ಪಾವತಿ ವಾಸ್ತವಿಕ ಪಾವತಿಯ ಬಗ್ಗೆ ವ್ಯತ್ಯಾಸ ದೃಢೀಕರಿಸಿರುವುದಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ:154 ದಿನಾಂಕ:14.01.19 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಹಾಗೂ ಐಟಂವಾರು ಕಾಮಗಾರಿ ಬಿಲ್ಲಿನಲ್ಲಿ ಹೆಚ್ಚಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ.

| Item No | Rate | Quality | Amount ಪಾವತಿಸಿರುವುದು | ಪಾವತಿಸಬೇಕಾದುದು | ಹೆಚ್ಚಿಗೆ |
|---|---|---|---|---|---|
| 90 | 200000 | 0.89 | 1,78,200 | 1,78,000 | 200 |
| 91 | 200000 | 0.65 | 1,30,950 | 1,30,000 | 950 |
| 92 | 200000 | 0.64 | 1,28,250 | 1,28,000 | 250 |
| **TOTAL** | | | **4,37,400** | **4,36,000** | **1,400** |

**ಮೇಲ್ಕಂಡ ರೂ.1,400/–ಗಳನ್ನು ವಸೂಲಾತಿಗೆ ಸೂಚಿಸಿದೆ.**

ಮಾರಾಟತೆರಿಗೆ ಬಾಬ್ತು ಶೇ 4 ರಂತೆ ಕಟಾಯಿಸಬೇಕಾಗಿದ್ದು, ಬಿಲ್ಲುಗಳಲ್ಲಿ ಶೇ 1 ರಂತೆ ಕಡಿಮೆ ಕಟಾಯಿಸಿರುವ ಬಗ್ಗೆ ಆಯುಕ್ತರು ಮಾರಾಟತೆರಿಗೆ ಇಲಾಖೆಯಿಂದ ಪರಿಷ್ಕೃತ ಚಾಲ್ತಿಯಲ್ಲಿರುವ 2016–17ನೇ ವರ್ಷದ ಆದೇಶದ ಪ್ರತಿಯನ್ನು ಹಾಜರುಪಡಿಸಲು ಸೂಚಿಸಿದೆ. ರೂ.8,45,483/– ಇದು ಕಟಾಯಿಸಬೇಕಾದುದು ಬಿಲ್ಲಿನಲ್ಲಿ ಶೇ 1 ರಂತೆ ಕಟಾಯಿಸಿರುವುದು ರೂ.2,11,372 ಕಟಾಯಿಸಲಾಗಿದೆ ಉಳಿಕೆ ಶೇ 3 ರಂತೆ ಕಟಾಯಿಸದೆ ಇರುವ ಮೊಬಲಗು ರೂ.6,34,111/– ಕಡಿಮೆ ಮಾರಾಟ ತೆರಿಗೆ ವಸೂಲಿಸದಿರುವ ಬಗ್ಗೆ ವಿವರಣೆ ನೀಡಲು ತಿಳಿಸಿದೆ.

Workship (EIRL) Wide page no 109-113 ಕಾಮಗಾರಿ ಬಿಲ್ಲಿನಲ್ಲಿ ಇ.ಐ.ಆರ್.ಎಲ್ ಐಟಂಗಳ ಬಿಲ್ಲು ಪಾವತಿಸಲಾಗಿದೆ. ಆದರೆ ಪಾವತಿಸಿರುವ ಐಟಂಗಳಿಗೆ ಟೆಂಡರ್ ಪಡೆದಿರುವ ಕಡತವನ್ನು ಹಾಜರುಪಡಿಸಬೇಕಾಗಿ ಹಾಗೂ ಇ.ಐ.ಆರ್.ಎಲ್ ಹೆಚ್ಚುವರಿ, ಕಾಮಗಾರಿ ಬಿಲ್ಲುಗಳ ಪಾವತಿ ಬಾಬ್ತು ಹೆಚ್ಚುವರಿ ಭದ್ರತಾ ಠೇವಣಿ ಪಡೆದಿರುವ ಹಾಗೂ ಬಿಲ್ಲಿನಲ್ಲಿ ಕಟಾಯಿಸಿರುವ ವಿವರ ಪರಿಶೀಲನೆಗೆ ಹಾಜರುಪಡಿಸಲು ತಿಳಿಸಿದೆ. ಇ.ಐ.ಆರ್.ಎಲ್ ಐಟಂಗಳ ಕಾಮಗಾರಿ ಬಿಲ್ಲುಗಳ ಪಾವತಿ ವಿವರ

| Item No | Rate | Quality | Amount |
|---|---|---|---|
| 42 | 75 | 177.10 | 13282.75 |
| 185 | 6600 | 36.51 | 240978.61 |
| 173 | 30 | 687.70 | 20630.66 |
| 174 | 30 | 959.03 | 28770.81 |
| 175 | 30 | 1230.53 | 36915.76 |
| 199 | 2100 | 12.43 | 26110.32 |
| 218 | 4000 | 37.82 | 151271.45 |
| 41 | 75 | 596.78 | 44758.00 |
| **TOTAL** | | | **562718.00** |

ವಿವರದಲ್ಲಿ ತಿಳಿಸಿರುವಂತೆ ಐಟಂವಾರು ಕಾಮಗಾರಿ ಬಿಲ್ಲುಗಳ ಪಾವತಿ ಕುರಿತು ಅನುಮೋದನೆ ಪಡೆದಿರುವ ಹಾಗೂ ಟೆಂಡರ್ ಕರೆಯದೇ ಮಂಜೂರಾತಿ ಪ್ರತಿ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.5,62,718/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಉತ್ತರ

ಅ) e-MB Abstract ಅನ್ನು ಪರಿಶೀಲನೆಗೆ ಹಾಜರುಪಡಿಸಿದೆ.

(ಆ) AEE ರವರ ಸಹಿ ಮಾಡಿಸಿ ಪರಿಶೀಲನೆಗೆ ನೀಡಲಾಗಿದೆ

(ಇ) ಹೆಚ್ಚಾಗಿ ಪಾವತಿಸಿರುವ ಮೊತ್ತವನ್ನು ಮುಂದಿನ ಹುಂಡಿಯಲ್ಲಿ ಕಟಾಯಿಸಿ ಪರಿಶೋಧನೆಗೆ ಹಾಜರು ಪಡಿಸಲಾಗುವುದು.

| | |
|---|---|
| | **(ಈ)** ಕರಾಮುವಿಯ 10 ಪ್ರಾದೇಶಿಕ ಕೇಂದ್ರಗಳಿಗೆ ಕೆ.ಎಸ್.ಟಿ ವಿನಾಯಿತಿ ಬಗ್ಗೆ ಬೀದರ್ LVO ರವರು ನೀಡಿರುವ ತೆರಿಗೆ ವಿನಾಯಿತಿಯಂತೆ ಕಟಾಯಿಸಲಾಗಿರುತ್ತದೆ.<br><br>**(ಉ)** EIRL & Workslip ಮೊತ್ತಗಳಿಗೆ ಅಂತಿಮ ಹುಂಡಿ ಪಾವತಿ ಸಮಯದಲ್ಲಿ ಪರಿಷ್ಕೃತ ಅಂದಾಜಿಗೆ ಅನುಮೋದನೆ ಪಡೆದು ಪಾವತಿಸಲಾಗುವುದು. ಹಾಗೂ ಅಂತಿಮ ಹುಂಡಿಯ ಮೊತ್ತವು ಟೆಂಡರ್ ಮೊತ್ತಕ್ಕಿಂತ ಜಾಸ್ತಿಯಾಗದೆ ಇರುವುದರಿಂದ Additional performance Deposite ಪಡೆದುಕೊಂಡಿರುವುದಿಲ್ಲ. ಮತ್ತು ಸದರಿ ಭಾಗಶಃ ಹುಂಡಿಯಲ್ಲಿನ EIRL ಐಟಂಗಳಿಗೆ ಮೊತ್ತವನ್ನು ಪಾವತಿಸುವಾಗ Part Rate ಮಾತ್ರ ಪಾವತಿಸಲಾಗಿರುತ್ತದೆ. ಆದುದರಿಂದ EIRL ನ ಮೊತ್ತದಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಆದ್ದರಿಂದ ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| | **ವಿವರ** |
| 95 | **94 ಪ್ರಾದೇಶಿಕ ಕಛೇರಿಯ ಕಟ್ಟಡ ನಿರ್ಮಾಣ ಕಾಮಗಾರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಗುತ್ತಿಗೆದಾರರಿಂದ ಬಿ.ಎಸ್.ಆರ್ ಬೆಂಗಳೂರು ರವರಿಗೆ ಬಿಲ್ಲು ಪಾವತಿಸಿರುವ ವಿಚಾರ ಕುರಿತು :–**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ Construction of KSOU centre at Chikkamagaluru ಕಾಮಗಾರಿಯ 4th RA Bill ನ್ನು ಬಿ.ಎಸ್.ಆರ್ ಬೆಂಗಳೂರು ರವರಿಗೆ ರೂ.2,08,04,847/– ಪಾವತಿಸಿದೆ ಬಿ.ಆರ್ ಸಂಖ್ಯೆ:244/ ದಿ:27.04.2016 ರಂದು VR 44/ಜೂನ್ 2016 ರಂದು ಹಾಜರುಪಡಿಸಿರುವ ಕಾಮಗಾರಿ ಬಿಲ್ಲಿನ ಪ್ರಕಾರ ಐಟಂವಾರು ವಾಸ್ತವಿಕವಾಗಿ ರೂ.206,07,062/– ಪಾವತಿಸಬೇಕಾಗಿದ್ದು ಆದರೆ ಹೆಚ್ಚುವರಿ ರೂ.1,97,785/– ಪಾವತಿಸಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:153/ 2018–19 ದಿನಾಂಕ:14.01.2019 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿ ಹಾಜರುಪಡಿಸದೆ ಪಾವತಿಸಿರುವ ಬಿಲ್ಲುಗಳ ಅಳತೆ ಐಟಂವಾರು ಪರಿಮಾಣದ ದರ ಮೊಬಲಗು ವಿವರವನ್ನು ಮ್ಯಾನುಯಲ್ ಎಂ.ಬಿ ಯಲ್ಲಿ Abstract Item ಪರಿಮಾಣ ಮೊಬಲಗು ದರ ದಾಖಲು ಮಾಡಿ ಬಿಲ್ ಪಾಸ್ ಆರ್ಡರ್ ಮಾಡಿರುವ ಬಗ್ಗೆ ಮ್ಯಾನುಯಲ್ ಎಂ.ಬಿ ಹಾಗೂ ಇ.ಎಂ.ಬಿ ಯಲ್ಲಿ ಐಟಂವಾರು CFC ಮಾಡದೆ ಕಾಮಗಾರಿ ಬಿಲ್ಲು ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಪಾವತಿಸಿರುವ ಬಿಲ್ಲಿನಲ್ಲಿ ವ್ಯತ್ಯಾಸ ಕಂಡು ಬಂದಿರುವ ವಿಚಾರದಲ್ಲಿ ಸೂಕ್ತ ವಿವರಣೆ ನೀಡಬೇಕಾಗಿ ಸೂಚಿಸಿದೆ. ವಿವರಣೆ ನೀಡುವವರೆಗೆ **ರೂ.1,97,785/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಲೆಕ್ಕ ಪರಿಶೋಧಕರು ನೀಡಿರುವ Annexure ನಲ್ಲಿ ಐಟಂ ನಂ:380 ಮೊತ್ತ ರೂ. 1,97,550/– ಬಿಟ್ಟು ಹೋಗಿರುತ್ತದೆ. ಆದುದರಿಂದ ಮೊತ್ತದಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಒಟ್ಟಾರೆ ಚಿಕ್ಕಮಗಳೂರು ಪ್ರಾದೇಶಿಕ |

ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಯ 4ನೇ ಭಾಗಶಃ ಹುಂಡಿಯಲ್ಲಿ ಪಾವತಿಸಲಾಗಿರುವ ಮೊತ್ತವು ಬಿಲ್ ಪ್ರಕಾರ ಸರಿಯಾಗಿರುತ್ತದೆ. ಕರಾಮುವಿಯ 10 ಪ್ರಾದೇಶಿಕ ಕೇಂದ್ರಗಳಿಗೆ ಕೆ.ಎಸ್.ಟಿ ವಿನಾಯಿತಿ ಬಗ್ಗೆ ಬೀದರ್ LVO ರವರು ನೀಡಿರುವ ತೆರಿಗೆ ವಿನಾಯಿತಿಯಂತೆ ಕಟಾಯಿಸಲಾಗಿರುತ್ತದೆ. ಆದ್ದರಿಂದ ಆಕ್ಷೇಪಣೆ ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿದೆ.

**ವಿವರ**

96 **95. ಕಾಮಗಾರಿವಾರು ವರ್ಕ್ ರಿಜಿಸ್ಟರ್, 'ಸಿ' ರಿಜಿಸ್ಟರ್ ನಿರ್ವಹಿಸದೆ ಇರುವುದು :–**

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಕಛೇರಿ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರಾದೇಶಿಕ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ, ಲೆಕ್ಕಶೀರ್ಷಿಕೆ 341 ರಡಿಯಲ್ಲಿ ಆಯಾಯ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಕ್ರೋಢೀಕೃತ (Package) ಕಾಮಗಾರಿ 1 ಮತ್ತು ಕ್ರೋಢೀಕೃತ (Package) ಕಾಮಗಾರಿ 2 ಎಂದು ಎರಡು ಹಂತಗಳಲ್ಲಿ ಕ್ರಮವಾಗಿ; 1. Construction of KSOU Regional Centres at Hassan, Mandya, Chamarajanagara, Shimoga and Davanagere. (ಟೆಂಡರ್ ಮೊತ್ತ ರೂ.63,58,04,032/–) ಹಾಗೂ 2. Construction of KSOU Regional Centres at Tumkur, Kolara, Bellary, Chikkamagaluru and Dharawada. (ಟೆಂಡರ್ ಮೊತ್ತ ರೂ.62,58,26,104/–) ಕಟ್ಟಡಗಳ ಕಾಮಗಾರಿಯನ್ನು BSR Infratech India Ltd., Bengaluru ರವರ ಮೂಲಕ ಕೈಗೊಳ್ಳಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ಒಟ್ಟು ರೂ.42,14,81,026/–ಗಳ ವೆಚ್ಚವನ್ನು ಭರಿಸಲಾಗಿದೆ. ವಿವರಗಳು ಈ ಮುಂದಿನಂತಿವೆ.

| Sl.No | Package | Bill Status | B.R No & Date | Voucher No. | Cheque No & Date | Amount |
|---|---|---|---|---|---|---|
| 1 | Package-1 | Running Account Bills | 243/ 27.04.2016 | 43 | 889643/ 07.06.2016 | 8,46,98,762 |
| 2 | | | 2087/ 28.01.2017 | 109 | 890450/ 25.03.2017 | 13,83,64,162 |
| 3 | Package-2 | | 244/ 27.04.2016 | 44 | 889643/ 07.06.2016 | 8,25,76,664 |
| 4 | | | 2088/ 28.01.2017 | 23 | 890381/ 07.03.2017 | 11,58,41,438 |
| **TOTAL** | | | | | | **42,14,81,026** |

ಆದರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಪ್ರತಿ ವರ್ಷ ವಾರ್ಷಿಕ ಕಾರ್ಯಕ್ರಮ ಪಟ್ಟಿ (ವಾರ್ಷಿಕ ಕ್ರಿಯಾ ಯೋಜನೆ) ಯನ್ನು ಸಿದ್ಧಪಡಿಸಿ ಮುಂದುವರೆದ (Spillover) ಹಾಗೂ ಹೊಸ (New) ಕಾಮಗಾರಿಗಳನ್ನು ಸೇರ್ಪಡೆಗೊಳಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳದಿರುವುದರಿಂದ

| | |
|---|---|
| | ಹಾಗೂ ಲೆಕ್ಕ ಶೀರ್ಷಿಕೆವಾರು/ ಕಾಮಗಾರಿವಾರು ವರ್ಕ್ ರಿಜಿಸ್ಟರ್ ("C" Register) ನಿರ್ವಹಿಸದಿರುವುದರಿಂದ ಆಯಾಯ ಆರ್ಥಿಕ ವರ್ಷದ ಮುಂದುವರೆದ (Spillover) ಹಾಗೂ ಹೊಸ (New) ಕಾಮಗಾರಿಗಳನ್ನು ಮತ್ತು ಕಾಮಗಾರಿಗಳ ಒಟ್ಟಾರೆ ಆರ್ಥಿಕ ಪ್ರಗತಿಯನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುವ ದಾಖಲಾತಿಗಳನ್ವಯ (ಬಿಲ್ಲುಗಳು ಇತ್ಯಾದಿ) ಲೆಕ್ಕಶೀರ್ಷಿಕೆ 341ರಡಿಯಲ್ಲಿ ಕೈಗೊಂಡ ಕಟ್ಟಡ ಕಾಮಗಾರಿಗಳ ಒಟ್ಟಾರೆ ಆರ್ಥಿಕ ಪ್ರಗತಿಯನ್ನು ಕಂಡುಕೊಳ್ಳಲಾಗಿದ್ದು, ವಿವರಗಳು ಈ ಮುಂದಿನಂತಿವೆ. |

| Sl. No | Package | Grant Allocated for the work | Spillover Progress (1.4.15 to 31.3.16) | New Progress (1.4.16 to 31.3.17) | Total (4+5) | Bal Grant (3-6) |
|---|---|---|---|---|---|---|
| **1** | **2** | **3** | **4** | **5** | **6** | **7** |
| 1 | Package-1 | 635804032 | 253933051 | 223062924 | 476995975 | 158808057 |
| 2 | Package-2 | 625826104 | 198948972 | 198418102 | 397367074 | 228459030 |
| **Total** | | **1261630136** | **452882023** | **421481026** | **874363049** | **387267087** |

| | |
|---|---|
| | 2016–17ನೇ ಸಾಲಿನ ಅಂತ್ಯದವರೆಗೆ ಒಟ್ಟಾರೆ ರೂ.126,16,30,136/–ಗಳಲ್ಲಿ ರೂ.87,43,63,049/–ಗಳನ್ನು ವೆಚ್ಚ ಭರಿಸಲಾಗಿದ್ದು, ರೂ.38,72,67,087/–ಗಳನ್ನು 2017–18ನೇ ಸಾಲಿಗೆ ಮುಂದುವರೆಸಲಾಗಿದೆ. 2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪ್ರಸ್ತುತ ಸಾಲಿನ ಸದರಿ ಕಾಮಗಾರಿಯ ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿನ ವೆಚ್ಚಕ್ಕನುಗುಣವಾಗಿ ಕಾಮಗಾರಿ ಬಿಲ್ಲುಗಳು, ವಹಿಗಳು, ನಗದು ಪುಸ್ತಕ, ಬ್ಯಾಂಕ್ ಸ್ಟೇಟ್ಮೆಂಟ್, 'ಇ ಅಳತೆ' ಪುಸ್ತಕ ಹಾಗೂ ಹಾಜರುಪಡಿಸಲಾದ ಇತರೆ ಪೂರಕ **ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.** |
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 97 | **96. ಕಾಮಗಾರಿ ಬಿಲ್ಲುಗಳಿಗೆ ಒಂದೇ ಬಿ.ಆರ್ ಸಂಖ್ಯೆ ನೀಡಿರುವುದು :–** <br> ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯನ್ವಯ, ಸಿದ್ಧಪಡಿಸಲಾದ ಪ್ರತೀ ಬಿಲ್ಲಿಗೂ ಪ್ರತ್ಯೇಕವಾಗಿ ಬಿ.ಆರ್ ಸಂಖ್ಯೆಯನ್ನು ನಮೂದಿಸಿ, ಆಯಾಯ ಬಿಲ್ಲುಗಳನ್ನು ಪ್ರತ್ಯೇಕವಾಗಿಯೇ ಪಾಸ್ ಆರ್ಡರ್ ಮಾಡಿ ಮೂಲ ಬಿಲ್ಲಿನ ಒಟ್ಟು ಮೊಬಲಗಿನಿಂದ ಸಂಬಂಧಿಸಿದ ತೆರಿಗೆ, ಸೆಸ್, ಇತ್ಯಾದಿ ಶಾಸನ ಬದ್ಧ ಕಟಾವಣೆಗಳನ್ನು ಕಟಾಯಿಸಿ ಆಯಾಯ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವುದು ಹಾಗೂ ನಿವ್ವಳ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸುವುದು ಕ್ರಮವಾಗಿರುತ್ತದೆ. ಆದರೆ ಕ.ರಾ.ಮು.ವಿ ಯ ಹಣಕಾಸು ಶಾಖೆಯಲ್ಲಿ ಕ್ರೋಢೀಕೃತ (Package) ಕಾಮಗಾರಿ 1 ಮತ್ತು ಕ್ರೋಢೀಕೃತ (Package) ಕಾಮಗಾರಿ 2 ಎಂದು ಎರಡು ಹಂತಗಳಲ್ಲಿ ಕ್ರಮವಾಗಿ; ಕಾಮಗಾರಿವಾರು ಎಲ್ಲಾ ಬಿಲ್ಲುಗಳನ್ನು ಕ್ರೋಢೀಕರಿಸಿ ಒಂದೇ ಬಿ.ಆರ್ ಸಂಖ್ಯೆಯನ್ನು |

| | |
|---|---|
| | ನಮೂದಿಸಿ, ಒಂದು ಬಿಲ್ಲಿನಲ್ಲಿ ಮಾತ್ರವೇ ಪಾಸ್ ಆರ್ಡರ್ ಮಾಡಿ ಕ್ರೋಢೀಕೃತ ಮೊಬಲಗು ರೂ.42,14,81,026/– ಗಳನ್ನು ಪಾವತಿಸಿರುವುದು (ವಿವರಗಳನ್ನು ಅನುಬಂಧ (25) ರಲ್ಲಿ ನೀಡಲಾಗಿದೆ.) ಕಂಡು ಬಂದಿದ್ದು, ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:124/ದಿನಾಂಕ:31.12.2018 ರಲ್ಲಿ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಹಣಕಾಸು ಅಧಿಕಾರಿಗಳನ್ನು ಕೋರಲಾಗಿ, ಸಮಜಾಯಿಷಿ ಪತ್ರ ಸಂಖ್ಯೆ:ಕರಾಮುವಿ/ಇಂಶಾ/ 2018–19 ದಿನಾಂಕ:11.01.2019 ರಲ್ಲಿ ಸ್ಪಷ್ಟೀಕರಣ ನೀಡಲಾಗಿದ್ದು, (ವಿವರಗಳನ್ನು ಮೇಲಿನ ಅನುಬಂಧ (25) ಕ್ಕೆ ಲಗತ್ತಿಸಲಾಗಿದೆ.) ವಿವರಗಳು ತಾಳೆಯಾಗುತ್ತಿವೆ ಆದರೂ ಪ್ರತ್ಯೇಕವಾಗಿ ಬಿ.ಆರ್ ಸಂಖ್ಯೆಯನ್ನು ನಮೂದಿಸದೆ ಪ್ರತಿ ಬಿಲ್ಲಿಗೂ ಪಾಸ್ ಆರ್ಡರ್ ಮಾಡದೇ ಇರುವುದರಿಂದ ಬಿಲ್ಲುಗಳು ಪುನರಾವರ್ತನೆಯಾಗಿ ಹೆಚ್ಚುವರಿಯಾಗಿ ಪಾವತಿಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇಂತಹ ನಿಯಮ ಬಾಹಿರತೆಯನ್ನು ತಪ್ಪಿಸುವ ಸಲುವಾಗಿ ಇನ್ನು ಮುಂದೆ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಅನುಸಾರವಾಗಿಯೇ ಪ್ರತಿ ಬಿಲ್ಲುಗೂ ಬಿ.ಆರ್ ಸಂಖ್ಯೆ ನಮೂದಿಸಿ ಪಾವತಿಗೆ ಕ್ರಮ ಕೈಗೊಂಡು ನಿಯಮಗಳನ್ನು ಪಾಲಿಸಲು ಸೂಚಿಸಲಾಗಿದೆ. |
| | ಉತ್ತರ |
| | ಇನ್ನು ಮುಂದೆ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಅನುಸಾರವಾಗಿಯೇ ಪ್ರತಿ ಬಿಲ್ಲುಗೂ ಬಿ.ಆರ್ ಸಂಖ್ಯೆ ನಮೂದಿಸಿ ಪಾವತಿಗೆ ಕ್ರಮ ಕೈಗೊಂಡು ನಿಯಮಗಳನ್ನು ಪಾಲಿಸಲು ಕ್ರಮವಹಿಸಲಾಗುವುದು. |
| | **ವಿವರ** |
| 98 | **97. ಕಟ್ಟಡ ನಿರ್ಮಾಣ ಕಾಮಗಾರಿ ಬಿಲ್ಲುಗಳಲ್ಲಿ ಕಡಿಮೆ ಮಾರಾಟ ತೆರಿಗೆಯನ್ನು (KST) ಕಟಾಯಿಸಿರುವುದು :–** |

ಕ.ರಾ.ಮು.ವಿ.ವಿ. ವ್ಯಾಪ್ತಿಯ ಪ್ರಾದೇಶಿಕ ಕೇಂದ್ರಗಳ ಕಟ್ಟಡ ನಿರ್ಮಾಣ ಕಾಮಗಾರಿಯ ಬಿಲ್ಲುಗಳನ್ನು ಪಾವತಿಸುವಾಗ ಶಾಸನ ಬದ್ಧ ಕಟಾವಣೆಯಾದ ಮಾರಾಟ ತೆರಿಗೆಯನ್ನು ಕಟಾಯಿಸಬೇಕಾಗಿದ್ದು, ವಿವರ ಕೆಳಕಂಡಂತಿದೆ.

| ಕಾಮಗಾರಿ ವಿವರ | ಮೂಲ ಬಿಲ್ಲಿನ ಮೊಬಲಗು | ಶೇ 4 ರಂತೆ ಮಾರಾಟ ತೆರಿಗೆ ಕಟಾಯಿಸಬೇಕಾಗಿರುವುದು | ಮಾರಾಟ ತೆರಿಗೆ ಕಟಾಯಿಸಿರುವುದು | ಕಡಿಮೆ ಕಟಾಯಿಸಿರುವ ಮಾರಾಟ ತೆರಿಗೆ ಮೊತ್ತ |
|---|---|---|---|---|
| ಪ್ಯಾಕೇಜ್–1 | 22,30,62,924 | 89,22,516 | (ಶೇ 0.75) 16,72,972 | 72,49,544 |
| ಪ್ಯಾಕೇಜ್–2 | 19,84,18,102 | 79,36,734 | (ಶೇ 1) 19,84,181 | 59,52,553 |
| **ಒಟ್ಟು** | **42,14,81,026** | **1,68,59,250** | **36,57,153** | **1,32,02,097** |

ಮಾರಾಟ ತೆರಿಗೆ ಮೊಬಲಗು ರೂ.1,68,59,250/– ಗಳನ್ನು ಕಟಾಯಿಸಬೇಕಾಗಿದ್ದು, ಕಡಿಮೆ ಕಟಾಯಿಸಿರುವ ಮೊಬಲಗು ರೂ.1,32,02,097/– ಸ್ಪಷ್ಟೀಕರಣ ನೀಡುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರದ ಸಂಖ್ಯೆ. 1)124/31.12.18 2) 144/9.1.2019 ರಲ್ಲಿ ಕೋರಲಾಗಿ, ಗುತ್ತಿಗೆದಾರರು ಸದರಿ ಕಾಮಗಾರಿಗಳಿಗಾಗಿ ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆ, ಬೀದರ್ ರವರಿಂದ ಮಾರಾಟ ತೆರಿಗೆ ವಿನಾಯಿತಿ ಪಡೆದಿರುವ ಬಗ್ಗೆ ಆದೇಶದ ಪತ್ರವನ್ನು ಲೆಕ್ಕಪರಿಶೋಧನೆಗೆ ಸಮಜಾಯಿಷಿ ಪತ್ರದ ಸಂಖ್ಯೆ:ಕರಾಮುವಿ/ಇಂಶಾ/2018–19, ದಿನಾಂಕ:11.01.2019 ರಲ್ಲಿ ಒದಗಿಸಿರುತ್ತಾರೆ. ಆದಾಗ್ಯೂ ಸಂಭವಿಸಬಹುದಾದ ತೆರಿಗೆ ವಂಚನೆಯನ್ನು ತಪ್ಪಿಸುವ ಸಲುವಾಗಿ ವಿನಾಯಿತಿಯನ್ನು ಪಡೆದಿರುವ ಬಗ್ಗೆ ಸಮುಚಿತ

| | |
|---|---|
| | ಮಾರ್ಗದ ಮುಖಾಂತರ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪಡೆಯುವುದು ಕ್ರಮವಾಗಿರುತ್ತದೆ. ಆದ್ದರಿಂದ ಅಂತಿಮ ಬಿಲ್ಲುಗಳನ್ನು ಪಾವತಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ಸಮುಚಿತ ಮಾರ್ಗದ ಮೂಲಕ ದೃಢೀಕರಣ ಪಡೆಯಬೇಕೆಂದೂ ಸದರಿ ವಿನಾಯಿತಿಯು ದೃಢೀಕರಿಸಲ್ಪಡದಿದ್ದರೆ ಈ ಹಿಂದಿನ ಬಿಲ್ಲುಗಳಲ್ಲಿ ಕಡಿಮೆ ಕಟಾಯಿಸಿರುವ ಮಾರಾಟ ತೆರಿಗೆಯ ಮೊಬಲಗನ್ನು ಒಳಗೊಂಡಂತೆ ಪೂರ್ಣ ಮಾರಾಟ ತೆರಿಗೆಯ ಮೊಬಲಗನ್ನು ಕಟಾಯಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ, ತೆರಿಗೆ ವಂಚನೆಯ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.<br>ಈಗ ಗುತ್ತಿಗೆದಾರರಿಂದ ಕಡಿಮೆ ಕಟಾಯಿಸಿರುವ ಮಾರಾಟ ತೆರಿಗೆ ಮೊತ್ತ **ರೂ.1,32,02,097/–ಗಳನ್ನು ವಸೂಲಿಸಿ ಸಂಬಂಧಿಸಿದ ಇಲಾಖೆಗೆ ಜಮೆ ಮಾಡಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.** |
| | ಉತ್ತರ |
| | ಕ.ರಾ.ಮು.ವಿ.ಯ ವ್ಯಾಪ್ತಿಯಲ್ಲಿ ವಿವಿಧ ಪ್ರಾದೇಶಿಕ ಕೇಂದ್ರಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕರ್ನಾಟಕ ಮಾರಾಟ ತೆರಿಗೆ ಕಾಯಿದೆಯ ನಿಯಮಗಳನುಸಾರವಾಗಿ, ಗುತ್ತಿಗೆದಾರರಾದ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರುರವರು ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆ, ಬೀದರ್‌ರವರಿಂದ ಪ್ಯಾಕೇಜ್ – 1ರ ಕಾಮಗಾರಿಗೆ ಅನ್ವಯವಾಗುವಂತೆ ಪತ್ರದ ಸಂಖ್ಯೆ: ACCT / LVO – 540/BDR/KVAT/2014-15/715 Dated 27.06.2014 ರ ಮೂಲಕ ಶೇ.0.75 ರಂತೆ ಹಾಗೂ ಪ್ಯಾಕೇಜ್ – 2ರ ಕಾಮಗಾರಿಗೆ ಅನ್ವಯವಾಗುವಂತೆ ಪತ್ರದ ಸಂಖ್ಯೆ: ACCT / LVO – 540/BDR/LDC/2013-14/2481 ರ ಮೂಲಕ ಶೇ.1 ರಂತೆ ಮಾರಾಟ ತೆರಿಗೆ ಮೊಬಲಗನ್ನು ಮೂಲ ಬಿಲ್ಲುಗಳಲ್ಲಿ ಕಟಾಯಿಸಿ ಮಾರಾಟ ತೆರಿಗೆ ಇಲಾಖೆ ಪಾವತಿಸುವಂತೆಯೂ ಹೆಚ್ಚುವರಿ ತೆರಿಗೆಯನ್ನು ಪಾವತಿಸಬೇಕಾದ್ದಲ್ಲಿ ಗುತ್ತಿಗೆದಾರರೆ ನೇರವಾಗಿ ತೆರಿಗೆಯ ಬಾಕಿ ಮೊಬಲಗನ್ನು ಪಾವತಿಸಲು ಜವಾಬ್ದಾರರೆಂದು ಷರತ್ತು ವಿಧಿಸಿ ಪಡೆದ ವಿನಾಯಿತಿ ಆದೇಶವನ್ನು ನೀಡಿರುತ್ತಾರೆ. ಗುತ್ತಿಗೆದಾರರು ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆ, ಬೀದರ್ ಇಲ್ಲಿ ನೋಂದಾಯಿಸಿ ಕೆ.ಎಸ್.ಟಿ.ಟಿನ್ ಸಂಖ್ಯೆಯನ್ನು ಪಡೆದಿರುವುದರಿಂದ ಹಾಗೂ ಸದರಿಯವರ ಪ್ರಾದೇಶಿಕ/ ಅಧೀನ ಕಛೇರಿಯು ಬೀದರ್‌ನಲ್ಲಿಯೇ ಇರುವುದರಿಂದಲೂ ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆ, ಬೀದರ್‌ರವರಿಂದ ತೆರಿಗೆ ವಿನಾಯಿತಿ ಆದೇಶವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ವಾಣಿಜ್ಯ ಮತ್ತು ಮಾರಾಟ ತೆರಿಗೆ ವಿನಾಯಿತಿ ಆದೇಶವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆಯನ್ನು ಸಂಪರ್ಕಿಸಲಾಗಿ, ಕಾಯಿದೆಯು ಕರ್ನಾಟಕದಾದ್ಯಂತ ಅನ್ವಯವಾಗುವುದರಿಂದ ಹಾಗೂ ಸಂಸ್ಥೆಯು ಮೂಲತ: ನೋಂದಣಿ ಸಂಖ್ಯೆಯನ್ನು ಪಡೆದ ಅಥವಾ ಸಂಸ್ಥೆಯ ಅಧೀನ ಕಛೇರಿಗಳನ್ನು ಹೊಂದಿರುವ ಪ್ರಾದೇಶಿಕ ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆಯಲ್ಲಿ ವಿನಾಯಿತಿ ಪಡೆಯಬಹುದೆಂದು ಮೌಖಿಕವಾಗಿ ತಿಳಿಸಿರುತ್ತಾರೆ. ಅಲ್ಲದೆ ಕ.ರಾ.ಮು.ವಿ.ವಿ ವ್ಯಾಪ್ತಿಯಲ್ಲಿನ ಈ ಹಿಂದಿನ ಕಾಮಗಾರಿಗಳಿಗೆ ಸದರಿ ಗುತ್ತಿಗೆದಾರರು ವಾಣಿಜ್ಯ ಮತ್ತು ಮಾರಾಟ ತೆರಿಗೆ ಇಲಾಖೆ, ಬೀದರ್ ರವರಿಂದಲೇ ದೃಢೀಕರಣ ಪಡೆದು ಖಚಿತಪಡಿಸಿಕೊಳ್ಳಲಾಗಿದ್ದು, ವಿನಾಯಿತಿ ಪಡೆದಿರುವುದು ಸ್ಪಷ್ಟವಾಗಿರುವುದರಿಂದಲೂ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ನಿಯಮಗಳ ಅನುಸಾರ ಕಾಮಗಾರಿಯ |

| | |
|---|---|
| | ವಿವಿಧ ಭಾಗಶ: ಬಿಲ್ಲುಗಳನ್ನು ಪಾವತಿಸುವಾಗ ವಿನಾಯಿತಿ ಆದೇಶದಲ್ಲಿ ಸೂಚಿಸಿರುವಂತೆ ಪ್ಯಾಕೇಜ್ – 1ರ ಕಾಮಗಾರಿಗೆ ಅನ್ವಯವಾಗುವಂತೆ ಮೂಲ ಬಿಲ್ಲುಗಳ ಮೊಬಲಗಿನಲ್ಲಿ ಶೇ. 0.75 ರಂತೆ ಹಾಗೂ ಪ್ಯಾಕೇಜ್ – 1ರ ಕಾಮಗಾರಿಗೆ ಅನ್ವಯವಾಗುವಂತೆ ಮೂಲ ಬಿಲ್ಲುಗಳ ಮೊಬಲಗಿನಲ್ಲಿ ಶೇ.1 ರಂತೆ ಮಾರಾಟ ತೆರಿಗೆಯನ್ನು ಕಟಾಯಿಸಿ, ಅನ್ವಯವಾಗುವ ಒಟ್ಟು ಮಾರಾಟ ತೆರಿಗೆ ಮೊಬಲಗು ರೂ. 36,75,153/– ಗಳನ್ನು ಒಮ್ಮೆ ಪಾವತಿ ಮಾಡಿರುವುದರಿಂದ ಹಾಗೂ ಯಾವುದೇ ಹೆಚ್ಚುವರಿ ಮಾರಾಟ ತೆರಿಗೆಯನ್ನು ಕಟಾಯಿಸಲು ಬಾರದಿರುವುದರಿಂದ ಸದರಿ ಕಂಡಿಕೆಯನ್ನು ಕೈ ಬಿಡುವಂತೆ ತಮ್ಮನ್ನು ಕೋರಲಾಗಿದೆ. |
| | **ವಿವರ** |
| 99 | **98. KW –3 & 4 ರ ನಿಯಮಗಳು Clause 40.1 ಹಾಗೂ ಟೆಂಡರ್ ಡಾಕ್ಯೂಮೆಂಟ್‌ನ Contract Data Section 6 & PWG Form No.65 Clause 2 ರ ಪ್ರಕಾರ ನಿಗಧಿತ ಆರ್ಥಿಕ ಪ್ರಗತಿಯನ್ನು ಸಾಧಿಸದಿರುವುದು:**<br>ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಂತೆ, KW- 3 & 4 ರ ನಿಯಮಗಳು Clause 40.1 ಹಾಗೂ ಟೆಂಡರ್ ಡಾಕ್ಯೂಮೆಂಟ್‌ನ Contract Data Section 6 ರಲ್ಲಿ ವಿವರಿಸಿರುವಂತೆ ಕರಾರು ಒಪ್ಪಂದವನ್ನು ನಿಗಧಿತ ಒಪ್ಪಂದ ಪತ್ರದ ನಮೂನೆಯಲ್ಲಿ ಸಂಪೂರ್ಣ ಷರತ್ತುಗಳನ್ನು ವಿವರಣಾತ್ಮಕವಾಗಿ ದಾಖಲಿಸಿ ಪರಸ್ಪರ ಒಪ್ಪಿಗೆಯನ್ನು ಮಾಡಿಕೊಂಡಿರುವುದಿಲ್ಲ. ಇದು ಗುತ್ತಿಗೆದಾರರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಅವಕಾಶ ಕಲ್ಪಿಸಿದಂತಾಗಿದೆ. ಹಾಗೂ ದೋಷಪೂರಿತ ಕರಾರು ಒಪ್ಪಂದವಾಗಿ ಕಂಡು ಬಂದಿರುತ್ತದೆ.<br>2016–17ನೇ ಸಾಲಿನಲ್ಲಿ (ದಿನಾಂಕ:01.04.2016 ರಿಂದ ದಿನಾಂಕ:31.03.2017 ರವರೆಗೆ) ಲೆಕ್ಕ ಶೀರ್ಷಿಕೆ 341 ರಡಿಯಲ್ಲಿ ಒಟ್ಟು ರೂ.87,49,63,343/–ಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದ್ದು, ನಿಯಮಾನುಸಾರ ರೂ.17,25,05,057/– ಗಳ ಆರ್ಥಿಕ ಪ್ರಗತಿ ಕುಂಠಿತವಾಗಿರುತ್ತದೆ. (ವಿವರಗಳನ್ನು **ಅನುಬಂಧ (26)** ರಲ್ಲಿ ವರದಿಗೆ ಲಗತ್ತಿಸಿದೆ). ಆದರೆ KW – 3 & 4 ರ ನಿಯಮಗಳು Clause 40.1 & PWG Form No.65 Clause 2 ರ ಪ್ರಕಾರ ವಿಳಂಬಿತ ಕಾಮಗಾರಿಗೆ ಯಾವುದೇ Liquidated damages ಅನ್ನು ಕಟಾಯಿಸಿರುವುದಿಲ್ಲ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:1) 124/ದಿನಾಂಕ:31.12.2018 2) 144/ದಿನಾಂಕ:09.01.2019 ರಲ್ಲಿ ವಿವರಗಳನ್ನು ಕೋರಲಾಗಿ, ಯಾವುದೇ ಮಾಹಿತಿಯನ್ನು ಸಲ್ಲಿಸದಿರುವ ಕಾರಣ, ವಿಳಂಬಿತ ಅವಧಿಗೆ ನಿಯಮಾನುಸಾರ ತಗಲುವ ದಂಡ ಶುಲ್ಕ **ರೂ.1,66,473/– ಗಳನ್ನು (ವಿವರಗಳನ್ನು ಅನುಬಂಧ (26) ರಲ್ಲಿ ನೀಡಲಾಗಿದೆ.) ಗುತ್ತಿಗೆದಾರರಿಂದ ವಸೂಲಿಸಿ** ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಖಾತೆಗೆ (ನಿಧಿಗೆ) ಜಮೆ ಮಾಡಲು ಸೂಚಿಸಲಾಗಿದೆ. |
| | ಉತ್ತರ |
| | ನಿಯಮಾನುಸಾರ ಗುತ್ತಿಗೆದಾರರಿಂದ ವಸೂಲಿಸಿ, ಮುಕ್ತ ವಿಶ್ವವಿದ್ಯಾನಿಲಯದ ಖಾತೆಗೆ /ನಿಧಿಗೆ ಜಮೆ ಮಾಡಲು ಕ್ರಮ ಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ. |
| | **ವಿವರ** |
| 100 | **99. ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸಿರುವ ಬಗ್ಗೆ ದೃಢೀಕರಣ** |

| | |
|---|---|
| | **<u>ಪಡೆಯದಿರುವುದು :–</u>**<br><br>ಕ.ರಾ.ಮು.ವಿ ಯ ಪ್ರಾದೇಶಿಕ ಕೇಂದ್ರಗಳ ಕಟ್ಟಡ ಕಾಮಗಾರಿಯ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿ., ಬೆಂಗಳೂರುರವರ ಮೂಲಕ ಆಯಾಯ ಪ್ರಾದೇಶಿಕ ಕೇಂದ್ರಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿ ಮಾಡಲಾಗಿದ್ದು, (ವಿವರಗಳನ್ನು **<u>ಅನುಬಂಧ (27) ರಲ್ಲಿ</u>** ವರದಿಗೆ ಲಗತ್ತಿಸಿದೆ) 'Institute of Wood Science and Technology (Indian Council of Forestry Research & Education), Bengaluru ರವರಿಂದ ಪೀಠೋಪಕರಣಗಳ ಗುಣಮಟ್ಟ ಹಾಗೂ 'Wood Specification' ಬಗ್ಗೆ ದೃಢೀಕರಣ ಪಡೆಯಬೇಕಾಗಿರುತ್ತದೆ. ಲೋಕೋಪಯೋಗಿ ಇಲಾಖಾ ದಾಸ್ತಾನು ಕೈಪಿಡಿಯ ಪ್ರಕಾರ ದಾಸ್ತಾನು ಹಾಗೂ ವಿತರಣಾ ವಹಿಯಲ್ಲಿ ಪೀಠೋಪಕರಣಗಳ ವಿವರಗಳನ್ನು ನಮೂದಿಸಿ ಸ್ವೀಕೃತಿ ಪಡೆಯಬೇಕಾಗಿರುತ್ತದೆ. ಹಾಗೂ ಪ್ರತೀ ವರ್ಷ ವಾರ್ಷಿಕ ದಾಸ್ತಾನು ಲೆಕ್ಕದ ಭೌತಿಕ ಪರಿಶೀಲನೆ ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ದಾಸ್ತಾನು ಹಾಗೂ ವಿತರಣಾ ವಹಿಯನ್ನು ಸಲ್ಲಿಸಲಾಗಿದ್ದು, ಕರ್ನಾಟಕ ಆರ್ಥಿಕ ಸಂಹಿತೆ 169 ರಿಂದ 173ರಲ್ಲಿ ತಿಳಿಸಿರುವಂತೆ ವಾರ್ಷಿಕ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಿ ಪ್ರತ್ಯೇಕ ಐಟಂವಾರು ಚಾಲ್ತಿಯಲ್ಲಿರುವ ಹಾಗೂ ದುರಸ್ಥಿಯಲ್ಲಿರುವ ಸಾಮಾಗ್ರಿಗಳ ಪಟ್ಟಿಯನ್ನು ಸವಿವರದ ಪಟ್ಟಿಯನ್ನು ಸಲ್ಲಿಸದೆ ಇರುವುದು ತಪಾಸಣೆಯ ವೇಳೆಯಲ್ಲಿ ಕಂಡುಬಂದಿರುತ್ತದೆ. ಆದರೆ 'Institute of Wood Science and Technology (Indian Council of Forestry Research & Education), Bengaluru ರವರಿಂದ ಪೀಠೋಪಕರಣಗಳ ಗುಣಮಟ್ಟ ಹಾಗೂ 'Wood Specification' ಬಗ್ಗೆ ದೃಢೀಕರಣವನ್ನು ಹಾಜರುಪಡಿಸಿರುವುದಿಲ್ಲ. ಪ್ರತಿಯಾಗಿ ಚಾಮರಾಜನಗರದ ಇಂಜಿನಿಯರಿಂಗ್ ಕಾಲೇಜಿನಿಂದ ಪಡೆಯಲಾದ ದೃಢೀಕರಣ ಪತ್ರವನ್ನು ಹಾಜರುಪಡಿಸಲಾಗಿದೆ. ಈ ಸಂಬಂಧ ವಿಚಾರಣೆ ಪತ್ರ ಸಂಖ್ಯೆ:152/2018–19 ದಿನಾಂಕ:10.01.2019 ರಂದು ವಿವರಣೆ ಕೋರಲಾಗಿದ್ದು, ಸದರಿ ವಿಚಾರಣಾ ಪತ್ರಕ್ಕೆ ಯಾವುದೇ ವಿವರಣೆ ನೀಡದೆ, ಯಾವುದೇ ದಾಖಲಾತಿ ಹಾಜರುಪಡಿಸದೆ ಇರುವುದರಿಂದ ಪೀಠೋಪಕರಣದ ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಹಾಗೂ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಸಲ್ಲಿಸದಿರುವುದರಿಂದ 2016–17ನೇ ಸಾಲಿನ ಅಂತ್ಯಕ್ಕೆ ಪಿಠೋಪಕರಣಗಳ ದಾಸ್ತಾನು ಲೆಕ್ಕವನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ 169 ರಿಂದ 173 ರವರೆಗಿನ ನಿಯಮಗಳನ್ವಯ ವಾರ್ಷಿಕ ದಾಸ್ತಾನು ಪರಿಶೀಲನೆ ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ ವಾರ್ಷಿಕ ದಾಸ್ತಾನು ಪರಿಶೀಲನೆ ಕೈಗೊಂಡ ಬಗ್ಗೆ ಯಾವುದೇ ವರದಿಯನ್ನು ಸಲ್ಲಿಸದಿರುವುದರಿಂದ ಹಾಗೂ ಟಿ & ಪಿ ವಹಿಯನ್ನು ಹಾಜರುಪಡಿಸದಿರುವುದರಿಂದ ಪ್ರಾದೇಶಿಕ ಕೇಂದ್ರವಾರು ಮುಕ್ತ ವಿಶ್ವವಿದ್ಯಾನಿಲಯದ ಒಟ್ಟಾರೆ ಪೀಠೋಪಕರಣಗಳ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ನಿಯಮಾನುಸಾರ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನೆ ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸುತ್ತಾ, ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.12,26,17,830/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |

| | |
|---|---|
| | ಉತ್ತರ |
| | ಕರಾಮುವಿಯ ಪ್ರಾದೇಶಿಕ ಕೇಂದ್ರಗಳಿಗೆ ಅಗತ್ಯವಿರುವ ವಿವಿಧ ಪೀಠೋಪಕರಣಗಳನ್ನು ಗುತ್ತಿಗೆದಾರರಾದ ಬಿ.ಎಸ್.ಆರ್ ಇನ್ಫಾಟೆಕ್ ಇಂಡಿಯಾ ಲಿಮಿಟೆಡ್., ಬೆಂಗಳೂರು ರವರಿಂದ ಖರೀದಿಸಿ ಅಳವಡಿಸಲಾಗಿದೆ. ಸದರಿ ಪೀಠೋಪಕರಣಗಳು ಸ್ಟೀಲ್ ಹಾಗೂ ಪ್ಲೈವುಡ್ ನಿಂದ ತಯಾರಿಸಲಾಗಿರುವುದರಿಂದ, ಚಾಮರಾಜನಗರದ ಇಂಜಿನಿಯರಿಂಗ್ ಕಾಲೇಜಿನಿಂದ ದೃಢೀಕರಣವನ್ನು ಪಡೆಯಲಾಗಿದೆ. ಹಾಗೂ ಸದರಿ ಪೀಠೋಪಕರಣಗಳನ್ನು ದಾಸ್ತಾನು ವಹಿಯಲ್ಲಿ ಲೆಕ್ಕಕ್ಕೆ ತೆಗೆದು ಕೊಳ್ಳಲಾಗಿದೆ. ಹಾಗೂ ದಾಸ್ತಾನು ಮತ್ತು ವಿತರಣಾ ವಹಿಯನ್ನು ಲೆಕ್ಕ ತನಿಖೆಗೆ ಹಾಜರು ಪಡಿಸಲಾಗಿದೆ. ಅಲ್ಲದೆ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನ ವರದಿಯನ್ನು ತಯಾರಿಸಲು ಆಡಳಿತಾತ್ಮಕ ಕ್ರಮ ವಹಿಸಿ ವರದಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲಾಗುವುದೆಂಬ ಅಂಶವನ್ನು ಈ ಮೂಲಕ ತಮ್ಮ ಅವಗಾಹನೆಗೆ ತರಲಾಗಿದೆ. |
| | **ವಿವರ** |
| 101 | **100. ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಉಪಯೋಗಿಸಲಾಗಿರುವ ಮರಳು, ಜೆಲ್ಲಿ, ಮಣ್ಣು ಇತ್ಯಾದಿ ಐಟಂಗಳಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ನಿಗಧಿಪಡಿಸಿರುವ ದರಗಳಂತೆ ರಾಜಧನವನ್ನು (ರಾಯಲ್ಟಿ) ಕಟಾಯಿಸದಿರುವುದು :–**<br><br>ಸದರಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಹಂತ ಹಂತವಾಗಿ, ಅಗತ್ಯಕ್ಕೆ ಅನುಸಾರವಾಗಿ ಮರಳು, ಜೆಲ್ಲಿ (20 ಎಂ.ಎಂ ಮತ್ತು 40 ಎಂ.ಎಂ), ಮುರ್ರಂ (ಮಣ್ಣು), ಸ್ಟೋನ್ ಸೈಜ್ ಹಾಗೂ ಮಣ್ಣಿನ ಇಟ್ಟಿಗೆಗಳನ್ನು ಉಪಯೋಗಿಸಲಾಗಿದ್ದು, ಗಣಿ ಹಾಗೂ ಭೂ ವಿಜ್ಞಾನ ಇಲಾಖೆಯು ನಿಗಧಿಪಡಿಸಿರುವ ದರಗಳಂತೆ, ಬಳಸಲಾಗಿರುವ ವಿವಿಧ ಐಟಂಗಳಿಗಾಗಿ ತಗಲುವ ಒಟ್ಟು ರೂ.12,87,016/–ಗಳ ರಾಜಧನವನ್ನು (ರಾಯಲ್ಟಿ) ಕಟಾಯಿಸಬೇಕಾಗಿರುತ್ತದೆ. ಆದರೆ ರೂ.10,02,920/–ಗಳನ್ನು ಮಾತ್ರವೇ ಕಟಾಯಿಸಲಾಗಿದ್ದು, ರೂ.2,84,096/–ಗಳ ರಾಜಧನವನ್ನು (ರಾಯಲ್ಟಿ) ಕಡಿಮೆ ಕಟಾಯಿಸಲಾಗಿರುತ್ತದೆ. (ವಿವರಗಳನ್ನು **ಅನುಬಂಧ (28)** ರಲ್ಲಿ ವರದಿಗೆ ಲಗತ್ತಿಸಿದೆ.) ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:1) 124/ದಿನಾಂಕ:31.12.2018 2) 144/ದಿನಾಂಕ:09.01.2019 ರಲ್ಲಿ ವಿವರಗಳನ್ನು ಕೋರಲಾಗಿ, ಯಾವುದೇ ಮಾಹಿತಿಯನ್ನು ಸಲ್ಲಿಸದಿರುವ ಕಾರಣ ಕಡಿಮೆ ಕಟಾಯಿಸಲಾಗಿರುವ ರಾಜಧನದ ಮೊಬಲಗು (ರಾಯಲ್ಟಿ) **ರೂ.2,84,096/–ಗಳನ್ನು ಗುತ್ತಿಗೆದಾರರಿಂದ ವಸೂಲಿ** ಮಾಡಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ (ಸಂಬಂಧಿಸಿದ ಇಲಾಖೆಗೆ) ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿದೆ. |
| | ಉತ್ತರ |
| | ನಿಯಮಾನುಸಾರ ಗುತ್ತಿಗೆದಾರರಿಂದ ವಸೂಲಿಸಿ ಮುಕ್ತ ವಿಶ್ವ ವಿದ್ಯಾನಿಲಯದ ಖಾತೆಗೆ / ನಿಧಿಗೆ ಜಮೆ ಮಾಡಲು ಕ್ರಮ ಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ. |
| | **ವಿವರ** |
| 102 | **101. ಆರ್ಥಿಕ ಪರಿಸ್ಥಿತಿ :– (ಪರೀಕ್ಷಾ ನಿಧಿ ಖಾತೆ – 09)** |

2016–17ನೇ ಸಾಲಿನ ಲೆಕ್ಕಪತ್ರ, ಆಯವ್ಯಯ ಪಟ್ಟಿ, ಪರಿಷ್ಕೃತ ಆಯವ್ಯಯ ಪಟ್ಟಿ ಮತ್ತು ನಗದು ಪುಸ್ತಕ ಪರಿಶೀಲಿಸಲಾಗಿ ಆರ್ಥಿಕ ಪರಿಸ್ಥಿತಿ ವಿವರ ಕೆಳಕಂಡಂತಿದೆ.

**ವಾರ್ಷಿಕ ಲೆಕ್ಕಪತ್ರದಂತೆ ಆರ್ಥಿಕ ಪರಿಸ್ಥಿತಿಯ ವಿವರ:–**

| ಸ್ವೀಕೃತಿ | | ವೆಚ್ಚ | |
|---|---|---|---|
| ಠೇವಣಿ(FDR) ಪ್ರಾರಂಭಿಕ ಶಿಲ್ಕು | 84,27,85,536<br>8,23,37,780 | ಭಾಗ – 1 | 18,41,81,948 |
| ಸ್ವೀಕೃತಿ ಭಾಗ–1 | 14,82,94,170 | ಠೇವಣಿ ಮರು ಹೂಡಿಕೆ/ಹಿಂಪಡೆತ | 19,40,11,976 |
| ಠೇವಣಿ ಹಿಂಪಡೆತ | 19,40,11,976 | ಸಾಮಾನ್ಯ ನಿಧಿ ಖಾತೆಗೆ ವರ್ಗಾವಣೆ | 10,05,18,745 |
| ನಗದಾಗದೇ ಇರುವ ಧನಾದೇಶ ಮೊತ್ತ | – | ಅಂತಿಮ ಶಿಲ್ಕು | 78,87,16,793 |
| **ಒಟ್ಟು** | **126,74,29,462** | **ಒಟ್ಟು** | **126,74,29,462** |

**ಫೋಷ್ವಾರೆ**

| | |
|---|---|
| ದಿನಾಂಕ:01.04.2016ರ ಪ್ರಾರಂಭಿಕ ಶಿಲ್ಕು | 92,51,23,316 |
| ಸ್ವೀಕೃತಿ | 34,23,06,146 |
| **ಒಟ್ಟು** | 126,74,29,462 |
| 2016–17ನೇ ಸಾಲಿನ ವೆಚ್ಚ | 47,87,12,669 |
| ದಿನಾಂಕ:31.03.2017ರ ಅಂತಿಮ ಶಿಲ್ಕು | 78,87,16,793 |

**2016–17ನೇ ಸಾಲಿನ ಕರಾಮುವಿಯ ಪರೀಕ್ಷಾ ಖಾತೆಯ–09 ರ ಆಯವ್ಯಯ ಪಟ್ಟಿ, ಪರಿಷ್ಕೃತ ಆಯವ್ಯಯ ಪಟ್ಟಿ ಮತ್ತು ವಾರ್ಷಿಕಲೆಕ್ಕಗಳ ಪ್ರಕಾರ ವಿವರ:–**

| | As per Budget | As per Revised Budget | As per Annual Accounts. |
|---|---|---|---|
| ಪ್ರಾರಂಭಿಕ ಶಿಲ್ಕು | 44,72,57,635 | – | 9251,23,316 |
| ಸ್ವೀಕೃತಿ | 17,30,00,000 | 19,03,00,000 | 34,23,06,146 |
| ಒಟ್ಟು | 62,02,57,635 | 19,03,00,000 | 126,74,29,462 |
| ವೆಚ್ಚ | 66,98,50,000 | 19,48,50,000 | 47,87,12,669 |
| ಅಂತಿಮ ಶಿಲ್ಕು | (–) 4,95,92,365 | (–) 45,50,000 | 78,87,16,793<br>(Cash-5,94,41,406<br>FDR–72,92,75,387) |

ಮೇಲಿನ ಆಯವ್ಯಯ ಪಟ್ಟಿ, ಪರಿಷ್ಕೃತ ಆಯವ್ಯಯ ಪಟ್ಟಿ ಪರಿಶೀಲಿಸಿದಾಗ ಆಯವ್ಯಯ ಅಂದಾಜು ತಯಾರಿಕೆಯಲ್ಲಿ ಸ್ವೀಕೃತಿಗಿಂತ ಅಧಿಕ ವೆಚ್ಚ ಭರಿಸುವ ಸಂಭವನೀಯತೆ ದಾಖಲಿಸಿ ಋಣಾತ್ಮಕ ಶಿಲ್ಕು(–) ನೊಂದಿಗೆ ಸಿದ್ಧಪಡಿಸಿರುವುದು ಕ್ರಮಬದ್ಧವಾಗಿರುವುದಿಲ್ಲ. ಬಜೆಟ್ ಮ್ಯಾನುಯಲ್ ಪ್ರಕಾರ ಕರ್ನಾಟಕ ರಾಜ್ಯ

ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆ–(09) ಯಡಿ 2016–17ನೇ ಸಾಲಿಗೆ ವಾಸ್ತವಿಕ ಸ್ವೀಕೃತಿ ಮತ್ತು ವಾಸ್ತವಿಕ ವೆಚ್ಚದ ವಿವರ ಈ ಕೆಳಕಂಡಂತಿದೆ.

| ಪ್ರಾರಂಭಿಕ ಶಿಲ್ಕು | ವಾಸ್ತವಿಕ ಸ್ವೀಕೃತಿ | ಒಟ್ಟು | ವಾಸ್ತವಿಕ ವೆಚ್ಚ | ಅಂತಿಮಶಿಲ್ಕು |
|---|---|---|---|---|
| 8,23,37,780 | 14,82,94,170 | 23,06,31,950 | 18,41,81,948 | 4,64,50,002 |

**<u>2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆ–(09) ಪರೀಕ್ಷಾ ವಿಭಾಗದ ನಗದು ಪುಸ್ತಕ, ವಾರ್ಷಿಕ ಲೆಕ್ಕಗಳು ಹಾಗೂ ಬ್ಯಾಂಕ್ ಸ್ಕ್ರೋಲ್‌ನಲ್ಲಿರುವಂತೆ ಆರ್ಥಿಕ ಪರಿಸ್ಥಿತಿಯ ವಿವರ:–</u>**

| | ನಗದು ಪುಸ್ತಕ | ವಾರ್ಷಿಕ ಲೆಕ್ಕಪತ್ರದ ರೀತ್ಯಾ | ಬ್ಯಾಂಕ್ ಸ್ಕ್ರೋಲ್ ರೀತ್ಯಾ | ವ್ಯತ್ಯಾಸ ನಗದಾಗದ ಧನಾದೇಶಗಳು. |
|---|---|---|---|---|
| ದಿ:1.4.2016ರ ಪ್ರಾರಂಭಿಕ ಶಿಲ್ಕು | 823,37,779 | 92,51,23,316 (Cash–8,23,37,780 FD–84,27,85,536) | 8,23,37,779 | – |
| 2016–17ರ ಸ್ವೀಕೃತಿ | 20,01,99,146 | 3,42,30,6146 | 20,18,04,437 | – |
| ಒಟ್ಟು | 28,25,36,925 | 126,74,29,462 | 28,41,42,216 | – |
| 2016–17ರ ಸಾಲಿನ ವೆಚ್ಚ | 22,30,95,519 | 47,87,12,669 | 22,30,95,519 | – |
| ದಿ:31.3.2017ರ ಅಂತ್ಯಕ್ಕೆ ಅಂತಿಮ ಶಿಲ್ಕು | 5,94,41,406 | 78,87,16,793 (Cash–5,94,41,406 FD–72,92,75,387) | 6,10,46,697 | 16,05,291 (unencashed cheques) |

ಪರೀಕ್ಷಾ ಖಾತೆಗೆ ಸಂಬಂಧಿಸಿದ ಠೇವಣಿಗಳನ್ನು ಪ್ರತ್ಯೇಕವಾಗಿ ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸಲಾಗಿದೆ. ಪರೀಕ್ಷಾ ಖಾತೆಯಲ್ಲಿ 5 ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದು, ಬ್ಯಾಂಕ್ ಖಾತೆಯ ಆರಂಭ ಶಿಲ್ಕು ಮತ್ತು ಅಂತಿಮಶಿಲ್ಕಿನ ವಿವರಗಳನ್ನು ವಾರ್ಷಿಕಲೆಕ್ಕಗಳಲ್ಲಿ ಖಾತೆ ಸಂಖ್ಯೆ ಸಹಿತ ದಾಖಲಿಸಿ ದೃಢೀಕರಿಸಲು ಸೂಚಿಸಿದೆ, ವಿವರಗಳನ್ನು <u>**ಅನುಬಂಧ (29) ರಲ್ಲಿ ನೀಡಿದೆ.**</u>

ಉತ್ತರ

ಕ್ರಮವಹಿಸಲಾಗುವುದು.

**ವಿವರ**

103 **<u>102. ನಗದಾಗದ ಧನಾದೇಶಗಳ ವಿವರ :–</u>**

2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ನಿಧಿ–09 ಖಾತೆಯ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಮಾರ್ಚ್–2017ರ ಅಂತ್ಯಕ್ಕೆ ರೂ.1605291/–ಗಳು ನಗದಾಗದೇ (unencashed chuque) ಉಳಿದಿದ್ದು, ವಿವರ <u>**ಅನುಬಂಧ (30)**</u> ರಲ್ಲಿ ನೀಡಿದೆ ಈ ಲೆಕ್ಕಗಳನ್ನು

| | |
|---|---|
| | ಸಮನ್ವಯಗೊಳಿಸಿ ವೆಚ್ಚವನ್ನು ತಗ್ಗಿಸಿ (Redeuption of expenditure) ನಗದಾಗದ ಧನಾದೇಶಗಳನ್ನು ಸ್ವೀಕೃತಿ ಭಾಗಕ್ಕೆ ತೆಗೆದುಕೊಂಡು (Recipts side) ಸದರಿ ಸಾಲಿನ ಲೆಕ್ಕಪತ್ರಗಳ ತಃಖ್ತೆಗಳನ್ನು ಪರಿಷ್ಕರಿಸಿ, ಸಿದ್ಧಪಡಿಸಿ ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸಿ ತೆಗೆದುಕೊಂಡ ಕ್ರಮದ ಬಗ್ಗೆ ವಿವರವನ್ನು ಒದಗಿಸಲು ಸೂಚಿಸಿದೆ. |
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 104 | **<u>103. ಪರೀಕ್ಷಾ ಖಾತೆಯಿಂದ ಸಾಮಾನ್ಯ ನಿಧಿ–09 ಖಾತೆಗೆ ರೂ.80518745/–ಗಳ ಆಂತರಿಕ ನಿಧಿ ವರ್ಗಾವಣೆ ಮೊತ್ತಕ್ಕೆ ವಿವರವನ್ನು ಹಾಜರುಪಡಿಸದಿರುವುದು :–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2016–17ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ ಪರೀಕ್ಷಾ ನಿಧಿ ಖಾತೆ–(09) ರ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಪರಿಶೀಲಿಸಿದಾಗ ಆಂತರಿಕ ನಿಧಿ ವರ್ಗಾವಣೆ ಕಾಲಂ ನಲ್ಲಿ (Transfer to General Fund) ಸಾಮಾನ್ಯನಿಧಿ ಖಾತೆಗೆ–ರೂ.80,518,745/– ಎಂದು ದಾಖಲಿಸಲಾಗಿದೆ. ಒಂದೇ ಮೊತ್ತ ಆಗಿಲ್ಲದಿರುವುದರಿಂದ ಬ್ಯಾಂಕ್ ಸ್ಟ್ರೋಲ್‌ನಲ್ಲಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ರೂ.8,05,18,745/–ಗಳ ವರ್ಗಾವಣೆ ಮೊತ್ತಕ್ಕೆ ಪ್ರತ್ಯೇಕವಾರು ಮೊಬಲಗಿನ ವಿವರಗಳನ್ನು ಒದಗಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣೆ ಸಂಖ್ಯೆ: 23/11.12.2018 ರಲ್ಲಿ ಕೋರಲಾಗಿದ್ದು, ಮಾಹಿತಿ ಬಂದಿರುವುದಿಲ್ಲ. ಕೂಡಲೇ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. |
| | ಉತ್ತರ |
| | 2016–17ನೇ ಸಾಲಿನ ಪರೀಕ್ಷಾ ನಿಧಿ ಖಾತೆಯಲ್ಲಿ ಆಂತರಿಕ ವರ್ಗಾವಣೆಯಾಗಿರುವ ರೂ.8,05,18,745/–ನ್ನು ಹಣಕಾಸು ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಪ್ರತಿಯನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸಲಾಗಿದೆ. ಸಾಮಾನ್ಯ ನಿಧಿ ಖಾತೆಯ ಠೇವಣಿಗಳನ್ನು ಅವಧಿ ಪೂರ್ವದಲ್ಲಿ ಮುಕ್ತಾಯಗೊಳಿಸುವುದರಿಂದ ಬಡ್ಡಿ ನಷ್ಟವಾಗುತ್ತಿತ್ತು. ಈ ಕಾರಣದಿಂದ ಪರೀಕ್ಷಾ ನಿಧಿ ಖಾತೆಯಿಂದ ಪಾವತಿಗಳಿಗೆ ಅವಶ್ಯವಿದ್ದ ಹಣವನ್ನು ಪಕ್ವಗೊಂಡ ಠೇವಣಿಗಳಿಂದ ಹಿಂಪಡೆಯಲಾಗಿದ್ದು ಪರೀಕ್ಷಾ ನಿಧಿ ಠೇವಣಿಗಳನ್ನು ನಗದೀಕರಿಸಲಾಗಿದೆ.2017–18ನೇ ಸಾಲಿನಿಂದ ಪರೀಕ್ಷಾ ನಿಧಿ ಖಾತೆಯಲ್ಲಿ ಪಾವತಿಸಲಾಗುತ್ತಿದ್ದ ವೇತನಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಸಾಮಾನ್ಯ ನಿಧಿ ಖಾತೆಯಲ್ಲೇ ಭರಿಸಲು ಆಯಾ ವ್ಯಯದಲ್ಲಿ ಮಾರ್ಪಾಟು ಮಾಡಿದ್ದು ಪರೀಕ್ಷಾ ನಿಧಿಗೆ ಸಂಬಂಧಿಸಿದ ವೇತನ ವೆಚ್ಚಗಳನ್ನು ಸಾಮಾನ್ಯ ನಿಧಿಯಿಂದ ಭರಿಸಲಾಗುವುದು. ಈ ಉದ್ದೇಶಕ್ಕೆ ಈಗಾಗಲೇ ವರ್ಗಾಯಿಸಿರುವ ಮೊಬಲಗನ್ನು ವಿನಿಯೋಗಿಸಲಾಗುವುದು. ಆದುದರಿಂದ ಈ ವಿಚಾರಣೆ ಸಂಖ್ಯೆಯನ್ನು ಕೈಬಿಡಲು ಕೋರಲಾಗಿದೆ |

| | ವಿವರ |
|---|---|
| 105 | **104. ಆಯವ್ಯಯ ಅಂದಾಜು :–**<br><br>ಪರೀಕ್ಷಾ ಖಾತೆ–09 ರ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಅಂದಾಜನ್ನು ಪರಿಶೀಲಿಸಿದಾಗ 2016–17ನೇ ಸಾಲಿಗೆ ನಿಗದಿತ ಆಯವ್ಯಯಕ್ಕಿಂತಲೂ ಅಧಿಕ ವೆಚ್ಚದ ಅಂದಾಜು ತೋರಿಸಲಾಗಿದೆ ಹಾಗೂ ಋಣಾತ್ಮಕ ಶಿಲ್ಕು ನಮೂದಿಸಿರುವುದು ಮತ್ತು ಪರಿಷ್ಕೃತ Proper Estimates ಇಲ್ಲದಿರುವುದು ಮತ್ತು ಆಯವ್ಯಯ ಅಂದಾಜಿನಲ್ಲೂ ಋಣಾತ್ಮಕ ಶಿಲ್ಕು ಇದ್ದು ಅಧಿಕ ವೆಚ್ಚದ ಸಂಭವನೀಯತೆಯನ್ನು ದಾಖಲಿಸಿರುವುದು ಬಜೆಟ್ ಮ್ಯಾನ್ಯುಯಲ್ ನಿಯಮ–85ರ ಪ್ರಕಾರ ವಿರುದ್ಧವಾಗಿರುತ್ತದೆ. ಈ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–19/1.12.2018 ರಲ್ಲಿ ಕೋರಲಾಗಿತ್ತು. ಯಾವುದೇ ಮಾಹಿತಿ ಬಂದಿರುವುದಿಲ್ಲ. ಸೂಕ್ತ ವಿವರಣೆಯನ್ನು ಒದಗಿಸುವಂತೆ ಸೂಚಿಸಿದೆ. ಆಯವ್ಯಯ ಅಂದಾಜಿನಲ್ಲಿ ದಾಖಲಿಸಿರುವ ವಿವರ ಕೆಳಕಂಡಂತಿದೆ.<br><br>**ಆಯವ್ಯಯ ಅಂದಾಜು ಪ್ರಕಾರ :–**<br><br>ಪ್ರಾರಂಭ ಶಿಲ್ಕು: 447257635<br>ಸ್ವೀಕೃತಿ: 173000000<br>**ಒಟ್ಟು: 620257635**<br>**ವೆಚ್ಚ: 669850000**<br>ಅಂತಿಮ ಶಿಲ್ಕು (–): 49592365 |
| | ಉತ್ತರ |
| | 2016–17ನೇ ಸಾಲಿನ ಆಯವ್ಯಯ ಅಂದಾಜುವಿನಲ್ಲಿ ಅಧಿಕ ವೆಚ್ಚದ ಅಂದಾಜು ತೋರಿಸಲಾಗಿದ್ದು, ಋಣಾತ್ಮಕ ಶಿಲ್ಕು ನಮೂದಿಸಿರುವುದು ಸರಿಯಷ್ಟೆ.<br><br>**ಆಯವ್ಯಯ ಅಂದಾಜು ಪ್ರಕಾರ :–**<br><br>ಪ್ರಾರಂಭ ಶಿಲ್ಕು: 447257635<br>ಸ್ವೀಕೃತಿ: 173000000<br>**ಒಟ್ಟು: 620257635**<br>**ವೆಚ್ಚ: 669850000**<br>ಅಂತಿಮ ಶಿಲ್ಕು (–): 49592365<br><br>ಆದರೆ 2016–17ನೇ ಸಾಲಿನ ಪರಿಷ್ಕೃತ ಅಂದಾಜುವಿನಲ್ಲಿ<br><br>ಪ್ರಾರಂಭ ಶಿಲ್ಕು: 447257635<br>ಸ್ವೀಕೃತಿ: 190300000<br>ಒಟ್ಟು: 1115423316<br>ವೆಚ್ಚ: 194850000<br>ಅಂತಿಮ ಶಿಲ್ಕು: 920573316 |

| | |
|---|---|
| | ಅಂತಿಮ ಶಿಲ್ಕು ಧನಾತ್ಮಕವಾಗಿರುತ್ತದೆ. ವಿವರಗಳನ್ನು ಲೆಕ್ಕತಪಾಸಣೆಯ ಸಂದರ್ಭದಲ್ಲಿ ನೀಡಲಾಗಿರುತ್ತದೆ. |
| | **ವಿವರ** |
| 106 | **105. ನಗದು ಪುಸ್ತಕದ ಪರಿಶೀಲನೆ :–**<br><br>ಪರೀಕ್ಷಾ ಖಾತೆ–09 ಗೆ ಸಂಬಂಧಿಸಿದ ಬ್ಯಾಂಕ್ ಖಾತೆ ಸಂಖ್ಯೆ– SBI A/c No.54035420128 ರ ನಗದು ಪುಸ್ತಕವನ್ನು ಪರಿಶೀಲಿಸಲಾಗಿ, ಆಗಸ್ಟ್–2016 ರ ಮಾಹೆಯಲ್ಲಿ ಪಾವತಿ ಕಾಲಂನಲ್ಲಿ ಆಂತರಿಕ ವರ್ಗಾವಣೆ ರೂ.65,48,194/–ಗಳು ಎಂದು ದಾಖಲಿಸಲಾಗಿದೆ. ಬ್ಯಾಂಕ್ ಸ್ಕ್ರೋಲ್‌ನಲ್ಲಿ ಸದರಿ ಮೊತ್ತದ ಬಗ್ಗೆ ವಿವರ ಅಥವಾ ಪ್ರತ್ಯೇಕವಾಗಿ ಮೊತ್ತದ ವಿವರ ಕಂಡು ಬಂದಿರುವುದಿಲ್ಲ. ಈ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದೆ (ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–22/7.12.2018) |
| | ಉತ್ತರ |
| | ರೂ. 65,48,194/–ಗಳು ಪರೀಕ್ಷಾನಿಧಿ ಖಾತೆಗೆ (54035420128) ದಿನಾಂಕ 3.8.2016ರಂದು ಜಮೆಯಾಗಿರುತ್ತದೆ. ಸದರಿ ಮಾಹಿತಿಯನ್ನು ಬ್ಯಾಂಕ್ ಸ್ಕ್ರೋಲ್‌ನೊಂದಿಗೆ ಲೆಕ್ಕತಪಾಸಣೆ ಸಮಯದಲ್ಲಿ ಸಲ್ಲಿಸಲಾಗಿದೆ. |
| | **ವಿವರ** |
| 107 | **106. ಪರೀಕ್ಷಾ ನಿಧಿ ಖಾತೆಯ (09) ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ :–**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆ ಪ್ರಾರಂಭಿಕ ದಿನಾಂಕ:02.11.2018 ರಂದು ಪರೀಕ್ಷಾ ನಿಧಿ ಖಾತೆಯ(09) ರಶೀದಿಪುಸ್ತಕ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 192 ರಶೀದಿ ಪುಸ್ತಕಗಳು ಉಪಯೋಗಿಸದೆ ಖಾಲಿ ಉಳಿದಿರುತ್ತದೆ ಹಾಗೂ ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ, ವಿವರ ಕೆಳಕಂಡಂತಿದೆ. |

| ಕ್ರ.ಸಂ | ರಶೀದಿ ಪುಸ್ತಕಗಳ ಸಂಖ್ಯೆ | | ಒಟ್ಟು |
|---|---|---|---|
| | ಇಂದ | ವರೆಗೆ | |
| 1 | 253 | 290 | 38 |
| 2 | 331 | 345 | 15 |
| 3 | 662 | 800 | 139 |
| | | **ಒಟ್ಟು** | **192** |

| | |
|---|---|
| | ಉತ್ತರ |
| | ಯಾವುದೇ ಕ್ರಮಯಿರುವುದಿಲ್ಲ. |
| | **ವಿವರ** |
| 108 | **107. 2016–17ನೇ ಸಾಲಿಗೆ ಪರೀಕ್ಷಾ ನಿಧಿ ಖಾತೆಯಲ್ಲಿ ಉಪಯೋಗಿಸಿರುವ ಪುಸ್ತಕಗಳ ಪರಿಶೀಲನೆ :–**<br><br>2016–17ನೇ ಸಾಲಿನ ಪರೀಕ್ಷಾ ನಿಧಿ ಖಾತೆಯ (09) ರಶೀದಿ ಪುಸ್ತಕಗಳನ್ನು ಉಪಯೋಗಿಸಿಕೊಂಡು |

ವಿವಿಧ ಶುಲ್ಕಗಳನ್ನು ವಸೂಲಿಸಿದ್ದು, ಪ್ರತಿ ರಶೀದಿ ಪುಸ್ತಕದ ಸ್ವೀಕೃತಿಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಪುಸ್ತಕ ಮತ್ತು ದಿನಾಂಕ | | ವಸೂಲಿಸಿದ ಒಟ್ಟು ಮೊತ್ತ | ಷರಾ |
|---|---|---|---|---|---|
| | | ಇಂದ | ವರೆಗೆ | | |
| 1 | 643 | 057144/1.4.16 | 057150/1.4.16 | 4200 | ಹಿಂದಿನ ಭಾಗಶಃ ಈ ಸಾಲಿನಲ್ಲಿ ಪೂರ್ಣಗೊಳಿಸಿದೆ ಪೂರ್ಣ ಪರಿಶೀಲಿಸಿದೆ |
| 2 | 644 | 057151/1.4.16 | 057200/23.4.16 | 49350 | |
| 3 | 645 | 057201/23.4.16 | 057250/28.5.16 | 42500 | ಪೂರ್ಣ ಪರಿಶೀಲಿಸಿದೆ |
| 4 | 646 | 057251/28.5.16 | 057300/28.5.16 | 45450 | |
| 5 | 647 | 057301/28.5.16 | 057350/28.5.16 | 46000 | |
| 6 | 648 | 057351/28.5.16 | 057400/21.6.16 | 48750 | |
| 7 | 649 | 057401/23.6.16 | 57450/25.6.16 | 39800 | |
| 8 | 650 | 057451/25.6.16 | 57500/25.6.16 | 29050 | |
| 9 | 651 | 57501/25.6.16 | 57550/11.7.16 | 38700 | |
| 10 | 652 | 57551/11.7.16 | 57600/18.7.16 | 40440 | |
| 11 | 653 | 57601/18.7.16 | 57650/23.7.16 | 55900 | |
| 12 | 654 | 57651/23.7.16 | 57700/23.7.16 | 63900 | |
| 13 | 655 | 57701/23.7.16 | 57750/29.7.16 | 51000 | |
| 14 | 656 | 57751/29.7.16 | 57800/29.7.16 | 48000 | |
| 15 | 657 | 57801/29.7.16 | 57850/29.7.16 | 39400 | ಪೂರ್ಣ ಪರಿಶೀಲಿಸಿದೆ |
| 16 | 658 | 57851/29.7.16 | 57900/6.8.16 | 50800 | |
| 17 | 659 | 57901/6.8.16 | 57950/27.8.16 | 57400 | |
| 18 | 660 | 57951/27.8.16 | 58800/7.9.16 | 38200 | |
| 19 | 661 | 58001/14.9.16 | 58050/22.10.16 | 72539 | |
| 20 | 241 | 12001/22.10.16 | 12050/21.11.16 | 32150 | |
| 21 | 242 | 12051/21.11.16 | 12100/24.12.16 | 53100 | |
| 22 | 243 | 12101/24.12.16 | 12150/17.1.17 | 54500+7250 | |
| 23 | 244 | 12151/17.1.17 | 12200/20.1.17 | 36950 | |
| 24 | 245 | 12201/20.1.17 | 12250/28.1.17 | 35250 | |
| 25 | 246 | 12251/28.1.17 | 12293/1.4.17 | 42800 | 2016–17ನೇ ಸಾಲಿನವರೆಗೆ ಭಾಗಶಃ ಪರಿಶೀಲಿಸಿದೆ |
| | | | ಒಟ್ಟು ರೂ. | **11,23,379** | |

ರಶೀದಿ ಪುಸ್ತಕಗಳನ್ನು ಉಪಯೋಗಿಸುವಾಗ ಕ್ರಮಬದ್ದವಾಗಿ ಬಳಕೆಮಾಡಿರುವುದಿಲ್ಲ, 2016–17ನೇ ಸಾಲಿಗೆ ರಶೀತಿ ಪುಸ್ತಕದ ಸಂಖ್ಯೆ 643 ರಿಂದ 661 ರವರೆಗೆ ಉಪಯೋಗಿಸಿದ್ದು. ರಶೀತಿ ಪುಸ್ತಕ ಸಂಖ್ಯೆ 662

| | |
|---|---|
| | ರಿಂದ ಕ್ರಮಬದ್ಧವಾಗಿ ಮುಂದುವರೆಸಬೇಕಾಗಿರುತ್ತದೆ. ಆದರೆ ರಶೀದಿ ಪುಸ್ತಕವನ್ನು 662 ರ ಬದಲಾಗಿ ಪುಸ್ತಕ ಸಂಖ್ಯೆ 241 ರಿಂದ 246 ರವರೆಗೆ ಉಪಯೋಗಿಸಲಾಗಿದೆ. ಕ್ರಮ ಸಂಖ್ಯೆ ಅನುಗುಣವಾಗಿ ರಶೀತಿ ಪುಸ್ತಕಗಳನ್ನು ಬಳಕೆ ಮಾಡಲು ಸೂಚಿಸಿದೆ. |
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 109 | **108. ಪರೀಕ್ಷಾ ನಿಧಿ ಖಾತೆಯಲ್ಲಿ ರಶೀದಿ ಪುಸ್ತಕಗಳ ಮೂಲಕ ಸ್ವೀಕೃತಿಯಾಗಿರುವ ವಿವರ :–** |

2016–17ನೇ ಸಾಲಿನಲ್ಲಿ ಪರೀಕ್ಷಾ ನಿಧಿ ಖಾತೆಯ(09) ರಶೀದಿ ಪುಸ್ತಕಗಳನ್ನು ಉಪಯೋಗಿಸಿಕೊಂಡು ವಿವಿಧ ಶುಲ್ಕಗಳನ್ನು ವಸೂಲಿಸಿದ್ದು, ಪ್ರತಿ ರಶೀದಿ ಪುಸ್ತಕದ ಮಾಹೆಯಾನ ವರ್ಗೀಕೃತ ಸ್ವೀಕೃತಿಗಳು ಈ ಕೆಳಕಂಡಂತಿರುತ್ತದೆ. ಹಾಗೂ ಮಾಹೆಯಾನ ಸ್ವೀಕೃತಿ ಮತ್ತು ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಮಾಹೆ/ವರ್ಷ | ಒಟ್ಟು ಸ್ವೀಕೃತಿ | ಒಟ್ಟು ಜಮೆ |
|---|---|---|---|
| 1 | ಏಪ್ರಿಲ್/2016 | 57400 | 56800 |
| 2 | ಮೇ/2016 | 150400 | 147400 |
| 3 | ಜೂನ್/2016 | 103800 | 106800 |
| 4 | ಜುಲೈ/2016 | 333240 | 333840 |
| 5 | ಆಗಸ್ಟ್/2016 | 135550 | 135500 |
| 6 | ಸೆಪ್ಟೆಂಬರ್/2016 | 64189 | 64239 |
| 7 | ಅಕ್ಟೋಬರ್/2016 | 43050 | 43050 |
| 8 | ನವೆಂಬರ್/2016 | 31300 | 29850 |
| 9 | ಡಿಸೆಂಬರ್/2016 | 82200 | 83650 |
| 10 | ಜನವರಿ/2017 | 86550 | 86550 |
| 11 | ಫೆಬ್ರವರಿ/2017 | 17700 | 14950 |
| 12 | ಮಾರ್ಚ್/2017 | 18000 | 20750 |
| | **ಒಟ್ಟು ರೂ.** | **1123379** | **1123379** |

| | |
|---|---|
| | ಉತ್ತರ |
| | ಯಾವುದೇ ಕ್ರಮವಿರುವುದಿಲ್ಲ. |
| | **ವಿವರ** |
| 110 | **109. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬೋಧಕ/ಬೋಧಕೇತರ ವರ್ಗದವರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವರ :–** |
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬೋಧಕ/ಬೋಧಕೇತರ ವರ್ಗದವರ ಒಟ್ಟು |

ಮಂಜೂರಾದ ಹುದ್ದೆ, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಅನುಬಂಧ (31) ರಲ್ಲಿ ವಿವರಿಸಿದೆ.

ಬೋಧಕವರ್ಗ :–

| Sl.No | Name of the Post | pay schale | Posts created | Post filled | Vacant post |
|---|---|---|---|---|---|
| 1 | Associate Professors | 37400-67000 with AGP 9000 | 07 | 06 | 01 |
| 2 | Associate Professors | 15600-39100 AGP 6000 | 100 | 77 | 23 |
| | | **Total** | **107** | **63** | **24** |

| Working strength of Teaching Facelity | | | | |
|---|---|---|---|---|
| **Sl.No** | **Name of the Post** | **Pay scale** | **Presently working** | **Remarks** |
| 1 | Professors | 37400-67000 with AGP 10000 | 06 | under CAS |
| 2 | Associate Professors | 37400-67000 With AGP 9000 | 09 | DR5 under CAS4 |
| 3 | Assistant Professors | 15600-39100 With AGP 6000 | 68 | DR40 Absorption 28 |
| | | **Total** | **83** | |

ಬೋಧಕೇತರ ವರ್ಗ :–

| ಕ್ರ. ಸಂ | ಮಂಜೂರಾದ ಹುದ್ದೆ ಅಧಿಕಾರಿ/ನೌಕರರು | ಕಾರ್ಯ ನಿರ್ವಹಿಸುತ್ತಿರು ವ ಹುದ್ದೆ | ಖಾಲಿ ಇರುವ ಹುದ್ದೆ | ತಾತ್ಕಾಲಿಕ ನೌಕರರ ಸಂಖ್ಯೆ | | ಹೆಚ್ಚುವರಿ |
|---|---|---|---|---|---|---|
| 1 | 574 | 221 | 353 | Office Asst for collabration institute<br>DEO –<br>ವಾಹನ ಚಾಲಕರು–<br>ದಿನಗೂಲಿ –<br>ದಿನಗೂಲಿ<br>(ಕಾರ್ಮಿಕ ಇಲಾಖೆ ದರದಲ್ಲಿ ರೂ.224.93/– ದಿನಕ್ಕೆ) | 25<br>1<br>3<br>170<br>35 | |
| | | | | ಒಟ್ಟು | **234** | |

| | |
|---|---|
| | ಉತ್ತರ |
| | ಯಾವುದೇ ಕ್ರಮವಿರುವುದಿಲ್ಲ. |
| | **ವಿವರ** |
| 111 | **110. ಎಂ.ಎಸ್ಸಿ ಪದವಿಗಳ ಪರೀಕ್ಷಾ ಕಾರ್ಯಕ್ಕೆ ಸಂಭಾವನೆ/ಸ್ಥಳೀಯಭತ್ಯೆ/ದಿನಭತ್ಯೆ ಪಾವತಿಸಲು ಹಣಕಾಸು/ ವ್ಯವಸ್ಥಾಪನಾ ಮಂಡಳಿ ಅನುಮೋದನೆ ಪ್ರತಿ ಒದಗಿಸದಿರುವುದು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2016–17ನೇ ಸಾಲಿನ ಪರೀಕ್ಷಾ ನಿಧಿ ಖಾತೆ–(09) ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಛೇರಿ ಆದೇಶ ಸಂಖ್ಯೆ–ಪ.ವಿ/ಎಂ.ಎಸ್ಸಿ/ಪ್ರಾಪಸಂ/2016–17 ದಿ:7.6.2016ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಎಲ್ಲಾ ಎಂ.ಎಸ್ಸಿ ಪದವಿಗಳ ಪ್ರಾಯೋಗಿಕ ಪರೀಕ್ಷೆಯ ಕಾರ್ಯಕ್ಕೆ ಸಂಭಾವನೆ/ಸ್ಥಳೀಯಭತ್ಯೆ/ದಿನಭತ್ಯೆ ಮತ್ತು ಸಂಭಾವನೆ ಪಾವತಿಸಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಣಕಾಸು ಸಮಿತಿ/ಶೈಕ್ಷಣಿಕ/ವ್ಯವಸ್ಥಾಪನಾಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ದರವನ್ನು ನಿಗದಿಪಡಿಸಿ ಆದೇಶಿಸಲಾಗಿದೆ ಹಾಗೂ ಓಚರುಗಳಲ್ಲಿ ಸಂಭಾವನೆ/ಭತ್ಯೆಗಳನ್ನು ಪಾವತಿಸಲಾಗಿರುವುದನ್ನು ಗಮನಿಸಿದೆ. ಸಭೆಯ ಅನುಮೋದನೆ ಪ್ರತಿಗಳು ಹಾಗೂ ಮಾನ್ಯ ಕುಲಾಧಿಪತಿಗಳಿಂದ ಅಂಗೀಕರಿಸಲಾದ ಆದೇಶ ಪ್ರತಿಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ 52/7.1.2019 ರಲ್ಲಿ ಕೋರಲಾಗಿದ್ದು, ಸದರಿ ವಿಭಾಗಗಳಲ್ಲಿ ಲಭ್ಯವಿರುತ್ತದೆಯೆಂದು ತಿಳಿಸಿದೆ. ಉತ್ತರವು ಸಮಂಜಸವಾಗಿರದೆ ಸೂಕ್ತ ಆದೇಶ ಪ್ರತಿಗಳನ್ನು ಹಾಜರುಪಡಿಸುವರೆಗೆ ಪಾವತಿಸಲಾದ ಮೊತ್ತ **ರೂ.2,15,747/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು ಅನುಬಂಧ (32) ರಲ್ಲಿ ನೀಡಿದೆ. |
| | ಉತ್ತರ |
| | 2016–17ನೇ ಸಾಲಿಗೆ ಪರೀಕ್ಷಾ ನಿಧಿ ಖಾತೆ (09)ಗೆ ಸಂಬಂಧಿಸಿದಂತೆ ಕರಾಮುವಿಯ ಎಲ್ಲಾ ಎಂ.ಎಸ್ಸಿ. ಪದವಿಗಳ ಪ್ರಾಯೋಗಿಕ ಪರೀಕ್ಷೆಯ ಕಾರ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಎಂ.ಎಸ್ಸಿ, ವಿಭಾಗಗಳ ಮುಖ್ಯಸ್ಥರುಗಳ ಮೂಖಾಂತರ ಎಸಿ/ಎನ್‌ಡಿಸಿ ಹುಂಡಿಗಳ ಕಾರ್ಯಗಳನ್ನು ನಿರ್ವಹಿಸಿದ್ದು, ಹಣಕಾಸು ವಿಭಾಗಕ್ಕೆ ಸಲ್ಲಿಸಿರುತ್ತಾರೆ ಈ ಸಂಬಂಧಿತ ಭತ್ಯೆಗಳಿಗೆ ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ತುರ್ತು ಅನಿವಾರ್ಯತೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪೂರ್ಣಗೊಳಿಸಲಾಗಿದೆ.<br><br>ಸದರಿ ಎಲ್ಲಾ ಎಂ.ಎಸ್ಸಿ. ಪದವಿಗಳ ಪ್ರಾಯೋಗಿಕ ಪರೀಕ್ಷೆಯ ಕಾರ್ಯಕ್ಕೆ ಸಂಭಾವನೆ/ಸ್ಥಳಿಯ ಭತ್ಯೆ/ದಿನಭತ್ಯೆ ಮತು ಸಂಭಾವನೆ ಪಾವತಿಸಲು ದರವನ್ನು ನಿಗದಿಪಡಿಸಿದ ಸಂಬಂಧ ವಿಷಯವನ್ನು ಮುಂಬರುವ ಹಣಕಾಸು ಸಮಿತಿ, ಶೈಕ್ಷಣಿಕ ಸಮಿತಿ ಹಾಗೂ ವ್ಯವಸ್ಥಾಪನಾ ಸಭೆಯಲ್ಲಿ ಘಟನೋತ್ತರ ಅನುಮೋದನೆಗೆ ಮಂಡಿಸಿ ಸದರಿ ಆದೇಶವನ್ನು ಪರಿಷ್ಕರಿಸಲಾಗುವುದು ಇದನ್ನು ಪರಿಗಣಿಸಿ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | ವಿವರ |
|---|---|
| 112 | **<u>111. ಬೋಧಕ ವರ್ಗದವರನ್ನು ಬೋಧಕೇತರ ವರ್ಗದ ಹುದ್ದೆಗಳಿಗೆ ನಿಯೋಜಿಸಿ ಯುಜಿಸಿ ವೇತನ ಪಾವತಿಸಿರುವುದು :–</u>** |

ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪತ್ರಸಂಖ್ಯೆ–ಇಡಿ190ಯುಎನ್ಇ2007 ದಿ:20.12.2007 ಮತ್ತು ಜಂಟಿ ಕಾರ್ಯದರ್ಶಿ, ಯುಜಿಸಿ ನವದೆಹಲಿ ಇವರ ಪತ್ರಸಂಖ್ಯೆ–ಎಫ್16/ಎಸ್ಎನ್ಆರ್ಜ/02/ಪಿಎಸ್05 ದಿನಾಂಕ:5.2.2007 ರ ರೀತ್ಯಾ ಬೋಧಕೇತರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಯುಜಿಸಿ ವೇತನ ಪಾವತಿಸುವ ಅವಕಾಶವಿರುವುದಿಲ್ಲ. ಬೋಧಕೇತರ ಸಿಬ್ಬಂದಿಗೆ ಅನ್ವಯವಾಗುವ ರಾಜ್ಯ ವೇತನ ಶ್ರೇಣಿಯಲ್ಲಿ ಸದರಿಯವರು ಕಾರ್ಯನಿರ್ವಹಿಸುವ ಹುದ್ದೆಗೆ ಸಮಾನವಾದ ವೇತನ ಪಡೆಯಬೇಕಾಗಿರುತ್ತದೆ. ಆದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2016–17ನೇ ಸಾಲಿಗೆ ಹಲವು ಬೋಧಕೇತರ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿರುವ ಬೋಧಕ ಸಿಬ್ಬಂದಿಗಳು ಯುಜಿಸಿ ವೇತನವನ್ನೇ ಡ್ರಾ ಮಾಡಲಾಗಿದ್ದು, ಇದರಿಂದ ವಿ.ವಿ.ನಿಲಯಕ್ಕೆ ಆರ್ಥಿಕ ಹೊರೆ ಉಂಟಾಗಿರುತ್ತದೆ. ಹಾಗೂ ಸರ್ಕಾರದ ಸುತ್ತೋಲೆಯ ಉಲ್ಲಂಘನೆಯಾಗಿರುತ್ತದೆ. ವಿವರ ಕೆಳಕಂಡಂತಿದೆ.

**<u>2016–17ನೇ ಸಾಲಿನಲ್ಲಿ ಬೋಧಕ ವರ್ಗದವರನ್ನು ಬೋಧಕೇತರ ಹುದ್ದೆಗಳಿಗೆ ನಿಯೋಜಿಸಿ ಯುಜಿಸಿ ವೇತನ ಪಾವತಿಸಿರುವ ವಿವರ:–</u>**

| ಕ್ರ.ಸಂ | ಹೆಸರು | ಹುದ್ದೆ | ಮೊಬಲಗು |
|---|---|---|---|
| 1 | ಡಾ॥ ಎನ್.ಜಿ.ರಾಜು ಸಹಾಯಕ ಪ್ರಾಧ್ಯಾಪಕರು ಜೈವಿಕ ತಂತ್ರಜ್ಞಾನ ವಿಭಾಗ | Special officer UGC Cell | 708043 |
| 2 | ಡಾ॥ ಎಂ.ಎಸ್. ರಮಾನಂದ ಸಹ ಪ್ರಾಧ್ಯಾಪಕರು ಅರ್ಥಶಾಸ್ತ್ರ | ಉಪಕುಲಸಚಿವರು General section | 821035 |
| 3 | ಡಾ॥ ಸಿ. ಮಹದೇವಮೂರ್ತಿ ಸಹಪ್ರಾಧ್ಯಾಪಕರು ನಿರ್ವಹಣಾ ವಿಭಾಗ | ಉಪಕುಲಸಚಿವರು ಡೀನ್(ಅಧ್ಯಯನಕೇಂದ್ರ) ವಿಭಾಗ | 1516929 |
| 4 | ಡಾ॥ ಷಣ್ಮುಖ ಸಹಾಯಕ ಪ್ರಾಧ್ಯಾಪಕರು ಶಿಕ್ಷಣ ವಿಭಾಗ | Special officer ಡೀನ್(ಶೈಕ್ಷಣಿಕ) ವಿಭಾಗ | 699367 |
| 5 | ಡಾ॥ ಶೆಲ್ವಪಿಳ್ಳೈ ಅಯ್ಯಂಗಾರ್ ಸಹಾಯಕ ಪ್ರಾಧ್ಯಾಪಕರು ಪ್ರಾಚೀನ ಇತಿಹಾಸ ವಿಭಾಗ | ಉಪಕುಲಸಚಿವರು ಪರೀಕ್ಷಾ ವಿಭಾಗ | 824646 |
| 6 | ಡಾ॥ ಎನ್.ಕೃಷ್ಣಪ್ಪ ಸಹಾಯಕ ಪ್ರಾಧ್ಯಾಪಕರು ಶಿಕ್ಷಣ ವಿಭಾಗ | ಉಪಕುಲಸಚಿವರು ಪರೀಕ್ಷಾ ವಿಭಾಗ | 699367 |
| 7 | ಶ್ರೀ ಎಸ್. ಹರೀಶ್ ಸಹಾಯಕ ಪ್ರಾಧ್ಯಾಪಕರು ಅರ್ಥಶಾಸ್ತ್ರ | Maintance officer Guest House | 708043 |

| | | | |
|---|---|---|---|
| | ವಿಭಾಗ | | |
| 8 | ಡಾ॥ ವೈ.ಪಿ.ಚಂದ್ರಶೇಖರ್ ಸಹಾಯಕ ಪ್ರಾಧ್ಯಾಪಕರು ಭೂಗೋಳಶಾಸ್ತ್ರ ವಿಭಾಗ | ಉಪಕುಲಸಚಿವರು ಸಾಮಾನ್ಯ ವಿಭಾಗ | 307329 |
| | | **ಒಟ್ಟು ರೂ.** | **62,84,759/–** |

2016–17ನೇ ಸಾಲಿನ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ನಿಯೋಜಿತ ಆಡಳಿತಾತ್ಮಕ ಹುದ್ದೆಗಳಲ್ಲಿ ಬೋಧಕ ವರ್ಗದವರು ಕಾರ್ಯನಿರ್ವಹಿಸುತ್ತಿದ್ದು, ಇದನ್ನು ತಪ್ಪಿಸಿ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿ ಬೋಧಕೇತರ ಹುದ್ದೆಗಳಿಗೆ ಅನ್ವಯವಾಗುವಂತೆ ವೇತನ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವೇತನ ಶ್ರೇಣಿವಹಿ (Scale Register) ನಿರ್ವಹಿಸಿರುವುದಿಲ್ಲವಾದ್ದರಿಂದ ನಿರ್ದಿಷ್ಟವಾಗಿ ಹೆಚ್ಚುವರಿ ಪಾವತಿಸಲಾದ ಮೊತ್ತವನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಬೋಧಕೇತರ ಹುದ್ದೆಗಳಲ್ಲಿ ಹೆಚ್ಚುವರಿ ಪಾವತಿಸಿರುವುದನ್ನು ಲೆಕ್ಕಚಾರ ಮಾಡಿ ವ್ಯತ್ಯಾಸದ ಮೊತ್ತವನ್ನು ವಸೂಲಿಸಿ ವಿವರವನ್ನು ಹಾಜರುಪಡಿಸುವಂತೆ ಸೂಚಿಸಿದೆ.

ಉತ್ತರ

ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ), ಡೀನ್ (ಶೈ) ಹಣಕಾಸು ಅಧಿಕಾರಿಗಳು, ಈ ಹುದ್ದೆಗಳು ಶಾಸನಬದ್ಧ ಹುದ್ದೆಗಳಾಗಿದ್ದು, ಕರಾಮುವಿ ಕಾಯ್ದೆಯನ್ವಯ ಸದರಿ ಹುದ್ದೆಗಳ ನೇಮಕಾತಿಗೆ ತನ್ನದೆಯಾದ ನೀತಿ ನಿಯಮಗಳನ್ನು ಹೊಂದಿರುತ್ತದೆ. ಡೀನ್ (ಅ.ಕೇಂ) ಸಹ ಅಧಿಕಾರಿ ಹುದ್ದೆಯಾಗಿರುತ್ತದೆ. ಈ ಹುದ್ದೆಗಳಿಗೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳನ್ನು ನಿಯೋಜಿಸಲಾಗಿರುತ್ತದೆ. ಈ ಮೇಲಿನ ಹುದ್ದೆಗಳು ವೇತನ ಶ್ರೇಣಿ ರಹಿತ ಹುದ್ದೆಗಳಾಗಿರುತ್ತವೆ. ವಿ.ವಿ.ನಿಲಯದಲ್ಲಿ ಬೋಧನಾ ವರ್ಗದವರು ಬೋಧಕೇತರ ವರ್ಗದ ಹುದ್ದೆಗಳಲ್ಲಿ ಹೆಚ್ಚುವರಿಯಾಗಿ ನಿಯೋಜಿಸಲಾಗಿರುತ್ತದೆ. ಇವರಿಗೆ ಯಾವುದೇ ಹೆಚ್ಚುವರಿ ಭತ್ಯೆಗಳನ್ನು ನೀಡಿರುವುದಿಲ್ಲ ಮತ್ತು ಈ ಸಂಬಂಧದ ಆದೇಶಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಿದೆ.ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಪ್ರಾಧ್ಯಾಪಕರುಗಳಿಗೆ ವೇತನದ ಹೊರತಾಗಿ ಯಾವುದೇ ಹೆಚ್ಚುವರಿ ಭತ್ಯೆಗಳನ್ನು ಪಾವತಿಸಿರುವುದಿಲ್ಲ. ಬೋಧಕ ವರ್ಗದ ಪ್ರಾಧ್ಯಾಪಕರು ಶಾಸನಬದ್ಧ ಆಡಳಿತಾತ್ಮಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಆಡಳಿತ ಹುದ್ದೆಗಳಾಗಿರುವುದರಿಂದ (ಕುಲಸಚಿವ (ಪರೀಕ್ಷಾಂಗ), ಡೀನ್ (ಶೈ) ಹಾಗೂ ಅಧ್ಯಯನ ಕೇಂದ್ರ) ಯು.ಜಿ.ಸಿ.ಯ ಮಾರ್ಗಸೂಚಿಯನುಸಾರ ವೇತನ ಪಾವತಿ ನಿಯಮ ಬಾಹಿರವಾಗಿರುವುದಿಲ್ಲ. ಆದ್ದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

**ವಿವರ**

113 **<u>112. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪ್ರಾದೇಶಿಕ ಕೇಂದ್ರಗಳಿಗೆ ಪ್ರಾದೇಶಿಕ ನಿರ್ದೇಶಕರುಗಳನ್ನು ನಿಯಮಬಾಹಿರವಾಗಿ ನೇಮಕಾತಿ ಮಾಡಿರುವ ಬಗ್ಗೆ ಮತ್ತು ವೇತನ ಪಾವತಿಸಿರುವುದರ</u>**

**ಕುರಿತು:–**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 21 ಪ್ರಾದೇಶಿಕ ಕೇಂದ್ರಗಳಲ್ಲಿ 2016–17ನೇ ಸಾಲಿಗೆ 20 ಪ್ರಾದೇಶಿಕ ನಿರ್ದೇಶಕರುಗಳನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.36,200/–ಗಳನ್ನು ಪಾವತಿಸುವ ಮೇರೆಗೆ 6 ತಿಂಗಳ ಅವಧಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2ನೇ ಅನುಸೂಚಿಯ ಮೊದಲನೆ ಪರಿನಿಯಮದ ಕ್ಲಾಸ್ 2(9) (III) ರಡಿಯಲ್ಲಿನ ಅಧಿಕಾರದನ್ವಯ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ 2016–17ನೇ ಸಾಲಿಗೆ ಸಂಖ್ಯೆ–20 ಪ್ರಾದೇಶಿಕ ನಿರ್ದೇಶಕರುಗಳಿಗೆ ಒಟ್ಟು ರೂ.88,90,736/–ಗಳ ವೇತನ ಪಾವತಿಸಲಾಗಿದೆ. ಸದರಿ ನೇಮಕಾತಿಯು ವರದಿ ಮಾಡಿಕೊಂಡ ದಿನಾಂಕದಿಂದ 6 ತಿಂಗಳ ಅವಧಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಈ ನೇಮಕಾತಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿಕೃತ ಜ್ಞಾಪನ ಪತ್ರಸಂಖ್ಯೆ–ಕರಾಮುವಿ/ಆವಿ/ಸಿಬ್ಬಂದಿ–2/ಪಾನಿವೇ03/2010–11 ದಿ:12.08.2010ರಲ್ಲಿ ಆದೇಶ ಹೊರಡಿಸಲಾಗಿದ್ದು ನೇಮಕಾತಿ ನಿಯಮಗಳಿಗೆ ಕೆಳಕಂಡಂತೆ ಷರತ್ತುಗಳನ್ನು ವಿಧಿಸಲಾಗಿದೆ.

(1) ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾದದ್ದು, ಯಾವುದೇ ಖಾಯಂ ಹುದ್ದೆಗೆ ಎದುರಾಗಿ ನೇಮಕ ಮಾಡಿರುವುದಿಲ್ಲ ಮತ್ತು ಹುದ್ದೆಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ.

(2) ಆಯ್ಕೆಗೊಂಡ ಅಭ್ಯರ್ಥಿಗೆ ತಿಂಗಳಿಗೆ ಒಂದು ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಬಹುದಾಗಿದ್ದು, ಉಳಿದಂತೆ ಯಾವುದೇ ರೀತಿಯ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಕೆಲಸ ನಿರ್ವಹಿಸುತ್ತಿರುವವರ ವಿವರಗಳು:–**

| ಕ್ರ.ಸಂ | ಪ್ರಾದೇಶಿಕ ನಿರ್ದೇಶಕರ ಹೆಸರು | ಪ್ರಾದೇಶಿಕ ಕೇಂದ್ರ |
|---|---|---|
| 1 | ಡಾ॥ ಎಚ್. ಮಲ್ಲಿಕಾರ್ಜುನ | ಬಳ್ಳಾರಿ |
| 2 | ಡಾ॥ ಮಂಜುನಾಥ ಎಸ್. ಜೆ | ಧಾರವಾಡ |
| 3 | ರೋಹಿತ್ ಹೆಚ್.ಎಸ್. | ರಾಮನಗರ |
| 4 | ಲೋಕೇಶ್ ಆರ್ | ಮಲ್ಲೇಶ್ವರಂ, ಬೆಂಗಳೂರು. |
| 5 | ಗಿರೀಶ್ ಹೆಚ್.ಎನ್. | ಚಾಮರಾಜಪೇಟೆ,ಬೆಂಗಳೂರು |
| 6 | ಡಾ॥ ವಿಜಯ ಪ್ರಕಾಶ್ | ಕಾರವಾರ |
| 7 | ಡಾ॥ ಪಿ.ಹರೀಶ್ | ಹಾಸನ |
| 8 | ಡಾ॥ ಗೋಪಾಲ .ಪಿ | ಕೋಲಾರ |
| 9 | ನಂದಕುಮಾರಿ.ಕೆ | ಮಂಡ್ಯ |
| 10 | ಡಾ॥ ಜಗದೀಶ್ ಚಂದ್ರ.ಎಸ್ | ಕೋಲಾರ |
| 11 | ಹೆಚ್.ಎಲ್. ಮೋಹನ್‌ರಾಜ್ | ಶಿವಮೊಗ್ಗ |

| | | |
|---|---|---|
| 12 | ಡಾ||. ಬಿ.ಬಸವರಾಜು | ಬಿಜಾಪುರ |
| 13 | ಡಾ|| ಕೆ.ಪಿ.ಮಹಾಲಿಂಗಯ್ಯ | ಉಡುಪಿ |
| 14 | ಎಸ್. ಮಹದೇವ | ಚಾಮರಾಜನಗರ |
| 15 | ಜಗದೀಶ್.ಪಿ | ಚಿಕ್ಕಮಗಳೂರು |
| 16 | ಡಾ|| ಸಂಗಮೇಶ್ ಹಿರೇಮಠ | ಗುಲ್ಬರ್ಗಾ |
| 17 | ಎಂ.ಎಸ್. ಸಿದ್ಧರಾಜು | ಕೋಲಾರ |
| 18 | ಸುಧಾಕರ್.ಎಂ | ದಾವಣಗೆರೆ |
| 19 | ಡಿ. ದಿಲೀಪ | ರಾಮನಗರ |
| 20 | ಡಾ|| ಅನಂತ್.ಎಲ್.ಜಂಡೇಕರ್ | ಬೀದರ್ |

ಹುದ್ದೆಗಳ ಮಂಜೂರಾತಿ ಇಲ್ಲದೇ ಪ್ರಾದೇಶಿಕ ನಿರ್ದೇಶಕರುಗಳಿಗೆ ವೇತನ ಪಾವತಿಸುತ್ತಿರುವುದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದೆ. ಸರ್ಕಾರದಿಂದ ಈ ಹುದ್ದೆಗಳಿಗೆ ದೊರೆತಿರುವ ಅನುಮೋದನೆ ಆದೇಶಪ್ರತಿ ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಸ್ಟಾಚ್ಯೂಟ್ (statute) ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ 1994 ನಿಯಮ (41)ರ ಪ್ರಕಾರ ಈ ಅಧಿನಿಯಮದಡಿ ರಚಿತವಾದ ಪರಿನಿಯಮಗಳನ್ನು ರಾಜ್ಯ ವಿಧಾನಮಂಡಲದ ಉಭಯಸದನಗಳಿಗೆ ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲ. ಆದ್ದರಿಂದ ಪ್ರಾದೇಶಿಕ ನಿರ್ದೇಶಕರುಗಳ ನೇಮಕಾತಿ ನಿಯಮಬಾಹಿರವಾಗಿರುವುದರಿಂದ ಹಾಗೂ ತಾತ್ಕಾಲಿಕ ಗುತ್ತಿಗೆ ಆಧಾರಿತ ಪ್ರಾದೇಶಿಕ ನಿರ್ದೇಶಕರುಗಳಿಗೆ ಮೂಲವೇತನ ನಿಗದಿಪಡಿಸಿ ಪಾವತಿಸಲು ಅವಕಾಶವಿರುವುದಿಲ್ಲ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆಯ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ಕ್ಲಾಸ್ 2(9) (III) ರ ಪ್ರಕಾರ ನಿಯಮಪಾಲನೆ ಆಗದೆ 6 ತಿಂಗಳ ಅವಧಿಗೆ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿರುವ ತಾತ್ಕಾಲಿಕ ಪ್ರಾದೇಶಿಕ ನಿರ್ದೇಶಕರುಗಳಿಗೆ ಮೂಲವೇತನದೊಂದಿಗೆ ಭತ್ಯೆಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ. ನಿಯಮಬಾಹಿರವಾಗಿ 2016–17ನೇ ಸಾಲಿನಲ್ಲಿ ಮೂಲವೇತನದೊಂದಿಗೆ ಇತರೆ ಭತ್ಯೆಗಳನ್ನು ಸೇರಿಸಿ ಪಾವತಿಸಿರುವ **ಒಟ್ಟು ಮೊಬಲಗು ರೂ.88,90,736/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ (33)ರಲ್ಲಿ ನೀಡಲಾಗಿದೆ.**

ಉತ್ತರ

ಕರಾಮುವಿ ನಿಲಯವು ದೂರ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯದಡಿ ಕಾರ್ಯ ನಿರ್ವಹಿಸುತ್ತಿದ್ದು, ಸಾಂಪ್ರದಾಯಿಕ ವ್ಯವಸ್ಥೆಯಡಿ ಶಿಕ್ಷಣ ವಂಚಿತರಿಗೆ ಉನ್ನತ ಶಿಕ್ಷಣ ನೀಡುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯವು ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಈ ಪ್ರಾದೇಶಿಕ ಕೇಂದ್ರಗಳ ನಿರ್ವಹಣೆಗೆ ಪ್ರಾದೇಶಿಕ ನಿರ್ದೇಶಕರನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಪ್ರಾರಂಭಿಕ ಹಂತದಲ್ಲಿ ಮಾಹೆಯಾನ ರೂ:20,000/– ಗಳ ಗೌರವ ಸಂಭಾವನೆಯನ್ನು ಪಾವತಿಸುವ ಆಧಾರದ ಮೇಲೆ ನೇಮಕ ಮಾಡಿ ಕ್ರಮವಹಿಸಲಾಗಿರುತ್ತದೆ.

| | |
|---|---|
| | • ಇವರಿಗೆ ದಿನಾಂಕ:21.11.2012 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 121ನೇ ಸಭೆಯಲ್ಲಿ – ನೂತನ ಪ್ರಾದೇಶಿಕ ಕೇಂದ್ರಗಳಿಗೆ ಪ್ರಾದೇಶಿಕ ನಿರ್ದೇಶಕರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿರುವ ಪ್ರಕ್ರಿಯೆಗೆ ಅನುಮೋದನೆ ನೀಡಿ, ಅವರುಗಳ ವೇತನವನ್ನು ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಯಲ್ಲಿ ಅಂದರೆ 36,300 – 53,850ಗಳಲ್ಲಿ ರೂ: 100/– ಅನ್ನು ಕನಿಷ್ಠ ವೇತನದಲ್ಲಿ ರೂ:36,200/– ಗಳನ್ನು ಮಾತ್ರ ಮಾಸಿಕ ಸಂಚಿತ ವೇತನವಾಗಿ ನಿಗದಿಗೊಳಿಸಿ ದಿನಾಂಕ:01.12.2012 ರಿಂದ ಜಾರಿಗೊಳಿಸಲು ಹಾಗೂ ಇನ್ನು ಮುಂದೆ ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳ ಸೇವಾ ಅವಧಿಯನ್ನು ಮುಂದಿನ ಆದೇಶ ನೀಡುವವರೆವಿಗೂ ಮುಂದುವರೆಸಲಾಗುವುದು ಎಂದು ತೀರ್ಮಾನವಾಗಿರುತ್ತದೆ.<br>• ಅದರಂತೆ ಸದರಿಯವರುಗಳಿಗೆ ಪಾವತಿಸುತ್ತಿರುವ ಮಾಸಿಕ ಗೌರವ ಸಂಭಾವನೆಯನ್ನು ರೂ: 20,000/– ಗಳಿಂದ ಪ್ರಾದೇಶಿಕ ನಿರ್ದೇಶಕ ಹುದ್ದೆಗೆ ಅನ್ವಯಿಸುವ ಮೂಲ ವೇತನ ರೂ:36,300/– ಗಳಲ್ಲಿ ರೂ:100/– ಅನ್ನು ಕಡಿತಗೊಳಿಸಿ ಮಾಹೆಯಾನ ರೂ:36,200/– ಅನ್ನು ಪಾವತಿಸುವ ಆಧಾರದ ಮೇಲೆ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ಆದೇಶಿಸಿ ದಿನಾಂಕ:01.12.2012 ರಿಂದ ಜಾರಿಗೆ ತರಲಾಗಿರುತ್ತದೆ.<br>• ನಂತರ ದಿನಾಂಕ:28.12.2012ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 122ನೇ ಸಭೆಯಲ್ಲಿ – ಪ್ರಾದೇಶಿಕ ನಿರ್ದೇಶಕರುಗಳಿಗೆ ಮೂಲ ವೇತನ ರೂ:36,300/–ಗಳಲ್ಲಿ ರೂ:100/–ಅನ್ನು ಕಡಿತಗೊಳಿಸಿ DA, HRA, CCA ಇತರೆ ಭತ್ಯೆಗಳೊಂದಿಗೆ ವೇತನ ನಿಗದಿಪಡಿಸಲು ತೀರ್ಮಾನವಾಗಿರುತ್ತದೆ. ಅದರಂತೆ ದಿನಾಂಕ:01.01.2013 ರಿಂದ ಜಾರಿಗೆ ಬಂದಂತೆ ದಿನಾಂಕ:09.01.2013ರಂದು ಆದೇಶ ಹೊರಡಿಸಲಾಗಿರುತ್ತದೆ.<br>ಪ್ರಸ್ತುತ ಸದರಿ ಪ್ರಾದೇಶಿಕ ನಿರ್ದೇಶಕರುಗಳು ದಿ:01.07.2012ರಲ್ಲಿ ಜಾರಿಯಲ್ಲಿದ್ದ ಶೇಕಡ 4ರಷ್ಟು ತುಟ್ಟಿಭತ್ಯೆಯಲ್ಲಿ ಮುಂದುವರೆದಿರುತ್ತಾರೆ. ಮೇಲಿನ ಅಂಶಗಳನ್ನು ಪರಿಗಣಿಸಿ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 114 | **113. Online Programmeಗೆ ಸಂಬಂಧಿಸಿದಂತೆ M/s Schoolguru eduserve Private Ltd. Mumbai (ಸಹಭಾಗಿತ್ವ ಸಂಸ್ಥೆ) ಮೂಲಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕೋರ್ಸುಗಳ ಪ್ರವೇಶಾತಿ/ಪರೀಕ್ಷೆ ನಡೆಸಿರುವ ಬಗ್ಗೆ :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Online Programme ಶೈಕ್ಷಣಿಕ ಕೋರ್ಸುಗಳ SBI ಖಾತೆ ಸಂಖ್ಯೆ–64089378530 ಗೆ ಸಂಬಂಧಿಸಿದಂತೆ ಈ ಖಾತೆಯಿಂದ ಡಿ.ಡಿ.ಗಳು/ ಧನಾದೇಶಗಳಿಂದ ಸ್ವೀಕೃತವಾದ ರೂ.2,60,00,000/– (ರೂ. ಎರಡು ಕೋಟಿ ಅರವತ್ತು ಲಕ್ಷಗಳು ಮಾತ್ರ) ಮೊಬಲಗನ್ನು ಸಾಮಾನ್ಯ ನಿಧಿ ಖಾತೆ ಸಂಖ್ಯೆ–54035420117 ಬ್ಯಾಂಕ್ ಖಾತೆಗೆ ವರ್ಗಾಯಿಸಿರುವುದನ್ನು ಗಮನಿಸಿದೆ. ವಿವರ |

ಕೆಳಗಿನಂತಿದೆ.

**KSOU Online Programme SBI A/c.No -64089378530**

| | | |
|---|---|---|
| 28.08.2015 | Transfer to Generalfund A/c No.54035420117 | 2,00,00,000 |
| 28.08.2015 | Transfer to Generalfund A/c No.54035420117 | 60,00,000 |
| **ಒಟ್ಟು ರೂ.** | | **2,60,00,000** |

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Online Programmeಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಿದಾಗ M/s Schoolguru eduserve Private Ltd, Mumbai (ಸಹಭಾಗಿತ್ವ ಸಂಸ್ಥೆ) ಇವರ ಸಂಸ್ಥೆಯ ಮೂಲಕ 2014–15ರ ಸಾಲಿನ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದ 1891 ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಅಂಗೀಕರಿಸಬಾರದೆಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ–1/24/ಆನ್‌ಲೈನ್/2016–17 ದಿನಾಂಕ:05.05.2016ರ ಪತ್ರದಲ್ಲಿ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದವರು ತಿಳಿಸಿರುತ್ತಾರೆ. ಮುಂದುವರೆದು, KSOU/IT/04/2013–14ರ ಕಡತವನ್ನು ಪರಿಶೀಲಿಸಲಾಗಿ School guru ಸಹಭಾಗಿತ್ವ ಸಂಸ್ಥೆಯ ಮೂಲಕ 2014–15 ರಿಂದ ದಿ:31.1.2016 ರವರೆಗೆ (ಪರೀಕ್ಷಾ ವರ್ಷ) ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ–1896, ಪರೀಕ್ಷಾ ಶುಲ್ಕ–33,02,600/– ಗಳಾಗಿರುತ್ತದೆ ಎಂದು ದೃಢೀಕರಿಸಲಾಗಿದೆ. ಮೇಲಿನ ವಿವರಗಳನ್ನು ಪರಿಶೀಲಿಸಲಾಗಿ ಕೆಳಕಂಡ ಅಂಶಗಳು ಕಂಡು ಬಂದಿದ್ದು, ವಿವರಣೆಯನ್ನು ಕೋರಿ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:51/2.1.2019 ರಲ್ಲಿ ನೀಡಲಾಗಿದ್ದು, ಯಾವುದೇ ಉತ್ತರ ನೀಡಿರುವುದಿಲ್ಲ. ಕೆಳಗಿನ ಅಂಶಗಳಿಗೆ ಸೂಕ್ತ ವಿವರಣೆಯನ್ನು ನೀಡುವಂತೆ ಸೂಚಿಸಿದೆ.

(1) ಸಾಮಾನ್ಯ ನಿಧಿ ಖಾತೆಗೆ ವರ್ಗಾವಣೆಯಾದ ಶುಲ್ಕದ ಖರ್ಚು ವೆಚ್ಚದ ಮಾಹಿತಿ.

(2) ಪ್ರವೇಶಾತಿ ಪಡೆದ ಒಟ್ಟು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಮಾಹಿತಿ ಪರೀಕ್ಷಾ ನಂತರ ವಿದ್ಯಾರ್ಥಿಗಳ ಉತ್ತೀರ್ಣ/ಅನುತ್ತೀರ್ಣರಾದವರ ಸಂಖ್ಯೆ/ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿವಿಧ ಶೈಕ್ಷಣಿಕ ಕೋರ್ಸುಗಳಿಗೆ ವಿತರಿಸಿರುವ ಮಾಹಿತಿ ಹಾಗೂ ಉಳಿಕೆ ವಿವರಗಳನ್ನು ಒದಗಿಸುವುದು.

(3) School guru eduserve limited, Mumbai ಸಹಭಾಗಿತ್ವ ಸಂಸ್ಥೆಯನ್ನು ಮುಂದುವರೆಸಿರುವ ಬಗ್ಗೆ ಆದೇಶ ಪ್ರತಿಯನ್ನು ಒದಗಿಸುವುದು.

ಉತ್ತರ

ಲೆಕ್ಕಪರಿಶೋಧಕರು ಕೋರಿರುವ ಮಾಹಿತಿಯನ್ನು ಈಗಾಗಲೇ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿರುತ್ತದೆ. ಹಾಗೂ ಮತ್ತೊಮ್ಮೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗುವುದು.

ವಿವರ

115 **<u>114. ಬೋಧಕೇತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರ ಹಿಂದಿನ ಸೇವೆಯನ್ನು ರಜೆ/ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಿರುವ ಬಗ್ಗೆ :–</u>**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ Dr.M.S. Ramananda, Assistant Professor (Register evaluation) Sri.M, Gopala swamy Deputy Librarian ಇವರುಗಳ ಸೇವಾಪುಸ್ತಕ ಹಾಗೂ ಕಡತಗಳನ್ನು ಪರಿಶೀಲಿಸಿದಾಗ ಸದರಿ ಅಧಿಕಾರಿಗಳು ಹಿಂದಿನ ಸೇವೆ ಸಲ್ಲಿಸಿರುವ ಕಾರ್ಯಾಲಯದಿಂದ Terminal Benefits ನ್ನು ಧನಾದೇಶದ ಮೂಲಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಲಾಗಿದೆ. ಸೇವಾಪುಸ್ತಕಗಳಲ್ಲಿನ ವಿವರದ ಪ್ರಕಾರ ಅಧಿಕಾರಿಗಳ ಸೇವೆ ಸಲ್ಲಿಸಿರುವ ಹಿಂದಿನ ಕಛೇರಿಯಿಂದ ಪಿಂಚಣಿ ಸೇವಾ ಸೌಲಭ್ಯ, ರಜೆ ನಗದೀಕರಣ, DCRG ಮೊತ್ತ ಹಿಂದಿರಿಗಿಸಲಾಗಿದೆ. ವಿವರ ಕೆಳಗಿನಂತಿದೆ.

| **Dr.M.S. Ramananda** | |
|---|---|
| Gratuity (DCRC) | 3,12,504 |
| Service Gratuity (Proportimate pension liability) | 5,86,786 |
| Leave Encashment | 4,31,040 |
| **Total Rs.** | **13,30,330/-** |

| **M. Gopalaswamy** | |
|---|---|
| Pension | 9,83,264 |
| DCRG | 98,950 |
| **Total Rs.** | **10,82,214/-** |

ಹಿಂದಿನ ಸೇವೆಯ ರಜಾ ಲೆಕ್ಕವನ್ನು ನಗದೀಕರಿಸಿ ಧನಾದೇಶ ನೀಡಲಾಗಿದ್ದರೂ ಸಹ ಹಾಲಿ ಸೇವೆಯಲ್ಲಿನ ಹಕ್ಕಿನಲ್ಲಿರುವ ರಜೆ ಖಾತೆಯೊಂದಿಗೆ ಸೇರಿಸಿ ಮುಂದುವರೆಸಲಾಗಿದೆ. ಮತ್ತು ಹಿಂದಿನ ಸೇವೆಯನ್ನು ಪರಿಗಣಿಸಿ ಪಿಂಚಣಿ ಸೌಲಭ್ಯ ವಿಸ್ತರಿಸಿರುವ ಕುರಿತು ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದ ಪ್ರತಿಯನ್ನು ಮತ್ತು ಸರ್ಕಾರದ ಆದೇಶ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣೆ ಸಂಖ್ಯೆ–41/24.12.2018 ರಲ್ಲಿ ಕೋರಲಾಗಿದ್ದು. ಯಾವುದೇ ಮಾಹಿತಿ ಬಂದಿರುವುದಿಲ್ಲ. ಕೂಡಲೇ ವಿವರಗಳನ್ನು ಒದಗಿಸುವಂತೆ ಸೂಚಿಸಿದೆ. ಅಧಿಕಾರಿಗಳ ಸೇವಾವಿವರ ಕೆಳಗಿನಂತಿದೆ.

| ಕ್ರ.ಸಂ | ಹೆಸರು/ಪದನಾಮ | ಹಿಂದಿನ ಸೇವೆ ಸಲ್ಲಿಸಿದ ಕಛೇರಿ | ಅವಧಿ |
|---|---|---|---|
| 1 | Dr.MS. Ramananda, Assistant Professor | NCCT New Delhi | 04.05.1998 to 14.12.2012 (14 years, 7 months & 10 days) |

| | | | |
|---|---|---|---|
| | (Register evaluation) | | |
| 2 | Sri.M, Gopala swamy<br>Deputy Librarian | Coffee Board<br>Bangalore | 06.11.1997 to 28.11.2007<br>(10 years, & 22 days) |

ಉತ್ತರ

ಶ್ರೀ.ಎಂ.ಗೋಪಾಲಸ್ವಾಮಿ, ಇವರು ಕರಾಮುವಿ ನಿಲಯದಲ್ಲಿ ನೇರ ನೇಮಕಾತಿ ಮೂಲಕ ಉಪಗ್ರಂಥಪಾಲಕರ ಹುದ್ದೆಗೆ ನೇಮಕಗೊಂಡು ದಿ:29.11.2007ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ ಇವರು ಕರಾಮುವಿ ನಿಲಯದ ಸೇವೆಗೆ ಪೂರ್ವದಲ್ಲಿ ಕೇಂದ್ರ ಸರ್ಕಾರ ಸಾಮ್ಯದ ಕಾಫಿ ಬೋರ್ಡ್ ಸಂಸ್ಥೆಯಲ್ಲಿ ದಿ:6.11.2007ರಿಂದ ಸಹಾಯಕ ಗ್ರಂಥಪಾಲಕರಾಗಿ ಸೇವೆಸಲ್ಲಿಸುತ್ತಾ ಕರಾಮುವಿ ನಿಲಯದಲ್ಲಿನ ಉಪಗ್ರಂಥಪಾಲಕರ ಹುದ್ದೆಗೆ ಸಲ್ಲಿಸುವ ಸಂಬಂಧದಲ್ಲಿ ಅರ್ಜಿಯನ್ನು ಸಮೂಚಿತ ಮಾರ್ಗದಲ್ಲಿ ಸಲ್ಲಿಸಿರುತ್ತಾರೆ ಇವರಿಗೆ ಪೂರ್ವ ಸೇವೆಯಲ್ಲಿನ ಸೇವೆಯನ್ನು ಪರಿಗಣಿಸಿ ಸರ್ಕಾರದ ನಿರ್ದೇಶನದ ಮೇರೆಗೆ ಎಜಿಪಿಯನ್ನು ಪರಿಷ್ಕರಿಸಲಾಗಿದೆ.

ವಿ.ವಿ.ನಿಲಯದಲ್ಲಿ ಡಿಸೆಂಬರ್ 2012 ಅಂತ್ಯದಲ್ಲಿ ವಿವಿಧ ಅಧ್ಯಯನ ವಿಭಾಗಗಳಿಗೆ ನೇಮಕಗೊಂಡ ಅಧ್ಯಾಪಕರುಗಳು ಅವರ ನೇಮಕಾತಿ ಪೂರ್ವದಲ್ಲಿ ಬಾಹ್ಯ ವಿ.ವಿ.ನಿಲಯದಲ್ಲಿ ಸರ್ಕಾರದಲ್ಲಿ ಖಾಯಂ ಸೇವೆಯಲ್ಲಿದ್ದ ಅಧ್ಯಾಪಕರುಗಳಿಗೆ ಕೆಸಿಎಸ್ಆರ್ ನಿಯಮ 252 ಬಿ ಪರಿಗಣಿಸಿ ಬಿಓಎಂ 136ನೇ ಸಭೆಯ ತೀರ್ಮಾನದನ್ವಯ ಹಳೇಯ ಪಿಂಚಣಿ ಯೋಜನೆಯನ್ನು ಮುಂದುವರೆಸಲು ಹಾಗೂ ನೂತನ ಪಿಂಚಣಿ ವಂತಿಗೆ ಯೋಜನೆಯಡಿಯಲ್ಲಿ ವೇತನದಿಂದ ಕಟಾಯಿಸುವ ವಂತಿಗೆಯನ್ನು ಸ್ಥಗಿತಗೊಳಿಸಿ ವಂತಿಗೆಯನ್ನು ಮರು ಪಾವತಿಸಲು ದಿ: 2.11.2015ರಂದು ಆದೇಶ ಹೊರಡಿಸಿರುತ್ತಾರೆ. ಈ ಆದೇಶದನ್ವಯ ಡಾ.ಎಂ.ಎಸ್.ರಮಾನಂದ ಸಹ ಪ್ರಾಧ್ಯಾಪಕರು ಇವರ ವಿ.ವಿ.ನಿಲಯದಲ್ಲಿ ನೇಮಕಗೊಳ್ಳುವ ಪೂರ್ವದಲ್ಲಿ Regional Institute of Co-Oprative Management,Bangalore.ಯುಕ್ತ ದ್ವಾರದಲ್ಲಿ ಬಿಡುಗಡೆ ಹೊಂದಿ ಅಥವಾ ಸೇವೆಯನ್ನು ತ್ಯಜಿಸಿ ವಿ.ವಿ.ನಿಲಯಕ್ಕೆ ನೇಮಕ ಹೊಂದಿರುತ್ತಾರೆ.

ಅಂತವರ ಸೇವೆಯನ್ನು ನೇಮಕಾತಿಯನ್ನು ಹೊಸ ನೇಮಕಾತಿ ಎಂದು ಪರಿಗಣಿಸತಕ್ಕದಲ್ಲ ಎಂಬುದನ್ನು ಪರಿಗಣಿಸಿ ಇವರನ್ನು ನೂತನ ಪಿಂಚಣಿ ಯೋಜನೆಯಿಂದ ನಿಯುಕ್ತಿಗೊಳಿಸಿ ಹಳೇ ಪಿಂಚಣಿ ಯೋಜನೆಯನ್ನು ಮುಂದುವರೆಸಿ ಕಟಾಯಿಸಿರುವ ಎನ್.ಪಿ.ಎಸ್ ವಂತಿಗೆಯನ್ನು ಮರು ಪಾವತಿಸುವಂತೆ ಆದೇಶಿಸಲಾಗಿರುತ್ತದೆ ಅದರಂತೆಯೇ ಶ್ರೀ.ಎಂ.ಗೋಪಾಲಸ್ವಾಮಿ ಇವರು ಕರಾಮುವಿ ನಿಲಯದಲ್ಲಿ ಉಪಗ್ರಂಥಪಾಲಕರಾಗಿ ನೇಮಕಗೊಳ್ಳುವ ಪೂರ್ವದಲ್ಲಿ ಸೇವೆ ಸಲ್ಲಿಸುತ್ತಿದ್ದ ಕಾಫಿ ಬೋರ್ಡ್ ಸಂಸ್ಥೆಯಿಂದ ಸಂಸ್ಥೆಯ ಸೇವೆಯನ್ನು ವಿ.ವಿ.ನಿಲಯಕ್ಕೆ ಸೇರಿರುವ ಸೇವೆಯನ್ನು ಹೊಸ ನೇಮಕಾತಿಯೆಂದು ಪರಿಗಣಿಸದೆ ಹಳೇ ಪಿಂಚಣಿ ನಿವೃತ್ತಿ ಸೌಲಭ್ಯವನ್ನು ಮುಂದುವರೆಸಲು ಹಾಗೂ ಎನ್ ಪಿ ಎಸ್ ವಂತಿಗೆಯನ್ನು ಕಟಾಯಿಸುವುದನ್ನು ಸ್ಥಗಿತಗೊಳಿಸಿ

ದಿನಾಂಕ: 10.03.2018 ರಂದು ಆದೇಶಿಸಲಾಗಿರುತ್ತದೆ. ಪ್ರತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ನೀಡಲಾಗಿದೆ.

ಅದರಂತೆ ಸದರಿಯವರು ದಿನಾಂಕ: 06.11.2007 ರಿಂದ 28.11.2017ರವರೆಗೆ ಕಾಫಿ ಬೋರ್ಡ್ ಸಂಸ್ಥೆಯಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುವ ಅವಧಿಗೆ Senior Liaison officer (Admin) Coffee Board Government of India Ministry of Commerce & Industry Department of Commerce Bengaluruಇವರಿಗೆ ಲಭ್ಯವಾಗುವ Prorata Pension Rs.9,83,264/- KSOU Pension & DCRG Rs.98,590/-ಒಟ್ಟಾರೆ ರೂ.10,81,854 ಧನಾದೇಶವನ್ನು (022501) ದಿನಾಂಕ:1.10.2018 ವಿ.ವಿ.ನಿಲಯಕ್ಕೆ ನೀಡಿದ್ದು ಅದನ್ನು ವಿ.ವಿ..ನಿಲಯದ ಪಿಂಚಣಿ ನಿಧಿಗೆ ಜಮೆ ಮಾಡಲಾಗಿರುತ್ತದೆ. ಸದರಿಯವರು ದಿನಾಂಕ:06.11.2007 ರಿಂದ 28.11.2007ರವರೆಗೆ ಸಹಾಯಕ ಗ್ರಂಥಪಾಲಕರಾಗಿ Coffee Board Government of India Ministry of Commerce & Industry Department of Commerce Bengaluruಇಲ್ಲಿ ಕಾರ್ಯ ನಿರ್ವಹಿಸಿ ದಿನಾಂಕ:29.11.2007 ರಂದು ಕರಾಮುವಿ ನಿಲಯದಲ್ಲಿ ನೇಮಕಗೊಂಡಿದ್ದ ಉಪ ಸಹಾಯಕ ಗ್ರಂಥಪಾಲಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ ಈ ಹಿನ್ನಲೆಯಲ್ಲಿ ಸದರಿಯವರ ಮಾಹಿತಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ಪರಿಶೀಲಿಸಲು ಒದಗಿಸಿದೆ.

**ವಿವರ**

116

**115. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎರವಲು ಸೇವೆಯ ಮೇಲೆ ನಿಯೋಜನೆಯಲ್ಲಿರುವ ಅಧಿಕಾರಿಗಳ ರಜಾವಂತಿಕೆ ಮತ್ತು ಪಿಂಚಣಿವಂತಿಕೆಯನ್ನು ಮಾತೃಸಂಸ್ಥೆಗೆ ಪಾವತಿಸಿರುವುದು :–**

2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎರವಲು ಸೇವೆಯ ಅಧಿಕಾರಿಗಳ ರಜಾ ವಂತಿಕೆ ಮತ್ತು ಪಿಂಚಣಿ ವಂತಿಗೆಗಳನ್ನು ಪಾವತಿಸಿರುವ ವಿವರ ಕೆಳಗಿನಂತಿದೆ. ಹಾಗೂ ವಿಶ್ವವಿದ್ಯಾನಿಲಯಕ್ಕೆ ಎರವಲು ಸೇವೆಯ ಮೇಲೆ ನೌಕರರ ವರ್ಗದಲ್ಲಿ ನಿಯೋಜನೆಗೊಂಡಿರುವುದಿಲ್ಲವೆಂದು ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–3/9.11.2018 ಕ್ಕೆ ಅನುಪಾಲನಾ ವರದಿಯಲ್ಲಿ ತಿಳಿಸಿರುತ್ತಾರೆ.

**ಅಧಿಕಾರಿಗಳ ರಜಾ ವಂತಿಕೆ ಮತ್ತು ಪಿಂಚಣಿ ವಂತಿಕೆ ಪಾವತಿಸಿರುವ ವಿವರ :–**

| ಕ್ರ. ಸಂ | ಹೆಸರು/ಪದನಾಮ | ರಜಾ ವೇತನ ವಂತಿಗೆ | ಪಿಂಚಣಿ ವಂತಿಗೆ | ಒಟ್ಟು | ಪಾವತಿಸಿರುವ ವಿವರ. |
|---|---|---|---|---|---|
| 1 | ಪ್ರೊ॥ ಡಿ.ಶಿವಲಿಂಗಯ್ಯ ಕುಲಪತಿಗಳು ಕ.ರಾ.ಮು.ವಿ.ಮೈಸೂರು ಅವಧಿ 11.03.2016 ರಿಂದ 31.03.2017 | 1,04,589 | 1,18,851 | 223440 | ಧನಾದೇಶ ಸಂಖ್ಯೆ 092460/23.05.2017 |
| 2 | ಡಾ॥ ಎ.ಖಾದರ್‌ಪಾಷ ಹಣಕಾಸು ಅಧಿಕಾರಿಗಳು 01.03.2015 ರಿಂದ 31.03.2017 | 1,34,241 | 1,52,548 | 286789 | ಧನಾದೇಶ ಸಂಖ್ಯೆ 092572/05.07.17–152548 092573/05.07.17/134241 |

| | ಉತ್ತರ |
|---|---|
| | 2016–17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಎರವಲು ಸೇವೆಯ ಮೇಲೆ ನೌಕರ ವರ್ಗದಲ್ಲಿ ನಿಯೋಜನೆಗೊಂಡಿರುವುದಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. ಮುಂದುವರೆದು, ಅಧಿಕಾರಿಗಳ ಮಟ್ಟದಲ್ಲಿ ಎರವಲು ಸೇವೆಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿರುವವರ ವಿವರವನ್ನು ಸಲ್ಲಿಸುವಂತೆ ವಿವರವಾಗಿ ಕೋರಲಾಗಿ ಅದರಂತೆ 2016–17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಮಾನ್ಯ ಕುಲಪತಿಗಳಾದ ಪ್ರೋ.ಡಿ. ಶಿವಲಿಂಗಯ್ಯ ಹಾಗೂ ಹಣಕಾಸು ಅಧಿಕಾರಿಗಳಾದ ಡಾ.ಎ. ಖಾದರ್ ಪಾಷ್ ಇವರುಗಳ ರಜಾ ವಂತಿಕೆ ಮತ್ತು ಪಿಂಚಣಿ ವಂತಿಕೆಗಳನ್ನು ಪಾವತಿಸಿರುವ ಬಗ್ಗೆ ಕೇಳಲಾಗಿರುವ ವಿವರವನ್ನು ವಿವರದೊಂದಿಗೆ ಸಲ್ಲಿಸಲಾಗಿದೆ. |
| | **ವಿವರ** |
| 117 | **<u>116. IEM ಸಂಸ್ಥೆ, ಮುಂಬೈ ರವರಿಗೆ ಪ್ರಶ್ನೆ ಪತ್ರಿಕೆಗಳ ಮುದ್ರಣದ ವೆಚ್ಚದ ಪಾವತಿ ಸಂಬಂಧ ಸರ್ಕಾರದ ವಿನಾಯಿತಿ ಆದೇಶ ಪ್ರತಿ ಒದಗಿಸಿಲ್ಲದಿರುವುದು :–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2016–17ನೇ ಸಾಲಿಗೆ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯವನ್ನು IEM ಸಂಸ್ಥೆ, ಮುಂಬೈ ಇವರೊಂದಿಗೆ ದಿ:28.08.2012 ರಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅವರಿಗೆ ನೀಡಿರುವ Work Order No: KSOU/AB/GL-4/737/Software/2012-13 ದಿ:31.10.2012 ಮತ್ತು Extension of Work Order No: KSOU/IT/IEM/ Subfile/01/2015-16 ದಿ:02.11.2015 ರಲ್ಲಿ IEM/Subfile/01/2015-16 ದಿ:02.11.2015 ರಲ್ಲಿ IEM ಸಂಸ್ಥೆಯವರೇ ದಿ: 31.10.2015 ರಿಂದ ಮುಂದಿನ ಆದೇಶದವರೆಗೆ ಮುದ್ರಣ ಕಾರ್ಯ ನಿರ್ವಹಿಸಲು ಅನುಮೋದನೆ ನೀಡಲಾಗಿದೆ. ಅದರಂತೆ 2016–17 ನೇ ಸಾಲಿಗೆ IEM, Thane, Maharastra ರವರಿಗೆ ಪ್ರಶ್ನೆ ಪತ್ರಿಕೆ ಮುದ್ರಣ ವೆಚ್ಚದ ಬಾಬ್ತು ರೂ.1,29,89,667/–ಗಳನ್ನು ಪಾವತಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: PWD433 FC–3/2003 ದಿ: 19.08.2003 ರಲ್ಲಿ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯಕ್ಕಾಗಿ ಸರ್ಕಾರದಿಂದ ವಿನಾಯಿತಿ ಪತ್ರ ನೀಡಲಾಗಿದೆ. ಆದರೆ 2004 ರ ಸಾಲಿನಿಂದ ಪ್ರಸ್ತುತ ಸಾಲಿನವರೆಗೆ ಮುದ್ರಣ ಕಾರ್ಯಕ್ಕಾಗಿ ಸರ್ಕಾರದಿಂದ ವಿನಾಯಿತಿ ಪಡೆದಿರುವ (4G) ಆದೇಶ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:42/28.12.2018 ರಲ್ಲಿ ಕೋರಲಾಗಿದ್ದು. ಮಾಹಿತಿ ಇರುವುದಿಲ್ಲ, ವಿವರಗಳನ್ನು ಒದಗಿಸುವವರೆಗೆ ಮುದ್ರಣದ ವೆಚ್ಚ **ರೂ.1,29,89,667/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯವನ್ನು ವಿಶ್ವವಿದ್ಯಾನಿಲಯವು ಐ.ಇ.ಎಂ. ಸಂಸ್ಥೆ ಮುಂಬೈ ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಹಾಗು ಅವರಿಗೆ ನೀಡಿರುವ Work order No: KSOU/AB/GL-4/737/Software/2012-13 Dated: 31-10-2012 ಮತ್ತು Extension of Work |

| | |
|---|---|
| | order No: KSOU/IT/IEM Sub File/01/2015-16 Dated: 02-11-2015ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯವು ಐ.ಇ.ಎಂ. ಸಂಸ್ಥೆ ಮುಂಬೈ ಇವರಿಗೆ ವಹಿಸಲಾಗಿರುತ್ತದೆ.<br>ಐ.ಇ.ಎಂ. ಸಂಸ್ಥೆಯವರಿಗೆ ವಹಿಸುವ ಮುನ್ನ ವಿಶ್ವವಿದ್ಯಾನಿಲಯವು ಸರ್ಕಾರದ ಅಧಿಸೂಚನೆ ಸಂಖ್ಯೆ: PWD 433 FC-3/2003 ದಿ: 19–8–2003 ರಲ್ಲಿ 4(G) ವಿನಾಯಿತಿಯನ್ನು ಪಡೆದಿದ್ದು, ಹಾಗೂ ದಿ: 02–02–2002ರ 50ನೇ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಮೇರೆಗೆ ದಿನಾಂಕ: 12–02–2002ರ ಆದೇಶದಲ್ಲಿ ಪ್ರಶ್ನೆಪತ್ರಿಕೆಗಳ ಮುದ್ರಣಕ್ಕೆ ಖರೀದಿನಿಯಮಗಳಿಂದ ಹೊರತು ಪಡಿಸಿ ನೀಡಿರುವುದರಿಂದ ಅದೇ ರೀತಿ ಕ್ರಮವಹಿಸಲಾಗಿರುವುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.<br>ಪ್ರಶ್ನೆಪತ್ರಿಕೆಗಳ ಮುದ್ರಣ ಮತ್ತು ಪರೀಕ್ಷಾ ಕೇಂದ್ರಗಳಿಗೆ ರವಾನೆ ಕಾರ್ಯವು ಅತ್ಯಂತ ಗೌಪ್ಯತಾ ಕಾರ್ಯವಾಗಿದ್ದುದರಿಂದ, ಈ ಹಿಂದೆ ಸದರಿ ಕಾರ್ಯವನ್ನು ವಿಶ್ವವಿದ್ಯಾನಿಲಯದ ಪರವಾಗಿ ನಿರ್ವಹಿಸುತ್ತಿದ್ದ ಮಣಿಪಾಲ್ ಟೆಕ್ನಾಲಿಜೀಸ್, ಲಿ. ಮಣಿಪಾಲ್ ಇವರಿಂದಲೇ 2016–17ನೇ ಸಾಲಿಗೂ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯವನ್ನು ಮಾಡಿಸುವಂತೆ I.E.M ಸಂಸ್ಥೆ ರವರು, ಮಣಿಪಾಲ್ ಟೆಕ್ನಾಲಿಜೀಸ್, ಲಿ. ಮಣಿಪಾಲ್ ರವರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಕುಲಸಚಿವ (ಪರೀಕ್ಷಾಂಗ) ರವರು ಟ್ರೈ ಪಾರ್ಟಿ ಅಗ್ರಿಮೆಂಟ್ ಮಾಡಿಕೊಳ್ಳಲಾಗಿದ್ದು, ಸದರಿ ಕರಾರು ಒಪ್ಪಂದದ ದಿನಾಂಕ: 04–04–2013 ರಲ್ಲಿನ ಕ್ರಮ ಸಂಖ್ಯೆ: 02 ರಿಂದ 06 ರವರೆಗೆ ಪ್ರಶ್ನೆಪತ್ರಿಕೆಗಳ ಗೌಪ್ಯತೆ ಕಾಪಾಡುವ ಮಾಹಿತಿ ಇರುವುದನ್ನು ತಮ್ಮ ಗಮನಕ್ಕೆ ತರುತ್ತಾ, ಸದರಿ ಕರಾರು ಒಪ್ಪಂದವನ್ನು 2015 ಮತ್ತು 2016ರ ಸಾಲಿಗೂ ವಿಸ್ತರಿಸಲಾಗಿದ್ದು, ಪರಿಶೀಲಿಸಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | ವಿವರ |
| 118 | **117. ಸಹಭಾಗಿತ್ವ ಸಂಸ್ಥೆಗಳ ಅಧ್ಯಯನ ಕೇಂದ್ರಗಳ ವಿವರ/ವಿದ್ಯಾರ್ಥಿಗಳ ವಿವರ ಹಾಜರುಪಡಿಸದಿರುವುದು :–**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಒಳಪಡುವ ಸಹಭಾಗಿತ್ವ ಸಂಸ್ಥೆಗಳ ಒಟ್ಟು ವಿವರ ಸಹಭಾಗಿತ್ವ ಸಂಸ್ಥೆಗಳ ಅಧೀನದಲ್ಲಿ ಬರುವ ಅಧ್ಯಯನ ಪರೀಕ್ಷಾ ಕೇಂದ್ರಗಳ ವಿವರ ಹಾಗೂ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪರೀಕ್ಷಾ ವೆಚ್ಚದ ಮೊಬಲಗಿನ ದರ ನಿಗದಿಯಾದ ಆದೇಶ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:32/14.12.2018 ರಲ್ಲಿ ಕೋರಲಾಗಿದ್ದು ವಿವರ ಒದಗಿಸಿರುವುದಿಲ್ಲ. ಇದರಿಂದ ಪರೀಕ್ಷಾ ಅಧ್ಯಯನ ಕೇಂದ್ರಗಳ ವಿವರ, ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ವಿವರ ಸ್ಪಷ್ಟತೆ ಇರುವುದಿಲ್ಲ. ಶೀಘ್ರವಾಗಿ ಮಾಹಿತಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ. |
| | ಉತ್ತರ |
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಹಭಾಗಿತ್ವ ಸಂಸ್ಥೆಯಾದ ಭಾರತ್ ಪೋಸ್ಟ್ ಗ್ರ್ಯಾಜುಯೇಟ್ |

| | |
|---|---|
| | ಕಾಲೇಜ್ ಚೆನ್ನೈ. ಇವರಲ್ಲಿ ಪ್ರವೇಶಾತಿಯನ್ನು ಪಡೆದಿರುವ Re Registration and Arrear Students ಗಳಿಗೆ High Court of Madras ನ ಆದೇಶದಂತೆ ವಿಶ್ವವಿದ್ಯಾನಿಲಯದ ವತಿಯಿಂದ **ಬೆಂಗಳೂರಿನ 02 ಕೇಂದ್ರಗಳಾದ**<br><br>1) G.T Institute of Management Studies and Research ಮತ್ತು 2) Government Sri. Krishna Rajendra Silver Jubilee. Technical Institute (SKSJT) ಗಳಲ್ಲಿ ಪರೀಕ್ಷೆಗಳನ್ನು ನಡೆಸಿದೆ. ಪರೀಕ್ಷಾ ಶುಲ್ಕದ ವಿವರದ ಪಟ್ಟಿಯನ್ನು ಲೆಕ್ಕತಪಾಸಣಾ ಸಮಯದಲ್ಲಿ ನೀಡಲಾಗಿದ್ದು, ಅವಲೋಕಿಸಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ. |
| | ವಿವರ |
| 119 | **118. ತಾತ್ಕಾಲಿಕ ಅಂಕಪಟ್ಟಿಗಳ ಮುದ್ರಣ ಹಾಗೂ ವಿತರಣೆ ಬಗ್ಗೆ:–**<br><br>ಪರೀಕ್ಷಾ ನಿಧಿ ಖಾತೆ–(09) ಸಂಬಂಧಿಸಿದಂತೆ ತಾತ್ಕಾಲಿಕ ಅಂಕಪಟ್ಟಿಗಳ ಮುದ್ರಣ ಮತ್ತು ವಿತರಣೆ ಬಗ್ಗೆ (Blue Marks card) ವಿವರಗಳನ್ನು ವಹಿಯಲ್ಲಿ ಪರಿಶೀಲಿಸಿದಾಗ 2016–17ನೇ ಸಾಲಿಗೆ IEM ಸಂಸ್ಥೆಯವರಿಗೆ Duplicate Marks card Print-38000 Nos ಮುದ್ರಣ ಮಾಡಲು ಅಂಕಪಟ್ಟಿಗಳನ್ನು ನೀಡಲಾಗಿರುವುದನ್ನು ವಹಿಯಲ್ಲಿ ಗಮನಿಸಲಾಗಿದೆ. ತಾತ್ಕಾಲಿಕ ಅಂಕಪಟ್ಟಿಗಳನ್ನು ಸಂಸ್ಥೆಯವರಿಗೆ ನೀಡಿರುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆ. ದಾಸ್ತಾನುವಹಿಯಲ್ಲಿ ತಾತ್ಕಾಲಿಕ ಅಂಕಪಟ್ಟಿಗಳ ಬಳಕೆ, ವಿತರಣೆ ಕೋರ್ಸುಗಳ ವಿವರ ಹಾಗೂ ಉಳಿಕೆ ದಾಸ್ತಾನಿನ ವಿವರಗಳನ್ನು ನಮೂದಿಸಿ ದೃಢೀಕರಿಸಿರುವುದಿಲ್ಲ. ಈ ಕುರಿತು ವಿವರಣೆಯನ್ನು ಕೋರಿ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:43/24.12.2018 ರಲ್ಲಿ ನೀಡಲಾಗಿತ್ತು. ವಿಚಾರಣೆಗೆ ಉತ್ತರವಾಗಿ IEM ಸಂಸ್ಥೆಯವರು ವಿವರ ನೀಡಿದ ತಕ್ಷಣ ದಾಸ್ತಾನು ವಹಿಯಲ್ಲಿ ದೃಢೀಕರಿಸಲಾಗುವುದು ಎಂದು ತಿಳಿಸಿರುತ್ತಾರೆ. **ಮಾಹಿತಿಯನ್ನು ಒದಗಿಸುವವರೆಗೆ ರೂ.11,97,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | ವಿಶ್ವವಿದ್ಯಾನಿಲಯ ಪರೀಕ್ಷಾ ಗೌಪ್ಯತಾ ಕಾರ್ಯಗಳನ್ನು ನಿರ್ವಹಿಸಲು ಮೆ// ಐ.ಇ.ಎಂ ಸಂಸ್ಥೆಯೊಂದಿಗೆ ನಿಯಮಾನುಸಾರ ಒಡಂಬಡಿಕೆ (MOU) ಮಾಡಿಕೊಂಡಿದ್ದು, ಸದರಿ ಸಂಸ್ಥೆಯವರು ಪರೀಕ್ಷಾ ಸಂಬಂಧಿತ ಎಲ್ಲಾ ಗೌಪ್ಯತಾ ಕಾರ್ಯಗಳನ್ನು 2016–17ನೇ ಸಾಲಿನಲ್ಲಿ ನಿರ್ವಹಿಸಿದ್ದು, ಸದರಿ ಸಂಸ್ಥೆಯವರಿಗೆ ತಾತ್ಕಾಲಿಕ Markscard Print ಮಾಡಲು 38000 ಸಂಖ್ಯೆ ಅಂಕಪಟ್ಟಿಗಳನ್ನು ನೀಡಲಾಗಿದ್ದು, ವಿತರಿಸಲಾದ ತಾತ್ಕಾಲಿಕ ಅಂಕಪಟ್ಟಿಗಳ ಬಳಕೆ, ಕೋರ್ಸುಗಳ ವಿವರ ಹಾಗೂ ಉಳಿಕೆ ವಿವರಗಳನ್ನು ದಾಸ್ತಾನು ವಹಿಯಲ್ಲಿ ದೃಢೀಕರಿಸುವ ಸಂಬಂಧ ಮೆ// ಐ.ಇ.ಎಂ ಸಂಸ್ಥೆಯವರಿಗೆ ವಿತರಣೆಯ ವಿವರದ ಮಾಹಿತಿಯನ್ನು ನೀಡಲು ಪತ್ರವನ್ನು ನೀಡಲಾಗಿದ್ದು. ವಿವರವನ್ನು ಸದರಿ ಸಂಸ್ಥೆಯವರು ನೀಡಿದ ತಕ್ಷಣ ದಾಸ್ತಾನು ವಹಿಯಲ್ಲಿ |

| | |
|---|---|
| | ದೃಢೀಕರಿಸಲಾಗುವುದು. ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ ಆಕ್ಷೇಪಣೆ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ. |
| | ವಿವರ |
| 120 | **119. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಹಭಾಗಿತ್ವ ಸಂಸ್ಥೆಗಳನ್ನು ರದ್ದುಪಡಿಸಿದ ನಂತರ ಪರೀಕ್ಷಾ ವೆಚ್ಚ ಭರಿಸಿರುವ ಕುರಿತು. (51,56,700/–) :–**<br><br>2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳಾದ<br>1. Institute of Modern Studies, New Delhi - 75,340/-<br>2. King Education Trust, Gujrath - 50,81,360/-<br>**Total - 51,56,700/-**<br><br>ಮೇಲಿನ 2 ಸಂಸ್ಥೆಗಳಿಗೆ ಸಹಭಾಗಿತ್ವ ಸಂಸ್ಥೆಯ ಕೋರ್ಸ್‌ಗಳ ಪರೀಕ್ಷೆಗಳಿಗೆ ಸಂಬಂಧಿಸಿದ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳ ವೆಚ್ಚ ಮತ್ತು ಮೌಲ್ಯಮಾಪನ ಕಾರ್ಯಕ್ಕಾಗಿ ಒಟ್ಟು ರೂ.51,56,700/–ಗಳನ್ನು ಪಾವತಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: AB/EST–1/236/2011–12 ದಿನಾಂಕ:5.9.2015 ರ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಎಲ್ಲಾ ಸಹಭಾಗಿತ್ವ ಸಂಸ್ಥೆಗಳು ಮತ್ತು ಅವುಗಳ ಅಧ್ಯಯನ ಕೇಂದ್ರಗಳನ್ನು ದಿನಾಂಕ:05.09.2015 ರಂದು ರದ್ದುಗೊಳಿಸಲಾಗಿದೆ. ಸಹಭಾಗಿತ್ವ ಸಂಸ್ಥೆಗಳನ್ನು ರದ್ದುಗೊಳಿಸಿದ ನಂತರ ಕೇಂದ್ರಗಳ ಪರೀಕ್ಷಾ ವೆಚ್ಚವನ್ನು ಭರಿಸಿರುವುದು ಹಾಗೂ ಅಧ್ಯಯನ ಕೇಂದ್ರಗಳು ಮುಂದುವರಿದಿರುವ ಬಗ್ಗೆ ಮಂಜೂರಾತಿ ಆದೇಶ ಪ್ರತಿಯನ್ನು ಒದಗಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:29/13.12.2018 ಮತ್ತು 56/9.1.2019 ರಲ್ಲಿ ಕೋರಲಾಗಿದ್ದು, ಮಾಹಿತಿ ಲಭ್ಯವಿರುವುದಿಲ್ಲ. ವಿವರಗಳನ್ನು ಹಾಜರುಪಡಿಸುವವರೆಗೆ ಭರಿಸಲಾದ ಪರೀಕ್ಷಾ ವೆಚ್ಚದ ಮೊತ್ತ **ರೂ.51,56,700/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br><br>ಮುಂದುವರೆದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ರವರು King Education Trust Gujarat (Bengaluru) ಸಹಭಾಗಿತ್ವ ಸಂಸ್ಥೆಗೆ (45,73,224+ IT 5,08,136) ರೂ.50,81,360/– ಪರೀಕ್ಷಾ ವೆಚ್ಚ ಪಾವತಿಸಿರುವ ಡಿ.ಡಿ. ಸಂಖ್ಯೆ:000001/10.3.2017 ಹಾಗೂ ಸಂಸ್ಥೆಯವರು ಸ್ವೀಕರಿಸಿದ ಮೊತ್ತದ Acknowledgement ಪತ್ರದಲ್ಲಿ ನಮೂದಿಸಿರುವ ಡಿ.ಡಿ.ಸಂಖ್ಯೆಗೂ ವ್ಯತ್ಯಾಸವಿರುತ್ತದೆ. (ಡಿ.ಡಿ.ಸಂಖ್ಯೆ–Bank-HDFC ಸಂಖ್ಯೆ:004322/13.3.2017) ವ್ಯತ್ಯಾಸಕ್ಕೆ ಸೂಕ್ತ ವಿವರಣೆಯನ್ನು ಒದಗಿಸುವಂತೆ ಸೂಚಿಸಿದೆ. |
| | ಉತ್ತರ |
| | 2016–17ನೇ ಸಾಲಿನಲ್ಲಿ ಕ.ರಾ.ಮು.ವಿ.ಯ ಸಹಭಾಗಿತ್ವ ಸಂಸ್ಥೆಗಳಾದ Institute of Moden Studies, New Delhi, ಮತ್ತು King Education Trust, Gujarat (Bangalore) ಸಂಸ್ಥೆಗಳ ಕೋರ್ಸ್‌ಗಳ |

| | |
|---|---|
| | ಪರೀಕ್ಷೆಗಳಿಗೆ ಸಂಬಂಧಿಸಿದ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳ ವೆಚ್ಚ ಮತ್ತು ಮೌಲ್ಯಮಾಪನ ಕಾರ್ಯಕ್ಕಾಗಿ ಒಟ್ಟು ರೂ. 51,56,700/–ಗಳನ್ನು ಪಾವತಿಸಲಾಗಿದೆ. ಕ.ರಾ.ಮು.ವಿ.ಯ ಎಲ್ಲಾ ಸಹಭಾಗಿತ್ವ ಸಂಸ್ಥೆಗಳು ಮತ್ತು ಅವುಗಳ ಅಧ್ಯಯನ ಕೇಂದ್ರಗಳನ್ನು ರದ್ದುಗೊಳಿಸಲಾಗಿದೆ. ರದ್ದುಗೊಳಿಸಿದ ನಂತರ ಪರೀಕ್ಷೆಗಳು ನಡೆದಿರುವುದರ ಸಂಬಂಧವಾಗಿ ಎಲ್ಲಾ ಸಹಭಾಗಿತ್ವ ಸಂಸ್ಥೆಗಳನ್ನು ರದ್ದು ಗೊಳಿಸುವ ಮುನ್ನ ಪ್ರವೇಶಾತಿ ಪಡೆದ ಹಾಗೂ ಪುನಾರವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಿರುವುದಾಗಿ ಸಹಭಾಗಿತ್ವ ಸಂಸ್ಥೆಗಳ ಶಾಖೆಯವರು ತಿಳಿಸಿ, ಕಡತದಲ್ಲಿ ಪರೀಕ್ಷೆಗಳನ್ನು ನಡೆಸಿದ ಬಗೆಗೆ ನಮೂಸಿರುವುದರ ಪ್ರತಿಯನ್ನು ಲೆಕ್ಕ ತಪಾಸಣಾ ಸಮಯದಲ್ಲಿ ಸಲ್ಲಿಸಿರುವುದನ್ನು ತಮ್ಮ ಅವಗಾಹನೆಗೆ ತರುತ್ತಾ ಪರಿಶೀಲಿಸಿ ಆಕ್ಷೇಪಣೆಯಿಂದ ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 121 | **120. ಇ ಕಲಿಕಾ ತಂತ್ರಾಂಶ ಖರೀದಿಸಿದ್ದು, ಉಪಯೋಗವಾಗದಿರುವ ಬಗ್ಗೆ :–**<br><br>2015–16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಇ–ಕಲಿಕಾ ತಂತ್ರಾಂಶದ ಮೂಲಕ ವಿದ್ಯಾರ್ಥಿಗಳಿಗೆ ಇ–ಕಲಿಕೆಯನ್ನು ನಿರ್ವಹಿಸಲು ಮೆ. Sysoin consultancy Pvltd, 178/2 Govinda Rao street opposite to Shesharidripuram college, sheshadripuram ಬೆಂಗಳೂರು ರವರಿಗೆ ರೂ.7,02,00,000/– ಗಳನ್ನು ಪಾವತಿಸಿ ತಂತ್ರಾಂಶವನ್ನು ಖರೀದಿಸಿದ್ದು, ಈ ಬಗ್ಗೆ 2015–16ನೇ ಸಾಲಿನ ಲೆಕ್ಕತಪಾಸಣಾ ವರದಿ ಕಂಡಿಕೆ–39 ರಲ್ಲಿ ವಿವರಿಸಲಾಗಿದೆ. ಇ–ತಂತ್ರಾಂಶವನ್ನು ಅಳವಡಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಲೆಕ್ಕಪತ್ರ ವಿಚಾರಣಾ ಸಂಖ್ಯೆ:47/29.12.2018 ರಲ್ಲಿ ವಿವರಣೆ ಕೋರಲಾಗಿದ್ದು, ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಇದರಿಂದಾಗಿ 2016–17ನೇ ಸಾಲಿನಲ್ಲಿಯೂ ಇ–ಕಲಿಕಾ ತಂತ್ರಾಂಶ ಅನುಷ್ಠಾನಗೊಂಡಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಖರೀದಿಸಿರುವ ತಂತ್ರಾಂಶವು ವಿಶ್ವವಿದ್ಯಾನಿಲಯದ/ವಿದ್ಯಾರ್ಥಿಗಳ ಉಪಯೋಗಕ್ಕೆ ಬಾರದೇ ನಿಷ್ಪ್ರಯೋಜಕವಾದಂತಾಗಿದ್ದು ಇದಕ್ಕೆ ವೆಚ್ಚ ಮಾಡಿರುವ ರೂ.7,02,00,000/–ಗಳು ಫಲಪ್ರದ ವೆಚ್ಚಾಗಿರುವುದಿಲ್ಲವೆಂದು ಹಾಗೂ ವಿಶ್ವವಿದ್ಯಾನಿಲಯದ ಹಣವನ್ನು ಅನಗತ್ಯವಾಗಿ ವೆಚ್ಚ ಮಾಡಲಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಉಂಟಾಗಿರುತ್ತದೆ. ವಿಶ್ವವಿದ್ಯಾನಿಲಯದ ಹಣವನ್ನು ಸರಬರಾಜುದಾರರಿಗೆ ಅನಗತ್ಯವಾಗಿ ಸಂದಾಯ ಮಾಡಿದಂತಾಗಿದ್ದು, ಸರಬರಾಜುದಾರರಿಗೆ ಅನುಕೂಲವನ್ನು ಕಲ್ಪಿಸಿದಂತಾಗಿರುತ್ತದೆ. ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿಶ್ವವಿದ್ಯಾನಿಲಯದ ಹಿತಾಸಕ್ತಿಯನ್ನು ಕಾಪಾಡದೇ, ವೆಚ್ಚ ಮಾಡುವ ಮೊದಲು ಕೆ.ಎಫ್.ಸಿ ಆರ್ಟಿಕಲ್ 15, 16, 17, 18ನ್ನು ಹಾಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಆಡಿಟ್ ಮ್ಯಾನ್ಯುಯಲ್‌ನ ಪಾರ್ಟ್–3 ರ B-9 ಕಂಡಿಕೆಗಳನ್ನು ಪಾಲಿಸದೇ ವೆಚ್ಚ ಮಾಡಿ ಸರಬರಾಜುದಾರರಿಗೆ ಅನುಕೂಲವನ್ನು ಕಲ್ಪಿಸಿದಂತಾಗಿರುತ್ತದೆ. ಈ ರೀತಿ ಅಗತ್ಯವಿಲ್ಲದ ವೆಚ್ಚಗಳನ್ನು |

| | |
|---|---|
| | ಮಾಡಿರುವವರ ವಿರುದ್ಧ 2015–16ನೇ ಸಾಲಿನ ಆಡಿಟ್ ವರದಿಯಲ್ಲಿ ಸೂಚಿಸಿರುವ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, 2016–17ನೇ ಸಾಲಿನಲ್ಲಿ ಆಡಳಿತಾತ್ಮಕವಾಗಿ ಕ್ರಮಜರುಗಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸದ ಕಾರಣ ಕೂಡಲೇ ಕ್ರಮಕೈಗೊಂಡು ವರದಿಯನ್ನು ನೀಡುವಂತೆ ಸೂಚಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಅಲಭ್ಯತೆಯಿಂದ ಯಾವುದೇ ಶೈಕ್ಷಣಿಕ ಕಾರ್ಯಕ್ರಮಗಳು ಕೈಗೊಳ್ಳದೇ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿಲ್ಲದ ಕಾರಣದಿಂದಾಗಿ ಈ ತಂತ್ರಾಂಶದ ಉಪಯೋಗವನ್ನು ವಿಶ್ವವಿದ್ಯಾನಿಲಯವು ಪಡೆದಿರುವುದಿಲ್ಲ. ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಕಂಡಿಕೆಯನ್ನು ಕೈಬಿಡುವಂತೆ ಕೋರಿದೆ. |
| | **ವಿವರ** |
| 122 | **<u>121. ಒಂದೇ ಬ್ಯಾಂಕ್ ಖಾತೆ ನಿರ್ವಹಿಸದೆ ಹೆಚ್ಚುವರಿ ವಿವಿಧ ಬ್ಯಾಂಕ್ ಖಾತೆಗಳಲ್ಲಿ ನಗದು ವಹಿವಾಟು ನಿರ್ವಹಣೆಯಾಗಿರುವ ಕುರಿತು:–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಾಮಾನ್ಯ ನಿಧಿ –(08) ಖಾತೆಯ ನಗದು ವ್ಯವಹಾರಗಳನ್ನು ವಿವಿಧ ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸಲಾಗುತ್ತಿದ್ದು, ಸದರಿ ಬ್ಯಾಂಕ್ ಖಾತೆಗಳಲ್ಲಿ ಆರ್ಥಿಕ ವರ್ಷದಲ್ಲಿ ಯಾವುದೇ ವಿಧವಾದ ವಹಿವಾಟು ನಡೆಸದೆ ಬ್ಯಾಂಕ್ ಖಾತೆಯಲ್ಲಿ ಅಂತಿಮ ಶಿಲ್ಕು ಉಳಿದಿರುತ್ತದೆ. ವಿವರ ಕೆಳಕಂಡಂತಿದೆ. ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸದೆ ಒಂದೇ ಬ್ಯಾಂಕ್ ಖಾತೆಯಲ್ಲಿ ನಿರ್ವಹಣೆ ಮಾಡುವಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. |

| ಕ್ರ.ಸಂ | ಬ್ಯಾಂಕ್ ಖಾತೆ ಸಂಖ್ಯೆ | ಬ್ಯಾಂಕ್ | ದಿ: 1.3.2017ರ ಶಿಲ್ಕು |
|---|---|---|---|
| 1 | 00651450000190 | HDFC Bank S.S.Puram Mysore | 1434579.50 |
| 2 | 365002100002105 | Punjab National Bank SJCE Campus Mysore | 1650662.60 |

| | |
|---|---|
| | ಉತ್ತರ |
| | ಕ್ರಮವಹಿಸಲಾಗುವುದು. |
| | **ವಿವರ** |
| 123 | **<u>122. ಸಹಭಾಗಿತ್ವ ಸಂಸ್ಥೆಗಳ ಪರೀಕ್ಷಾ ಕೇಂದ್ರಗಳ ಡಿ.ಸಿ.ಬಿ. (DCB) ವಹಿ ಹಾಜರುಪಡಿಸದಿರುವುದು:–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಶೈಕ್ಷಣಿಕ ಕೋರ್ಸುಗಳಿಗೆ 2016–17ನೇ ಸಾಲಿಗೆ ಸಹಭಾಗಿತ್ವ ಸಂಸ್ಥೆಗಳು ನಡೆಸುವ ಪರೀಕ್ಷಾ ಕೇಂದ್ರಗಳ ಒಟ್ಟು ಸಂಖ್ಯೆ, ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಲಾದ ಒಟ್ಟು ಪರೀಕ್ಷಾ ಕೇಂದ್ರಗಳು ಪ್ರತಿ ಪರೀಕ್ಷಾ ಕೇಂದ್ರಗಳಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಲಾದ ಪರೀಕ್ಷಾ ವೆಚ್ಚದ ನಿಗದಿದರ ವಿವರಗಳನ್ನು ಒದಗಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–32/14.12.2018 ರಲ್ಲಿ ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ಸಹಭಾಗಿತ್ವ ಸಂಸ್ಥೆಗಳನ್ನು 2016–17ನೇ |

| | |
|---|---|
| | ಸಾಲಿನಲ್ಲಿ ರದ್ದುಪಡಿಸಲಾಗಿರುವುದರಿಂದ ಪ್ರವೇಶಾತಿ ಇರುವುದಿಲ್ಲವೆಂದು ತಿಳಿಸಲಾಗಿದೆ. ಹಿಂದಿನ ಸಾಲಿನ ಪ್ರವೇಶಾತಿ ವಿವರದ ಪೂರ್ಣ ಮಾಹಿತಿಯನ್ನು ಡಿ.ಸಿ.ಬಿ (DCB) ವಹಿಯೊಂದಿಗೆ ಹಾಜರುಪಡಿಸುವಂತೆ ಸೂಚಿಸಿದೆ. |
| | ಉತ್ತರ |
| | ಪ್ರವೇಶಾತಿ ವಿವರದ ಪೂರ್ಣ ಮಾಹಿತಿಯನ್ನು ಡಿ.ಸಿ.ಬಿ (DCB) ವಹಿಯೊಂದಿಗೆ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 124 | **<u>123. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ In House Programme ಸಹಭಾಗಿತ್ವ ಸಂಸ್ಥೆಗಳು ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆ/ಉತ್ತರಪತ್ರಿಕೆಗಳ ಮುದ್ರಣದ ಕಡತ/ದಾಸ್ತಾನು ವಿವರ ಹಾಗೂ ವಿವಿಧ ಸಹಭಾಗಿತ್ವ ಸಂಸ್ಥೆಗಳಲ್ಲಿ ಪರೀಕ್ಷೆ ಹಾಜರಾಗಿರುವ ಕೋರ್ಸ್‌ಗಳವಾರು ವಿದ್ಯಾರ್ಥಿಗಳ ವಿವರ ಹಾಜರುಪಡಿಸದೇ ಇರುವುದು :–</u>**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಸ್ನಾತಕ/ಸ್ನಾತಕೋತ್ತರ/ತಾಂತ್ರಿಕ ಕೋರ್ಸುಗಳು/ ಸರ್ಟಿಫಿಕೇಟ್ ಕೋರ್ಸುಗಳು/ಎಂ.ಎಡ್/ಬಿ.ಎಡ್/ಪದವಿಗಳ ಶೈಕ್ಷಣಿಕ ಕೋರ್ಸುಗಳಿಗೆ 2016–17ನೇ ಸಾಲಿನಲ್ಲಿ In House Programme ಸಹಯೋಗದಲ್ಲಿ ವಿವಿಧ ಪರೀಕ್ಷಾ ಕೇಂದ್ರಗಳಿಂದ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಸದರಿ ಸಾಲಿಗೆ ಪ್ರಶ್ನೆಪತ್ರಿಕೆಗಳ ಮುದ್ರಣದ ವಿವರ ಹಾಗೂ ಉತ್ತರ ಪತ್ರಿಕೆಗಳ ಮುದ್ರಣ ವೆಚ್ಚದ ಪಾವತಿ ವಿವರ ಹಾಗೂ ಕಡತದೊಂದಿಗೆ ದಾಸ್ತಾನು ಲೆಕ್ಕಕ್ಕೆ ಪಡೆದ ವಿವರ/ ವಿತರಣಾ ವಿವರ ಮತ್ತು ಉಳಿಕೆ ದಾಸ್ತಾನಿನ ವಿವರಗಳನ್ನು ದಾಸ್ತಾನು ವಹಿಯೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:–13/22.11.2018 ರಲ್ಲಿ ಕೋರಲಾಗಿತ್ತು. ವಿಚಾರಣೆಗೆ ಉತ್ತರವಾಗಿ ಪ್ರಶ್ನೆಪತ್ರಿಕೆಗಳ ಮುದ್ರಣಕಾರ್ಯವನ್ನು IEM ಸಂಸ್ಥೆಗೆ ವಹಿಸಲಾಗಿದ್ದು, 2016–17ನೇ ಸಾಲಿನ ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವನ್ನು IEM, Mumbai ಸಂಸ್ಥೆಯವರೇ ನಿರ್ವಹಿಸಲಾಗಿದ್ದು 2016–17ನೇ ಸಾಲಿನ ಪರೀಕ್ಷೆಗೆ ಒಟ್ಟು 70550 ವಿದ್ಯಾರ್ಥಿಗಳಿಗೆ (In House Programme) ಪ್ರಶ್ನೆ ಪತ್ರಿಕೆಗಳ ಮುದ್ರಣದ ವೆಚ್ಚ ಮತ್ತು ಉತ್ತರಪತ್ರಿಕೆಗಳ ಮುದ್ರಣ ವೆಚ್ಚದ ಹುಂಡಿ ಸಂಖ್ಯೆ– IEM/KSOU/MYSORE/IWS/REQ/053 ದಿ:10/3/2017 ರಲ್ಲಿ ರೂ.50,79,600/–ಗಳ ವೆಚ್ಚದ ಹುಂಡಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.<br>2016–17ನೇ ಸಾಲಿನ ಪರೀಕ್ಷೆಗೆ in house Programmeನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ–70550 ಎಂದು ದಾಖಲಿಸಲಾಗಿದೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ಪ್ರಶ್ನೆ ಪತ್ರಿಕೆಗಳು ಮುದ್ರಣವಾಗಿದ್ದಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ IEM ಸಂಸ್ಥೆಯಿಂದ ಮುದ್ರಣಗೊಂಡು ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ದಾಸ್ತಾನು ಲೆಕ್ಕಕ್ಕೆ ಪಡೆದಿರುವ ಮಾಹಿತಿ, ವಿತರಣೆ ಹಾಗೂ ಉಳಿಕೆ ವಿವರದ ದಾಸ್ತಾನು ವಹಿಯನ್ನು ಒದಗಿಸುವುದು. ಮತ್ತು ಉತ್ತರ ಪತ್ರಿಕೆಗಳನ್ನು 70550 ಸಂಖ್ಯೆಗಳ ಮುದ್ರಣದ ದಾಸ್ತಾನು, ವಿತರಣೆ ಹಾಗೂ |

ಉಳಿಕೆ ವಿವರಗಳ ಮಾಹಿತಿಯನ್ನು ಹಾಜರುಪಡಿಸುವುದು.

2016–17ನೇ ಸಾಲಿಗೆ ಸಹಯೋಗದಲ್ಲಿ (Partnership) ವಿವಿಧ ಪರೀಕ್ಷಾ ಕೇಂದ್ರಗಳಿಂದ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ, ಪ್ರಶ್ನೆಪತ್ರಿಕೆ/ಉತ್ತರಪತ್ರಿಕೆ ಮುದ್ರಣದ ವಿವರ/ ವಿತರಣಾ ವಿವರ/ ದಾಸ್ತಾನು ವಹಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ, ಮತ್ತು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ವಿಷಯವಾರು ವಿವರ ಮತ್ತು ವರ್ಷಾವಾರು ಕೋರ್ಸ್‌ಗಳಿಗೆ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ವರ್ಗಾವಾರು ವಿವರಗಳ ಮಾಹಿತಿ ಲಭ್ಯವಿರುವುದಿಲ್ಲ. ಸದರಿ ವಿವರಗಳ ಡಿ.ಸಿ.ಬಿ. ವಹಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ.

**IEM ಸಂಸ್ಥೆಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವಿವರ**

| | |
|---|---|
| 1) 2016–17ನೇ ಸಾಲಿಗೆ Pre/Post exam ಹುಂಡಿಯ ಮೊತ್ತ | 50,79,600 |
| 2) ಪರೀಕ್ಷಾ ವಿಭಾಗದಿಂದ ಅಧಿಕೃತ ವರದಿ ನೀಡಿರುವ ಮತ್ತು ಪಾವತಿಸಬೇಕಾದ ಹುಂಡಿಯ ಮೊತ್ತ | 23,47,824 |
| 3) IEM ಸಂಸ್ಥೆ ಯಿಂದ ಕ.ರಾ.ಮು.ವಿಗೆ ಮೊತ್ತವನ್ನು ಕಟಾಯಿಸಿರುವುದು<br>ವಿದ್ಯಾರ್ಥಿ ದೂರು ಸಂಬಂಧದ ಮೊತ್ತ–1,13,424/– ಸಂಸ್ಥೆಯಲ್ಲಿ ರದ್ದು ಪಡಿಸಿದ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರದ ಸಂಬಂಧ ಒಟ್ಟು 42,348/–ಗಳಲ್ಲಿ<br>42,348 x 31.50 = 13,30,962/–ರಲ್ಲಿ ಶೇ.25 ರಂತೆ ರೂ.3,33,490/–<br>(1,13,424 + 3,33,490=4,46,914) | 4,46,914 |
| 4) ಆದಾಯ ತೆರಿಗೆ | 1,90,091 |
| **(5) ಒಟ್ಟು (3) +(4)** | **(–)6,37,005** |
| (6) IEM ಸಂಸ್ಥೆಗೆ ಬಿಲ್ಲಿನ ಮೊತ್ತದಲ್ಲಿ ಕಟಾಯಿಸಿ ಪಾವತಿಸಿರುವ ಮೊತ್ತ<br>ಧನಾದೇಶ ಸಂಖ್ಯೆ 238601/14.12.2018 **(2) – (5)** | **17,20,819** |

2016–17 ನೇ ಸಾಲಿಗೆ IEM ಸಂಸ್ಥೆಯವರು ನೀಡಿರುವ ಪ್ರಶ್ನೆಪತ್ರಿಕೆಗಳ ಮುದ್ರಣ ಸಂಖ್ಯೆಗೂ, ಪರೀಕ್ಷಾ ವಿಭಾಗದಿಂದ ನೀಡಿರುವ ಅಧಿಕೃತ ವಿದ್ಯಾರ್ಥಿಗಳ ಪ್ರಶ್ನೆಪತ್ರಿಕೆಗಳ ಮುದ್ರಣದ ಸಂಖ್ಯೆಗೂ ಅಪಾರ ವ್ಯತ್ಯಾಸ ಕಂಡುಬಂದಿದ್ದು IEM ಸಂಸ್ಥೆಯವರು ಹೆಚ್ಚುವರಿ ಮುದ್ರಣದ ಬಗ್ಗೆ ವಿವರ ಹಾಗೂ 2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಅಂಕಪಟ್ಟಿ ಮತ್ತು ಪದವಿಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಣೆಯಾಗದಿದ್ದರೂ IEM ಸಂಸ್ಥೆಯವರು ಮುದ್ರಿಸಿ ಬಿಲ್ಲನ್ನು ಕ್ಲೈಮ್ ಮಾಡಿ ವಿಶ್ವವಿದ್ಯಾನಿಲಯದಿಂದ ಪಾವತಿಸಿರುವುದು ಅಕ್ಷಮ್ಯವಾಗಿದೆ. ಈ ಕುರಿತು ಸೂಕ್ತ ವಿವರಣೆಯನ್ನು ಒದಗಿಸುವವರೆಗೆ **ಪಾವತಿ ಮೊತ್ತ ರೂ.23,47,824/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರ ಸಂ | ವಿವರ | IEM ಸಂಸ್ಥೆಯವರು ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ | ಬಿಲ್ಲಿನ ಮೊತ್ತ | ಕ.ರಾ.ಮು.ವಿ ಪರೀಕ್ಷಾ ವಿಭಾಗದಿಂದ ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ | ವ್ಯತ್ಯಾಸ | |
|---|---|---|---|---|---|---|---|
| | | | | | | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ |
| 1 | ಪ್ರಶ್ನೆ ಪತ್ರಿಕೆಗಳ ಮುದ್ರಣ/ | 70550 | 5079600 | 47254 | 2347824 | 23296 | 2731776 |

| | | | | | | | |
|---|---|---|---|---|---|---|---|
| | (Pre post Examination work) Nominal & Report | | | | | | |
| 2 | Managing Answer books data entry dellaration of results for In house Programme marks card printing for In house Programme | 70550 | – | 25286 | – | 45264 | – |
| | **ಒಟ್ಟು ಬಿಲ್ಲಿನ ಮೊತ್ತ** | | **5079600** | | **2347824** | | **2731776** |

ಉತ್ತರ

1. 2016–17ರ ಸಾಲಿನಲ್ಲಿ IEM ಸಂಸ್ಥೆಯವರು, ವಿ.ವಿ.ಯ ಒಡಂಬಡಿಕೆಯಂತೆ ಪರೀಕ್ಷಾ ಸಂಬಂಧ ಎಲ್ಲಾ ಕಾರ್ಯಗಳನ್ನು ನಿರ್ವಹಿಸಿರುತ್ತಾರೆ. ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮ ಪದವಿಗಳ ಪರೀಕ್ಷೆಗಳನ್ನು ರಾಜ್ಯದ ವಿವಿದ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾದ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಮತ್ತು ಪ್ರಶ್ನೆ ಪತ್ರಿಕೆಗಳ ಮುದ್ರಣದ ವಿವರವನ್ನು ನೀಡುವಂತೆ ಐ.ಇ.ಎಂ ಸಂಸ್ಥೆಗೆ ಪತ್ರವನ್ನು ನೀಡಿದ್ದು ಸದರಿ ಸಂಸ್ಥೆಯವರು ನೀಡಿದ ತಕ್ಷಣ ಮಾಹಿತಿಯನ್ನು ಒದಗಿಸಲಾಗುವುದು, ಪ್ರಸ್ತುತ ಇವರು ತಾಂತ್ರಿಕ ಕಾರಣದಿಂದ ಕೆಲಸ ನಿರ್ವಹಿಸುತ್ತಿಲ್ಲ.

2. 2016–17ರ ಸಾಲಿನಲ್ಲಿ ಕ.ರಾ.ಮು.ವಿಯ ಪರೀಕ್ಷಾ ವಿಭಾಗದಲ್ಲಿ ಯವುದೇ ಉತ್ತರ ಪುಸ್ತಕಗಳನ್ನು ಮುದ್ರಿಸಿಕೊಂಡಿರುವುದಿಲ್ಲ ಹಿಂದಿನ ಸಾಲಿನಲ್ಲಿಯೆ ಮುದ್ರಿಸಿದ ಉತ್ತರ ಪುಸ್ತಕಗಳನ್ನೆ ಪರೀಕ್ಷೆಗಳಿಗೆ ವಿತರಿಸಲಾಗಿದೆ.

3. 2016–17ರ ಸಾಲಿನಲ್ಲಿ ಕ.ರಾ.ಮು.ವಿಯ ಪರೀಕ್ಷಾ ವಿಬಾಗದಲ್ಲಿ ಉತ್ತರ ಪುಸ್ತಕಗಳನ್ನು ವಿತರಣೆ ಮಾಡಿ ಉಳಿಕೆ ಹಾಗೂ ದಾಸ್ತಾನಿನ ವಿವರದ ಪುಸ್ತಕವನ್ನು ಲೆಕ್ಕಪರಿಶೋದನೆಗೆ ಹಾಜರುಪಡಿಸಲಾಗಿದೆ. ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಆಕ್ಷೇಪಣೆಯನ್ನು ಪರಿಶೀಲಿಸಿ ಕೈ ಬಿಡಲು ಕೋರಲಾಗಿದೆ.

4. ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯವನ್ನು ವಿಶ್ವವಿದ್ಯಾನಿಲಯವು ಐ.ಇ.ಎಂ. ಸಂಸ್ಥೆ ಮುಂಬೈ ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಹಾಗು ಅವರಿಗೆ ನೀಡಿರುವ Work order No: KSOU/AB/GL-4/737/Software/2012-13 Dated: 31-10-2012 ಮತ್ತು Extension of Work order No: KSOU/IT/IEM Sub File/01/2015-16 Dated: 02-11-2015ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯವು ಐ.ಇ.ಎಂ. ಸಂಸ್ಥೆ ಮುಂಬೈ ಇವರಿಗೆ ವಹಿಸಲಾಗಿರುತ್ತದೆ.

5. ಕರಾಮುವಿಯ ವಿವಿಧ ಸ್ನಾತಕ/ಸ್ನಾತಕೋತ್ತರ/ತಾಂತ್ರಿಕ ಕೋರ್ಸಗಳು ಸರ್ಟಿಫಿಕೇಟ್ ಕೋರ್ಸುಗಳು/ ಎಂ.ಎಡ್/ಬಿ.ಎಡ್ ಶೈಕ್ಷಣಿಕ ಕೋರ್ಸುಗಳಿಗೆ 2016–17ನೇ ಸಾಲಿನಲ್ಲಿ In house/Partnership ಸಹಯೋಗದಲ್ಲಿ ವಿವಿಧ ಕೇಂದ್ರಗಳಿಂದ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಸದರಿ ಸಾಲಿಗೆ ಪ್ರಶ್ನೆಪತ್ರಿಕೆಗಳ ಮುದ್ರಣ ಎಷ್ಟು? ಎಂಬುದರ ಬಗ್ಗೆ ಈ ಸಂಬಂಧವಾಗಿ ಕೇಳಿರುವ ಮಾಹಿತಿಯನ್ನು ನೀಡುವಂತೆ

| | |
|---|---|
| | ಐ.ಇ.ಎಂ. ಸಂಸ್ಥೆಯವರಿಗೆ ಪತ್ರ ಬರೆಯಲಾಗಿದ್ದು, ಸದರಿಯವರಿಂದ ಮಾಹಿತಿ ಬಂದ ನಂತರ ಉತ್ತರ ನೀಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.<br><br>6. ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯವನ್ನು ಐ.ಇ.ಎಂ. ಸಂಸ್ಥೆ ಮುಂಬೈ ಇವರಿಗೆ ವಿಶ್ವವಿದ್ಯಾನಿಲಯವು ವಹಿಸಲಾಗಿದ್ದು, ಅದರಂತೆ, 2016–17ನೇ ಸಾಲಿನ ಪ್ರಶ್ನೆ ಪತ್ರಿಕೆ ಮುದ್ರಣಕಾರ್ಯವನ್ನು ನಿರ್ವಹಿಸಿರುತ್ತಾರೆ. ದಿನಾಂಕ: 10–03–2017ರಂದು ನೀಡಿರುವ ಹುಂಡಿಯಲ್ಲಿ 2016–17ನೇ ಸಾಲಿನ ಪರೀಕ್ಷೆಗೆ ಒಟ್ಟು ರೂ.70,550 ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಮುದ್ರಿಸಿರುವ ಹುಂಡಿಯನ್ನು ಸಲ್ಲಿಸಿರುತ್ತಾರೆ. ಸದರಿ ಹುಂಡಿಯ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಆಕ್ಷೇಪಣೆಯನ್ನು ಪರಿಶೀಲಿಸಿ ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 125 | **<u>124. ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ದಾಸ್ತಾನು ವಿತರಣೆ ವಹಿ ನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು:–</u>**<br>2016–17ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿ ದಿನಾಂಕ:24.6.2014 ರಿಂದ 10.12.2015 ರವರಿಗೆ ಮದ್ದಾಲ ಇಂಡಸ್ಟ್ರೀಸ್, ಗುಂಟೂರು ರವರು ಟೈವಿಕ್ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ದಾಸ್ತಾನಿನ ವಿವರ ಕೆಳಕಂಡಂತಿದೆ.<br>ಒಟ್ಟು ಅಂಕಪಟ್ಟಿಗಳು – 1202000<br>ಪದವಿ ಪ್ರಮಾಣ ಪತ್ರಗಳು – 23000<br>ಒಟ್ಟು – 1225000 ಗಳನ್ನು ದಾಸ್ತಾನಿಗೆ ಪಡೆದು ಮತ್ತು ವಿತರಿಸಲಾಗಿದೆ ಎಂದು ಪರೀಕ್ಷಾ ವಿಭಾಗದಿಂದ ಅಧಿಕೃತ ವರದಿ ನೀಡಲಾಗಿರುವುದನ್ನು ಕಡತದಿಂದ ಗಮನಿಸಿದೆ. 2014–15 ರ ಅವಧಿಯ ಪರೀಕ್ಷಾ ಕಾರ್ಯ ನಿರ್ವಹಿಸಿದ ಬಗ್ಗೆ IEM ಸಂಸ್ಥೆಯವರು ನೀಡಲಾದ ಪತ್ರದ ಸಂಖ್ಯೆ IEM/KSOU/MYSORE/WS/REQ/052 ದಿ:13.5.2016 ರಲ್ಲಿ Pre exam work ಮತ್ತು Post exam work ಗಳ ಅಂಕಪಟ್ಟಿ ಮತ್ತು ಪದವಿಪ್ರಮಾಣ ಪತ್ರಗಳ ಮುದ್ರಣದ ವೆಚ್ಚ ರೂ.3,44,53,392/– ಗಳಾಗಿದ್ದು,<br>ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – 711892 ಎಂದು ತಿಳಿಸಲಾಗಿದೆ.<br>ಪರೀಕ್ಷಾ ವಿಭಾಗದಿಂದ ವಿತರಿಸಿದ ಸಂಖ್ಯೆ – 1225000<br>ವ್ಯತ್ಯಾಸ – 513108<br><br>ವ್ಯತ್ಯಾಸದ ವಿವರಣೆಯನ್ನು ಕೋರಿ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–18/28.11.2018 ರಲ್ಲಿ ನೀಡಲಾಗಿತ್ತು. ಇದಕ್ಕುತ್ತರವಾಗಿ ಪರೀಕ್ಷಾಂಗ ವಿಭಾಗದಿಂದ IEM ಸಂಸ್ಥೆಯವರಿಗೆ ವ್ಯತ್ಯಾಸದ ವಿವರವನ್ನು ನೀಡಲು ಪತ್ರ ಸಂಖ್ಯೆ–KSOU/EB/STORES/IEM/19/2012-13 ದಿನಾಂಕ:10.08.2018 ರಂದು ಪತ್ರ |

ಬರೆಯಲಾಗಿದೆ ಮತ್ತು ಮಾಹಿತಿಯನ್ನು ನೀಡಿದ ತಕ್ಷಣ ತಪಾಸಣೆಗೆ ಒದಗಿಸಲಾಗುವುದು ಎಂದು ತಿಳಿಸಿರುತ್ತಾರೆ. ಮಾಹಿತಿ ಅಪೂರ್ಣವಾಗಿರುವುದರಿಂದ ವಿವರಗಳನ್ನು ಒದಗಿಸುವವರೆಗೆ IEM ಸಂಸ್ಥೆಯವರಿಗೆ ಪಾವತಿಸಲಾದ ಮೊತ್ತ **ರೂ.3,44,53,392/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ ವ್ಯತ್ಯಾಸ ಕಂಡು ಬಂದಿರುವ ಸಂಖ್ಯೆ:513108 ಗಳಿಗೆ ಸೂಕ್ತ ವಿವರಣೆಯನ್ನು ಒದಗಿಸುವಂತೆ ಸೂಚಿಸಿದೆ.

ಮುಂದುವರೆದು ಅಂಕಪಟ್ಟಿ ಮುದ್ರಣಕ್ಕೆ ಸಂಬಂಧಿಸಿದಂತೆ ಲೆಕ್ಕ ತನಿಖಾ ವಿಚಾರಣೆಸಂಖ್ಯೆ–28/28.11.2018 ಕ್ಕೆ ಉತ್ತರವಾಗಿ IEM ಸಂಸ್ಥೆಯವರು ಮಾಹಿತಿ ನೀಡಿರುವ ವಿವರವನ್ನು ಒದಗಿಸಲಾಗಿದ್ದು ವಿವರ ಕೆಳಕಂಡಂತಿದೆ.

**<u>Overall Statistics of tyvek marks cards.</u>**

| Sl.No | Description | Count |
|---|---|---|
| 1 | Old Balance | 10000 |
| 2 | Marks card Recived by IEM in 2015-16 | 988000 |
| 3 | Total Marks card Printed in 2015 to 2017 | 613930 |
| 4 | Pending Marks card in Stock | 264359 |
| 5 | Correction Marks card | 77890 |
| 6 | Canselled Marks card | 31821 |

1) ಮೇಲಿನ ಅಂಕಿಅಂಶಗಳ ಪ್ರಕಾರ ತಿದ್ದುಪಡಿ ಮಾಡಿರುವ ಅಂಕಪಟ್ಟಿಗಳಿಗೆ IEM ಸಂಸ್ಥೆಯಿಂದ ಶುಲ್ಕ ವಸೂಲಿಸಲು 2015–16ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ ಸೂಚಿಸಲಾಗಿದ್ದು, ಕ್ರಮ ತೆಗೆದು ಕೊಂಡಿರುವ ಬಗ್ಗೆ ಮಾಹಿತಿ ಒದಗಿಸುವುದು.
2) IEM ಸಂಸ್ಥೆಯಿಂದ Pending Marks card in stock 264359 ಎಂದು ದಾಖಲಾಗಿದ್ದು, ಸಂಸ್ಥೆಯವರಿಂದ ಮಾಹಿತಿ/ದಾಸ್ತಾನು ಪಡೆದಿರುವ ಬಗ್ಗೆ ಸ್ವೀಕೃತಿ, ವಿತರಣೆ ಮತ್ತು ಬಾಕಿ ವಿವರದ ದಾಸ್ತಾನು ವಿವರ ಹಾಗೂ ವಹಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾದ್ದರಿಂದ ಒಡಂಬಡಿಕೆ ಪ್ರಕಾರ ರೂ.6/– ರಂತೆ 264359X6=1586154/– ಗಳನ್ನು ಸಂಸ್ಥೆಯಿಂದ ವಸೂಲಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡಿ ವಿವರಗಳನ್ನು ಒದಗಿಸುವುದು.
3) ಮುದ್ರಣಕ್ಕೆ ನೀಡಿದ 988000 ಅಂಕಪಟ್ಟಿಗಳಲ್ಲಿ 31821 ಅಂಕಪಟ್ಟಿಗಳನ್ನು IEM ಸಂಸ್ಥೆಯವರು ರದ್ದುಪಡಿಸಿರುವುದಾಗಿ ಮತ್ತು ಅಂಕಪಟ್ಟಿ ದಾಸ್ತಾನು ವಿವರದಲ್ಲಿ 2017 ರಲ್ಲಿ 10119 ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳು ಮುದ್ರಣ ಯಂತ್ರಗಳ ತಾಂತ್ರಿಕ ತೊಂದರೆಯಿಂದ ರದ್ದಾಗಿರುತ್ತದೆ ಎಂದು ದಾಖಲಿಸಲಾಗಿದೆ. ಒಟ್ಟು 31821+10119=41940 ಸಂಖ್ಯೆಯ ರದ್ದುಪಡಿಸಿದ ಅಂಕಪಟ್ಟಿಗಳ ವಿವರ ಹಾಗೂ IEM ಸಂಸ್ಥೆಯ ನಿರ್ವಹಣೆಯಲ್ಲಿ ಅಂಕಪಟ್ಟಿ ರದ್ದಾಗಿರುವ ಪ್ರಯುಕ್ತ ಕರ್ನಾಟಕ ರಾಜ್ಯ ಮುಕ್ತ

| | |
|---|---|
| | ವಿಶ್ವವಿದ್ಯಾನಿಲಯ ನಿಗದಿಪಡಿಸಿರುವಂತೆ ಒಂದಕ್ಕೆ ರೂ.31.50 ರಂತೆ **ರೂ.13,21,110/–ಗಳನ್ನು (41940x31.50) ಸಂಸ್ಥೆಯಿಂದ ವಸೂಲಿಸಿ** ವಿಶ್ವವಿದ್ಯಾನಿಲಯ ನಿಧಿಗೆ ಜಮಾ ಮಾಡಿ ವಿವರಗಳನ್ನು ನೀಡುವಂತೆ ಸೂಚಿಸಿದೆ.<br><br>2016–17ನೇ ಸಾಲಿನ ಪರೀಕ್ಷಾ ವಿಭಾಗದ ಅಂಕಪಟ್ಟಿ/ಪದವಿಪ್ರಮಾಣ ಪತ್ರಗಳು/ಉತ್ತರಪುಸ್ತಕಗಳ ವಿವರದ ದಾಸ್ತಾನು ವಹಿಯನ್ನು ಪರಿಶೀಲಿಸಿದಾಗ ದಾಸ್ತಾನು, ವಿವರಣೆ ಹಾಗೂ ಉಳಿಕೆ ವಿವರಗಳು ಕೆಳಕಂಡಂತಿದೆ. 2017 ರ ಅಂತ್ಯಕ್ಕೆ ಬಾಕಿ ಇರುವ ಅಂಕಪಟ್ಟಿ ಮತ್ತು ಪದವಿಪ್ರಮಾಣ ಪತ್ರಗಳ ವಿತರಣೆಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. |

**ಅಂಕಪಟ್ಟಿ**

| | |
|---|---|
| 2015–16 ಸಾಲಿನ ಬಾಕಿ | 597000 |
| 2016–17ನೇ ಸಾಲಿನ ಮುದ್ರಣ | Nil |
| 2016–17ನೇ ಸಾಲಿನ ವಿತರಣೆ | 3000 |
| 2016–17ನೇ ಸಾಲಿನ ಬಾಕಿ | 594000 |

**ಪದವಿ ಪ್ರಮಾಣ ಪತ್ರ**

| | |
|---|---|
| 2015–16 ಸಾಲಿನ ಬಾಕಿ | 178000 |
| 2016–17ನೇ ಸಾಲಿನ ಮುದ್ರಣ | Nil |
| 2016–17ನೇ ಸಾಲಿನ ವಿತರಣೆ | 2000 |
| 2016–17ನೇ ಸಾಲಿನ ಬಾಕಿ | 176000 |

**2014 ರಿಂದ 2017ರವರೆಗಿನ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರದ ವಿವರಗಳು**

| | |
|---|---|
| ಅಂಕಪಟ್ಟಿ ಮುದ್ರಣ | 1800000 |
| ಪದವಿ ಪ್ರಮಾಣ ಪತ್ರ | 200000 |
| ಒಟ್ಟು | 2000000 |
| 20.11.2014 ರಿಂದ 16.2.2017 ರವರೆಗೆ ವಿತರಣೆ | 1230000 |
| ಉಳಿಕೆ (5,94,000 + 1,76,000) | 770000 |

IEM ಸಂಸ್ಥೆಗೆ ಪರೀಕ್ಷಾ ವಿಭಾಗದಿಂದ ಮಾಹಿತಿ ನೀಡಿರುವ ಪ್ರಕಾರ 2000 ಸಂಖ್ಯೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿದ್ದು, ಸದರಿ ಸಂಸ್ಥೆಯವರು ಮುದ್ರಿಸಿರುವ ಬಗ್ಗೆ, ವಿತರಣೆ, ಬಾಕಿ ವಿವರಗಳನ್ನು

| | |
|---|---|
| | ಒದಗಿಸಿರುವುದಿಲ್ಲ ವೆಂದು ತಿಳಿಸಿರುತ್ತಾರೆ. ಸಂಸ್ಥೆಯ ಒಡಂಬಡಿಕೆ ಪ್ರಕಾರ ಯಾವುದೇ ವಿವರ ಸಂಸ್ಥೆಯವರು ನೀಡಿಲ್ಲದಿರುವುದರಿಂದ ಒಂದು ಪ್ರತಿಗೆ ರೂ.31.50 ನಂತೆ ಒಟ್ಟು **ರೂ.63,000/-ಗಳನ್ನು ಸಂಸ್ಥೆಯವರಿಂದ ವಸೂಲಿಸಲು ಸೂಚಿಸಿದೆ. ವಿವರಗಳನ್ನು** ಅನುಬಂಧ (34)ರಲ್ಲಿ ನೀಡಿದೆ.<br>**ಆಕ್ಷೇಪಣಾ ಮೊತ್ತ – ರೂ.3,44,53,392/-**<br>**ವಸೂಲಾತಿ ಮೊತ್ತ – ರೂ.29,70,264/** (15,86,154 + 13,21,110 +63,000) |
| | ಉತ್ತರ |
| | ಪರೀಕ್ಷಾ ವಿಭಾಗದ ದಾಸ್ತಾನು ಶಾಖೆಯಿಂದ 2013-14ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಐ.ಇ.ಎಂ ಸಂಸ್ಥೆಯವರೆ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಸದರಿ ಸಂಸ್ಥೆಯವರಿಗೆ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದ್ದು, 2014-15ರ ಅವಧಿಯ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ವಿವರದ ಮಾಹಿತಿಯನ್ನು ನೀಡುವಂತೆ ಪತ್ರವನ್ನು ನೀಡಲಾಗಿರುತ್ತದೆ, (ಪತ್ರ ಸಂಖ್ಯೆ ಸಂಖ್ಯೆ /KSOU/EB/Stores/IEM/19/2012-13 Date-10-8-2018) Pre Exm work Post work ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ಮುದ್ರಣದ ವೆಚ್ಚ ರೂ 3,44,53,392/- ಗಳಾಗಿದ್ದು ಒಟ್ಟು ವಿದ್ಯಾರ್ಥಿಗಳ ಸಂಖ್ಯೆ:711892 ಆಗಿರುತ್ತದೆ. ವ್ಯತ್ಯಾಸ-513108 ಸಂಖ್ಯೆಯಾಗಿರುತ್ತದೆ. ಸದರಿ ವ್ಯತ್ಯಾಸದ ವಿವರವನ್ನು ನೀಡಲು ಪತ್ರ ಸಂಖ್ಯೆ /KSOU/EB/Stores/IEM/19/2012-13 Date-10-8-2018 ರಂದು ಐ.ಇ.ಎಂ ಸಂಸ್ಥೆಯವರಿಗೆ ಪತ್ರವನ್ನು ನೀಡಲಾಗಿದ್ದು ಸದರಿ ಸಂಸ್ಥೆಯವರು ಮಾಹಿತಿಯನ್ನು ನೀಡಿದ ತಕ್ಷಣ ಒದಗಿಸಲಾಗುವುದು. ಮುಂದುವರೆದು, 2016-17ರ ಸಾಲಿನಲ್ಲಿ ಕ.ರಾ.ಮು.ವಿ ಯ ಪರೀಕ್ಷಾ ವಿಭಾಗದಲ್ಲಿ ಯಾವುದೇ ಖಾಲಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಕೊಂಡಿರುವುದಿಲ್ಲ ಹಾಗೂ ಹಿಂದಿನ ಸಾಲಿನಲ್ಲಿಯೆ ಮುದ್ರಿಸಿದ ಅಂಕಪಟ್ಟಿ ಮತ್ತು ಪದವಿಪ್ರಮಾಣ ಪತ್ರಗಳನ್ನು 2016-17ನೇ ಸಾಲಿನಲ್ಲಿ ವಿತರಣೆ ಮಾಡಲಾಗಿರುತ್ತದೆ. ಉಳಿಕೆಯಾಗಿರುವ ದಾಸ್ತಾನಿನ ವಿವರದ ಪುಸ್ತಕವನ್ನು ಲೆಕ್ಕ ಪರಿಶೋದನೆಗೆ ಹಾಜರುಪಡಿಸಿದ್ದು ಪರಿಶೀಲಿಸಿ. ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 126 | **125. 2016-17ನೇ ಸಾಲಿಗೆ ಸಂಚಿತ ವೇತನ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗ್ರೇಡೆಡ್ ಪೇ(ವೇತನ) ಪಾವತಿಸಿರುವ ಕುರಿತು :-**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿನ 2016-17ನೇ ಸಾಲಿನ ತಪಾಸಣಾ ಅವಧಿಯಲ್ಲಿ ಹಾಜರುಪಡಿಸಿರುವ ಸಾಮಾನ್ಯ ನಿಧಿ ಖಾತೆ ಹಾಗೂ ಪರೀಕ್ಷಾ ನಿಧಿ ಖಾತೆಯ ವೇತನ ಬಟವಾಡೆ ವಹಿ ಪರಿಶೀಲಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ- |

| | |
|---|---|
| | 2/793/2009–10 ದಿನಾಂಕ: 20.9.2010 ರಂತೆ ಪ್ರಸುತ್ತ ಜಾರಿಯಲ್ಲಿರುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನಕ್ಕೆ ರೂ.10/– ಕಡಿತಗೊಳಿಸಿ ಗ್ರೇಡೆಡ್ ವೇತನ ನಿಗದಿಪಡಿಸಲಾಗಿದೆ, ಗ್ರೇಡೆಡ್ ವೇತನ ಪಾವತಿಗೆ ಕುರಿತಂತೆ ಹಿಂದಿನಿಂದಲೂ ಆಕ್ಷೇಪಣೆಗೆ ಒಳಪಟ್ಟಿದೆ. ಸಂಚಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಇತರೆ ಭತ್ಯೆಗಳನ್ನೊಳಗೊಂಡತೆ ಗ್ರೇಡೆಡ್ ವೇತನವನ್ನು ಪಾವತಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ188/ಯುಎನ್ಇ/2007, ದಿನಾಂಕ:17.4.2008ರ ಆದೇಶದಲ್ಲಿ ವಿವಿಧ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ/ಸಂಚಿತ ವೇತನ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವ ಪ್ರಕರಣಗಳಲ್ಲಿ ಆಯಾ ಹುದ್ದೆಯ ಕನಿಷ್ಠವೇತನವನ್ನು ಸಂಚಿತ ವೇತನವನ್ನಾಗಿ ನಿಗದಿಪಡಿಸಲಾಗುತ್ತಿದ್ದು, ಇತರೆ ಯಾವುದೇ ಭತ್ಯೆಗಳಿಗೆ ಅರ್ಹವಾಗಿರುವುದಿಲ್ಲ, ಪರಿಷ್ಕೃತ ವೇತನ ನಿಯಮಗಳು ಸಂಚಿತ ವೇತನ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿಗೆ ಅನ್ವಯಿಸುವುದಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆದೇಶದಲ್ಲಿ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಎಲ್ಲಾ ಭತ್ಯೆಗಳನ್ನೊಳಗೊಂಡತೆ ಗ್ರೇಡೆಡ್ ವೇತನ ನಿಗದಿಪಡಿಸಿ, ಸರ್ಕಾರದ ನಿಯಮವನ್ನು ಪಾಲನೆ ಮಾಡಿಲ್ಲದಿರುವುದು ಕಂಡುಬಂದಿರುವುದರಿಂದ, 2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 86 ಜನ ಗ್ರೇಡೆಡ್ ವೇತನ ನೌಕರರಿಗೆ ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.1,78,78,426/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ (35)** ರಲ್ಲಿ ನೀಡಲಾಗಿದೆ |
| | ಉತ್ತರ |
| | ವಿಶ್ವವಿದ್ಯಾನಿಲಯವು 1996 ರಲ್ಲಿ ಆರಂಭಗೊಂಡಿದ್ದು ಅಂದಿನಿಂದ ಸಂದರ್ಭಾನುಸಾರ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿದ್ದ ಒಟ್ಟು 228 ಮಂದಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಅದರಲ್ಲಿ 88 ನೌಕರರನ್ನು ಹೊರತುಪಡಿಸಿ ಉಳಿದವರು 2007ರ ನೇರ ನೇಮಕಾತಿಯಲ್ಲಿ ಖಾಯಂಗೊಂಡಿರುತ್ತಾರೆ. ಸದರಿ 86 ಮಂದಿ ನೌಕರರು ಹಲವಾರು ವರ್ಷಗಳಿಂದ ವಿವಿ ನಿಲಯದಲ್ಲಿ ಸೇವೆ ಸಲ್ಲಿಸಿದ್ದ ಹಿನ್ನಲೆಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿದ್ದ ವೇತನ ಶ್ರೇಣಿಯನ್ನು ಜಾರಿಗೊಳಿಸುವುದು ಸೂಕ್ತವೆಂದು ದಿನಾಂಕ: 23.06.2011 ರ 112ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಸದರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದ ಆಯಾ ಹುದ್ದೆಗಳ ಮೂಲ ವೇತನವನ್ನು ರೂ.10/– ಕಳೆದು ಖಾಯಂ ನೌಕರರುಗಳಿಗೆ ಲಭ್ಯವಾಗುವ ಎಲ್ಲಾ ಭತ್ಯೆಗಳನ್ನು ಸೇರಿಸಿ ವೇತನವನ್ನು ಪರಿಷ್ಕರಿಸಲಾಗಿರುತ್ತದೆ. ಸದರಿ ನೌಕರರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ಎನ್ನುವ ತತ್ವದ ಆಧಾರದ ಮೇಲೆ ಈ ವೇತನ ಶ್ರೇಣಿಯನ್ನು ಜಾರಿಗೊಳಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯಕ್ಕೆ ವ್ಯವಸ್ಥಾಪನ ಮಂಡಳಿಯ ಸಕ್ಷಮ ಪ್ರಾಧಿಕಾರವಾಗಿದ್ದು KSOU (Adoption of Service Rules of State Government) Statutes-2009 ರಂತೆ ಸದರಿ ಸಭೆಯ ಅನುಮೋದನೆಯನ್ನು ಪಡೆದು ಗ್ರೇಡೆಡ್ ಪೇ ವೇತನವನ್ನು ಪಾವತಿಸಲಾಗುತ್ತಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. |

| | |
|---|---|
| | ಮುಂದುವರೆದು ಸರ್ಕಾರಿ ಆದೇಶ ಸಂಖ್ಯೆ ಇಡಿ 312 ಯುಎನ್‌ಇ 2008 ದಿನಾಂಕ 25–06–2009 ರಲ್ಲಿ ತಿಳಿಸಿರುವಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ, ಗುತ್ತಿಗೆ / ಸಂಚಿತ ಬೋಧಕೇತರ ಸಿಬ್ಬಂದಿಗಳಿಗೆ ದಿನಾಂಕ 1–6–2009 ರಿಂದ ಅನ್ವಯವಾಗುವಂತೆ ಸಂಚಿತ ವೇತನವನ್ನು ಸರ್ಕಾರದ ಪ್ರಸ್ತುತ ಜಾರಿಯಲ್ಲಿರುವ ವೇತನ ಶ್ರೇಣಿಯ ಮೂಲ ವೇತನದ ಹಂತಕ್ಕೆ ಸರಿಸಮವಾಗಿ ರೂ.10/–ನ್ನು ಕಡಿತಗೊಳಿಸಿ ಆಯಾಯ ಹುದ್ದೆಗಳಿಗೆ ನಿಗದಿಗೊಳಿಸಿ ವೇತನವನ್ನು ನೀಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಮೇಲ್ಕಂಡಂತೆ ಕ್ರಮವಹಿಸಲಾಗಿದೆ. ಮೇಲೆ ನೀಡಲಾಗಿರುವ ವಿವರಣೆಯನ್ನು ಪರಿಗಣಿಸಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| | **ವಿವರ** |
| 127 | **126. 2016–17ನೇ ಸಾಲಿಗೆ ಸಾಮಾನ್ಯ ನಿಧಿ ಖಾತೆ (08) ಹಾಗೂ ಪರೀಕ್ಷಾ ನಿಧಿ ಖಾತೆ (09) ಯಡಿ ತಾತ್ಕಾಲಿಕ ನೌಕರರಿಗೆ ವೇತನ ಪಾವತಿಸಿರುವ ಕುರಿತು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆ (08) ಹಾಗೂ ಪರೀಕ್ಷಾ ನಿಧಿ ಖಾತೆ (09) ಯಡಿ ದಿನಗೂಲಿ ನೌಕರರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು ಒಟ್ಟು ರೂ.2,45,96,628/– ಗಳನ್ನು ಪಾವತಿಸಲಾಗಿರುತ್ತದೆ. ಹಾಗೂ ಸಾಮಾನ್ಯ ನಿಧಿ ಖಾತೆ (08) ಯಲ್ಲಿ ವೈದ್ಯರು, ಫಾರ್ಮಾಸಿಸ್ಟ್, ಸಂಯೋಜನಾಧಿಕಾರಿ, ಸಹಾಯಕ ಗ್ರಂಥಪಾಲಕರು ಸನ್ನದು ಲೆಕ್ಕಿಗರು ಹಾಗೂ EPF/ESI ಸಮಾಲೋಚಕರು ಇವರುಗಳನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು ಒಟ್ಟು ರೂ. 12,20,909/– ಗಳನ್ನು ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ.<br><br>08 ಶೀರ್ಷಿಕೆಯಡಿ (ದಿನಗೂಲಿ) – 2,02,02,491,<br>09 ಶೀರ್ಷಿಕೆಯಡಿ (ದಿನಗೂಲಿ) – 43,94,137<br>08 ಶೀರ್ಷಿಕೆಯಡಿ (ಇತರೆ) – 12,20,909<br>**ಒಟ್ಟು ರೂ. – 2,58,17,537**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮದ Chapter VIII Second Schedule II (III) ರಲ್ಲಿರುವಂತೆ ತಾತ್ಕಾಲಿಕ ನೌಕರರ ನೇಮಕಾತಿಗೆ ಕೇವಲ 6 ತಿಂಗಳ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ, 6 ತಿಂಗಳ ನಂತರ ಮತ್ತೆ ಪತ್ರಿಕಾ ಪ್ರಕಟಣೆ, ನೋಟಿಫಿಕೇಷನ್ ಹೊರಡಿಸಿ ನಿಯಮಾನುಸಾರ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ವಿವರಗಳು ಪರಿಶೀಲನೆಗೆ ಲಭ್ಯವಿರುವುದಿಲ್ಲ, ತಾತ್ಕಾಲಿಕ ಬೋಧಕೇತರ/ ದಿನಗೂಲಿ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ವ್ಯವಸ್ಥಾಪನ ಮಂಡಳಿ ನಿರ್ಣಯದ ಆದೇಶದ ಪ್ರತಿಯನ್ನು ಹಾಜರುಪಡಿಸದೆ ಇರುವುದರಿಂದ 2016–17ನೇ ಸಾಲಿಗೆ ತಾತ್ಕಾಲಿಕ ಬೋಧಕೇತರ/ದಿನಗೂಲಿ ನೌಕರರಿಗೆ ನಿಯಮ ಬಾಹಿರವಾಗಿ ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.2,58,17,537/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** (ವಿವರಗಳನ್ನು **ಅನುಬಂಧ (36)** ರಲ್ಲಿ ನೀಡಿದೆ) |

| | ಉತ್ತರ |
|---|---|
| | ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಇದ್ದುದರಿಂದ ವಿ.ವಿ.ಯ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಈ ನೇಮಕಾತಿಯನ್ನು ಕ.ರಾ.ಮು.ವಿ. ಅಧಿಸೂಚನೆ ಕಾಯ್ದೆ ನಿಯಮ 2(9)(111)ರನ್ವಯ ಮಾನ್ಯ ಕುಲಪತಿಗಳ ಪ್ರದತ್ತವಾದ ಅಧಿಕಾರದನ್ವಯ ಷರತ್ತನ್ನು ವಿಧಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ನೇಮಕಾತಿಗೆ ಸಂಬಂಧಿಸಿದಂತೆ ವ್ಯವಸ್ಥಾಪನ ಮಂಡಳಿ ನಿರ್ಣಯದ ಆದೇಶದ ಪ್ರತಿಯನ್ನು ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 128 | **127. 2016–17ನೇ ಸಾಲಿಗೆ ಪರೀಕ್ಷಾ ನಿಧಿ ಖಾತೆಯಡಿ ಸ್ವಚ್ಛತಾ ಸಿಬ್ಬಂದಿಗಳಿಗೆ ವೇತನ ಪಾವತಿ ಕುರಿತು :–** |

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವ ಸಂಬಂಧ ಒಟ್ಟು 12 ಮಂದಿ ನೌಕರರನ್ನು ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು 2016–17ನೇ ಸಾಲಿಗೆ ಒಟ್ಟು ರೂ.11,44,873/–ಗಳನ್ನು ಪಾವತಿಸಲಾಗಿರುತ್ತದೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮದ Chapter VIII Second Schedule II (III) ರಲ್ಲಿರುವಂತೆ ತಾತ್ಕಾಲಿಕ ನೌಕರರ ನೇಮಕಾತಿಗೆ ಕೇವಲ 6 ತಿಂಗಳ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ, ಆರ್ಥಿಕ ವರ್ಷದಲ್ಲಿ ಪೂರ್ಣವಧಿಗೆ ಇ–ಟೆಂಡರ್ ಮೂಲಕ (ಇ–ಪ್ರೋಕ್ಯೂರ್‌ಮೆಂಟ್) ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳದೆ ವೇತನ ಪಾವತಿಸಿರುವುದು ನಿಯಮ ಬಾಹಿರವಾಗಿರುವುದರಿಂದ ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.11,44,873/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** (ವಿವರಗಳನ್ನು ಅನುಬಂಧ (37) ರಲ್ಲಿ ನೀಡಿದೆ)

**ಘೋಷ್ವಾರೆ**

| ಕ್ರ.ಸಂ | ತಾತ್ಕಾಲಿಕ ಸಿಬ್ಬಂದಿಗಳ ಸಂಖ್ಯೆ | ವಿವರ ತಾತ್ಕಾಲಿಕ ಅಧ್ಯಾಪಕೇತರ ವರ್ಗದವರ ವೇತನ | ಪಾವತಿಸಲಾದ ಮೊಬಲಗು |
|---|---|---|---|
| 1 | 86 | ಗ್ರೇಡೆಡ್ ಪೇ ನೌಕರರು–17878426 | 4,48,40,836/– |
| 2 | 202 | ದಿನಗೂಲಿ ನೌಕರರು–25817537 | |
| 3 | 12 | ಸ್ವಚ್ಛತಾ ಸಿಬ್ಬಂದಿ–1144873 | |

| | ಉತ್ತರ |
|---|---|
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸ್ವಚ್ಛತಾ ಕಾರ್ಯದ ಖಾಯಂ ಸಿಬ್ಬಂದಿಗಳು ಇಲ್ಲದ ಕಾರಣ ದಿನಾಂಕ 14.11.2015 ರಂದು ನಡೆದ 137ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವವರನ್ನು ವಿ ವಿ ನಿಲಯದ ಸ್ವಚ್ಛತಾ ಕಾರ್ಯಕ್ಕೆ ನೇಮಿಸಿಕೊಳ್ಳಲಾಗಿದೆ. ವಿ ವಿ ನಿಲಯದಲ್ಲಿರುವ ಪರೀಕ್ಷಾ ಭವನ, ವಿಜ್ಞಾನ ಭವನ, ವಿಜಯನಗರದ ಸಿ ಎ ನಿವೇಶನದ ಕಟ್ಟಡ, ಮಾನ್ಯ ಕುಲಪತಿಗಳ ಅಧಿಕೃತ |

<table>
<tr><td></td><td>ನಿವಾಸ, ಆಡಳಿತ ಭವನ ಇಲ್ಲಿ ನಿರ್ಮಿಸಿರುವ ಲಾನ್‌ಗಳಿಗೆ ನೀರು ಹಾಕುವ ಕೆಲಸ, ಗಿಡಗಳನ್ನು ವ್ಯವಸ್ಥಿತವಾಗಿ ಕತ್ತರಿಸುವ ಕೆಲಸ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಸ್ವಚ್ಛತಾ/ಗಾರ್ಡನ್ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂಧಿಗಳಿಗೆ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವಂತೆ ಒಂದು ದಿನಕ್ಕೆ ರೂ 224.93 ರಂತೆ ವೇತನ ಪಾವತಿಸಲಾಗಿದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ.</td></tr>
<tr><td></td><td>ವಿವರ</td></tr>
<tr><td>129</td><td><u>128. ಪರೀಕ್ಷಾ ಖಾತೆ (09) ಯಲ್ಲಿ ಅಂಚೆ ವೆಚ್ಚಕ್ಕೆ ಸಂಬಂಧಿಸಿದಂತೆ ಸ್ವೀಕೃತಿ ಮತ್ತು ರವಾನೆ ದಾಖಲಾತಿ ವಹಿಯನ್ನು ನಿರ್ವಹಿಸಿಲ್ಲದಿರುವುದು :–</u><br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿನ ಪರೀಕ್ಷಾ ವಿಭಾಗ–09 ಲೆಕ್ಕಶೀರ್ಷಿಕೆಯಲ್ಲಿ 2016–17ನೇ ಸಾಲಿಗೆ ಅಂಚೆ ವೆಚ್ಚವನ್ನು ಭರಿಸಿದ್ದು, ಸಾಮಾನ್ಯ ಅಂಚೆ ಮೂಲಕ ರೂ.5,83,586/– ಹಾಗೂ ತ್ವರಿತ ಅಂಚೆ ಮೂಲಕ ರೂ.10,81,220/– ಒಟ್ಟು ರೂ.16,64,806/–ಗಳನ್ನು ಧನಾದೇಶದ ಮೂಲಕ ಅಂಚೆ ಕಛೇರಿಗೆ ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ. ಸಾದಿಲ್ವಾರು ವೆಚ್ಚ ಕೈಪಿಡಿ–1958 ಅಧ್ಯಾಯ 2ರ ವಿಶೇಷ ನಿಯಮಾವಳಿಗಳು ನಿಯಮ 43ರಂತೆ ಸ್ವೀಕೃತಿ ಮತ್ತು ರವಾನೆ ಶಾಖೆಯಲ್ಲಿ ಪ್ರತಿದಿನದ ಅಂಚೆ ವೆಚ್ಚವನ್ನು ವಹಿಯಲ್ಲಿ ದಾಖಲಿಸಿ ನಿರ್ವಹಿಸಬೇಕಾಗಿರುತ್ತದೆ. ಈ ಕುರಿತಂತೆ ವಿಚಾರಣೆ ಸಂಖ್ಯೆ:14/ದಿನಾಂಕ:23.10.2018ರಲ್ಲಿ ಪ್ರತಿ ಮಾಹೆಯ ಘೋಷ್ವಾರೆಯೊಂದಿಗೆ ದೃಢೀಕರಿಸಲಾದ ಅಂಚೆ ವೆಚ್ಚದ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿತ್ತು. ವಿಚಾರಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯರವರು ಉತ್ತರವನ್ನು ನೀಡಲಾಗಿದ್ದು, ಸದರಿ ವರ್ಷದಲ್ಲಿ ಅಂಚೆ ವೆಚ್ಚದ ಸ್ವೀಕೃತಿ ಮತ್ತು ರವಾನೆ ದಾಖಲಾತಿ ವಹಿಯನ್ನು ನಿರ್ವಹಿಸಿಲ್ಲದಿರುವುದರಿಂದ, ಈ ವಿಷಯದ ಬಗ್ಗೆ ಕ್ರಮ ಕೈಗೊಂಡು ಸ್ವೀಕೃತಿ ಮತ್ತು ರವಾನೆ ವಹಿಯನ್ನು ಪ್ರತಿ ಮಾಹೆ ಘೋಷ್ವಾರೆಯೊಂದಿಗೆ ದೃಢೀಕರಿಸಿ ನಿರ್ವಹಿಸಲು ಸೂಚಿಸಿದೆ.</td></tr>
<tr><td></td><td>ಉತ್ತರ</td></tr>
<tr><td></td><td>2016–17ನೇ ಸಾಲಿನ ಅಂಚೆ ವೆಚ್ಚ ಮತ್ತು ಸ್ವೀಕೃತಿ / ರವಾನೆಯ ಬಗೆಗಿನ ಕ್ರೂಢೀಕೃತ ವಿವರ ಈ ಕೆಳಕಂಡಂತಿರುತ್ತದೆ.<br><br>
<table>
<tr><th>ಕ್ರ.ಸಂ.</th><th>ಮಾಹೆ ಮತ್ತು ವರ್ಷ</th><th>ಅಂಚೆ ಕಛೇರಿ ಬಿಲ್ ಸಂಖ್ಯೆ: ಮತ್ತು ದಿನಾಂಕ</th><th>ಮೊತ್ತ</th><th>ಬಿ.ಆರ್.ನಂ ದಿನಾಂಕ</th><th>ಒಟ್ಟುರವಾನೆಯಾಗಿರ ುವ ಲಕೋಟೆಗಳು</th><th>ಷರಾ</th></tr>
<tr><td>1</td><td>ಏಪ್ರಿಲ್ 2016–17</td><td>05.05.2016</td><td>4,06.914 =00</td><td>07/05.05.2016</td><td>12,389</td><td></td></tr>
<tr><td>2</td><td>ಜೂನ್ 2016</td><td>02.05.2016</td><td>88,249 = 91</td><td>21/14.06.2016</td><td>2,399</td><td></td></tr>
</table></td></tr>
</table>

| | | | | | | |
|---|---|---|---|---|---|---|
| 3 | ಜುಲೈ 2016-17 | 03.06.20116 | 1,09,262 = 00 | 34/27.07.2016 | 3,094 | |
| 4 | ಆಗಸ್ಟ್ 2016-17 | 950000697 11.07.2016 | 99,043 =00 | 36/09.08.2016 | 2,691 | |
| 5 | ಸೆಪ್ಟೆಂಬರ್ 2016-17 | 950000704 05.08.2016 | 69,612 = 00 | 45/28.09.2016 | 1,862 | |
| 6 | ಮಾರ್ಚ್ 2016-2017 | 950001084 03.11.2016 | 31,448 =00 | 89/20.03.2017 | 783 | |
| 7 | ಮಾರ್ಚ್ 2017 | 9500001181 | 52,600 =00 | 90/20.03.2017 | 1,345 | |
| 8 | ಮಾರ್ಚ್ 2017 | 950001280 | 58,168 = 00 | 91/20.03.2017 | 1,433 | |
| 9 | ಮಾರ್ ್ಚ 2017 | 950001297 | 47,512 =00 | 92/20.03.2017 | 1,033 | |
| | | ಒಟ್ಟುರೂ. | **9,62,808=00** | | | |

| ಕ್ರ.ಸಂ. | ಮಾಹೆ ಮತ್ತು ವರ್ಷ | ಅಂಚೆ ಕಛೇರಿ ಬಿಲ್ ಸಂಖ್ಯೆ: ಮತ್ತು ದಿನಾಂಕ | ಮೊತ್ತ | ಬಿ.ಆರ್.ನಂ ದಿನಾಂಕ | ಒಟ್ಟುರವಾನೆಯಾಗಿರುವಲಕೋಟೆಗಳು | ಷರಾ |
|---|---|---|---|---|---|---|
| 1 | ಫೆಬ್ರವರಿ 2016-17 | 16.02.2016 | 47,090=00 | 77/16.02.2016 | 1,102 | |
| 1 | ಮಾರ್ಚ್ 2016-17 | 04.04.2016 | 1,24,072=00 | 94/25.03.2017 | 11,395 | |
| 2 | ಏಪ್ರಿಲ್ 2016-17 | 04.04.2016 | 36,119-99 | 08/05.05.2016 | 5,298 | |
| 3 | ಜೂನ್ 2016-17 | 14.06.2016 | 1,246=00 | 22/14.06.2016 | 116 | |
| 4 | ಜೂನ್ 2016-17 | 02.06.2016 | 3,64,015=00 | 28/01.07.2016 | 33,886 | |

| | | | | | | |
|---|---|---|---|---|---|---|
| 5 | ಆಗಸ್ಟ್ 2016–17 | 01.07.2016 | 23,551=00 | 35/09.08.2016 | 2,201 | |
| 6 | ಸೆಪ್ಟೆಂಬರ್ 2016–17 | 01.08.2016 | 15,075=00 | 46/29.09.2016 | 1,257 | |
| 7 | ಡಿಸೆಂಬರ್ 2016–17 | 02.11.2016 | 5,052=00 | 61/21.12.2016 | 320 | |
| | | **ಒಟ್ಟುರೂ.** | **6,16,220=00** | | | |

ಪ್ರಸ್ತುತದ 2018–19ನೇ ಸಾಲಿನಲ್ಲಿ ಅಂಚೆ ವಿವರದ ಸ್ವೀಕೃತಿ / ರವಾನೆ ವಹಿಯಲ್ಲಿ ದಾಖಲಿಸಲಾಗುತ್ತಿದೆ. 2016–17ನೇ ಸಾಲಿನ ಸಾಮಾನ್ಯ ಅಂಚೆ ವೆಚ್ಚದ ಮೇಲಿನ ಕ್ರೋಢೀಕೃತ ಪಟ್ಟಿಯನ್ನು ಪರಿಗಣಿಸಿ ಕಂಡಿಕೆಯನ್ನು ಕೈ ಬಿಡಲು ಕೋರಿದೆ.

ವಿವರ

130 **<u>129. ಬಿ.ಎ / ಬಿ.ಕಾಂ ಪರೀಕ್ಷಾ ವೆಚ್ಚದ ಹುಂಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ಪಾವತಿಸಿರುವ ಕುರಿತು :–</u>**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿನ 2016ನೇ ಆಗಸ್ಟ್–ಅಕ್ಟೋಬರ್‌ನಲ್ಲಿ ನಡೆದ ಬಿ.ಎ / ಬಿ.ಕಾಂ ವಾರ್ಷಿಕ ಪರೀಕ್ಷೆಗೆ ನೀಡಲಾಗಿದ್ದ ಮುಂಗಡ ಮೊತ್ತಕ್ಕೆ ಸಂಯೋಜನಾಧಿಕಾರಿಗಳು, ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡರವರು ಸಲ್ಲಿಸಲಾಗಿದ್ದ ಹೊಂದಾಣಿಕೆ ಬಿಲ್ಲಿನ ಪರಿಶೀಲನೆಯಲ್ಲಿ ದಿನಾಂಕ:05.10.2016, 6.10.2016, 7.10.2016 ಹಾಗೂ ದಿನಾಂಕ:8.10.2016ರ ಮಧ್ಯಾಹ್ನದ ಸೆಷನ್‌ಗಳಲ್ಲಿ ಯಾವುದೇ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿರದಿದ್ದರೂ ಪ್ರತಿ ದಿನಕ್ಕೆ ರೂ.1000/–ಗಳಂತೆ 4 ದಿನಗಳಿಗೆ ಒಟ್ಟು ರೂ.4000/– ಸಂಭಾವನೆಯನ್ನು ಪರೀಕ್ಷಾ ಕೇಂದ್ರಕ್ಕೆ ಹೆಚ್ಚುವರಿಯಾಗಿ ಪಾವತಿಸಿಲಾಗಿರುವುದು ಕಂಡು ಬಂದಿರುತ್ತದೆ. ಈ ಕುರಿತಂತೆ ವಿಚಾರಣೆ ಸಂಖ್ಯೆ:28/ದಿನಾಂಕ:13.12.2018 ರಲ್ಲಿ ಹೆಚ್ಚುವರಿ ಪಾವತಿಯಾಗಿರುವ ಬಗ್ಗೆ ವಿವರಣೆಯನ್ನು ಕೋರಲಾಗಿತ್ತು, ಸದರಿ ಲೆಕ್ಕ ವಿಚಾರಣೆ ಸಂಬಂಧ ಸಂಯೋಜನಾಧಿಕಾರಿಗಳು, ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡರವರಿಂದ **ರೂ.4,000/–ಗಳನ್ನು ವಸೂಲಿಸಿ,** ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಿರುವ ಕುರಿತು ವಿವರ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

ಉತ್ತರ

2016–17ರ ಸಾಲಿನಲ್ಲಿ 2016ನೇ ಆಗಸ್ಟ್–ಅಕ್ಟೋಬರ್‌ನಲ್ಲಿ ನಡೆದ ಬಿ.ಎ/ಬಿ.ಕಾಂ ವಾರ್ಷಿಕ ಪರೀಕ್ಷೆಗೆ ನೀಡಲಾಗಿದ್ದ ಮುಂಗಡ ಮೊತ್ತಕ್ಕೆ ಸಂಯೋಜನಾಧಿಕಾರಿಗಳು, ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್,

| | |
|---|---|
| | ಧಾರವಾಡರವರು ಹೊಂದಾಣಿಕೆ ಬಿಲ್ಲನ್ನು ಸಲ್ಲಿಸಿದ ಸಂಬಂಧವಾಗಿ ಸದರಿ ಪರೀಕ್ಷಾ ಕೇಂದ್ರದ ಹೊಂದಾಣಿಕೆ ಹುಂಡಿಯಲ್ಲಿ ದಿನಾಂಕ:5–10–2016, 6–10–2016, 7–10–2016, ಹಾಗೂ ದಿನಾಂಕ:8–10–2016ರ ಮಧ್ಯಾಹ್ನದ ಸೆಷನ್‌ಗಳಿಗೆ ಹುಂಡಿಯಲ್ಲಿ ರೂ.1,000/–ಗಳು ಇರುವುದನ್ನು ಪರಿಶೀಲಿಸುವಾಗ ಕಣ್‌ತಪ್ಪಿನಿಂದ ಒಟ್ಟು ರೂ.4,000/–ಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು ಸದರಿ ಪರೀಕ್ಷೆಯ ವೆಚ್ಚದ ಒಟ್ಟು ಮೊತ್ತ ರೂ.95,680/–ರಲ್ಲಿ ಮಾರ್ಜಿನಲ್ ಹೊಂದಾಣಿಕೆಗಾಗಿ ಶೇಕಡ 5ರಷ್ಟು ರೂ.4,784/–ಗಳು ಮತ್ತು ಮುಂಗಡ ನೀಡಿದ್ದ ರೂ.26,000/–ಗಳನ್ನು ಕಟಾಯಿಸಿ ಉಳಿದ ಮೊತ್ತ ರೂ.64,896/–ಗಳನ್ನು ಚೆಕ್ ಮೂಲಕ ಸದರಿ ಪರೀಕ್ಷಾ ಕೇಂದ್ರದವರಿಗೆ ಪಾವತಿಸಲಾಗಿರುತ್ತದೆ. ಸದರಿ ಲೆಕ್ಕ ವಿಚಾರಣಾ ಸಂಬಂಧ ಸದರಿ ಸಂಯೋಜನಾಧಿಕಾರಿಗಳು, ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡರವರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ರೂ.4,000/–ಗಳನ್ನು ವಿಶ್ವವಿದ್ಯಾನಿಲಯ ಖಾತೆಗೆ ಪಾವತಿಸಿ ಚಲನ್ ಅನ್ನು ಕುಲಸಚಿವ(ಪರೀಕ್ಷಾಂಗ)ರವರಿಗೆ ತುರ್ತಾಗಿ ಕಳುಹಿಸುವಂತೆ ದಿನಾಂಕ17–12–2018ರಂದು ಪತ್ರ ಬರೆಯಲಾಗಿದೆ. ಸದರಿ ಪರೀಕ್ಷಾ ಕೇಂದ್ರದವರು ಪಾವತಿಸಿದ ಬ್ಯಾಂಕ್ ಚಲನ್ ಅನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಸದರಿ ಪತ್ರವನ್ನು ಪಡೆದು ಸಲ್ಲಿಸಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. |
| | **ವಿವರ** |
| 131 | **130. ಪರೀಕ್ಷಾ ವಿಭಾಗದ ಸಿಬ್ಬಂದಿಗಳಿಗೆ ಪರೀಕ್ಷಾ ಕಾರ್ಯಕ್ಕಾಗಿ ಸಂಭಾವನೆಯನ್ನು ಪಾವತಿಸಿರುವುದು:–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಪರೀಕ್ಷಾ ವಿಭಾಗದ ಲೆಕ್ಕಶೀರ್ಷಿಕೆ–09ರಲ್ಲಿ ಪರೀಕ್ಷಾ ಕಾರ್ಯಕ್ಕಾಗಿ (ಉತ್ತರ ಪುಸ್ತಕಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಂದ ಸಂಗ್ರಹಿಸಿ ಕೋಡಿಂಗ್ ಮಾಡುವ ಕಾರ್ಯಕ್ಕಾಗಿ, ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸುವ ಕಾರ್ಯಕ್ಕಾಗಿ, ಉಪಮುಖ್ಯ ಪರೀಕ್ಷ ಅಧೀಕ್ಷರ ಕಾರ್ಯಕ್ಕಾಗಿ) ನಿಯೋಜನೆಗೊಂಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಒಟ್ಟು ರೂ.17,08,400/– ಸಂಭಾವನೆಯನ್ನು ಸಾದಿಲ್ವಾರು ಬಿಲ್ಲುಗಳ ಮೂಲಕ ಪಾವತಿಸಲಾಗಿರುತ್ತದೆ. (ವಿವರಗಳನ್ನು ಅನುಬಂಧ (38) ರಲ್ಲಿ ನೀಡಲಾಗಿದೆ.)<br><br>ಸಿಬ್ಬಂದಿಗಳ ಪರೀಕ್ಷಾ ಕಾರ್ಯವು ಕರ್ತವ್ಯದ ಒಂದು ಭಾಗವೇ ಆಗಿರುವುದರಿಂದ KCSR ನಿಯಮ 28(ಬಿ)ಟಿಪ್ಪಣಿ1(ಎ) ರನ್ವಯ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಈ ಕುರಿತು ವಿಚಾರಣೆ ಸಂಖ್ಯೆ:26/ದಿನಾಂಕ:11.12.2018 ರಲ್ಲಿ ವಿವರಣೆಯನ್ನು ಕೋರಲಾಗಿತ್ತು, ಸದರಿ ವಿಚಾರಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರುರವರು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲವಾದ್ದರಿಂದ ನಿಯಮ ಬಾಹಿರವಾಗಿ ಪರೀಕ್ಷಾ ಕಾರ್ಯಕ್ಕಾಗಿ ನಿಯೋಜಿಸಲಾಗಿರುವ ಸಿಬ್ಬಂದಿಗಳಿಗೆ ಪಾವತಿಸಲಾಗಿರುವ ಸಂಭಾವನೆ **ಮೊತ್ತ ಒಟ್ಟು ರೂ. 17,08,400/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.** |

| | ಉತ್ತರ |
|---|---|
| | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿವಿಧ ಕಾರ್ಯ ಚಟುವಟಿಕೆಗೆ ವಿವಿಧ ಇಲಾಖೆ/ವಿಭಾಗಗಳನ್ನು ತೆರೆದಿದ್ದು, ಆಯಾಯ ಶಾಖೆಗಳಿಗೆ ಸಿಬ್ಬಂದಿಗಳು/ಪ್ರಾಧ್ಯಾಪಕರುಗಳನ್ನು ನಿಯೋಜಿಸಿರುವುದನ್ನು ಗಮನಿಸಬಹುದಾಗಿದೆ.<br><br>ಪರೀಕ್ಷಾ ವಿಭಾಗದಲ್ಲಿನ ಕೆಲ ಸಿಬ್ಬಂದಿಗಳು/ಪ್ರಾಧ್ಯಾಪಕರುದಿನ ನಿತ್ಯದ ಕಚೇರಿ ಕೆಲಸಗಳ ಜೊತೆಗೆ ಪರೀಕ್ಷಾ ಸಂಬಂಧಿಸಿದ ಗೌಪ್ಯಕರ್ತವ್ಯಗಳನ್ನು ನಿರ್ವಹಿಸಲು ಅಸಾಧ್ಯ, ಆದುದರಿಂದ ವಿವಿಧ ವಿಭಾಗಗಳ ಸಿಬ್ಬಂದಿಗಳು/ಪ್ರಾಧ್ಯಾಪಕರುಗಳನ್ನು ಅವರ ದಿನನಿತ್ಯದ ಕೆಲಸಗಳ ಜೊತೆಗೆ ಪರೀಕ್ಷೆ ಕೆಲಸಗಳಿಗೂ ಹೆಚ್ಚುವರಿಯಾಗಿ ನಿಯೋಜಿಸಿಕೊಂಡಾಗ ಕಚೇರಿ ಕೆಲಸಗಳ ಸಮಯದ ನಂತರವು ಪರೀಕ್ಷಾ ಸಂಬಂಧಿಸಿದ ಗೌಪ್ಯಕರ್ತವ್ಯಗಳನ್ನು ನಿರ್ವಹಿಸಿರುವುದನ್ನು ಗಮನಿಸಬಹುದಾಗಿದೆ.<br><br>ಇಂತಹ ಕೆಲಸಗಳಿಗೆ ಸಂಭಾವನೆ ನೀಡಿದ್ದಲ್ಲಿ ಮಾತ್ರ ನೌಕರರು/ಪ್ರಾಧ್ಯಾಪಕರು ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಸಾಂಪ್ರಾದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮದಂತೆಯೆ, ಕರಾಮುವಿಯಲ್ಲಿಯು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13–03–2012, ವರದಿಯನ್ನು ದಿನಾಂಕ:31.03.2012ರ 46ನೇ ಹಣಕಾಸು ಸಮಿತಿಯ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ. ಅದಕ್ಕಾನುಗುಣವಾಗಿ ಹೊರಡಿಲಾಗಿರುವ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಪವಿ/ಲೆ.ವಿ/ಸಂಭಾವನೆ/ಪರಿಷ್ಕೃತ/89/2012–13 ದಿನಾಂಕ:17/04/2012ರ ಪ್ರಕಾರ ಸಿಬ್ಬಂದಿಗಳು/ಪ್ರಾಧ್ಯಾಪಕರು ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. ಪರೀಕ್ಷಾ ಕರ್ತವ್ಯ ಸಂಬಂಧ ಭತ್ಯೆಗಳಿಗೆ ಕೆ.ಸಿ.ಎಸ್.ಆರ್ ನಿಯಮ 28 ರಲ್ಲಿ ಯಾವುದೇ ಉಲ್ಲೇಖವಿಲ್ಲ ಹಾಗಾಗಿ ಉಲ್ಲಂಘನೆಯಾಗಿಲ್ಲ. ವಿಶ್ವವಿದ್ಯಾನಿಲಯವು ಪರೀಕ್ಷಾ ಕಾರ್ಯ ಸುಸೂತ್ರವಾಗಿ ನಡೆಸುವ ಸದುದ್ದೇಶದಿಂದ ಕಾಯ್ದೆ/ಪರಿನಿಯಮಗಳಿಗೆ ಅನುಗುಣ ತನ್ನದೆ ಆದ ನಿಯಮಗಳನ್ನು ರೂಪಿಸಿಕೊಂಡು ಕ್ರಮವಹಿಸಿರುವುದನ್ನು ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 132 | **<u>131. ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ನಿಯಮವನ್ನು ಉಲ್ಲಂಘಿಸಿ ಹೆಚ್ಚುವರಿ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಿರುವುದು :–</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಪರೀಕ್ಷಾ ವಿಭಾಗದ ಲೆಕ್ಕಶೀರ್ಷಿಕೆ–09ರಲ್ಲಿ ಪರೀಕ್ಷಾ ಕಾರ್ಯಕ್ಕಾಗಿ ನಿಯೋಜಿಸಲಾದ ಮೌಲ್ಯಮಾಪಕರಿಗೆ ಹಾಗೂ ಕರಾಮುವಿ ಆದೇಶ ಸಂ/ಪವಿ/ಲೆವಿ/ಸಂಭಾವನೆ/ಪರಿಷ್ಕೃತ/89/2012–13 ದಿನಾಂಕ:17.04.2012 ರಲ್ಲಿನ ದರಗಳಂತೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಲಾಗಿರುತ್ತದೆ. (ವಿವರಗಳನ್ನು **<u>ಅನುಬಂಧ (39)ರಲ್ಲಿ</u>** ನೀಡಿದೆ) ಕೆಸಿಎಸ್ಆರ್ |

| | |
|---|---|
| | ಪ್ರಯಾಣ ಭತ್ಯೆ ದರಗಳ ಪರಿಷ್ಕರಣೆಯ ಸರ್ಕಾರಿ ಆದೇಶ ಸಂಖ್ಯೆ: ಆಇ3ಸೇನಿಸೇ 2012, ಬೆಂಗಳೂರು ದಿನಾಂಕ:14.6.2012 ರಲ್ಲಿನ ಆದೇಶದಂತೆ ನಿಯಮ 451 ರ ಉಪಬಂಧರನ್ವಯ ಮೇಲ್ಕಂಡಂತೆ ಹೆಚ್ಚುವರಿ ಪಾವತಿಗೆ ಅವಕಾಶವಿರುವುದಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ25/ದಿನಾಂಕ:11.12.2018 ರಲ್ಲಿ ಸದರಿ ಹೆಚ್ಚುವರಿ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ಪಾವತಿಗೆ ಸಂಬಂಧಿಸಿದಂತೆ ಕುಲಾಧಿಪತಿಗಳಿಂದ ಪಡೆದಿರುವ ಅನುಮೋದನಾ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಲಾಗಿತ್ತು. ಸದರಿ ವಿಚಾರಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರುರವರು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲವಾದ್ದರಿಂದ ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿರುವ ಬೋಧಕ/ಬೋಧಕೇತರ (ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಹೊರಗಿನ) ಸಿಬ್ಬಂದಿಗಳಿಗೆ ನಿಯಮವನ್ನು ಉಲ್ಲಂಘಿಸಿ ಪಾವತಿಸಲಾಗಿರುವ ಹೆಚ್ಚುವರಿ ಪ್ರಯಾಣಭತ್ಯೆ ಮೊತ್ತ(ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಿಬ್ಬಂದಿ–7,864/– + ಹೊರಗಿನ ಬೋಧಕಸಿಬ್ಬಂದಿ–1,13,402/–) ಒಟ್ಟು ರೂ.1,21,266/– ಹಾಗೂ ಹೆಚ್ಚುವರಿ ದಿನಭತ್ಯೆ ಮೊತ್ತ (ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಿಬ್ಬಂದಿ–94,250/– + ಹೊರಗಿನ ಬೋಧಕಸಿಬ್ಬಂದಿ–7,57,065/–) ರೂ.8,51,315/– ಒಟ್ಟು **ರೂ.9,72,581/– ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಅಂಗೀಕೃತ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಕಾಯ್ದೆ ಹೊಂದಿದೆ. ಇದರ ಉಲ್ಲೋಕ್ತಿಯಲ್ಲಿ ಹಣಕಾಸು ಸಮಿತಿ/ ವ್ಯವಸ್ಥಾಪನಾ ಮಂಡಳಿಗಳಿಗೆ ವಿ.ವಿ ನಿಲಯದ ಹಣಕಾಸು/ಆಡಳಿತಾತ್ಮಕ ನಿರ್ವಹಣೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದನ್ನು ಅವಲೋಕಿಸಬಹುದಾಗಿದೆ. ಅದರಂತೆಯೇ, ಸಂಪ್ರಾದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮದಂತೆಯೆ, ಕರಾಮುವಿಯಲ್ಲಿಯು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13–03–2012, ವರದಿಯನ್ನು ದಿನಾಂಕ:31.03.2012ರ 46ನೇ ಹಣಕಾಸು ಸಮಿತಿರ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ. ಅದಕ್ಕಾನುಗುಣವಾಗಿ ಹೊರಡಿಲಾಗಿರುವ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಪವಿ/ಲೆ.ವಿ/ಸಂಭಾವನೆ/ಪರಿಷ್ಕೃತ/89/2012–13 ದಿನಾಂಕ:–17/04/2012ರ ಪ್ರಕಾರ ಕೇಂದ್ರ ಮೌಲ್ಯಮಾಪನಕ್ಕೆ ಬರುವ ಮೌಲ್ಯಮಾಪಕರಿಗೆ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಲಾಗಿರುತ್ತದೆ. ಪರೀಕ್ಷಾ ಕರ್ತವ್ಯ ಸಂಬಂಧ ಭತ್ಯೆಗಳಿಗೆ ಕೆ.ಸಿ.ಎಸ್.ಆರ್ ನಿಯಮ 451ರಲ್ಲಿ ಯಾವುದೇ ಉಲ್ಲೇಖವಿಲ್ಲ ಹಾಗಾಗಿ ಉಲ್ಲಂಘನೆಯಾಗಿಲ್ಲ. ವಿಶ್ವವಿದ್ಯಾನಿಲಯವು ಪರೀಕ್ಷಾ ಕಾರ್ಯ ಸುಸೂತ್ರವಾಗಿ ನಡೆಸುವ ಸದುದ್ದೇಶದಿಂದ ಕಾಯ್ದೆ/ಪರಿನಿಯಮಗಳಿಗೆ ಅನುಗುಣ ತನ್ನದೆ ಆದ ನಿಯಮಗಳನ್ನು ರೂಪಿಸಿಕೊಂಡು ಕ್ರಮವಹಿಸಿರುವುದನ್ನು ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕೈ ಬಿಡಲು ಕೋರಲಾಗಿದೆ. |

| | ವಿವರ |
|---|---|
| 133 | **132. 2016–17ನೇ ಸಾಲಿಗೆ ಮೌಲ್ಯಮಾಪಕರಿಗೆ ದಿನಭತ್ಯೆ ಹಾಗೂ ಸಭಾಭತ್ಯೆಗಳನ್ನು ಪಾವತಿಸಿರುವ ಕುರಿತು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆ 09ರಲ್ಲಿ 2016–17ನೇ ಸಾಲಿನಲ್ಲಿ ಮೌಲ್ಯಮಾಪನದ ಅವಧಿಯಲ್ಲಿ ಸಹಾಯಕ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳಿಗೆ ದಿನಭತ್ಯೆ ಹಾಗೂ ಸಭಾಭತ್ಯೆ ಎರಡನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ವಿವರ **ಅನುಬಂಧ (40)**ರಲ್ಲಿ ನೀಡಿದೆ. ಕೆಸಿಎಸ್‌ಆರ್ ನಿಯಮ29 ಟಿಪ್ಪಣಿ(2) ರನ್ವಯ ಯಾವುದಾದರೂ ಒಂದು ಭತ್ಯೆಯನ್ನು ಪಡೆಯಲು ಮಾತ್ರ ಅವಕಾಶವಿರುತ್ತದೆ. ನಿಯಮಬಾಹಿರವಾಗಿ ಪಾವತಿಸಲಾದ ಮೊತ್ತ **ರೂ.29,700/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.** |
| | ಉತ್ತರ |
| | ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಅಂಗೀಕೃತ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಕಾಯ್ದೆ ಹೊಂದಿದೆ. ಇದರ ಉಲ್ಲೋಕ್ತಿಯಲ್ಲಿ ಹಣಕಾಸು ಸಮಿತಿ/ ವ್ಯವಸ್ಥಾಪನಾ ಮಂಡಳಿಗಳಿಗೆ ವಿ.ವಿ ನಿಲಯದ ಹಣಕಾಸು/ಆಡಳಿತಾತ್ಮಕ ನಿರ್ವಹಣೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದನ್ನು ಅವಲೋಕಿಸಬಹುದಾಗಿದೆ. ಅದರಂತೆಯೇ, ಸಂಪ್ರಾದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮದಂತೆಯೆ, ಕರಾಮುವಿಯಲ್ಲಿಯು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13–03–2012, ವರದಿಯನ್ನು ದಿನಾಂಕ:31.03.2012ರ 46ನೇ ಹಣಕಾಸು ಸಮಿತಿರ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ. ಅದಕ್ಕಾನುಗುಣವಾಗಿ ಹೊರಡಿಲಾಗಿರುವ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಪವಿ/ಲೆ.ವಿ/ಸಂಭಾವನೆ/ಪರಿಷ್ಕೃತ/89/2012–13 ದಿನಾಂಕ:–17/04/2012ರ ಪ್ರಕಾರ ಕೇಂದ್ರ ಮೌಲ್ಯಮಾಪನಕ್ಕೆ ಬರುವ ಮೌಲ್ಯಮಾಪಕರಿಗೆ ಪ್ರಯಾಣಭತ್ಯೆ, ಸಭಾಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಲಾಗಿರುತ್ತದೆ. ಪರೀಕ್ಷಾ ಕರ್ತವ್ಯ ಸಂಬಂಧ ಭತ್ಯೆಗಳಿಗೆ ಕೆ.ಸಿ.ಎಸ್.ಆರ್ ನಿಯಮ 451ರಲ್ಲಿ ಯಾವುದೇ ಉಲ್ಲೇಖವಿಲ್ಲ ಹಾಗಾಗಿ ಉಲ್ಲಂಘನೆಯಾಗಿಲ್ಲ. ವಿಶ್ವವಿದ್ಯಾನಿಲಯವು ಪರೀಕ್ಷಾ ಕಾರ್ಯ ಸುಸೂತ್ರವಾಗಿ ನಡೆಸುವ ಸದುದ್ದೇಶದಿಂದ ಕಾಯ್ದೆ/ಪರಿನಿಯಮಗಳಿಗೆ ಅನುಗುಣ ತನ್ನದೆ ಆದ ನಿಯಮಗಳನ್ನು ರೂಪಿಸಿಕೊಂಡು ಕ್ರಮವಹಿಸಿರುವುದನ್ನು ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕೈ ಬಿಡಲು ಕೋರಲಾಗಿದೆ. |
| | ವಿವರ |
| 134 | **133. ಸ್ಥಳೀಯಭತ್ಯೆ ಮತ್ತು ಸಭಾಭತ್ಯೆ ಎರಡನ್ನು ಪಾವತಿಸಿರುವುದು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಸಭೆಗಳಿಗೆ ಭಾಗವಹಿಸಿದ ಸದಸ್ಯರುಗಳಿಗೆ ಸಭಾಭತ್ಯೆ (Sitting fee) ಯೊಂದಿಗೆ ಸ್ಥಳೀಯ ಭತ್ಯೆ (Local conveyance) ಯನ್ನು ಸಹ ಪಾವತಿಸಿರುವುದು ಕಂಡುಬಂದಿರುತ್ತದೆ. ಕೆಸಿಎಸ್‌ಆರ್ ನಿಯಮ–29 ಟಿಪ್ಪಣಿ(2) ರ ಪ್ರಕಾರ ಎರಡರಲ್ಲಿ ಒಂದು ಭತ್ಯೆಯನ್ನು |

| | |
|---|---|
| | ಪಡೆಯಲು ಮಾತ್ರ ಅವಕಾಶವಿದ್ದು, ನಿಯಮಬಾಹಿರವಾಗಿ ಪಾವತಿಸಲಾದ ಮೊತ್ತ **ರೂ.24,900/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.** ವಿವರಗಳನ್ನು **ಅನುಬಂಧ (41)** ರಲ್ಲಿ ನೀಡಲಾಗಿದೆ. |
| | ಉತ್ತರ |
| | ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ ಅಂಗೀಕೃತ ಸ್ವಾಯತ್ತ ಸಂಸ್ಥೆಯಾಗಿದ್ದು ತನ್ನದೇ ಕಾಯ್ದೆ ಹೊಂದಿದೆ. ಇದರ ಉಲ್ಲೋಕ್ತಿಯಲ್ಲಿ ಹಣಕಾಸು ಸಮಿತಿ/ ವ್ಯವಸ್ಥಾಪನಾ ಮಂಡಳಿಗಳಿಗೆ ವಿ.ವಿ ನಿಲಯದ ಹಣಕಾಸು/ಆಡಳಿತಾತ್ಮಕ ನಿರ್ವಹಣೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದನ್ನು ಅವಲೋಕಿಸಬಹುದಾಗಿದೆ. ಅದರಂತೆಯೇ, ಸಂಪ್ರಾದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಅನುಸರಿಸುವ ನಿಯಮದಂತೆಯೆ, ಕರಾಮುವಿಯಲ್ಲಿಯು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:13–03–2012, ವರದಿಯನ್ನು ದಿನಾಂಕ:31.03.2012ರ 46ನೇ ಹಣಕಾಸು ಸಮಿತಿ ದಿನಾಂಕ:31.03.2012ರ 118ನೇ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ನಂತರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ದಿನಾಂಕ:17.04.2012ರಂದು ಪಡೆಯಲಾಗಿದೆ. ಅದಕ್ಕಾನುಗುಣವಾಗಿ ಹೊರಡಿಸಲಾಗಿರುವ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಪವಿ/ಲೆ.ವಿ/ಸಂಭಾವನೆ/ಪರಿಷ್ಕೃತ/89/2012–13 ದಿನಾಂಕ:–17/04/2012ರ ಪ್ರಕಾರ ಸ್ಥಳೀಯಭತ್ಯೆ ಹಾಗೂ ಸಭಾಭತ್ಯೆ ಪಾವತಿಸಲಾಗಿರುತ್ತದೆ. ಪರೀಕ್ಷಾ ಕರ್ತವ್ಯ ಸಂಬಂಧ ಭತ್ಯೆಗಳಿಗೆ ಕೆ.ಸಿ.ಎಸ್.ಆರ್ ನಿಯಮ 451ರಲ್ಲಿ ಯಾವುದೇ ಉಲ್ಲೇಖವಿಲ್ಲ ಹಾಗಾಗಿ ಉಲ್ಲಂಘನೆಯಾಗಿಲ್ಲ. ವಿಶ್ವವಿದ್ಯಾನಿಲಯವು ಪರೀಕ್ಷಾ ಕಾರ್ಯ ಸುಸೂತ್ರವಾಗಿ ನಡೆಸುವ ಸದುದ್ದೇಶದಿಂದ ಕಾಯ್ದೆ/ಪರಿನಿಯಮಗಳಿಗೆ ಅನುಗುಣ ತನ್ನದೆ ಆದ ನಿಯಮಗಳನ್ನು ರೂಪಿಸಿಕೊಂಡು ಕ್ರಮವಹಿಸಿರುವುದನ್ನು ಗಮನಕ್ಕೆ ತರುತ್ತಾ ಸದರಿ ವಸೂಲಾತಿ ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 135 | **134. ಪರೀಕ್ಷಾ ನಿಧಿ ಖಾತೆ (09) ರಲ್ಲಿ ವಾರ್ಷಿಕ ಪರೀಕ್ಷಾ ಸಂಬಂಧ ಪಡೆದ ಮುಂಗಡ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವ ಕುರಿತು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿನ ಪರೀಕ್ಷಾ ನಿಧಿ ಖಾತೆಗೆ ಸಂಬಂಧಿಸಿದಂತೆ 2016–17ನೇ ಸಾಲಿನಲ್ಲಿ ಬಿ.ಎ/ಬಿ.ಕಾಂ. ಎಂ.ಎ/ಎಂ.ಕಾಂ ಕೋರ್ಸುಗಳ ವಾರ್ಷಿಕ ಪರೀಕ್ಷಾ ಸಂಬಂಧ ಮುಂಗಡ ಮೊತ್ತವಾಗಿ ಒಟ್ಟು ರೂ.30,95,000/–ಗಳನ್ನು ಡ್ರಾ ಮಾಡಲಾಗಿದ್ದು, ಹೊಂದಾಣಿಕೆ ಬಿಲ್ಲುಗಳ ಮೂಲಕ ಒಟ್ಟು ರೂ.84,71,388/– ವೆಚ್ಚ ಮಾಡಲಾಗಿರುವುದು ಕಂಡು ಬಂದಿರುತ್ತದೆ, ಇದರಿಂದ ಪಡೆದಿರುವ ಮುಂಗಡ ಮೊತ್ತಕ್ಕಿಂತ ರೂ.53,76,388/– ಹೆಚ್ಚುವರಿ ವೆಚ್ಚ ಭರಿಸಿದಂತಾಗಿದ್ದು MCE ನಿಯಮದ (36) ಉಲ್ಲಂಘನೆಯಾಗಿರುತ್ತದೆ ಹಾಗೂ ಹೊಂದಾಣಿಕೆ ಬಿಲ್ಲುಗಳನ್ನು 2 ತಿಂಗಳಿನಿಂದ 8 ತಿಂಗಳಿನಷ್ಟು ವಿಳಂಬವಾಗಿ ಸಲ್ಲಿಸಿರುವುದು. ವಹಿ ಪರಿಶೀಲನೆಯಲ್ಲಿ ಕಂಡು ಬಂದಿರುತ್ತದೆ, ಈ ಬಗ್ಗೆ ವಿಚಾರಣೆ ಸಂಖ್ಯೆ: 17/ದಿನಾಂಕ:20.11.2018ರಲ್ಲಿ ವಿವರಣೆಯನ್ನು ಕೋರಲಾಗಿತ್ತು. ವಿಚಾರಣೆಗೆ ಉತ್ತರವಾಗಿ 1) ಪರೀಕ್ಷಾ ಕೇಂದ್ರಗಳ |

ಅಂಚೆವೆಚ್ಚ ಹಾಗೂ ಇತರೆ ಸಾಂದರ್ಭಿಕ ಖರ್ಚು ವೆಚ್ಚಗಳ ಅಂದಾಜು ವೆಚ್ಚವನ್ನು ಪರಿಗಣಿಸಿ ಶೇ.40 ರಿಂದ 50ರಷ್ಟು ಮುಂಗಡವನ್ನು ಪಡೆಯಲಾಗಿರುತ್ತದೆ. ಎಂದು ತಿಳಿಸಿರುತ್ತಾರೆ. ಆದರೆ ನಿಯಮಾನುಸಾರ ಮುಂಗಡವನ್ನು ತುರ್ತು ಸಂದರ್ಭದಲ್ಲಿ ಪಡೆದು ಡ್ರಾ ಮಾಡಲಾದ ಮೊತ್ತಕ್ಕೆ ಅನುಸಾರವಾಗಿ ಎನ್‌ಡಿಸಿ ಬಿಲ್ಲನ್ನು ಸಲ್ಲಿಸಬೇಕಾಗಿರುತ್ತದೆ. ಮುಂಗಡದ ಉದ್ದೇಶಕ್ಕಾಗಿ, ಅಂದಾಜು ವೆಚ್ಚವನ್ನು ನಂತರ 100 ರಷ್ಟು ಎಂದು ಪರಿಗಣಿಸಿ ಮುಂಗಡದ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚವನ್ನು ಭರಿಸಲು ನಿಯಮದಲ್ಲಿ ಅವಕಾಶವಿರುವುದಿಲ್ಲ.

**ಘೋಷ್ವಾರೆ**

| ಪರೀಕ್ಷಾ ಖಾತೆ-09 | | | |
|---|---|---|---|
| **ಎ.ಸಿ ಬಿಲ್ಲುಗಳಮೂಲಕ ಡ್ರಾ ಮಾಡಿದ ಸಂಖ್ಯೆ** | **ಒಟ್ಟು ಮೊತ್ತ** | **ಎನ್.ಡಿ.ಸಿ ಬಿಲ್ಲುಗಳ ಮೊತ್ತ** | **ಮಂಜೂರಾತಿಯಿಲ್ಲದೆ ಮುಂಗಡ ಮೊತ್ತಕ್ಕಿಂತ ಹೆಚ್ಚುವರಿ ಪಾವತಿಸಿರುವ ಮೊತ್ತ** |
| 60 | 30,95,000 | 84,71,388 | 53,76,388 |

ಸಾಮಾನ್ಯ ನಿಧಿ ಖಾತೆಯಲ್ಲಿ 08 ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಲಾದ ಮುಂಗಡ ಹಣ ಮತ್ತು ಹೊಂದಾಣಿಕೆ ವಿವರವನ್ನು **ಅನುಬಂಧ – (42)** ರಲ್ಲಿ ನೀಡಿದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 36, 37 ರಂತೆ ಮುಂಗಡ ಪಡೆದ 1 ತಿಂಗಳೊಳಗಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ. ವಿಳಂಬವಾಗಿರುವುದರಿಂದ ಹೊಂದಾಣಿಕೆಯಾಗದಿರುವ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಬಡ್ಡಿಯೊಂದಿಗೆ ವಸೂಲಿಸಿ ಕ.ರಾ.ಮು.ವಿಗೆ ಜಮೆ ಮಾಡಿ ವಿವರವನ್ನು ಸಲ್ಲಿಸಲು ಸೂಚಿಸಿದೆ.

**ಘೋಷ್ವಾರೆ**

| **ಎ.ಸಿ ಬಿಲ್ಲುಗಳಮೂಲಕ ಡ್ರಾ ಮಾಡಿದ ಸಂಖ್ಯೆ** | **ಒಟ್ಟು ಮೊತ್ತ** | **ಎನ್.ಡಿ.ಸಿ ಬಿಲ್ಲುಗಳ ಮೊತ್ತ** | **ಹೊಂದಾಣಿಕೆಯಾಗದಿರುವ ಮೊತ್ತ** |
|---|---|---|---|
| 63 | 2032869 | 1712778 | 320091 |

2) ಪರೀಕ್ಷೆಗಳ ವೇಳಾಪಟ್ಟಿಯ ಕಾರಣ ಎನ್‌ಡಿಸಿ ಬಿಲ್ಲು (30 ರಿಂದ 45 ದಿನಗಳು) ವಿಳಂಬವಾಗಿದೆಯೆಂದು ವಿಚಾರಣೆಗೆ ಉತ್ತರವಾಗಿ ತಿಳಿಸಿರುತ್ತಾರೆ, ಆದರೆ ಎನ್‌ಡಿಸಿ ಸಲ್ಲಿಸುವಿಕೆಯಲ್ಲಿ ಇನ್ನು ಹೆಚ್ಚಿನ ಅವಧಿ 2 ರಿಂದ 8 ತಿಂಗಳಿನಷ್ಟು ವಿಳಂಬವಾಗಿರುತ್ತದೆ. ಸದರಿ ವಿಳಂಬದ ಅವಧಿಗೆ ಮುಂಗಡ ಪಡೆದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿಸಿ ಆಡಳಿತಾತ್ಮಕವಾಗಿ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ 42(ಎ)** ರಲ್ಲಿ ವಿವರಿಸಿರುವಂತೆ ವಿಳಂಬದ ದಿನಗಳಿಗೆ ವಿಧಿಸಲಾದ ಬಡ್ಡಿ ಮೊತ್ತ **ರೂ.45,080/-ಗಳನ್ನು**

| | |
|---|---|
| | **ಸಂಬಂಧಿಸಿದವರಿಂದ ವಸೂಲಿಸಿ** ವಿವರವನ್ನು ಸಲ್ಲಿಸಲು ಸೂಚಿಸಿದೆ. |
| | ಉತ್ತರ |
| | 2016–17 ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಪರೀಕ್ಷಾ ನಿಧಿ ಖಾತೆಗೆ ಸಂಬಂಧಿಸಿದಂತೆ ಎಂ.ಎ/ಎಂ.ಕಾಂ/ಬಿ.ಎ/ಬಿ.ಕಾಂ ಕೋರ್ಸುಗಳ ವಾರ್ಷಿಕ ಪರೀಕ್ಷಾ ಸಂಬಂಧ ಮುಂಗಡ ಮೊತ್ತ ಒಟ್ಟು ರೂ.30,95,000/–ಗಳನ್ನು ಡ್ರಾ ಮಾಡಲಾಗಿರುವುದು. ಎ.ಸಿ ಬಿಲ್ಲಿನ ಪಾವತಿ ವಹಿ ಪರಿಶೀಲನೆಯಲ್ಲಿ ತಾವು ತಿಳಿಸಿರುವ ನ್ಯೂನತೆಗಳಿಗೆ ಉತ್ತರವು ಈ ಕೆಳಕಂಡಂತೆ ಇರುತ್ತದೆ.<br><br>2016–17ನೇ ಶೈಕ್ಷಣಿಕಸಾಲಿನಲ್ಲಿ ನಡೆದ ಬಿ.ಎ/ಬಿ.ಕಾಂ/ ಎಂ.ಎ/ಎಂ.ಕಾಂ. ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರಗಳ ಅಂಚೆವೆಚ್ಚ ಹಾಗು ಇತರೆ ಪರೀಕ್ಷಾ ಚಟುವಟಿಕೆಯ ಸಾಂಧರ್ಬಿಕ ಖರ್ಚು ವೆಚ್ಚಗಳನ್ನು ಭರಿಸುವ ಉದ್ದೇಶದಿಂದ ಪರೀಕ್ಷೆಗಳ ಪೂರ್ವಯೋಜಿತವಾಗಿ ಅಂದಾಜು ವೆಚ್ಚವನ್ನು ಪರಿಗಣಿಸಿ ಒಟ್ಟು ಮೊತ್ತದಲ್ಲಿ ಮೊದಲ ಹಂತದಲ್ಲಿ ಶೇಕಡ 40 ರಿಂದ 50ರಷ್ಟರ ಮುಂಗಡ ಮೊತ್ತವನ್ನು ಮಾತ್ರ ಮಾನ್ಯ ಕುಲಪತಿಗಳ ಅನುಮೋದನೆಯನ್ನು ಪಡೆದು ಎ.ಸಿ. ಹುಂಡಿಯನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಿ, ಕುಲಸಚಿವ (ಪರೀಕ್ಷಾಂಗ) ರವರ ಹೆಸರಿನಲ್ಲಿ ಚೆಕ್ ಪಡೆದು ಸದರಿಯವರ ಪದನಾಮದ ಖಾತೆಗೆ ಜಮೆಮಾಡಿ, ತದನಂತರ ರಾಜ್ಯದ್ಯಂತ ಅನುಮೋದಿತ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷೆ ನೆಡೆಸಲು ವಿದ್ಯಾರ್ಥಿಗಳ ಅಂದಾಜು ಸಂಖ್ಯೆಯ **ಅಂದಾಜಿನಲ್ಲಿ** ಪ್ರತ್ಯೇಕ, ಪ್ರತ್ಯೇಕ ಡಿ.ಡಿ. ಗಳನ್ನು ವಿವಿದ ಪರೀಕ್ಷಾ ಕೇಂದ್ರಗಳ ಹೆಸರಿನಲ್ಲಿ ತೆಗೆದು ತ್ವರಿತ ಅಂಚೆಯ ಮೂಲಕ ಪರೀಕ್ಷೆಗಳು ಆರಂಭವಾಗುವ ಮುಂಚಿತವಾಗಿಯೇ ಕಳುಹಿಸಲಾಗಿರುತ್ತದೆ.<br><br>ತದನಂತರ ಸದರಿ ಶೈಕ್ಷಣಿಕ ಸಾಲಿನ ವಿವಿಧ ಶಿಕ್ಷಣಕ್ರಮದ ವಿವಿಧ ವಿಷಯಗಳ ಪರೀಕ್ಷೆಗಳು ವಿವಿಯು ವಿಶ್ವವಿದ್ಯಾನಿಲಯ ನಿಗದಿಪಡಿಸಿದ್ದ ವೇಳಾಪಟ್ಟಿ ಪ್ರಕಾರ ಸುಮಾರು 30ರಿಂದ 45 ದಿನಗಳ ವರೆಗೆ ನಡೆದಿರುತ್ತದೆ. ವೇಳಾಪಟ್ಟಿಯಲ್ಲಿನ ಪರೀಕ್ಷೆಗಳು ಮುಗಿದ ನಂತರ ಎಲ್ಲಾ ಪರೀಕ್ಷಾ ಕೇಂದ್ರದವರು ಪರೀಕ್ಷೆ ನಡೆದಿದ್ದ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಪೂರ್ಣಮೊತ್ತಕ್ಕೆ ಹುಂಡಿಗಳನ್ನು ವಿಶ್ವವಿದ್ಯಾನಿಲಯದ ಕಛೇರಿ ಆದೇಶಸಂಖ್ಯೆ: ಕರಾಮುವಿ/ಪವಿ/ಪ.ಕೇ/ಸಂ.ಪ/2013–14, ದಿನಾಂಕ:14/02/2014ರ ಆದೇಶದನುಸಾರ ಹುಂಡಿಗಳನ್ನು ತಯಾರಿಸಿ, ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವುದನ್ನು ಗಮನಿಸಬಹುದಾಗಿದೆ.<br><br>ವಿಶ್ವವಿದ್ಯಾನಿಲಯವು ಪರೀಕ್ಷೆಗೆ ಮೊದಲೇ ನೀಡಿದ್ದ ಡಿಡಿ ಮೊತ್ತ, ಹಾಗು ಮಾರ್ಜಿನಲ್ ಹೊಂದಾಣಿಕೆಗಾಗಿ ಶೇಕಡ 5 ರಷ್ಟನ್ನು ಮೊತ್ತವನ್ನು ಪಾವತಿಗೆ ಸಲ್ಲಿಕೆಯಾಗಿದ್ದ ಹುಂಡಿಯಲ್ಲಿ ಕಡಿತಗೊಳಿಸಿ_ ಉಳಿಕೆ ಮೊತ್ತವನ್ನು ಪಾವತಿಸಲು ವಿವಿಯ ಮಾನ್ಯಕುಲಪತಿಗಳ ಅನುಮೋದನೆ ಪಡೆದು ಪಾವತಿಸಬೇಕಾಗಿದ್ದ ಮೊತ್ತಗಳನ್ನು ಎಲ್ಲಾ ಆಯಾಯ ಪರೀಕ್ಷಾ ಕೇಂದ್ರಗಳ ಕಾಲೇಜಿನ ಪ್ರಾಂಶುಪಾಲರಿಗೆ/ಸಂಯೋಜನಾಧಿಕಾರಿಗಳ ಹೆಸರಿನಲ್ಲಿ ಡಿ.ಡಿಯನ್ನು ಸದರಿ ಖಾತೆಗಳಿಗೆ ಅಕೌಂಟ್‌ಪೇಗೆ ಜಮಾ ಆಗುವಂತೆ ಪಡೆದು ತ್ವರಿತ ಅಂಚೆಯ ಮೂಲಕ ಕಳುಹಿಸಲಾಗುತ್ತದೆ. ಇದು ವಾಸ್ತವಾಂಶ ಪರೀಕ್ಷೆಗಳಿಗೆ/ ವಿದ್ಯಾರ್ಥಿಗಳಿಗೆ/ ವಿವಿಯ ಆದೇಶದನುಸಾರ/ ವಿವಿ |

ಸಕ್ಷಮ ಪ್ರಾಧಿಕಾರಗಳು/ ಶಾಸನಬದ್ದ ಅಧಿಕಾರಿಗಳ ಅನುಮೋದನೆ ಪ್ರಕಾರವೇ ಪಾವತಿ ಆಗಿದೆಯೇ ವಿನಃ ಇನ್ನಾವುದೆ ಹೆಚ್ಚುವರಿಯಾಗಿ ಮೊಬಲಗನ್ನು ಪರೀಕ್ಷಾ ಕೇಂದ್ರದವರಿಗೆ ನೀಡಿರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿದೆ. ಸದರಿ ಕಂಡಿಕೆಯ ಆಕ್ಷೇಪಣೆ ಕೈಬಿಡಬೇಕೆಂದು ಕೋರಲಾಗಿದೆ. 2016–17ನೇ ಸಾಲಿನಲ್ಲಿ ಎಂ.ಎ/ಎಂ.ಕಾಂ/ಬಿ.ಎ/ಬಿ.ಕಾಂ ಕೋರ್ಸುಗಳ ವಾರ್ಷಿಕ ಪರೀಕ್ಷೆಗಳಿಗೆ ಮಾತ್ರ ಎ.ಸಿ. ಬಿಲ್ಲುಗಳಲ್ಲಿ ಮುಂಗಡ ಹಣ ಪಡೆದು ಈಗಾಗಲೇ ಹೊಂದಾಣಿಕೆಯಾಗಿರುತ್ತದೆ. ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಆದುದರಿಂದ ಸದರಿ ವಸೂಲಾತಿ ಕಂಡಿಕೆಯ ಕೈಬಿಡಬೇಕೆಂದು ಕೋರಲಾಗಿದೆ.

**ವಿವರ**

136 **<u>135. 2016–17ನೇ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಬೋಧಕೇತರ ಸಿಬ್ಬಂದಿಗಳ ಸೇವಾ ವಹಿಗಳ ನಿರ್ವಹಣೆಯಲ್ಲಿನ ನ್ಯೂನತೆಗಳು :–</u>**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇಲ್ಲಿನ ಬೋಧಕೇತರ ಸಿಬ್ಬಂದಿಗಳ ಸೇವಾವಹಿಗಳನ್ನು ಪರಿಶೀಲಿಸಿದ್ದು ನ್ಯೂನತೆಗಳು ಕೆಳಗಿನಂತಿರುತ್ತದೆ.

1) ಸಿಬ್ಬಂದಿಗಳ ಸೇವಾವಹಿಗಳಲ್ಲಿನ ಭಾಗ–1 ರ ವ್ಯಕ್ತಿ ವಿವರಗಳಲ್ಲಿ ಜನ್ಮದಿನಾಂಕದ ದೃಢೀಕರಣವು ಕಛೇರಿ ಮುಖ್ಯಸ್ಥರಿಂದ ಆಗಿರುವುದಿಲ್ಲ. ಜನ್ಮ ದಿನಾಂಕವು ನೌಕರರ ಪ್ರಮುಖವಾದ ಸೇವಾ ದಾಖಲೆಯಾಗಿದ್ದು, ಇದನ್ನು ಸಂಬಂಧಿಸಿದ ಪೂರಕ ದಾಖಲಾತಿಯೊಂದಿಗೆ ಕಛೇರಿ ಮುಖ್ಯಸ್ಥರಿಂದ ದೃಢೀಕರಣವಾಗಬೇಕಾಗಿರುತ್ತದೆ. ಕೆಸಿಎಸ್ ನಿಯಮ 405 ರಂತೆ ಕ್ರಮವಹಿಸಿ ನಿರ್ವಹಿಸಲು ಸೂಚಿಸಲಾಗಿದೆ.

2) ಕೆಸಿಎಸ್ಆರ್ ನಿಯಮ 294 ಹಾಗೂ 302 (4) ರಂತೆ, ನೌಕರರು ನಿವೃತ್ತಿ ಸೌಲಭ್ಯಗಳಾದ ಮರಣ ಹಾಗೂ ನಿವೃತ್ತಿ ಉಪದಾನ (DCRG) ಸಾಮೂಹಿಕ ವಿಮಾ ಯೋಜನೆ (GIS) ಹಾಗೂ ಕುಟುಂಬ ನಿವೃತ್ತಿ ವೇತನ (Family pension) ಗಳಿಗೆ ಸಂಬಂಧಿಸಿದಂತೆ ಕುಟುಂಬದ ಅರ್ಹ ವ್ಯಕ್ತಿಗಳಿಗೆ ನಾಮನಿರ್ದೇಶನ ಮಾಡಬೇಕಾಗಿರುತ್ತದೆ. ನಾಮನಿರ್ದೇಶನ ಮಾಡಿಲ್ಲದಿರುವ ಕೆಲವುನೌಕರರ ವಿವರ ಕೆಳಕಂಡಂತಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

| ಕ್ರ.ಸಂ | ನೌಕರರ ಹೆಸರು / ಪದನಾಮ |
|---|---|
| 1 | ಎಸ್. ಶ್ರೀಧರ್. ದ್ವಿತೀಯ ದರ್ಜೆ ಸಹಾಯಕರು |
| 2 | ನಿಂಗರಾಜು ದ್ವಿತೀಯ ದರ್ಜೆ ಸಹಾಯಕರು |
| 3 | ಸಿ. ಶಿವಣ್ಣ ದ್ವಿತೀಯ ದರ್ಜೆ ಸಹಾಯಕರು |
| 4 | ಕೌಸರ್ ತಾಜ್. ದ್ವಿತೀಯ ದರ್ಜೆ ಸಹಾಯಕರು |
| 5 | ಎಸ್.ಕೆ.ಶಿವಣ್ಣ ದ್ವಿತೀಯ ದರ್ಜೆ ಸಹಾಯಕರು |
| 6 | ಮೋಹನ್.ಎಂ.ಎನ್. ಅಧೀಕ್ಷಕರು |
| 7 | ಪ್ರದೀಪ್‌ಗಿರಿ.ಎಸ್. ಅಧೀಕ್ಷಕರು |
| 8 | ಸಂತೋಷ್. ಅಧೀಕ್ಷಕರು |

| | | | |
|---|---|---|---|
| | | 9 | ವಿರೂಪಾಕ್ಷಯ್ಯ.ಬಿ.ಜಿ. ಅಧೀಕ್ಷಕರು |
| | | 10 | ಶೇಖರಪ್ಪ.ಎಸ್. ದ್ವಿತೀಯ ದರ್ಜೆ ಸಹಾಯಕರು |
| | | 11 | ನಂದಿನಿ.ಸಿ ಸ್ವೀಪರ್ |
| | | 12 | ಶ್ರೀಕಂಠ ಸ್ವೀಪರ್ |

3) ಸಿಬ್ಬಂದಿಗಳ ಸೇವಾವಹಿಗಳಲ್ಲಿ ಕೇವಲ ಮರಣ ಹಾಗೂ ನಿವೃತ್ತಿ ಉಪದಾನಕ್ಕೆ ಸಂಬಂಧಿಸಿದ ನಾಮ ನಿರ್ದೇಶನ ಪ್ರಪತ್ರಗಳನ್ನು ಮಾತ್ರವೇ ಕಚೇರಿ ಮುಖ್ಯಸ್ಥರು ದೃಢೀಕರಿಸಿದ್ದು, ಸಾಮೂಹಿಕ ವಿಮಾ ಯೋಜನೆ ಹಾಗೂ ಕುಟುಂಬ ನಿವೃತ್ತಿ ವೇತನಕ್ಕೆ ಸಂಬಂಧಿಸಿದ ನಾಮ ನಿರ್ದೇಶನ ಪ್ರಪತ್ರಗಳನ್ನು ಕಛೇರಿ ಮುಖ್ಯಸ್ಥರು ದೃಢೀಕರಿಸಿಲ್ಲದಿರುವುದು ಕಂಡು ಬಂದಿರುತ್ತದೆ. ಕೂಡಲೇ ಕ್ರಮ ಕೈಗೊಂಡು ನಿರ್ವಹಿಸಲು ಸೂಚಿಸಿದೆ.

4) ಕೆಲವು ನೌಕರರ ಸೇವಾ ವಹಿಗಳಲ್ಲಿ ಕುಟುಂಬ ಸದಸ್ಯರ ವಿವರ, ವಾಸಸ್ಥಳ, ಸ್ವಂತ ಗ್ರಾಮ ಇತ್ಯಾದಿ ವಿವರಗಳನ್ನು ದಾಖಲಿಸದಿರುವುದು ಕಂಡು ಬಂದಿರುತ್ತದೆ. ನಿಯಮಗಳಂತೆ ಕ್ರಮ ವಹಿಸಲು ಸೂಚಿಸಿದೆ.

| | |
|---|---|
| | ಉತ್ತರ |
| ಲೆಕ್ಕಪರಿಶೋಧಕರು ಸೂಚಿಸಿರುವಂತೆ ಕ್ರಮವಹಿಸಲಾಗುವುದು. | |
| | **ವಿವರ** |
| 137 | **136. ಹಾಜರಾತಿ ವಹಿಗಳಲ್ಲಿ ರಜೆ ನಮೂದಿಸಿ ಸೇವಾವಹಿಯ ರಜಾ ಲೆಕ್ಕಗಳಲ್ಲಿ ಕಳೆಯದಿರುವುದು :–** |

2016–17ನೇ ಸಾಲಿನಲ್ಲಿ ಹಲವಾರು ನೌಕರರು ಗಳಿಕೆರಜೆ ಹಾಗೂ ಪರಿವರ್ತಿತ ರಜೆಯನ್ನು ಪಡೆದಿರುವುದನ್ನು ಕೇವಲ ಹಾಜರಾತಿ ವಹಿಯಲ್ಲಿ ನಮೂದಿಸಲಾಗಿದ್ದು, ಸದರಿ ರಜೆಗಳನ್ನು ಸಂಬಂಧಿಸಿದ ನೌಕರರ ಸೇವಾವಹಿಗಳಲ್ಲಿನ ರಜಾ ಲೆಕ್ಕದ ವಿವರಗಳಲ್ಲಿ ಕಳೆಯದೆ ಇರುವುದು ಕಂಡು ಬಂದಿರುತ್ತದೆ. ಹಾಗೂ ಕೆಲವು ನೌಕರರ HPL ಖಾತೆಯಲ್ಲಿ ಋಣಾತ್ಮಕ ಶಿಲ್ಕು ಇದ್ದರೂ ರಜೆಯನ್ನು ಮಂಜೂರು ಮಾಡಲಾಗಿದೆ. (ವಿವರಗಳನ್ನು ಅನುಬಂಧ (43)ರಲ್ಲಿ ನೀಡಿದೆ) ರಜಾ ವಿವರಗಳನ್ನು ಸೇವಾವಹಿಯಲ್ಲಿ ದಾಖಲಿಸಿ, ರಜೆಮಂಜೂರಾತಿ ಆದೇಶದ ವಿವರಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣೆಸಂಖ್ಯೆ:44/ದಿನಾಂಕ:28.12.2018 ಹಾಗೂ 49/ದಿನಾಂಕ:01.01.2019 ರಲ್ಲಿ ಕೋರಲಾಗಿತ್ತು. ಸದರಿ ವಿಚಾರಣೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ನೀಡಲಾಗಿರುವ ಉತ್ತರದಲ್ಲಿ ಇದಕ್ಕೆ ಸಂಬಂಧಿಸಿದಂತೆ. ಕ್ರಮವನ್ನು ವಹಿಸಲಾಗುತ್ತಿದೆ. ಎಂದು ತಿಳಿಸಿರುತ್ತಾರೆ. ರಜೆ ಮಂಜೂರಾತಿ ಇಲ್ಲದೆ. ಗಳಿಕೆರಜೆ/ಪರಿವರ್ತಿತ ರಜೆಗಳನ್ನು ನೌಕರರು ಉಪಯೋಗಿಸಿಕೊಂಡಿದ್ದು, ನಿಯಮಾನುಸಾರ ಸೇವಾವಹಿಗಳಲ್ಲಿನ ರಜಾ ಲೆಕ್ಕದಲ್ಲಿ ರಜೆಗಳನ್ನು ಕಳೆಯದೆ ಇರುವುದರಿಂದ ಅನುಬಂಧದಲ್ಲಿ ನೀಡಿರುವ ವಿವರದಂತೆ ಸಂಬಂಧಿಸಿದ ನೌಕರರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ಒಟ್ಟು ರೂ.3,21,168/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

| | ಉತ್ತರ |
|---|---|
| | 1. ಸಿಬ್ಬಂದಿಗಳ ಸೇವಾ ವಹಿಗಳಲ್ಲಿ ವ್ಯಕ್ತಿ ವಿವರಗಳಲ್ಲಿ ಜನ್ಮ ದಿನಾಂಕದ ದೃಢೀಕರಣವನ್ನು ಕಛೇರಿ ಮುಖ್ಯಸ್ಥರಿಂದ ಮಾಡಿಸುವಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.<br><br>2. ಮರಣ ಹಾಗೂ ನಿವೃತ್ತಿ ಉಪದಾನ ಹಾಗೂ ಕುಟುಂಬ ವೇತನಕ್ಕೆ ಸಂಬಂಧಿಸಿದಂತೆ ನಾಮ ನಿರ್ದೇಶನ ಆಗದೇ ಇರುವ ನೌಕರರುಗಳ ಸೇವಾ ವಹಿಯನ್ನು ಪರಿಶೀಲಿಸಿ ಸಂಬಂಧಿಸಿದಂತೆ ಕೂಡಲೆ ಕ್ರಮವಹಿಸಲಾಗುತ್ತದೆ.<br><br>3. ಕೆಲವು ನೌಕರರ ರಜೆ ಮಂಜೂರಾತಿ ಆಗಿದ್ದು, ಸೇವಾ ಪುಸ್ತಕದಲ್ಲಿ ಅರ್ಧವೇತನ / ಗಳಿಕೆ ರಜೆ ಕಡೆಗೆ ಖರ್ಚು ಹಾಕಿರುವುದಿಲ್ಲ. ಇದನ್ನು ಸರಿ ಪಡಿಸಿ ಅರ್ಧವೇತನ / ಗಳಿಕೆ ರಜೆ ಕಡೆಗೆ ಖರ್ಚು ಹಾಕುವ ಸಂಬಂಧ ಕ್ರಮ ವಹಿಸಲಾಗಿರುತ್ತದೆ. ಉಳಿದಂತೆ ನೌಕರರಿಂದ ರಜೆ ಅರ್ಜಿಯನ್ನು ಪಡೆದು ರಜೆ ಮಂಜೂರಾತಿ ಮಾಡಿ ಅರ್ಧವೇತನ ರಜೆ ಕಡೆಗೆ ಖರ್ಚು ಹಾಕುವ ಸಂಬಂಧ ಅಗತ್ಯ ಕ್ರಮ ವಹಿಸಲಾಗುತ್ತಿದೆ. ಆದುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |
| | **ವಿವರ** |
| 138 | **<u>137. ಹಾಜರಾತಿ ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳು :-</u>**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗದ ನೌಕರರ 2016-17ನೇ ಸಾಲಿನ ಹಾಜರಾತಿ ವಹಿಯನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಲೆಕ್ಕಪರಿಶೋಧನೆವೇಳೆ ಕಂಡುಬಂದಿರುತ್ತದೆ.<br><br>ಎ) ಆನಂದ.ಎ ದ್ವಿ ದರ್ಜೆ ಸಹಾಯಕ ರವರ ಹಾಜರಾತಿ ಪುಸ್ತಕದಲ್ಲಿ ಏಪ್ರಿಲ್-2016ರ ಮಾಹೆಯಿಂದ ನವೆಂಬರ್-2016 ರ ಮಾಹೆಯವರೆಗೆ x ಎಂದು ಗುರುತಿಸಿರುವುದು ಕಂಡುಬಂದಿದೆ.<br><br>ಬಿ) ಜಯಪ್ಪ (TCC) ಅಕ್ಟೋಬರ್-2016 ರ ಮಾಹೆಯಲ್ಲಿ ಹಾಜರಾತಿ ಪುಸ್ತಕದಲ್ಲಿ x ಎಂದು ಗುರುತಿಸಿರುವುದು ಕಂಡು ಬಂದಿದ್ದು. ನವಂಬರ್-2016 ರ ಮಾಹೆಯಿಂದ ಮಾರ್ಚ್-2017 ರ ಮಾಹೆಯವರೆಗೆ ಹಾಜರಾತಿ ಪುಸ್ತಕದಲ್ಲಿ ಸದರಿ ನೌಕರರ ಹೆಸರನ್ನು ಮತ್ತು ಹಾಜರಾತಿಯನ್ನು ದಾಖಲಿಸಿರುವುದಿಲ್ಲ.<br>ಸಿ) ಮಹದೇವಸ್ವಾಮಿ.ಜೆ ದ್ವಿ ದರ್ಜೆ ಸಹಾಯಕ ನವೆಂಬರ್-2016ರ ಮಾಹೆ ಮತ್ತು ಜನವರಿ-017 ರ ಮಾಹೆಯ ಹಾಜರಾತಿ ಪುಸ್ತಕದಲ್ಲಿ x ಎಂದು ಗುರುತಿಸಲಾಗಿದೆ.<br>ಡಿ) ಶ್ರೀಧರ ದ್ವಿ ದರ್ಜೆ ಸಹಾಯಕ ಅಕ್ಟೋಬರ್-2016 ರಿಂದ ಮಾರ್ಚ್ 2017 ರವರೆಗೆ ಹಾಜರಾತಿ ಪುಸ್ತಕದಲ್ಲಿ ಸದರಿ ನೌಕರರ ಸಹಿ ಇಲ್ಲದಿರುವುದು ಕಂಡು ಬಂದಿದೆ.<br>ಇ) ಶಿವಪ್ರಕಾಶ್ ಪರಿಚಾರಕರು ಅಕ್ಟೋಬರ್-2016 ರಿಂದ 2016 ನವೆಂಬರ್ ಮಾಹೆಯವರೆಗೆ ಸಹಿ ಇಲ್ಲದಿರುವುದು ಕಂಡುಬಂದಿದೆ. ಈ ಕುರಿತಂತೆ KCSR 106 ನಿಯಾಮಾವಳಿನುಸಾರ ಸೂಕ್ತ ಕ್ರಮ |

| | | |
|---|---|---|
| | ಕೈಗೊಂಡಿರುವ ಬಗ್ಗೆ ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ:–48/ದಿನಾಂಕ:29.12.18 ರಲ್ಲಿ ಕೋರಲಾಗಿತ್ತು. ಇದುವರೆವಿಗೂ ಯಾವುದೇ ಉತ್ತರ ನೀಡಿರುವುದಿಲ್ಲ. KCSR ರಜಾ ನಿಯಮಗಳ ಪಾಲನೆಯಾಗದಿರುವುದರಿಂದ ಮೇಲ್ಕಂಡ ಅವಧಿಗೆ ನೌಕರರಿಗೆ ಪಾವತಿಸಲಾದ ಮೊತ್ತ **ರೂ.41,428/– ವಸೂಲಿಸಿ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿರುವ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ. | |

| ಕ್ರ. ಸಂ | ನೌಕರರ ಹೆಸರು ಪದನಾಮ | ಅವಧಿ/ದಿನಾಂಕ | ವಿವರಣೆ | |
|---|---|---|---|---|
| 1 | ಜಯಪ್ಪ | 28.9.16 ಮತ್ತು 29.9.16<br>1.10.16 ರಿಂದ 31.10.16 ರವರೆಗೆ | ಹಾಜರಾತಿ ಪುಸ್ತಕದಲ್ಲಿ x ಎಂದು ಗುರುತಿಸಲಾಗಿದೆ. | 1476<br>22144 |
| 2 | ಮಹದೇವಯ್ಯ ದ್ವಿ.ದ.ಸ | ದಿನಾಂಕ:4.3.17 ರಿಂದ 10.3.17 ರವರೆಗೆ | x ಎಂದು ಗುರುತಿಸಲಾಗಿದೆ. | 4849 |
| 3 | ಶಿವಪ್ರಕಾಶ್ ಪರಿಚಾರಕರು | ದಿನಾಂಕ:1.10.16 ರಿಂದ 1.11.16 ರವರೆಗೆ | ಸಹಿ ಇಲ್ಲದಿರುವುದು ಕಂಡು ಬಂದಿದೆ. | 12959 |
| | | **ಒಟ್ಟು** | | **41,428** |

| | |
|---|---|
| | ಉತ್ತರ |
| | ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸಿ ಸರಿಪಡಿಸಿ ಮುಂದಿನ ಲೆಕ್ಕತಪಾಸಣೆ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 139 | **138. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಪರೀಕ್ಷಾ ಶುಲ್ಕ/ಘಟಿಕೋತ್ಸವ ಶುಲ್ಕದ ದರಕ್ಕಿಂತ ಕಡಿಮೆ ಶುಲ್ಕ ವಸೂಲಿಸಿರುವುದು :–**<br><br>2016–17ನೇ ಸಾಲಿನ ಪರೀಕ್ಷಾ ಖಾತೆ(09) ಗೆ ಸಂಬಂಧಿಸಿದಂತೆ ರಶೀತಿ ಪುಸ್ತಕಗಳನ್ನು ಪರಿಶೀಲಿಸಿದಾಗ 2016–17ನೇ ಸಾಲಿಗೆ ವಿಶ್ವವಿದ್ಯಾನಿಲಯ ನಿಗದಿಪಡಿಸಲಾದ ಪರೀಕ್ಷಾ ಶುಲ್ಕ/ಘಟಿಕೋತ್ಸವ ಶುಲ್ಕಗಳನ್ನು ನಿಗದಿಪಡಿಸಲಾದ ದರದಂತೆ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಸೂಲಿಸದೆ, ಕಡಿಮೆ ಶುಲ್ಕ ವಸೂಲಿಸಿರುವುದು ಲೆಕ್ಕ ತನಿಖಾ ಅವಧಿಯಲ್ಲಿ ಕಂಡುಬಂದಿರುತ್ತದೆ. ವಸೂಲಿಸಬೇಕಾದ ವ್ಯತ್ಯಾಸ ಕೆಳಕಂಡಂತಿದೆ. (ವಿವರವನ್ನು ಅನುಬಂಧ (44)ರಲ್ಲಿ ನೀಡಲಾಗಿದೆ)<br><br>ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಶುಲ್ಕದ ದರದಂತೆ<br>ವಸೂಲಿಸಬೇಕಾದ ಪರೀಕ್ಷಾ ಶುಲ್ಕ/ಘಟಿಕೋತ್ಸವ ಶುಲ್ಕ – 1,31,250,<br>ವಸೂಲಿಸಿದ ಶುಲ್ಕ – 53,900,<br>ವಸೂಲಿಸಬೇಕಾದ ವ್ಯತ್ಯಾಸದ ಮೊತ್ತ – 77,350 |

| | |
|---|---|
| | ಈ ಬಗ್ಗೆ ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನೆ ವಿಚಾರಣಾ ಸಂಖ್ಯೆ:-33/ದಿನಾಂಕ:14.12.18ರಲ್ಲಿ ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ವ್ಯತ್ಯಾಸದ ಮೊತ್ತವನ್ನು ವಸೂಲಿಸಲಾಗಿದೆ. ಎಂದು ತಿಳಿಸಿರುತ್ತಾರೆ, ಆದರೆ ಬ್ಯಾಂಕ್ ಚಲನ್‌ಗಳ ವಿವರ, ಬ್ಯಾಂಕಿಗೆ ಜಮೆಯಾದ ವಿವರವನ್ನು ಹಾಜರುಪಡಿಸಿರುವುದಿಲ್ಲ, ವಿವರಗಳನ್ನು ಒದಗಿಸುವವರೆಗೆ ವ್ಯತ್ಯಾಸದ ಶುಲ್ಕದ ಮೊತ್ತ **ರೂ.77,350/-ಗಳನ್ನು ವಸೂಲಾತಿಗೆ ಸೂಚಿಸಿದೆ.** |
| | ಉತ್ತರ |
| | 2016-17ನೇ ಸಾಲಿಗೆ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ / ಘಟಿಕೋತ್ಸವ ಶುಲ್ಕಗಳನ್ನು ವಿವಿ ನಿಲಯವು ನಿಗಧಿಪಡಿಸಲಾಗಿದ್ದ ದರದಂತೆ ಶುಲ್ಕವನ್ನು ವಸೂಲಿ ಮಾಡಲಾಗಿರುತ್ತದೆ. ತಾವು ತಿಳಿಸಿರುವ ವ್ಯತ್ಯಾಸದ ಶುಲ್ಕದ ಮೊತ್ತಕ್ಕೆ ಸಂಬಂಧಿಸಿದ ವಿವರವನ್ನು ಸಿದ್ಧಪಡಿಸಿ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗಿರುತ್ತದೆ. ಮತ್ತೊಮ್ಮೆ ಪರಿಶೀಲಿಸಿ ಸದರಿ ವಸೂಲಾತಿ ಕೈ ಬಿಡಲು ಕೋರಲಾಗಿದೆ. |
| | **ವಿವರ** |
| 140 | **139. ವಾರ್ಷಿಕ ಲೆಕ್ಕಪತ್ರದಲ್ಲಿನ ಘಟಿಕೋತ್ಸವ ಶುಲ್ಕದ ಸ್ವೀಕೃತಿ ಮೊತ್ತಕ್ಕೂ ವಸೂಲಿಸಿರುವ ಘಟಿಕೋತ್ಸವ ಶುಲ್ಕದ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸ ಇರುವುದು :-**<br><br>2016-17ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕಪತ್ರಗಳ ಪರೀಕ್ಷಾ ನಿಧಿ(09) ಖಾತೆಯ ಸ್ವೀಕೃತಿಯನ್ನು ಗಮನಿಸಿದಾಗ ಘಟಿಕೋತ್ಸವ ಶುಲ್ಕ ಮೊತ್ತ ರೂ.63,57,260/-ಗಳು ದಾಖಲಿಸಿರುವುದು ಕಂಡುಬಂದಿದ್ದು, ನಗದು ಪುಸ್ತಕ ರಶೀತಿ ಪುಸ್ತಕ ಮತ್ತು ಡೇಬುಕ್ ಗಳನ್ನು ಪರಿಶೀಲಿಸಿದಾಗ ಘಟಿಕೋತ್ಸವ ಶುಲ್ಕ ರೂ.53,86,210/-ಗಳು ಸ್ವೀಕೃತಿಯಾಗಿದ್ದು. ರೂ.9,71,050/-(63,57,260-53,86,210)ಗಳ ವ್ಯತ್ಯಾಸ ಅಂದರೆ ಕಡಿಮೆ ವಸೂಲು ಮಾಡಿರುವುದು ಕಂಡು ಬಂದಿರುತ್ತದೆ. 2016-17ನೇ ಸಾಲಿನಲ್ಲಿ ಬರಬೇಕಾದ ಘಟಿಕೋತ್ಸವ ಶುಲ್ಕ ಸ್ವೀಕೃತಿಯಾದ ಒಟ್ಟು ಘಟಿಕೋತ್ಸವ ಶುಲ್ಕ ಘಟಿಕೋತ್ಸವ ಪ್ರಮಾಣ ಪತ್ರ ವಿತರಣೆಯಾದ ವಿವರ ದಾಸ್ತಾನು ವಹಿ ಮತ್ತು ಚಿನ್ನದ ಪದಕ ವಿತರಣೆಯ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾಸಂಖ್ಯೆ:35/ ದಿ:17.12.2018ರಲ್ಲಿ ಕೋರಲಾಗಿತ್ತು. ಈ ವರೆವಿಗೂ ಯಾವುದೇ ವಿವರ ಒದಗಿಸಿರುವುದಿಲ್ಲ. ಘಟಿಕೋತ್ಸವ ಪ್ರಮಾಣ ಪತ್ರ ವಿತರಣೆ ಉಳಿಕೆ ಹಾಗೂ ಚಿನ್ನದ ಪದಕ ಖರೀದಿ ದಾಸ್ತಾನು ವಿವರಣೆ ಹಾಗೂ ಬಾಕಿ ವಿವರದ ದಾಸ್ತಾನು ವಹಿಯನ್ನು ಹಾಜರುಪಡಿಸಿರುವುದು ಹಾಗೂ ವ್ಯತ್ಯಾಸದ ಮೊತ್ತಕ್ಕೆ ಸೂಕ್ತ ವಿವರಣೆ ನೀಡುವವರೆಗೂ **ರೂ.9,71,050/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | 2016-17ನೇ ಸಾಲಿನಲ್ಲಿ ಘಟಿಕೋತ್ಸವ ನಡೆದಿರುವುದಿಲ್ಲ, ಆದ್ದರಿಂದ ಈ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪದಕ ವಿತರಣೆಯಾಗಿರುವುದಿಲ್ಲ. 2012-13 ಹಾಗೂ ಹಿಂದಿನ ವರ್ಷಗಳಲ್ಲಿ ಪ್ರವೇಶಾತಿ ಪಡೆದು ಏಪ್ರಿಲ್/ಮೇ 2014ರವರೆಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 2016-17ನೇ ಸಾಲಿನಲ್ಲಿ ಪದವಿ ಪ್ರಮಾಣ ಪತ್ರ |

| | |
|---|---|
| | ವಿತರಿಸಲಾಗಿದ್ದು, ಪದವಿ ಪ್ರಮಾಣ ಪತ್ರ ವಿತರಿಸುವ ಮಾಹಿತಿಯ ಪಟ್ಟಿಯನ್ನು (ವಿಷಯವಾರು) ಲೆಕ್ಕತಪಾಸಣಾ ಸಮಯದಲ್ಲಿ ಸಲ್ಲಿಸಲಾಗಿದೆ. ಹಾಗೂ 2013 ಮತ್ತು 2014ರಲ್ಲಿ ಪ್ರವೇಶಾತಿ ಪಡೆದು ಉತ್ತೀರ್ಣರಾದ ಇನ್‌ಹೌಸ್ ಮತ್ತು ಸಹಭಾಗಿತ್ವ ಸಂಸ್ಥೆಯ ಮೂಲಕ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಯು.ಜಿ.ಸಿ ಅನಿರ್ಧಿಷ್ಠಾವಧಿವರೆಗೆ ಮಾನ್ಯತೆಯನ್ನು ರದ್ದುಗೊಳಿಸಿದ ಕಾರಣ 2016–17ನೇ ಸಾಲಿನಲ್ಲಿ ವಾರ್ಷಿಕ ಘಟಿಕೋತ್ಸವವನ್ನು ಜರುಗಿಸಿರುವುದಿಲ್ಲ. ಆದರೂ ಸಹ ಈ ಸಾಲಿನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಬ್ಯಾಂಕ್‌ನಲ್ಲಿ ಆನ್‌ಲೈನ್ ಮೂಲಕ ಹಣ ಪಾವತಿಸಿ ಪದವಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಅಂತಹ ಅರ್ಜಿಗಳನ್ನು ವಿಶ್ವವಿದ್ಯಾನಿಲಯವು ಸ್ವೀಕರಿಸಿರುವುದಿಲ್ಲ. ಆದರೆ ಈ ಮೊತ್ತವು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಿರುತ್ತದೆ. ಹಾಗೂ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದಲ್ಲಿ ಕೆಲವು ತಾಂತ್ರಿಕ ತೊಂದರೆಗಳು (ಅಂಕಪಟ್ಟಿಯಲ್ಲಿ ತಿದ್ದುಪಡಿ, ಹೆಸರು ತಿದ್ದುಪಡಿ, ದರ್ಜೆ ನಮೂದನೆಯಾಗದಿರುವುದು ಇತ್ಯಾದಿ)ಅಪೂರ್ಣ ಅರ್ಜಿಗಳನ್ನು ತಿದ್ದುಪಡಿಗಾಗಿ ವಿದ್ಯಾರ್ಥಿಗಳಿಗೆ ಹಿಂದಿರುಗಿಸಲಾಗಿರುತ್ತದೆ. ಹಾಗಾಗಿ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಿರುವ ಮೊತ್ತಕ್ಕು ಅರ್ಜಿ ಸ್ವೀಕರಿಸಿರುವ ಮೊತ್ತಕ್ಕು ವ್ಯತ್ಯಾಸವಾಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| | **ವಿವರ** |
| 141 | <u>**140**. ವಿವಿಧ ಪರೀಕ್ಷ ಕೇಂದ್ರಗಳಿಂದ ಪರೀಕ್ಷ ಶುಲ್ಕದ ಡಿ.ಸಿ.ಬಿ. ವಹಿಯನ್ನು ಹಾಜರು ಪಡಿಸದಿರುವುದು ಹಾಗೂ ಸ್ವೀಕೃತವಾದ ಪರೀಕ್ಷ ಶುಲ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸಿರುವ (**Reconsilation)** ಕುರಿತು ವಿವರ ಲಭ್ಯವಿಲ್ಲದಿರುವುದು :–</u><br><br>ಪರೀಕ್ಷಾ ಖಾತೆ(09)ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕೋರ್ಸ್‌ಗಳಿಗೆ ಸಂಸ್ಥೆಗಳಿಂದ/ಇನ್‌ಹೌಸ್ ಪರೀಕ್ಷಾ ಕೇಂದ್ರಗಳಿಂದ ವಿದ್ಯಾರ್ಥಿಗಳು ಪರೀಕ್ಷ ಶುಲ್ಕವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಬ್ಯಾಂಕ್ ಚಲನ್‌ಗಳ ಮೂಲಕ ಜಮಾ ಮಾಡುವ ಬಗ್ಗೆ ಒಟ್ಟು ಮೊತ್ತವನ್ನು ಬ್ಯಾಂಕ್ ಚಲನ್ ಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗಿದೆ. ಬ್ಯಾಂಕ್ ಚಲನ್‌ಗಳಿಂದ ಸ್ವೀಕೃತವಾದ ಪರೀಕ್ಷ ಶುಲ್ಕಗಳನ್ನು ಮಾಹೆವಾರು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸಿರುವ ಕುರಿತು Reconsilation ವಿವರ ಲಭ್ಯವಿರುವುದಿಲ್ಲ ಹಾಗೂ ವಿವಿಧ ಪರೀಕ್ಷ ಕೇಂದ್ರಗಳಿಂದ ಪರೀಕ್ಷ ಶುಲ್ಕದ ಬೇಡಿಕೆ ಬಗ್ಗೆ ಡಿ.ಸಿ.ಬಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಡಿಸಿಬಿ ವಹಿಯನ್ನು ಹಾಜರುಪಡಿಸುವಂತೆ ಕೋರಿದೆ. ಕ.ರಾ.ಮು.ವಿ ಯ ಸಹಾಭಾಗಿತ್ವ ಸಂಸ್ಥೆಗಳಿಂದ ಪಡೆಯಬೇಕಾದ ಪರೀಕ್ಷ ಶುಲ್ಕದ ಬೇಡಿಕೆ ಮತ್ತು ಸಹಭಾಗಿತ್ವ ಸಂಸ್ಥೆಗಳು ಸಲ್ಲಿಸಿರುವ ಬ್ಯಾಂಕ್ ಚಲನ್‌ಗಳ ಮೊತ್ತವು ಬ್ಯಾಂಕ್ ಖಾತೆಗೆ ಜಮಾ ಆಗಿರುವ ಬಗ್ಗೆ ಸ್ಪಷ್ಟತೆ ಕಂಡುಬಂದಿರುವುದಿಲ್ಲ ಈ ಬಗ್ಗೆ ಸಮನ್ವಯಗೊಳಿಸಿದ ವರದಿಯನ್ನು ಲೆಕ್ಕಪರಿಶೋಧನೆ ವಿಚಾರಣ ಸಂಖ್ಯೆ:53/ದಿನಾಂಕ:09.01.2019 ರಲ್ಲಿ ಕೋರಲಾಗಿತ್ತು ಯಾವುದೇ ಪಾಲನಾವರದಿಯನ್ನು ನೀಡಿರುವುದಿಲ್ಲ. ಪರೀಕ್ಷ ಶುಲ್ಕದ ವಿವರದ ಡಿ.ಸಿ,ಬಿ |

| | |
|---|---|
| | ವಹಿಯನ್ನು ಹಾಜರುಪಡಿಸುವುದು ಹಾಗೂ ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸಿ ವರದಿಯನ್ನು ನೀಡುವುದು. |
| | ಉತ್ತರ |
| | ಲೆಕ್ಕಪರಿಶೋಧಕರು ಸೂಚಿಸಿರುವಂತೆ ಕ್ರಮವಹಿಸಿ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ವರದಿಯನ್ನು ಸಲ್ಲಿಸಲಾಗುವುದು. |
| | ವಿವರ |
| 142 | **141. ವಾರ್ಷಿಕ ಪತ್ರದಲ್ಲಿನ ಸಹಭಾಗಿತ್ವ ಸಂಸ್ಥೆಗಳ ಪರೀಕ್ಷಾಶುಲ್ಕದ ಸ್ವೀಕೃತಿ ಮೊತ್ತಕ್ಕೂ, ಪರೀಕ್ಷಾ ವಿಭಾಗದಲ್ಲಿನ ಪರೀಕ್ಷಾ ಶುಲ್ಕದ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸ ಇರುವುದು :–**<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರೀಕ್ಷಾ ನಿಧಿ ಖಾತೆ(09) ಗೆ ಸಂಬಂಧಿಸಿದಂತೆ 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಾರ್ಷಿಕ ಲೆಕ್ಕಪತ್ರಗಳು 2016–17 ರಲ್ಲಿ ಸಹಭಾಗಿತ್ವ ಸಂಸ್ಥೆಗಳಿಂದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ರೂ.1,68,29,975/–ಗಳು ಸ್ವೀಕೃತಿಯಾಗಿರುವುದು ಎಂದು ದಾಖಲಿಸಲಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ 2016–17ನೇ ವರ್ಷದಲ್ಲಿ ಪರಿಶಿಷ್ಟ ಜಾತಿ/ಪರಶಿಷ್ಟ ಪಂಗಡ ವಿದ್ಯಾರ್ಥಿಗಳ/ ಇತರೆ ವರ್ಗಾವಾರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದ ವಿವರ ಮತ್ತು ವಿನಾಯಿತಿ ನೀಡಿರುವ ಆದೇಶ/ವಿವರ, ಪರೀಕ್ಷಾಶುಲ್ಕ ಸಮಾಜಕಲ್ಯಾಣ ಇಲಾಖೆಯಿಂದ ಮರುಭರಿಕೆಯಾಗಿರುವ ವಿವರ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಆಗಿರುವುದು ಬೇಡಿಕೆ ಮೊತ್ತ (ಡಿಸಿಬಿ) ವಿವರಗಳನ್ನು ಮತ್ತು ಪ್ರಸ್ತುತ 2016–17ನೇ ಆರ್ಥಿಕ ವರ್ಷದಲ್ಲಿ ಪರೀಕ್ಷಾ ಕೇಂದ್ರಗಳು/ಅಧ್ಯಯನ ಕೇಂದ್ರಗಳ ವಿವರ/ಸಹಭಾಗಿತ್ವ ಸಂಸ್ಥೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ:08/ದಿನಾಂಕ:17.11.2018 ಮತ್ತು 12/20.11.18 ರಲ್ಲಿ ಕೋರಲಾಗಿತ್ತು. ವಿಚಾರಣೆಗೆ ಉತ್ತರವಾಗಿ ಪರೀಕ್ಷಾ ವಿಭಾಗದಲ್ಲಿ ಸಂಗ್ರಹಣೆಯಾಗಿರುವ ಸಹಭಾಗಿತ್ವ ಸಂಸ್ಥೆಗಳು/ ಇನ್‌ಹೌಸ್ ಕೇಂದ್ರಗಳಿಂದ ಡಿ.ಡಿ. ಮತ್ತು ಚಲನ್‌ಗಳ ಒಟ್ಟು ಮೊತ್ತ ರೂ.1,51,47,461/– ಸಂಗ್ರಹವಾಗಿದೆ ಎಂದು ತಿಳಿಸಿರುತ್ತಾರೆ ವಿವರ ಕೆಳಕಂಡಂತಿದೆ. ವ್ಯತ್ಯಾಸ ಕಂಡುಬಂದಿರುವ ರೂ.16,82,514/– (1,68,29,975–1,51,47,461)ಗಳಿಗೆ ಮಾಹಿತಿ ಲಭ್ಯವಿರುವುದಿಲ್ಲ. ಹಾಗೂ 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಹಭಾಗಿತ್ವ ಸಂಸ್ಥೆಗಳಿಂದ ಸ್ವೀಕೃತವಾದ ಡಿ.ಡಿ. ಮತ್ತು ಚಲನ್‌ಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಮಾಹೆವಾರು ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ. ಇದರಿಂದ ಶುಲ್ಕದ ಡಿ.ಸಿ.ಬಿ ವಿವರದ ಸ್ಪಷ್ಟತೆಯಿಲ್ಲದೆ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಮತ್ತು ಹೊಣೆಗಾರಿಕೆಯನ್ನು ತಪ್ಪಿಸಿದಂತಾಗಿದೆ. ಸಂಸ್ಥೆಗಳಿಂದ ವಿವಿಧ ಶೈಕ್ಷಣಿಕ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ವರ್ಗಾವಾರು ವಿವರ (ಡಿಸಿಬಿ) ಮತ್ತು ಪರೀಕ್ಷಾ ಶುಲ್ಕದ ವರ್ಗಾವಾರು ವಿವರ ಹಾಜರುಪಡಿಸುವವರೆಗೆ **ರೂ.16,82,514/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |

2016–17ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿ ಸಂಗ್ರಹಣೆ ಆಗಿರುವ ಡಿ.ಡಿ.ಮತ್ತು ಚಲನ್‌ಗಳ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| 1.2016–17 ಇನ್‌ಹೌಸ್ ಡಿ.ಡಿ.ಗಳ ಮೊತ್ತ | – | 3,84,705 |
| 2.In house Programme BA/B.Com-BA | - | 2,83,800 |
| Challan amount B-com | - | 37,450 |
| 3.In house Programme P.G Challan Amount | - | 4,04,156 |
| 4.In house programme convocation amount | - | 26,75,700 |
| 5.Collaborative institute exam fee | - | 70,82,350 |
| 6. Collaborative Institate exam fee | - | 42,79,300 |
| ಒಟ್ಟು ಡಿ.ಡಿ ಮತ್ತು ಚಲನ್‌ಗಳ ಮೊತ್ತ | – | 1,51,47,461 |
| ವಾರ್ಷಿಕ ಲೆಕ್ಕಗಳ ಪ್ರಕಾರ ಸ್ವೀಕೃತಿ | – | 1,68,29,975 |
| ವ್ಯತ್ಯಾಸದ ಮೊತ್ತ | – | 16,82,514 |

ಉತ್ತರ

ಪದವಿಗಳ ಪರೀಕ್ಷಾ ವಿದ್ಯಾರ್ಥಿಗಳ ವಿವರವನ್ನು ನೀಡುವಂತೆ ಐಇಎಂ ಸಂಸ್ಥೆಯವರಿಗೆ ಪತ್ರ ಬರೆಯಲಾಗಿದ್ದು ಸದರಿಯವರು ಮಾಹಿತಿ ನೀಡಿದ ನಂತರ ಸಲ್ಲಿಸಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ.

**ವಿವರ**

143 **142. ಹಣಕಾಸು ಶಾಖೆಯಿಂದ ಸ್ವೀಕೃತಗೊಂಡಿರುವ ಪರೀಕ್ಷಾ ಶುಲ್ಕದ ಡಿಡಿಗಳು ನಗದೀಕರಣಗೊಂಡಿರುವ ಮಾಹಿತಿ ಲಭ್ಯವಿಲ್ಲದಿರುವುದು :–**

ಪರೀಕ್ಷಾ ಖಾತೆ(09) ಗೆ ಸಂಬಂಧಿಸಿದಂತೆ 2016–17ನೇ ಸಾಲಿನ ಪರೀಕ್ಷಾ ಹಾಗೂ ಇತರೆ ಸಂಬಂಧ ಕಾರ್ಯಗಳಿಗಾಗಿ ಡಿ.ಡಿಗಳು ಸ್ವೀಕೃತವಾಗಿದ್ದು. (ಇನ್‌ಹೌಸ್) ಸದರಿ ಡಿ.ಡಿಗಳನ್ನು ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆ ನಂ:50200015842381 ರ ಬ್ಯಾಂಕ್ ಖಾತೆಗೆ ಜಮಾ ಮಾಡಿರುವ ಬಗ್ಗೆ ಪರೀಕ್ಷಾ ಖಾತೆಯಿಂದ ವಿವಿಧ ಶೈಕ್ಷಣಿಕ ಕೋರ್ಸ್‌ಗಳಿಗೆ ಪಡೆದ ಪರೀಕ್ಷಾ ಶುಲ್ಕದ ಜಮಾ ಮೊತ್ತ ರೂ.3,84,705/– ಡಿ.ಡಿಗಳನ್ನು 2016–17ನೇ ಸಾಲಿಗೆ ಹಣಕಾಸು ಶಾಖೆಗೆ ನೀಡಲಾಗಿದೆ ಎಂದು ಡಿ.ಡಿಗಳ ವಿವರ ಪಟ್ಟಿಯಿಂದ ತಿಳಿದುಬಂದಿದೆ. ಆದರೆ ಹಣಕಾಸು ವಿಭಾಗದ ಡಿಡಿಗಳ ವಿವರವನ್ನು ಪರಿಶೀಲಿಸಿದಾಗ ಒಟ್ಟು ಸ್ವೀಕೃತವಾದ ಡಿಡಿಗಳ ಸಂಖ್ಯೆ:4611 ಡಿಡಿಗಳ ಒಟ್ಟು ಮೊತ್ತ ರೂ.1,30,54,816/– ಎಂದು ದಾಖಲಿಸಲಾಗಿದೆ. ಇದರಿಂದ 2016–17ನೇ ಸಾಲಿಗೆ ಒಟ್ಟು ಸ್ವೀಕೃತವಾದ ಡಿಡಿಗಳ ಸಂಖ್ಯೆ ಮತ್ತು ಜಮಾ ಆದ ಮೊತ್ತದ ನಿಖರತೆಯನ್ನು

| | |
|---|---|
| | ಪರಿಶೀಲಿಸಲು ಸಾಧ್ಯವಾಗುತ್ತಿಲ್ಲ. ವ್ಯತ್ಯಾಸ ಕಂಡುಬಂದಿರುವ ಮೊತ್ತ ರೂ.1,26,70,111/-(13054816-384705) ಗಳಿಗೆ ಪ್ರತ್ಯೇಕವಾರು ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನೆ ವಿಚಾರಣಾ ಸಂಖ್ಯೆ:21/07.12.18 ರಲ್ಲಿ ಕೋರಲಾಗಿತ್ತು. ವಿಚಾರಣೆಗೆ ಯಾವುದೇ ಉತ್ತರ ನೀಡಿರುವುದಿಲ್ಲವಾದ್ದರಿಂದ ವಿವರಗಳನ್ನು ಹಾಜರುಪಡಿಸುವವರೆಗೆ **ರೂ.1,26,70,111/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br><br>ಶುಲ್ಕಗಳ ಡಿ.ಡಿಗಳಿಗೆ ಸಂಬಂಧಿಸಿದ ಡಿ.ಡಿ ಸ್ವೀಕೃತಿ ಹಾಗೂ ಬ್ಯಾಂಕ್ ಸ್ಕ್ರೋಲ್‌ನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು, ಈ ವಿವರಗಳನ್ನು ಪರಿಶೀಲಿಸಲಾಗಿ ಭಾಗಶಃ ಡಿಡಿಗಳು ನಗದೀಕರಣಗೊಂಡಿದ್ದು, ರೂ.34,270/-ಮೊಬಲಗಿನ ಸ್ವೀಕೃತಿ ಡಿಡಿಗಳು ನಗದೀಕರಣವಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಮಾಹಿತಿಯನ್ನು ಒದಗಿಸುವವರೆಗೆ **ರೂ.34,270/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br><br>ಮುಂದುವರೆದು ಡಿಡಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗೆ ಸ್ವೀಕೃತಿಯಾಗಿರುವ ಕೆಲವು ಡಿಡಿಗಳಿಗೆ ಸಹಿ/ಇನ್ನಿತರ ಸಮಸ್ಯೆ ಇದ್ದುದರಿಂದ ಹತ್ತು ಡಿಡಿಗಳ ಒಟ್ಟು ಮೊತ್ತ ರೂ.6,750/- ಮತ್ತು 24 ಡಿಡಿಗಳ ಒಟ್ಟು ಮೊತ್ತ ರೂ.27,770/- ಅವಧಿ ಮೀರಿರುವುದರಿಂದ ನವೀಕರಿಸಲು ಬ್ಯಾಂಕಿಗೆ ಸಲ್ಲಿಸಲಾಗಿದೆ ಎಂದು ತಿಳಿಸಲಾಗಿದೆ. ಈ ಮೊತ್ತವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಧಿಗೆ ಜಮೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲದಿರುವುದರಿಂದ **ರೂ.34,520/- ಗಳನ್ನು ವಸೂಲಾತಿಗೆ ಸೂಚಿಸಿದೆ.** ವಿವರವನ್ನು **ಅನುಬಂಧ (45)** ರಲ್ಲಿ ನೀಡಲಾಗಿದೆ.<br><br>**ಆಕ್ಷೇಪಣಾ ಮೊತ್ತ 1,27,04,381/-** **ವಸೂಲಾತಿ ಮೊತ್ತ.34,520/-** |
| | ಉತ್ತರ |
| | ಲೆಕ್ಕ ಪರಿಶೋಧನಾ ವಿಚಾರಣೆ ಸಂಖ್ಯೆ 21/07.12.2018 ರಲ್ಲಿ ಕೋರಲಾಗಿದ್ದ ವಿವರಗಳನ್ನು ಅಂದರೆ ಡಿ.ಡಿ. ಸ್ವೀಕೃತಿ ಮತ್ತು ಬ್ಯಾಂಕ್‌ಸ್ಕ್ರೋಲ್‌ನ್ನು ಲೆಕ್ಕ ತಪಾಸಣೆಗೆ ಈಗಾಗಲೇ ಒದಗಿಸಲಾಗಿದ್ದು, ಆಕ್ಷೇಪಣೆ ವ್ಯಕ್ತಪಡಿಸಿರುವ ಮೊತ್ತವಾದ ರೂ. 66,640/- ಗಳಲ್ಲಿ ರೂ. 32,120/- ಗಳು ವಿ.ವಿ. ಖಾತೆಗೆ ಜಮೆಯಾಗಿರುವ ಬಗ್ಗೆ ಬ್ಯಾಂಕ್ ಸ್ಕ್ರೋಲ್‌ನ ಜೊತೆಯಲ್ಲಿ ಮಾಹಿತಿ ನೀಡಲಾಗಿದೆ. ಉಳಿದ ರೂ. 34,520/- ಗಳಿಗೆ ಸಂಬಂಧಿಸಿದಂತೆ, ಡಿ.ಡಿ.ಗಳಲ್ಲಿ ಸಹಿ ಮತ್ತು ಇನ್ನಿತರ ವ್ಯತ್ಯಾಸ ಇದ್ದುದರಿಂದ ಪರೀಕ್ಷಾ ವಿಭಾಗಕ್ಕೆ ರೂ. 6,750/- ಮೊತ್ತದ ಡಿ.ಡಿ.ಗಳನ್ನು ಹಿಂತಿರುಗಿಸಲಾಗಿದೆ. ಉಳಿದ ರೂ. 27,770/- ಗಳು ಜಮೆಯಾಗಿರುವ ಬಗ್ಗೆ ಮಾಹಿತಿ ಕೋರಿ ವ್ಯವಸ್ಥಾಪಕರು, ಹೆಚ್.ಡಿ.ಎಫ್.ಸಿ. ಬ್ಯಾಂಕ್ ವಿ.ವಿ. ಮೊಹಲ್ಲ, ಮೈಸೂರು ರವರಿಗೆ ದಿನಾಂಕ 19-01-2019 ರಂದು ಪತ್ರ ಬರೆಯಲಾಗಿದೆ. ಮಾಹಿತಿ ದೊರೆತ ನಂತರ ಮುಂದಿನ ಲೆಕ್ಕ ತಪಾಸಣೆಗೆ ಹಾಜರು ಪಡಿಸಲಾಗುವುದು. ಆದ್ದರಿಂದ ಸದರಿ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಯನ್ನು ಕೈಬಿಡಬೇಕೆಂದು ಕೋರಿದೆ. |
| | **ವಿವರ** |
| 144 | **143. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿವಿಧ ಶೈಕ್ಷಣಿಕ ಕೋರ್ಸ್‌ಗಳಿಗೆ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹಾಜರಾದ ವಿವರ, ಪರೀಕ್ಷಾ ಶುಲ್ಕ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆ ವಿವರ ಹಾಗೂ ಡಿ.ಸಿ.ಬಿ ವಹಿ** |

| | |
|---|---|
| | <u>**ಹಾಜರುಪಡಿಸದಿರುವುದು :–**</u><br><br>2016–17ನೇ ಸಾಲಿಗೆ ಪರೀಕ್ಷಾ ಶುಲ್ಕದ ವಿವರಗಳನ್ನು ಪರಿಶೀಲಿಸಿದಾಗ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು/ ಇತರೆ ವರ್ಗಾವಾರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದ ವಿವರ ವಿನಾಯಿತಿ ನೀಡಿರುವ ಆದೇಶ/ವಿವರ, ಪರೀಕ್ಷಾ ಶುಲ್ಕದ ಮೊತ್ತವು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಲಾದ ಬೇಡಿಕೆ ಮೊತ್ತ(ಡಿಮ್ಯಾಂಡ್) ವಿವರಗಳನ್ನು ಡಿಸಿಬಿ ವಹಿಯೊಂದಿಗೆ ಹಾಗೂ ಪ್ರಸುತ್ತ 2016–17ನೇ ಆರ್ಥಿಕ ವರ್ಷದಲ್ಲಿ ಪರೀಕ್ಷಾ ಕೇಂದ್ರಗಳು/ ಅಧ್ಯಯನ ಕೇಂದ್ರಗಳ ವಿವರ/ಸಹಭಾಗಿತ್ವ ಸಂಸ್ಥೆಗಳ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:12/20.11.2018 ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ. ಕೂಡಲೇ ವಿವರಗಳನ್ನು ಡಿಸಿಬಿ ವಹಿಯೊಂದಿಗೆ ಹಾಜರುಪಡಿಸುವಂತೆ ಸೂಚಿಸಿದೆ. |
| | ಉತ್ತರ |
| | ಮಾಹಿತಿಯನ್ನು ಸಿದ್ಧಪಡಿಸಿ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 145 | <u>**144. 2016–17ನೇ ಸಾಲಿನ ವಿವಿಧ ಅಧ್ಯಯನ ಪೀಠಗಳ ನಗದು ಪುಸ್ತಕ ಬ್ಯಾಂಕ್ ಸ್ಕ್ರೋಲ್‌ದೊಂದಿಗೆ ಲೆಕ್ಕ ಸಮನ್ವಯಗೊಳ್ಳದೆ ಇರುವ ವಿಚಾರ:–**</u><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಪೀಠಗಳ ನಗದು ಜಮೆ ಖರ್ಚು ಪ್ರಾರಂಭ ಶಿಲ್ಕು ಅಂತಿಮ ಶಿಲ್ಕು, ಬ್ಯಾಂಕ್ ಖಾತೆಯೊಂದಿಗೆ ಸಮನ್ವಯಗೊಳಿಸದೆ ಇರುವುದರಿಂದ ಹಿಂದಿನಿಂದ ಬಾಕಿ ಉಳಿದುಕೊಂಡಿರುವ ಧನಾದೇಶಗಳು ನಗದಾಗದೆ ಇರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ದಿನಾಂಕ:31.03.2017 ಅಂತ್ಯಕ್ಕೆ ಎಲ್ಲಾ ಅಧ್ಯಯನ ಪೀಠಗಳ ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿನೊಂದಿಗೆ ಸಮನ್ವಯಗೊಳಿಸಲು ಸೂಚಿಸಿದೆ. ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡಿದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ಸದರಿ ಕಂಡಿಕೆಗೆ ಅನುಪಾಲನಾ ವರದಿ ನೀಡಲು ಸೂಚಿಸಲಾಗಿದೆ. |
| | ಉತ್ತರ |
| | ಎಲ್ಲಾ ಅಧ್ಯಯನ ಪೀಠಗಳ ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿನೊಂದಿಗೆ ಸಮನ್ವಯಗೊಳಿಸಿ ಮುಂದಿನ ಲೆಕ್ಕತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | **ವಿವರ** |
| 146 | <u>**145. 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಪೀಠಗಳು :–**</u><br>2016–17ನೇ ವಿವಿಧ ಅಧ್ಯಯನ ಪೀಠಗಳ ಬ್ಯಾಂಕ್ ಖಾತೆ ಹಾಗೂ ನಗದು ಪುಸ್ತಕ ವಾರ್ಷಿಕ ಲೆಕ್ಕಪತ್ರದಂತೆ ಹಾಗೂ ವಿಚಾರಣೆ ಸಂಖ್ಯೆ:158 ರಲ್ಲಿ ತಿಳಿಸಿರುವಂತೆ ನೀಡಿರುವ ಅನುಪಾಲನ ವರದಿಯನ್ನು |

| | |
|---|---|
| | ಪರಿಶೀಲಿಸಿದಾಗ ಅಧ್ಯಯನ ಪೀಠಗಳ ಪ್ರಾರಂಭ ದಿನಾಂಕ, ಮುಕ್ತಾಯ ದಿನಾಂಕ, ಅಧ್ಯಯನ ಪೀಠ ಮೂಲ ಉದ್ದೇಶ, ಅಧ್ಯಯನ ಪೀಠಗಳಲ್ಲಿ ಬ್ಯಾಂಕ್ ಖಾತೆ ಆರ್ಥಿಕ ವಹಿವಾಟು ಕುರಿತು BOM ಸಭೆಯಲ್ಲಿ ಅನುಮೋದನೆ ಪಡೆದಿರುವ ಆದೇಶ ಪ್ರತಿ ಇತ್ಯಾದಿಗಳ ದಾಖಲಾತಿಯನ್ನು ಪರಿಶೀಲಿಸಿ ಒದಗಿಸದೆ ಇರುವುದರಿಂದ ಕೆಳಕಂಡ ವಿವರಗಳಿಗೆ ದಾಖಲಾತಿ ಲೆಕ್ಕಪತ್ರ ಒದಗಿಸಲು ಸೂಚಿಸಿದೆ. |

| ಕ್ರ.ಸಂ | ಅಧ್ಯಯನ ಪೀಠದ ಹೆಸರು | ಪ್ರಾರಂಭ ಶಿಲ್ಕು | ಸ್ವೀಕೃತಿ | ಒಟ್ಟು | ಪಾವತಿ | ಅಂತಿಮ ಶಿಲ್ಕು |
|---|---|---|---|---|---|---|
| 1 | ಡಾ॥ ಬಿ.ಆರ್.ಅಂಬೇಡ್ಕರ್ ಅಧ್ಯಯನ ಪೀಠ | 344709 | 153201 | 497910 | 135892 | 362018 |
| 2 | ಸ್ವಾಮಿ ವಿವೇಕಾನಂದ | 394647 | 160085 | 554732 | 100 | 554632 |
| 3 | ಅಕ್ಕಮಹಾದೇವಿ | 207343 | 150704 | 358047 | 100 | 357941 |
| 4 | ಬಾಬು ಜಗಜೀವನ್‌ರಾಮ್ | 289597 | 151750 | 441347 | 91379 | 349969 |
| 5 | ನಾಲ್ವಡಿ ಕೃಷ್ಣರಾಜ ಒಡೆಯರ್ | 392849 | 15993 | 552842 | 100 | 552742 |
| 6 | ರಾಷ್ಟ್ರಕವಿ ಕುವೆಂಪು ಖಾತೆ ಸಂಖ್ಯೆ:64099279627 | 103624 | 145510 | 249134 | 100 | 249034 |
| 7 | ಮಹಾತ್ಮಗಾಂಧಿ ಅಧ್ಯಯನ ಪೀಠ | 291473 | 154968 | 446441 | 100 | 446341 |
| | **ಒಟ್ಟು** | **2024242** | **1076211** | **3100453** | **227771** | **2872682** |

ವಿವರದಲ್ಲಿ ತಿಳಿಸಿರುವಂತೆ ಬ್ಯಾಂಕ್ ಖಾತೆ ಹಾಗೂ ನಗದು ಪುಸ್ತಕದೊಂದಿಗೆ ಸಮನ್ವಯಗೊಳಿಸಿ ಪ್ರತಿ ಮಾಹೆ ದೃಢೀಕರಿಸಿ ವ್ಯತ್ಯಾಸದ ಬಗ್ಗೆ ವಿವರ ನಗದುಪುಸ್ತಕದಲ್ಲಿ ನಮೂದಿಸಲು ಸೂಚಿಸಿದೆ. ವಿಚಾರಣೆ ಸಂಖ್ಯೆ:159 ನೀಡಿರುವ ಅನುಪಾಲನ ವರದಿಯನ್ನು ನೀಡಲು ಸೂಚಿಸಿದೆ.

| | |
|---|---|
| | ಉತ್ತರ |
| | ಲೆಕ್ಕಪರಿಶೋಧಕರು ಸೂಚಿಸಿರುವಂತೆ ಕ್ರಮ ಕೈಗೊಳ್ಳಲಾಗುವುದು. |
| | **ವಿವರ** |
| 147 | **146. 2016–17ನೇ ಸಾಲಿನ ವಿವಿಧ ಪೀಠಗಳ/ನಿಧಿಗಳ ನವೀಕರಣೆಗೊಂಡಿರುವ ಹಾಗೂ ಅಧ್ಯಯನ ಪೀಠಗಳಲ್ಲಿ ಠೇವಣಿಗಳಲ್ಲಿ ತೊಡಗಿಸಿರುವ ಕಡತವನ್ನು ಹಾಜರುಪಡಿಸದೆ ಇರುವುದು :–** |
| | 2016–17ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಪೀಠಗಳ/ನಿಧಿಗಳ ನವೀಕರಣಗೊಂಡಿರುವ, ಸ್ಥಾಪನೆಯಾದ ದಿನಾಂಕ ನಿಧಿಗಳ ಮೇಲೆ ತೊಡಗಿಸಿರುವ ಠೇವಣಿ ಮೊತ್ತದ ಬಗ್ಗೆ BOM ಸಭೆಯಲ್ಲಿ ಅಂಗೀಕಾರ ದಿನಾಂಕ ನಿಧಿಗಳ ಮೇಲೆ ತೊಡಗಿಸಿರುವ ಠೇವಣಿ ಮೊತ್ತದ ಬಗ್ಗೆ ಕುಲಸಚಿವರಿಂದ ಅನುಮೋದನೆಗೊಂಡಿರುವ ಪ್ರತಿಯನ್ನು ಹಾಜರುಪಡಿಸದೆ ಇರುವುದು ಕಂಡುಬಂದಿರುತ್ತದೆ. ಇದರಿಂದ ವಿವಿಧ ಅಧ್ಯಯನಪೀಠಗಳಿಂದ ಹೂಡಿಕೆಮಾಡಿರುವ ಠೇವಣಿಗಳ ಪ್ರಾರಂಭ ದಿನಾಂಕ, ಮುಕ್ತಾಯಗೊಂಡಿರುವ ದಿನಾಂಕ, ನವೀಕರಣಗೊಂಡಿರುವ ದಿನಾಂಕ ಹಾಗೂ ಅಧ್ಯಯನಪೀಠಗಳಲ್ಲಿ |

| | |
|---|---|
| | ತೊಡಗಿಸಿರುವ ಠೇವಣಿಗಳ ವಿವರ ಇತ್ಯಾದಿಯನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ, ಪೀಠಗಳ ನವೀಕರಣಗೊಂಡಿರುವ ಬಗ್ಗೆ ತಿಳಿಯಲು ಸಾಧ್ಯವಿರುವುದಿಲ್ಲ ಹಾಗೂ ಸರ್ಕಾರದ ಪೂರ್ವಾನುಮತಿ ಪಡೆದು ಅಧ್ಯಯನಪೀಠಗಳ ಸ್ಥಾಪನೆ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲ, ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:134 ದಿನಾಂಕ:24.12.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ಸದರಿ ಕಂಡಿಕೆಗೆ ಅನುಪಾಲನಾ ವರದಿ ಸೂಚಿಸಲಾಗಿದೆ. |
| | ಉತ್ತರ |
| | ಲೆಕ್ಕಪರಿಶೋಧಕರು ಸೂಚಿಸಿರುವ ಮಾಹಿತಿಗಳನ್ನು ಮುಂದಿನ ಲೆಕ್ಕತಪಾಸಣೆಯ ಸಮಯದಲ್ಲಿ ಹಾಜರುಪಡಿಸಲಾಗುವುದು. |
| | ವಿವರ |
| 148 | **147. 2016–17 ನೇ ಸಾಲಿನ ರಾಷ್ಟಕವಿ ಕುವೆಂಪು ಖಾತೆ ಹಾಗೂ ಮುಕ್ತ ಸಂಜೀವಿನಿ ಖಾತೆಯ ಆಯವ್ಯಯದಲ್ಲಿ ನಿಗಧಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಖರ್ಚು ಕಂಡುಬಂದಿರುವ ಬಗ್ಗೆ :–** |

ಮೇಲಿನ ವಿಷಯದಲ್ಲಿ 2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ರಾಷ್ಟಕವಿ ಕುವೆಂಪು ಖಾತೆ ಹಾಗೂ ಮುಕ್ತ ಸಂಜೀವಿನಿ ಖಾತೆಯ ಆಯವ್ಯಯದಲ್ಲಿ ನಿಗಧಿ ಪಡಿಸಿರುವ ಮೊತ್ತಕ್ಕಿಂತ ವಾಸ್ತವಿಕವಾಗಿ ವಾರ್ಷಿಕ ಲೆಕ್ಕಪತ್ರದಲ್ಲಿ ಜಮಾ ಖರ್ಚಿನ ಮೊತ್ತವು ಆಯವ್ಯಯದಲ್ಲಿ ನಿಗಧಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿರುವುದು ಕಂಡು ಬಂದಿರುತ್ತದೆ. ಈ ವ್ಯತ್ಯಾಸದ ಕುರಿತು ಸೂಕ್ತ ಅನುಪಾಲನಾ ವರದಿ ಮತ್ತು ಸಂಬಂಧಿಸಿದ ಪೂರಕ ದಾಖಲಾತಿಗಳನ್ನು ಒದಗಿಸಲು ಸೂಚಿಸಿದೆ.

**2016–17 ಮುಕ್ತ ಸಂಜೀವಿನಿ ವಿದ್ಯಾರ್ಥಿ ವೇತನ ನಿಧಿ ಖಾತೆ ಸಂಖ್ಯೆ:64018806640**

| | **Budget** | **Annual** | **Difference** |
|---|---|---|---|
| Opening balance | 25065755 | 95279851 | -70214096 |
| Receipts | 5600000 | 6842455 | -1242455 |
| Total | 30665755 | 102122306 | -71456551 |
| Payment | 26010000 | - | -76112306 |
| Closing balance | 4655755 | 102122306 | -97466551 |

(1) ವಿಚಾರಣಾ ಪತ್ರ ಸಂಖ್ಯೆ: 50/2018–19 28.11.2018 ರಂದು ವಿಚಾರಣೆಗೆ ವಿವರಣೆ ನೀಡದೆ ಇರುವುದರಿಂದ ಕಂಡಿಕೆಗೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

| | |
|---|---|
| | ಉತ್ತರ |
| | ಆಯವ್ಯಯದಲ್ಲಿ ನಿಗಧಿ ಪಡಿಸಿರುವ ಮೊತ್ತಕ್ಕಿಂತ ವಾಸ್ತವಿಕವಾಗಿ ವಾರ್ಷಿಕ ಲೆಕ್ಕಪತ್ರದಲ್ಲಿ ಜಮಾ |

| | |
|---|---|
| | ಖರ್ಚಿನ ಮೊತ್ತದಲ್ಲಿ ವ್ಯತ್ಯಾಸವಾಗುವುದು ಸಾಮಾನ್ಯವಾಗಿದ್ದು, ಪರಿಷ್ಕೃತ ಆಯವ್ಯಯ ಅಂದಾಜುವಿನ ಪ್ರಕಾರ ರಾಷ್ಟ್ರಕವಿ ಕುವೆಂಪು ಖಾತೆ ಹಾಗೂ ಮುಕ್ತ ಸಂಜೀವಿನಿ ಖಾತೆಯ ಆದಾಯದಲ್ಲಿ ಹೆಚ್ಚುವರಿಯಾಗಿದ್ದು, ವೆಚ್ಚದಲ್ಲಿ ಹೆಚ್ಚುವರಿಯಾಗಿರುವುದಿಲ್ಲ. ಆಯವ್ಯಯದಲ್ಲಿ ನಿಗಧಿಪಡಿಸಿರುವುದಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಎಂಬುದನ್ನು ತಮ್ಮ ಗಮನಕ್ಕೆ ತರಲಾಗಿದೆ. |
| | **ವಿವರ** |
| 149 | **<u>148. ಜ್ಞಾನವಾಣಿ ಲೆಕ್ಕ (ಖಾತೆ ಸಂಖ್ಯೆ: 54035421177) :–</u>**<br><br>2016–17ನೇ ಸಾಲಿಗೆ ಜ್ಞಾನವಾಣಿ ಲೆಕ್ಕ ಬ್ಯಾಂಕ್ ಖಾತೆಯಲ್ಲಿ ಹೊಂದಾಣಿಕೆಯಾಗಿರುವ ಬಡ್ಡಿಯನ್ನು ಮರು ಹೂಡಿಕೆ ಮಾಡದೆ ಹಾಗೆಯೇ ಮುಂದುವರೆಸಿರುವುದರಿಂದ ಕ್ರಮಕೈಗೊಂಡು ಠೇವಣಿ ಹೂಡಿಕೆ ವೇತನ ವಿವರಣೆ ನೀಡಲು ಸೂಚಿಸಿದೆ.<br><br>ದಿನಾಂಕ:01.04.2016ಕ್ಕೆ ಪ್ರಾರಂಭಿಕ ಶಿಲ್ಕು: 1,85,062.12<br>2016–17ಕ್ಕೆ ಸ್ವೀಕೃತಿ: 2,14,503.00<br>**ಒಟ್ಟು: 3,99,565.16**<br>2016–17ಕ್ಕೆ ವೆಚ್ಚ: –<br>ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು: 3,99,565.16<br>ಬ್ಯಾಂಕ್ ಖಾತೆಯ ಪ್ರಕಾರ ಅಂತಿಮ ಶಿಲ್ಕು: 3,99,565.16<br>ವಾರ್ಷಿಕ ಲೆಕ್ಕಪತ್ರದಂತೆ ಪ್ರಾರಂಭಿಕ ಶಿಲ್ಕು: 3,57,575.00<br>ವ್ಯತ್ಯಾಸ: 41,990.16<br><br>ಬ್ಯಾಂಕ್ ಖಾತೆಯ ಅಂತಿಮ ಶಿಲ್ಕು ಹಾಗೂ ವಾರ್ಷಿಕ ಲೆಕ್ಕಪತ್ರದಂತೆ ಅಂತಿಮ ಶಿಲ್ಕು ವ್ಯತ್ಯಾಸದ ಬಗ್ಗೆ ಲೆಕ್ಕ ಸಮನ್ವಯಗೊಳಿಸಿ ವಿವರಣೆ ನೀಡಲು ಸೂಚಿಸಿದೆ. ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ **ಮೊತ್ತ ರೂ.41,990/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** |
| | ಉತ್ತರ |
| | 2016–17ನೇ ಸಾಲಿನಲ್ಲಿ ಜ್ಞಾನವಾಣಿ ಲೆಕ್ಕ ಬ್ಯಾಂಕ್ ಖಾತೆಯಲ್ಲಿ ರೂ. 41,990.16/– ನಗದಾಗದ ಧನಾದೇಶವಾಗಿದ್ದು, ಬಡ್ಡಿಯಾಗಿರುವುದಿಲ್ಲ. ಸದರಿ ಮೊತ್ತವನ್ನು ಆದಾಯಕ್ಕೆ ತೆಗೆದುಕೊಳ್ಳಲಾಗಿರುತ್ತದೆ. ಹಾಗೂ 2018–19ನೇ ಸಾಲಿನಲ್ಲಿ ಸದರಿ ಬ್ಯಾಂಕ್ ಖಾತೆಯನ್ನು ಮುಚ್ಚಲಾಗಿರುತ್ತದೆ. ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. |

| | ವಿವರ |
|---|---|
| 150 | **149. ದತ್ತಿ ನಿಧಿ ಖಾತೆ ಸಂಖ್ಯೆ: 54035421257 :–** |

**ಆರ್ಥಿಕ ಪರಿಸ್ಥಿತಿ**

2016–17ನೇ ಸಾಲಿನ ವಿಶ್ವವಿದ್ಯಾನಿಲಯದ ದತ್ತಿ ನಿಧಿ ಖಾತೆಯನ್ನು ತೆರೆಯಲಾಗಿತ್ತು. ಬ್ಯಾಂಕ್ ಖಾತೆಯಿಂದ ಬಂದಿರುವ ಮೊಬಲಗನ್ನು ಮರುಹೂಡಿಕೆ ಮಾಡಿರುವ ಹಾಗೆಯೇ ಮುಂದುವರಿಸಿರುವುದರಿಂದ ಕ್ರಮಕೈಗೊಂಡ ಬ್ಯಾಂಕ್ ಖಾತೆಯಲ್ಲಿ ಹೊಂದಾಣಿಕೆಯಾಗಿರುವ ಬಡ್ಡಿಯ BOM ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಠೇವಣಿ ಹೂಡಿಕೆ ಮಾಡಲು ಸೂಚಿಸಿದೆ.

| | |
|---|---|
| ದಿನಾಂಕ:01.04.2016ಕ್ಕೆ ಪ್ರಾರಂಭಿಕ ಶಿಲ್ಕು | 2,16,757 |
| 2016–17ಕ್ಕೆ ಸ್ವೀಕೃತಿ | 12,689 |
| **ಒಟ್ಟು** | **2,29,446** |
| 2016–17ಕ್ಕೆ ವೆಚ್ಚ | 100 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 2,29,346 |
| ಬ್ಯಾಂಕ್ ಖಾತೆಯ ಪ್ರಕಾರ ಅಂತಿಮ ಶಿಲ್ಕು | 34,98,172 |
| ವಾರ್ಷಿಕ ಲೆಕ್ಕಪತ್ರದಂತೆ ಪ್ರಾರಂಭಿಕ ಶಿಲ್ಕು | 2,29,346 |
| ಎಫ್.ಡಿ.ಆರ್ | 32,68,826 |

| | ಉತ್ತರ |
|---|---|
| | ದತ್ತಿನಿಧಿ ಖಾತೆಯಲ್ಲಿ ಕ್ರೋಢೀಕೃತ ಹೆಚ್ಚಿನ ಬಡ್ಡಿಯನ್ನು ಠೇವಣಿ ಹೂಡಿಕೆ ಮಾಡಲು ಕ್ರಮವಹಿಸಲಾಗುವುದು. |

**ಹಣಕಾಸು ಅಧಿಕಾರಿ**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು– 570 006.

**ಕುಲಸಚಿವರು**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು– 570 006.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು-570006

# Karnataka State Open University

**Muktha Gangothri, Mysore-570006**

## ವಾರ್ಷಿಕ ಲೆಕ್ಕಪತ್ರಗಳು 2016-17

## ANNUAL ACCOUNTS 2016-17

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ 15.07.2017 ರಂದು ನಡೆದ ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.**

# ವಿಷಯ ಸೂಚಿ


| ಕ್ರಮ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಸಾಮಾನ್ಯ ನಿಧಿ /General Fund | 181–188 |
| 2 | ಪರೀಕ್ಷಾ ನಿಧಿ /Examination Fund | 189–191 |
| 3 | ಪಿಂಚಣಿ ನಿಧಿ ಖಾತೆ /Pension Fund | 192–193 |
| 4 | ನೂತನ ಪಿಂಚಣಿ ಯೋಜನೆ ನಿಧಿ / New Pension Scheme Fund | 194–195 |
| 5 | ದತ್ತಿ ನಿಧಿ /Endowment Fund | 196 |
| 6 | ಭದ್ರತಾ ಠೇವಣಿ ನಿಧಿ /Security Deposit Fund | 197 |
| 7 | ಜ್ಞಾನವಾಣಿ ನಿಧಿ /Gyanavani Fund | 198 |
| 8 | ಮುಕ್ತ ಸಂಜೀವಿನಿ ನಿಧಿ /Mukta Sanjeevini Fund | 199 |
| 9 | ಶಿಷ್ಯವೇತನ ನಿಧಿ /Scholarship Fund | 200 |
| 10 | ದೂರ ಶಿಕ್ಷಣ ಮಂಡಳಿ ನಿಧಿ /Distance Education Council Fund | 201 |
| 11 | ಅಭಿವೃದ್ಧಿ ಅನುದಾನ ನಿಧಿ /Development Grant Fund | 202 |
| 12 | ಕನ್ನಡ ಅಭಿವೃದ್ಧಿ ಅನುದಾನ ನಿಧಿ /Kannada Development Grant Fund | 203 |
| 13 | ಡಾ. ಬಿ.ಆರ್.ಅಂಬೇಡ್ಕರ್ ಪೀಠ ನಿಧಿ /Dr. B.R.Ambedkar Peeta Fund | 204 |
| 14 | ಮಹಾತ್ಮ ಗಾಂಧೀಜಿ ಪೀಠ ನಿಧಿ / Mahatma Gandhiji Peeta Fund | 205 |
| 15 | ರಾಷ್ಟ್ರಕವಿ ಕುವೆಂಪು ಪೀಠ ನಿಧಿ /Rashtrakavi Kuvempu Peeta Fund | 206 |
| 16 | ಸ್ವಾಮಿ ವಿವೇಕಾನಂದ ಪೀಠ ನಿಧಿ / Swamy Vivekananda Peeta Fund | 207 |
| 17 | ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ ನಿಧಿ / Nalwadi Krishnaraja Wodeyar Peeta Fund | 208 |
| 18 | ಬಾಬು ಜಗಜೀವನ್ ರಾಮ್ ಪೀಠ ನಿಧಿ / Babu Jagajeevanram Peeta Fund | 209 |
| 19 | ಅಕ್ಕ ಮಹಾದೇವಿ ಪೀಠ ನಿಧಿ /Akka Mahadevi Peeta Fund | 210 |
| 20 | □□□□□□□□ □□□□ / MISCELLANEOUS ACCOUNT | 211 |

| ೨೦೧೬–೧೭ ನೇ ಸಾಲಿನ ಸಾಮಾನ್ಯ ನಿಧಿ ಸ್ವೀಕೃತಿ<br>General Fund Receipts For the year 2016-17 | | | | | |
|---|---|---|---|---|---|
| ಕ್ರಸಂ<br>Sl. No | ಕೋಡ್<br>Code | ಲೆಕ್ಕ ಶೀರ್ಷಿಕೆ / Head | 2016–17 ಪರಿಷ್ಕೃತ ಆಯವ್ಯಯ<br>Revised Budget Estimates for 2016-17 | ವಾಸ್ತವಿಕ ರೂ.ಗಳಲ್ಲಿ<br>Actuals 2016-17 in Rupees | ಒಟ್ಟು ರೂ.ಗಳಲ್ಲಿ<br>Total in Rupees |
| | | ಆರಂಭ ಶಿಲ್ಕು / OPENING BALANCE | | | 441,77,24,370 |
| | | | | 203,51,79,921 | |
| | | | | 234,17,89,607 | |
| | | | | 4,07,54,842 | |
| | | ಭಾಗ- 1 : Part -1 | | | |
| 1 | 101 | ಬೋಧನಾ ಶುಲ್ಕ<br>Tuition fee | 40,00,000 | 39,31,465 | |
| 2 | 102 | ನೊಂದಣಿ ಶುಲ್ಕ<br>Registration Fee | 0 | 0 | |
| 3 | 103 | ಅರ್ಹತಾ ಶುಲ್ಕ<br>Eligibility Fee | 10,000 | 10,000 | |
| 4 | 104 | ವರ್ಗಾವಣೆ ಶುಲ್ಕ<br>Transfer Fee | 5,00,000 | 6,14,000 | |
| 5 | 105 | ಪ್ರವೇಶಾತಿ ಪ್ರಕ್ರಿಯೆ ಶುಲ್ಕ<br>Admission Processing Fee | 0 | - | |
| 6 | 184 | ಆನ್‌ಲೈನ್ ಕಾರ್ಯಕ್ರಮಗಳು<br>Online Programmes | 0 | 0 | |
| 7 | 136 | ಕಟ್ಟಡಗಳಿಂದ ಆದಾಯ<br>Revenue from Buildings | 15,00,000 | 13,36,500 | |
| 8 | 122 | ಪ್ರಸಾರಾಂಗ<br>Prasaranga | 50,000 | 73,660 | |
| 9 | 127 | ಅತಿಥಿ ಗೃಹ ಮತ್ತು ಹಾಸ್ಟೆಲ್ ಬಾಡಿಗೆ ವರಮಾನ<br>Rental Income from Guest House/Hostel | 25,00,000 | 23,17,429 | |
| 10 | 144 | ಠೇವಣಿ ಮತ್ತು ಠೇವಣಿಗಳ ಮೇಲಿನ ಬಡ್ಡಿ<br>Deposits & interest on Deposit | 18,90,00,000 | 19,35,67,239 | |
| 11 | 125 | ಹಳೆಯ ಪತ್ರಿಕೆಗಳ ಮಾರಾಟ<br>Sale of Old Papers | 0 | - | |
| 12 | 193 | ಸಹಭಾಗಿತ್ವ ಸಂಸ್ಥೆಗಳ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ<br>Student Fee From Collaborative Institutions | 0 | 0 | |
| 13 | 194 | ಸಹಭಾಗಿತ್ವ ಸಂಸ್ಥೆಗಳ ಅಧ್ಯಯನ ಕೇಂದ್ರಗಳ ನೋಂದಣಿ ಶುಲ್ಕ<br>Registration fee of Study Centres of Collaborative Institutions | 0 | 0 | |
| 14 | 182 | ವೇತನ ಕಾರ್ಪಸ್ ನಿಧಿ ಬಡ್ಡಿ ಮೊತ್ತ<br>Salary Corpus Fund Interest | 10,30,00,000 | 10,31,26,269 | |
| 15 | 192 | ಐಸಿಎಸ್‌ಎಸ್‌ಆರ್ / ಎಸ್‌ಇಆರ್‌ಬಿ ಯೋಜನೆ<br>ICSSR/SERB PROJECT | 2,00,000 | 2,00,000 | |

| ಕ್ರಸಂ Sl. No | ಕೋಡ್ Code | ಲೆಕ್ಕ ಶೀರ್ಷಿಕೆ / Head | 2016–17 ಪರಿಷ್ಕೃತ ಆಯವ್ಯಯ Revised Budget Estimates for 2016-17 | ವಾಸ್ತವಿಕ ರೂ.ಗಳಲ್ಲಿ Actuals 2016-17 in Rupees | ಒಟ್ಟು ರೂ.ಗಳಲ್ಲಿ Total in Rupees |
|---|---|---|---|---|---|
| 16 | 195 | ಸಮಾಜ ಕಲ್ಯಾಣ ಇಲಾಖೆಯಿಂದ ಉಚಿತ ಪ್ರವೇಶಾತಿ ಶುಲ್ಕ ಮರುಪಾವತಿ<br>Fee Refund from Social Welfare Dept. (Free Admission) | 5,60,00,000 | 5,59,89,708 | |
| 17 | 130 | ವೇತನ ವಸೂಲಾತಿ<br>Salary Recovery | 24,00,000 | 22,47,594 | |
| 18 | 156 | ಇತರೆ<br>Miscellaneous Expenses | 2,50,00,000 | 2,35,88,213 | |
| | | **ಬಾಹ್ಯ ಅನುದಾನ ಸಂಸ್ಥೆಗಳಿಂದ ಸ್ವೀಕೃತ ಅನುದಾನ<br>Grant Received from External Funding Agencies** | | | |
| 19 | 191 | ಎನ್.ಎಸ್.ಎಸ್. (ಈಟಿಐ)<br>NSS ETI | 0 | 0 | |
| 20 | | ಸಿಓಎಲ್ ಯೋಜನಾ ಹೊಂದಿಕೆ ಕಾರ್ಯಕ್ರಮ ಮತ್ತು ತರಬೇತಿ<br>COL Project Orientation Programme & Training | 0 | 0 | |
| | | **ಒಟ್ಟು : Total** | **38,41,60,000** | **38,70,02,077** | |
| | | **ಆಂತರಿಕ ನಿಧಿ ವರ್ಗಾವಣೆ ಮತ್ತು ಹೊಂದಾಣಿಕೆ** | | | |
| | | **Internal Tranfers And Book Adjustments** | | | |
| | | **ಭಾಗ– 2 Part -2** | | | |
| 1 | | ಠೇವಣಿಗಳ ಹಿಂಪಡೆತ 2015–16<br>Deposits Withdrawn 2015–16 | | 13,25,46,596 | |
| 2 | | ಪರೀಕ್ಷಾ ನಿಧಿಯಿಂದ ವರ್ಗಾವಣೆ<br>Transfer From Exam Fund A/C No: 54035420128 | | 8,05,18,745 | |
| 3 | | ಪರೀಕ್ಷಾ ನಿಧಿಯಿಂದ ವರ್ಗಾವಣೆ<br>Transfer From Exam Fund A/C No: 54035420128 | | 2,00,00,000 | |
| 4 | | ಸಿದ್ದತಾ ಮುಂಗಡ ವಸೂಲಾತಿ<br>Mobilization Advance Recovery | | 3,03,94,967 | |
| 5 | * | Reconciliation Difference | | -59,071,000 | |
| 6 | | ಠೇವಣಿಗಳ ಹಿಂಪಡೆತ (ಕಾಂಟ್ರ)<br>Withdrawn of Deposits (Contra ) | | 64,89,81,918 | |
| | | **ಒಟ್ಟು / Total** | | **85,33,71,226** | |
| | | **ಸ್ವೀಕೃತಿ ಒಟ್ಟು ಮೊತ್ತ ಭಾಗ– 1 + ಭಾಗ–2<br>Receipts Total Part 1 + Part 2** | | **124,03,73,303** | |
| | | **ಆರಂಭ ಶಿಲ್ಕು + ಸ್ವೀಕೃತಿ<br>Opening Balance + Receipts** | | | **565,80,97,673** |
| | | * Deposit withdrawn amount credited in the month of April 2017 | | | |

| ೨೦೧೬–೧೭ ನೇ ಸಾಲಿನ ಸಾಮಾನ್ಯ ನಿಧಿ ವೆಚ್ಚಗಳು<br>General Fund Expenditure For the year 2016-17 | | | | | |
|---|---|---|---|---|---|
